P-47/ 2009 - 2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭ || ಬೆಂಗಳೂರು, ಗುರುವಾರ, ಜನವರಿ ೨೬, ೨೦೧೨ (ಮಾಘ ೬, ಶಕ ವರ್ಷ ೧೯೩೩) || ಸಂಚಿಕೆ ೪

ವಿಷಯಸೂಚಿ

ವಿಶೇಷ ರಾಜ್ಯಪತ್ರಗಳು

ದಿನಾಂಕ 26-01-2012

ವಿಶೇಷ ರಾಜ್ಯಪತ್ರ ಸಂಖ್ಯೆ	ಪ್ರಕಟಣೆ ದಿನಾಂಕ	ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ
8	03-01-2012	No. SARIE 15 SAEPA 2010, Bangalore, Dated: 30-12-2011
9	04-01-2012	No. E(1) 6591/2011-12/PSC, Bangalore, Date : 03/01/12
10	04-01-2012	ಸಂಖ್ಯೆ: ಸಂವ್ಯಶಾಇ 48 ಶಾಸನ 2011, ಬೆಂಗಳೂರು, ದಿನಾಂಕ: 4.1.2012
11	04-01-2012	ಸಂಖ್ಯೆ: ಸಂವ್ಯಶಾಇ 32 ಶಾಸನ 2011, ಬೆಂಗಳೂರು, ದಿನಾಂಕ: 4.1.2012
12	04-01-2012	ಸಂಖ್ಯೆ: ಸಂವ್ಯಶಾಇ 54 ಶಾಸನ 2011, ಬೆಂಗಳೂರು, ದಿನಾಂಕ: 4.1.2012
13	04-01-2012	ಸಂಖ್ಯೆ: ಕಂಇ 148 ಮುಸೇವಿ 2011, ಬೆಂಗಳೂರು, ದಿನಾಂಕ:04.01.2012
14	05-01-2012	ಸಂಖ್ಯೆ: ಸಂವ್ಯಶಾಇ 20 ಶಾಸನ 2011, ಬೆಂಗಳೂರು, ದಿನಾಂಕ: 5.1.2012
15	05-01-2012	ಸಂಖ್ಯೆ : ಸಿಐ 131 ಎಸ್‌ಪಿಕ್ಯೂ 2011, ಬೆಂಗಳೂರು, ದಿನಾಂಕ : 5ನೇ ಜನವರಿ, 2012
16	06-01-2012	ಸಂಖ್ಯೆ: ಸಿಆಸುಇ 02 ಸೇಲೋಸೇ 2012, ಬೆಂಗಳೂರು, ದಿನಾಂಕ: 04-01-.2012
17	09-01-2012	ಅಧಿಸೂಚನೆ ಸಂಖ್ಯೆ. 10/ನೇಮಕಾತಿ-4/ಡಿಐಜಿಪಿ/2011-12, ದಿನಾಂಕ: 09.01.2012
18	09-01-2012	ಅಧಿಸೂಚನೆ ಸಂಖ್ಯೆ. 09/ನೇಮಕಾತಿ-4/ಡಿಐಜಿಪಿ/2011-12, ದಿನಾಂಕ: 09.01.2012
19	09-01-2012	ಅಧಿಸೂಚನೆ ಸಂಖ್ಯೆ. 05/ನೇಮಕಾತಿ-4/ಡಿಐಜಿಪಿ/2011-12, ದಿನಾಂಕ: 09.01.2012
20	09-01-2012	ಅಧಿಸೂಚನೆ ಸಂಖ್ಯೆ. 65/ನೇಮಕಾತಿ/2011-12, ದಿನಾಂಕ: 09.01.2012
21	09-01-2012	ಸಂಖ್ಯೆ. 30/ನೇಮಕಾತಿ/2011-12, ಬೆಂಗಳೂರು, ದಿನಾಂಕ: 09.01.2012
22	09-01-2012	ಸಂಖ್ಯೆ. 66/ನೇಮಕಾತಿ/2011-12, ಬೆಂಗಳೂರು, ದಿನಾಂಕ: 09.01.2012
23	09-01-2012	ಸಂಖ್ಯೆ: ಸಇ 260 ಎಂಆರ್‌ಇ 2011, ಬೆಂಗಳೂರು, ದಿನಾಂಕ : 09/01/2012
24	10-01-2012	ಸಂಖ್ಯೆ: ಕೃಮಾಇ:02:ಚುನಾವಣೆ:2011, ಬೆಂಗಳೂರು, ದಿನಾಂಕ: 7.1.2012
25	10-01-2012	ಸಂಖ್ಯೆ : ಸಿಐ 305 ಎಸ್‌ಪಿಕ್ಯೂ 2011, ಬೆಂಗಳೂರು, ದಿನಾಂಕ : 9ನೇ ಜನವರಿ, 2012
26	10-01-2012	ಸಂಖ್ಯೆ : ಸಿಐ 305 ಎಸ್‌ಪಿಕ್ಯೂ 2011, ಬೆಂಗಳೂರು, ದಿನಾಂಕ : 9ನೇ ಜನವರಿ, 2012
27	11-01-2012	No. DPAL 02 SAMVYAVI 2011, Bangalore, Dated : 11.1.2012
28	12-01-2012	No. KLAS/ADM-1/105 /Amendment /2011, Bangalore, Dated: 12th January, 2012

ಕರ್ನಾಟಕ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು.

http//www.Kar.nic.in/gazette.

ಕರ್ನಾಟಕ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು.
http//www.gazette.kar.nic.in

೨೦೧೧-೨೦೧೨ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪರಿಷ್ಕೃತ ಚಂದಾ ದರ

ಕ್ರಮ ಸಂಖ್ಯೆ	ರಾಜ್ಯಪತ್ರದ ಭಾಗಗಳು		ಪ್ರತಿ ಒಂದಕ್ಕೆ ರೂ. ಪೈ.	ವಾರ್ಷಿಕ ಚಂದಾ ದರ ರೂ. ಪೈ.
1.	ಭಾಗ – 1	....	21-00	831-00
2.	ಭಾಗ – 2	....	5-00	182-00
3.	ಭಾಗ – 3	....	10-00	411-00
4.	ಭಾಗ – 4	....	3-00	109-00
5.	ಭಾಗ – 4ಎ	....	11-00	435-00
6.	ಭಾಗ – 5	....	22-00	879-00
7.	ಭಾಗ – 6	(ಬೆಂಗಳೂರು)..............................	9-00	363-00
8.	ಭಾಗ – 6ಎ	(ಮೈಸೂರು).................................	25-00	964-00
9.	ಭಾಗ – 6ಬಿ	(ಧಾರವಾಡ)................................	45-00	1763-00
10.	ಭಾಗ – 6ಸಿ	(ಗುಲ್ಬರ್ಗ).................................	29-00	1162-00
11.	ಸಂಪೂರ್ಣ ಕರ್ನಾಟಕ ರಾಜ್ಯಪತ್ರ ಕ್ರ.ಸ. 1 ರಿಂದ 7 .... (ಭಾಗ-1 ರಿಂದ 6) ವಿಶೇಷ ರಾಜ್ಯಪತ್ರವನ್ನು ಹೊರತುಪಡಿಸಿ		81-00	3210-00
12.	ವಿಶೇಷ ರಾಜ್ಯಪತ್ರಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆಯಿರಿ ಮತ್ತು ಸರ್ಕಾರಿ ಪುಸ್ತಕ ಮಳಿಗೆಗಳಲ್ಲಿ ಮಾರಾಟಕ್ಕೆ ಲಭ್ಯವಿರುತ್ತವೆ.			

೨೦೧೧-೨೦೧೨ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪ್ರಕಟಣೆ ದರ

ಕ್ರಮ ಸಂಖ್ಯೆ	ಪ್ರಕಟಣೆ ದರಗಳು		ಮೊತ್ತ ರೂ. ಪೈ.
1.	ಸ್ಥಳೀಯ / ಸ್ಥಾನಿಕ ಸಂಸ್ಥೆ ಮತ್ತು ಸರ್ಕಾರದ ಇಲಾಖೆ ಎ-4 ಅಳತೆಯ ಪ್ರತಿ ಪುಟಕ್ಕೆ	...	500-00
2.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	11-00
3.	ಖಾಸಗಿ ಸಂಸ್ಥೆ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ (ಕೆಪಿಟಿಸಿಎಲ್, ಕೆಎಸ್‌ಆರ್‌ಟಿಸಿ ತರಹ ಇತ್ಯಾದಿ ಪ್ರತಿ ಪುಟಕ್ಕೆ)	...	750-00
4.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	16-50
5.	ಅರ್ಧ ಪುಟಕ್ಕೆ ಅಥವಾ ಕಾಲು ಪುಟಕ್ಕೆ ಬರುವ ವಿಷಯ	...	½ ಅಥವಾ ¼ ಪುಟಕ್ಕೆ ದರ ನಿಗಧಿ
6.	ಕಾಲು ಪುಟಕ್ಕಿಂತ ಕಡಿಮೆ ಇರುವ ವಿಷಯಕ್ಕೆ	...	ಕ್ರಮ ಸಂಖ್ಯೆ 1 ಮತ್ತು 3 ಕ್ರಮ ಸಂಖ್ಯೆ 2 ಮತ್ತು 4ರಲ್ಲಿ ನಮೂದಿಸಿರುವಂತೆ ಪ್ರತಿ ಸಾಲಿಗೆ ದರ ನಿಗದಿಪಡಿಸಿರುವುದು
7.	ಹೆಚ್ಚಾಗಿ ಬೇಕಾಗಿರುವ ಪ್ರತಿ ಹಾಳೆಯ ಬೆಲೆ (ಮುದ್ರಿಸಿರುವ ಹಾಳೆಯ ಅಳತೆಯನ್ನು ನಿರೂಪಿಸಿ)	...	1-00

ಸೂಚನೆ :- 1. ಚಂದಾ ಹಣದ / ಪ್ರಕಟಣಾ ವೆಚ್ಚದ ಮೊತ್ತವನ್ನು **"0058 ಲೇಖನ ಸಾಮಗ್ರಿ ಮತ್ತು ಮುದ್ರಣ (1) ರಾಜ್ಯಪತ್ರ ಮತ್ತು ಇತರ ಪ್ರಕಟಣಾ ವೆಚ್ಚಗಳು"** ಖಜಾನೆಗೆ ಸಲ್ಲಿಸಿ, ಮೂಲ ಚಲನನ್ನು ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಕಳುಹಿಸಬೇಕು.

2. ಭಾಗ VI-ಎ, VI-ಬಿ, VI-ಸಿ ಗಳನ್ನು ಅನುಕ್ರಮವಾಗಿ ಮೈಸೂರು, ಧಾರವಾಡ ಮತ್ತು ಗುಲ್ಬರ್ಗಾದ ಶಾಖಾ ಮುದ್ರಣಾಲಯಗಳಿಂದ ಪಡೆಯಬಹುದು.

3. ಕರ್ನಾಟಕ ರಾಜ್ಯಪತ್ರಕ್ಕಾಗಿ ಈ ಕೆಳಕಂಡ ವಿಳಾಸದಲ್ಲಿ ಪತ್ರ ವ್ಯವಹರಿಸತಕ್ಕದ್ದು.

ಸಂಕಲನಾಧಿಕಾರಿಗಳು,
ಕರ್ನಾಟಕ ರಾಜ್ಯಪತ್ರ,
ಸರ್ಕಾರಿ ಹೊರವಲಯ ಮುದ್ರಣಾಲಯ,
ಮೈಸೂರು ರಸ್ತೆ, ಬೆಂಗಳೂರು-59

WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭	ಬೆಂಗಳೂರು, ಗುರುವಾರ, ಜನವರಿ ೨೬, ೨೦೧೨ (ಮಾಘ ೬, ಶಕ ವರ್ಷ ೧೯೩೩)	ಸಂಚಿಕೆ ೪

ಭಾಗ – ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ 2010–11ನೆ ಸಾಲಿನ ಔಷಧಿ ಖರೀದಿ ಮತ್ತು ಟೆಂಡರ್ ಪ್ರಕ್ರಿಯೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ಮಾನ್ಯ ಲೋಕಾಯುಕ್ತರು ಸಲ್ಲಿಸಿರುವ ವರದಿ ಸಂಬಂಧ ಕ್ರಮ ಕೈಗೊಳ್ಳುವ ಬಗ್ಗೆ.

ಓದಲಾಗಿದೆ :

1. ಕರ್ನಾಟಕ ಲೋಕಾಯುಕ್ತ ರವರ ಕಛೇರಿ ಪತ್ರ ಸಂಖ್ಯೆ: Comp.LOK.BCD 102, 115, 153, 158 ಮತ್ತು 343/2010 ದಿನಾಂಕ: 03–02–2011.
2. ಸರ್ಕಾರದ ಆದೇಶ ಸಂಖ್ಯೆ: ಆಕುಕ 17 ಹೆಚ್‌ಪಿಸಿ 2011, ದಿನಾಂಕ: 11–04–2011.
3. ಸಚಿವ ಸಂಪುಟ ತೀರ್ಮಾನ ಸಂಖ್ಯೆ: ಸಿ/479/2011 ದಿನಾಂಕ: 28–10–2011.

ಪ್ರಸ್ತಾವನೆ:

ಕರ್ನಾಟಕ ರಾಜ್ಯ ಡ್ರಗ್ಸ್ ಲಾಜಿಸ್ಟಿಕ್ ಮತ್ತು ವೇರ್‌ಹೌಸಿಂಗ್ ಸೊಸೈಟಿಯಿಂದ 2010–11ನೇ ಸಾಲಿಗೆ ಔಷಧಿ ಖರೀದಿ ಮತ್ತು ಟೆಂಡರ್ ಪ್ರಕ್ರಿಯೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರ ಕುರಿತು ಮಾನ್ಯ ಕರ್ನಾಟಕ ಲೋಕಾಯುಕ್ತರಿಗೆ ಸಲ್ಲಿಸಲಾಗಿದ್ದ 5 ದೂರುಗಳನ್ನು ಆಧರಿಸಿ ಮಾನ್ಯ ಲೋಕಾಯುಕ್ತರು 'ಡಾಕ್ಟರ್ಸ್ ಫೌಂಡೇಷನ್' ಸದಸ್ಯರಿಂದ ತನಿಖೆ ನಡೆಸಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ಮತ್ತು 12(3) ಪ್ರಕಾರ ಕ್ರಮ ಕೈಕೊಳ್ಳಲು ಮೇಲೆ (1)ರ ಕ್ರಮಾಂಕದಲ್ಲಿ ಓದಲಾದ ಪತ್ರದಲ್ಲಿ ಸರ್ಕಾರಕ್ಕೆ ವರದಿ ಕಳುಹಿಸಿಕೊಟ್ಟಿರುತ್ತಾರೆ. ಮಾನ್ಯ ಲೋಕಯುಕ್ತರು ತಮ್ಮ ವಿವರವಾದ ವರದಿಯಲ್ಲಿ ಸರ್ಕಾರಿ ಔಷಧಿ ಮಳಿಗೆಯ ಕಾರ್ಯನಿರ್ವಹಣೆಯನ್ನು ಉತ್ತಮಪಡಿಸಲು ಮತ್ತು ಕರ್ನಾಟಕ ಆಂಟಿಬಯೋಟಿಕ್ಸ್ ಮತ್ತು ಫಾರ್ಮಾಸ್ಯೂಟಿಕಲ್ಸ್ ಲಿಮಿಟೆಡ್ (ಕೆಎಪಿಎಲ್)ನಿಂದ ಔಷಧಿ ಸಂಗ್ರಹಣೆಗೆ ಸಂಬಂಧಿಸಿದಂತೆ, ಹಲವಾರು ಶಿಫಾರಸ್ಸುಗಳನ್ನು ಮಾಡಿರುತ್ತಾರೆ. ಜೊತೆಗೆ ಮೇಲ್ಕಂಡ ಔಷಧಿ ಖರೀದಿ ಮತ್ತು ಟೆಂಡರ್ ಪ್ರಕ್ರಿಯೆ ಸಂಬಂಧ ತೀರ್ಮಾನ ಕೈಗೊಳ್ಳುವಲ್ಲಿ ಭಾಗಿಯಾಗಿದ್ದರು ಮತ್ತು ದುರುದ್ದೇಶ ಹೊಂದಿದ್ದರು ಎನ್ನಲಾದ ಕರ್ನಾಟಕ ರಾಜ್ಯ ಡ್ರಗ್ಸ್ ಲಾಜಿಸ್ಟಿಕ್ಸ್ ಮತ್ತು ವೇರ್‌ಹೌಸಿಂಗ್ ಸೊಸೈಟಿ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕೆಲವು ಅಧಿಕಾರಿ/ನೌಕರರುಗಳ ವಿರುದ್ಧ ಸೇವಾ ನಿಯಮಗಳನುಸಾರ ಸೂಕ್ತ ಕ್ರಮ ಕೈಗೊಳ್ಳುವಂತೆ ಸಹ ಶಿಫಾರಸ್ಸು ಮಾಡಿರುತ್ತಾರೆ.

ಮಾನ್ಯ ಲೋಕಾಯುಕ್ತರ ವರದಿಯನ್ನು ಸರ್ಕಾರವು ಸ್ಥಿರೀಕರಿಸಿದ ನಂತರ ಮೇಲೆ (2)ರ ಕ್ರಮಾಂಕದಲ್ಲಿ ಓದಲಾದ ದಿನಾಂಕ: 11–04–2011ರ ಆದೇಶದಲ್ಲಿ ಸರ್ಕಾರಿ ಔಷಧಿ ಮಳಿಗೆಯಲ್ಲಿ 2010–11ನೇ ಸಾಲಿನ ಔಷಧಿ ಖರೀದಿ ಮತ್ತು ಟೆಂಡರ್ ಪ್ರಕ್ರಿಯೆ ಮೂಲಕ ಔಷಧಿ ಸಂಗ್ರಹಣೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಬಗ್ಗೆ ಲೋಕಯುಕ್ತರ ತನಿಖಾ ವರದಿಯಲ್ಲಿ ಕೆಲವು ಅಧಿಕಾರಿಗಳು ಔಷಧಿ ಖರೀದಿ ಅಥವಾ ಟೆಂಡರ್ ಪ್ರಕ್ರಿಯೆ ಸಂಬಂಧ ತೀರ್ಮಾನ ತೆಗೆದುಕೊಳ್ಳುವಾಗ ದುರುದ್ದೇಶ ಹೊಂದಿದ್ದರು ಎಂಬ ಬಗ್ಗೆ ಹಾಗೂ ತತ್ಪರಿಣಾಮವಾಗಿ ರೂ. 50.86/– ಕೋಟಿಗಳಷ್ಟು ನಷ್ಟ ಸರ್ಕಾರದ ಬೊಕ್ಕಸಕ್ಕೆ ಉಂಟಾಗುತ್ತಿತ್ತು ಎಂಬುದರ ಬಗ್ಗೆ ಪರಿಶೀಲಿಸಿ ವರದಿ ನೀಡುವ ಸಲುವಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಿವೃತ್ತ ನ್ಯಾಯಾಧೀಶರನ್ನೊಳಗೊಂಡಂತೆ ಅಧಿಕಾರಿಗಳ ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಉನ್ನತ ಮಟ್ಟದ ಸಮಿತಿಯು ಲೋಕಾಯುಕ್ತರ ವರದಿ ಬಗ್ಗೆ ವಿವರವಾಗಿ ಪರಿಶೀಲಿಸಿ, ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುತ್ತದೆ. ಅದರಂತೆ ಔಷಧಿ ಖರೀದಿಗೆ ಸಂಬಂಧಿಸಿದಂತೆ, ತೀರ್ಮಾನ ಕೈಗೊಳ್ಳುವ ಸಂಪೂರ್ಣ ಪ್ರಕ್ರಿಯೆ ಸಾಮೂಹಿಕ ಸ್ವರೂಪದ್ದಾಗಿರುತ್ತದೆ ಎಂದು ಇದಕ್ಕೆ ಕೆಲವರನ್ನು ಹೊಣೆಗಾರರನ್ನಾಗಿ ಮಾಡಿದಲ್ಲಿ, ಸೂಕ್ತ ದಾಖಲೆ/ಪುರಾವೆಗಳು ಇಲ್ಲದಿರುವುದರಿಂದ, ಅದು ಕಾನೂನಿನ ದೃಷ್ಟಿಯಲ್ಲಿ ಊರ್ಜಿತವಾಗುವುದಿಲ್ಲ ಎಂದು ಸಮಿತಿಯ ಅಭಿಪ್ರಾಯ ಪಟ್ಟಿದೆ. ಮಾನ್ಯ ಲೋಕಾಯುಕ್ತರ ವರದಿಯಲ್ಲಿ ಕೆಲವು ಅಧಿಕಾರಿಗಳು ಔಷಧಿ ಖರೀದಿ ಅಥವಾ ಟೆಂಡರ್ ಪ್ರಕ್ರಿಯೆ ಸಂಬಂದ ತೀರ್ಮಾನ ಕೈಗೊಳ್ಳುವಾಗ ದುರುದ್ದೇಶ ಹೊಂದಿದ್ದರು ಎಂಬುದರ ಬಗ್ಗೆ ಇಲಾಖಾ ವಿಚಾರಣೆ ಕೈಗೊಂಡಲ್ಲಿ ಅದು ಸಹ ಕಾನೂನು ರೀತ್ಯಾ ಊರ್ಜಿತವಾಗುವ ಸಾಧ್ಯತೆ ಇಲ್ಲವೆಂದು ಸಮಿತಿ ಅಭಿಪ್ರಾಯ ಪಟ್ಟಿರುತ್ತದೆ.

ಆದರೆ, ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯ ಉನ್ನತ ಮಟ್ಟದ ಸಮಿತಿಯು ತನ್ನ ವರದಿಯಲ್ಲಿ Glutamin ಖರೀದಿಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಡ್ರಗ್ಸ್ ಲಾಜಿಸ್ಟಿಕ್ ಮತ್ತು ವೇರ್‌ಹೌಸಿಂಗ್ ಸೊಸೈಟಿಯ ಚೀಫ್ ಸೂಪರ್‌ವೈಸಿಂಗ್ ಅಧಿಕಾರಿ ಮತ್ತು ಇತರೆ ಸಂಬಂಧಿಸಿದ ಸಿಬ್ಬಂದಿಯು Therapeutic Committee and Need Assessement Committee ಸಭೆಗೆ ಅವಶ್ಯ ಮಾಹಿತಿಯನ್ನು ನೀಡುವಲ್ಲಿ ವಿಫಲರಾಗಿದ್ದಾರೆಂದು ಅಭಿಪ್ರಾಯ ವ್ಯಕ್ತಪಡಿಸಿ ಅವರುಗಳ ವಿರುದ್ಧ ಕ್ರಮ ಜರುಗಿಸಲು ಶಿಫಾರಸ್ಸು ಮಾಡಿರುತ್ತದೆ.

ಮಾನ್ಯ ಲೋಕಾಯುಕ್ತರ ವರದಿಯಲ್ಲಿನ ಶಿಫಾರಸ್ಸುಗಳನ್ನು ಜಾರಿಗೊಳಿಸುವ ಬಗ್ಗೆ ಪ್ರಸ್ತಾವನೆಯನ್ನು ಪ್ರಕರಣ ಸಂಖ್ಯೆ: ಸಿ:479/2011 ದಿನಾಂಕ: 28-10-2011 ರಲ್ಲಿ ಸಚಿವ ಸಂಪುಟದ ಮುಂದೆ ಮಂಡಿಸಿ ಆದೇಶ ಪಡೆಯಲಾಗಿದೆ.

ಮೇಲೆ ವಿವರಿಸಿದ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 17 ಹೆಚ್‌ಪಿಸಿ 2011, ಬೆಂಗಳೂರು, ದಿನಾಂಕ: 09-11-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ರಚಿತವಾದ ಉನ್ನತ ಮಟ್ಟದ ಸಮಿತಿಯು ಸಲ್ಲಿಸಿರುವ ವರದಿಯಲ್ಲಿನ ಶಿಫಾರಸ್ಸುಗಳನ್ನು ಸರ್ಕಾರವು ಅಂಗೀಕರಿಸಿದೆ. ಅದರಂತೆ ಮಾನ್ಯ ಲೋಕಯುಕ್ತರ ವರದಿಯಲ್ಲಿ ಸೂಚಿಸಿರುವ ಕರ್ನಾಟಕ ರಾಜ್ಯ ಡ್ರಗ್ಸ್ ಲಾಜಿಸ್ಟಿಕ್ ಮತ್ತು ವೇರ್‌ಹೌಸಿಂಗ್ ಸೊಸೈಟಿಯ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳ ವಿರುದ್ಧ ಸೇವಾ ನಿಯಮಗಳ ಅಡಿ ಶಿಸ್ತು ಕ್ರಮ ಜರುಗಿಸುವುದನ್ನು ಕೈಬಿಡಲಾಗಿದೆ. ಆದರೆ, Glutamin ಖರೀದಿಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಡ್ರಗ್ಸ್ ಲಾಜಿಸ್ಟಿಕ್ ಮತ್ತು ವೇರ್‌ಹೌಸಿಂಗ್ ಸೊಸೈಟಿಯ ಮುಖ್ಯ ಸೂಪರ್‌ವೈಸಿಂಗ್ ಅಧಿಕಾರಿ ಹಾಗೂ ಇತರೆ ಸಂಬಂಧಿಸಿದ ಸಿಬ್ಬಂದಿಯು Therapeutic Committee and Need Assessment Committee ಸಭೆಗೆ ಅವಶ್ಯ ಮಾಹಿತಿಯನ್ನು ನೀಡುವಲ್ಲಿ ವಿಫಲವಾಗಿರುವ ಕಾರಣ ಅವರುಗಳ ವಿರುದ್ಧ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ರವರು ಕ್ರಮ ಜರುಗಿಸುವಂತೆ ಆದೇಶಿಸಿದೆ.

ಮುಂದುವರೆದು, ಕರ್ನಾಟಕ ರಾಜ್ಯ ಡ್ರಗ್ಸ್ ಲಾಜಿಸ್ಟಿಕ್ ಮತ್ತು ವೇರ್‌ಹೌಸಿಂಗ್ ಸೊಸೈಟಿಯ ಕಾರ್ಯ ನಿರ್ವಹಣೆಯನ್ನು ಉತ್ತಮಪಡಿಸಲು ಈ ಆದೇಶದ ಅನುಬಂಧ-1 ರಲ್ಲಿ ತಿಳಿಸಿರುವಂತೆ ಹಾಗೂ ಅದೇ ರೀತಿ ಮೆ: ಕರ್ನಾಟಕ ಆ್ಯಂಟಿಬಯೋಟಿಕ್ಸ್ ಮತ್ತು ಫಾರ್ಮಾಸ್ಯೂಟಿಕಲ್ಸ್ ಲಿಮಿಟೆಡ್ (ಕೆಎಪಿಎಲ್), ಬೆಂಗಳೂರು ಸಂಸ್ಥೆಗೆ ಸಂಬಂಧಿಸಿದಂತೆ ಅನುಬಂಧ-2 ರಲ್ಲಿ ತಿಳಿಸಿರುವ ಅಂಶಗಳನ್ನು ಕಾರ್ಯಗತಗೊಳಿಸಲು ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಐ. ಹೇಮನಾಥ್
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೃಂದ ಮತ್ತು ನೇಮಕಾತಿ)

ಅನುಬಂಧ-1

ಸರ್ಕಾರದ ಆದೇಶ ಸಂಖ್ಯೆ: ಆಕುಕ 17 ಹೆಚ್‌ಪಿಸಿ 2011 ದಿನಾಂಕ: 09-11-2011

ಸರ್ಕಾರಿ ಔಷಧಿ ಮಳಿಗೆ (ಕೆ.ಎಸ್.ಡಿ.ಎಲ್. ಮತ್ತು ಡಬ್ಲ್ಯೂ.ಎಸ್.) ಕಾರ್ಯ ನಿರ್ವಹಣೆ ಉತ್ತಮಪಡಿಸುವ ಬಗ್ಗೆ

Sl No.	Recommendation	Action Proposed
1	To root out the influence of drug mafia the KDSL&WS should adopt/go for global tendering, pre-qualification tendering and encouraging purchases directly from the manufactures.	This Practice is already in vogue since 2010. All purchases above 1 lakh are done only through e-Tender. All drug purchases are made from primary manufacturers only.
2	Post of Addl. Director should be filled-up by a technical person.	This is an Administrative post and the Additional Director is assisted by senior doctors and pharamacists. In Government Order dated: 17-05-2003 provision has been made to fill up the post of Additional Director from among the following category of officers. 1. Additional Director of Health or 2. Selection Scale KAS Officers or 3. Senior Scale IAS Officer. A provision to appoint a technical person to the post already exists. Depending upon the Administrative exigencies, posting of Additional Director of the Society is made from among the said category of officers. (Govt. Order No. HFW 64 HPC 2001 dated: 17-05-2003)
3	The whole functioning of the KSDL&WS needs revamping. It should have a separate staffing pattern to meet the aims and objectives of the KSDL&WS. Until such time the staff from DH&FWS should be deputed for a period of not more than 2 years. The staff completes one term should not be considered for second posting at any cost. The staff should undergo	Action will be taken to have a separate staffing pattern for the society. A separate Cadre and Recruitment rules will be drafted. Till then, officials from the Health Department will be posted on deputation basis. Action will be taken to limit the tenure of the officials as per the standing Government Orders relating to deputation.

	training in the procurement process prior to the posting.	
4	The members of the STC should consist of following: (a) The Director of State Institute of Health & Family Welfare Services as Chairman. Since, Director, DH&FWS is busy taking care of the regular and daily activities of the whole department of H&FWS, he/she may not find sufficient time to concentrate on the functioning of KSDL&WS. (b) The Addl. Director, KSDL&WS will be the convener; The following persons should be members of STC (No substitute); (c) The Superintendents of General Hospitals like KC General Hospital, Malleshwaram, Bangalore and Jayanagara General Hospital, Bangalore. (d) A Member from Pharmacy Council. (e) One Professor of Medicine. (f) One Professor of Surgery. (g) One Professor of Pharmacology. (h) Two District Surgeons. (i) The Heads of Departments of the concerned speicialties may be invited as members for specific meetings. (j) Drug controller will be an invitee as and when required.	The State Therapeutic Committee at present comprises of most of the recommended members. (Notification No. GMS/PUR 03/2005-06 dated: 21-09-2005) It is felt that the Director of Health & Family Welfare Services should be continued as the Chairman of the State Therapeutic Committee, being the head of the Department, he/she will be in a better position to drive committee. The State Therapeutic Committee is constituted by a Notification dated 21-09-2005. Proposed members by the Lokayukta at (c), (d), (e), (f), (h) & (j) are in the committee either as members or as invitees. One District Surgeon and one District Health Officer are in the committee as invitees. The Heads of the Department of the concerned specialities are invitees in the State Therpeutic committee by virtue of being heads of the Sub-Committees. Professor of Pharmacology is not a member at present and he will also be included in the committee.
	The STC should periodically revise essential drugs list and this should not be only for the purposes of calling the tender. Any new drug to be added to the list should be discussed in detail. The Doctor's who proposes for the purchase of new drug/item should be invited to the hospital Committees and asked to make a presentation which should be discussed in detail. For inclusion of such drugs and chemicals in the tender which are not in the pharmacopeias shall be discussed in the State Therapeutic Committee before inclusion in the tender.	This recommendation is alredy in vogue. The Sub-Committees of the State Therapeutic Committee are headed by Heads of the Department & Professors of various specializations. Based on the reports of the Sub-committees, the State Therapeutic Committee finalizes the Essential Drug List. Whenever any new drugs is recommended it will be submitted in a format with all details and is extensively discussed in the State Therapeutic Committee. The new drug is included in the essential drug list only after the acceptance by the Committee.
	The opinion of the each member of the Committees should be recorded in the proceedings and ciruculated among the members of the Committee for approval.	This recommendation is already in vogue.
	A new durg which has to be procured shall be initially procured in small quantities and used in different hospitals and shall be purchased in large quantities only after getting the good feedback.	This recommendation is already being practiced.
	The STC member shall be provided with the updated Essential Drug List well in advance and with the information to come prepared for useful discussion.	
	The STC member should be informed about the budget allocation and the proposed quantum of drug to be procured with the approximate cost of each drug well in advance.	This committee decides about the drugs and their specifications. The quantum of drugs to be purchased, the budget allocation for the drugs etc., are examined by the Need Assessment Committee.
5	The essential drug list should be revised thoroughly. This list should be based on standard pharmacopeias	The Essential drug list is revised based on standard pharmacopeia. The society is purchasing only the drugs which

	like IP, BP, USP, etc., the KSDL&WS should procure only the drugs which are specified in the Essential Drug List.	have been specified in the essential drug list.
6	Transparency in procurement shall be mandatory. There shall be a Committee of experts to frame the tender conditions which shall be followed strictly. As far as possible the conditions must be simple and transparent and should comply with KTPP Act. (it can be out sourced) Tender once floated shall not be altered under any circumstances. As the purchases runs into crores of Rupees pre-qualification tender should be must.	Procurement process is transparent. All the provisions of KTPP Act are being followed.
7	All the institutions which procure materials from the KSDL&WS should be networked immediately.	Necessary instructions are already issued to KSDL&WS, as decided in the meeting held on 01-01-2010.
8	The tender process shall be completed well in advance of the next financial year. Calender of events shall be published in the beginning and shall be adhered to, for maintaining discipline, accountability and transparency.	Accepted.
9	The District Surgeon instead of Pharmacist should be in-charge of District Warehouse to ensure proper accountability as per the existing Circular, which is issued already but it is not being followed.	This is being followed and at present District Surgeon is controlling officer of the District Drug Warehouses. The Pharmacist works under the District Surgeon. (Reference No.: ಆಕುಕ 105 ಆಯುಕ್ತರು/2006-07 ದಿನಾಂಕ: 16ನೇ ಸೆಪ್ಟೆಂಬರ್ 2006)
10	The Requirement of institutions should be categorized into: (a) Most common drugs and other equipments required by all the institutions. (b) The drugs and other items required by the secondary level hospitals (a+b). (c) Drugs and other items required by the major hospitals; (Tertiary Hospitals) (a+b+c) The indents shall be directly uploaded by the respective institutions based on the inpatient and outpatient attendance of last three years.	The present practice is almost on these lines based on inpatient and-outpatient and outpatient attendance in each of the institutions.
11	A drug selectively used by individual Institutions can be procured at the institution level but only after the approval by local Aroghya Raksha Samithi.	This sysem is in practice. The invidual institutions will be advised to take approval of the local Aroghya Raksha Samithi.
12	The required drugs and other items at the time of epidemics and calamities shall be purchased by operating the user fund or funds from the Government, from Zilla Panchayat instead of utilizing KDSL&WS funds.	Instruction are already there to purchase the drugs from user funds and untied funds in case of emergencies. -Circular No.: PD/RCH/69/08-09 dated: 16-07-2008.
13	The basis of assessing the required quantities by need Assessment Committee shall be; (a) The total number of patients (both IP&OP) treated in the preceding three years by the individual institutions and the stock on hand at the end of the year. The KSDL&WS should bring this to the notice of STC. In such of those institutions which are upgraded from 100 to 200 beds and above, the requirements should be assessed by NAC in proportion to the expected raise in bed strength.	The recommendations are being followed. The institutions are given budget based on total number of patients treated Based on their budget the institutions make indents. The stock on hand is substracted and final required quantity is arrived at.

	(b) The ,indents received from various institutions during current year and stock on hand on 31st December of the preceding year should be the criteria for assessing the needs of the institution by the NAC. The STC & NAC should discuss the above information in detail and come to a conclusion.	This is being followed already. The stock on hand is calculated at the time of finalizing the indents.
	(c) (c) 10-20% in excess of the need can be allowed for the procurement only by the NAC and stocked in the District Warehouses for supply in case of need for the peripheral institutions.	This recommendation is agreed to in principle.
	(d) The NAC members should also be informed about the budget allocation and the proposed quantum of drug to be procured with the approximate cost of each drug well in advance. The NAC members should not be from among STC members.	The NAC members are being informed about the budget allocation and quantum of drugs to be procured. All members of the NAC are officers of the H.&F.W. Department.
14	The work of KSDL&WS shall be audited by an external agency every year, so also the financial audit for better performance and transference. Such audited report should be submitted to the Register of Co-operative Societies every year without fail.	The society's accounts are audited by Chartered Accountants at present. Audit reports are being submitted to the concerned Registrar.
15	The NRHM shall identify the drugs and other items to be suipplied under its budget and revise it from time to time to specifically meet the objectives of NRHM.	Already in vogue. (ಆರ್‌ಓ/ಉಕಾ02/2009-10 ದಿನಾಂಕ: 11-01-2010)
16	Most of the institutions under the Health Dept. are already networked upto a 50% of the PHC's for getting information. The same website can be updated to suit the requirements of KDSL&WS also. For this all the Primary Health Centres should be provided with computers immediately	Agreed. All the PHCs are already provided with computers.
17	The NRHM should be instructed to give the list of drugs that are to be procured well in advance to KSDL&WS to facilitate the tendering processes. The NRHM should monitor the drugs procured and supplied undr its budget.	Already in vogue. (ಆರ್‌ಓ/ಉಕಾ02/2009-10 ದಿನಾಂಕ: 11-01-2010)
18	The Electronic Data process in Section of KSDL&WS should be supervised by the technical staff the data should be analyzed from time to time for a better assessment of the needs of the institution.	This is already in vogue. The EDP section work is out sourced and the work is supervised by staff who are B.E., (Computer Graduate) or M.C.A.
19	The KSDL&WS should monitor to ensure proper utilization of the drugs and other chemicals by various hospitals of the State by appointing vigilance team.	Accepted.
20	As per the second interim report the department should procure I.V. Fluids packed only in FFS bags/bottle instead of I.V. Fluids packed in non/PVC self collapsible bags and regular sterile disposable syringes instead of AD Syringes to avoid unwanted expenditure to the Government.	Being implemented already. The State Therapautic committee has also taken a decision on the same lines. (Ref. No.: GMS/e-Tend/77-Drugs/27-1/2011-12, dated: 18-07-2011 and GMS/e-Tend/151-Drugs/27-11/2011-12, dated: 18-07-2011)

ಅನುಬಂಧ-II

ಸರ್ಕಾರದ ಆದೇಶ ಸಂಖ್ಯೆ: ಆಕುಕ 17 ಹೆಚ್‌ಪಿಸಿ 2011 ದಿನಾಂಕ: 09-11-2011

ಕರ್ನಾಟಕ ಆಂಟಿಬಯೋಟೆಕ್ಸ್ ಮತ್ತು ಫಾರ್ಮಾಸ್ಯೂಟಿಕಲ್ಸ್ ಲಿಮಿಟೆಡ್ (ಕೆಎಪಿಎಲ್) ನಿಂದ ಔಷಧಿ ಸಂಗ್ರಹಣೆ ಬಗ್ಗೆ

21	KAPL has grown itself to a profit making and exporting company to various nations. Hence, the KAPL should now compete openly with the other companies in tenders instead of getting 4(g) exemption.	M/s Karnataka Antibiotics and Pharmaceuticals Ltd., (KAPL) is joint sector public enterprise - Central Government contributing 59.17% and the State Government 40.83% participation 59.17% and the State Government 40.83% participation in the share capital of the company. Taking into consideration various judgements, recommendations of Legislature Committee, etc., and in the best interest of the State & the Public Sector Unit, the State Government has extended 4(g) exemption under KTTP Act for procurement of drugs manufactured by this company at the rates approved by National Pharmaceutical Pricing Authority. (NPPA)
22	The department of H&FWS is spending huge portion of the budget for purchase of various IV fluids. The purchase of IV fluids from open market will lead to irregularities like inadequate supply, variation in prices and variation in qualities etc. Hence, KAPL may be entrusted with the manufacture of IV fluid to ensure continuous and adequate supply of IV fluids. The KAPL may be encouraged for manufacturing and supply of IV fluids with the cap of 15% margin as allowed in case of small scale industries.	M/s KAPL has informed that it has neither the technology nor the facility to produce I.V. Fluids. Howsever, the possibility of procuring IV fluids from M/s Hindustan Antibiotics Ltd, another Public Sector Enterprise and formerly the parent company of M/s KAPL, will be explored.
23	When a quality drug is available at a cheaper rate in the market, the KSDL & WS should not purchase such drug from KAPL at a higher cost under the pretext of 4(g) exemption to prevent loss to the Government exchequer.	M/s KAPL is having ISO grading 9001 & 14001. The drugs manufactured and supplied by M/s KAPL, are having good reputation. The drugs are being procured from M/s KAPL at the rates approved by the National Pharmaceutical Pricing Authority. The NPPA, by exercising power vested under the Drugs (Price Control) Order, 1995 fixes ceiling price of drugs. M/s KAPL supplies drugs NPPA rates to KSDL&WL after allowing permissible discounts/rebates. Thus the Department is not only ensrued of quality drugs but also at price fixed by NPPA.

ಐ. ಹೇಮನಾಥ್
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೃಂದ ಮತ್ತು ನೇಮಕಾತಿ)

ಪಿ.ಆರ್. ನಂ. 2691

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ-ಭದ್ರಾವತಿ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿರುವ ಮಹಾಯೋಜನೆಗೆ (ಪರಿಷ್ಕೃತ-II) ಸರ್ಕಾರದ ತಾತ್ಕಾಲಿಕ ಅನುಮೋದನೆಯನ್ನು ನೀಡುವ ಕುರಿತು.

ಓದಲಾಗಿದೆ :

1. ಸರ್ಕಾರದ ಆದೇಶ ಸಂಖ್ಯೆ: ನಅಇ/64/ಬೆಂರೂಪ್ರಾ/2009 ದಿನಾಂಕ: 22-05-2010.
2. ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಶಿವಮೊಗ್ಗ ಇವರ ಪತ್ರ ಸಂಖ್ಯೆ: ಶಿನಪ್ರಾ/ನಯೋ/ಮ.ಯೋ ಪ-II) ತಾ.ಅ/2010-11/121 ದಿನಾಂಕ: 12-09-2011.
3. ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಕಛೇರಿಯ ಏಕ ಕಡತ ಸಂಖ್ಯೆ: ನಗ್ರಾಯೋ(14)/ಉನಿ(ವಿ.ವಿ):ಮ.ಯೋ(ಪ. II): ತಾತ್ಕಾಲಿಕ ಶಿವಮೊಗ್ಗ/148: 2011-12 ದಿನಾಂಕ: 28-09-2011.

ಪ್ರಸ್ತಾವನೆ:

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ ಶಿವಮೊಗ್ಗ-ಭದ್ರಾವತಿ ನಗರಗಳ ಸ್ಥಳೀಯ ಯೋಜನಾ ಪ್ರದೇಶವನ್ನು ಹಾಲಿ ಇದ್ದ 254 ಚ.ಕಿ.ಮೀ.ಗಳಿಂದ 417.28 ಚ.ಕಿ.ಮೀ.ಗೆ ವಿಸ್ತರಿಸಿ ಪರಿಷ್ಕೃತ ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಲಾಗಿದೆ.

ಮೇಲೆ ಕ್ರಸಂ. (2)ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಶಿವಮೊಗ್ಗ ಇವರು ಶಿವಮೊಗ್ಗ-ಭದ್ರಾವತಿ ನಗರಗಳ ಸ್ಥಳೀಯ ಯೋಜನಾ ಪ್ರದೇಶದ ಮಹಾ ಯೋಜನೆ (ಪರಿಷ್ಕೃತ-II)ಯ ನಕ್ಷೆ ಹಾಗೂ ವರದಿಯನ್ನು ತಯಾರಿಸಿ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಶಿಫಾರಸ್ಸಿನೊಂದಿಗೆ ಸರ್ಕಾರದ ತಾತ್ಕಾಲಿಕ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಕ್ರ.ಸಂ., (3)ರಲ್ಲಿ ಓದಲಾದ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಕಛೇರಿಯ ಏಕ ಕಡತದಲ್ಲಿ ಶಿವಮೊಗ್ಗ ನಗರದ ಜನಸಂಖ್ಯೆಯು 2031ಕ್ಕೆ 7,50,000 ಗಳಿಗೆ ಬೆಳವಣಿಗೆಯಾಗುವುದಾಗಿ ಅಂದಾಜಿಸಿ ಮಹಾ ಯೋಜನೆ (ಪರಿಷ್ಕೃತ-II) ತಯಾರಿಸಲಾಗಿದೆ. ಶಿವಮೊಗ್ಗ-ಭದ್ರಾವತಿ ನಗರಗಳ ಸ್ಥಳೀಯ ಯೋಜನಾ ಪ್ರದೇಶದ 417.28 ಚ.ಕಿ.ಮೀ. ವಿಸ್ತೀರ್ಣದಲ್ಲಿ ಶಿವಮೊಗ್ಗ ನಗರಕ್ಕೆ ಸಂಬಂಧಿಸಿದಂತೆ 9705.97 ಹೆಕ್ಟೇರ್ ಪ್ರದೇಶವನ್ನು ನಗರೀಕರಣದ ಎಲ್ಲೆಯೆಂದು ಪ್ರಸ್ತಾಪಿಸಿ ಯೋಜನೆ (ಪರಿಷ್ಕೃತ-II)ಯನ್ನು ರೂಪಿಸಲಾಗಿದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 12ರಲ್ಲಿನ ಅಂಶಗಳನ್ನು ಪರಿಗಣಿಸಿ, ಶಿವಮೊಗ್ಗ ನಗರದ ಮುಂದಿನ ಯೋಜಿತ ಬೆಳವಣಿಗೆಗಳಿಗಾಗಿ ಪ್ರಸ್ತಾಪಿಸಿರುವ ಪ್ರದೇಶದಲ್ಲಿ ವಸತಿಗಾಗಿ 5091.08 ಹೆಕ್ಟೇರ್ (ಶೇ. 52.45), ವಾಣಿಜ್ಯಕ್ಕಾಗಿ 439.96 ಹೆಕ್ಟೇರ್ (ಶೇ. 4.53), ಕೈಗಾರಿಕೆಗಾಗಿ 544.11 ಹೆಕ್ಟೇರ್ (ಶೇ.5.61) ಸಾರ್ವಜನಿಕ/ಅರೆ ಸಾರ್ವಜನಿಕ ಉಪಯೋಗಕ್ಕೆ 845.39 ಹೆಕ್ಟೇರ್ (ಶೇ.8.71), ಉದ್ಯಾನವನ/ಬಯಲು ಜಾಗಗಳಿಗೆ 1119.12 ಹೆಕ್ಟೇರ್ (ಶೇ.11.53), ನಾಗರೀಕ ಸೌಲಭ್ಯಕ್ಕಾಗಿ 74.97 ಹೆಕ್ಟೇರ್ (ಶೇ.0.77) ಹಾಗೂ ಸಾರಿಗೆ/ಸಂಪರ್ಕ ವಲಯಕ್ಕೆ 1591.34 ಹೆಕ್ಟೇರ್ (ಶೇ.16.40), ಜಲಾವೃತ ಪ್ರದೇಶವಾಗಿ 695.88 ಹೆಕ್ಟೇರ್, ಒಟ್ಟು 10401.85 ಹೆಕ್ಟೇರ್‌ಗಳು ನಗದೀಕರಣದ ಎಲ್ಲೆಯೆಂದು ನಿಗಧಿಪಡಿಸಲಾಗಿದೆ.

ಭದ್ರಾವತಿ ನಗರದ ಯೋಜಿತ ಬೆಳವಣಿಗೆಗಳಿಗಾಗಿ ಪ್ರಸ್ತಾಪಿಸಿರುವ ಪ್ರದೇಶದಲ್ಲಿ ವಸತಿಗಾಗಿ 1896.58 ಹೆಕ್ಟೇರ್ (ಶೇ.48.77), ವಾಣಿಜ್ಯಕ್ಕಾಗಿ 141.36 ಹೆಕ್ಟೇರ್ (ಶೇ.3.64), ಕೈಗಾರಿಕೆಗಾಗಿ 480.86 ಹೆಕ್ಟೇರ್ (ಶೇ.12.37), ಸಾರ್ವಜನಿಕ/ಅರೆ ಸಾರ್ವಜನಿಕ ಉಪಯೋಗಕ್ಕೆ 243.21 ಹೆಕ್ಟೇರ್ (ಶೇ.6.25), ಉದ್ಯನವನ/ಬಯಲು ಜಾಗಗಳಿಗೆ 536.30 ಹೆಕ್ಟೇರ್ (ಶೇ.13.79), ನಾಗರೀಕ ಸೌಲಭ್ಯಕ್ಕಗಿ 18.92 ಹೆಕ್ಟೇರ್ (ಶೇ.0.49) ಹಾಗೂ ಸಾರಿಗೆ/ಸಂಪರ್ಕ ವಲಯಕ್ಕೆ 571.24 ಹೆಕ್ಟೇರ್ (ಶೆ.14.69), ಕಾಯ್ದಿರಿಸಿದ್ದು ಜಲಾವೃತ ಪ್ರದೇಶವಾಗಿ 241.88 ಹೆಕ್ಟೇರ್ ಒಳಗೊಂಡಂತೆ ಒಟ್ಟು 4130.27 ಹೆಕ್ಟೇರ್‌ಗಳು ನಗದೀಕರಣದ ಎಲ್ಲೆಯೆಂದು ನಿಗಧಿಪಡಿಸಲಾಗಿದೆ.

ಮಹಾ ಯೋಜನೆ (ಪರಿಷ್ಕೃತ-II)ಯನ್ನು ಅನುಷ್ಠಾನಕ್ಕೆ ತರಲು ಅಗತ್ಯವಿರುವ ಭೂ ಬಳಕೆ ವಲಯ ಮತ್ತು ಅಭಿವೃದ್ಧಿ ನಿಯಂತ್ರಣ ನಿಯಮಾವಳಿಗಳನ್ನು ರೂಪಿಸಲಾಗಿದೆ. ಸದರಿ ಮಹಾಯೋಜನೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 13(1)ರನ್ವಯ ಸರ್ಕಾರದ ತಾತ್ಕಾಲಿಕ ಅನುಮೋದನೆ ನೀಡುವಂತೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 194 ಬೆಂರೂಪ್ರಾ 2011, ಬೆಂಗಳೂರು, ದಿನಾಂಕ: 29-10-2011

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶಿವಮೊಗ್ಗ-ಭದ್ರಾವತಿ ನಗರಗಳ ಸ್ಥಳೀಯ ಯೋಜನಾ ಪ್ರದೇಶಕ್ಕೆ ರೂಪಿಸಿರುವ ಮಹಾ ಯೋಜನೆ (ಪರಿಷ್ಕೃತ-II) 2031ಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(3) ರನ್ವಯ ಈ ಕೆಳಗಿನ ನಿಬಂಧನೆಗಳಿಗೊಳಪಟ್ಟು ತಾತ್ಕಾಲಿಕ ಅನುಮೋದನೆಯನ್ನು ನೀಡಲಾಗಿದೆ.

1. ಸರ್ಕಾರದ ಅಂತಿಮ ಅಧಿಸೂಚನೆ ಸಂಖ್ಯೆ: ನಅಇ 522 ಮೈಅಪ್ರಾ 2005 ದಿನಾಂಕ: 10-03-2006ರನ್ವಯ ಬಯಲು ಜಾಗ ಮತ್ತು ಪೌರ ಸೌಲಭ್ಯಗಳ ವಿನಾಯಿತಿ ಕುರಿತು ನಿಗದಿಪಡಿಸಿರುವಂತೆ ಗರಿಷ್ಠ ವಿಸ್ತೀರ್ಣವನ್ನು 4,000 ಚ.ಮೀ. (0.40 ಹೆಕ್ಟೇರ್) ಎಂದು ಬದಲಾಯಿಸಿ ತಿದ್ದುಪಡಿಯೊಂದಿಗೆ ಅಂತಿಮ ಅನುಮೋದನೆ ಸಲ್ಲಿಸುವುದು.
2. ಭೂ ಬಳಕೆ ವಲಯ ಮತ್ತು ಅಭಿವೃದ್ಧಿ ನಿಯಂತ್ರಣ ನಿಯಮಾವಳಿಗಳು (ಮಹಾ ಯೋಜನೆ 2031- ಪ-IIರ ಸಂಪುಟ-II) ಪುಟ ಸಂಖ್ಯೆ: 77ರಲ್ಲಿನ special provisions in agricultural zone ಇದರ ವ್ಯಾಖ್ಯಾನದ ಪ್ಯಾರಾವನ್ನು ಕೈಬಿಟ್ಟು ಅಂತಿಮ ಅನುಮೋದನೆಗೆ ಸಲ್ಲಿಸುವುದು.

ಮಹಾಯೋಜನೆಗೆ (ಪರಿಷ್ಕೃತ-II) ತಾತ್ಕಾಲಿಕ ಅನುಮೋದನೆ ನೀಡಿದ ಗುರುತಾಗಿ ವರದಿ ಹಾಗೂ ನಕ್ಷೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಸವರಾಜ ಬರದೇಲಿ

ಪಿ.ಆರ್. ನಂ. 2692

ಸರ್ಕಾರದ ಅಧೀನ ಕಾರ್ಯದರ್ಶಿಗಳು (ಪ್ರ)

ನಗರಾಭಿವೃದ್ಧಿ ಇಲಾಖೆ

ಇಂಧನ ಸಚಿವಾಲಯ

ವಿಷಯ : ಮೆ॥ ಶ್ರೀ ಸ್ವರ್ಣ ಗ್ರೀನ್ ಪವರ್ ಇವರಿಗೆ ಹಂಚಿಕೆಯಾಗಿ, ರದ್ದಪಡಿಸಲಾಗಿರುವ 7.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ರದ್ದತಿ ಆದೇಶವನ್ನು ಹಿಂಪಡೆದು, ಯೋಜನೆಯ ಅನುಷ್ಠಾನಕ್ಕಾಗಿ ಕಾಲಾವಕಾಶ ವಿಸ್ತರಣೆ ಬಗ್ಗೆ.

ಓದಲಾಗಿದೆ :
1) ಸರ್ಕಾರದ ಆದೇಶ ಸಂಖ್ಯೆ : ಇಇ 216 ಎನ್‌ಸಿಇ 2001, ದಿನಾಂಕ : 19-07-2002.
2) ಸರ್ಕಾರದ ಆದೇಶ ಸಂಖ್ಯೆ : ಇಎನ್ 80 ಎನ್‌ಸಿಇ 2008, ದಿನಾಂಕ 22-02-2008.
3) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಕೆಆರ್‌ಇಡಿ/06/ಎಸ್‌ಹೆಚ್‌ಪಿ/08/2029, ದಿನಾಂಕ : 02/03-12-2008.
4) ಕಾರಣ ಕೇಳುವ ನೋಟೀಸು ಸಂಖ್ಯೆ : ಇಎನ್492 ಎನ್‌ಸಿಇ 2008, ದಿನಾಂಕ 27-12-2008.
5) ಸರ್ಕಾರದ ಆದೇಶ ಸಂಖ್ಯೆ : ಇಎನ್ 492 ಎನ್‌ಸಿಇ 2008, ದಿನಾಂಕ 08-05-2009.
6) ಮೆ: ಶ್ರೀ ಸ್ವರ್ಣ ಗ್ರೀನ್ ಪವರ್ ಇವರ ಪತ್ರ ದಿನಾಂಕ 06-07-2009.
7) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಕೆಆರ್‌ಇಡಿ/08/ಎಸ್‌ಎಸ್‌ಆರ್‌ಪಿ-ಎಸ್‌ಆರ್‌ಆರ್/ 2009/2734, ದಿನಾಂಕ 22/24-08-2009, ಸಂಖ್ಯೆ : ಕೆಆರ್‌ಇಡಿ/08/ ಎಸ್‌ಎಸ್‌ಜಿಪಿ/2009/2919, ದಿನಾಂಕ 05/07-09-2009 ಮತ್ತು ಕೆಆರ್‌ಇಡಿ /08/ಎಸ್‌ಜಿಪಿ/2009/3728, ದಿನಾಂಕ 12/13-11-2009.

8) ಸರ್ಕಾರದ ಪತ್ರ ಸಂಖ್ಯೆ : ಇಎನ್ 438 ಎನ್‌ಸಿಇ 2009, ದಿನಾಂಕ 26-12-2009.
9) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಕೆಆರ್‌ಇಡಿ/08/ ಎಸ್‌ಜಿಪಿ/2009/73, ದಿನಾಂಕ 08/12-01-2010.
10) ದಿನಾಂಕ 19-04-2010 ರಂದು ನಡೆದ ರಿವ್ಯೂ ಸಭೆಯ ನಡವಳಿಗಳು.
11) ಸರ್ಕಾರದ ಆದೇಶ ಸಂಖ್ಯೆ : ಇಎನ್ 438 ಎನ್‌ಸಿಇ 2009, ದಿನಾಂಕ 28-02-2011.
12) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಕೆಆರ್‌ಇಡಿ/08/ ಎಸ್‌ಎಸ್‌ಜಿಪಿ/7/ ಮೆ.ವ್ಯಾ/ 2011/2710, ದಿನಾಂಕ 12/13-09-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಮೆ॥ ಎಸ್.ಆರ್.ಆರ್. ಪವರ್ ಜೆನ್ ಕಂಪನಿಗೆ 7.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಬೆಳಗಾಂ ಜಿಲ್ಲೆಯ ರಾಯಭಾಗ ತಾಲ್ಲೂಕಿನ ಮಾವಿನಹುಂಡದಲ್ಲಿ ಕೆಲವೊಂದು ನಿಬಂಧನೆಗಳಿಗೊಳಪಟ್ಟು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ಮೆ॥ ಎಸ್.ಆರ್.ಆರ್. ಪವರ್ ಜೆನ್ ಕಂಪನಿಗೆ ಹಂಚಿಕೆಯಾದ ಸಂಪೂರ್ಣ 7.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಮೆ॥ ಶ್ರೀ ಸ್ವರ್ಣ ಗ್ರೀನ್ ಪವರ್ ಇವರಿಗೆ ವರ್ಗಾವಣೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರು ಸದರಿ ಅಭಿವೃದ್ಧಿದಾರರಿಗೆ ಯೋಜನೆ ಹಂಚಿಕೆಯಾಗಿ 7 ವರ್ಷ ಕಳೆದರೂ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿ ಸಾಧಿಸಿರುವುದಿಲ್ಲವೆಂದು ತಿಳಿಸುತ್ತಾ, ಸದರಿ ಯೋಜನೆಯ ಹಂಚಿಕೆ ಆದೇಶವನ್ನು ರದ್ದು ಪಡಿಸುವಂತೆ ಹಾಗೂ ಒಡಂಬಡಿಕೆಯನ್ನು ಮುಕ್ತಾಯಗೊಳಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಯೋಜನೆಯ ಅನುಷ್ಠಾನಕ್ಕಾಗಿ ಅನುಮತಿ ನೀಡಿ 7 ವರ್ಷ ಕಳೆದರೂ ಇದುವರೆಗೂ ಅನುಷ್ಠಾನ ನಿಟ್ಟಿನಲ್ಲಿ ಮೆ॥ ಶ್ರೀ ಸ್ವರ್ಣ ಗ್ರೀನ್ ಪವರ್ ಕಂಪನಿಯು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಕಾರಣ ಕೇಳುವ ನೋಟೀಸಿನಲ್ಲಿ ಯೋಜನೆಯ ಹಂಚಿಕೆಯನ್ನು ಏಕೆ ರದ್ದು ಪಡಿಸಬಾರದೆಂಬುದಕ್ಕೆ ಕಾರಣವನ್ನು ಕೇಳಲಾಗಿತ್ತು. ಆದರೆ, ಕಾರಣ ಕೇಳುವ ನೋಟೀಸು ಲಕೋಟೆಯು 'No such firm in this door number return to sender' ಎಂದು ವಾಪಸ್ ಬಂದಿರುತ್ತದೆ. ಇದರಿಂದಾಗಿ ಅಭಿವೃದ್ಧಿದಾರರು ಸದರಿ ವಿಳಾಸದಲ್ಲಿ ವಾಸ್ತವ್ಯ ಇಲ್ಲದಿರುವುದು ಹಾಗೂ ಸುಮಾರು 7 ವರ್ಷಗಳಿಂದ ಯೋಜನೆಯ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮೆ॥ ಶ್ರೀ ಸ್ವರ್ಣ ಗ್ರೀನ್ ಪವರ್ ಕಂಪನಿಯವರು ಯಾವುದೇ ಪ್ರಗತಿ ಸಾಧಿಸಿಲ್ಲದಿರುವುದರಿಂದ ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ಆದೇಶದಲ್ಲಿ ಮೆ॥ ಶ್ರೀ ಸ್ವರ್ಣ ಗ್ರೀನ್ ಪವರ್ ಇವರಿಗೆ ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನ ಮಾವಿನಹುಂಡದಲ್ಲಿ ಹಂಚಿಕೆ ಮಾಡಿದ್ದ 7.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಹಂಚಿಕೆ ಆದೇಶ ಮತ್ತು ಈ ಸಂಬಂಧ ಮಾಡಿಕೊಂಡಿದ್ದು ಒಡಂಬಡಿಕೆಯನ್ನು ರದ್ದುಪಡಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (6)ರ ಪತ್ರದಲ್ಲಿ ಮೆ॥ ಶ್ರೀ ಸ್ವರ್ಣ ಗ್ರೀನ್ ಪವರ್ ಇವರು ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಪ್ರಗತಿ ಸಾಧಿಸಿದ್ದು, ಯೋಜನೆಯ ರದ್ದತಿ ಆದೇಶವನ್ನು ಹಿಂಪಡೆಯಬೇಕೆಂದು ಕೋರಿದ್ದಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (7)ರ ಪತ್ರಗಳಲ್ಲಿ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಅಭಿವೃದ್ಧಿದಾರರು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದ್ದು, ಒಂದು ವರ್ಷದ ಕಾಲಾವಧಿಯಲ್ಲಿ ವಿದ್ಯುತ್ ಉತ್ಪಾದನೆಯನ್ನು ಪ್ರಾರಂಭಿಸುವುದಕ್ಕಾಗಿ ತಿಳಿಸಿರುವ ಹಿನ್ನೆಲೆಯಲ್ಲಿ ಈ ಯೋಜನೆಯನ್ನು ಪುನಶ್ಚೇತನಗೊಳಿಸುವಂತೆ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ಇವರು ಅಭಿವೃದ್ಧಿದಾರರ ಕೋರಿಕೆಯ ಮೇರೆಗೆ ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಕಳುಹಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (8)ರ ಸರ್ಕಾರಿ ಪತ್ರದಲ್ಲಿ ಸದರಿ ಅಭಿವೃದ್ಧಿದಾರರು ಯೋಜನೆಯ ಕುರಿತು ಡಿ.ಪಿ.ಆರ್. ತಯಾರಿಸಿದ್ದಲ್ಲಿ ಅದರ ಪ್ರತಿಯನ್ನು ಒದಗಿಸುವಂತೆ ಕೆ.ಆರ್.ಇ.ಡಿ.ಎಲ್. ನ ವ್ಯವಸ್ಥಾಪಕ ನಿರ್ದೇಶಕರನ್ನು ಕೋರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (9)ರ ಪತ್ರದೊಂದಿಗೆ ಕೆ.ಆರ್.ಇ.ಡಿ.ಎಲ್. ವ್ಯವಸ್ಥಾಪಕ ನಿರ್ದೇಶಕರು, ಡಿ.ಪಿ.ಆರ್.ನ್ನು ಕಳುಹಿಸಿಕೊಟ್ಟಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (10)ರಲ್ಲಿ ನಡೆದ ರಿವ್ಯೂ ಸಭೆಯ ನಿರ್ಣಯವು ಈ ಕೆಳಗಿನಂತಿದೆ:-

"It has a 7 MW capacity Wind Project at Mavinahunda, Belgaum District. The appraisal on the project was made to the committee by GGM, stating that M/s Swarna Green Power obtained 7 MW wind power project under transfer mode and has a valid agreement till 2[nd] April 2011. Further the company has possessed the private land area about 35 acres. WTG locations are finalized after micro-siting, power evacuation approval obtained and other related work is in progress. The representative of the firm presented in the meeting that the project finance is being arranged and the project will be commissioned by April 2011 and other requirement components of the projects are in the advanced stage.

Referring to the above the committee permitted the firm to develop the project before March 2011 instead of April 2011 and imposed a binding condition, it has to pay a penalty of Rs. 1.00 lakh per MW to KREDL. Project remained un-commissioned by end of March 2011, the amount will be transferred to Akshaya Shakthi Nidhi in KREDL and the project will be cancelled."

ಮೇಲೆ ಓದಲಾದ ಕ್ರಮ ಸಂಖ್ಯೆ (11)ರ ಆದೇಶದಲ್ಲಿ ಮೆ॥ ಶ್ರೀ ಸ್ವರ್ಣ ಗ್ರೀನ್ ಪವರ್ ಇವರಿಗೆ ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕಿನ ಮಾವಿನಹುಂಡದಲ್ಲಿ ರದ್ದುಗೊಳಿಸಿರುವ 7.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ರದ್ದತಿ ಆದೇಶವನ್ನು ಹಿಂಪಡೆದು ಕಾಲಾವಕಾಶವನ್ನು ದಿನಾಂಕ 30-04-2011 ರವರೆಗೆ ವಿಸ್ತರಿಸಲಾಗಿತ್ತು.

ಮೇಲೆ ಓದಲಾದ, ಕ್ರಮ ಸಂಖ್ಯೆ (12)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರು ಮೆ॥ ಶ್ರೀ ಸ್ವರ್ಣ ಗ್ರೀನ್ ಪವರ್ ಇವರಿಗೆ ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನ ಮಾವಿನಹುಂಡದಲ್ಲಿ 7.00 ಮೆ.ವ್ಯಾ. ಪವನ ವಿದ್ಯುತ್ ಯೋಜನೆಯನ್ನು ಅನುಷ್ಠಾನ ಮಾಡಲು 18 ತಿಂಗಳುಗಳ ಕಾಲಾವಕಾಶವನ್ನು ಅಭಿವೃದ್ಧಿದಾರರ ಕೋರಿಕೆ ಮೇರೆಗೆ ಶಿಫಾರಸ್ಸು ಮಾಡಿರುತ್ತಾರೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರಿ ಆದೇಶ ಸಂಖ್ಯೆ : ಇಎನ್ 438 ಎನ್‌ಸಿಇ 2009, ಬೆಂಗಳೂರು, ದಿನಾಂಕ: 10–11–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮೆ॥ ಶ್ರೀ ಸ್ವರ್ಣ ಗ್ರೀನ್ ಪವರ್ ಇವರಿಗೆ ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನ ಮಾವಿನಹುಂಡದಲ್ಲಿ 7.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಅನುಷ್ಠಾನಕ್ಕೆ ಕೊನೆಯದಾಗಿ ಕಾಲಾವಕಾಶವನ್ನು 01–05–2011 ರಿಂದ 18 ತಿಂಗಳುಗಳ ರವರೆಗೆ ವಿಸ್ತರಿಸಲಾಗಿದೆ:–

ಈ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿನ ಇತರೆ ನಿಬಂಧನೆಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ

ಪಿಆರ್.ನಂ. 2706

ಇಂಧನ ಸಚಿವಾಲಯ

ವಿಷಯ : ಮೆ॥ ಸಾಯಿ ಸಿಮ್ರಿತಾ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಬಾಲ್ಲೇಶ್ವರ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ : 1) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕ್ರೆಡಲ್/06/SH-529/Balleshwara MHS/1503, ದಿನಾಂಕ 17/27–05–2011.

2) ದಿನಾಂಕ 27–05–2011ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ॥ ಸಾಯಿ ಸಿಮ್ರಿತಾ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ ದಾವಣಗೆರೆ ಜಿಲ್ಲೆಯ ಹೊನ್ನಾಳಿ ಪ್ರದೇಶದಲ್ಲಿ ತುಂಗಾಭದ್ರ ನದಿಗೆ ಅಡ್ಡಲಾಗಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಬಲ್ಲೇಶ್ವರ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಹಂಚಿಕೆ ಸಮಿತಿ ಸಭೆಯ ಮುಂದೆ ಸದರಿ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು. ಮೆ॥ ಸಾಯಿ ಸಿಮ್ರಿತಾ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲು ಹಂಚಿಕೆ ಸಮಿತಿಯು ಪರಿಗಣಿಸಿರುತ್ತದೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರದ ಆದೇಶ ಸಂಖ್ಯೆ : ಇಎನ್ 261 ಎನ್‌ಸಿಇ 2011, ಬೆಂಗಳೂರು, ದಿನಾಂಕ : 31–10–2011.

ಮೆ: ಸಾಯಿ ಸಿಮ್ರಿತಾ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ ದಾವಣಗೆರೆ ಜಿಲ್ಲೆಯ ಹೊನ್ನಾಳಿ ಪ್ರದೇಶದಲ್ಲಿ ತುಂಗಾಭದ್ರ ನದಿಗೆ ಅಡ್ಡಲಾಗಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಬಲ್ಲೇಶ್ವರ ಕಿರು ಜಲ ವಿದ್ಯುತ್ ಯೋಜನೆಯನ್ನು ಈ ಕೆಳಕಂಡ ಶೆಡ್ಯೂಲ್ ಹಾಗೂ ಷರತ್ತಿಗೊಳಪಟ್ಟು ಹಂಚಿಕೆ ಮಾಡಲಾಗಿದೆ:–

Company	MHS	Location	MW	Weir Lattitude	Weir Longitude	Power House Latitude	Power House Longitude	FRL (M)	TWL (M)	Design Head	Design Disch-arge (Cum-ees)
M/s. Sai Simrita Power Pvt. Ltd.,	Balles h-wara	Honnali Taluk, Davangere Dist. About 7 km down stream of the confluence of the Honnali town.	2.00	14°16' 42''	75°38' 52''	At the toe of the diversio n weir		543	535	4.75	110

1 ಸದರಿ ಯೋಜನೆಯಿಂದ ಕೆಳತೊರೆ ಮತ್ತು ಮೇಲ್ತೊರೆ ಯೋಜನೆಗಳಿಗೆ ಯಾವುದೇ ಹಾನಿಯಾಗಬಾರದು.

1(ಅ) ಹಂಚಿಕೆದಾರರು ಈ ಆದೇಶ ಹೊರಡಿಸಿದ 45 ದಿನಗಳ ಒಳಗಾಗಿ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳತಕ್ಕದ್ದು ಇಲ್ಲದಿದ್ದಲ್ಲಿ, ಈ ಹಂಚಿಕೆ ತಂತಾನೇ ರದ್ದಾಗುವುದು. ನಂತರ, ಕಂಪನಿಯು ಹಂಚಿಕೆಗೋಸ್ಕರ ಪುನಃ ಹೊಸದಾಗಿ ಅರ್ಜಿ ಸಲ್ಲಿಸತಕ್ಕದ್ದು, ಯಾವ ಕಾರಣಕ್ಕೂ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಸ್ವೀಕರಿಸಿದ ಅರ್ಜಿ ಪರಿಷ್ಕರಣಾ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

(ಆ) ಒಡಂಬಡಿಕೆಯನ್ನು ರೂ. 400.00ರ ಛಾಪಾ ಕಾಗದದ ಮೇಲೆ ಮಾಡಿಕೊಂಡು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದವರಿಗೆ ಕಳುಹಿಸಿ ಪ್ರಮಾಣೀಕರಿಸಿ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು (ಒಡಂಬಡಿಕೆಯನ್ನು ಕಡ್ಡಾಯವಾಗಿ ಕನ್ನಡದಲ್ಲಿಯೇ ಸಲ್ಲಿಸತಕ್ಕದ್ದು)

(ಇ) ಈ ಒಡಂಬಡಿಕೆಯನ್ನು ಮಾಡಿಕೊಳ್ಳುವ ಮೊದಲು ಯೋಜನಾ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್.) ಪರಿಷ್ಕರಿಸಲು ಮೆಗಾ ವ್ಯಾಟ್ ಒಂದಕ್ಕೆ ಸರ್ಕಾರದ ಆದೇಶಾನುಸಾರ ವಿವರವಾದ ಯೋಜನಾ ವರದಿ ಪರಿಷ್ಕರಣ ಶುಲ್ಕವನ್ನು ತುಂಬುವುದು.

(ಈ) ಯೋಜನಾ ಅಭಿವೃದ್ಧಿದಾರರು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದಲೂ ಅಂದರೆ ಜಲಸಂಪನ್ಮೂಲ ಇಲಾಖೆ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕಂದಾಯ ಇಲಾಖೆಗಳಿಂದ ಕ್ಲಿಯರೆನ್ಸ್‌ಗಾಗಿ ಅರ್ಜಿ ಸಲ್ಲಿಸತಕ್ಕದ್ದು. ಒಡಂಬಡಿಕೆ ಮಾಡಿಕೊಂಡ ಒಂದು ವರ್ಷದೊಳಗಾಗಿ ವಿವರವಾದ ಯೋಜನಾ ವರದಿಯನ್ನು ಸಲ್ಲಿಸತಕ್ಕದ್ದು.

2. ಹಂಚಿಕೆದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಠೇವಣಿ ಇಡುವ ಹಣವನ್ನು, ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ಅವಿಷ್ಕರಿಸುವುದಕ್ಕೋಸ್ಕರ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

3. ಯೋಜನೆಯನ್ನು 3 ವರ್ಷದ ಅವಧಿಯೊಳಗೆ ಮುಗಿಸುವ ನಿಟ್ಟಿನಲ್ಲಿ ಹಂಚಿಕೆದಾರರು ಕಾರ್ಯ ಪ್ರವೃತ್ತರಾಗತಕ್ಕದ್ದು.

4. ಯೋಜನಾ ಅನುಷ್ಠಾನ ಮಾಡಲು ಸಫಲವಾಗದಿದ್ದಲ್ಲಿ ಈ ಹಂಚಿಕೆಯು ತಂತಾನೇ ಯಾವ ಮುನ್ಸೂಚನೆಯನ್ನೂ ನೀಡದೆ ರದ್ದಾಗುವುದೆಂದು ತಿಳಿಯತಕ್ಕದ್ದು.

5. ಯೋಜನಾ ಅಭಿವೃದ್ಧಿದಾರರು ವಿದ್ಯುತ್ತನ್ನು ಮೂರನೆಯವರಿಗೆ ಮಾರಾಟ ಮಾಡುವ ಸಂದರ್ಭದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದೊಂದಿಗೆ ವೀಲಿಂಗ್ ಅಂಡ್ ಬ್ಯಾಂಕಿಂಗ್ ಒಡಂಬಡಿಕೆ ಮಾಡಿಕೊಳ್ಳಲು ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ವಿದ್ಯುತ್ತನ್ನು ಮಾರಾಟ ಮಾಡುವ ಸಂದರ್ಭದಲ್ಲಿ ವಿದ್ಯುತ್ ಖರೀದಿ ಒಡಂಬಡಿಕೆ (ಪಿಪಿಎ) ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

6. ಈ ವಿಷಯದಲ್ಲಿ ಹಂಚಿಕೆದಾರರು ರಾಜ್ಯ ಮತ್ತು ಜಿಲ್ಲಾ ಮಟ್ಟಕ್ಕೆ ಸಂಬಂಧಿಸಿದ ಅಧಿಕಾರಿಗಳ ಸಹಾಯ/ಸಹಕಾರವನ್ನು ಪಡೆದು ನಿಗದಿತ 3 ವರ್ಷದ ಅವಧಿಯೊಳಗೆ ಯೋಜನಾ ಅನುಷ್ಠಾನ ಪೂರ್ಣಗೊಳಿಸತಕ್ಕದ್ದು.

7. ಈ ಕಿರು ಜಲ ವಿದ್ಯುತ್ ಯೋಜನೆಯ ಸ್ಥಳದಲ್ಲಿ ಯಾವುದಾದರೂ ಸರ್ಕಾರಿ ಜಲ ವಿದ್ಯುತ್/ನೀರಾವರಿ/ಕುಡಿಯುವ ನೀರಿನ ಯೋಜನೆಗಳು ಬಂದಲ್ಲಿ ಸರ್ಕಾರಿ ಯೋಜನೆಗಳಿಗೆ ಮೊದಲ ಆದ್ಯತೆ ದೊರಕುವುದು ಹಾಗೂ ಈ ಯೋಜನೆಗೆ ಯಾವುದಾದರೂ ಇತರೆ ಯೋಜನೆಗಳಿಂದ ಧಕ್ಕೆಯಾದ್ದಲ್ಲಿ ಯಾವುದೇ ಪರಿಹಾರವನ್ನು ಅಭಿವೃದ್ಧಿದಾರರು ನಿರೀಕ್ಷಿಸುವಂತಿಲ್ಲ.

8. ಸ್ಥಳೀಯವಾಗಿ ಉದ್ಭವಿಸುವ ಯಾವುದಾದರೂ ಆಕ್ಷೇಪಣೆಗಳಿಗೆ ಅಭಿವೃದ್ಧಿದಾರರೇ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ.

9. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಯಾವುದೇ ಯೋಜನೆಗಳಿಂದಾಗಿ ಸದರಿ ಯೋಜನೆಯು ಮುಳುಗಡೆಯಾದಲ್ಲಿ, ಒದಗಬಹುದಾದ ಸಂಪೂರ್ಣ ತೊಂದರೆಗಳಿಗೆ ಅಭಿವೃದ್ಧಿದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.

10. ವಿವರವಾದ ಯೋಜನಾ ವರದಿಯನ್ನು ಕ್ರೆಡಲ್ ಸಂಸ್ಥೆಯು ಪರಿಶೀಲಿಸಿದ ನಂತರ ಇತರ ಸಂಬಂಧಿಸಿದ ಇಲಾಖೆಗಳಿಗೆ ಅದನ್ನು ಸಲ್ಲಿಸುವುದು ಹಾಗೂ ತದನಂತರ ತಾಂತ್ರಿಕ ಅನುಮೋದನೆಗಾಗಿ ಕ್ರೆಡಲ್‌ಗೆ ಅರ್ಜಿ ಸಲ್ಲಿಸತಕ್ಕದ್ದು.

11. ಸದರಿ ಯೋಜನೆಯನ್ನು ಅಭಿವೃದ್ಧಿದಾರರು ಕಾರ್ಯಗತ (Implement) ಮಾಡದಹೊರತು ವರ್ಗಾವಣೆ/ಮಾರಾಟಕ್ಕೆ ಅನುಮೋದನೆ ನೀಡಲಾಗುವುದಿಲ್ಲ.

12. ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್. 2707

ಇಂಧನ ಸಚಿವಾಲಯ

ವಿಷಯ : ಮೆ॥ ಜೆ.ಎಸ್.ಆರ್. ಪವರ್ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ 3.00 ಮೆಗಾ ವ್ಯಾಟ್ ಸಾಮರ್ಥ್ಯದ ಶಿವಯೋಗಮಂದಿರ್ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ : 1)ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕ್ರೆಡಲ್/06/SH-776/Cholachagud MHS/1000, ದಿನಾಂಕ 21/28-03-2011 ಮತ್ತು ಕ್ರೆಡಲ್/06/SH-776/Shivayagamandhir- MHS/1433, ದಿನಾಂಕ 19/20-05-2011.

2) ದಿನಾಂಕ 27-05-2011ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರಗಳಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ॥ ಜೆ.ಎಸ್.ಆರ್. ಪವರ್ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕು, ಶಿವಯೋಗಮಂದಿರ್ ಗ್ರಾಮದ ಪ್ರದೇಶದಲ್ಲಿ ಮಲಪ್ರಭಾ ನದಿಗೆ ಅಡ್ಡಲಾಗಿ 3.00 ಮೆಗಾ ವ್ಯಾಟ್ ಸಾಮರ್ಥ್ಯದ ಶಿವಯೋಗಮಂದಿರ್ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಒದಲಾದ ಹಂಚಿಕೆ ಸಮಿತಿ ಸಭೆಯ ಮುಂದೆ ಸದರಿ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು. ಮೆ॥ ಜೆ.ಎಸ್.ಆರ್. ಪವರ್ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ 3.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲು ಹಂಚಿಕೆ ಸಮಿತಿಯು ಪರಿಗಣಿಸಿರುತ್ತದೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ:-

ಸರ್ಕಾರದ ಆದೇಶ ಸಂಖ್ಯೆ : ಇಎನ್ 193 ಎನ್‌ಸಿಇ 2011, ಬೆಂಗಳೂರು, ದಿನಾಂಕ : 31-10-2011.

ಮೆ: ಜೆ.ಎಸ್.ಆರ್. ಪವರ್ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕು, ಶಿವಯೋಗಮಂದಿರ್ ಗ್ರಾಮದ ಪ್ರದೇಶದಲ್ಲಿ ಮಲಪ್ರಭಾ ನದಿಗೆ ಅಡ್ಡಲಾಗಿ 3.00 ಮೆಗಾ ವ್ಯಾಟ್ ಸಾಮರ್ಥ್ಯದ ಶಿವಯೋಗಮಂದಿರ್ ಕಿರು ಜಲ ವಿದ್ಯುತ್ ಯೋಜನೆಯನ್ನು ಈ ಕೆಳಕಂಡ ಶೆಡ್ಯೂಲ್ ಹಾಗೂ ಷರತ್ತಿಗೊಳಪಟ್ಟು ಹಂಚಿಕೆ ಮಾಡಲಾಗಿದೆ:-

Company	MHS	Location	MW	Weir Lattitude	Weir Longitude	Power House Lattitude	Power House Longitude	FRL (M)	TWL (M)	Design Head	Design Disch-arge (Cum-ees)
M/s. JSR Power Projects Pvt. Ltd.,	Sivayo gaman dir	Badami Taluk, Bagalkot District	3.00	15°54' 50''	75°45' 27''	At the toe of the diversio n weir		527	516.5	10.5	34

1 ಸದರಿ ಯೋಜನೆಯಿಂದ ಕೆಳತೊರೆ ಮತ್ತು ಮೇಲ್ತೊರೆ ಯೋಜನೆಗಳಿಗೆ ಯಾವುದೇ ಹಾನಿಯಾಗಬಾರದು.

1(ಅ) ಹಂಚಿಕೆದಾರರು ಈ ಆದೇಶ ಹೊರಡಿಸಿದ 45 ದಿನಗಳ ಒಳಗಾಗಿ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳತಕ್ಕದ್ದು ಇಲ್ಲದಿದ್ದಲ್ಲಿ, ಈ ಹಂಚಿಕೆ ತಂತಾನೇ ರದ್ದಾಗುವುದು, ನಂತರ, ಕಂಪನಿಯು ಹಂಚಿಕೆಗೋಸ್ಕರ ಪುನಃ ಹೊಸದಾಗಿ ಅರ್ಜಿ ಸಲ್ಲಿಸತಕ್ಕದ್ದು, ಯಾವ ಕಾರಣಕ್ಕೂ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಸ್ವೀಕರಿಸಿದ ಅರ್ಜಿ ಪರಿಷ್ಕರಣಾ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

(ಆ) ಒಡಂಬಡಿಕೆಯನ್ನು ರೂ. 400.00ರ ಛಾಪಾ ಕಾಗದದ ಮೇಲೆ ಮಾಡಿಕೊಂಡು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದವರಿಗೆ ಕಳುಹಿಸಿ ಪ್ರಮಾಣೀಕರಿಸಿ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು (ಒಡಂಬಡಿಕೆಯನ್ನು ಕಡ್ಡಾಯವಾಗಿ ಕನ್ನಡದಲ್ಲಿಯೇ ಸಲ್ಲಿಸತಕ್ಕದ್ದು)

(ಇ) ಈ ಒಡಂಬಡಿಕೆಯನ್ನು ಮಾಡಿಕೊಳ್ಳುವ ಮೊದಲು ಯೋಜನಾ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್.) ಪರಿಷ್ಕರಿಸಲು ಮೆಗಾ ವ್ಯಾಟ್ ಒಂದಕ್ಕೆ ಸರ್ಕಾರದ ಆದೇಶಾನುಸಾರ ವಿವರವಾದ ಯೋಜನಾ ವರದಿ ಪರಿಷ್ಕರಣ ಶುಲ್ಕವನ್ನು ತುಂಬುವುದು.

(ಈ) ಯೋಜನಾ ಅಭಿವೃದ್ಧಿದಾರರು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದಲೂ ಅಂದರೆ ಜಲಸಂಪನ್ಮೂಲ ಇಲಾಖೆ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕಂದಾಯ ಇಲಾಖೆಗಳಿಂದ ಕ್ಲಿಯರೆನ್ಸ್‌ಗಾಗಿ ಅರ್ಜಿ ಸಲ್ಲಿಸತಕ್ಕದ್ದು. ಒಡಂಬಡಿಕೆ ಮಾಡಿಕೊಂಡ ಒಂದು ವರ್ಷದೊಳಗಾಗಿ ವಿವರವಾದ ಯೋಜನಾ ವರದಿಯನ್ನು ಸಲ್ಲಿಸತಕ್ಕದ್ದು.

2(ಅ) ಹಂಚಿಕೆದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಠೇವಣಿ ಇಡುವ ಹಣವನ್ನು, ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ಆವಿಷ್ಕರಿಸುವುದಕ್ಕೋಸ್ಕರ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

(ಆ) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಯೋಜನಾ ವರದಿಗೆ ತಾಂತ್ರಿಕ ಅನುಮೋದನೆ ಕೊಟ್ಟ ಆರು ತಿಂಗಳ ಒಳಗಾಗಿ ಫೈನಾನ್ಸಿಯಲ್ ಕ್ಲೋಷರ್‌ನ್ನು ಸಾಧಿಸತಕ್ಕದ್ದು.

3. ಯೋಜನೆಯನ್ನು 3 ವರ್ಷದ ಅವಧಿಯೊಳಗೆ ಮುಗಿಸುವ ನಿಟ್ಟಿನಲ್ಲಿ ಹಂಚಿಕೆದಾರರು ಕಾರ್ಯ ಪ್ರವೃತ್ತರಾಗತಕ್ಕದ್ದು.

4. ಮೇಲೆ ತಿಳಿಸಿದ 2, 3 ಮತ್ತು 4 ಅಂಶಗಳ ಯೋಜನಾ ಅನುಷ್ಠಾನ ಮಾಡಲು ಸಫಲವಾಗದಿದ್ದಲ್ಲಿ ಈ ಹಂಚಿಕೆಯು ತಂತಾನೇ ಯಾವ ಮುನ್ಸೂಚನೆಯನ್ನೂ ನೀಡದೆ ರದ್ದಾಗುವುದೆಂದು ತಿಳಿಯತಕ್ಕದ್ದು.

5. ಯೋಜನಾ ಅಭಿವೃದ್ಧಿದಾರರು ವಿದ್ಯುತ್ತನ್ನು ಮೂರನೆಯವರಿಗೆ ಮಾರಾಟ ಮಾಡುವ ಸಂದರ್ಭದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದೊಂದಿಗೆ ವೀಲಿಂಗ್ ಅಂಡ್ ಬ್ಯಾಂಕಿಂಗ್ ಒಡಂಬಡಿಕೆ ಮಾಡಿಕೊಳ್ಳಲು ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ವಿದ್ಯುತ್ತನ್ನು ಮಾರಾಟ ಮಾಡುವ ಸಂದರ್ಭದಲ್ಲಿ ವಿದ್ಯುತ್ ಖರೀದಿ ಒಡಂಬಡಿಕೆ (ಪಿಪಿಎ) ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

6. ಈ ವಿಷಯದಲ್ಲಿ ಹಂಚಿಕೆದಾರರು ರಾಜ್ಯ ಮತ್ತು ಜಿಲ್ಲಾ ಮಟ್ಟಕ್ಕೆ ಸಂಬಂಧಿಸಿದ ಅಧಿಕಾರಿಗಳ ಸಹಾಯ/ಸಹಕಾರವನ್ನು ಪಡೆದು ನಿಗದಿತ 3 ವರ್ಷದ ಅವಧಿಯೊಳಗೆ ಯೋಜನಾ ಅನುಷ್ಠಾನ ಪೂರ್ಣಗೊಳಿಸತಕ್ಕದ್ದು.

7. ಈ ಕಿರು ಜಲ ವಿದ್ಯುತ್ ಯೋಜನೆಯ ಸ್ಥಳದಲ್ಲಿ ಯಾವುದಾದರೂ ಸರ್ಕಾರಿ ಜಲ ವಿದ್ಯುತ್/ನೀರಾವರಿ/ಕುಡಿಯುವ ನೀರಿನ ಯೋಜನೆಗಳು ಬಂದಲ್ಲಿ ಸರ್ಕಾರಿ ಯೋಜನೆಗಳಿಗೆ ಮೊದಲ ಆದ್ಯತೆ ದೊರಕುವುದು ಹಾಗೂ ಈ ಯೋಜನೆಗೆ ಯಾವುದಾದರೂ ಇತರೆ ಯೋಜನೆಗಳಿಂದ ಧಕ್ಕೆಯಾದ್ದಲ್ಲಿ ಯಾವುದೇ ಪರಿಹಾರವನ್ನೂ ಅಭಿವೃದ್ಧಿದಾರರು ನಿರೀಕ್ಷಿಸುವಂತಿಲ್ಲ.

8. ಸ್ಥಳೀಯವಾಗಿ ಉದ್ಭವಿಸುವ ಯಾವುದಾದರೂ ಆಕ್ಷೇಪಣೆಗಳಿಗೆ ಅಭಿವೃದ್ಧಿದಾರರೇ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ.

9. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಯಾವುದೇ ಯೋಜನೆಗಳಿಂದಾಗಿ ಸದರಿ ಯೋಜನೆಯು ಮುಳುಗಡೆಯಾದಲ್ಲಿ, ಒದಗಬಹುದಾದ ಸಂಪೂರ್ಣ ತೊಂದರೆಗಳಿಗೆ ಅಭಿವೃದ್ಧಿದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.

10. ವಿವರವಾದ ಯೋಜನಾ ವರದಿಯನ್ನು ಕ್ರೆಡಲ್ ಸಂಸ್ಥೆಯು ಪರಿಶೀಲಿಸಿದ ನಂತರ ಇತರ ಸಂಬಂಧಿಸಿದ ಇಲಾಖೆಗಳಿಗೆ ಅದನ್ನು ಸಲ್ಲಿಸುವುದು ಹಾಗೂ ತದನಂತರ ತಾಂತ್ರಿಕ ಅನುಮೋದನೆಗಾಗಿ ಕ್ರೆಡಲ್‌ಗೆ ಅರ್ಜಿ ಸಲ್ಲಿಸತಕ್ಕದ್ದು.

11. ಸದರಿ ಯೋಜನೆಯನ್ನು ಅಭಿವೃದ್ಧಿದಾರರು ಕಾರ್ಯಗತ (Implement) ಮಾಡದಹೊರತು, ವರ್ಗಾವಣೆ/ಮಾರಾಟಕ್ಕೆ ಅನುಮೋದನೆ ನೀಡಲಾಗುವುದಿಲ್ಲ.

12. ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್. 2708

ಇಂಧನ ಸಚಿವಾಲಯ

ವಿಷಯ : ಮೆ॥ ಸಾಯಿ ಅಕ್ಷಾ ಪವರ್ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಹರಕೇರಿ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ : 1)ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕ್ರೆಡಲ್/06/SH-532/Harakeri MHS/998, ದಿನಾಂಕ 25/28-03-2011 ಮತ್ತು ಕ್ರೆಡಲ್/06/SH-532/Harakeri - MHS/1435, ದಿನಾಂಕ 19/20-05-2011.

2) ದಿನಾಂಕ 27-05-2011ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ॥ ಸಾಯಿ ಅಕ್ಷಾ ಪವರ್ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಶಿವಮೊಗ್ಗ ಜಿಲ್ಲೆಯ ಶಿವಮೊಗ್ಗ ತಾಲ್ಲೂಕು, ಹರಕೇರಿ ಗ್ರಾಮದ ಪ್ರದೇಶದಲ್ಲಿ ತುಂಗಾ ನದಿಗೆ ಅಡ್ಡಲಾಗಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಹರಕೇರಿ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಹಂಚಿಕೆ ಸಮಿತಿ ಸಭೆಯ ಮುಂದೆ ಸದರಿ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು. ಮೆ॥ ಸಾಯಿ ಅಕ್ಷಾ ಪವರ್ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲು ಹಂಚಿಕೆ ಸಮಿತಿಯು ಪರಿಗಣಿಸಿರುತ್ತದೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ:-

ಸರ್ಕಾರದ ಆದೇಶ ಸಂಖ್ಯೆ : ಇಎನ್ 191 ಎನ್‌ಸಿಇ 2011, ಬೆಂಗಳೂರು, ದಿನಾಂಕ : 31-10-2011.

ಮೆ: ಸಾಯಿ ಅಕ್ಷಾ ಪವರ್ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಶಿವಮೊಗ್ಗ ಜಿಲ್ಲೆಯ ಶಿವಮೊಗ್ಗ ತಾಲ್ಲೂಕು, ಹರಕೇರಿ ಗ್ರಾಮದ ಪ್ರದೇಶದಲ್ಲಿ ತುಂಗಾ ನದಿಗೆ ಅಡ್ಡಲಾಗಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಹರಕೇರಿ ಕಿರು ಜಲ ವಿದ್ಯುತ್ ಯೋಜನೆಯನ್ನು ಈ ಕೆಳಕಂಡ ಶೆಡ್ಯೂಲ್ ಹಾಗೂ ಷರತ್ತಿಗೊಳಪಟ್ಟು ಹಂಚಿಕೆ ಮಾಡಲಾಗಿದೆ:-

Company	MHS	Location	MW	Weir Lattitude	Weir Longitude	Power House Lattitude	Power House Longitude	FRL (M)	TWL (M)	Design Head	Design Discharge (Cumees)
M/s. Sai Aksha Power Projects Pvt. Ltd.,	Harakeri	Harakeri village, Shimoga Taluk, & District	2.00	13°53' 42"	75°33' 55"	At the toe of the diversion weir		564	559	4.5	68

1 ಸದರಿ ಯೋಜನೆಯಿಂದ ಕೆಳತೊರೆ ಮತ್ತು ಮೇಲ್ತೊರೆ ಯೋಜನೆಗಳಿಗೆ ಯಾವುದೇ ಹಾನಿಯಾಗಬಾರದು.

1(ಅ) ಹಂಚಿಕೆದಾರರು ಈ ಆದೇಶ ಹೊರಡಿಸಿದ 45 ದಿನಗಳ ಒಳಗಾಗಿ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳತಕ್ಕದ್ದು ಇಲ್ಲದಿದ್ದಲ್ಲಿ, ಈ ಹಂಚಿಕೆ ತಂತಾನೇ ರದ್ದಾಗುವುದು, ನಂತರ, ಕಂಪನಿಯು ಹಂಚಿಕೆಗೋಸ್ಕರ ಪುನಃ ಹೊಸದಾಗಿ ಅರ್ಜಿ ಸಲ್ಲಿಸತಕ್ಕದ್ದು, ಯಾವ ಕಾರಣಕ್ಕೂ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಸ್ವೀಕರಿಸಿದ ಅರ್ಜಿ ಪರಿಷ್ಕರಣಾ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

(ಆ) ಒಡಂಬಡಿಕೆಯನ್ನು ರೂ. 400.00ರ ಛಾಪಾ ಕಾಗದದ ಮೇಲೆ ಮಾಡಿಕೊಂಡು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದವರಿಗೆ ಕಳುಹಿಸಿ ಪ್ರಮಾಣೀಕರಿಸಿ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು (ಒಡಂಬಡಿಕೆಯನ್ನು ಕಡ್ಡಾಯವಾಗಿ ಕನ್ನಡದಲ್ಲಿಯೇ ಸಲ್ಲಿಸತಕ್ಕದ್ದು)

(ಇ) ಈ ಒಡಂಬಡಿಕೆಯನ್ನು ಮಾಡಿಕೊಳ್ಳುವ ಮೊದಲು ಯೋಜನಾ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್.) ಪರಿಷ್ಕರಿಸಲು ಮೆಗಾ ವ್ಯಾಟ್ ಒಂದಕ್ಕೆ ಸರ್ಕಾರದ ಆದೇಶಾನುಸಾರ ವಿವರವಾದ ಯೋಜನಾ ವರದಿ ಪರಿಷ್ಕರಣ ಶುಲ್ಕವನ್ನು ತುಂಬುವುದು.

(ಈ) ಯೋಜನಾ ಅಭಿವೃದ್ಧಿದಾರರು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದಲೂ ಅಂದರೆ ಜಲಸಂಪನ್ಮೂಲ ಇಲಾಖೆ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕಂದಾಯ ಇಲಾಖೆಗಳಿಂದ ಕ್ಲಿಯರೆನ್ಸ್‌ಗಾಗಿ ಅರ್ಜಿ ಸಲ್ಲಿಸತಕ್ಕದ್ದು. ಒಡಂಬಡಿಕೆ ಮಾಡಿಕೊಂಡ ಒಂದು ವರ್ಷದೊಳಗಾಗಿ ವಿವರವಾದ ಯೋಜನಾ ವರದಿಯನ್ನು ಸಲ್ಲಿಸತಕ್ಕದ್ದು.

2 ಹಂಚಿಕೆದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಠೇವಣಿ ಇಡುವ ಹಣವನ್ನು, ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ಅವಿಷ್ಕರಿಸುವುದಕ್ಕೋಸ್ಕರ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

3. ಯೋಜನೆಯನ್ನು 3 ವರ್ಷದ ಅವಧಿಯೊಳಗೆ ಮುಗಿಸುವ ನಿಟ್ಟಿನಲ್ಲಿ ಹಂಚಿಕೆದಾರರು ಕಾರ್ಯ ಪ್ರವೃತ್ತರಾಗತಕ್ಕದ್ದು.

4. ಯೋಜನಾ ಅನುಷ್ಠಾನ ಮಾಡಲು ಸಫಲವಾಗದಿದ್ದಲ್ಲಿ ಈ ಹಂಚಿಕೆಯು ತಂತಾನೇ ಯಾವ ಮುನ್ಸೂಚನೆಯನ್ನೂ ನೀಡದೆ ರದ್ದಾಗುವುದೆಂದು ತಿಳಿಯತಕ್ಕದ್ದು.

5. ಯೋಜನಾ ಅಭಿವೃದ್ಧಿದಾರರು ವಿದ್ಯುತ್ತನ್ನು ಮೂರನೆಯವರಿಗೆ ಮಾರಾಟ ಮಾಡುವ ಸಂದರ್ಭದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದೊಂದಿಗೆ ವೀಲಿಂಗ್ ಅಂಡ್ ಬ್ಯಾಂಕಿಂಗ್ ಒಡಂಬಡಿಕೆ ಮಾಡಿಕೊಳ್ಳಲು ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ವಿದ್ಯುತ್ತನ್ನು ಮಾರಾಟ ಮಾಡುವ ಸಂದರ್ಭದಲ್ಲಿ ವಿದ್ಯುತ್ ಖರೀದಿ ಒಡಂಬಡಿಕೆ (ಪಿಪಿಎ) ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

6. ಈ ವಿಷಯದಲ್ಲಿ ಹಂಚಿಕೆದಾರರು ರಾಜ್ಯ ಮತ್ತು ಜಿಲ್ಲಾ ಮಟ್ಟಕ್ಕೆ ಸಂಬಂಧಿಸಿದ ಅಧಿಕಾರಿಗಳ ಸಹಾಯ/ಸಹಕಾರವನ್ನು ಪಡೆದು ನಿಗದಿತ 3 ವರ್ಷದ ಅವಧಿಯೊಳಗೆ ಯೋಜನಾ ಅನುಷ್ಠಾನ ಪೂರ್ಣಗೊಳಿಸತಕ್ಕದ್ದು.

7. ಈ ಕಿರು ಜಲ ವಿದ್ಯುತ್ ಯೋಜನೆಯ ಸ್ಥಳದಲ್ಲಿ ಯಾವುದಾದರೂ ಸರ್ಕಾರಿ ಜಲ ವಿದ್ಯುತ್/ನೀರಾವರಿ/ಕುಡಿಯುವ ನೀರಿನ ಯೋಜನೆಗಳು ಬಂದಲ್ಲಿ ಸರ್ಕಾರಿ ಯೋಜನೆಗಳಿಗೆ ಮೊದಲ ಆದ್ಯತೆ ದೊರಕುವುದು ಹಾಗೂ ಈ ಯೋಜನೆಗೆ ಯಾವುದಾದರೂ ಇತರೆ ಯೋಜನೆಗಳಿಂದ ಧಕ್ಕೆಯಾದ್ದಲ್ಲಿ ಯಾವುದೇ ಪರಿಹಾರವನ್ನು ಅಭಿವೃದ್ಧಿದಾರರು ನಿರೀಕ್ಷಿಸುವಂತಿಲ್ಲ.

8. ಸ್ಥಳೀಯವಾಗಿ ಉದ್ಭವಿಸುವ ಯಾವುದಾದರೂ ಆಕ್ಷೇಪಣೆಗಳಿಗೆ ಅಭಿವೃದ್ಧಿದಾರರೇ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ.

9. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಯಾವುದೇ ಯೋಜನೆಗಳಿಂದಾಗಿ ಸದರಿ ಯೋಜನೆಯು ಮುಳುಗಡೆಯಾದಲ್ಲಿ, ಒದಗಬಹುದಾದ ಸಂಪೂರ್ಣ ತೊಂದರೆಗಳಿಗೆ ಅಭಿವೃದ್ಧಿದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.

10. ವಿವರವಾದ ಯೋಜನಾ ವರದಿಯನ್ನು ಕ್ರೆಡಲ್ ಸಂಸ್ಥೆಯು ಪರಿಶೀಲಿಸಿದ ನಂತರ ಇತರ ಸಂಬಂಧಿಸಿದ ಇಲಾಖೆಗಳಿಗೆ ಅದನ್ನು ಸಲ್ಲಿಸುವುದು ಹಾಗೂ ತದನಂತರ ತಾಂತ್ರಿಕ ಅನುಮೋದನೆಗಾಗಿ ಕ್ರೆಡಲ್‌ಗೆ ಅರ್ಜಿ ಸಲ್ಲಿಸತಕ್ಕದ್ದು.

11. ಸದರಿ ಯೋಜನೆಯನ್ನು ಅಭಿವೃದ್ಧಿದಾರರು ಕಾರ್ಯಗತ (Implement) ಮಾಡದಹೊರತು, ವರ್ಗಾವಣೆ/ಮಾರಾಟಕ್ಕೆ ಅನುಮೋದನೆ ನೀಡಲಾಗುವುದಿಲ್ಲ.

12. ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್. 2709

ಇಂಧನ ಸಚಿವಾಲಯ

ವಿಷಯ : ಮೆ॥ ಲಕ್ಷ್ಮಿ ಅಮೃತ ಪವರ್ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಚೋಲಚಗೂಡ್ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ : 1)ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕ್ರೆಡಲ್/06/SH-777/Cholachagud MHS/1434, ದಿನಾಂಕ 19/20-05-2011.

2) ದಿನಾಂಕ 27-05-2011ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ॥ ಲಕ್ಷ್ಮಿ ಅಮೃತ ಪವರ್ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕು, ಚೊಲಚಗೂಡ್ ಗ್ರಾಮದ ಹತ್ತಿರ, ಮಲಪ್ರಭಾ ನದಿಗೆ ಅಡ್ಡಲಾಗಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಚೊಲಚಗೂಡ್ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಹಂಚಿಕೆ ಸಮಿತಿ ಸಭೆಯ ಮುಂದೆ ಸದರಿ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು. ಮೆ॥ ಲಕ್ಷ್ಮಿ ಅಮೃತ ಪವರ್ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲು ಹಂಚಿಕೆ ಸಮಿತಿಯು ಪರಿಗಣಿಸಿರುತ್ತದೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ:-

ಸರ್ಕಾರದ ಆದೇಶ ಸಂಖ್ಯೆ : ಇಎನ್ 194 ಎನ್‌ಸಿಇ 2011, ಬೆಂಗಳೂರು, ದಿನಾಂಕ : 31-10-2011.

ಮೆ: ಲಕ್ಷ್ಮಿ ಅಮೃತ ಪವರ್ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕು, ಚೂಲಚಗೂಡ್ ಗ್ರಾಮದ ಹತ್ತಿರ ಮಲಪ್ರಭಾ ನದಿಗೆ ಅಡ್ಡಲಾಗಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಚೂಲಚಗೂಡ್ ಕಿರು ಜಲ ವಿದ್ಯುತ್ ಯೋಜನೆಯನ್ನು ಈ ಕೆಳಕಂಡ ಶೆಡ್ಯೂಲ್ ಹಾಗೂ ಷರತ್ತಿಗೊಳಪಟ್ಟು ಹಂಚಿಕೆ ಮಾಡಲಾಗಿದೆ:-

Company	MHS	Location	MW	Weir Lattitude	Weir Longitude	Power House Lattitude	Power House Longitude	FRL (M)	TWL (M)	Design Head	Design Disch-arge (Cum-ees)
M/s. Lakshmi Amritha Power Projects Pvt. Ltd.,	Cholac-agud	Badami Taluk, Bagalkot District	2.00	15°53' 38"	75°43' 52"	At the toe of the diversion weir		534.1	526.9	7.2	34

(ಅ) ಸದರಿ ಯೋಜನೆಯಿಂದ ಕೆಳತೊರೆ ಮತ್ತು ಮೇಲ್ತೊರೆ ಯೋಜನೆಗಳಿಗೆ ಯಾವುದೇ ಹಾನಿಯಾಗಬಾರದು.

1(ಅ) ಹಂಚಿಕೆದಾರರು ಈ ಆದೇಶ ಹೊರಡಿಸಿದ 45 ದಿನಗಳ ಒಳಗಾಗಿ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳತಕ್ಕದ್ದು ಇಲ್ಲದಿದ್ದಲ್ಲಿ, ಈ ಹಂಚಿಕೆ ತಂತಾನೇ ರದ್ದಾಗುವುದು, ನಂತರ, ಕಂಪನಿಯು ಹಂಚಿಕೆಗೋಸ್ಕರ ಪುನಃ ಹೊಸದಾಗಿ ಅರ್ಜಿ ಸಲ್ಲಿಸತಕ್ಕದ್ದು, ಯಾವ ಕಾರಣಕ್ಕೂ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಸ್ವೀಕರಿಸಿದ ಅರ್ಜಿ ಪರಿಷ್ಕರಣಾ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

(ಆ) ಒಡಂಬಡಿಕೆಯನ್ನು ರೂ. 400.00ರ ಛಾಪಾ ಕಾಗದದ ಮೇಲೆ ಮಾಡಿಕೊಂಡು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದವರಿಗೆ ಕಳುಹಿಸಿ ಪ್ರಮಾಣೀಕರಿಸಿ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು (ಒಡಂಬಡಿಕೆಯನ್ನು ಕಡ್ಡಾಯವಾಗಿ ಕನ್ನಡದಲ್ಲಿಯೇ ಸಲ್ಲಿಸತಕ್ಕದ್ದು)

(ಇ) ಈ ಒಡಂಬಡಿಕೆಯನ್ನು ಮಾಡಿಕೊಳ್ಳುವ ಮೊದಲು ಯೋಜನಾ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್.) ಪರಿಷ್ಕರಿಸಲು ಮೆಗಾ ವ್ಯಾಟ್ ಒಂದಕ್ಕೆ ಸರ್ಕಾರದ ಆದೇಶಾನುಸಾರ ವಿವರವಾದ ಯೋಜನಾ ವರದಿ ಪರಿಷ್ಕರಣ ಶುಲ್ಕವನ್ನು ತುಂಬುವುದು.

(ಈ) ಯೋಜನಾ ಅಭಿವೃದ್ಧಿದಾರರು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದಲೂ ಅಂದರೆ ಜಲಸಂಪನ್ಮೂಲ ಇಲಾಖೆ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕಂದಾಯ ಇಲಾಖೆಗಳಿಂದ ಕ್ಲಿಯರೆನ್ಸ್‌ಗಾಗಿ ಅರ್ಜಿ ಸಲ್ಲಿಸತಕ್ಕದ್ದು. ಒಡಂಬಡಿಕೆ ಮಾಡಿಕೊಂಡ ಒಂದು ವರ್ಷದೊಳಗಾಗಿ ವಿವರವಾದ ಯೋಜನಾ ವರದಿಯನ್ನು ಸಲ್ಲಿಸತಕ್ಕದ್ದು.

2(ಅ) ಹಂಚಿಕೆದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಠೇವಣಿ ಇಡುವ ಹಣವನ್ನು, ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ಅವಿಷ್ಕರಿಸುವುದಕ್ಕೋಸ್ಕರ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

(ಆ) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಯೋಜನಾ ವರದಿಗೆ ತಾಂತ್ರಿಕ ಅನುಮೋದನೆ ಕೊಟ್ಟ ಆರು ತಿಂಗಳ ಒಳಗಾಗಿ ಫೈನಾನ್ಷಿಯಲ್ ಕ್ಲೋಷರ್‌ನ್ನು ಸಾಧಿಸತಕ್ಕದ್ದು.

3. ಯೋಜನೆಯನ್ನು 3 ವರ್ಷದ ಅವಧಿಯೊಳಗೆ ಮುಗಿಸುವ ನಿಟ್ಟಿನಲ್ಲಿ ಹಂಚಿಕೆದಾರರು ಕಾರ್ಯ ಪ್ರವೃತ್ತರಾಗತಕ್ಕದ್ದು.

4. ಮೇಲೆ ತಿಳಿಸಿದ 2, 3 ಮತ್ತು 4 ಅಂಶಗಳ ಯೋಜನಾ ಅನುಷ್ಠಾನ ಮಾಡಲು ಸಫಲವಾಗದಿದ್ದಲ್ಲಿ ಈ ಹಂಚಿಕೆಯು ತಂತಾನೇ ಯಾವ ಮುನ್ಸೂಚನೆಯನ್ನೂ ನೀಡದೆ ರದ್ದಾಗುವುದೆಂದು ತಿಳಿಯತಕ್ಕದ್ದು.

5. ಯೋಜನಾ ಅಭಿವೃದ್ಧಿದಾರರು ವಿದ್ಯುತ್ತನ್ನು ಮೂರನೆಯವರಿಗೆ ಮಾರಾಟ ಮಾಡುವ ಸಂದರ್ಭದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದೊಂದಿಗೆ ವೀಲಿಂಗ್ ಅಂಡ್ ಬ್ಯಾಂಕಿಂಗ್ ಒಡಂಬಡಿಕೆ ಮಾಡಿಕೊಳ್ಳಲು ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ವಿದ್ಯುತ್ತನ್ನು ಮಾರಾಟ ಮಾಡುವ ಸಂದರ್ಭದಲ್ಲಿ ವಿದ್ಯುತ್ ಖರೀದಿ ಒಡಂಬಡಿಕೆ (ಪಿಪಿಎ) ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

6. ಈ ವಿಷಯದಲ್ಲಿ ಹಂಚಿಕೆದಾರರು ರಾಜ್ಯ ಮತ್ತು ಜಿಲ್ಲಾ ಮಟ್ಟಕ್ಕೆ ಸಂಬಂಧಿಸಿದ ಅಧಿಕಾರಿಗಳ ಸಹಾಯ/ಸಹಕಾರವನ್ನು ಪಡೆದು ನಿಗದಿತ 3 ವರ್ಷದ ಅವಧಿಯೊಳಗೆ ಯೋಜನಾ ಅನುಷ್ಠಾನ ಪೂರ್ಣಗೊಳಿಸತಕ್ಕದ್ದು.

7. ಈ ಕಿರು ಜಲ ವಿದ್ಯುತ್ ಯೋಜನೆಯ ಸ್ಥಳದಲ್ಲಿ ಯಾವುದಾದರೂ ಸರ್ಕಾರಿ ಜಲ ವಿದ್ಯುತ್/ನೀರಾವರಿ/ಕುಡಿಯುವ ನೀರಿನ ಯೋಜನೆಗಳು ಬಂದಲ್ಲಿ ಸರ್ಕಾರಿ ಯೋಜನೆಗಳಿಗೆ ಮೊದಲ ಆದ್ಯತೆ ದೊರಕುವುದು ಹಾಗೂ ಈ ಯೋಜನೆಗೆ ಯಾವುದಾದರೂ ಇತರೆ ಯೋಜನೆಗಳಿಂದ ಧಕ್ಕೆಯಾದ್ದಲ್ಲಿ ಯಾವುದೇ ಪರಿಹಾರವನ್ನು ಅಭಿವೃದ್ಧಿದಾರರು ನಿರೀಕ್ಷಿಸುವಂತಿಲ್ಲ.

8. ಸ್ಥಳೀಯವಾಗಿ ಉದ್ಭವಿಸುವ ಯಾವುದಾದರೂ ಆಕ್ಷೇಪಣೆಗಳಿಗೆ ಅಭಿವೃದ್ಧಿದಾರರೇ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ.

9. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಯಾವುದೇ ಯೋಜನೆಗಳಿಂದಾಗಿ ಸದರಿ ಯೋಜನೆಯು ಮುಳುಗಡೆಯಾದಲ್ಲಿ, ಒದಗಬಹುದಾದ ಸಂಪೂರ್ಣ ತೊಂದರೆಗಳಿಗೆ ಅಭಿವೃದ್ಧಿದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.

10. ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

11. ಡಿ.ಪಿ.ಆರ್. ತಯಾರು ಮಾಡಿದ ಮೇಲೆ ಕ್ರೆಡಲ್ ಸಂಸ್ಥೆಯು ಪರಿಶೀಲಿಸಿದ ನಂತರ ಇತರ ಸಂಬಂಧಿಸಿದ ಇಲಾಖೆಗಳಿಗೆ ಡಿ.ಪಿ.ಆರ್. ಸಲ್ಲಿಸುವುದು ಹಾಗೂ ತದನಂತರ ತಾಂತ್ರಿಕ ಅನುಮೋದನೆಗಾಗಿ ಕ್ರೆಡಲ್‌ಗೆ ಅರ್ಜಿ ಸಲ್ಲಿಸತಕ್ಕದ್ದು.

12. ಸದರಿ ಯೋಜನೆಯನ್ನು ಅಭಿವೃದ್ಧಿದಾರರು ಕಾರ್ಯಗತ (Implement) ಮಾಡದಹೊರತು, ವರ್ಗಾವಣೆ/ಮಾರಾಟಕ್ಕೆ ಅನುಮೋದನೆ ನೀಡಲಾಗುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ.

ಪಿ.ಆರ್. 2710

ಇಂಧನ ಸಚಿವಾಲಯ

ವಿಷಯ : ಮೆ॥ ಯು.ಎಮ್.ಆರ್. ಪವರ್ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಅಬ್ಬೂರು ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ: 1. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರಗಳ ಸಂಖ್ಯೆ : ಕ್ರೆಡಲ್/06/SH-772/Abbur MHS/564/ದಿನಾಂಕ : 09/11-02-2011 ಮತ್ತು ಕ್ರೆಡಲ್/06/SH-778/Abbur SHP/2011/1430 ದಿನಾಂಕ : 18/20-05-2011.

2. ದಿನಾಂಕ: 27-05-2011 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರಗಳಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ॥ ಯು.ಎಮ್.ಆರ್. ಪವರ್ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕು, ಕೆ. ಅಬ್ಬೂರು ಗ್ರಾಮ ಪ್ರದೇಶದಲ್ಲಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಅಬ್ಬೂರು ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಹಂಚಿಕೆ ಸಮಿತಿ ಸಭೆಯ ಮುಂದೆ ಸದರಿ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು. ಮೆ॥ ಯು.ಎಮ್.ಆರ್. ಪವರ್ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ 2.00 ಮೆಗಾ ವಾಟ್ ಸಾಮರ್ಥ್ಯದ ಅಬ್ಬೂರು ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲು ಹಂಚಿಕೆ ಸಮಿತಿಯು ಪರಿಗಣಿಸಿರುತ್ತದೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ :-

ಸರ್ಕಾರದ ಆದೇಶ ಸಂಖ್ಯೆ: ಇಎನ್ 111 ಎನ್‌ಸಿಇ 2011, ಬೆಂಗಳೂರು, ದಿನಾಂಕ: 03 ನೇ ನವೆಂಬರ್ 2011.

ಮೆ॥ ಯು.ಎಮ್.ಆರ್. ಪವರ್ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕು, ಕೆ.ಅಬ್ಬೂರು ಗ್ರಾಮ ಪ್ರದೇಶದಲ್ಲಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಅಬ್ಬೂರು ಕಿರು ಜಲ ವಿದ್ಯುತ್ ಯೋಜನೆಯನ್ನು ಈ ಕೆಳಕಂಡ ಶೆಡ್ಯೂಲ್ ಹಾಗೂ ಷರತ್ತಿಗೊಳಪಟ್ಟು ಹಂಚಿಕೆ ಮಾಡಲಾಗಿದೆ :-

Company	MHS	Location	MW	Weir Lattitude	Weir Longitude	Powr House Lattitude	Power House Longitude	FRL (M)	TWL (M)	Design Head	Design Discharge (Cumees)
M/s. UMR Power Projecdts Pvt. Ltd.	Abbur	Abbur village, Arakalagud Taluk, Hassan District	2.00	12°36' 59"	75°58' 34"	12°35' 31"	75°59' 42"	840	820	18	12

1 ಸದರಿ ಯೋಜನೆಯಿಂದ ಕೆಳತೊರೆ ಮತ್ತು ಮೇಲ್ತೊರೆ ಯೋಜನೆಗಳಿಗೆ ಯಾವುದೇ ಹಾನಿಯಾಗಬಾರದು.

1(ಅ) ಹಂಚಿಕೆದಾರರು ಈ ಆದೇಶ ಹೊರಡಿಸಿದ 45 ದಿನಗಳ ಒಳಗಾಗಿ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ, ಈ ಹಂಚಿಕೆ ತಂತಾನೇ ರದ್ದಾಗುವುದು. ನಂತರ, ಕಂಪನಿಯು ಹಂಚಿಕೆಗೋಸ್ಕರ ಪುನಃ ಹೊಸದಾಗಿ ಅರ್ಜಿ ಸಲ್ಲಿಸತಕ್ಕದ್ದು. ಯಾವ ಕಾರಣಕ್ಕೂ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಸ್ವೀಕರಿಸಿದ ಅರ್ಜಿ ಪರಿಷ್ಕರಣಾ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

(ಆ) ಒಡಂಬಡಿಕೆಯನ್ನು ರೂ. 400.00ರ ಛಾಪಾ ಕಾಗದದ ಮೇಲೆ ಮಾಡಿಕೊಂಡು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದವರಿಗೆ ಕಳುಹಿಸಿ ಪ್ರಮಾಣೀಕರಿಸಿ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು. (ಒಡಂಬಡಿಕೆಯನ್ನು ಕಡ್ಡಾಯವಾಗಿ ಕನ್ನಡದಲ್ಲಿಯೇ ಸಲ್ಲಿಸತಕ್ಕದ್ದು)

(ಇ) ಈ ಒಡಂಬಡಿಕೆಯನ್ನು ಮಾಡಿಕೊಳ್ಳುವ ಮೊದಲು ಯೋಜನ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್) ಪರಿಷ್ಕರಿಸಲು ಮೆಗಾ ವ್ಯಾಟ್ ಒಂದಕ್ಕೆ ಸರ್ಕಾರದ ಆದೇಶಾನುಸಾರ ವಿವರವಾದ ಯೋಜನಾ ವರದಿ ಪರಿಷ್ಕರಣ ಶುಲ್ಕವನ್ನು ತುಂಬುವುದು.

(ಈ) ಯೋಜನಾ ಅಭಿವೃದ್ಧಿದಾರರು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದಲೂ ಅಂದರೆ ಜನಸಂಪನ್ಮೂಲ ಇಲಾಖೆ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ವಿದ್ಯುತ್

ನಿಗಮ ನಿಯಮಿತ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕಂದಾಯ ಇಲಾಖೆಗಳಿಂದ ಕ್ಲಿಯರೆನ್ಸ್‌ಗಾಗಿ ಅರ್ಜಿ ಸಲ್ಲಿಸತಕ್ಕದ್ದು. ಒಡಂಬಡಿಕೆ ಮಾಡಿಕೊಂಡ ಒಂದು ವರ್ಷದೊಳಗಾಗಿ ವಿವರವಾದ ಯೋಜನಾ ವರದಿಯನ್ನು ಸಲ್ಲಿಸತಕ್ಕದ್ದು.

2 ಹಂಚಿಕೆದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಠೇವಣಿ ಇಡುವ ಹಣವನ್ನು, ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ಆವಿಷ್ಕರಿಸುವುದಕ್ಕೋಸ್ಕರ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

3. ಯೋಜನೆಯನ್ನು **3 ವರ್ಷದ** ಅವಧಿಯೊಳಗೆ ಮುಗಿಸುವ ನಿಟ್ಟಿನಲ್ಲಿ ಹಂಚಿಕೆದಾರರು ಕಾರ್ಯಪ್ರವೃತ್ತರಾಗತಕ್ಕದ್ದು.

4. ಯೋಜನಾ ಅನುಷ್ಠಾನ ಮಾಡಲು ಸಫಲವಾಗದಿದ್ದಲ್ಲಿ ಈ ಹಂಚಿಕೆಯು ತಂತಾನೇ ಯಾವ ಮುನ್ಸೂಚನೆಯನ್ನೂ ನೀಡದೆ ರದ್ದಾಗುವುದೆಂದು ತಿಳಿಯತಕ್ಕದ್ದು.

5. ಯೋಜನಾ ಅಭಿವೃದ್ಧಿದಾರರು ವಿದ್ಯುತ್ತನ್ನು ಮೂರನೆಯವರಿಗೆ ಮಾರಾಟ ಮಾಡುವ ಸಂದರ್ಭದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದೊಂದಿಗೆ ವೀಲಿಂಗ್ ಅಂಡ್ ಬ್ಯಾಂಕಿಂಗ್ ಒಡಂಬಡಿಕೆ ಮಾಡಿಕೊಳ್ಳಲು ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ವಿದ್ಯುತ್ತನ್ನು ಮಾರಾಟ ಮಾಡುವ ಸಂದರ್ಭದಲ್ಲಿ ವಿದ್ಯತ್ ಖರೀದಿ ಒಡಂಬಡಿಕೆ (ಪಿಪಿಎ) ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

6. ಈ ವಿಷಯದಲ್ಲಿ ಹಂಚಿಕೆದಾರರು ರಾಜ್ಯ ಮತ್ತು ಜಿಲ್ಲಾ ಮಟ್ಟಕ್ಕೆ ಸಂಬಂಧಿಸಿದ ಅಧಿಕಾರಿಗಳ ಸಹಾಯ/ಸಹಕಾರವನ್ನು ಪಡೆದು ನಿಗದಿತ 3 ವರ್ಷದ ಅವಧಿಯೊಳಗೆ ಯೋಜನಾ ಅನುಷ್ಠಾನ ಪೂರ್ಣಗೊಳಿಸತಕ್ಕದ್ದು.

7. ಈ ಕಿರು ಜಲ ವಿದ್ಯತ್ ಯೋಜನೆಯ ಸ್ಥಳದಲ್ಲಿ ಯಾವುದಾದರು ಸರ್ಕಾರಿ ಜಲ ವಿದ್ಯುತ್/ನೀರಾವರಿ/ಕುಡಿಯುವ ನೀರಿನ ಯೋಜನೆಗಳು ಬಂದಲ್ಲಿ ಸರ್ಕಾರಿ ಯೋಜನೆಗಳಿಗೆ ಮೊದಲ ಆದ್ಯತೆ ದೊರಕುವುದು ಹಾಗೂ ಈ ಯೋಜನೆಗೆ ಯಾವುದಾದರೂ ಇತರೆ ಯೋಜನೆಗಳಿಂದ ಧಕ್ಕೆಯಾದ್ದಲ್ಲಿ ಯಾವುದೇ ಪರಿಹಾರವನ್ನು ಅಭಿವೃದ್ಧಿದಾರರು ನಿರೀಕ್ಷಿಸುವಂತಿಲ್ಲ.

8. ಸ್ಥಳೀಯವಾಗಿ ಉದ್ಭವಿಸುವ ಯಾವುದಾದರೂ ಆಕ್ಷೇಪಣೆಗಳಿಗೆ ಅಭಿವೃದ್ಧಿದಾರರೇ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ.

9. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಯಾವುದೇ ಯೋಜನೆಗಳಿಂದಾಗಿ ಸದರಿ ಯೋಜನೆಯು ಮುಳುಗಡೆಯಾದಲ್ಲಿ, ಒದಗಬಹುದಾದ ಸಂಪೂರ್ಣ ತೊಂದರೆಗಳಿಗೆ ಅಭಿವೃದ್ಧಿದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.

10. ಡಿ.ಪಿ.ಆರ್. ತಯಾರು ಮಾಡಿದ ಮೇಲೆ ಕ್ರಡಲ್ ಸಂಸ್ಥೆಯು ಪರಿಶೀಲಿಸಿದ ನಂತರ ಇತರ ಸಂಬಂದಿಸಿದ ಇಲಾಖೆಗಳಿಗೆ ಡಿ.ಪಿ.ಆರ್. ಸಲ್ಲಿಸುವುದು ಹಾಗೂ ತದನಂತರ ತಾಂತ್ರಿಕ ಅನುಮೋದನೆಗಾಗಿ ಕ್ರೆಡಲ್‌ಗೆ ಅರ್ಜಿ ಸಲ್ಲಿಸತಕ್ಕದ್ದು.

11. ಸದರಿ ಯೋಜನೆಯನ್ನು ಅಭಿವೃದ್ಧಿದರರು ಕಾರ್ಯಗತ (implement) ಮಾಡದಹೊರತು, ವರ್ಗಾವಣೆ/ಮಾರಾಟಕ್ಕೆ ಅನುಮೋದನೆ ನಿಡಲಾಗುವುದಿಲ್ಲ.

12. ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸುರೇಶ್.ಬಿ.ಕೃಷ್ಣಪ್ಪನವರ್

ಪಿ.ಆರ್.2711

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ

WATER RESOURCES SECRETARIAT

Sub : According Administrative Aproval to the Minor Irrigation Projects under Accelerated Irrigation Benefit Programme-Regarding.

Read : 1. Government Order No. Saneeyee 12 Masavi (Tech) 2011 (14), dated : 05-03-2011.

2. Letter No. CEMI(S)/TA-7/AE-1/AIBP/2011-12/3325/, dated 14-10-2011, from the Chief Engineer, Minor Irrigation South Zone, Bangalore.

Preamble:

As per the modified guidelines issued by the Government of India, Minor Irrigation schemes with potential more than 50 hectares which serve tribal areas and drought prone areas in the Non-special category states are eligible for inclusion under Accelerated irrigation Benefit Programme (AIBP) effective from December 2006. Karnataka state is classified as one of the Non-special category states. 81 taluks in the state are approved under Drought prone Area Programme (DPAP). Hence Minor Irrigation schemes with potential more than 50 hectares in these 81 taluks are eligible for inclusion under Accelerated Irrigation Benefit Programme (AIBP). Central Assistance will be in the form of central grant that will be 90% of the balance estimated cost of the project worked after excluding the previous expenditure and considering the cost of the schemes upto Rs. 1.5 lakh per Ha. The balance cost of the project will have to be borne by the State as state's share.

Administratisve approval was accorded for the following Minor Irrigation scheme vides the Government Order No. Government Order No. SANEEYEE 12 MASAVI (Tech) 2011 (14) Bangalore, dated : 16-07-2010.

Sl. No.	Name of the Scheme	District	Taluk	Estimated cost	Potential planned in Ha.	Cost per Ha.
1	Detailed estimate for the excavation and construction of other allied works in Y.G. Gudda NTP	Ramanagar	Magadi	645.00	410.00	1.21
	Total			**645.00**		

But due to the technical reasons cost of the above estimate is revised and the modified Administrative Approval is sought for as follows.

Sl. No.	Name of the Scheme	District	Taluk	Estimated cost	Potential planned in Ha.	Cost per Ha.
1	Excavation and construction of other allied works in Y.G. Gudda NTP	Ramanagar	Magadi	495.00	410.00	0.828
	Total			**495.00**		

Hence the following orders are issued.

Government Order No. SANEEYEE 12 MASAVI (Tech) 2011, Bangalore Dated: 11th November 2011.

Modified Administrative approval is hereby accorded for taking up the above work with an estimated cost totaling to Rs. 495.00 lakhs (Rupees Four hundred and ninty five lakhs only) subject to the following conditions.

1. Implementation of these projects should be taken up only after receipt of necessary approval from the GOI.
2. The projects are to be completed with in a period of 2 years after receipt of approval of Government of India to these schemes.
3. The funding of the scheme is in the ratio of 90 : 10 between the Central Government and State Government.
4. The; Central share is in the form of grant to the state.
5. The projects will be implemented by the Water Resources Department (Minor Irrigation) as per the KTPP Act.
6. The implementation of the project shall adhere to the terms and conditions of the guidelines issued by the GOI.
7. The implementation of the project shall be as per the required technical specifications and financial specifications as per the approved DPRs.
8. Water users association shall be formed for post construction maintenance and the scheme shall be handed over to the same after its construction for the O&M.

This order is issued with the concurrence of Finance Department in their note No. PWD-890-FC-1/2009 dated 09-12-2009.

By Order and in the name of the Governor of Karnataka,

PR. 2712

Rudramurthy

Ex. officio Under Secretary to Government,

Water Resources Department (Minor Irrigation)

HEALTH AND FAMILY WELFARE SECRETARIAT

Sub : Procurement of 1133 computers to PHCs and CHCs – reg.

Read : Proceedings of the 7th meeting of the Project Governing Board held on 10-02-2011.

Preamble:

A provision has been made under SICF component of the World Bank aided Karnataka Health System Development and Reform Project for strengthening of the PHCs and CHCs by providing computers to capture basic datas from the institutions. Also, in the Procurement Plan, a provision was made to procure 1133 Nos. of Desktops, Printers and UPS to 1133 PHCs and CHCs under International Competitive bidding, World Bank procedure. The Procurement Plan has been approved by the World Bank. The Technical Specification for the above procurement was approved by the Technical Specification Committee. The Procurement Committee meeting chaired by the Commissioner, Health, family Welfare and AYUSH Services held on 7-6-2010 has approved the bidding document and the World Bank has also approved the same on 24-08-2010. Accordingly, an IFB was issued on 15-09-2010 under ICB. In response to this, 3 bids were received and evaluated. Hence, the subject was placed before the Project Governing Board meeting chaired by the Chief Secretary, Government of Karnataka held on 10-02-2011. After detailed discussions, the Board approved for procurement of 1133 desktops, Printers and UPS to 1133 PHCs and CHCs at a total cost of Rs. 4,17,45,384-00 from M/s. Wipro Infotech, Bangalore.

Hence the following order.

Government Order No. HFW/KHSDRP/Comp. To PHCs & CHCs/17/09-10 Bangalore, Dated: 7th October 2011.

Under the circumstances mentioned in the preamble, Government are pleased to accord sanction for procurement of 1133 Nos. of Desktops, Printers and UPS to 1133 PHCs and CHCs at a total cost of Rs. 4,17,45,384-00 (Rupees four crores seventeen lakhs fortyfive thousand three hundred eightyfour only) from M/s. Wipro Infotech, Bangalore.

By Order and in the name of the Governor of Karnataka,

PR. 2713

M. Shashidhar
Deputy Secretary to Government,
KHSDRP
Health and Family Welfare Department

INFRASTRUCTURE DEVELOPMENT SECRETARIAT

Sub : Project Management services for Construction of Gulbarga Airport – Fees to iDeck.

Read : 1. G.O. No. IDD 85 DIA 2008 dated 12-08-2009.
2. Letter No. iDeck/2011-2012/886 dated 16-09-2011.

Preamble:

In G.O. read at (1) above, Government has accorded approval for the scope of services and sanction for payment of fees to iDeck for project management services for Gulbarga airport Development Project at the rate not exceeding of Rs. 3,00,000 per month (exclusive of applicable service tax) for the project for a period of twelve months.

In letter read at (2) above, iDeck has stated that construction of Airport has been started only in April/May, 2011 and iDeck has deployed their engineers at site from 01-06-2011 for supervision and sent invoice for Rs. 9,92,700/towards fees payable to iDeck for project management consultancy services for the period June 2011 to August 2011 for the capitioned project and requested for release of an amount of Rs. 9,92,700/.

3. Hence the following order.

Government Order No. IDD 85 DIA 2008 Bangalore, Dated: 9th November 2011.

Under the circumstances explained in the preamble, Sanction is accorded for release of Rs. 9,92,700/- (Rupees Nine lakhs ninety-two thousand seven hundred only) towards fees to iDeck for Project Management Services for the Gulbarga Airport Project for the period June 2011 to August 2011.

2. This amount shall be met under the Head of Account 5465-01-190-1-05 (Plan)-211 Development of Minor Airport – Investment out of the provision of Rs. 40.00 Crores during 2011-12.
3. The Chief Financial Officer, ideck is authorized to draw the above amount on a payees receipt duly countersigned by the under secretary to Government, Infrastructure Development, Bangalore.
4. This order issues in accordance with the financial powers delegated to Principal Secretaries/Secretaries to Government vide G.O. No. FD 1 TFP 2008, dated 16-05-2008.

By Order and in the name of the Governor of Karnataka,

PR. 2714

S. J. Sampath Kumar
Under Secretary to Government,
Infrastructure Development Department

INFRASTRUCTURE DEVELOPMENT SECRETARIAT

Sub : Construction of RuB at Km 135/500-600 for approach road of Sahakaranagar Colony on Kolar – Bangarpet road in Kolar – Bangarpet section – Release of funds – reg.

Read : 1. Letter No. ADM.CR 173 2010-11 dated 09-02-2011 received from the Dy. Commissioner, Kolar district.
2. Letter No. W352/CN/BNC/RoB-RuB GENL dated 12-05-2011 received from Chief Engineer, Construction, SWR, Bangalore.
3. Letter No. DCE/W.352/KOZ-BWT/KTGSS/Dept dated 4-10-2011 received from the Deputy Chief Engineer, (East) Construction, SWR, Bangalore.

Preamble:

In the letter read at (1) above, the Deputy Commissioner, Kolar District while enclosing a copy of estimate prepared by the Deputy Chief Engineer, SWR, Bangalore has requested to release grants for construction of Rob for the use of residents of Sahakaranagara, Kolar at an estimated cost of Rs. 7.75 crores.

2. In the letter read at (2) above, the Chief Engineer, SWR, Bangalore has stated that the Kolar Taluk Gruha Nirmana Shaker Sahakara, Kolar was requested for providing RoB for approach to Sahakara Nagara Coplony against the deposit to be made by the State Government and also suggested to approve the proposal for construction of RuB on deposit terms.

3. In the letter date 4-10-2011 read at (3) above, the Deputy Chief Engineer (East) Construction, South Western Railway, Bangalore has stated that the feasibility was examined jointly on 28-09-2011 and after collecting the site details an estimate has been prepared for Rs. 3,37,61,224/- for a subway of span 6x3.65m including approaches and requested to deposit the

amount towards Construction of RuB at Km 135/500-600 for approach road of Sahakaranagar Colony on Kolar – Bangarpet road in Kolar – Bangarpet sections on deposit terms.

4. The proposal of the Deputy Chief Engineer, (East) Construction, SWR, Bangalore has been examined in detail and to consider the proposal for release of Rs. 3,37,61,224-00 lakhs towards Construction of RuB at Km 135/500-600 for approach read of Sahakaranagar Colony on Kolar – Bangarpet road in Kolar – Bangarpet sections under the Head of Account **"5465-01-190-3-04"** (Plan) **211 – K-RIDE ROB/RUB investment** out of the budget provision Rs. 21.49 crore – 2011-12. Hence the following order.

Government Order No. IDD 11 NSW 2011, Bangalore, Dated: 8th November 2011.

In the circumstances explained in the preamble, Government of Karnataka is pleased to release Rs. 3,37,61,224-00 lakhs (Rupees Three crores thirty seven lakhs sixty one thousand two hundred and twenty four only) the total amount required to complete the work as submitted by the Dy. Chief engineer, (East), Construction SWR, Bangalore for Construction of RuB at Km 135/500-600 for approach road of Sahakaranagar Colony on Kolar – Bangarpet road in Kolar – Bangarpet sections with the following conditions :-

(i) SWR shall complete the work on-time without requesting further amount.

(ii) GoK will not give any cost escalation of the work.

2. The expenditure shall be met under the Head of Account "5465-01-190-3-04" (Plan) 211-K-RIDE ROB/RUB investment out of the budget provision Rs. 21.49 crore 2011-12.

3. The Chief Executive Officer, K-RIDE is authorized to draw the amount on a payee's receipt ;duly countersigned by the Deputy Secretary/Under Secretary to Government, Infrastructure Development Department and K-RIDE shall in turn deposit the amount with the Financial Advisor and Chief Accounts Officer (Construction), south Western Railway, Bangalore.

4. This order is issued with the concurrence of finance Department vide U.O. Note No. FD 1560 Exp-I/11 dated 22-10-2011.

By Order and in the name of the Governor of Karnataka,

S. J. Sampath Kumar

Under Secretary to Government,

Infrastructure Development Department

PR. 2715

ಶಿಕ್ಷಣ ಸಚಿವಾಲಯ

ವಿಷಯ : ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರು ನಡೆಸುತ್ತಿರುವ ಪ್ರಿಯದರ್ಶಿನಿ ಪ್ರಥಮ ದರ್ಜೆ ಮಹಾವಿದ್ಯಾಲಯ, ರಟ್ಟೀಹಳ್ಳಿ, ಹಿರೇಕೆರೂರು ಕಾಲೇಜು ಹಾಗೂ ಅಲ್ಲಿನ ಬೋಧಕರ ಹುದ್ದೆಗಳನ್ನು ವೇತನಾನುದಾನದ ವ್ಯಾಪ್ತಿಗೆ ಒಳಪಡಿಸುವ ಕುರಿತು.

ಓದಲಾಗಿದೆ:

1. ಸರ್ಕಾರದ ಅಧಿಸೂಚನೆ ಸಂಖ್ಯೆ : ಇಡಿ 551 ಯುಪಿಸಿ 99, ದಿನಾಂಕ : 07–08–2003.
2. ಸರ್ಕಾರದ ಅಧಿಸೂಚನೆ ಸಂಖ್ಯೆ : ಇಡಿ 30 ಯುಪಿಸಿ 2008 ದಿನಾಂಕ : 13–05–2009
3. ಸರ್ಕಾರದ ಅಧಿಸೂಚನೆ ಸಂಖ್ಯೆ : ಇಡಿ 30 ಯುಪಿಸಿ 2008 ದಿನಾಂಕ : 05–10–2009
4. ಕಾಲೇಜು ಶಿಕ್ಷಣ ಆಯುಕ್ತರ ಪತ್ರ ಸಂಖ್ಯೆ: ಕಾಶಿಇ:22: ಪ.ಜಾ.ಪ.ಪಂ:ವೇತಾನುದಾನ: ಧಾವಿ: ಖಾಕಾವಿ–2:2010–11, ದಿನಾಂಕ:08–09–2010.
5. ಸಚಿವ ಸಂಪುಟದ ಟಿಪ್ಪಣಿ ಸಂಖ್ಯೆ: ಸಿ:499:2011, ದಿನಾಂಕ:28–10–2011.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಸರ್ಕಾರಿ ಅಧಿಸೂಚನೆಯನ್ವಯ ರಚಿಸಲಾದ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕಾಲೇಜು ಶಿಕ್ಷಣ) ನಿಯಮಗಳು 2003ರ ನಿಯಮ 8(1)ರನ್ವಯ ದಿನಾಂಕ 01–06–1987ರ ನಂತರ ಪ್ರಾರಂಭಿಸಲಾದ ಯಾವುದೇ ಖಾಸಗಿ ಪದವಿ ಕಾಲೇಜುಗಳು ಮತ್ತು ವಿಷಯಗಳನ್ನು ಅನುದಾನದ ವ್ಯಾಪ್ತಿಗೆ ಒಳಪಡಿಸಲು ಅವಕಾಶವಿರುವುದಿಲ್ಲ.

ರಾಜ್ಯದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಗಳು ದಿನಾಂಕ 01–06–1987 ರಿಂದ ದಿನಾಂಕ 31–3–1995ರ ಅವಧಿಯಲ್ಲಿ ಪ್ರಾರಂಭಿಸಿ ನಡೆಸಲಾಗುತ್ತಿರುವ ಕಾಲೇಜುಗಳು ಮತ್ತು ಕೋರ್ಸ್‌ಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಸರ್ಕಾರ ತೀರ್ಮಾನಿಸಿ ಈ ಕುರಿತು ನಿಯಮಗಳನ್ನು ರಚಿಸಲು ದಿನಾಂಕ 18–02–2009ರಂದು ಜರುಗಿದ ಸಚಿವ ಸಂಪುಟ ಸಭೆಯು ಅನುಮೋದನೆ ನೀಡಿದೆ.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಯಿಂದ ನಡೆಸಲ್ಪಡುತ್ತಿರುವ ಖಾಸಗಿ ಪದವಿ ಕಾಲೇಜುಗಳಿಗೆ ಸಂಬಂಧಿಸಿದಂತೆ ಮಾತ್ರ ಮೇಲೆ ಹೇಳಿದ ನಿಯಮ 8ಕ್ಕೆ ಸೂಕ್ತ ಸೇರ್ಪಡೆ ಮಾಡಿ ದಿನಾಂಕ 01–06–1987 ರಿಂದ 31–03–95ರ ಅವಧಿಯಲ್ಲಿ ಪ್ರಾರಂಭಿಸಲ್ಪಟ್ಟ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರು ನಡೆಸುತ್ತಿರುವ ಪ್ರಥಮ ದರ್ಜೆ ಕಾಲೇಜುಗಳನ್ನು ವೇತನಾನುದಾನಕ್ಕೊಳಪಡಿಸಲು ಓದಲಾದ (2)ರ ದಿನಾಂಕ 13–05–2009ರ ಅಧಿಸೂಚನೆಯಲ್ಲಿ ಸೂಕ್ತ ತಿದ್ದುಪಡಿ ಮಾಡಿ ಅವಕಾಶ ಕಲ್ಪಿಸಲಾಗಿದೆ. ಅದರಂತೆ ಓದಲಾದ (3)ರ ದಿನಾಂಕ 5–10–2009ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಡಳಿತ ಮಂಡಳಿಗಳಿಗೆ ಸೇರಿದ ಶಿಕ್ಷಣ ಸಂಸ್ಥೆಗಳ ವತಿಯಿಂದ ದಿನಾಂಕ 01–6–1987 ರಿಂದ 31–03–1995ರ ಅವಧಿಯಲ್ಲಿ ಪ್ರಾರಂಭಿಸಿ ನಡೆಸಲ್ಪಡುತ್ತಿರುವ ಪ್ರಥಮ ದರ್ಜೆ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಸರ್ಕಾರವು ಕೆಲವು ಮಾನದಂಡಗಳನ್ನು ನಿಗದಿಪಡಿಸಿ ಆದೇಶ ಹೊರಡಿಸಿದೆ. ಮೇಲೆ ಓದಲಾದ (4)ರ ದಿನಾಂಕ 8–9–2010ರ ಪ್ರಸ್ತಾವನೆಯಲ್ಲಿ ಕಾಲೇಜು ಶಿಕ್ಷಣ ಆಯುಕ್ತರು ಯಾವ ಕಾಲೇಜಿನ ಯಾವ ಯಾವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರನ್ನು ವೇತನಾನುದಾನಕ್ಕೆ ಒಳಪಡಿಸಬೇಕು ಎಂಬುದನ್ನು ಪರಿಶೀಲಿಸಿ [illegible] ಪ್ರಸ್ತಾವನೆ ಸಲ್ಲಿಸಿದ್ದಾರೆ. ಸದರಿ ಕಾಲೇಜನ್ನು ಹಾಗೂ ಅದರಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಹ ಉಪನ್ಯಾಸಕರನ್ನು ವೇತನಾನುದಾನದ ವ್ಯಾಪ್ತಿಗೆ ಒಳಪಡಿಸುವ ಕುರಿತು ಆರ್ಥಿಕ ಇಲಾಖೆಯ ಸಹಮತಿ ಕೋರಲಾಗಿತ್ತು. ಈಗಾಗಲೇ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ನಡೆಸುತ್ತಿರುವ 5 ಕಾಲೇಜುಗಳನ್ನು

ವೇತನಾನುದಾನದ ವ್ಯಾಪ್ತಿಗೆ ಒಳಪಡಿಸುವ ಕುರಿತು ವಿಧಿಸಲಾಗಿದ್ದ ಷರತ್ತುಗಳೊಂದಿಗೆ ಹೆಚ್ಚುವರಿಯಾಗಿ ಕೆಲವು ಷರತ್ತುಗಳನ್ನು ವಿಧಿಸಿ ಅವುಗಳನ್ನು ಪೂರೈಸಿದ್ದಲ್ಲಿ ಎರಡನೇ ಹಂತವಾಗಿ ವೇತನಾನುದಾನದ ವ್ಯಾಪ್ತಿಗೆ ಒಳಪಡಿಸಲು ಆರ್ಥಿಕ ಇಲಾಖೆಯು ತಿಳಿಸಿದೆ. ಆದರೆ, ಪ್ರಥಮ ಹಂತವಾಗಿ ವೇತನಾನುದಾನಕ್ಕೆ ಒಳಪಡಿಸಲಾದ 5 ಕಾಲೇಜುಗಳಿಗೆ ವಿಧಿಸದೇ ಇದ್ದ ಹೆಚ್ಚುವರಿ ಷರತ್ತುಗಳನ್ನು ವಿಧಿಸಿತ್ತು. ಈ ಹೆಚ್ಚುವರಿ ಷರತ್ತುಗಳನ್ನು ವಿಧಿಸದಂತೆ ವಿನಾಯಿತಿ ನೀಡುವಂತೆ ಸಚಿವ ಸಂಪುಟದ ಅನುಮೋದನೆ ಕೋರಲಾಗಿದ್ದು, ಸಚಿವ ಸಂಪುಟವು ಮೇಲೆ ಓದಲಾದ (5)ರಲ್ಲಿ ಆರ್ಥಿಕ ಇಲಾಖೆಯು ಹೆಚ್ಚುವರಿಯಾಗಿ ವಿಧಿಸಿರುವ ಷರತ್ತುಗಳನ್ನು ಸಡಿಲಿಸಿ, ಸದರಿ ಕಾಲೇಜು ಹಾಗೂ ಇತರೆ 9 ಕಾಲೇಜುಗಳನ್ನು ಮತ್ತು ಅವುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅರ್ಹ ಬೋಧಕರನ್ನು ವೇತನಾನುದಾನದ ವ್ಯಾಪ್ತಿಗೆ ಒಳಪಡಿಸಲು ಅನುಮತಿ ನೀಡಿದೆ. ಅದರಂತೆ, ಕಾಲೇಜು ಶಿಕ್ಷಣ ನಿರ್ದೇಶನಾಲಯದ ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸಲಾದ ಅಭ್ಯರ್ಥಿಗಳ ವಿದ್ಯಾರ್ಹತೆ, ವಿಷಯಗಳ ಕಾರ್ಯಭಾರ ಮತ್ತು ಮೀಸಲಾತಿ ಪರಿಶೀಲಿಸಿ ಸದರಿ ಕಾಲೇಜನ್ನು ಮತ್ತು ಸದರಿ ಕಾಲೇಜಿನಲ್ಲಿ ವಿಷಯವಾರು ಹುದ್ದೆಗಳ ಎದುರು ಕಾರ್ಯನಿರ್ವಹಿಸುತ್ತಿರುವ ಅರ್ಹ ಉಪನ್ಯಾಸಕರುಗಳನ್ನು ವೇತನಾನುದಾನದ ವ್ಯಾಪ್ತಿಗೆ ಒಳಪಡಿಸಲು ಈ ಆದೇಶ ಹೊರಡಿಸಿದ್ದ ದಿನಾಂಕದಿಂದ ಜಾರಿಗೆ ಬರುವಂತೆ ಅನುದಾನದ ವ್ಯಾಪ್ತಿಗೆ ಒಳಪಡಿಸಲು ಸರ್ಕಾರ ತೀರ್ಮಾನಿಸಿದೆ.

ಆದ್ದರಿಂದ ಈ ಆದೇಶ

ಸರ್ಕಾರದ ಆದೇಶ ಸಂಖ್ಯೆ: ಇಡಿ 168 ಯುಪಿಸಿ 2010, ಬೆಂಗಳೂರು, ದಿನಾಂಕ: 03 ನೇ ಡಿಸೆಂಬರ್ 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಡಳಿತ ಮಂಡಳಿಗೆ ಸೇರಿದ ಶಿಕ್ಷಣ ಸಂಸ್ಥೆಗಳ ವತಿಯಿಂದ ದಿನಾಂಕ 01-6-1987 ರಿಂದ 31-3-1995ರ ಅವಧಿಯಲ್ಲಿ ಪ್ರಾರಂಭಿಸಿ ನಡೆಸಲ್ಪಡುತ್ತಿರುವ **ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕು, ರಟ್ಟಿಹಳ್ಳಿಯ ಪ್ರಿಯದರ್ಶಿನಿ ಪ್ರಥಮ ದರ್ಜೆ ಮಹಾವಿದ್ಯಾಲಯವನ್ನು** ಈ ಆದೇಶ ಹೊರಡಿಸಿದ ದಿನಾಂಕದಿಂದ ಆರ್ಥಿಕ ಸೌಲಭ್ಯದೊಂದಿಗೆ ಜಾರಿಗೆ ಬರುವಂತೆ ವೇತನಾನುದಾನದ ವ್ಯಾಪ್ತಿಗೆ ತರಲಾಗಿದೆ.

ಹಾಗೂ ಸದರಿ ಕಾಲೇಜನ್ನು ಮತ್ತು ಸದರಿ ವಿಷಯಗಳಲ್ಲಿ ವಿಷಯವಾರು ಹುದ್ದೆಗಳ ಎದುರು ಕಾರ್ಯ ನಿರ್ವಹಿಸುತ್ತಿರುವ ಕೆಳಕಂಡ ಅರ್ಹ ಸಹಾಯಕ ಪ್ರಾಧ್ಯಾಪಕರು ಹಾಗೂ ಅವರುಗಳು ಬೋಧಿಸುತ್ತಿರುವ ಹುದ್ದೆ/ ವಿಷಯಗಳನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರದ ವೇತನಾನುದಾನದ ವ್ಯಾಪ್ತಿಗೆ ತರಲಾಗಿದೆ.

ಕ್ರಮ ಸಂಖ್ಯೆ	ವೇತನಾನುದಾನಕ್ಕೆ ಒಳಪಡಿಸಿದ ಬೋಧಕರ ಹೆಸರು	ವೇತನಾನುದಾನಕ್ಕೆ ಒಳಪಡಿಸಿದ ಹುದ್ದೆ/ವಿಷಯ	ಪರಿಗಣಿಸಲಾದ ಮೀಸಲಾತಿ	ವೇತನಾನುದಾನಕ್ಕೆ ಒಳಪಡಿಸಿದ ಹುದ್ದೆಗಳ ಸಂಖ್ಯೆ	ಕಾರ್ಯಭಾರ	ವೇತನ ಶ್ರೇಣಿ
1	ಹೆಚ್.ಬಿ.ಕೆಂಚಳ್ಳಿ	ಇತಿಹಾಸ ಉಪನ್ಯಾಸಕರು	ಅನ್ವಯಿಸುವುದಿಲ್ಲ	01	18 ಗಂಟೆ	ಯುಜಿಸಿ
2.	ಸಿ.ಎಸ್.ಕಮ್ಮಾರ	ಕನ್ನಡ ಉಪನ್ಯಾಸಕರು	ಅನ್ವಯಿಸುವುದಿಲ್ಲ	01	16 ಗಂಟೆ	ಯುಜಿಸಿ
3.	ಡಾ:ಎಂ.ಬಿ.ತಲ್ಲೂರ	ಅರ್ಥಶಾಸ್ತ್ರ ಉಪನ್ಯಾಸಕರು	ಅನ್ವಯಿಸುವುದಿಲ್ಲ	01	18 ಗಂಟೆ	ಯುಜಿಸಿ
4	ಡಾ:ವೈ.ವೈ. ಮರಳಿ ಹಳ್ಳಿ	ರಾಜ್ಯಶಾಸ್ತ್ರ ಉಪನ್ಯಾಸಕರು	ಅನ್ವಯಿಸುವುದಿಲ್ಲ	01	20 ಗಂಟೆ	ಯುಜಿಸಿ
5.	ವಿ.ಎಸ್.ರೂಳಿ	ಶಿಕ್ಷಣಶಾಸ್ತ್ರ ಉಪನ್ಯಾಸಕರು	ಅನ್ವಯಿಸುವುದಿಲ್ಲ	01	18 ಗಂಟೆ	ಯುಜಿಸಿ
6	ಆರ್.ವಿ.ರಾಯಣ್ಣವರ	ಭೂಗೋಳಶಾಸ್ತ್ರ ಉಪನ್ಯಾಸಕರು	ಪ.ಜಾತಿ.	03	48 ಗಂಟೆ	ಯುಜಿಸಿ
7	ಎಂ.ಎಂ.ಪ್ಯಾಟಿ	ಭೂಗೋಳಶಾಸ್ತ್ರ ಉಪನ್ಯಾಸಕರು	ಜಿ.ಪಂ			
8.	ಎನ್.ಬಿ.ಲಮಾಣಿ	ಭೂಗೋಳಶಾಸ್ತ್ರ ಉಪನ್ಯಾಸಕರು	ಪ.ಪಂ.			
9.	ಸಿ.ಎನ್.ಸೂರಟೂರ	ದೈ.ಶಿ.ಬೋಧಕರು	ಅನ್ವಯಿಸುವುದಿಲ್ಲ	01	–	ಯುಜಿಸಿ
10	ಹೆಚ್. ಶಾಂತಮ್ಮ	ಗ್ರಂಥಪಾಲಕರು	ಅನ್ವಯಿಸುವುದಿಲ್ಲ	01	–	ಯುಜಿಸಿ

1. ಒಂದು ವೇಳೆ ಈ ಆದೇಶದಲ್ಲಿ ವೇತಾನಾನುದಾನಕ್ಕೆ ಒಳಪಟ್ಟ ಬೋಧಕರುಗಳ ಪೈಕಿ ಯಾವುದೇ ಅನರ್ಹತೆ ಕಂಡು ಬಂದಲ್ಲಿ ಯಾವುದೇ ಮುನ್ಸೂಚನೆಯಿಲ್ಲದೆ, ವೇತನಾನುದಾನವನ್ನು ಹಿಂದಕ್ಕೆ ಪಡೆಯುವ ಷರತ್ತಿಗೊಳಪಟ್ಟಿದೆ.
2. ಈ ನೇಮಕಾತಿಗಳಲ್ಲಿ ಮೀಸಲಾತಿಯಲ್ಲಿ ವ್ಯತ್ಯಾಸವಾಗಿರುವುದು ಕಂಡುಬಂದಲ್ಲಿ ಅಂಥವರ ವೇತನಾನುದಾನವನ್ನು ಸಹ ಹಿಂದಕ್ಕೆ ಪಡೆಯುವ ಷರತ್ತಿಗೊಳಪಟ್ಟಿದೆ.
3. ವೇತನಾನುದಾನದ ವ್ಯಾಪ್ತಿಗೆ ಒಳಪಟ್ಟಂತಹ ಮೇಲ್ಕಂಡ ಉಪನ್ಯಾಸಕರುಗಳ ವೇತನವನ್ನು ಆದೇಶ ಹೊರಡಿಸಿದ ದಿನಾಂಕದಿಂದ ವಿಸ್ತರಿಸಿರುವ ವೇತನ ಶ್ರೇಣಿಯ ಕನಿಷ್ಠ ಮೂಲ ವೇತನದಲ್ಲಿ ನಿಗದಿಪಡಿಸತಕ್ಕದ್ದು. ಹಾಗೂ ವೇತನಾನುದಾನದ ವ್ಯಾಪ್ತಿಗೆ ಒಳಪಡಿಸಲಾದ ಪೂರ್ವದಲ್ಲಿ ಸಲ್ಲಿಸಿರುವ ಸೇವೆಯನ್ನು ಯಾವುದೇ ಸೇವಾ ಹಾಗೂ ಪಿಂಚಣಿ ಸೌಲಭ್ಯಗಳಿಗೆ ಪರಿಗಣಿಸುವಂತಿಲ್ಲ.

4. ದಿನಾಂಕ 11-07-2009ರ ಪೂರ್ವದಲ್ಲಿ ನೇಮಕಾತಿ ಹೊಂದಿದವರು ಎಂ.ಫಿಲ್. ಪದವಿ ಹೊಂದಿದ್ದಲ್ಲಿ ಯುಜಿಸಿ ವೇತನ ಶ್ರೇಣಿ ನೀಡಲು ಪರಿಗಣಿಸಲಾಗುತ್ತಿದೆ. ಆದರೆ, ಈ ಪ್ರಕರಣದಲ್ಲಿ ಬಹುತೇಕ ಉಪನ್ಯಾಸಕರುಗಳು ದಿನಾಂಕ 11-7-2009ರ ಪೂರ್ವದಲ್ಲಿ ನಡೆದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದು, ಅವರುಗಳ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ವಿಶ್ವವಿದ್ಯಾಲಯಗಳು ದಿನಾಂಕ 11-07-2009ರ ನಂತರ ವಿತರಿಸಿದೆ. ಈ ಹಿನ್ನೆಲೆಯಲ್ಲಿ ಅವರುಗಳಿಗೆ ಯುಜಿಸಿ ವೇತನ ಶ್ರೇಣಿ ವಿಸ್ತರಿಸುವ ಸಂಬಂಧ ಯಾವ ದಿನಾಂಕವನ್ನು ಅಂದರೆ ಪರೀಕ್ಷೆ ನಡೆದ ದಿನಾಂಕ ಅಥವಾ ಪ್ರಮಾಣ ಪತ್ರ ವಿತರಿಸುವ ದಿನಾಂಕ ಈ ಎರಡರಲ್ಲಿ ಯಾವ ದಿನಾಂಕ ಪರಿಗಣಿಸಬೇಕು ಎಂಬುದರ ಕುರಿತು ಇಂತಹ ಬೇರೆ ಪ್ರಕರಣಗಳಲ್ಲಿ ಸಿಆಸು ಇಲಾಖೆ / ಆರ್ಥಿಕ ಇಲಾಖೆಯೊಡನೆ ಸಮಾಲೋಚಿಸಲಾಗುತ್ತಿದೆ. ಆದುದರಿಂದ, ಒಂದು ವೇಳೆ ಸರ್ಕಾರವು ವೇತದಾನುದಾನ ವ್ಯಾಪ್ತಿಗೆ ತರಲಾದ ಉಪನ್ಯಾಸಕರುಗಳ ಎಂ.ಫಿಲ್. ವಿದ್ಯಾರ್ಹತೆಯನ್ನು ಪ್ರಮಾಣ ಪತ್ರ ವಿತರಿಸುವ ದಿನಾಂಕದಿಂದ ಪರಿಗಣಿಸುವಂತೆ ನಿರ್ಧಾರ ಕೈಗೊಂಡಲ್ಲಿ ಯುಜಿಸಿ ವೇತನ ಶ್ರೇಣಿ ಹಿಂಪಕ್ಕೆ ಪಡೆದು ಅಂತಹ ಉಪನ್ಯಾಸಕರುಗಳಿಗೆ ರಾಜ್ಯ ವೇತನ ಶ್ರೇಣಿಯಲ್ಲಿ ವೇತನ ಪುನರ್ ಪರಿಷ್ಕರಿಸುವ ಷರತ್ತಿಗೊಳಪಟ್ಟಿರುತ್ತದೆ.

5. ವೇತನಾನುದಾನ ವ್ಯಾಪ್ತಿಗೆ ತರಲಾದ ಉಪನ್ಯಾಸಕರುಗಳ ಕಾರ್ಯಭಾರದಲ್ಲಿ ಕೊರತೆ ಉದ್ಭವಿಸಿದ ಪಕ್ಷದಲ್ಲಿ ಅಂತಹ ಉಪನ್ಯಾಸಕರುಗಳನ್ನು ಕಾರ್ಯಭಾರ ಇರುವಂತಹ ಅನುದಾನಿತ ಕಾಲೇಜು / ಸರ್ಕಾರಿ ಕಾಲೇಜುಗಳ ಕಾರ್ಯಭಾರದ ಎದುರಾಗಿ ನಿಯೋಜನೆ ಮೇಲೆ ಮರು ಹಂಚಿಕೆ ಮಾಡುವ ಷರತ್ತಿಗೊಳಪಟ್ಟಿದೆ.

6. ಸಂಸ್ಥೆಯ ಬೈಲಾದಲ್ಲಿ ನಿಗಧಿಪಡಿಸಿರುವಂತೆ ಆಡಳಿತ ಮಂಡಳಿಯ ಎಲ್ಲಾ ಪದಾಧಿಕಾರಿಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರೇ ಆಗಿರಬೇಕು. ಒಂದು ವೇಳೆ ಅನ್ಯ ವರ್ಗದ ವ್ಯಕ್ತಿಯನ್ನು ಆಡಳಿತ ಮಂಡಳಿಯ ಪದಾಧಿಕಾರಿಗಳಾಗಿ ಆಯ್ಕೆ ಮಾಡಿದ್ದಲ್ಲಿ ವೇತನಾನುದಾನ ಹಿಂಪಡೆಯುವ ಷರತ್ತಿಗೊಳಪಟ್ಟಿದೆ.

7. ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕಾಲೇಜು ಶಿಕ್ಷಣ) ನಿಯಮಗಳು, 2003ರ ನಿಯಮ 15(ಇ) ರಡಿಯಲ್ಲಿ ನಿಗದಿಪಡಿಸಿರುವ ಅಪೆಂಡಿಕ್ಸ್ (2)ರಲ್ಲಿ ಸೂಚಿಸಿರುವಂತೆ ಬೋಧನಾ ಕೊಠಡಿಗಳು, ಪ್ರಯೋಗಾಲಯಗಳು, ಶೌಚಾಲಯ ಇತ್ಯಾದಿಗಳನ್ನು ಒಳಗೊಂಡ ಮೂಲಭೂತ ಸೌಕರ್ಯಗಳನ್ನು ಸಂಸ್ಥೆಯು ಒದಗಿಸಿರತಕ್ಕದ್ದು.

8. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ನಡೆಸುತ್ತಿರುವ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಸಂದರ್ಭದಲ್ಲಿ ಅಂತಹ ಕಾಲೇಜುಗಳಲ್ಲಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಕನಿಷ್ಠ ಶೇಕಡಾ 35ರಷ್ಟು ಇರತಕ್ಕದ್ದು. ಪ್ರವೇಶಾವಕಾಶದಲ್ಲಿ ನಿಗದಿಪಡಿಸಿರುವ ವಿದ್ಯಾರ್ಥಿಗಳ ಕನಿಷ್ಠ ಪ್ರಮಾಣವನ್ನು ವಿವರವಾಗಿ ಅನುಸರಿಸತಕ್ಕದ್ದು. ತಪ್ಪಿದ್ದಲ್ಲಿ ವೇತನಾನುದಾನ ಹಿಂಪಡೆಯುವ ಷರತ್ತಿಗೊಳಪಟ್ಟಿದೆ.

9. ವಿಶ್ವವಿದ್ಯಾಲಯದವರು ನಿಗದಿಪಡಿಸಿರುವ ಸರಾಸರಿ ಪ್ರವೇಶಾತಿಗೆ ಸಮಾನಾಂತರವಾಗಿ ಈ ಕಾಲೇಜುಗಳು ಕನಿಷ್ಠ ಪ್ರವೇಶಾತಿಯನ್ನು ಮಾಡಿಕೊಳ್ಳತಕ್ಕದ್ದು. ಮತ್ತು ಪ್ರವೇಶಾತಿ (enrollment) ಪಡೆದ ಕಾಲೇಜಿನ ವಿದ್ಯಾರ್ಥಿಗಳ ಪೈಕಿ ಕನಿಷ್ಠ ಶೇಕಡ 75ರಷ್ಟು ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತುಕೊಳ್ಳುವಂತೆ ಕ್ರಮವಹಿಸತಕ್ಕದ್ದು. ತಪ್ಪಿದ್ದಲ್ಲಿ ವೇತನಾನುದಾನ ಹಿಂಪಡೆಯುವ ಷರತ್ತಿಗೊಳಪಟ್ಟಿದೆ.

10. ಇಂತಹ ಕಾಲೇಜುಗಳಲ್ಲಿನ ಪರೀಕ್ಷಾ ಫಲಿತಾಂಶಗಳು ಸಂಬಂಧಪಟ್ಟ ವಿಶ್ವವಿದ್ಯಾಲಯದ ಮಾನ್ಯತೆ ಪಡೆದ ಇತರೆ ಕಾಲೇಜುಗಳಲ್ಲಿನ ಸರಾಸರಿ ಫಲಿತಾಂಶಕ್ಕಿಂತ ಕಡಿಮೆ ಇರತಕ್ಕದ್ದಲ್ಲ. ತಪ್ಪಿದಲ್ಲಿ ವೇತನಾನುದಾನ ಹಿಂಪಡೆಯುವ ಷರತ್ತಿಗೊಳಪಟ್ಟಿದೆ.

11. ಈ ರೀತಿ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ಪ್ರಾರಂಭವಾದ ಪದವಿ ಕಾಲೇಜುಗಳನ್ನು ಮಧ್ಯದಲ್ಲಿ ಯಾವುದೇ ವಿಚ್ಛಿನ್ನತೆ ಇಲ್ಲದೆ ಸತತವಾಗಿ ನಡೆಸಿರಬೇಕು. ವಿಚ್ಛಿನ್ನತೆ ಉಂಟಾದಲ್ಲಿ ವೇತನಾನುದಾನ ಹಿಂಪಡೆಯುವ ಷರತ್ತಿಗೊಳಪಟ್ಟಿದೆ.]

12. ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕಾಲೇಜು ಶಿಕ್ಷಣ) ನಿಯಮಗಳು 2003ರ ಮತ್ತು ಇತರ ಸಂಬಂಧಿತ ನಿಯಮಗಳಡಿಯಲ್ಲಿ ನಿಗಧಿಪಡಿಸಿರುವಂತೆ ಮಾದರಿ ಸಿಬ್ಬಂದಿಯನ್ವಯ ನೇಮಕಾತಿ ಮಾಡಿಕೊಳ್ಳತಕ್ಕದ್ದು. ಪ್ರತಿಯೊಂದು ತರಗತಿಯಲ್ಲಿ ನಿಗದಿತ ಕನಿಷ್ಠ ಮಟ್ಟದ ವಿದ್ಯಾರ್ಥಿ ಹಾಜರಾತಿ ಸಂಖ್ಯಾಬಲವನ್ನು ಹೊಂದಿರತಕ್ಕದ್ದು. ಪದವಿ ಕಾಲೇಜುಗಳಿಗೆ ಸಂಬಂಧಪಟ್ಟಂತೆ ಪ್ರತಿಯೊಂದು ತರಗತಿಯಲ್ಲಿ ಕನಿಷ್ಠ 40 ವಿದ್ಯಾರ್ಥಿಗಳ ಹಾಜರಾತಿ ಕಡ್ಡಾಯವಾಗಿರಬೇಕು. ಭಾಷಾ ವಿಷಯದಲ್ಲಿ ಕನಿಷ್ಠ 10 ವಿದ್ಯಾರ್ಥಿಗಳು ಹಾಗೂ ಐಚ್ಛಿಕ ವಿಷಯಗಳಿಗೆ ಕನಿಷ್ಠ 15 ವಿದ್ಯಾರ್ಥಿಗಳ ಸಂಖ್ಯೆ ಇರಬೇಕು.

13. ನಿಗಧಿತ ಮೂಲಭೂತ ಸೌಲಭ್ಯಗಳಲ್ಲದೆ ಸ್ವಂತ ಕಟ್ಟಡ ಮತ್ತು ಆಟದ ಮೈದಾನಗಳನ್ನು ಹೊಂದಿರತಕ್ಕದ್ದು. ಇವುಗಳನ್ನು ಹೊಂದದೇ ಇರುವ ಸಂಸ್ಥೆಗಳ ಪ್ರಕರಣಗಳಲ್ಲಿ ಈ ಮೂಲಭೂತ ಸೌಲಭ್ಯಗಳನ್ನು ಹೊಂದಲು ಸಹಾಯಾನುದಾನಕ್ಕೆ ಒಳಪಡಿಸಿದ ದಿನಾಂಕದಿಂದ ಮೂರು ವರ್ಷಗಳ ಕಾಲಾವಕಾಶ ನೀಡಬಹುದು. ಹಾಗೂ ಮೂರು ವರ್ಷಗಳ ನಂತರವೂ ಈ ಸೌಲಭ್ಯಗಳನ್ನು ಒದಗಿಸದೇ ಇದ್ದಲ್ಲಿ ಸಹಯಾನುದಾನವನ್ನು ನಿಲ್ಲಿಸಲಾಗುವುದು.

14. ಇನ್ನು ಮುಂದೆ ಭವಿಷ್ಯಾನುಸಾರ ಭರ್ತಿ ಮಾಡಬೇಕಾಗಿರುವ ಹುದ್ದೆಗಳಿಗೆ ಸಕ್ಷಮ ಅಧಿಕಾರಿಯಿಂದ ಪೂರ್ವಾನುಮತಿ ಪಡೆಯದೇ ಮಾಡತಕ್ಕದ್ದಲ್ಲ.

15. ನೇರ ನೇಮಕಾತಿ, ಬಡ್ತಿ ಮತ್ತು ವಿದ್ಯಾರ್ಥಿಗಳ ಪ್ರವೇಶದ ವಿಷಯದಲ್ಲಿ ಕಾಲಕಾಲಕ್ಕೆ ಹೊರಡಿಸುವ ಸರ್ಕಾರದ ನಿಯಮಗಳು/ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

16. ಸದರಿ ಕಾಲೇಜಿನಲ್ಲಿ ಇನ್ನು ಮುಂದೆ ನೌಕರರ ರಾಜೀನಾಮೆ, ನಿವೃತ್ತಿ ಮತ್ತು ನಿಧನದಿಂದ ತೆರವಾದ ಬೋಧಕ ಹುದ್ದೆಗಳನ್ನು ತುಂಬುವಾಗ ಸರ್ಕಾರದ ಪೂರ್ವಾನುಮತಿ ಪಡೆಯುವುದು ಮತ್ತು ಸರ್ಕಾರದ ಮೀಸಲಾತಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

17. ಅನುಮೋದಿತ ಹುದ್ದೆಗಳಿಗೆ ವೇತನಾನುದಾನ ಬಿಡುಗಡೆ ಮಾಡುವ ಮುನ್ನ ಸರ್ಕಾರದ ಮತ್ತು ಯುಜಿಸಿ ನಿಯಮಗಳ ಪ್ರಕಾರ ವಯೋಮಿತಿ : ವಿದ್ಯಾರ್ಹತೆ ಮತ್ತಿತರ ಷರತ್ತುಗಳನ್ನು ಪೂರೈಸಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.

18. ಸದರಿ ಕಾಲೇಜಿನಲ್ಲಿ ವೇತನಾನುದಾನಕ್ಕೆ ಒಳಪಡಿಸಲಾಗಿರುವಂತಹ ಬೋಧಕರ ವೇತನವನ್ನು ಪ್ರಥಮ 5 ವರ್ಷಗಳ ಅವಧಿಗೆ ಇಲಾಖೆಗೆ ನಿಗದಿ ಪಡಿಸಲಾದ ಯೋಜನೆ ಹಂಚಿಕೆಯಲ್ಲಿಯೇ ವೆಚ್ಚ ಭರಿಸತಕ್ಕದ್ದು.

ಪ್ರತೀ ವರ್ಷವೂ ಮೇಲ್ಕಂಡ ಷರತ್ತುಗಳನ್ನು ಪೂರೈಸಿರುವ ಕುರಿತು ಸಂಬಂಧಪಟ್ಟ ಜಂಟಿ ನಿರ್ದೇಶಕರು ದೃಢೀಕರಿಸಿದ ನಂತರವೇ ಆಯಾ ವರ್ಷದ ವೇತನಾನುದಾನ ಬಿಡುಗಡೆ ಮಾಡುವಂತೆ ಆಯುಕ್ತಾಲಯಕ್ಕೆ ಸೂಚಿಸಲಾಗಿದೆ. ನ್ಯೂನ್ಯತೆಗಳಾದಲ್ಲಿ ಸಂಬಂಧಪಟ್ಟ ಜಂಟಿ ನಿರ್ದೇಶಕರೇ ಜವಾಬ್ದಾರರಾಗಿರುತ್ತಾರೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ:860/ವೆಚ್ಚ-8/2010, ದಿನಾಂಕ: 28-06-2011 ಮತ್ತು ಆಇ: 956/ವೆಚ್ಚ-8/2010, ದಿನಾಂಕ: 02-07-2011 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಯು.ಬಿ.ಉಳವಿ

ಪಿ.ಆರ್. ನಂ. 2757

ಸರ್ಕಾರದ ಅಧೀನ ಕಾರ್ಯದರ್ಶಿ

ಶಿಕ್ಷಣ ಇಲಾಖೆ (ಕಾಲೇಜು ಶಿಕ್ಷಣ)

ಶಿಕ್ಷಣ ಸಚಿವಾಲಯ

ವಿಷಯ : ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರು ನಡೆಸುತ್ತಿರುವ **ಚಾಮರಾಜನಗರ ಜಿಲ್ಲೆಯ ಬಿಳಿಗಿರಿ ಪ್ರಥಮ ದರ್ಜೆ ಮಹಾವಿದ್ಯಾಲಯ** ಹಾಗೂ ಅಲ್ಲಿನ ಬೋಧಕರ ಹುದ್ದೆಗಳನ್ನು ವೇತನಾನುದಾನದ ವ್ಯಾಪ್ತಿಗೆ ಒಳಪಡಿಸುವ ಕುರಿತು.

ಓದಲಾಗಿದೆ:

1. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 551 ಯುಪಿಸಿ 99, ದಿನಾಂಕ: 07-08-2003.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 30 ಯುಪಿಸಿ 2008 ದಿನಾಂಕ: 13-05-2009
3. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 30 ಯುಪಿಸಿ 2008 ದಿನಾಂಕ: 05-10-2009
4. ಕಾಲೇಜು ಶಿಕ್ಷಣ ಆಯುಕ್ತರ ಪತ್ರ ಸಂಖ್ಯೆ: ಕಾಶಿಇ:02: ಪ.ಜಾ.ಪ.ಪಂ:ವೇಅನು:ಗುವಿ:2010-11, ಖಾಕಾವಿ-2 ದಿನಾಂಕ:07-09-2010.
5. ಸಚಿವ ಸಂಪುಟದ ಟಿಪ್ಪಣಿ ಸಂಖ್ಯೆ: ಸಿ:499:2011, ದಿನಾಂಕ:28-10-2011.
6. ಸರ್ಕಾರದ ಆದೇಶ ಸಂಖ್ಯೆ: ಇಡಿ 157 ಯುಪಿಸಿ 2010, ದಿನಾಂಕ: 11-11-2011.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಸರ್ಕಾರಿ ಅಧಿಸೂಚನೆಯನ್ವಯ ರಚಿಸಲಾದ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕಾಲೇಜು ಶಿಕ್ಷಣ) ನಿಯಮಗಳು 2003ರ ನಿಯಮ 8(1)ರನ್ವಯ ದಿನಾಂಕ 01-06-1987ರ ನಂತರ ಪ್ರಾರಂಭಿಸಲಾದ ಯಾವುದೇ ಖಾಸಗಿ ಪದವಿ ಕಾಲೇಜುಗಳು ಮತ್ತು ವಿಷಯಗಳನ್ನು ಅನುದಾನದ ವ್ಯಾಪ್ತಿಗೆ ಒಳಪಡಿಸಲು ಅವಕಾಶವಿರುವುದಿಲ್ಲ.

ರಾಜ್ಯದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಗಳು ದಿನಾಂಕ:01-06-1987 ರಿಂದ ದಿನಾಂಕ 31-3-1995ರ ಅವಧಿಯಲ್ಲಿ ಪ್ರಾರಂಭಿಸಿ ನಡೆಸಲಾಗುತ್ತಿರುವ ಕಾಲೇಜುಗಳು ಮತ್ತು ಕೋರ್ಸ್‌ಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಸರ್ಕಾರ ತೀರ್ಮಾನಿಸಿ ಈ ಕುರಿತು ನಿಯಮಗಳನ್ನು ರಚಿಸಲು ದಿನಾಂಕ 18-02-2009ರಂದು ಜರುಗಿದ ಸಚಿವ ಸಂಪುಟ ಸಭೆಯು ಅನುಮೋದನೆ ನೀಡಿದೆ.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಯಿಂದ ನಡೆಸಲ್ಪಡುತ್ತಿರುವ ಖಾಸಗಿ ಪದವಿ ಕಾಲೇಜುಗಳಿಗೆ ಸಂಬಂಧಿಸಿದಂತೆ ಮಾತ್ರ ಮೇಲೆ ಹೇಳಿದ ನಿಯಮ 8ಕ್ಕೆ ಸೂಕ್ತ ಸೇರ್ಪಡೆ ಮಾಡಿ ದಿನಾಂಕ 01-06-1987 ರಿಂದ 31-03-95ರ ಅವಧಿಯಲ್ಲಿ ಪ್ರಾರಂಭಿಸಲ್ಪಟ್ಟ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರು ನಡೆಸುತ್ತಿರುವ ಪ್ರಥಮ ದರ್ಜೆ ಕಾಲೇಜುಗಳನ್ನು ವೇತನಾನುದಾನಕ್ಕೊಳಪಡಿಸಲು ಓದಲಾದ (2)ರ ದಿನಾಂಕ 13-05-2009ರ ಅಧಿಸೂಚನೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಅದರಂತೆ ಓದಲಾದ (3)ರ ದಿನಾಂಕ 5-10-2009ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಡಳಿತ ಮಂಡಳಿಗಳಿಗೆ ಸೇರಿದ ಶಿಕ್ಷಣ ಸಂಸ್ಥೆಗಳ ವತಿಯಿಂದ ದಿನಾಂಕ 01-6-1987 ರಿಂದ 31-03-1995ರ ಅವಧಿಯಲ್ಲಿ ಪ್ರಾರಂಭಿಸಿ ನಡೆಸಲ್ಪಡುತ್ತಿರುವ ಪ್ರಥಮ ದರ್ಜೆ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಸರ್ಕಾರವು ಕೆಲವು ಮಾನದಂಡಗಳನ್ನು ನಿಗಧಿಪಡಿಸಿ ಆದೇಶ ಹೊರಡಿಸಿದೆ. ಮೇಲೆ ಓದಲಾದ (4)ರ ದಿನಾಂಕ 05-10-2010ರ ಪ್ರಸ್ತಾವನೆಯಲ್ಲಿ ಕಾಲೇಜು ಶಿಕ್ಷಣ ಆಯುಕ್ತರು ಸದರಿ ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರನ್ನು ವೇತನಾನುದಾನಕ್ಕೆ ಒಳಪಡಿಸುವ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೆ. ಸದರಿ ಕಾಲೇಜನ್ನು ಹಾಗೂ ಅದರಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಹ ಉಪನ್ಯಾಸಕರನ್ನು ವೇತನಾನುದಾನದ ವ್ಯಾಪ್ತಿಗೆ ಒಳಪಡಿಸುವ ಕುರಿತು ಆರ್ಥಿಕ ಇಲಾಖೆಯ ಸಹಮತಿ ಕೋರಲಾಗಿತ್ತು. ಈಗಾಗಲೇ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ನಡೆಸುತ್ತಿರುವ 5 ಕಾಲೇಜುಗಳನ್ನು ವೇತನಾನುದಾನದ ವ್ಯಾಪ್ತಿಗೆ ಒಳಪಡಿಸುವ ಕುರಿತು ವಿಧಿಸಲಾಗಿದ್ದ ಷರತ್ತುಗಳೊಂದಿಗೆ ಹೆಚ್ಚುವರಿಯಾಗಿ ಕೆಲವು ಷರತ್ತುಗಳನ್ನು ವಿಧಿಸಿ ಅವುಗಳನ್ನು ಪೂರೈಸಿದ್ದಲ್ಲಿ ಎರಡನೇ ಹಂತವಾಗಿ ವೇತನಾನುದಾನದ ವ್ಯಾಪ್ತಿಗೆ ಒಳಪಡಿಸಲು ಆರ್ಥಿಕ ಇಲಾಖೆಯು ತಿಳಿಸಿದೆ. ಆದರೆ, ಪ್ರಥಮ ಹಂತವಾಗಿ ವೇತನಾನುದಾನಕ್ಕೆ ಒಳಪಡಿಸಲಾದ 5 ಕಾಲೇಜುಗಳಿಗೆ ವಿಧಿಸದೇ ಇದ್ದ ಹೆಚ್ಚುವರಿ ಷರತ್ತುಗಳನ್ನು ವಿಧಿಸಿತ್ತು. ಈ ಹೆಚ್ಚುವರಿ ಷರತ್ತುಗಳನ್ನು ವಿಧಿಸದಂತೆ ವಿನಾಯಿತಿ ನೀಡುವಂತೆ ಸಚಿವ ಸಂಪುಟದ ಅನುಮೋದನೆ ಕೋರಲಾಗಿದ್ದು, ಸಚಿವ ಸಂಪುಟವು ಮೇಲೆ ಓದಲಾದ (5)ರಲ್ಲಿ ಆರ್ಥಿಕ ಇಲಾಖೆಯು ಹೆಚ್ಚುವರಿಯಾಗಿ ವಿಧಿಸಿರುವ ಷರತ್ತುಗಳನ್ನು ಸಡಿಲಿಸಿ, ಸದರಿ ಕಾಲೇಜು ಹಾಗೂ ಇತರೆ 9 ಕಾಲೇಜುಗಳನ್ನು ಮತ್ತು ಅವುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅರ್ಹ ಬೋಧಕರನ್ನು ವೇತನಾನುದಾನದ ವ್ಯಾಪ್ತಿಗೆ ಒಳಪಡಿಸಲು ಅನುಮತಿ ನೀಡಿದೆ. ಅದರಂತೆ, ಕಾಲೇಜು ಶಿಕ್ಷಣ ನಿರ್ದೇಶನಾಲಯದ ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸಲಾದ ಅಭ್ಯರ್ಥಿಗಳ ವಿದ್ಯಾರ್ಹತೆ, ವಿಷಯಗಳ ಕಾರ್ಯಭಾರ ಮತ್ತು ಮೀಸಲಾತಿ ಪರಿಶೀಲಿಸಿ ಸದರಿ ಕಾಲೇಜನ್ನು ಮತ್ತು ಕಾಲೇಜಿನಲ್ಲಿ ವಿಷಯವಾರು ಹುದ್ದೆಗಳ ಎದುರು ಕಾರ್ಯನಿರ್ವಹಿಸುತ್ತಿರುವ ಅರ್ಹ ಉಪನ್ಯಾಸಕರುಗಳನ್ನು ವೇತನಾನುದಾನದ ವ್ಯಾಪ್ತಿಗೆ ಈಗಾಗಲೇ ಮೇಲೆ ಓದಲಾದ (6)ರ ಆದೇಶದಲ್ಲಿ ಒಳಪಡಿಸಲಾಗಿರುತ್ತದೆ. ಆದರೆ, ದೈಹಿಕ ಶಿಕ್ಷಣ ಬೋಧಕರ ವಿಷಯದಲ್ಲಿ ಪ್ರಸ್ತಾಪಿಸಲಾಗಿದ್ದ ಬೋಧಕರು ನಿಗದಿತ ವಿದ್ಯಾರ್ಹತೆಯನ್ನು ಹೊಂದದೇ ಇದ್ದ ಪ್ರಯುಕ್ತ ಸದರಿ ವಿಷಯವನ್ನು ಹಾಗೂ ಅದನ್ನು ಬೋಧಿಸುತ್ತಿದ್ದ ಬೋಧಕರನ್ನು ವೇತನಾನುದಾನದ ವ್ಯಾಪ್ತಿಗೆ ತರಲಾಗಿರಲಿಲ್ಲ. ನಂತರದಲ್ಲಿ ದೈಹಿಕ ಶಿಕ್ಷಣ ಬೋಧಕರ ಹುದ್ದೆಗೆ ಪ್ರಸ್ತಾಪಿಸಲಾಗಿದ್ದ ಶ್ರೀ ಹೆಗಡೆ ಮಂಜುನಾಥ ಗಣಪತಿ ಇವರು ಜೂನ್ 2008ರಂದು ಎಂ.ಫಿಲ್. ಪದವಿ ಪಡೆದಿರುವ ಕುರಿತು ಕಾಲೇಜಿನ ಆಡಳಿತ ಮಂಡಳಿಯು ಸರ್ಕಾರಕ್ಕೆ ಸಲ್ಲಿಸಿರುವ ದಿನಾಂಕ: 16-11-2011ರ ಪತ್ರದಲ್ಲಿ ದಾಖಲಾತಿಗಳನ್ನು ಒದಗಿಸಿರುವ

ಹಿನ್ನೆಲೆಯಲ್ಲಿ ಪ್ರಕರಣವನ್ನು ಪುನರ್ ಪರಿಶೀಲಿಸಲಾಗಿ ಶ್ರೀ ಹೆಗಡೆ ಮಂಜುನಾಥ ಗಣಪತಿ ಇವರು ದಿನಾಂಕ: 11-07-2009ರ ಪೂರ್ವದಲ್ಲಿ ಎಂ.ಫಿಲ್. ಪದವಿ ಪಡೆದಿರುವ ಪ್ರಯುಕ್ತ ಒಂದು ದೈಹಿಕ ಶಿಕ್ಷಣ ಭೋಧಕರ ಹುದ್ದೆ ಮಂಜೂರು ಮಾಡಬಹುದಾಗಿರುವುದರಿಂದ, ಶ್ರೀ ಹೆಗಡೆ ಮಂಜುನಾಥ ಗಣಪತಿ ಅವರನ್ನು ಯುಜಿಸಿ ವೇತನ ಶ್ರೇಣಿಯಲ್ಲಿ ಈ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಅನುದಾನದ ವ್ಯಾಪ್ತಿಗೆ ಒಳಪಡಿಸಲು ಸರ್ಕಾರ ತೀರ್ಮಾನಿಸಿದೆ.

ಆದ್ದರಿಂದ ಈ ಆದೇಶ

ಸರ್ಕಾರದ ಆದೇಶ ಸಂಖ್ಯೆ: ಇಡಿ 157 ಯುಪಿಸಿ 2010 ಬೆಂಗಳೂರು, ದಿನಾಂಕ: 02-12-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಡಳಿತ ಮಂಡಳಿಗಳಿಗೆ ಸೇರಿದ ಶಿಕ್ಷಣ ಸಂಸ್ಥೆಗಳ ವತಿಯಿಂದ ದಿನಾಂಕ 01-06-1987 ರಿಂದ 31-03-1995ರ ಅವಧಿಯಲ್ಲಿ ಪ್ರಾರಂಭಿಸಿ ನಡೆಸಲ್ಪಡುತ್ತಿರುವ **ಚಾಮರಾಜನಗರ ಜಿಲ್ಲೆಯ ಬಿಳಿಗಿರಿ ಪ್ರಥಮ ದರ್ಜೆ ಮಹಾವಿದ್ಯಾಲಯವನ್ನು** ಇಲ್ಲಿ ಒಂದು ದೈಹಿಕ ಶಿಕ್ಷಣ ಬೋಧಕರ ಹುದ್ದೆಯನ್ನು ಹಾಗೂ ಸದರಿ ಹುದ್ದೆಯ ಎದುರು ಕರ್ತವ್ಯ ನಿರ್ವಹಿಸುತ್ತಿರುವ ಈ ಕೆಳಕಂಡ ಅರ್ಹ ಸಹಾಯಕ ಪ್ರಾಧ್ಯಾಪಕರನ್ನು ಕೆಳಕಂಡ ಷರತ್ತಿಗೊಳಪಟ್ಟು ಈ ಆದೇಶ ಹೊರಡಿಸಿದ ದಿನಾಂಕದಿಂದ ಆರ್ಥಿಕ ಸೌಲಭ್ಯದೊಂದಿಗೆ ಜಾರಿಗೆ ಬರುವಂತೆ ವೇತನಾನುದಾನದ ವ್ಯಾಪ್ತಿಗೆ ತರಲಾಗಿದೆ.

ಕ್ರಮ ಸಂಖ್ಯೆ	ವೇತನಾನುದಾನಕ್ಕೆ ಒಳಪಡಿಸಿದ ಬೋಧಕರ ಹೆಸರು	ವೇತನಾನುದಾನಕ್ಕೆ ಒಳಪಡಿಸಿದ ಹುದ್ದೆ/ವಿಷಯ	ಪರಿಗಣಿಸಲಾದ ಮೀಸಲಾತಿ	ವೇತನಾನುದಾನಕ್ಕೆ ಒಳಪಡಿಸಿದ ಹುದ್ದೆಗಳ ಸಂಖ್ಯೆ	ಕಾರ್ಯಭಾರ	ವೇತನ ಶ್ರೇಣಿ
1	ಹೆಗಡೆ ಮಂಜುನಾಥ ಗಣಪತಿ	ದೈಹಿಕ ಶಿಕ್ಷಣ ನಿರ್ದೇಶಕರು	ಅನ್ವಯಿಸುವುದಿಲ್ಲ	01	-	ಯುಜಿಸಿ

1. ಈ ಆದೇಶದಲ್ಲಿ ವೇತಾನುದಾನಕ್ಕೆ ಒಳಪಟ್ಟ ಬ್ೋಧಕರ ಸೇವೆ ಕುರಿತು ಯಾವುದೇ ಅನರ್ಹತೆ ಕಂಡು ಬಂದಲ್ಲಿ ಯಾವುದೇ ಮುನ್ಸೂಚನೆಯಿಲ್ಲದೆ, ವೇತನಾನುದಾನವನ್ನು ಹಿಂದಕ್ಕೆ ಪಡೆಯುವ ಷರತ್ತಿಗೊಳಪಟ್ಟಿದೆ.
2. ಈ ನೇಮಕಾತಿಗಳಲ್ಲಿ ಮೀಸಲಾತಿಯಲ್ಲಿ ವ್ಯತ್ಯಾಸವಾಗಿರುವುದು ಕಂಡುಬಂದಲ್ಲಿ ಅಂಥವರ ವೇತನಾನುದಾನವನ್ನು ಸಹ ಹಿಂದಕ್ಕೆ ಪಡೆಯುವ ಷರತ್ತಿಗೊಳಪಟ್ಟಿದೆ.
3. ವೇತನಾನುದಾನದ ವ್ಯಾಪ್ತಿಗೆ ಒಳಪಟ್ಟಂತಹ ಮೇಲ್ಕಂಡ ಉಪನ್ಯಾಸಕರ ವೇತನವನ್ನು ಆದೇಶ ಹೊರಡಿಸಿದ ದಿನಾಂಕದಿಂದ ವಿಸ್ತರಿಸಿರುವ ವೇತನ ಶ್ರೇಣಿಯ ಕನಿಷ್ಠ ಮೂಲ ವೇತನದಲ್ಲಿ ನಿಗದಿಪಡಿಸತಕ್ಕದ್ದು. ಹಾಗೂ ವೇತನಾನುದಾನದ ವ್ಯಾಪ್ತಿಗೆ ಒಳಪಡಿಸಲಾದ ಪೂರ್ವದಲ್ಲಿ ಸಲ್ಲಿಸಿರುವ ಸೇವೆಯನ್ನು ಯಾವುದೇ ಸೇವಾ ಹಾಗೂ ಪಿಂಚಣಿ ಸೌಲಭ್ಯಗಳಿಗೆ ಪರಿಗಣಿಸುವಂತಿಲ್ಲ.
4. ದಿನಾಂಕ 11-07-2009ರ ಪೂರ್ವದಲ್ಲಿ ನೇಮಕಾತಿ ಹೊಂದಿದವರು ಎಂ.ಫಿಲ್. ಪದವಿ ಹೊಂದಿದ್ದಲ್ಲಿ ಯುಜಿಸಿ ವೇತನ ಶ್ರೇಣಿ ನೀಡಲು ಪರಿಗಣಿಸಲಾಗುತ್ತಿದೆ. ಆದರೆ, ಈ ಪ್ರಕರಣದಲ್ಲಿರುವ ಬೋಧಕರು ದಿನಾಂಕ: 11-07-2009ರ ಪೂರ್ವದಲ್ಲಿ ನಡೆದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದು, ಅವರುಗಳ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ವಿಶ್ವವಿದ್ಯಾಲಯಗಳು ದಿನಾಂಕ:11-07-2009ರ ನಂತರ ವಿತರಿಸಿದೆ. ಈ ಹಿನ್ನೆಲೆಯಲ್ಲಿ ಅವರಿಗಳಿಗೆ ಯುಜಿಸಿ ವೇತನ ಶ್ರೇಣಿ ವಿಸ್ತರಿಸುವ ಸಂಬಂಧ ಯಾವ ದಿನಾಂಕವನ್ನು ಅಂದರೆ ಪರೀಕ್ಷೆ ನಡೆದ ದಿನಾಂಕ ಅಥವಾ ಪ್ರಮಾಣ ಪತ್ರ ವಿತರಿಸುವ ದಿನಾಂಕ ಈ ಎರಡರಲ್ಲಿ ಯಾವ ದಿನಾಂಕ ಪರಿಗಣಿಸಬೇಕು ಎಂಬುದರ ಕುರಿತು ಇಂತಹ ಬೇರೆ ಪ್ರಕರಣಗಳಲ್ಲಿ ಸಿಆಸು ಇಲಾಖೆ / ಆರ್ಥಿಕ ಇಲಾಖೆಯೊಡನೆ ಸಮಾಲೋಚಿಸಲಾಗುತ್ತಿದೆ. ಆದುದರಿಂದ, ಒಂದು ವೇಳೆ ಸರ್ಕಾರವು ವೇತದಾನುದಾನ ವ್ಯಾಪ್ತಿಗೆ ತರಲಾದ ಉಪನ್ಯಾಸಕರ ಎಂ.ಫಿಲ್. ವಿದ್ಯಾರ್ಹತೆಯನ್ನು ಪ್ರಮಾಣ ಪತ್ರ ವಿತರಿಸುವ ದಿನಾಂಕದಿಂದ ಪರಿಗಣಿಸುವಂತೆ ನಿರ್ಧಾರ ಕೈಗೊಂಡಲ್ಲಿ ಯುಜಿಸಿ ವೇತನ ಶ್ರೇಣಿ ಹಿಂದಕ್ಕೆ ಪಡೆದು ಅಂತಹ ಉಪನ್ಯಾಸಕರುಗಳಿಗೆ ರಾಜ್ಯ ವೇತನ ಶ್ರೇಣಿಯಲ್ಲಿ ವೇತನ ಪುನರ್ ಪರಿಷ್ಕರಿಸುವ ಷರತ್ತಿಗೊಳಪಟ್ಟಿರುತ್ತದೆ.
5. ವೇತನಾನುದಾನ ವ್ಯಾಪ್ತಿಗೆ ತರಲಾದ ಉಪನ್ಯಾಸಕರ ಕಾರ್ಯಭಾರದಲ್ಲಿ ಕೊರತೆ ಉದ್ಭವಿಸಿದ ಪಕ್ಷದಲ್ಲಿ ಅಂತಹ ಉಪನ್ಯಾಸಕರುಗಳನ್ನು ಕಾರ್ಯಭಾರ ಇರುವಂತಹ ಅನುದಾನಿತ ಕಾಲೇಜು / ಸರ್ಕಾರಿ ಕಾಲೇಜುಗಳ ಕಾರ್ಯಭಾರದ ಎದುರಾಗಿ ನಿಯೋಜನೆ ಮೇಲೆ ಮರು ಹಂಚಿಕೆ ಮಾಡುವ ಷರತ್ತಿಗೊಳಪಟ್ಟಿದೆ.
6. ಸಂಸ್ಥೆಯ ಬೈಲಾದಲ್ಲಿ ನಿಗಧಿಪಡಿಸಿರುವಂತೆ ಆಡಳಿತ ಮಂಡಳಿಯ ಎಲ್ಲಾ ಪದಾಧಿಕಾರಿಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರೇ ಆಗಿರಬೇಕು. ಒಂದು ವೇಳೆ ಅನ್ಯ ವರ್ಗದ ವ್ಯಕ್ತಿಯನ್ನು ಆಡಳಿತ ಮಂಡಳಿಯ ಪದಾಧಿಕಾರಿಗಳಾಗಿ ಆಯ್ಕೆ ಮಾಡಿದ್ದಲ್ಲಿ ವೇತನಾನುದಾನ ಹಿಂಪಡೆಯುವ ಷರತ್ತಿಗೊಳಪಟ್ಟಿದೆ.
7. ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕಾಲೇಜು ಶಿಕ್ಷಣ) ನಿಯಮಗಳು, 2003ರ ನಿಯಮ 15(ಇ) ರಡಿಯಲ್ಲಿ ನಿಗದಿಪಡಿಸಿರುವ ಅಪೆಂಡಿಕ್ಸ್ (2)ರಲ್ಲಿ ಸೂಚಿಸಿರುವಂತೆ ಬೋಧನಾ ಕೊಠಡಿಗಳು, ಪ್ರಯೋಗಾಲಯಗಳು, ಶೌಚಾಲಯ ಇತ್ಯಾದಿಗಳನ್ನು ಒಳಗೊಂಡ ಮೂಲಭೂತ ಸೌಕರ್ಯಗಳನ್ನು ಸಂಸ್ಥೆಯು ಒದಗಿಸಿರತಕ್ಕದ್ದು.
8. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ನಡೆಸುತ್ತಿರುವ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಸಂಧರ್ಭದಲ್ಲಿ ಅಂತಹ ಕಾಲೇಜುಗಳಲ್ಲಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಕನಿಷ್ಠ ಶೇಕಡಾ 35 ರಷ್ಟು ಇರತಕ್ಕದ್ದು. ಪ್ರವೇಶಾವಕಾಶದಲ್ಲಿ ನಿಗದಿಪಡಿಸಿರುವ ' ವಿದ್ಯಾರ್ಥಿಗಳ ಕನಿಷ್ಠ ಪ್ರಮಾಣವನ್ನು ವಿವರವಾಗಿ ಅನುಸರಿಸತಕ್ಕದ್ದು. ತಪ್ಪಿದ್ದಲ್ಲಿ ವೇತನಾನುದಾನ ಹಿಂಪಡೆಯುವ ಷರತ್ತಿಗೊಳಪಟ್ಟಿದೆ.
9. ವಿಶ್ವವಿದ್ಯಾಲಯದವರು ನಿಗದಿಪಡಿಸಿರುವ ಸರಾಸರಿ ಪ್ರವೇಶಾತಿಗೆ ಸಮಾನಾಂತರವಾಗಿ ಈ ಕಾಲೇಜುಗಳು ಕನಿಷ್ಠ ಪ್ರವೇಶಾತಿಯನ್ನು ಮಾಡಿಕೊಳ್ಳತಕ್ಕದ್ದು. ಮತ್ತು ಪ್ರವೇಶಾತಿ (enrollment) ಪಡೆದ ಕಾಲೇಜಿನ ವಿದ್ಯಾರ್ಥಿಗಳ ಪೈಕಿ ಕನಿಷ್ಠ ಶೇಕಡ 75ರಷ್ಟು ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತುಕೊಳ್ಳುವಂತೆ ಕ್ರಮವಹಿಸತಕ್ಕದ್ದು. ತಪ್ಪಿದ್ದಲ್ಲಿ ವೇತನಾನುದಾನ ಹಿಂಪಡೆಯುವ ಷರತ್ತಿಗೊಳಪಟ್ಟಿದೆ.

10. ಇಂತಹ ಕಾಲೇಜುಗಳಲ್ಲಿನ ಪರೀಕ್ಷಾ ಫಲಿತಾಂಶಗಳು ಸಂಬಂಧಪಟ್ಟ ವಿಶ್ವವಿದ್ಯಾಲಯದ ಮಾನ್ಯತೆ ಪಡೆದ ಇತರೆ ಕಾಲೇಜುಗಳಲ್ಲಿನ ಸರಾಸರಿ ಫಲಿತಾಂಶಕ್ಕಿಂತ ಕಡಿಮೆ ಇರತಕ್ಕದ್ದಲ್ಲ. ತಪ್ಪಿದಲ್ಲಿ ವೇತನಾನುದಾನ ಹಿಂಪಡೆಯುವ ಷರತ್ತಿಗೊಳಪಟ್ಟಿದೆ.
11. ಈ ರೀತಿ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ಪ್ರಾರಂಭವಾದ ಪದವಿ ಕಾಲೇಜುಗಳನ್ನು ಮಧ್ಯದಲ್ಲಿ ಯಾವುದೇ ವಿಚ್ಛಿನ್ನತೆ ಇಲ್ಲದೆ ಸತತವಾಗಿ ನಡೆಸಿರಬೇಕು. ವಿಚ್ಛಿನ್ನತೆ ಉಂಟಾದಲ್ಲಿ ವೇತನಾನುದಾನ ಹಿಂಪಡೆಯುವ ಷರತ್ತಿಗೊಳಪಟ್ಟಿದೆ.]
12. ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕಾಲೇಜು ಶಿಕ್ಷಣ) ನಿಯಮಗಳು 2003ರ ಮತ್ತು ಇತರ ಸಂಬಂಧಿತ ನಿಯಮಗಳಡಿಯಲ್ಲಿ ನಿಗದಿಪಡಿಸಿರುವಂತೆ ಮಾದರಿ ಸಿಬ್ಬಂದಿಯನ್ವಯ ನೇಮಕಾತಿ ಮಾಡಿಕೊಳ್ಳತಕ್ಕದ್ದು. ಪ್ರತಿಯೊಂದು ತರಗತಿಯಲ್ಲಿ ನಿಗಧಿತ ಕನಿಷ್ಠ ಮಟ್ಟದ ವಿದ್ಯಾರ್ಥಿ ಹಾಜರಾತಿ ಸಂಖ್ಯಾಬಲವನ್ನು ಹೊಂದಿರತಕ್ಕದ್ದು. ಪದವಿ ಕಾಲೇಜುಗಳಿಗೆ ಸಂಬಂಧಪಟ್ಟಂತೆ ಪ್ರತಿಯೊಂದು ತರಗತಿಯಲ್ಲಿ ಕನಿಷ್ಠ 40 ವಿದ್ಯಾರ್ಥಿಗಳ ಹಾಜರಾತಿ ಕಡ್ಡಾಯವಾಗಿರಬೇಕು. ಭಾಷಾ ವಿಷಯದಲ್ಲಿ ಕನಿಷ್ಠ 10 ವಿದ್ಯಾರ್ಥಿಗಳು ಹಾಗೂ ಐಚ್ಚಿಕ ವಿಷಯಗಳಿಗೆ ಕನಿಷ್ಠ 15 ವಿದ್ಯಾರ್ಥಿಗಳ ಸಂಖ್ಯೆ ಇರಬೇಕು.
13. ನಿಗದಿತ ಮೂಲಭೂತ ಸೌಲಭ್ಯಗಳಲ್ಲದೆ ಸ್ವಂತ ಕಟ್ಟಡ ಮತ್ತು ಆಟದ ಮೈದಾನಗಳನ್ನು ಹೊಂದಿರತಕ್ಕದ್ದು. ಇವುಗಳನ್ನು ಹೊಂದದೇ ಇರುವ ಸಂಸ್ಥೆಗಳ ಪ್ರಕರಣಗಳಲ್ಲಿ ಈ ಮೂಲಭೂತ ಸೌಲಭ್ಯಗಳನ್ನು ಹೊಂದಲು ಸಹಾಯಾನುದಾನಕ್ಕೆ ಒಳಪಡಿಸಿದ ದಿನಾಂಕದಿಂದ ಮೂರು ವರ್ಷಗಳ ಕಾಲಾವಕಾಶ ನೀಡಬಹುದು. ಹಾಗೂ ಮೂರು ವರ್ಷಗಳ ನಂತರವೂ ಈ ಸೌಲಭ್ಯಗಳನ್ನು ಒದಗಿಸದೇ ಇದ್ದಲ್ಲಿ ಸಹಯಾನುದಾನವನ್ನು ನಿಲ್ಲಿಸಲಾಗುವುದು.
14. ಇನ್ನು ಮುಂದೆ ಭವಿಷ್ಯಾನುಸಾರ ಭರ್ತಿ ಮಾಡಬೇಕಾಗಿರುವ ಹುದ್ದೆಗಳಿಗೆ ಸಕ್ಷಮ ಅಧಿಕಾರಿಯಿಂದ ಪೂರ್ವಾನುಮತಿ ಪಡೆಯದೇ ಮಾಡತಕ್ಕದ್ದಲ್ಲ.
15. ನೇರ ನೇಮಕಾತಿ, ಬಡ್ತಿ ಮತ್ತು ವಿದ್ಯಾರ್ಥಿಗಳ ಪ್ರವೇಶದ ವಿಷಯದಲ್ಲಿ ಕಾಲಕಾಲಕ್ಕೆ ಹೊರಡಿಸುವ ಸರ್ಕಾರದ ನಿಯಮಗಳು/ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
16. ಸದರಿ ಕಾಲೇಜಿನಲ್ಲಿ ಇನ್ನು ಮುಂದೆ ನೌಕರರ ರಾಜೀನಾಮೆ, ನಿವೃತ್ತಿ ಮತ್ತು ನಿಧನದಿಂದ ತೆರವಾದ ಬೋಧಕ ಹುದ್ದೆಗಳನ್ನು ತುಂಬುವಾಗ ಸರ್ಕಾರದ ಪೂರ್ವಾನುಮತಿ ಪಡೆಯುವುದು ಮತ್ತು ಸರ್ಕಾರದ ಮೀಸಲಾತಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
17. ಅನುಮೋದಿತ ಹುದ್ದೆಗಳಿಗೆ ವೇತನಾನುದಾನ ಬಿಡುಗಡೆ ಮಾಡುವ ಮುನ್ನ ಸರ್ಕಾರದ ಮತ್ತು ಯುಜಿಸಿ ನಿಯಮಗಳ ಪ್ರಕಾರ ವಯೋಮಿತಿ : ವಿದ್ಯಾರ್ಹತೆ ಮತ್ತಿತರ ಷರತ್ತುಗಳನ್ನು ಪೂರೈಸಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.
18. ಸದರಿ ಕಾಲೇಜಿನಲ್ಲಿ ವೇತನಾನುದಾನಕ್ಕೆ ಒಳಪಡಿಸಲಾಗಿರುವಂತಹ ಬೋಧಕರ ವೇತನವನ್ನು ಪ್ರಥಮ 5 ವರ್ಷಗಳ ಅವಧಿಗೆ ಇಲಾಖೆಗೆ ನಿಗದಿ ಪಡಿಸಲಾದ ಯೋಜನೆ ಹಂಚಿಕೆಯಲ್ಲಿಯೇ ವೆಚ್ಚ ಭರಿಸತಕ್ಕದ್ದು.

ಪ್ರತೀ ವರ್ಷವೂ ಮೇಲ್ಕಂಡ ಷರತ್ತುಗಳನ್ನು ಪೂರೈಸಿರುವ ಕುರಿತು ಸಂಬಂಧಪಟ್ಟ ಜಂಟಿ ನಿರ್ದೇಶಕರು ದೃಢೀಕರಿಸಿದ ನಂತರವೇ ಆಯಾ ವರ್ಷದ ವೇತನಾನುದಾನ ಬಿಡುಗಡೆ ಮಾಡುವಂತೆ ಆಯುಕ್ತಾಲಯಕ್ಕೆ ಸೂಚಿಸಲಾಗಿದೆ. ನ್ಯೂನ್ಯತೆಗಳಾದಲ್ಲಿ ಸಂಬಂಧಪಟ್ಟ ಜಂಟಿ ನಿರ್ದೇಶಕರೇ ಜವಾಬ್ದಾರರಾಗಿರುತ್ತಾರೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ:860/ವೆಚ್ಚ-8/2010, ದಿನಾಂಕ: 28-06-2011 ಮತ್ತು ಆಇ: 859/ವೆಚ್ಚ-8/2010, ದಿನಾಂಕ: 02-07-2011 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಯು.ಬಿ.ಉಳವಿ

ಪಿ.ಆರ್. ನಂ. 2758

ಸರ್ಕಾರದ ಅಧೀನ ಕಾರ್ಯದರ್ಶಿ

ಶಿಕ್ಷಣ ಇಲಾಖೆ (ಕಾಲೇಜು ಶಿಕ್ಷಣ)

ಶಿಕ್ಷಣ ಸಚಿವಾಲಯ

ವಿಷಯ : ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರು ನಡೆಸುತ್ತಿರುವ **ನವಚೇತನ ಸಾಮಾಜಿಕ ಮತ್ತು ಶೈಕ್ಷಣಿಕ ಸಂಸ್ಥೆ (ರಿ) ಇವರ ವ್ಯಾಪ್ತಿಯಲ್ಲಿ ಬರುವ ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಪೂರಿಗಾಲಿಯ ಪಿ.ಎಲ್.ಎನ್. ಪ್ರಥಮ ದರ್ಜೆ ಕಲಾ ಕಾಲೇಜು** ಹಾಗೂ ಅಲ್ಲಿನ ಬೋಧಕರ ಹುದ್ದೆಗಳನ್ನು ವೇತನಾನುದಾನದ ವ್ಯಾಪ್ತಿಗೆ ಒಳಪಡಿಸುವ ಕುರಿತು.

ಓದಲಾಗಿದೆ:
1. ಸರ್ಕಾರಿ ಅಧಿಸೂಚನೆ ಸಂಖ್ಯೆ: ಇಡಿ 551 ಯುಪಿಸಿ 99 ದಿನಾಂಕ: 07-08-2003
2. ಸರ್ಕಾರಿ ಅಧಿಸೂಚನೆ ಸಂಖ್ಯೆ: ಇಡಿ 30 ಯುಪಿಸಿ 2008 ದಿನಾಂಕ: 13-05-2009
3. ಸರ್ಕಾರಿ ಅಧಿಸೂಚನೆ ಸಂಖ್ಯೆ: ಇಡಿ 30 ಯುಪಿಸಿ 2008 ದಿನಾಂಕ: 05-10-2009
4. ಕಾಲೇಜು ಶಿಕ್ಷಣ ಆಯುಕ್ತರ ಪತ್ರ ಸಂಖ್ಯೆ: ಕಾಶಿಇ:02: ಪ.ಜಾ.ಪ.ಪಂ:ವೇಅನು:ಗುವಿ:2010-11, ಶಾಕಾವಿ-2, ದಿನಾಂಕ:07-09-2010.
5. ಸಚಿವ ಸಂಪುಟದ ಟಿಪ್ಪಣಿ ಸಂಖ್ಯೆ: ಸಿ:499:2011, ದಿನಾಂಕ:28-10-2011.
6. ಸರ್ಕಾರದ ಆದೇಶ ಸಂಖ್ಯೆ: ಇಡಿ 163 ಯುಪಿಸಿ 2010, ದಿನಾಂಕ: 11-11-2011.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಸರ್ಕಾರಿ ಅಧಿಸೂಚನೆಯನ್ವಯ ರಚಿಸಲಾದ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕಾಲೇಜು ಶಿಕ್ಷಣ) ನಿಯಮಗಳು 2003ರ ನಿಯಮ 8(1)ರನ್ವಯ ದಿನಾಂಕ 01-06-1987ರ ನಂತರ ಪ್ರಾರಂಭಿಸಲಾದ ಯಾವುದೇ ಖಾಸಗಿ ಪದವಿ ಕಾಲೇಜುಗಳು ಮತ್ತು ವಿಷಯಗಳನ್ನು ಅನುದಾನದ ವ್ಯಾಪ್ತಿಗೆ ಒಳಪಡಿಸಲು ಅವಕಾಶವಿರುವುದಿಲ್ಲ.

ರಾಜ್ಯದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಗಳು ದಿನಾಂಕ:01-06-1987 ರಿಂದ ದಿನಾಂಕ 31-3-1995ರ ಅವಧಿಯಲ್ಲಿ ಪ್ರಾರಂಭಿಸಿ ನಡೆಸಲಾಗುತ್ತಿರುವ ಕಾಲೇಜುಗಳು ಮತ್ತು ಕೋರ್ಸ್‌ಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಸರ್ಕಾರ ತೀರ್ಮಾನಿಸಿ ಈ ಕುರಿತು ನಿಯಮಗಳನ್ನು ರಚಿಸಲು ದಿನಾಂಕ 18-02-2009ರಂದು ಜರುಗಿದ ಸಚಿವ ಸಂಪುಟ ಸಭೆಯು ಅನುಮೋದನೆ ನೀಡಿದೆ.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಯಿಂದ ನಡೆಸಲ್ಪಡುತ್ತಿರುವ ಖಾಸಗಿ ಪದವಿ ಕಾಲೇಜುಗಳಿಗೆ ಸಂಬಂಧಿಸಿದಂತೆ ಮಾತ್ರ ಮೇಲೆ ಹೇಳಿದ ನಿಯಮ 8ಕ್ಕೆ ಸೂಕ್ತ ಸೇರ್ಪಡೆ ಮಾಡಿ ದಿನಾಂಕ 01-06-1987 ರಿಂದ 31-03-95ರ ಅವಧಿಯಲ್ಲಿ ಪ್ರಾರಂಭಿಸಲ್ಪಟ್ಟ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರು ನಡೆಸುತ್ತಿರುವ ಪ್ರಥಮ ದರ್ಜೆ ಕಾಲೇಜುಗಳನ್ನು ವೇತನಾನುದಾನಕ್ಕೊಳಪಡಿಸಲು ಓದಲಾದ (2)ರ ದಿನಾಂಕ 13-05-2009ರ ಅಧಿಸೂಚನೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಅದರಂತೆ ಓದಲಾದ (3)ರ ದಿನಾಂಕ 05-10-2009ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಡಳಿತ ಮಂಡಳಿಗಳಿಗೆ ಸೇರಿದ ಶಿಕ್ಷಣ ಸಂಸ್ಥೆಗಳ ವತಿಯಿಂದ ದಿನಾಂಕ 01-6-1987 ರಿಂದ 31-03-1995ರ ಅವಧಿಯಲ್ಲಿ ಪ್ರಾರಂಭಿಸಿ ನಡೆಸಲ್ಪಡುತ್ತಿರುವ ಪ್ರಥಮ ದರ್ಜೆ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಸರ್ಕಾರವು ಕೆಲವು ಮಾನದಂಡಗಳನ್ನು ನಿಗದಿಪಡಿಸಿ ಆದೇಶ ಹೊರಡಿಸಿದೆ. ಮೇಲೆ ಓದಲಾದ (4)ರ ದಿನಾಂಕ 05-10-2010ರ ಪ್ರಸ್ತಾವನೆಯಲ್ಲಿ ಕಾಲೇಜು ಶಿಕ್ಷಣ ಆಯುಕ್ತರು ಸದರಿ ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರನ್ನು ವೇತನಾನುದಾನಕ್ಕೆ ಒಳಪಡಿಸುವ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೆ. ಸದರಿ ಕಾಲೇಜನ್ನು ಹಾಗೂ ಅದರಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಹ ಉಪನ್ಯಾಸಕರನ್ನು ವೇತನಾನುದಾನದ ವ್ಯಾಪ್ತಿಗೆ ಒಳಪಡಿಸುವ ಕುರಿತು ಆರ್ಥಿಕ ಇಲಾಖೆಯ ಸಹಮತಿ ಕೋರಲಾಗಿತ್ತು. ಈಗಾಗಲೇ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ನಡೆಸುತ್ತಿರುವ 5 ಕಾಲೇಜುಗಳನ್ನು ವೇತನಾನುದಾನದ ವ್ಯಾಪ್ತಿಗೆ ಒಳಪಡಿಸುವ ಕುರಿತು ವಿಧಿಸಲಾಗಿದ್ದ ಷರತ್ತುಗಳೊಂದಿಗೆ ಹೆಚ್ಚುವರಿಯಾಗಿ ಕೆಲವು ಷರತ್ತುಗಳನ್ನು ವಿಧಿಸಿ ಅವುಗಳನ್ನು ಪೂರೈಸಿದ್ದಲ್ಲಿ ಎರಡನೇ ಹಂತವಾಗಿ ವೇತನಾನುದಾನದ ವ್ಯಾಪ್ತಿಗೆ ಒಳಪಡಿಸಲು ಆರ್ಥಿಕ ಇಲಾಖೆಯು ತಿಳಿಸಿದೆ. ಆದರೆ, ಪ್ರಥಮ ಹಂತವಾಗಿ ವೇತನಾನುದಾನಕ್ಕೆ ಒಳಪಡಿಸಲಾದ 5 ಕಾಲೇಜುಗಳಿಗೆ ವಿಧಿಸದೇ ಇದ್ದ ಹೆಚ್ಚುವರಿ ಷರತ್ತುಗಳನ್ನು ವಿಧಿಸಿತ್ತು. ಈ ಹೆಚ್ಚುವರಿ ಷರತ್ತುಗಳನ್ನು ವಿಧಿಸದಂತೆ ವಿನಾಯಿತಿ ನೀಡುವಂತೆ ಸಚಿವ ಸಂಪುಟದ ಅನುಮೋದನೆ ಕೋರಲಾಗಿದ್ದು, ಸಚಿವ ಸಂಪುಟವು ಮೇಲೆ ಓದಲಾದ (5)ರಲ್ಲಿ ಆರ್ಥಿಕ ಇಲಾಖೆಯು ಹೆಚ್ಚುವರಿಯಾಗಿ ವಿಧಿಸಿರುವ ಷರತ್ತುಗಳನ್ನು ಸಡಿಲಿಸಿ, ಸದರಿ ಕಾಲೇಜು ಹಾಗೂ ಇತರೆ 9 ಕಾಲೇಜುಗಳನ್ನು ಮತ್ತು ಅವುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅರ್ಹ ಬೋಧಕರನ್ನು ವೇತನಾನುದಾನದ ವ್ಯಾಪ್ತಿಗೆ ಒಳಪಡಿಸಲು ಅನುಮತಿ ನೀಡಿದೆ. ಅದರಂತೆ, ಕಾಲೇಜು ಶಿಕ್ಷಣ ನಿರ್ದೇಶನಾಲಯದ ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸಲಾದ ಅಭ್ಯರ್ಥಿಗಳ ವಿದ್ಯಾರ್ಹತೆ, ವಿಷಯಗಳ ಕಾರ್ಯಭಾರ ಮತ್ತು ಮೀಸಲಾತಿ ಪರಿಶೀಲಿಸಿ ಸದರಿ ಕಾಲೇಜನ್ನು ಮತ್ತು ಕಾಲೇಜಿನಲ್ಲಿ ವಿಷಯವಾರು ಹುದ್ದೆಗಳ ಎದುರು ಕಾರ್ಯನಿರ್ವಹಿಸುತ್ತಿರುವ ಅರ್ಹ ಉಪನ್ಯಾಸಕರುಗಳನ್ನು ವೇತನಾನುದಾನದ ವ್ಯಾಪ್ತಿಗೆ ಈಗಾಗಲೇ ಮೇಲೆ ಓದಲಾದ (6)ರ ಆದೇಶದಲ್ಲಿ ಒಳಪಡಿಸಲಾಗಿರುತ್ತದೆ. ಆದರೆ, ದೈಹಿಕ ಶಿಕ್ಷಣ ಬೋಧಕರ ವಿಷಯದಲ್ಲಿ ಪ್ರಸ್ತಾಪಿಸಲಾಗಿದ್ದ ಬೋಧಕರು ನಿಗಧಿತ ವಿದ್ಯಾರ್ಹತೆಯನ್ನು ಹೊಂದದೇ ಇದ್ದ ಪ್ರಯುಕ್ತ ಸದರಿ ವಿಷಯವನ್ನು ಹಾಗೂ ಅದನ್ನು ಬೋಧಿಸುತ್ತಿದ್ದ ಬೋಧಕರನ್ನು ವೇತನಾನುದಾನದ ವ್ಯಾಪ್ತಿಗೆ ತರಲಾಗಿರಲಿಲ್ಲ. ನಂತರದಲ್ಲಿ ದೈಹಿಕ ಶಿಕ್ಷಣ ಬೋಧಕರ ಹುದ್ದೆಗೆ ಪ್ರಸ್ತಾಪಿಸಲಾಗಿದ್ದ ಶ್ರೀ ರಮೇಶ. ಆರ್. ಇವರು ಜನವರಿ 2009ರಂದು ಎಂ.ಫಿಲ್. ಪದವಿ ಪಡೆದಿರುವ ಕುರಿತು ಕಾಲೇಜಿನ ಆಡಳಿತ ಮಂಡಳಿಯು ಸರ್ಕಾರಕ್ಕೆ ಸಲ್ಲಿಸಿರುವ ದಿನಾಂಕ: 17-11-2011ರ ಪತ್ರದಲ್ಲಿ ದಾಖಲಾತಿಗಳನ್ನು ಒದಗಿಸಲಾದ ಹಿನ್ನೆಲೆಯಲ್ಲಿ ಪ್ರಕರಣವನ್ನು ಪುನರ್ ಪರಿಶೀಲಿಸಲಾಗಿ ಶ್ರೀ ರಮೇಶ. ಆರ್. ಇವರು ದಿನಾಂಕ: 11-07-2009ರ ಪೂರ್ವದಲ್ಲಿ ಎಂ.ಫಿಲ್. ಪದವಿ ಪಡೆದಿರುವ ಪ್ರಯುಕ್ತ ಒಂದು ದೈಹಿಕ ಶಿಕ್ಷಣ ಬೋಧಕರ ಹುದ್ದೆ ಮಂಜೂರು ಮಾಡಬಹುದಾಗಿರುವುದರಿಂದ, ಶ್ರೀ ರಮೇಶ. ಆರ್. ಅವರನ್ನು ಯುಜಿಸಿ ವೇತನ ಶ್ರೇಣಿಯಲ್ಲಿ ಈ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಅನುದಾನದ ವ್ಯಾಪ್ತಿಗೆ ಒಳಪಡಿಸಲು ಸರ್ಕಾರ ತೀರ್ಮಾನಿಸಿದೆ.

ಆದ್ದರಿಂದ ಈ ಆದೇಶ

ಸರ್ಕಾರದ ಆದೇಶ ಸಂಖ್ಯೆ: ಇಡಿ 163 ಯುಪಿಸಿ 2010 ಬೆಂಗಳೂರು, ದಿನಾಂಕ: 02-12-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಡಳಿತ ಮಂಡಳಿಗಳಿಗೆ ಸೇರಿದ ಶಿಕ್ಷಣ ಸಂಸ್ಥೆಗಳ ವತಿಯಿಂದ ದಿನಾಂಕ 01-06-1987 ರಿಂದ 31-03-1995ರ ಅವಧಿಯಲ್ಲಿ ಪ್ರಾರಂಭಿಸಿ ನಡೆಸಲ್ಪಡುತ್ತಿರುವ **ನವಚೇತನ ಸಾಮಾಜಿಕ ಮತ್ತು ಶೈಕ್ಷಣಿಕ ಸಂಸ್ಥೆ (ರಿ) ಇವರ ವ್ಯಾಪ್ತಿಯಲ್ಲಿ ಬರುವ ಮಂಡ್ಯ ಜಿಲ್ಲೆ ಮಳವಳ್ಳಿ ಪೂರಿಗಾಲಿಯ ಪಿ.ಎಲ್.ಎನ್. ಪ್ರಥಮ ದರ್ಜೆ ಕಲಾ ಕಾಲೇಜು** ಇಲ್ಲಿ ಒಂದು ದೈಹಿಕ ಶಿಕ್ಷಣ ಬೋಧಕರ ಹುದ್ದೆಯನ್ನು ಹಾಗೂ ಸದರಿ ಹುದ್ದೆಯ ಎದುರು ಕರ್ತವ್ಯ ನಿರ್ವಹಿಸುತ್ತಿರುವ ಈ ಕೆಳಕಂಡ ಅರ್ಹ ಸಹಾಯಕ ಪ್ರಾಧ್ಯಾಪಕರನ್ನು ಕೆಳಕಂಡ ಷರತ್ತಿಗೊಳಪಟ್ಟು ಈ ಆದೇಶ ಹೊರಡಿಸಿದ ದಿನಾಂಕದಿಂದ ಆರ್ಥಿಕ ಸೌಲಭ್ಯದೊಂದಿಗೆ ಜಾರಿಗೆ ಬರುವಂತೆ ವೇತನಾನುದಾನದ ವ್ಯಾಪ್ತಿಗೆ ತರಲಾಗಿದೆ.

ಕ್ರಮ ಸಂಖ್ಯೆ	ವೇತನಾನುದಾನಕ್ಕೆ ಒಳಪಡಿಸಿದ ಬೋಧಕರ ಹೆಸರು	ವೇತನಾನುದಾನಕ್ಕೆ ಒಳಪಡಿಸಿದ ಹುದ್ದೆ/ವಿಷಯ	ಪರಿಗಣಿಸಲಾದ ಮೀಸಲಾತಿ	ವೇತನಾನುದಾನಕ್ಕೆ ಒಳಪಡಿಸಿದ ಹುದ್ದೆಗಳ ಸಂಖ್ಯೆ	ಕಾರ್ಯಭಾರ	ವೇತನ ಶ್ರೇಣಿ
1	ರಮೇಶ. ಆರ್.	ದೈಹಿಕ ಶಿಕ್ಷಣ . ನಿರ್ದೇಶಕರು	ಅನ್ವಯಿಸುವುದಿಲ್ಲ	01	–	ಯುಜಿಸಿ

1. ಈ ಆದೇಶದಲ್ಲಿ ವೇತನಾನುದಾನಕ್ಕೆ ಒಳಪಟ್ಟ ಬೋಧಕರ ಸೇವೆ ಕುರಿತು ಯಾವುದೇ ಅನರ್ಹತೆ ಕಂಡು ಬಂದಲ್ಲಿ ಯಾವುದೇ ಮುನ್ಸೂಚನೆಯಿಲ್ಲದೆ, ವೇತನಾನುದಾನವನ್ನು ಹಿಂದಕ್ಕೆ ಪಡೆಯುವ ಷರತ್ತಿಗೊಳಪಟ್ಟಿದೆ.
2. ಈ ನೇಮಕಾತಿಗಳಲ್ಲಿ ಮೀಸಲಾತಿಯಲ್ಲಿ ವ್ಯತ್ಯಾಸವಾಗಿರುವುದು ಕಂಡುಬಂದಲ್ಲಿ ಅಂಥವರ ವೇತನಾನುದಾನವನ್ನು ಸಹ ಹಿಂದಕ್ಕೆ ಪಡೆಯುವ ಷರತ್ತಿಗೊಳಪಟ್ಟಿದೆ.
3. ವೇತನಾನುದಾನದ ವ್ಯಾಪ್ತಿಗೆ ಒಳಪಟ್ಟಂತಹ ಮೇಲ್ಕಂಡ ಉಪನ್ಯಾಸಕರ ವೇತನವನ್ನು ಆದೇಶ ಹೊರಡಿಸಿದ ದಿನಾಂಕದಿಂದ ವಿಸ್ತರಿಸಿರುವ ವೇತನ ಶ್ರೇಣಿಯ ಕನಿಷ್ಠ ಮೂಲ ವೇತನದಲ್ಲಿ ನಿಗದಿಪಡಿಸತಕ್ಕದ್ದು. ಹಾಗೂ ವೇತನಾನುದಾನದ ವ್ಯಾಪ್ತಿಗೆ ಒಳಪಡಿಸಲಾದ ಪೂರ್ವದಲ್ಲಿ ಸಲ್ಲಿಸಿರುವ ಸೇವೆಯನ್ನು ಯಾವುದೇ ಸೇವಾ ಹಾಗೂ ಪಿಂಚಣಿ ಸೌಲಭ್ಯಗಳಿಗೆ ಪರಿಗಣಿಸುವಂತಿಲ್ಲ.

4. ದಿನಾಂಕ 11-07-2009ರ ಪೂರ್ವದಲ್ಲಿ ನೇಮಕಾತಿ ಹೊಂದಿದವರು ಎಂ.ಫಿಲ್. ಪದವಿ ಹೊಂದಿದ್ದಲ್ಲಿ ಯುಜಿಸಿ ವೇತನ ಶ್ರೇಣಿ ನೀಡಲು ಪರಿಗಣಿಸಲಾಗುತ್ತಿದೆ. ಆದರೆ, ಈ ಪ್ರಕರಣದಲ್ಲಿರುವ ಬೋಧಕರು ದಿನಾಂಕ: 11-07-2009ರ ಪೂರ್ವದಲ್ಲಿ ನಡೆದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದು, ಅವರುಗಳ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ವಿಶ್ವವಿದ್ಯಾಲಯಗಳು ದಿನಾಂಕ:11-07-2009ರ ನಂತರ ವಿತರಿಸಿದೆ. ಈ ಹಿನ್ನೆಲೆಯಲ್ಲಿ ಅವರುಗಳಿಗೆ ಯುಜಿಸಿ ವೇತನ ಶ್ರೇಣಿ ವಿಸ್ತರಿಸುವ ಸಂಬಂಧ ಯಾವ ದಿನಾಂಕವನ್ನು ಅಂದರೆ ಪರೀಕ್ಷೆ ನಡೆದ ದಿನಾಂಕ ಅಥವಾ ಪ್ರಮಾಣ ಪತ್ರ ವಿತರಿಸುವ ದಿನಾಂಕ ಈ ಎರಡರಲ್ಲಿ ಯಾವ ದಿನಾಂಕ ಪರಿಗಣಿಸಬೇಕು ಎಂಬುದರ ಕುರಿತು ಇಂತಹ ಬೇರೆ ಪ್ರಕರಣಗಳಲ್ಲಿ ಸಿಆಸು ಇಲಾಖೆ / ಆರ್ಥಿಕ ಇಲಾಖೆಯೊಡನೆ ಸಮಾಲೋಚಿಸಲಾಗುತ್ತಿದೆ. ಆದುದರಿಂದ, ಒಂದು ವೇಳೆ ಸರ್ಕಾರವು ವೇತದಾನುದಾನ ವ್ಯಾಪ್ತಿಗೆ ತರಲಾದ ಉಪನ್ಯಾಸಕರ ಎಂ.ಫಿಲ್. ವಿದ್ಯಾರ್ಹತೆಯನ್ನು ಪ್ರಮಾಣ ಪತ್ರ ವಿತರಿಸುವ ದಿನಾಂಕದಿಂದ ಪರಿಗಣಿಸುವಂತೆ ನಿರ್ಧಾರ ಕೈಗೊಂಡಲ್ಲಿ ಯುಜಿಸಿ ವೇತನ ಶ್ರೇಣಿ ಹಿಂದಕ್ಕೆ ಪಡೆದು ಅಂತಹ ಉಪನ್ಯಾಸಕರುಗಳಿಗೆ ರಾಜ್ಯ ವೇತನ ಶ್ರೇಣಿಯಲ್ಲಿ ವೇತನ ಪುನರ್ ಪರಿಷ್ಕರಿಸುವ ಷರತ್ತಿಗೊಳಪಟ್ಟಿರುತ್ತದೆ.

5. ವೇತನಾನುದಾನ ವ್ಯಾಪ್ತಿಗೆ ತರಲಾದ ಉಪನ್ಯಾಸಕರ ಕಾರ್ಯಭಾರದಲ್ಲಿ ಕೊರತೆ ಉದ್ಭವಿಸಿದ ಪಕ್ಷದಲ್ಲಿ ಅಂತಹ ಉಪನ್ಯಾಸಕರುಗಳನ್ನು ಕಾರ್ಯಭಾರ ಇರುವಂತಹ ಅನುದಾನಿತ ಕಾಲೇಜು / ಸರ್ಕಾರಿ ಕಾಲೇಜುಗಳ ಕಾರ್ಯಭಾರದ ಎದುರಾಗಿ ನಿಯೋಜನೆ ಮೇಲೆ ಮರು ಹಂಚಿಕೆ ಮಾಡುವ ಷರತ್ತಿಗೊಳಪಟ್ಟಿದೆ.

6. ಸಂಸ್ಥೆಯ ಬೈಲಾದಲ್ಲಿ ನಿಗಧಿಪಡಿಸಿರುವಂತೆ ಆಡಳಿತ ಮಂಡಳಿಯ ಎಲ್ಲಾ ಪದಾಧಿಕಾರಿಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರೇ ಆಗಿರಬೇಕು. ಒಂದು ವೇಳೆ ಅನ್ಯ ವರ್ಗದ ವ್ಯಕ್ತಿಯನ್ನು ಆಡಳಿತ ಮಂಡಳಿಯ ಪದಾಧಿಕಾರಿಗಳಾಗಿ ಆಯ್ಕೆ ಮಾಡಿದ್ದಲ್ಲಿ ವೇತನಾನುದಾನ ಹಿಂಪಡೆಯುವ ಷರತ್ತಿಗೊಳಪಟ್ಟಿದೆ.

7. ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕಾಲೇಜು ಶಿಕ್ಷಣ) ನಿಯಮಗಳು, 2003ರ ನಿಯಮ 15(ಇ) ರಡಿಯಲ್ಲಿ ನಿಗಧಿಪಡಿಸಿರುವ ಅಪೆಂಡಿಕ್ಸ್ (2)ರಲ್ಲಿ ಸೂಚಿಸಿರುವಂತೆ ಬೋಧನಾ ಕೊಠಡಿಗಳು, ಪ್ರಯೋಗಾಲಯಗಳು, ಶೌಚಾಲಯ ಇತ್ಯಾದಿಗಳನ್ನು ಒಳಗೊಂಡ ಮೂಲಭೂತ ಸೌಕರ್ಯಗಳನ್ನು ಸಂಸ್ಥೆಯು ಒದಗಿಸಿರತಕ್ಕದ್ದು.

8. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ನಡೆಸುತ್ತಿರುವ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಸಂಧರ್ಭದಲ್ಲಿ ಅಂತಹ ಕಾಲೇಜುಗಳಲ್ಲಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಕನಿಷ್ಠ ಶೇಕಡಾ 35 ರಷ್ಟು. ಇರತಕ್ಕದ್ದು. ಪ್ರವೇಶಾವಕಾಶದಲ್ಲಿ ನಿಗದಿಪಡಿಸಿರುವ ವಿದ್ಯಾರ್ಥಿಗಳ ಕನಿಷ್ಠ ಪ್ರಮಾಣವನ್ನು ವಿವರವಾಗಿ ಅನುಸರಿಸತಕ್ಕದ್ದು. ತಪ್ಪಿದ್ದಲ್ಲಿ ವೇತನಾನುದಾನ ಹಿಂಪಡೆಯುವ ಷರತ್ತಿಗೊಳಪಟ್ಟಿದೆ.

9. ವಿಶ್ವವಿದ್ಯಾಲಯದವರು ನಿಗಧಿಪಡಿಸಿರುವ ಸರಾಸರಿ ಪ್ರವೇಶಾತಿಗೆ ಸಮಾನಾಂತರವಾಗಿ ಈ ಕಾಲೇಜುಗಳು ಕನಿಷ್ಠ ಪ್ರವೇಶಾತಿಯನ್ನು ಮಾಡಿಕೊಳ್ಳತಕ್ಕದ್ದು. ಮತ್ತು ಪ್ರವೇಶಾತಿ (enrollment) ಪಡೆದ ಕಾಲೇಜಿನ ವಿದ್ಯಾರ್ಥಿಗಳ ಪೈಕಿ ಕನಿಷ್ಠ ಶೇಕಡ 75ರಷ್ಟು ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತುಕೊಳ್ಳುವಂತೆ ಕ್ರಮವಹಿಸತಕ್ಕದ್ದು. ತಪ್ಪಿದ್ದಲ್ಲಿ ವೇತನಾನುದಾನ ಹಿಂಪಡೆಯುವ ಷರತ್ತಿಗೊಳಪಟ್ಟಿದೆ.

10. ಇಂತಹ ಕಾಲೇಜುಗಳಲ್ಲಿನ ಪರೀಕ್ಷಾ ಫಲಿತಾಂಶಗಳು ಸಂಬಂಧಪಟ್ಟ ವಿಶ್ವವಿದ್ಯಾಲಯದ ಮಾನ್ಯತೆ ಪಡೆದ ಇತರೆ ಕಾಲೇಜುಗಳಲ್ಲಿನ ಸರಾಸರಿ ಫಲಿತಾಂಶಕ್ಕಿಂತ ಕಡಿಮೆ ಇರತಕ್ಕದ್ದಲ್ಲ. ತಪ್ಪಿದಲ್ಲಿ ವೇತನಾನುದಾನ ಹಿಂಪಡೆಯುವ ಷರತ್ತಿಗೊಳಪಟ್ಟಿದೆ.

11. ಈ ರೀತಿ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ಪ್ರಾರಂಭವಾದ ಪದವಿ ಕಾಲೇಜುಗಳನ್ನು ಮಧ್ಯದಲ್ಲಿ ಯಾವುದೇ ವಿಚ್ಛಿನ್ನತೆ ಇಲ್ಲದೆ ಸತತವಾಗಿ ನಡೆಸಿರಬೇಕು. ವಿಚ್ಛಿನ್ನತೆ ಉಂಟಾದಲ್ಲಿ ವೇತನಾನುದಾನ ಹಿಂಪಡೆಯುವ ಷರತ್ತಿಗೊಳಪಟ್ಟಿದೆ.]

12. ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕಾಲೇಜು ಶಿಕ್ಷಣ) ನಿಯಮಗಳು 2003ರ ಮತ್ತು ಇತರ ಸಂಬಂಧಿತ ನಿಯಮಗಳಡಿಯಲ್ಲಿ ನಿಗಧಿಪಡಿಸಿರುವಂತೆ ಮಾದರಿ ಸಿಬ್ಬಂದಿಯನ್ವಯ ನೇಮಕಾತಿ ಮಾಡಿಕೊಳ್ಳತಕ್ಕದ್ದು. ಪ್ರತಿಯೊಂದು ತರಗತಿಯಲ್ಲಿ ನಿಗಧಿತ ಕನಿಷ್ಠ ಮಟ್ಟದ ವಿದ್ಯಾರ್ಥಿ ಹಾಜರಾತಿ ಸಂಖ್ಯಾಬಲವನ್ನು ಹೊಂದಿರತಕ್ಕದ್ದು. ಪದವಿ ಕಾಲೇಜುಗಳಿಗೆ ಸಂಬಂಧಪಟ್ಟಂತೆ ಪ್ರತಿಯೊಂದು ತರಗತಿಯಲ್ಲಿ ಕನಿಷ್ಠ 40 ವಿದ್ಯಾರ್ಥಿಗಳ ಹಾಜರಾತಿ ಕಡ್ಡಾಯವಾಗಿರಬೇಕು. ಭಾಷಾ ವಿಷಯದಲ್ಲಿ ಕನಿಷ್ಠ 10 ವಿದ್ಯಾರ್ಥಿಗಳು ಹಾಗೂ ಐಚ್ಛಿಕ ವಿಷಯಗಳಿಗೆ ಕನಿಷ್ಠ 15 ವಿದ್ಯಾರ್ಥಿಗಳ ಸಂಖ್ಯೆ ಇರಬೇಕು.

After considering the proposal, Government are pleased to accord relaxation of Sl.No. 5 and 6 of the guidelines of the Annexure to the G.O. No. FEE 115 FFM 2001, dated : 26-02-2004 for diversion of 1.505 ha. of forest land in F.Sy.No. 52 (Block No XXII-25) of Kurli Village in Katur Range in Mundgod Taluk for removal of stones for buildings, roads and other civil works in favour of the Executive Engineer, Public Works Department and Ports and Inland Water Transport Department, Sirsi Division, Sirsi, Uttara Kannada District.

This order is issued with immediate effect and until further orders.

By Order and in the name of the Governor of Karnataka

G. H. ANASUYAMMA

PR No. 2805

Under Secretary to Government,

Forest, Ecology and Environment Department.

FOREST, ECOLOGY AND ENVIRONMENT SECRETARIAT

Sub: Constitution of Committee for monitoring the implementation of the provision of fly ash Notification issued by MoEF, GoI.

Read:
1. Notification No. S.O. 763 (E) dated : 14-09-1999.
2. Notification No. 979 (E) dated : 27-08-2003.
3. Amended Notification No. S.O. 2804 (E) dated : 03-11-2009.

PREAMBLE:

The Ministry of Environment and Forests (MoEF), Government of India have issued the directions with regard to the use of fly ash, bottom ash and pond as generated by the thermal power plants in the manufacture of bricks and other construction activities vide Notification read at (1) above. Specification for use of ash-based products were proposed in the draft Notification read at (2) above and the same have been confirmed vide Notification read at (3) above.

The Ministry of Environment and Forests, Government of India, New Delhi through the Notification read at (3) above have proposed for constitution of a monitoring committee under the chairmanship of Secretary, Department of Environment with representatives from Department of Power, Department of Mining, Road and Building Construction Department and State Pollution Control Board for the purpose of monitoring and facilitating the implementation of provisions of the notifications aread above. The Committee also need to deal with any unresolved issue by Dispute Settlement Committee as prescribed in sub-paragraph (4) of paragraph 1 of the Notification read at (3) above at the State level. The Committee is also to be empowered to suitably modify (waive or relax) the stipulation under sub-paragraph (1) in case of non-availability of fly ash in sufficient quantitites from thermal power plant as certified by the said power plants. The Committee is to meet at least once in every quarter.

The Government have considered the issue and have decided to constitute monitoring Committee as under. Hence this order.

GOVERNMENT ORDER NO. FEE 75 ENV 2011, BANGALORE, DATED: 04-06-2011.

Pursuant to the specification made at para-7 of the notification No. S.O. 2804 (E) dated 03-11-2009 and the facts and circumstances explained in the preamble the Government hereby constitutes the following monitoring Committee.

1.	Principal Secretary to Government Forest, Ecology and Environment Department	Chairman
2.	Additional Chief Secretary to Government/Principal Secretary or representative of Energy Department.	Member
3.	Secretary to Government (Ecology and Environment), Forest, Ecology and Environment Department	Member
4.	Secretary to Government, Public Works Department.	Member
5.	Director, Mines and Geology Department.	Member
6.	Member Secretary, Karnataka State Pollution Control Board	Member
7.	Special Director, Department of Forest, Ecology and Environment	Member Secretary

The Committee shall have the following functions and responsibilities :

1. The Committee shall monitor and ensure complete utilization of fly ash, bottom ash and pond ash generated by the thermal power plant in the manufacture of bricks and other construction activity in the State in accordance with the provisions of notifications read above.

2. The Committee shall deal with unresolved issue by Dispute Settlement Committee as prescribed in sub-paragraph (4) of paragraph 1 of the notification No. S.O. 763 (E) dated : 14-09-1999, in addition to monitoring and facilitating implementation of the notification.
3. The Committee shall suitably modify (waive or relax) the stipulation under sub-paragraph (1) in case of non-availablity of fly ash in sufficient quantities from thermal power plant as certified by the said power plants.
4. The Committee shall meet at least once in every quarter and send the progress report of monitoring the implementations of the provisions of the notifications read above to the Ministry of Environment and Forests.

By Order and in the name of the Governor of Karnataka

B. MANOHAR

Under Secretary to Government,

(Ecology and Environment)

Forest, Ecology and Environment Department.

PR No. 2806

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ : ನ್ಯೂಟ್ರಿ ನ್ಯೂಟ್ರಾಸಿಟಿಕಲ್ ಮತ್ತು ಫೈಟೋಫಾರ್ಮಾಸಿಟಿಕಲ್ ಉತ್ಕೃಷ್ಟತಾ ಕೇಂದ್ರ (ಎನ್2ಪಿ2 ಸಿಓಎ) ಹಾಗೂ ಉದ್ಯಾನವನ್ನು ಮೈಸೂರಿನಲ್ಲಿ ಸ್ಥಾಪಿಸುವ ಬಗ್ಗೆ.

ಓದಲಾಗಿದೆ : ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ, ಬೆಂಗಳೂರು ಇವರ ದಿನಾಂಕ : 22-01-2011, 29-07-2011 ಮತ್ತು 12-09-2011.

ಪ್ರಸ್ತಾವನೆ :

ಮೇಲೆ ಓದಲಾದ ಪತ್ರಗಳಲ್ಲಿ ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ, ಬೆಂಗಳೂರು, ರವರು ಎನ್2ಪಿ2 ಉತ್ಕೃಷ್ಟತಾ ಕೇಂದ್ರ ಹಾಗೂ ಉದ್ಯಾನವನ್ನು ಮೈಸೂರಿನಲ್ಲಿ ; ಕೃಷಿ-ಜೈವಿಕ ತಂತ್ರಜ್ಞಾನ ಉದ್ಯಾನವನ್ನು ಧಾರವಾಡದಲ್ಲಿ ; ಸಾಗರ ಜೈವಿಕ ತಂತ್ರಜ್ಞಾನ ಉದ್ಯಾನವನ್ನು ಮಂಗಳೂರಿನಲ್ಲಿ ಮತ್ತು ಪ್ರಾಣಿ ಜೈವಿಕ ತಂತ್ರಜ್ಞಾನ ಉದ್ಯಾನವನ್ನು ಬೀದರ್‌ನಲ್ಲಿ ಸ್ಥಾಪಿಸಲು ಶಿಫಾರಸ್ಸು ಮಾಡಿರುತ್ತಾರೆ.

ಮೈಸೂರಿನಲ್ಲಿ ಸರ್ಕಾರದ ಆರ್ಥಿಕ ಸಹಾಯದೊಂದಿಗೆ ಸುಮಾರು 50 ರಿಂದ 100 ಎಕರೆ ಪ್ರದೇಶದಲ್ಲಿ ಸ್ಥಾಪಿಸುವುದಾಗಿ ಉಲ್ಲೇಖಿಸಲಾಗಿದೆ. ಮಾನ್ಯ ಮುಖ್ಯಮಂತ್ರಿಗಳು 2009-10ನೇ ಸಾಲಿನ ಮುಂಗಡ ಪತ್ರದ ಭಾಷಣದಲ್ಲಿ "ಜೈವಿಕ ತಂತ್ರಜ್ಞಾನ ಮಿಷನ್‌ನ ಶಿಫಾರಸ್ಸುಗಳನ್ನು ಕೂಲಂಕಷವಾಗಿ ಪರಿಗಣಿಸಿ, ಜೈವಿಕ ತಂತ್ರಜ್ಞಾನ ಉದ್ಯಾನಗಳನ್ನು ಬೆಂಗಳೂರಿನ ಹೊರಗೆ ಪ್ರಮುಖ ನಗರಗಳಲ್ಲಿ ಸ್ಥಾಪಿಸಲಾಗುವುದು" ಎಂದು ತಿಳಿಸಿರುತ್ತಾರೆ.

ಮಾತಂ, ಜೈತಂ ಮತ್ತು ವಿತಂ ಇಲಾಖೆಯಡಿ ಕಾರ್ಯನಿರ್ವಹಿಸುವ ಕೆಬಿಟ್ಸ್ (ನೋಂದಾಯಿತ ಸೊಸೈಟಿ), ದಿನಾಂಕ : 12-11-2010 ರಂದು ಟೆಂಡರ್ ಪ್ರಕಟಣೆಯನ್ನು (ಆರ್.ಎಫ್.ಪಿ.) ಹೊರಡಿಸಿ ಜಿಲ್ಲಾ ವಾಣಿಜ್ಯ ಕೇಂದ್ರದಿಂದ 15 ಕಿ.ಮೀ. ಒಳಗೆ ಕನಿಷ್ಠ 50 ಎಕರೆ ಭೂಮಿಯನ್ನು ಹೊಂದಿರುವ ಆಸಕ್ತಿಯುಳ್ಳವರಿಂದ ಎನ್2ಪಿ2 ಉತ್ಕೃಷ್ಟತಾ ಕೇಂದ್ರ ಮತ್ತು ಉದ್ಯಾನವನ್ನು ಅಭಿವೃದ್ಧಿಪಡಿಸಲು ಬಿಡ್‌ಗಳನ್ನು ಆಹ್ವಾನಿಸಿತು. ಜೈವಿಕ ತಂತ್ರಜ್ಞಾನ ಯೋಜನೆ/ಕೇಂದ್ರ/ಎನ್2ಪಿ2/ತತ್ಸಮಾನ ಜೈವಿಕ ತಂತ್ರಜ್ಞಾನ ಕ್ಷೇತ್ರದ ಸಂಶೋಧನಾ/ಉತ್ಪಾದನಾ ಕೇಂದ್ರವನ್ನು ಅಭಿವೃದ್ಧಿಪಡಿಸಿದ ಅನುಭವವುಳ್ಳ ಸಂಶೋಧನಾ ಸಂಸ್ಥೆಗಳ ಶೈಕ್ಷಣಿಕ ಸಂಸ್ಥೆಯ ಅಭಿವೃದ್ಧಿದಾರರು ಪ್ರಸ್ತಾವನೆಗಳನ್ನು ಸಲ್ಲಿಸಲು ಕೋರಲಾಗಿದ್ದು, ಪ್ರಸ್ತಾವನೆ ಸಲ್ಲಿಕೆಗೆ ಕೊನೆಯ ದಿನವಾದ ದಿನಾಂಕ : 27-12-2010ರಂದು ಕೆಬಿಟ್ಸ್ ಸಂಸ್ಥೆಗೆ ಜೆಎಸ್‌ಎಸ್ ಮಹಾವಿದ್ಯಾ ಪೀಠ, ಮೈಸೂರು ಹಾಗೂ ಎಂ.ಕೆ.ಇಂಟರ್‌ನ್ಯಾಷನಲ್ ಗ್ರೂಪ್, ಮೈಸೂರುರವರಿಂದ ಮಾತ್ರ ಎರಡು ಪ್ರಸ್ತಾವನೆಗಳನ್ನು ಸ್ವೀಕರಿಸಲ್ಪಟ್ಟಿರುತ್ತದೆ.

ಯೋಜನಾ ನಿರ್ವಹಣಾ ಸಲಹೆಗಾರರಾದ ಮೆ. ಅರ್ನಸ್ಟ್ ಅಂಡ್ ಯಂಗ್‌ರವರು ಸಲ್ಲಿಸಿದ ಬಿಡ್ಡುಗಳ ಮೌಲ್ಯಮಾಪನ ವರದಿಯನ್ನು ಆದರಿಸಿ, ವ್ಯವಸ್ಥಾಪಕ ನಿರ್ದೇಶಕರು ಕೆಬಿಟ್ಸ್‌ರವರ ಅಧ್ಯಕ್ಷತೆಯಲ್ಲಿ ರಚಿತವಾದ ಮೌಲ್ಯಮಾಪನ ಸಮಿತಿಯು ಜೆ.ಎಸ್.ಎಸ್. ಮಹಾವಿದ್ಯಾಪೀಠ, ಮೈಸೂರುರವರನ್ನು ಯಶಸ್ವಿ ಬಿಡ್ಡುದಾರರೆಂದು ಘೋಷಿಸಿರುತ್ತದೆ.

ಕೆಬಿಟ್ಸ್ ಮತ್ತು ಯಶಸ್ವಿ ಬಿಡ್ಡುದಾರರನ್ನು ಜಂಟಿಯಾಗಿ ಒಳಗೊಂಡ 'ವಿಶೇಷ ಉದ್ದೇಶಿತ ಕಂಪನಿ' (ಎಸ್‌ಪಿಸಿ)ಯನ್ನು ಕಂಪನಿ ಅಧಿನಿಯಮ, 1956 ಅಡಿಯಲ್ಲಿ ರಚಿಸಿ ಉದ್ದೇಶಿತ ಉದ್ಯಾನದ ಅಭಿವೃದ್ಧಿ ಮತ್ತು ಕಾರ್ಯಾಚರಣೆಯನ್ನು ಕೈಗೊಳ್ಳಬೇಕಿರುತ್ತದೆ. ಕೆಬಿಟ್ಸ್, ಯಶಸ್ವಿ ಬಿಡ್ಡುದಾರರು ಮತ್ತು ಎಸ್‌ಪಿಸಿರವರು ಜಂಟಿ ಅಭಿವೃದ್ಧಿ ಒಡಂಬಡಿಕೆಯನ್ನು ಮಾಡಿಕೊಂಡು ತಮ್ಮ ಪಾಲಿನ ಹಕ್ಕು ಮತ್ತು ಬಾಧ್ಯತೆಗಳನ್ನು ಪ್ರಸ್ತುತ ಉದ್ಯಾನದ ಅಭಿವೃದ್ಧಿಯ ಪಥದಲ್ಲಿ ನಿರ್ವಹಿಸಬೇಕು. ತದನಂತರ, ಜಂಟಿ ಅಭಿವೃದ್ಧಿ ಒಡಂಬಡಿಕೆಯ ಅನುಸಾರವಾಗಿ ಯಶಸ್ವಿ ಬಿಡ್ಡಿದಾರರು ತಮ್ಮ ಒಡೆತನದ ಭೂಮಿಯನ್ನು ಎಸ್‌ಪಿಸಿಗೆ ವರ್ಗಾವಣೆ ಮಾಡಬೇಕು. ಕೆಬಿಟ್ಸ್ ಸಂಸ್ಥೆಯು ಒಬ್ಬ ನಿರ್ದೇಶಕರನ್ನು ಎಸ್‌ಪಿಸಿ ಸಮಿತಿಗೆ ನಾಮ ನಿರ್ದೇಶನ ಮಾಡುವ ಹಕ್ಕನ್ನು ಮತ್ತು ಎಸ್‌ಪಿಸಿ ಯ ಎಲ್ಲಾ ನಿರ್ಣಯಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಹಕ್ಕನ್ನು ಹೊಂದಿರುತ್ತದೆ.

ಉದ್ದೇಶಿತ ಯೋಜನೆಯ ವಿಂಗಡಣೆ ಈ ಕೆಳಗಿನಂತಿವೆ.

ಭಾಗಗಳು	ವಿವರಣೆ	ವಲಯ ಹಂಚಿಕೆ	ಸ್ವರೂಪ
ಸಂಶೋಧನೆ ಮತ್ತು ಅಭಿವೃದ್ಧಿ (ಸಂ ಮತ್ತು ಅ) ವಲಯ	ಸಂ ಮತ್ತು ಅ ಪ್ರಯೋಗಾಲಯಗಳು ಪರಿಪೋಷಣಾ ಕೇಂದ್ರ, ಪ್ರಾಯೋಗಿಕ ಸ್ಥಾವರ, ಸಾಮಾನ್ಯ ಉಪಕರಣಗಳ ಪ್ರಯೋಗಾಲಯ, ಗುಣಮಟ್ಟ ಪರೀಕ್ಷಣಾ ಸೌಲಭ್ಯ ಮತ್ತು ಔಷಧಿ ಸಸ್ಯಗಳ ಕ್ಷೇತ್ರ	ಕನಿಷ್ಟ ಶೇ. 30 ಭಾಗ ಯಾ 15 ಎಕರೆ (ಯಾವುದು ಕಡಿಮೆಯೋ ಅದಕ್ಕೆ ಒಳಪಟ್ಟು)	ಆದ್ಯಾದೇಶ

ಕೈಗಾರಿಕಾ ವಲಯ	ಅಭಿವೃದ್ಧಿ ಪಡಿಸಿದ ಕೈಗಾರಿಕಾ ಪ್ಲಾಟ್‌ಗಳು	ಕನಿಷ್ಟ ಶೇ. 50 ಭಾಗ	ಆದ್ಯಾದೇಶ
ವಾಣಿಜ್ಯ ಮತ್ತು ಬೆಂಬಲಿತ ಮೂಲಸೌಕರ್ಯ	ಆತಿಥ್ಯ (ಸಮ್ಮೇಳನಾ ಕೇಂದ್ರ/ಹೋಟೆಲ್ ಇತ್ಯಾದಿ) ಮತ್ತು ವಾಸಯೋಗ್ಯ ಮೂಲಸೌಕರ್ಯ ಮತ್ತು ಬೆಂಬಲಿತ ಮೂಲಸೌಕರ್ಯ.	ಗರಿಷ್ಟ ಶೇ. 20 ಭಾಗ	ಐಚ್ಛಿಕ

ಉದ್ದೇಶಿತ ಯೋಜನೆಯ ಭಾಗಗಳು ಮತ್ತು ಅವುಗಳ ಅಭಿವೃದ್ಧಿಗೆ ಆರ್ಥಿಕ ಮೂಲಗಳು ಈ ಕೆಳಗಿನಂತಿವೆ :

ಭಾಗಗಳು	ಕೊಡುಗೆ (ವಿಸ್ತರಣೆ)	ಆರ್ಥಿಕ ಮೂಲ
ಭೂಮಿ	51.13 ಎಕರೆಯ ಬೆಲೆ ಸುಮಾರು ರೂ. 25.00 ಕೋಟಿಗಳು (@ 49 ಲಕ್ಷಗಳು ಪ್ರತಿ ಎಕರೆಗೆ)	ಡೆವಲಪರ್
ಸಂ ಮತ್ತು ಅ ವಲಯ	ರೂ. 20.00 ಕೋಟಿಗಳು	ಕೆಬಿಟ್ಸ್/ಕರ್ನಾಟಕ ಸರ್ಕಾರ
ಸಂ ಮತ್ತು ಅ ವಲಯ	ರೂ. 20.00 ಕೋಟಿಗೂ ಹೆಚ್ಚಿನ ವೆಚ್ಚದ ಬಾಕಿ ಹಣ	ಡೆವಲಪರ್
ಕೈಗಾರಿಕಾ ವಲಯ	ರೂ. 31.00 ಕೋಟಿಗಳು	ಡೆವಲಪರ್
ವಾಣಿಜ್ಯ ಮತ್ತು ಬೆಂಬಲಿತ ಮೂಲಸೌಕರ್ಯ	ರೂ. 3.00 ಕೋಟಿಗಳು	ಡೆವಲಪರ್
ಇತರೆ	ರೂ. 10.00 ಕೋಟಿಗಳು	ಡೆವಲಪರ್

ಪ್ರಸ್ತುತ ಯೋಜನೆಯ ಒಟ್ಟು ಅಂದಾಜು ವೆಚ್ಚ ರೂ. 103.27 ಕೋಟಿಗಳಾಗಿರುತ್ತದೆ. ಅದರಲ್ಲಿ ಕರ್ನಾಟಕ ಸರ್ಕಾರವು ಗರಿಷ್ಟ ರೂ. 20.00 ಕೋಟಿಗಳನ್ನು ಸಂಶೋಧನೆ ಮತ್ತು ಅಭಿವೃದ್ಧಿ ವಲಯದ ಸ್ಥಾಪನೆಗೆ ಕೊಡುಗೆಯಾಗಿ ನೀಡುತ್ತದೆ. ಯಶಸ್ವಿ ಬಿಡ್ಡುದಾರರು ಸುಮಾರು ರೂ. 25.00 ಕೋಟಿ ಬೆಲೆಯುಳ್ಳ 51.13 ಎಕರೆ ಭೂಮಿಯನ್ನು ಮತ್ತು ಬಾಕಿ ಹಣ ರೂ. 58.27 ಕೋಟಿಯನ್ನು ಪ್ರಸ್ತುತ ಯೋಜನೆಯಲ್ಲಿ ಹೂಡುತ್ತಾರೆ. ಕರ್ನಾಟಕ ಸರ್ಕಾರವು ತನ್ನ ಪಾಲಿನ ಕೊಡುಗೆಯನ್ನು ಈ ಕೆಳಗಿನಂತೆ ಎರಡು ವರ್ಷಗಳ ಅವಧಿಯಲ್ಲಿ ನೀಡಲಿದೆ :

ಅ) ಆರ್ಥಿಕ ವರ್ಷ 2012-13 : ರೂ. 10.00 ಕೋಟಿಗಳು

ಆ) ಆರ್ಥಿಕ ವರ್ಷ 2013-14 : ರೂ. 10.00 ಕೋಟಿಗಳು

ಯೋಜನಾ ನಿರ್ವಹಣಾ ಸಲಹೆಗಾರರಾದ ಮೆ. ಅರ್ನ್‌ಸ್ಟ್ ಅಂಡ ಯಂಗ್‌ರವರು ದಿನಾಂಕ : 30-08-2011 ರಂದು ಮೌಲ್ಯಮಾಪನಾ ವರದಿಯನ್ನು ಸಲ್ಲಿಸಿರುತ್ತಾರೆ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕೆಬಿಟ್ಸ್‌ರವರ ಅಧ್ಯಕ್ಷತೆಯ ಮೌಲ್ಯಮಾಪನಾ ಸಮಿತಿಯು ತುಲನಾತ್ಮಕ ಮೌಲ್ಯಮಾಪನದ ನಂತರ ಮೆ. ಜೆ.ಎಸ್.ಎಸ್. ಮಹಾವಿದ್ಯಾಪೀಠ, ಮೈಸೂರುರವರನ್ನು ಯಶಸ್ವಿ ಬಿಡ್ಡುದಾರರೆಂದು ಶಿಫಾರಸ್ಸು ಮಾಡಬಹುದೆಂದು ಅಭಿಪ್ರಾಯ ಪಟ್ಟಿರುತ್ತಾರೆ ಹಾಗೂ ನಿರ್ದೇಶಕರು, ಮಾ.ತಂ.ಜೈತಂ ಇವರು ಸರ್ಕಾರಕ್ಕೆ ಮೆ. ಜೆ.ಎಸ್.ಎಸ್. ಮಹಾವಿದ್ಯಾಪೀಠ, ಮೈಸೂರುರವರನ್ನು ಎನ್2ಪಿ2 ಉತ್ಕೃಷ್ಟತಾ ಉದ್ಯಾನ ಯೋಜನೆಯ ಯಶಸ್ವಿ ಬಿಡ್ಡುದಾರರೆಂದು ಘೋಷಿಸಲು ಕೋರಿ ಸರ್ಕಾರಕ್ಕೆ ಪತ್ರ ಬರೆದಿರುತ್ತಾರೆ.

ಆಡಳಿತ ಇಲಾಖೆ ಈ ಯೋಜನೆಗೆ ಬೇಕಾದ ನಿಧಿಯನ್ನು ಆರ್ಥಿಕ ವರ್ಷ 2012-13 ಮತ್ತು 2013-14ರಲ್ಲಿ 'ಯೋಜನಾ ಹಂಚಿಕೆ' ಮಾಡುವ ನಿಬಂಧನೆಗೆ ಒಳಪಟ್ಟಂತೆ ಆರ್ಥಿಕ ಇಲಾಖೆಯು ಸಮ್ಮತಿಯನ್ನು ನೀಡಿರುತ್ತದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಮಾತಂಇ 23 ಎಂಡಿಎ 2010, ಬೆಂಗಳೂರು, ದಿನಾಂಕ : 18-11-2011

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ನ್ಯೂಟ್ರಿ ನ್ಯೂಟ್ರಾಸಿಟಿಕಲ್ ಮತ್ತು ಫೈಟೋಫಾರ್ಮಾಸಿಟಿಕಲ್ ಉತ್ಕೃಷ್ಟತಾ ಕೇಂದ್ರ (ಎನ್2ಪಿ2 ಸಿಓಎ) ಹಾಗೂ ಉದ್ಯಾನವನ್ನು ಮೈಸೂರಿನಲ್ಲಿ ಸ್ಥಾಪಿಸುವ ಬಗ್ಗೆ ಸರ್ಕಾರವು ಈ ಕೆಳಗಿನ ಅಂಶಗಳಿಗೆ ಅನುಮೋದನೆ ನೀಡಿ ಕೆಬಿಟ್ಸ್ ಸಂಸ್ಥೆಗೆ ಆದೇಶಿಸಿದೆ.

1. ಆರ್‌ಎಫ್‌ಪಿ ಮತ್ತು ಜಂಟಿ ಅಭಿವೃದ್ಧಿ ಒಡಂಬಡಿಕೆಯನ್ನು ಆಧರಿಸಿ ಯಶಸ್ವಿ ಬಿಡ್ಡುದಾರರಾದ ಮೆ. ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರುರವರ ಪಾಲುದಾರಿಕೆಯೊಂದಿಗೆ ಪಿಪಿಪಿ ರೀತ್ಯಾ ಎನ್2ಪಿ2 ಉತ್ಕೃಷ್ಟತಾ ಕೇಂದ್ರ ಮತ್ತು ಉದ್ಯಾನ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದು.
2. ಯಶಸ್ವಿ ಬಿಡ್ಡುದಾರರಾದ ಮೆ. ಜೆ.ಎಸ್.ಎಸ್. ಮಹಾವಿದ್ಯಾಪೀಠ, ಮೈಸೂರುರವರಿಗೆ "ಲೆಟ್ ಆಫ್ ಅವಾರ್ಡ್" ಅನ್ನು ನೀಡುವುದು.

ರಾಜ್ಯ ಸರ್ಕಾರದ ಕೊಡುಗೆಯಾಗಿ ರೂ. 20.00 ಕೋಟಿ ಮೊತ್ತವನ್ನು ಎರಡು ವರ್ಷಗಳಲ್ಲಿ ಎನ್2ಪಿ2 ಉದ್ಯಾನ ಯೋಜನೆಗೆ ಈ ಕೆಳಗೆ ಸೂಚಿಸಿರುವಂತೆ ಬಿಡುಗಡೆ ಮಾಡಲು ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಅ) ಆರ್ಥಿಕ ವರ್ಷ 2012-13 : ರೂ. 10.00 ಕೋಟಿಗಳು

ಆ) ಆರ್ಥಿಕ ವರ್ಷ 2013-14 : ರೂ. 10.00 ಕೋಟಿಗಳು

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಎಫ್‌ಡಿ 399 ವೆಚ್ಚ-2/2011 ದಿನಾಂಕ : 12-10-2011ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಇ. ರಾಮಕೃಷ್ಣಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಮಾಹಿತ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಪಿ.ಆರ್. 2807

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ : 2011-12ನೇ ಸಾಲಿನಲ್ಲಿ ಶ್ರೇಷ್ಠ ಸಂಶೋಧನಾ ಪ್ರಬಂಧಗಳಿಗೆ (ARP) ಪ್ರಶಸ್ತಿ ಪ್ರಧಾನಗೊಳಿಸುವ ಕಾರ್ಯಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ವಿಯಇ 189 ವಿತ್ರಮ 2010, ದಿನಾಂಕ : 19-03-2011.
2. ಸರ್ಕಾರದ ಆದೇಶ ಸಂಖ್ಯೆ : ವಿಯಇ 90 ವಿತ್ರಮ 2011, ದಿನಾಂಕ : 25-05-2011.
3. ಸರ್ಕಾರದ ಆದೇಶ ಸಂಖ್ಯೆ : ವಿಯಇ 60 ವಿತ್ರಮ 2011, ದಿನಾಂಕ : 09-06-2011.
4. ಕಾರ್ಯನಿರ್ವಾಹಕ ಕಾರ್ಯದರ್ಶಿ, ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ ಇವರ ಪತ್ರ ಸಂಖ್ಯೆ : VGST/2011-12/1077, ದಿ : 26-10-2011.

ಪ್ರಸ್ತಾವನೆ :

ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ, ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದಲ್ಲಿ ಚಾಲ್ತಿಯಲ್ಲಿರುವ ಯೋಜನೆಗಳನ್ನು ಮುಂದುವರೆಸಿ 2011-12ನೇ ಸಾಲಿಗೆ ಅನುಷ್ಠಾನಗೊಳಿಸಲು ಆದೇಶ ಹೊರಡಿಸಲಾಗಿದೆ.

ಮೇಲೆ ಕ್ರಮಾಂಕ (2)ರಲ್ಲಿ ಓದಲಾದ ಆದೇಶದಲ್ಲಿ 2011-12ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 3425-60-600-0-02 (059)(ಯೋ) ಇದರಡಿಯಲ್ಲಿ ಒಟ್ಟು ರೂ. 10.00 ಕೋಟಿಗಳ ಅನುದಾನವನ್ನು ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದ ಯೋಜನೆಗಳಿಗಾಗಿ ಕಲ್ಪಿಸಲಾಗಿದ್ದು, ಯೋಜನೆಗಳ ಅನುಷ್ಠಾನಕ್ಕಾಗಿ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆ.

ಮೇಲೆ ಕ್ರಮಾಂಕ (3)ರಲ್ಲಿ ಓದಲಾದ ಆದೇಶದಲ್ಲಿ 2011-12ನೇ ಸಾಲಿನಲ್ಲಿ ಶ್ರೇಷ್ಠ ಸಂಶೋಧನಾ ಪ್ರಬಂಧಗಳಿಗೆ ಪ್ರಶಸ್ತಿ ಪ್ರಧಾನ ಮಾಡುವ ಸಲುವಾಗಿ ರೂ. 2.50 ಲಕ್ಷಗಳನ್ನು ಬಿಡುಗಡೆ ಮಾಡಿದೆ.

ಮೇಲೆ (4)ರಲ್ಲಿ ಓದಲಾದ ಕಾರ್ಯನಿರ್ವಾಹಕ ಕಾರ್ಯದರ್ಶಿ, ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ, ಬೆಂಗಳೂರು ಇವರ ಪತ್ರದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದ ಮಾರ್ಗಸೂಚಿಯನ್ವಯ ಶ್ರೇಷ್ಠ ಸಂಶೋಧನಾ ಪ್ರಬಂಧಗಳಿಗೆ ಪ್ರಶಸ್ತಿ ಪ್ರಧಾನ ಮಾಡುವ ಸಲುವಾಗಿ ಅರ್ಜಿಗಳನ್ನು ಆಹ್ವಾನಿಸಿದ್ದು, ನಿಗದಿಪಡಿಸಿದ ಕೊನೆಯ ದಿನಾಂಕ : 30-06-2011ರೊಳಗೆ 79 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಸದರಿ ಅರ್ಜಿಗಳನ್ನು ದಿನಾಂಕ : 10-10-2011ರಂದು ಆಯ್ಕೆ ಉಪ ಸಮಿತಿಯು ಮಾರ್ಗಸೂಚಿಯನ್ವಯ ಅರ್ಜಿಗಳನ್ನು ಪರಿಶೀಲಿಸಿ, 10 ಅರ್ಹ ಪ್ರಸ್ತಾವನೆಗಳನ್ನು ಶಿಫಾರಸ್ಸು ಮಾಡಿ, ಆಯ್ಕೆಗೊಂಡ 10 ಸಂಶೋಧಕರ ವೈಜ್ಞಾನಿಕ ಪ್ರಬಂಧಗಳಿಗೆ ತಲಾ ರೂ. 25,000/- ಗಳ ನಗದು ಪುರಸ್ಕಾರಕ್ಕಾಗಿ ಒಟ್ಟು ರೂ. 2.50 ಲಕ್ಷಗಳನ್ನು ದಾರ್ಶನಿಕ ಸಮೂಹದಿಂದ ಒದಗಿಸಲು ಸರ್ಕಾರದಿಂದ ಸೂಕ್ತ ಆದೇಶ ಹೊರಡಿಸುವಂತೆ ಪ್ರಸ್ತಾವನೆ ಸಲ್ಲಿಸಿ ಕೋರಿರುತ್ತಾರೆ.

ಉಪ ಸಮಿತಿಯ ಶಿಫಾರಸ್ಸಿನಂತೆ 2011-12ನೇ ಸಾಲಿನಲ್ಲಿ ಶ್ರೇಷ್ಠ ಸಂಶೋಧನಾ ಪ್ರಬಂಧಗಳಿಗೆ (Award for Research Publication (ARP)ಪ್ರಶಸ್ತಿ ಪ್ರಧಾನ ಮಾಡುವ ಕುರಿತು ಸದರಿ ಪ್ರಸ್ತಾವನೆಗಳನ್ನು ಅನುಮೋದಿಸಲು ನಿರ್ಧರಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ವಿಯಇ 60 ವಿತ್ರಮ 2011, ಬೆಂಗಳೂರು, ದಿನಾಂಕ : 11-11-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದ ಯೋಜನೆಯಡಿ 2011-12ನೇ ಸಾಲಿನಲ್ಲಿ ಅನುಬಂಧ "ಅ" ರಲ್ಲಿ ವಿವರಿಸಿರುವ ಹತ್ತು ಅರ್ಹ ಫಲಾನುಭವಿಗಳ ಶ್ರೇಷ್ಠ ಸಂಶೋಧನಾ ಪ್ರಬಂಧಗಳಿಗೆ ತಲಾ ರೂ. 25,000/-ಅಂತೆ ಒಟ್ಟು ರೂ. 2.50 ಲಕ್ಷಗಳ ನಗದನ್ನು ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದಿಂದ ಒದಗಿಸಲು ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಸರ್ಕಾರದ ಅನುಮೋದನೆ ನೀಡಲಾಗಿದೆ.

1. ಈ ಯೋಜನೆಯ ಅನುಷ್ಠಾನದ ಸಲುವಾಗಿ ಬಿಡುಗಡೆ ಮಾಡಿರುವ ಹಣವು ಸದ್ಬಳಕೆಯಾಗದಿದ್ದರೆ ಅಥವಾ ಈ ಯೋಜನೆ ಅನುಷ್ಠಾನವನ್ನು ಮಧ್ಯದಲ್ಲಿ ರದ್ದುಪಡಿಸಿದರೆ ಸರ್ಕಾರದಿಂದ ನೀಡಲಾದ ಆರ್ಥಿಕ ಸೌಲಭ್ಯವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
2. ಈ ಯೋಜನೆಯ ಅನುಷ್ಠಾನಕ್ಕೆ ಅನುದಾನವನ್ನು ಸದುಪಯೋಗ ಮಾಡಿಕೊಂಡಿದ್ದಕ್ಕೆ ಲೆಕ್ಕ ಪರಿಶೋಧಿತ ಉಪಯೋಗತಾ ಪ್ರಮಾಣ ಪತ್ರಗಳನ್ನು ನಿಗದಿತ ಕಾಲಮಿತಿಯಲ್ಲಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.
3. ಸರ್ಕಾರದಿಂದ ಯಾವ ಉದ್ದೇಶಕ್ಕಾಗಿ ಅನುದಾನ ಬಿಡುಗಡೆ ಮಾಡಿದೆಯೋ ಅದೇ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆ ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 01 ಟಿಎಫ್‌ಪಿ 2008, ದಿನಾಂಕ : 16-05-2008ರ ಅಡಿಯಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿದ ಪ್ರದತ್ತವಾದ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಪ್ರಕಾಶ್‌ರಾವ್ ಕೇಸರ್‌ಕರ್
ಸರ್ಕಾರದ ಅಧೀನ ಕಾರ್ಯದರ್ಶಿ
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಸರ್ಕಾರದ ಆದೇಶ ಸಂಖ್ಯೆ : ವಿಯಇ 60 ವಿತ್ರಮ 2011, ಬೆಂಗಳೂರು, ದಿನಾಂಕ : 11-11-2011

ಅನುಬಂಧ-ಅ

Sl. No.	Name of the Researcher	Name of the College & Department	Title of the Research Publication & Name of the Journal Published
1.	Dr. C.E. Nanjundappa Professor	Dept. of Mathematics, Dr. Ambedkar Institute of Technology, Near Jnana Bharathi Campus, Mallathalli, Bangalore-56	Benard-Marangoni Ferroconvection with Magnetic field Dependent Viscosity Journal of Magnetism & Magnetic Materials (JL-1)
2.	Dr. H. Nagabhushana Assistant Professor	Dept. of Physics, Tumkur University Tumkur-572103.	EPR and Photoluminescence studies of ZnO : Mn Nanophosphors prepared by solution combustion route Journal of Alloysw & Compounds (JL-2)
3.	Dr. Shubha Gopal Professor	Dept. of Microbiology, University of Mysore, Manasagangothri, Mysore-580003.	Maltose and Maltodextrin utilization by Listeria Monocytogenes depend on an inducible ABC Transporter which is repressed by Glucose Journal of PLos One (JL-1)
4.	Dr. B. Madhusudhan Professor	Dept. of Biochemistry Davanagere University, Jayanagar II Phase Davanagere-02.	Arthemeter-loaded lipid Nanoparticles produced by modified thin film Hydration : Pharmacokinetics, Toxicological and in vivo anti-malarial activity Eropean Journal of Pharmaceutical Sciences (JL-2)
5.	Dr. T.B. Karegoudar Professor	Dept. of Biochemistry, Gulbarga University, Gulbarga-585106.	Decolorization of Sulfonated azo dye Metanil Yellow by newly isolated Bacterial strains : Bacillus sp, Strain AK1 and Lysibacillus sp. Strain AK2 Journal of Hazardous Materials (JL-1)
6.	Dr. H.S. Aparna Associate Professor	Dept. of Biotechnology, University of Mysore, Manasagangothri, Mysore-570005.	Characterization of β-Lactoglobulin from Buffalo (Bubalus Bubalis) Colostrum and its possible interaction with erythrocyte Lipocalin-interacting membrane receptor Journal of Biochem (JL-1)
7.	M. Pandurangappa Associate Professor	Dept. of Chemistry Bangalore University, Central College Campus, Bangalore-560 001.	Antraquinone Functionalized Carbon composite Electrode : Application to ammonia sensing Journal of Elsevier (JL-1)
8.	Dr. Arun Mohan Isloor Asst. Professor	Dept. of Chemistry, National Institute of Technology, Surathkal, Mangalore-575025.	Preparation, Characterization and Performance Study of Poly (Isobutylene-Alt-Maleic Anhydride) (PLAM) and Plysulfone (psf) Composite Membranes before and after Alkali Treatment Journal of American Society (JL-1)
9.	Dr. Satish Kumar Adiga Professor	Dept. of Clinical Embryology - Obstetrics & Gynecology, Kasturba Medical College, Manipal-576 104.	Transfenerational Changes in Somatic & Germ line genetic Integrity of First - Generation offspring derived from the DNA Damaged Sperm Fertility & Sterility (JL-1)
10.	Dr. Harsha Vardhan Asst. Professor and Head	Dept. of Mining Engineering, National Institute of Technology, Surathkal, Srinivasnagar, Mangalore-575 025.	Estimating rock properties using sound levels produced during drilling International Journal of Rock Mechanics and Mining Sciences (JL-1)

ಪ್ರಕಾಶ್‌ರಾವ್ ಕೇಸರ್‌ಕರ್
ಸರ್ಕಾರದ ಅಧೀನ ಕಾರ್ಯದರ್ಶಿ
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಪಿ.ಆರ್. 2808

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ : ಯುವ ವಿಜ್ಞಾನಿಗಳಿಗೆ ಸಂಶೋಧನೆಗಾಗಿ ಮೂಲಧನ ನೀಡುವ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ವಿಯಇ 189 ವಿತ್ರಮ 2010, ದಿನಾಂಕ : 19-03-2011.
2. ಸರ್ಕಾರದ ಆದೇಶ ಸಂಖ್ಯೆ : ವಿಯಇ 90 ವಿತ್ರಮ 2011, ದಿನಾಂಕ : 25-05-2011.
3. ಸರ್ಕಾರದ ಆದೇಶ ಸಂಖ್ಯೆ : ವಿಯಇ 59 ವಿತ್ರಮ 2010, ದಿನಾಂಕ : 15-06-2011.
4. ಕಾರ್ಯನಿರ್ವಾಹಕ ಕಾರ್ಯದರ್ಶಿ, ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ ಇವರ ಪತ್ರ ಸಂಖ್ಯೆ : VGST/2011-12/1077, ದಿ : 26-10-2011.

ಪ್ರಸ್ತಾವನೆ :

ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ, ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದಲ್ಲಿ ಚಾಲ್ತಿಯಲ್ಲಿರುವ ಯೋಜನೆಗಳನ್ನು 2011-12ನೇ ಸಾಲಿಗೆ ಮುಂದುವರೆಸಿ ಈ ಯೋಜನೆಗಳನ್ನು ಅನುಷ್ಠಾನಗೊಳಿಸಲು ಆದೇಶ ಹೊರಡಿಸಲಾಗಿದೆ.

ಮೇಲೆ ಕ್ರಮಾಂಕ (2)ರಲ್ಲಿ ಓದಲಾದ ಆದೇಶದಲ್ಲಿ 2011-12ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 3425-60-600-0-02 (059)(ಯೋ) ಇದರಡಿಯಲ್ಲಿ ಒಟ್ಟು ರೂ. 10.00 ಕೋಟಿಗಳ ಅನುದಾನವನ್ನು ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದ ಯೋಜನೆಗಳಿಗಾಗಿ ಕಲ್ಪಿಸಲಾಗಿದ್ದು, ಯೋಜನೆಗಳ ಅನುಷ್ಠಾನಕ್ಕಾಗಿ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆ.

ಮೇಲೆ ಕ್ರಮಾಂಕ (3)ರಲ್ಲಿ ಓದಲಾದ ಆದೇಶದಲ್ಲಿ 2011-12ನೇ ಸಾಲಿನಲ್ಲಿ ಯುವ ವಿಜ್ಞಾನಿಗಳಿಗೆ ಸಂಶೋಧನೆಗಾಗಿ ಮೂಲಧನ ನೀಡುವ ಯೋಜನೆಯ ಅನುಷ್ಠಾನದ (Seed Money to Young Scientists for Research (SMYSR) ಸಲುವಾಗಿ ರೂ. 60.00 ಲಕ್ಷಗಳ ಸಹಾಯಾನುದಾನವನ್ನು ಬಿಡುಗಡೆ ಮಾಡಿದೆ.

ಮೇಲೆ ಕ್ರಮಾಂಕ (4)ರಲ್ಲಿ ಓದಲಾದ ಪತ್ರದಲ್ಲಿ ಕಾರ್ಯನಿರ್ವಾಹಕ ಕಾರ್ಯದರ್ಶಿ, ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ, ಬೆಂಗಳೂರು ಇವರು (Seed Money to Young Scientists for Research (SMYSR) ಯೋಜನೆಯ ಅನುಷ್ಠಾನಕ್ಕಾಗಿ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದ ಉಪ ಸಮಿತಿಯು 2011-12ನೇ ಸಾಲಿಗೆ 17 ಅರ್ಹ ಯುವ ವಿಜ್ಞಾನಿಗಳನ್ನು ಆಯ್ಕೆ ಮಾಡಿರುವ ಹಿನ್ನೆಲೆಯಲ್ಲಿ ಸಂಶೋಧನೆಗೆ ಮೂಲಧನ ಒದಗಿಸಲು ಶಿಫಾರಸ್ಸು ಮಾಡಿರುತ್ತಾರೆಂದು ತಿಳಿಸಿರುತ್ತಾರೆ.

2011-12ನೇ ಸಾಲಿನ (Seed Money to Young Scientists for Research (SMYSR) ಯೋಜನೆಗಾಗಿ ಕ್ರಮಾಂಕ (3)ರಲ್ಲಿನ ಸರ್ಕಾರದ ಆದೇಶದಲ್ಲಿ ರೂ. 60.00 ಲಕ್ಷಗಳನ್ನು 15 ಅಭ್ಯರ್ಥಿಗಳನ್ನು ಸೀಮಿತವಾಗಿ ಬಿಡುಗಡೆ ಮಾಡಲಾಗಿರುತ್ತದೆ. ಆದರೆ ಆಯ್ಕೆ ಸಮಿತಿಯು 2 ಅಭ್ಯರ್ಥಿಗಳನ್ನು ಹೆಚ್ಚುವರಿಯಾಗಿ ಆಯ್ಕೆ ಮಾಡಿದ್ದು, ಈ ಹೆಚ್ಚುವರಿಗೆ ಅನುದಾನವನ್ನು ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹಕ್ಕೆ 2009-10ನೇ ಆರ್ಥಿಕ ಸಾಲಿನಲ್ಲಿ ಆದೇಶ ಸಂಖ್ಯೆ : ವಿಯಇ 22 ವಿತ್ರಮ 2010, ದಿನಾಂಕ : 25-01-2010ರಲ್ಲಿ (ASTSC) ಯೋಜನೆಗಾಗಿ ಬಿಡುಗಡೆ ಮಾಡಲಾದ ರೂ. 5.00 ಲಕ್ಷಗಳಲ್ಲಿ ರೂ. 1.00 ಲಕ್ಷವನ್ನು 2010-11ರಲ್ಲಿ ಬಳಸಿಕೊಂಡು ಉಳಿಕೆಯಾಗಿರುವ ರೂ. 4.00 ಲಕ್ಷಗಳನ್ನು 2011-12ನೇ ಸಾಲಿನಲ್ಲಿ ಉಪಯೋಗಿಸಿಕೊಳ್ಳಲು ಅನುಮತಿ ಕೋರಿರುತ್ತಾರೆ.

ಮುಂದುವರಿದು ಸರ್ಕಾರದ ಆದೇಶ ಸಂ : ವಿಯಇ 154 ವಿತ್ರಮ 2010 ದಿನಾಂಕ : 08-09-2010ರಲ್ಲಿ Faculty Development for Science Faculty of Undergraduate (FDP-UG) ಈ ಯೋಜನೆಗಾಗಿ ರೂ. 15.00 ಲಕ್ಷಗಳನ್ನು ಬಿಡುಗಡೆ ಮಾಡಿದ್ದು ಈ ಅನುದಾನವನ್ನು ರೂ. 3,88,656/- ಉಳಿಕೆಯಾಗಿರುತ್ತದೆ ಎಂದು ಹಾಗೂ ಆದೇಶ ಸಂ : ವಿಯಇ 117 ವಿತ್ರಮ 2010 ದಿನಾಂಕ : 06-07-2010ರಲ್ಲಿ 2010-11ನೇ ಸಾಲಿಗೆ web site ಯೋಜನೆಗಾಗಿ ಬಿಡುಗಡೆ ಮಾಡಿದ ರೂ. 3.00 ಲಕ್ಷಗಳಲ್ಲಿ ರೂ. 11,344/- ಉಳಿಕೆಯಾಗಿದ್ದು, ಈ ಮೊತ್ತವನ್ನು 2011-12ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ಆಯ್ಕೆಯಾಗಿ 2 ಅಭ್ಯರ್ಥಿಗಳಿಗೆ ಮೂಲಧನವಾಗಿ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಕಾರ್ಯನಿರ್ವಾಹಕ ಕಾರ್ಯದರ್ಶಿ, ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ ಇವರು ದಿನಾಂಕ : 26-10-2011 ರಂದು ಸಲ್ಲಿಸಿರುವ ಪ್ರಸ್ತಾವನೆಯಲ್ಲಿ 2011-12ನೇ ಸಾಲಿನಲ್ಲಿ 17 ಅಭ್ಯರ್ಥಿಗಳಿಗೆ (ನಿಗದಿಪಡಿಸಿದ್ದು 15+2 ಹೆಚ್ಚುವರಿ ಅಭ್ಯರ್ಥಿಗಳು, ಒಟ್ಟು 17 ಅಭ್ಯರ್ಥಿಗಳು) ಸಂಶೋಧನಾ ಮೂಲಧನವಾಗಿ ಬಿಡುಗಡೆ ಮಾಡಲು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ವಿಯಇ 59 ವಿತ್ರಮ 2011, ಬೆಂಗಳೂರು, ದಿನಾಂಕ : 07-12-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದ 2011-12ನೇ ಸಾಲಿನ ಯೋಜನೆಯಾದ ಯುವ ವಿಜ್ಞಾನಿಗಳ ಸಂಶೋಧನೆಗೆ ಮೂಲಧನಕ್ಕೆ (Seed Money to Young Scientists for Research (SMYSR) ತಗಲುವ ಒಟ್ಟು ವೆಚ್ಚ ರೂ. 68.00 ಲಕ್ಷಗಳನ್ನು (ರೂಪಾಯಿ ಅರವತ್ತೆಂಟು ಲಕ್ಷಗಳು ಮಾತ್ರ) ಮೊತ್ತದಲ್ಲಿ ತಲಾ ರೂ. 4.00 ಲಕ್ಷಗಳ (ರೂಪಾಯಿ ನಾಲ್ಕು ಲಕ್ಷಗಳು ಮಾತ್ರ) ಮೂಲಧನವಾಗಿ ಬಿಡುಗಡೆಗೆ ಈ ಕೆಳಕಂಡ ನಿಬಂಧನೆ ಮೇರೆಗೆ ಸರ್ಕಾರದ ಅನುಮೋದನೆ ನೀಡಲಾಗಿದೆ.

1. 2011-12ನೇ ಸಾಲಿನ ಸಂಶೋಧನೆಗಾಗಿ (Seed Money to Young Scientists for Research (SMYSR) ಯೋಜನೆಗೆ ಬಿಡುಗಡೆ ಮಾಡಿದ ಸಂಶೋಧನ ಮೂಲಧನ ವಿವರಗಳನ್ನು ಅನುಬಂಧ-ಆ ನಲ್ಲಿ ಕಾಣಿಸಲಾದಂತೆ ಮಾಡತಕ್ಕದ್ದು.
2. ಈ ಯೋಜನೆಯ ಅನುಷ್ಠಾನದ ಸಲುವಾಗಿ ಬಿಡುಗಡೆ ಮಾಡಿರುವ ಹಣವು ಸದ್ಬಳಕೆಯಾಗದಿದ್ದರೆ ಹಾಗೂ ಯೋಜನೆ ಅನುಷ್ಠಾನವನ್ನು ಮಧ್ಯದಲ್ಲಿ ರದ್ದುಪಡಿಸಿದರೆ ಸರ್ಕಾರದಿಂದ ನೀಡಲಾದ ಆರ್ಥಿಕ ಸೌಲಭ್ಯವನ್ನು ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಕರಾರಿನಲ್ಲಿ ಸೂಕ್ತ ನಿಬಂಧನೆಗಳನ್ನು ವಿಧಿಸತಕ್ಕದ್ದು ; ಹಾಗೂ ಯೋಜನೆಯನ್ನು ನಿರ್ವಹಿಸುವ ಬಗ್ಗೆ ಕಾಲ ಕಾಲಕ್ಕೆ ಉಪಸಮಿತಿಯಿಂದ ಮೌಲ್ಯಮಾಪನ ಕೈಗೊಳ್ಳತಕ್ಕದ್ದು.

3. ಮಹಾಲೇಖಪಾಲರಿಗೆ ಸರ್ಕಾರದಿಂದ ನಿಗದಿತ ಅವಧಿಯೊಳಗೆ ಉಪಯೋಗತಾ ಪ್ರಮಾಣ ಪತ್ರಗಳನ್ನು ಕಳುಹಿಸಬೇಕಿರುವುದರಿಂದ, ಈ ಯೋಜನೆಯ ಅನುಷ್ಠಾನಕ್ಕೆ ಬಿಡುಗಡೆ ಮಾಡಿರುವ ಅನುದಾನವನ್ನು ಸದುಪಯೋಗಪಡಿಸಿಕೊಂಡು ಉಪಯೋಗತಾ ಪ್ರಮಾಣ ಪತ್ರಗಳನ್ನು ತುರ್ತಾಗಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.
4. 2009-10 ಮತ್ತು 2010-11ನೇ ಸಾಲಿನಲ್ಲಿ ಯುವ ವಿಜ್ಞಾನಿಗಳಿಗೆ ಸಂಶೋಧನೆಗಾಗಿ ಮೂಲಧನ ಒದಗಿಸಿದ್ದು, ಉಪಸಮಿತಿಯಿಂದ ಕೈಗೊಂಡ ಮೌಲ್ಯಮಾಪನ ಪ್ರಗತಿಯನ್ನು ಸರ್ಕಾರಕ್ಕೆ ತಪ್ಪದೇ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆ ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 01 ಟಿಎಫ್‌ಪಿ 2008, ದಿನಾಂಕ : 16-05-2008ರ ಅಡಿಯಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿದ ಪ್ರದತ್ತವಾದ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎ.ಎಸ್.ಮದ್ಭಾವಿ
ಸರ್ಕಾರದ ಅಧೀನ ಕಾರ್ಯದರ್ಶಿ (ವಿ&ತಂ),
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಸರ್ಕಾರದ ಆದೇಶ ಸಂಖ್ಯೆ : ವಿಯಇ 59 ವಿತ್ರಮ 2011, ಬೆಂಗಳೂರು, ದಿನಾಂಕ : 07-12-2011

ಅನುಬಂಧ-ಅ

Sl.No.	Name of the Young Scientists	Designation & Address	SMYSR-Research TITLE
01	Dr. Priya L. Lecturer	Lecturer Dept. of Physics, Centre of Post Graduate Studies, No. 18/3, 9th Main, Jayanagar, Bangalore-11.	Synthesis & Characterization of Polymer Compound semiconductor Nanoparticle composites for Optoelectronic properties.
02	Dr. Devarajan Thangadurai	Assistant Professor, Dept. of Botany, Karnatak University, Dharwad-580 003.	Environmental Impact Assessment of Genetically Modified Cotton on Below Ground Fungal Diversity using Molecular Approaches.
03	Dr. Shyama Prasad Sajankila	Assistant Professor, Dept. of Radiobiology & Toxicology, Manipal Life Science Centre, Planetarium Complex, Manipal University, Manipal-104.	Investigations on the in vivo Toxicity of Iron Oxide Nanomaterial in Mouse System.
04	Dr. Prabhakar B.T.	Assistant Professor , Dept. of Biotechnology, Sahyadri Science College, Shimoga-577 203.	Studies on altered gene expression profile of mammary carcinoma induced by Bioactive compounds isolated from Helictres isora-Role in antiangiogenesis based Cancer therapy.
05	Dr. S. Nagaraju	Assistant Professor, Dept. of PG Studies & research in Biochemistry, Tumkur University, Tumkur-572 102.	Chitin & Chtosan based Nanoparticle in wound healing.
06	Dr. B.Y. Sathish kumar	Lecturer, Dept. of Biotechnology, JSS College of Arts, Commerce & Science, Ooty road, Mysore-25.	Purification & Characterization of Anti-Stress Molecules from Glycyrrhiza Glabra (Athimadhura) and Convolvulus Pluricaulis (Shankhapushpi)
07	Dr. R. Kavyashree	Assistant Professor, Dept. of Biotechnology, Kristu Jayanthi College, K.Narayanapura, Kothanur (Post), Bangalore-77.	Regulation of Flowering in Stevia expressing Floral Repressor Genes FLC and TFL1.
08	Dr. Harish B.G.	Assistant Professor, Dept. of Biotechnology, M.S. Ramaiah Institute of Technology, MSR Nagar, Bangalore-54.	Inhibitory Effect of Fruit Extracts on the formation of Heterocyclic Amines in Meat.
09	Dr. A.V. Raghu	Asst. Professor, Dept. of Material Science, Poornaprajna Institute of Scientific Research, City Campus No. 4, 16th Cross, Sadashivanagara, Bangalore-80.	Development & Characterization & Nanographene based Polymeric membranes for use of pervaporation separation of Ethanol-Water mixture & their Sugar Industrial applications.

10.	T.N. Ramesh	Assistant Professor, Dept. of Chemistry University College of Science, Tumkur University, Tumkur-572 103.	Electrochemical Supercapacitor applications of Layered materials.
11.	Nanjappa H.M.	Lecturer, Dept. of Pharmacology, BLDEA's College of Pharmacy, Bijapur-586 103.	Evaluation of Adaptogenic, antistress & Anxiolytic activity of some Indian Medicinal Plants.
12.	Raghunandan Deshpande	Lecturer, Dept. of Pharmaceutical Chemistry, H.K.E.S's Matoshree Taradevi Rampure Institute of Pharmaceutical Sciences, Sedam Road, Gulbarga-5.	Stable Biocompatible Noble Metal & Metal Alloy. Nanoparticles preparations for Quicker, Safer, Better & Empiric Wound Healing Treatment.
13.	Shri Basappa	Assistant Professor, Dept. of DOS in Chemistry, Central College Campus, Dr. Ambedkar Veedhi, Bangalore University, Bangalore -560 001.	Identification of new small molecules against NF-Kb : An interesting drug target.
14.	Sri Parashuram Bannigidad	Assistant Professor, Dept. of Computer Science, Govt. Degree College, Sedam Road, Gulbarga University, Gulbarga-585 105.	Bacterial Cell Image Analysis using Digital Image Processing Techniques.
15.	Dr. G. Varaprasad	Associate Professor, Dept. of Computer Science and Engineering, B.M.S. College of Engineering, Bangalore-19.	Violation Detection Method for Vehicular Ad Hoc Networking.
16.	Dr. Sanjay H.A.	Professor & HOD, Dept. of Information Science & Engineering, Nitte Meenakshi Institute of Technology, Post Box No. 6429, Yelahanka, Bangalore-560 064.	Efficient Searching Framework for Mining Large Scale Databases on Distributed Environment.
17.	Dr. J. Manjunna	Assistant Professor & Co-ordinator, Dept. of Nanosciences & Technology, Kuvempu University, Jnanasahadri, Shankaraghatta-577451, Shimoga District.	Waste management/Recycling of electrode materials from the spent Li-on batteries through chemical extractions.

ಎ.ಎಸ್.ಮದ್ಭಾವಿ
ಸರ್ಕಾರದ ಅಧೀನ ಕಾರ್ಯದರ್ಶಿ (ವಿ&ತಂ),
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಪಿ.ಆರ್. 2809

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ : ರಾಜ್ಯ ವಕೀಲರ ಸಂಘಗಳಿಗೆ ಜೆರಾಕ್ಸ್ ಯಂತ್ರಗಳನ್ನು ಒದಗಿಸುವ ಬಗ್ಗೆ.

ಓದಲಾಗಿದೆ : 1) 2011-12ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ರೂ. 1.00 ಕೋಟಿಗಳನ್ನು ರಾಜ್ಯದ ಎಲ್ಲಾ ವಕೀಲರ ಸಂಘಗಳಿಗೆ ಜೆರಾಕ್ಸ್ ಯಂತ್ರವನ್ನು ಒದಗಿಸುವುದಾಗಿ ಘೋಷಿಸುತ್ತಾರೆ.
2) ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 111 ಬಿಆರ್‌ಎಸ್ 2011, ದಿನಾಂಕ: 24-11-2011.
3) ಸರ್ಕಾರ ಆದೇಶ ಸಂಖ್ಯೆ: ಲಾ 96 ಎಲ್‌ಸಿಎಲ್ 2010, ದಿನಾಂಕ:26-03-2011

ಪ್ರಸ್ತಾವನೆ:

2011-12ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ರೂ. 1.00 ಕೋಟಿಗಳನ್ನು ರಾಜ್ಯದ ಎಲ್ಲಾ ವಕೀಲರ ಸಂಘಗಳಿಗೆ ಜೆರಾಕ್ಸ್ ಯಂತ್ರವನ್ನು ಒದಗಿಸುವುದಾಗಿ ಘೋಷಿಸಿರುತ್ತಾರೆ. ರಾಜ್ಯದಲ್ಲಿರುವ ಎಲ್ಲಾ 180 ವಕೀಲರ ಸಂಘಗಳಿಗೆ ತಲಾ ಒಂದರಂತೆ ಜೆರಾಕ್ಸ್ ಯಂತ್ರವನ್ನು ಒದಗಿಸಲು ಆಯವ್ಯಯದ ಲೆಕ್ಕಶೀರ್ಷಿಕೆ 2014-00-114-0-01-059ರಡಿ ಒದಗಿಸಿರುವ 100.00 ಲಕ್ಷಗಳ ಜೊತೆಗೆ ಉತ್ತಮ ಗುಣಮಟ್ಟದ ಜೆರಾಕ್ಸ್ ಯಂತ್ರಗಳನ್ನು ಖರೀದಿಸುವ ಸಲುವಾಗಿ ಹೆಚ್ಚುವರಿಯಾಗಿ 63.36 ಲಕ್ಷಗಳನ್ನು ಒದಗಿಸುವಂತೆ ಆರ್ಥಿಕ ಇಲಾಖೆಯನ್ನು ಕೋರಲಾಗಿತ್ತು. ಅದರಂತೆ ಆರ್ಥಿಕ ಇಲಾಖೆಯ ಮೇಲೆ ಓದಲಾದ (2)ರ ಆದೇಶ ದಿನಾಂಕ: 24-11-2011ರಲ್ಲಿ ರೂ. 65.00 ಲಕ್ಷಗಳನ್ನು ಹೆಚ್ಚುವರಿಯಾಗಿ ಮಂಜೂರು ಮಾಡಿ ಆದೇಶ ಹೊರಡಿಸಿರುತ್ತಾರೆ.

ಮೇಲೆ ಓದಲಾದ (3)ರ ಆದೇಶ ದಿನಾಂಕ: 26-03-2011ರಲ್ಲಿ 2010-11ನೇ ಸಾಲಿನಲ್ಲಿ ಇ-ಗ್ರಂಥಾಲಯ ಸ್ಥಾಪನೆಗೆ ರಾಜ್ಯದ ಎಲ್ಲಾ ವಕೀಲರ ಸಂಘಗಳಿಗೆ (ವಕೀಲರ ಪರಿಷತ್ತು ನಿಯಮಾವಳಿಯಲ್ಲಿ ಸ್ಪಷ್ಟಪಡಿಸಿರುವ ಸಂಘಗಳು) ಒಂದು ಕಂಪ್ಯೂಟರ್ ಮತ್ತು ಯುಪಿಎಸ್, ಪ್ರಿಂಟರ್ ಖರೀದಿಸಲು ತಲಾ ರೂ. 45,000 ಸಾವಿರಗಳಂತೆ ಒಟ್ಟು 81.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿತ್ತು. ಪ್ರಸ್ತುತ 2011-12ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ವಕೀಲರ ಸಂಘಗಳಿಗೆ ಜೆರಾಕ್ಸ್ ಯಂತ್ರ ಒದಗಿಸುವುದಾಗಿ ಆಯವ್ಯಯ ಭಾಷಣದಲ್ಲಿ ಘೋಷಿಸಿದ್ದು, ಅದರಂತೆ ತಲಾ ಒಂದು ಜೆರಾಕ್ಸ್ ಯಂತ್ರವನ್ನು

ರೂ. 91,000.00 (ರೂ. ತೊಂಬತ್ತೊಂದು ಸಾವಿರಗಳು ಮಾತ್ರ) ವೆಚ್ಚದಲ್ಲಿ ಖರೀದಿಸಲು ತಗಲುವ ವೆಚ್ಚಕ್ಕೆ ಸಮಾನವಾದ ಮೊತ್ತವನ್ನು ರೂ. 1,63,80,000.00(ಒಂದು ಕೋಟಿ ಅರವತ್ತಮೂರು ಲಕ್ಷ ಎಂಬತ್ತು ಸಾವಿರ ರೂಗಳು) ಒಟ್ಟು ಅನುದಾನಕ್ಕೆ ಒಳಪಟ್ಟು ಎಲ್ಲಾ ವಕೀಲರ ಸಂಘಗಳಿಗೆ ಹಂಚಿ ಬಿಡುಗಡೆ ಮಾಡಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲಾ 132 ಎಲ್‌ಸಿಎಲ್ 2011 ಬೆಂಗಳೂರು, ದಿನಾಂಕ: 3ನೇ ಡಿಸೆಂಬರ್ 2011

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಪ್ರತಿ ವಕೀಲರ ಸಂಘಗಳಿಗೆ ತಲಾ ಒಂದು ಜೆರಾಕ್ಸ್ ಯಂತ್ರಕ್ಕೆ ತಗಲುವ ವೆಚ್ಚವಾಗಿ ರೂ. 91,000.00 ಗಳಂತೆ ಪ್ರತಿ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಕಾನೂನು ಹಾಗೂ ನಿಯಮಾವಳಿಗಳ ಪ್ರಕಾರವಾಗಿ ಜೆರಾಕ್ಸ್ ಯಂತ್ರಗಳನ್ನು ಖರೀದಿಸಿ ರಾಜ್ಯದ 180 ವಕೀಲರ ಸಂಘಗಳಿಗೆ ಹಂಚಿಕೆ ಮಾಡಲು ಲೆಕ್ಕಶೀರ್ಷಿಕೆ 2014-00-114-0-01-059ರಡಿ ಅನುಬಂಧ-1ರಲ್ಲಿ ತಿಳಿಸಿರುವಂತೆ ಒಟ್ಟು ರೂ. 1,63,80,000.00 ಗಳನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಸರ್ಕಾರದ ಅನುಮೋದನೆ ನೀಡಿದೆ.

1. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ / ನಿಯಮಗಳನ್ವಯ ಪಾಲಿಸಿ ಖರೀದಿಸುವುದು.
2. ಒಂದು ತಿಂಗಳೊಳಗಾಗಿ ವಿಲೇವಾರಿ ಮಾಡಲು ಕ್ರಮಕೈಗೊಳ್ಳುವುದು.
3. I.S.A. ಗುಣಮಟ್ಟದ ಹಾಗೂ TAP (Technical Advisory Panel) ಇವರಿಂದ ಅನುಮೋದಿಸಲ್ಪಟ್ಟ Specification ಇರುವ ಯಂತ್ರಗಳನ್ನು ಮಾತ್ರ ಖರೀದಿಸುವುದು.
4. ಜೆರಾಕ್ಸ್ ಯಂತ್ರಗಳನ್ನು ಸರಬರಾಜು ಮಾಡುವ ಜೆರಾಕ್ಸ್ ಕಂಪನಿಯು ಆನಂತರ ಕೂಡಾ ರಾಜ್ಯ ವಕೀಲರ ಸಂಘಗಳೊಡನೆ ಕರಾರು ಮಾಡಿಕೊಂಡು (AMC) ನೀಡತಕ್ಕದ್ದು.
5. ಈ ಜೆರಾಕ್ಸ್ ಯಂತ್ರಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುವ ಬಗ್ಗೆ ಖಾತ್ರಿಪಡಿಸಿಕೊಳ್ಳತಕ್ಕದ್ದು.
6. ಜೆರಾಕ್ಸ್ ಯಂತ್ರಗಳ ಸಂರಕ್ಷಣೆಯ ಬಗ್ಗೆ ಎಚ್ಚರಿಕೆ ವಹಿಸಬೇಕು.
7. ಇದು ಪಾರದರ್ಶಕ ಹಾಗೂ ಕ್ರಯ ಬೆಲೆ ಪ್ರಯೋಜನಿಯವಾಗಿರಬೇಕು.
8. ಅನುದಾನವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ನಿಯಮಾನುಸಾರ ಬಳಸತಕ್ಕದ್ದು.
9. ಬಳಕೆ ಪ್ರಮಾಣ ಪತ್ರವನ್ನು ವಕೀಲರ ಪರಿಷತ್ತಿನಿಂದ ಅಂಕಿಅಂಶಗಳ ಸಹಿತ ಪಡೆದು ಕಾಲಮಿತಿಯೊಳಗೆ ನಿಯಮಾನುಸಾರ ಸಲ್ಲಿಸತಕ್ಕದ್ದು.
10. ಆರ್ಥಿಕ ಇಲಾಖೆ ಹೊರಡಿಸಿರುವ ಸ್ಥಾಯಿ ಆದೇಶಗಳನ್ನು ಪಾಲಿಸುವುದು.

ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಅನುಬಂಧದಲ್ಲಿರುವ ಮೊತ್ತವನ್ನು ಲೆಕ್ಕಶೀರ್ಷಿಕೆ 2014-00-114-0-01-059ರಡಿಯಲ್ಲಿ ಪಡೆದು ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್‌ನಲ್ಲಿ ಅನುಮತಿ ಪಡೆದು ನೊಂದಾಯಿಸಲ್ಪಟ್ಟಿರುವ ಅಧಿಕೃತ ವಕೀಲರ ಸಂಘಗಳಿಗೆ ಜೆರಾಕ್ಸ್ ಯಂತ್ರವನ್ನು ವಿತರಿಸಿ ಬಳಕೆ ಪ್ರಮಾಣ ಪತ್ರವನ್ನು ಪಡೆದು, ಈ ಬಗ್ಗೆ ವಿತರಿಸಿರುವ ಹಣಕ್ಕೆ ಪ್ರತ್ಯೇಕ ಲೆಕ್ಕವಿಟ್ಟು ಸರ್ಕಾರಕ್ಕೆ ವರದಿ ಮಾಡುವಂತೆ ತಿಳಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 459 ವೆಚ್ಚ-10/2011, ದಿನಾಂಕ: 24-11-2011 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಶಕುಂತಲ ಹೆಚ್.ಆರ್
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ-2)
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಸರ್ಕಾರದ ಆದೇಶ: ಲಾ 132 ಎಲ್ ಸಿಎಲ್ 2011, ದಿನಾಂಕ: 03-12-2011ರ ಅನುಬಂಧ

ರಾಜ್ಯ ವಕೀಲರ ಸಂಘಗಳಿಗೆ ಜೆರಾಕ್ಸ್ ಯಂತ್ರಗಳನ್ನು ಒದಗಿಸಲು ಬಿಡುಗಡೆ ಮಾಡಬೇಕಾದ ಅನುದಾನದ ವಿವರಗಳು

ಕ್ರಮ ಸಂಖ್ಯೆ	ಜಿಲ್ಲೆ ಹೆಸರು	ವಕೀಲರುಗಳ ಸಂಘಗಳ ಸಂಖ್ಯೆ		ಬಿಡುಗಡೆ ಗೊಳಿಸಬೇಕಾದ ಮೊತ್ತ
		ಜಿಲ್ಲಾ ಮಟ್ಟದ ವಿಭಾಗ ವಕೀಲರ ಸಂಘಗಳು	ತಾಲ್ಲೂಕು ಮಟ್ಟದ ವಕೀಲರ ಸಂಘಗಳು	
1	2	3	4	5
1.	ಬೆಂಗಳೂರು ನಗರ ವಕೀಲರ ಸಂಘ	1	1	182000
2.	ಬೆಂಗಳೂರು(ಗ್ರಾಮಾಂತರ)	–	4	364000
3.	ರಾಮನಗರ ಜಿಲ್ಲೆ	1	3	364000
4.	ಕೋಲಾರ	1	6	637000
5.	ಚಿಕ್ಕಬಳ್ಳಾಪುರ	1	4	455000
6.	ತುಮಕೂರು	1	9	910000
7.	ಮೈಸೂರು	1(ವಿ.ಮ)	6	637000
8.	ಚಾಮರಾಜನಗರ	1	3	364000
9.	ಮಂಡ್ಯ	1	6	637000

10.	ಹಾಸನ	1	7	728000
11.	ಶಿವಮೊಗ್ಗ	1	6	637000
12.	ಚಿಕ್ಕಮಗಳೂರು	1	6	637000
13.	ಚಿತ್ರದುರ್ಗ	1	5	546000
14.	ದಾವಣಗೆರೆ	1	5	546000
15.	ಬಳ್ಳಾರಿ	1	6	637000
16.	ಬೆಳಗಾಂ	1(ವಿ.ಮ)	11	1092000
17.	ಬಿಜಾಪುರ	1	4	455000
18.	ಬಾಗಲಕೋಟೆ	1	6	637000
19.	ಧಾರವಾಡ	1	3	364000
20.	ಹಾವೇರಿ	1	6	637000
21.	ಗದಗ್	1	4	455000
22.	ಉತ್ತರಕನ್ನಡ	1	11	1092000
23.	ಬೀದರ್	1	4	455000
24.	ಗುಲ್ಬರ್ಗ	1(ವಿ.ಮ)	7	728000
25.	ಯಾದಗಿರಿ	1	2	273000
26.	ರಾಯಚೂರು	1	4	455000
27.	ಕೊಪ್ಪಳ	1	3	364000
28.	ದಕ್ಷಿಣ ಕನ್ನಡ	1	5	546000
29.	ಉಡುಪಿ	1	2	273000
30.	ಕೊಡಗು	1	2	273000
	ಒಟ್ಟು	**29**	**151**	**16380000**

ಶಕುಂತಲ ಹೆಚ್.ಆರ್
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ-2)
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಪಿ.ಆರ್. ನಂ. 2824

ಜಲಸಂಪನ್ಮೂಲ ಸಚಿವಾಲಯ

ವಿಷಯ : ಚಿತ್ರದುರ್ಗ ಜಿಲ್ಲೆ, ಮೊಳಕಾಲ್ಮೂರು ತಾಲ್ಲೂಕು ರಂಗಯ್ಯನದುರ್ಗ ಜಲಾಯಶದ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಭೂಸ್ವಾಧೀನ ಕಾಯ್ದೆ ಕಲಂ 28(ಎ)ರಡಿ ಐತೀರ್ಪಿನಂತೆ ಪರಿಹಾರ ಪಾವತಿಸುವ ಬಗ್ಗೆ.

ಓದಲಾಗಿದೆ: ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ಇವರ ಪತ್ರ ಸಂಖ್ಯೆ: ಮುಸದ/ಲೆಶಾ/ಲೆಸ-1/ಭೂಸ್ವಾಧೀನ/10-11/199 ದಿನಾಂಕ 27/01/2011.

ಪ್ರಸ್ತಾವನೆ:

ಚಿತ್ರದುರ್ಗ ಜಿಲ್ಲೆ, ಮೊಳಕಾಲ್ಮೂರು ತಾಲ್ಲೂಕು ರಂಗಯ್ಯನದುರ್ಗ ಜಲಾಶಯದ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಮಠದಜೋಗಿಹಳ್ಳಿ ಗ್ರಾಮದ ಸರ್ವೆ ನಂಬರ್‌ಗಳ ಜಮೀನುಗಳಿಗೆ ಚಳ್ಳಕೆರೆ ಸಿವಿಲ್ ನ್ಯಾಯಾಲಯವು (ಹಿರಿಯ ವಿಭಾಗ) ಎಲ್.ಎ.ಸಿ. ಪ್ರಕರಣದಲ್ಲಿ ನೀಡಿರುವ ಆದೇಶದಂತೆ ಹೆಚ್ಚುವರಿ ಪರಿಹಾರ ಮೊತ್ತ ಪಾವತಿಸಲು ಅನುದಾನ ಬಿಡುಗಡೆ ಮಾಡಲು ಮೇಲೆ ಓದಲಾದ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ಇವರು ದಿನಾಂಕ 27/01/11ರ ಪತ್ರದಲ್ಲಿ ಕೋರಿದ್ದಾರೆ.

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರ ಅಧಿಸೂಚನೆ ದಿನಾಂಕ 19/08/2004ರಂದು ಹೊರಡಿಸಲಾಗಿದೆ.
- ಭೂಸ್ವಾಧೀನ ಕಾಯ್ದೆ ಕಲಂ 11(ಎ)ರಂತೆ ಭೂಸ್ವಾಧೀನಾಧಿಕಾರಿಗಳು ಪರಿಹಾರದ ಐತೀರ್ಪು ಘೋಷಿಸಿದ ದಿನಾಂಕ 28/02/2007.

ಸ್ವಾಧೀನಕ್ಕೊಳಪಟ್ಟ ಮಠದಜೋಗಿಹಳ್ಳಿ ಗ್ರಾಮದ 4-34 ಎಕರೆ ಜಮೀನುಗಳಿಗೆ ಪರಿಹಾರ ಪಾವತಿಸಲು ಭೂಸ್ವಾಧೀನ ಕಾಯ್ದೆ ಕಲಂ 28(ಎ)ರಡಿ ಭೂಸ್ವಾಧೀನಾಧಿಕಾರಿಗಳು ದಿನಾಂಕ 28/02/07ರಂದು ಐತೀರ್ಪು ರಚಿಸಿರುತ್ತಾರೆ. ಸದರಿ ಗ್ರಾಮದ ಜಮೀನುಗಳಿಗೆ ಪ್ರತಿ ಎಕರೆಗೆ ರೂ.14,100/-ಗಳನ್ನು ನಿಗದಿಪಡಿಸಲಾಗಿದೆ. ಸದರಿ ಐತೀರ್ಪಿನಂತೆ ಪರಿಹಾರ ಪಡೆದ ಭೂಮಾಲೀಕರು (ಸ.ನಂ.9/1 & 10/1) ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಇನ್ನೂ ಹೆಚ್ಚಿನ ಪರಿಹಾರಕ್ಕಾಗಿ ಚಳ್ಳಕೆರೆ ಸಿವಿಲ್ ನ್ಯಾಯಾಲಯ (ಹಿರಿಯ ಶ್ರೇಣಿ) ಇಲ್ಲಿ ಎಲ್.ಎ.ಸಿ ಸಂಖ್ಯೆ: 4/08 ಮತ್ತು 6/08 ನ್ನು ದಾಖಲಿಸಿದ್ದು, ನ್ಯಾಯಾಲಯವು ದಿನಾಂಕ 28/08/08ರಂದು ನೀಡಿದ ಆದೇಶದಲ್ಲಿ ಪ್ರತಿ ಎಕರೆಗೆ ರೂ. 62,580/- ಗಳ ಭೂಮೌಲ್ಯ ನಿಗದಿಪಡಿಸಿದೆ. ಈ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಂದಾಯ ಇಲಾಖೆಯ ಕಾನೂನು ಕೋಶವು ಪತ್ರ ಸಂಖ್ಯೆ: ಆರ್‌ಡಿ 501 ಎಲ್‌ಸಿಎ 2008, ದಿನಾಂಕ 30/12/08ರಲ್ಲಿ ಅಭಿಪ್ರಾಯ ನೀಡಿದೆ. ಈ ತೀರ್ಪನ್ನು ಉಲ್ಲೇಖಿಸಿ ಸ.ನಂ8/1 ಮತ್ತು 9/1ರ ಭೂಮಾಲೀಕರು ಭೂಸ್ವಾಧೀನ ಕಾಯ್ದೆ ಕಲಂ 28(ಎ)ರಡಿ ಅರ್ಜಿ ಸಲ್ಲಿಸಿದ್ದರಿಂದ ಭೂಸ್ವಾಧೀನಾಧಿಕಾರಿಗಳು ದಿನಾಂಕ 24/07/09ರಂದು ಐತೀರ್ಪು ರಚಿಸಿರುತ್ತಾರೆ. ಅದರಂತೆ ಪಾವತಿಸಬೇಕಾದ ಪರಿಹಾರದ ವಿವರ ಕೆಳಕಂಡಂತಿದೆ:

ಭೂಸ್ವಾಧೀನ ಕಾಯ್ದೆ ಕಲಂ 28(ಎ)ರಡಿ ಐತೀರ್ಪಿನ ಸಂಖ್ಯೆ ಎಲ್ಎಕ್ಯೂ/ಕೊ/ರೆ/ಸಿಆರ್/24/09-10, ದಿನಾಂಕ 14/07/09			
ಕ್ರ ಸಂ	ಮಠದಜೋಗಿಹಳ್ಳಿ ಗ್ರಾಮದ ಸ.ನಂ.	ವಿಸ್ತೀರ್ಣ ಎ-ಗುಂ	ಪರಿಹಾರ ಮೊತ್ತ (ರೂ.ಗಳಲ್ಲಿ)
1	9/1	0-37	119066
2	8/1	0-29	93460
	ಒಟ್ಟು		212526

ಮೇಲ್ಕಂಡ ಎಲ್ಲಾ ಅಂಶಗಳನ್ನು ಮತ್ತು ಪರಿಶೀಲಿಸಿ, ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 22 ಭೂಸ್ವಾಪ್ರ 2011, ಬೆಂಗಳೂರು, ದಿನಾಂಕ: 21ನೇ ನವೆಂಬರ್ 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಚಿತ್ರದುರ್ಗ ಜಿಲ್ಲೆ, ಮೊಳಕಾಲ್ಮೂರು ತಾಲ್ಲೂಕು ರಂಗಯ್ಯನದುರ್ಗ ಜಲಾಶಯದ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಮಠದಜೋಗಿಹಳ್ಳಿ ಗ್ರಾಮಕ್ಕೆ ಸೇರಿದ ಮೇಲ್ಕಂಡ ಸ.ನಂ.ಗಳ ಜಮೀನುಗಳಿಗೆ ಭೂಸ್ವಾಧೀನ ಕಾಯ್ದೆ ಕಲಂ 28(ಎ) ರಡಿ ಭೂಸ್ವಾಧೀನಾಧಿಕಾರಿಗಳ ಐತೀರ್ಪಿನಂತೆ ಪರಿಹಾರ ರೂ. 2,12,526-00ಗಳನ್ನು (ಎರಡು ಲಕ್ಷದ ಹನ್ನೆರಡು ಸಾವಿರದ ಐನೂರ ಇಪ್ಪತ್ತಾರು ರೂ. ಗಳು ಮಾತ್ರ) ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನೀಡಲು ಸರ್ಕಾರದ ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2011-12ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ "4702-00-800-1-00-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ರೂ.2,12,526/-ಗಳನ್ನು ಹಂಚಿಕೆ ಮಾಡಿ, ಬಿಡುಗಡೆ ಮಾಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ: 20/10/10ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಕೆ.ಸಿ. ಸಿದ್ದಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಜಲಸಂಪನ್ಮೂಲ ಇಲಾಖೆ, (ಸಣ್ಣ ನೀರಾವರಿ)

ಪಿ.ಆರ್. ನಂ. 2825

ಜಲಸಂಪನ್ಮೂಲ ಸಚಿವಾಲಯ

ವಿಷಯ : ಹಾಸನ ಜಿಲ್ಲೆ, ಅರಸೀಕೆರೆ ತಾಲ್ಲೂಕು ಅರಸಿಕೆರೆ ದೊಡ್ಡ ಕೆರೆಯ ಪುನಶ್ಚೇತನ ಮತ್ತು ಅಭಿವೃದ್ಧಿ ಕಾಮಗಾರಿಯ ಅಂದಾಜಿಗೆ ಹದಿಮೂರನೇ ಹಣಕಾಸು ಆಯೋಗದ ಅನುದಾನದಡಿ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಸನೀಇ 108 ಮಸಾವಿ 2010 ದಿನಾಂಕ: 28.09.2011.
2) ದಿನಾಂಕ: 19.10.2011ರ ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರುರವರ ಪತ್ರದ ಸಂಖ್ಯೆ ಮುಸದ/ತಾಂ.ಸ-7/ಸ.ಇಂ. 15/13ನೇ ಹಣಕಾಸು/2011-12/3656.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಹದಿಮೂರನೇ ಹಣಕಾಸು ಆಯೋಗದಡಿ ರೂ 350.00 ಕೋಟಿ ಅಂದಾಜು ವೆಚ್ಚದ 631 ಕಾಮಗಾರಿಗಳ ಅನುಷ್ಠಾನಕ್ಕೆ ಅನುಮೋದನೆ ನೀಡಲಾಗಿದೆ. ಇದರಲ್ಲಿ ರೂ. 473.00 ಲಕ್ಷಗಳ ಅಂದಾಜುಮೊತ್ತದ ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕು ಅರಸೀಕೆರೆ ದೊಡ್ಡ ಕೆರೆಯ ಪುನಶ್ಚೇತನ ಮತ್ತು ಅಭಿವೃದ್ಧಿ ಕಾಮಗಾರಿಯು ಸೇರಿರುತ್ತದೆ. ಈ ಕಾಮಗಾರಿಯ ಅಂದಾಜು ಪಟ್ಟಿಗೆ ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳುರು ರವರು ಸರ್ಕಾರದ ಆಡಳಿತಾತ್ಮಕ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲ್ಕಂಡ ಕಾಮಗಾರಿಯ ಅಂದಾಜು ಪಟ್ಟಿಯನ್ನು 2011-12ನೇ ಸಾಲಿಗೆ ಮುಂದುವರೆಸಿರುವ 2010-11ನೇ ಸಾಲಿನ ದರಪಟ್ಟಿಯ ದರಗಳನ್ನಳವಡಿಸಿ ತಯಾರಿಸಲಾಗಿದೆ. ಇದರಲ್ಲಿ ಕೆರೆಯ ಅಂಗಳದಲ್ಲಿ ಹೂಳೆತ್ತುವುದು, ಚೈನ್ ಲಿಂಕ್ ಫೆನ್ಸಿಂಗ್, ಇತ್ಯಾದಿ ಕಾಮಗಾರಿಗಳನ್ನು ಕೈಗೊಳ್ಳಲು ಅವಕಾಶ ಮಾಡಿದೆ. ಈ ಕಾಮಗಾರಿಯ ಅಂದಾಜಿಗೆ ದಿನಾಂಕ 12-10-2011ರಂದು ನಡೆದಿರುವ ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿ ಸಭೆಯಲ್ಲಿ ಕೆಲವು ಷರಾಗಳೊಂದಿಗೆ ತೀರುವಳಿ ನೀಡಲಾಗಿದೆ.

ಲೆಕ್ಕಶೀರ್ಷಿಕೆ "4702-00-101-1-12-059-XIII ನೇ ಆ ಅ ಅನುದಾನ ಕೃಷಿಗೆ ನೇರವಾಗಿ ಸಂಬಂಧಿಸಿದ ಕೆರೆ ನೀರಾವರಿ ಯೋಜನೆಗಳ ಜೀರ್ಣೋದ್ಧಾರ-ಇತರ ಖರ್ಚುಗಳು" ರಡಿ ರೂ 473.00 ಲಕ್ಷಗಳ ಅಂದಾಜುಮೊತ್ತದ ಈ ಕಾಮಗಾರಿಯ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಪರಿಗಣಿಸಿದೆ.

ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 117 ಮಸಾವಿ 2011, (ತಾಂತ್ರಿಕ) (7) ಬೆಂಗಳೂರು, ದಿನಾಂಕ: 13ನೇ ಡಿಸೆಂಬರ್ 2011.

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕು ಅರಸೀಕೆರೆ ದೊಡ್ಡ ಕೆರೆಯ ಪುನಶ್ಚೇತನ ಮತ್ತು ಅಭಿವೃದ್ಧಿ ಕಾಮಗಾರಿಯ ರೂ. 473.00 ಲಕ್ಷ (ರೂ. ನಾಲ್ಕು ನೂರ ಎಪ್ಪತ್ತ ಮೂರು ಲಕ್ಷ ಮಾತ್ರ) ಮೊತ್ತದ ಅಂದಾಜು ಪಟ್ಟಿಗೆ ಹದಿಮೂರನೇ ಹಣಕಾಸು ಆಯೋಗದ ಅನುದಾನದಡಿ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿದೆ.

1. ಕಾಮಗಾರಿಯ ಅನುಷ್ಠಾನ ಪೂರ್ವ ಹಾಗೂ ಅನುಷ್ಠಾನ ನಂತರದ ಫಲಶೃತಿಗಳನ್ನು ಹಾಗೂ ಕಾಮಗಾರಿಯ ವಿವಿಧ ಹಂತಗಳ ವೀಡಿಯೋ ಹಾಗೂ ಛಾಯಾಚಿತ್ರಗಳನ್ನು ದಾಖಲಿಸುವುದು.
2. ಅಂದಾಜಿಗೆ ತೀರುವಳಿ ನೀಡುವಾಗ ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯು ಗಮನಿಸಿರುವ ಅಂಶಗಳಂತೆ ಕ್ರಮ ಕೈಗೊಳ್ಳತಕ್ಕದ್ದು.
3. ಯೋಜನೆಯ ಅನುಷ್ಠಾನ ಕುರಿತು 3ನೇ ವ್ಯಕ್ತಿ/ ಸಂಸ್ಥೆಯ ತಪಾಸಣೆಗೆ ಒಳಪಡಿಸಿ, ವರದಿಯನ್ನು ಪಡೆಯುವುದು.
4. ಕಾಮಗಾರಿಯ ವೆಚ್ಚವು ಯಾವುದೇ ಕಾರಣಕ್ಕೂ ಅನುಮೋದಿಸಿದ ಟೆಂಡರ್ ಮೊತ್ತಕ್ಕಿಂತ ಹೆಚ್ಚಾಗಬಾರದು ಹಾಗೂ ಕಾಮಗಾರಿಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸತಕ್ಕದ್ದು.
5. ಒಂದು ವೇಳೆ ಸ್ಥಳ ಪರಿಸ್ಥಿತಿಗೆ ಅನುಗುಣವಾಗಿ ಹೆಚ್ಚಳ ನಿರೀಕ್ಷಿಸಿದಲ್ಲಿ ತಕ್ಷಣವೇ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಕಾಮಗಾರಿಯನ್ನು ಪೂರ್ಣಗೊಳಿಸತಕ್ಕದ್ದು.
6. ಕಾಮಗಾರಿ ಪ್ರಾರಂಭಿಸುವ ಮುನ್ನ ವಿನ್ಯಾಸ ಬದಲಾವಣೆಯಿಂದಾಗಿ ಅಥವಾ ಬೇರೆ ಕಾರಣದಿಂದ ಅನುಮೋದಿಸಿದ ಅಂದಾಜು ಮೊತ್ತ ಹೆಚ್ಚಾಗುವ ಸಂಭವ ಇದ್ದಲ್ಲಿ, ತಕ್ಷಣ ಪರಿಷ್ಕೃತ ಅಂದಾಜಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ನಂತರ ಕಾಮಗಾರಿಯನ್ನು ಪ್ರಾರಂಭಿಸುವುದು.
7. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಅನುಸಾರ ಟೆಂಡರ್ ಕರೆದು ತೆಗೆದುಕೊಳ್ಳತಕ್ಕದ್ದು.
8. ಕಾಮಗಾರಿ ಪೂರ್ಣಗೊಂಡ ಕೂಡಲೇ ಪೂರ್ಣತಾ ವರದಿಯನ್ನು ಸಲ್ಲಿಸಕ್ಕದ್ದು ಹಾಗೂ ಅವಶ್ಯಕತೆ ಇದ್ದಲ್ಲಿ ಪರಿಷ್ಕೃತ ಅಂದಾಜು ತಯರಿಸಿ ಟಿ.ಎ.ಸಿ. ಅನುಮೋದನೆ ಪಡೆದು ಸಂಬಂಧಿಸಿದ ಸಕ್ಷಮ ಅಧಿಕಾರಿಗಳಿಗೆ ಅನುಮೋದನೆಗಾಗಿ ಸಲ್ಲಿಸುವುದು.
9. ಇ.ಐ.ಆರ್.ಎಲ್/ವರ್ಕ್‌ಸ್ಲಿಪ್‌ಗಳನ್ನು ಸಲ್ಲಿಸಬೇಕಾದಲ್ಲಿ ತಕ್ಷಣವೇ ಸಲ್ಲಿಸತಕ್ಕದ್ದು.
10. ತಾಂತ್ರಿಕ ಮಂಜೂರಾತಿಯನ್ನು ನೀಡುವ ಮೊದಲು ಅಂದಾಜನ್ನು ಮತ್ತೊಮ್ಮೆ ವಿವರವಾಗಿ ಪರಿಶೀಲಿಸುವುದು.
11. ಈ ಯೋಜನೆಗಳಿಗೆ ನೀರು ಬಳಕೆದಾರರ ಸಂಘವನ್ನು ಸೃಜಿಸಬೇಕು ಹಾಗೂ ನಿರ್ವಹಣೆಯನ್ನು ಸದರಿ ಸಂಘಕ್ಕೆ ವಹಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ: 16/05/2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಲಾದ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪಿ.ಆರ್. ನಂ. 2826

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲಸಂಪನ್ಮೂಲ ಇಲಾಖೆ, (ಸಣ್ಣ ನೀರಾವರಿ)

ಜಲಸಂಪನ್ಮೂಲ ಸಚಿವಾಲಯ

ವಿಷಯ : ಚಿಕ್ಕಮಗಳೂರು ಜಿಲ್ಲೆ ಹಾಗೂ ತಾಲ್ಲೂಕು ಹಿರೇಮಗಳೂರು ದೊಡ್ಡಕೆರೆಯ ಪುನಶ್ಚೇತನ ಕಾಮಗಾರಿಯ ಅಂದಾಜಿಗೆ ಹದಿಮೂರನೇ ಹಣಕಾಸು ಆಯೋಗದ ಅನುದಾನದಡಿ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಸನೀಇ 108 ಮಸಾವಿ 2010 ದಿನಾಂಕ: 28.09.2011.

2) ದಿನಾಂಕ: 19.10.2011ರ ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರುರವರ ಪತ್ರದ ಸಂಖ್ಯೆ ಮುಸದ/ತಾಂ.ಸ-7/ಸ.ಇಂ. 15/13ನೇ ಹಣಕಾಸು/ 2011-12/3656.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಹದಿಮೂರನೇ ಹಣಕಾಸು ಆಯೋಗದಡಿ ರೂ 350.00 ಕೋಟಿ ಅಂದಾಜು ವೆಚ್ಚದ 631 ಕಾಮಗಾರಿಗಳ ಅನುಷ್ಠಾನಕ್ಕೆ ಅನುಮೋದನೆ ನೀಡಲಾಗಿದೆ. ಇದರಲ್ಲಿ ರೂ. 345.00 ಲಕ್ಷಗಳ ಅಂದಾಜುಮೊತ್ತದ ಚಿಕ್ಕಮಗಳೂರು ಜಿಲ್ಲೆ ಹಾಗೂ ತಾಲ್ಲೂಕು ಹಿರೇಮಗಳೂರು ದೊಡ್ಡ ಕೆರೆಯ ಪುನಶ್ಚೇತನ ಕಾಮಗಾರಿಯು ಸೇರಿರುತ್ತದೆ. ಈ ಕಾಮಗಾರಿಯ ಅಂದಾಜು ಪಟ್ಟಿಗೆ ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರು ರವರು ಸರ್ಕಾರದ ಆಡಳಿತಾತ್ಮಕ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲ್ಕಂಡ ಕಾಮಗಾರಿಯ ಅಂದಾಜು ಪಟ್ಟಿಯನ್ನು 2011-12ನೇ ಸಾಲಿಗೆ ಮುಂದುವರೆಸಿರುವ 2010-11ನೇ ಸಾಲಿನ ದರಪಟ್ಟಿಯ ದರಗಳನ್ನಳವಡಿಸಿ ತಯಾರಿಸಲಾಗಿದೆ. ಇದರಲ್ಲಿ ಕೆರೆಯ ಅಂಗಳದಲ್ಲಿ ಹೂಳೆತ್ತುವುದು, ಏರಿ ಕಾಮಗಾರಿ, ಕೋಡಿ ಕಾಮಗಾರಿ, ಪೂರಕ ನಾಲೆ, ಕಾಲುವೆ ಇತ್ಯಾದಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅವಕಾಶ ಮಾಡಿದೆ. ಈ ಕಾಮಗಾರಿಯ ಅಂದಾಜಿಗೆ ದಿನಾಂಕ 12-10-2011ರಂದು ನಡೆದಿರುವ ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿ ಸಭೆಯಲ್ಲಿ ಕೆಲವು ಷರಾಗಳೊಂದಿಗೆ ತೀರುವಳಿ ನೀಡಲಾಗಿದೆ.

ಲೆಕ್ಕಶೀರ್ಷಿಕೆ "4702-00-101-1-12-059-XIII ನೇ ಆ ಆ ಅನುದಾನ ಕೃಷಿಗೆ ನೇರವಾಗಿ ಸಂಬಂಧಿಸಿದ ಕೆರೆ ನೀರಾವರಿ ಯೋಜನೆಗಳ ಜೀರ್ಣೋದ್ಧಾರ-ಇತರ ಖರ್ಚುಗಳು" ರಡಿ ರೂ 345.00 ಲಕ್ಷಗಳ ಅಂದಾಜುಮೊತ್ತದ ಈ ಕಾಮಗಾರಿಯ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಪರಿಗಣಿಸಿದೆ.

ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 117 ಮಸಾವಿ 2011, (ತಾಂತ್ರಿಕ) (8) ಬೆಂಗಳೂರು, ದಿನಾಂಕ: 13ನೇ ಡಿಸೆಂಬರ್ 2011.

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಚಿಕ್ಕಮಗಳೂರು ಜಿಲ್ಲೆ ಹಾಗೂ ತಾಲ್ಲೂಕು ಹಿರೇಮಗಳೂರು ದೊಡ್ಡಕೆರೆಯ ಪುನಶ್ಚೇತನ ಕಾಮಗಾರಿಯ ರೂ. 345.00 ಲಕ್ಷ (ರೂ. ಮೂರು ನೂರ ನಲವತ್ತೈದು ಲಕ್ಷ ಮಾತ್ರ) ಮೊತ್ತದ ಅಂದಾಜು ಪಟ್ಟಿಗೆ ಹದಿಮೂರನೇ ಹಣಕಾಸು ಆಯೋಗದ ಅನುದಾನದಡಿ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿದೆ.

1. ಕಾಮಗಾರಿಯ ಅನುಷ್ಠಾನ ಪೂರ್ವ ಹಾಗೂ ಅನುಷ್ಠಾನ ನಂತರದ ಫಲಶೃತಿಗಳನ್ನು ಹಾಗೂ ಕಾಮಗಾರಿಯ ವಿವಿಧ ಹಂತಗಳ ವೀಡಿಯೋ ಹಾಗೂ ಛಾಯಾಚಿತ್ರಗಳನ್ನು ದಾಖಲಿಸುವುದು.
2. ಅಂದಾಜಿಗೆ ತೀರುವಳಿ ನೀಡುವಾಗ ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯು ಗಮನಿಸಿರುವ ಅಂಶಗಳಂತೆ ಕ್ರಮ ಕೈಗೊಳ್ಳತಕ್ಕದ್ದು.
3. ಯೋಜನೆಯ ಅನುಷ್ಠಾನ ಕುರಿತು 3ನೇ ವ್ಯಕ್ತಿ/ ಸಂಸ್ಥೆಯ ತಪಾಸಣೆಗೆ ಒಳಪಡಿಸಿ, ವರದಿಯನ್ನು ಪಡೆಯುವುದು.
4. ಕಾಮಗಾರಿಯ ವೆಚ್ಚವು ಯಾವುದೇ ಕಾರಣಕ್ಕೂ ಅನುಮೋದಿಸಿದ ಟೆಂಡರ್ ಮೊತ್ತಕ್ಕಿಂತ ಹೆಚ್ಚಾಗಬಾರದು ಹಾಗೂ ಕಾಮಗಾರಿಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸತಕ್ಕದ್ದು.
5. ಒಂದು ವೇಳೆ ಸ್ಥಳ ಪರಿಸ್ಥಿತಿಗೆ ಅನುಗುಣವಾಗಿ ಹೆಚ್ಚಳ ನಿರೀಕ್ಷಿಸಿದಲ್ಲಿ ತಕ್ಷಣವೇ ಸಕ್ಷಮ ಪಾಧಿಕಾರದಿಂದ ಅನುಮೋದನೆ ಪಡೆದು ಕಾಮಗಾರಿಯನ್ನು ಪೂರ್ಣಗೊಳಿಸತಕ್ಕದ್ದು.
6. ಕಾಮಗಾರಿ ಪ್ರಾರಂಭಿಸುವ ಮುನ್ನ ವಿನ್ಯಾಸ ಬದಲಾವಣೆಯಿಂದಾಗಿ ಅಥವಾ ಬೇರೆ ಕಾರಣದಿಂದ ಅನುಮೋದಿಸಿದ ಅಂದಾಜು ಮೊತ್ತ ಹೆಚ್ಚಾಗುವ ಸಂಭವ ಇದ್ದಲ್ಲಿ, ತಕ್ಷಣ ಪರಿಷ್ಕೃತ ಅಂದಾಜಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ನಂತರ ಕಾಮಗಾರಿಯನ್ನು ಪ್ರಾರಂಭಿಸುವುದು.
7. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಅನುಸಾರ ಟೆಂಡರ್ ಕರೆದು ತೆಗೆದುಕೊಳ್ಳತಕ್ಕದ್ದು.
8. ಕಾಮಗಾರಿ ಪೂರ್ಣಗೊಂಡ ಕೂಡಲೇ ಪೂರ್ಣತಾ ವರದಿಯನ್ನು ಸಲ್ಲಿಸಕ್ಕದ್ದು ಹಾಗೂ ಅವಶ್ಯಕತೆ ಇದ್ದಲ್ಲಿ ಪರಿಷ್ಕೃತ ಅಂದಾಜು ತಯಾರಿಸಿ ಟಿ.ಎ.ಸಿ. ಅನುಮೋದನೆ ಪಡೆದು ಸಂಬಂಧಿಸಿದ ಸಕ್ಷಮ ಅಧಿಕಾರಿಗಳಿಗೆ ಅನುಮೋದನೆಗಾಗಿ ಸಲ್ಲಿಸುವುದು.
9. ಇ.ಐ.ಆರ್.ಎಲ್/ವರ್ಕ್‌ಸ್ಲಿಪ್‌ಗಳನ್ನು ಸಲ್ಲಿಸಬೇಕಾದಲ್ಲಿ ತಕ್ಷಣವೇ ಸಲ್ಲಿಸತಕ್ಕದ್ದು.
10. ತಾಂತ್ರಿಕ ಮಂಜೂರಾತಿಯನ್ನು ನೀಡುವ ಮೊದಲು ಅಂದಾಜನ್ನು ಮತ್ತೊಮ್ಮೆ ವಿವರವಾಗಿ ಪರಿಶೀಲಿಸುವುದು.
11. ಈ ಯೋಜನೆಗಳಿಗೆ ನೀರು ಬಳಕೆದಾರರ ಸಂಘವನ್ನು ಸೃಜಿಸಬೇಕು ಹಾಗೂ ನಿರ್ವಹಣೆಯನ್ನು ಸದರಿ ಸಂಘಕ್ಕೆ ವಹಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ: 16/05/2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಲಾದ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ರುದ್ರಮೂರ್ತಿ
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ
ಜಲಸಂಪನ್ಮೂಲ ಇಲಾಖೆ, (ಸಣ್ಣ ನೀರಾವರಿ)

ಪಿ.ಆರ್. ನಂ. 2827

ಜಲಸಂಪನ್ಮೂಲ ಸಚಿವಾಲಯ

ವಿಷಯ : ಹಾಸನ ಜಿಲ್ಲೆ ಹಾಗೂ ತಾಲ್ಲೂಕು ಸತ್ಯಮಂಗಲ ದೊಡ್ಡ ಕೆರೆಯ ಅಭಿವೃದ್ಧಿ ಕಾಮಗಾರಿಯ ಅಂದಾಜಿಗೆ ಹದಿಮೂರನೇ ಹಣಕಾಸು ಆಯೋಗದ ಅನುದಾನದಡಿ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಸನೀಇ 108 ಮಸಾವಿ 2010 ದಿನಾಂಕ: 28.09.2011.

2) ದಿನಾಂಕ: 19.10.2011ರ ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರುರವರ ಪತ್ರದ ಸಂಖ್ಯೆ ಮುಸದ/ತಾಂ.ಸ-7/ಸ.ಇಂ. 15/13ನೇ ಹಣಕಾಸು/2011-12/3656.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಹದಿಮೂರನೇ ಹಣಕಾಸು ಆಯೋಗದಡಿ ರೂ 350.00 ಕೋಟಿ ಅಂದಾಜು ವೆಚ್ಚದ 631 ಕಾಮಗಾರಿಗಳ ಅನುಷ್ಠಾನಕ್ಕೆ ಅನುಮೋದನೆ ನೀಡಲಾಗಿದೆ. ಇದರಲ್ಲಿ ರೂ. 430.00 ಲಕ್ಷಗಳ ಅಂದಾಜುಮೊತ್ತದ ಹಾಸನ ಜಿಲ್ಲೆ ಹಾಗೂ ತಾಲ್ಲೂಕು ಸತ್ಯಮಂಗಲ ದೊಡ್ಡ ಕೆರೆಯ ಅಭಿವೃದ್ಧಿ ಕಾಮಗಾರಿಯು ಸೇರಿರುತ್ತದೆ. ಈ ಕಾಮಗಾರಿಯ ಅಂದಾಜು ಪಟ್ಟಿಗೆ ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರು ರವರು ಸರ್ಕಾರದ ಆಡಳಿತಾತ್ಮಕ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲ್ಕಂಡ ಕಾಮಗಾರಿಯ ಅಂದಾಜು ಪಟ್ಟಿಯನ್ನು 2011-12ನೇ ಸಾಲಿಗೆ ಮುಂದುವರೆಸಿರುವ 2010-11ನೇ ಸಾಲಿನ ದರಪಟ್ಟಿಯ ದರಗಳನ್ನಳವಡಿಸಿ ತಯಾರಿಸಲಾಗಿದೆ. ಇದರಲ್ಲಿ ಕೆರೆಯ ಅಂಗಳದಲ್ಲಿ ಹೂಳೆತ್ತುವುದು, ಏರಿ ಕಾಮಗಾರಿ, ಚೈನ್ ಲಿಂಕ್ ಫೆನ್ಸಿಂಗ್, ಕೋಡಿ ಹಳ್ಳಕ್ಕೆ ಸೇತುವೆ ನಿರ್ಮಾಣ ಇತ್ಯಾದಿ ಕಾಮಗಾರಿಗಳನ್ನು ಕೈಗೊಳ್ಳಲು ಅವಕಾಶ ಮಾಡಿದೆ. ಈ ಕಾಮಗಾರಿಯ ಅಂದಾಜಿಗೆ ದಿನಾಂಕ 12-10-2011ರಂದು ನಡೆದಿರುವ ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿ ಸಭೆಯಲ್ಲಿ ಕೆಲವು ಷರಾಗಳೊಂದಿಗೆ ತೀರುವಳಿ ನೀಡಲಾಗಿದೆ.

ಲೆಕ್ಕಶೀರ್ಷಿಕೆ "4702-00-101-1-12-059-XIII ನೇ ಆ ಆ ಅನುದಾನ ಕೃಷಿಗೆ ನೇರವಾಗಿ ಸಂಬಂಧಿಸಿದ ಕೆರೆ ನೀರಾವರಿ ಯೋಜನೆಗಳ ಜೀರ್ಣೋದ್ಧಾರ-ಇತರ ಖರ್ಚುಗಳು" ರಡಿ ರೂ 430.00 ಲಕ್ಷಗಳ ಅಂದಾಜುಮೊತ್ತದ ಈ ಕಾಮಗಾರಿಯ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಪರಿಗಣಿಸಿದೆ.

ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 117 ಮಸಾವಿ 2011, (ತಾಂತ್ರಿಕ) (6) ಬೆಂಗಳೂರು, ದಿನಾಂಕ: 13ನೇ ಡಿಸೆಂಬರ್ 2011.

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹಾಸನ ಜಿಲ್ಲೆ ಹಾಗೂ ತಾಲ್ಲೂಕು ಸತ್ಯಮಂಗಲ ದೊಡ್ಡಕೆರೆಯ ಅಭಿವೃದ್ಧಿ ಕಾಮಗಾರಿಯ ರೂ. 430.00 ಲಕ್ಷ (ರೂ. ನಾಲ್ಕು ನೂರ ಮುವತ್ತು ಲಕ್ಷ ಮಾತ್ರ) ಮೊತ್ತದ ಅಂದಾಜು ಪಟ್ಟಿಗೆ ಹದಿಮೂರನೇ ಹಣಕಾಸು ಆಯೋಗದ ಅನುದಾನದಡಿ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿದೆ.

1. ಕಾಮಗಾರಿಯ ಅನುಷ್ಠಾನ ಪೂರ್ವ ಹಾಗೂ ಅನುಷ್ಠಾನ ನಂತರದ ಫಲಶೃತಿಗಳನ್ನು ಹಾಗೂ ಕಾಮಗಾರಿಯ ವಿವಿಧ ಹಂತಗಳ ವೀಡಿಯೋ ಹಾಗೂ ಛಾಯಾಚಿತ್ರಗಳನ್ನು ದಾಖಲಿಸುವುದು.
2. ಅಂದಾಜಿಗೆ ತೀರುವಳಿ ನೀಡುವಾಗ ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯು ಗಮನಿಸಿರುವ ಅಂಶಗಳಂತೆ ಕ್ರಮ ಕೈಗೊಳ್ಳತಕ್ಕದ್ದು.
3. ಯೋಜನೆಯ ಅನುಷ್ಠಾನ ಕುರಿತು 3ನೇ ವ್ಯಕ್ತಿ/ ಸಂಸ್ಥೆಯ ತಪಾಸಣೆಗೆ ಒಳಪಡಿಸಿ, ವರದಿಯನ್ನು ಪಡೆಯುವುದು.
4. ಕಾಮಗಾರಿಯ ವೆಚ್ಚವು ಯಾವುದೇ ಕಾರಣಕ್ಕೂ ಅನುಮೋದಿಸಿದ ಟೆಂಡರ್ ಮೊತ್ತಕ್ಕಿಂತ ಹೆಚ್ಚಾಗಬಾರದು ಹಾಗೂ ಕಾಮಗಾರಿಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸತಕ್ಕದ್ದು.
5. ಒಂದು ವೇಳೆ ಸ್ಥಳ ಪರಿಸ್ಥಿತಿಗೆ ಅನುಗುಣವಾಗಿ ಹೆಚ್ಚಳ ನಿರೀಕ್ಷಿಸಿದಲ್ಲಿ ತಕ್ಷಣವೇ ಸಕ್ಷಮ ಪಾಧಿಕಾರದಿಂದ ಅನುಮೋದನೆ ಪಡೆದು ಕಾಮಗಾರಿಯನ್ನು ಪೂರ್ಣಗೊಳಿಸತಕ್ಕದ್ದು.
6. ಕಾಮಗಾರಿ ಪ್ರಾರಂಭಿಸುವ ಮುನ್ನ ವಿನ್ಯಾಸ ಬದಲಾವಣೆಯಿಂದಾಗಿ ಅಥವಾ ಬೇರೆ ಕಾರಣದಿಂದ ಅನುಮೋದಿಸಿದ ಅಂದಾಜು ಮೊತ್ತ ಹೆಚ್ಚಾಗುವ ಸಂಭವ ಇದ್ದಲ್ಲಿ, ತಕ್ಷಣ ಪರಿಷ್ಕೃತ ಅಂದಾಜಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ನಂತರ ಕಾಮಗಾರಿಯನ್ನು ಪ್ರಾರಂಭಿಸುವುದು.
7. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಅನುಸಾರ ಟೆಂಡರ್ ಕರೆದು ತೆಗೆದುಕೊಳ್ಳತಕ್ಕದ್ದು.
8. ಕಾಮಗಾರಿ ಪೂರ್ಣಗೊಂಡ ಕೂಡಲೇ ಪೂರ್ಣತಾ ವರದಿಯನ್ನು ಸಲ್ಲಿಸಕ್ಕದ್ದು ಹಾಗೂ ಅವಶ್ಯಕತೆ ಇದ್ದಲ್ಲಿ ಪರಿಷ್ಕೃತ ಅಂದಾಜು ತಯಾರಿಸಿ ಟಿ.ಎ.ಸಿ. ಅನುಮೋದನೆ ಪಡೆದು ಸಂಬಂಧಿಸಿದ ಸಕ್ಷಮ ಅಧಿಕಾರಿಗಳಿಗೆ ಅನುಮೋದನೆಗಾಗಿ ಸಲ್ಲಿಸುವುದು.
9. ಇ.ಐ.ಆರ್.ಎಲ್/ವರ್ಕ್‌ಸ್ಲಿಪ್‌ಗಳನ್ನು ಸಲ್ಲಿಸಬೇಕಾದಲ್ಲಿ ತಕ್ಷಣವೇ ಸಲ್ಲಿಸತಕ್ಕದ್ದು.
10. ತಾಂತ್ರಿಕ ಮಂಜೂರಾತಿಯನ್ನು ನೀಡುವ ಮೊದಲು ಅಂದಾಜನ್ನು ಮತ್ತೊಮ್ಮೆ ವಿವರವಾಗಿ ಪರಿಶೀಲಿಸುವುದು.
11. ಈ ಯೋಜನೆಗಳಿಗೆ ನೀರು ಬಳಕೆದಾರರ ಸಂಘವನ್ನು ಸೃಜಿಸಬೇಕು ಹಾಗೂ ನಿರ್ವಹಣೆಯನ್ನು ಸದರಿ ಸಂಘಕ್ಕೆ ವಹಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ: 16/05/2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಲಾದ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. ನಂ. 2828

ರುದ್ರಮೂರ್ತಿ
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ
ಜಲಸಂಪನ್ಮೂಲ ಇಲಾಖೆ, (ಸಣ್ಣ ನೀರಾವರಿ)

ಜಲಸಂಪನ್ಮೂಲ ಸಚಿವಾಲಯ

ವಿಷಯ : ಬೀದರ್ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ಹತ್ತರಗಾ ಗ್ರಾಮದ ಹತ್ತಿರ ಬ್ಯಾರೇಜ್ ಸಹಿತ ಸೇತುವೆ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದಿಸುವ ಬಗ್ಗೆ

ಓದಲಾಗಿದೆ : 1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಕ್ರಮಾಂಕ: ಮುಇಂ/ಸನೀ(ಉ)ವಲಯ/ಬಿಜೆಪಿ/ಎಇ-6/2011-12/5008, ದಿನಾಂಕ: 26-09-2011.

2. ಸರ್ಕಾರದ ಆದೇಶ ಸಂಖ್ಯೆ: ಸನೀಇ 236 ಮಸಾವಿ 2009(5) ದಿನಾಂಕ: 16-07-2010.

ಪ್ರಸ್ತಾವನೆ :

ಬೀದರ್ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ಹತ್ತರಗಾ ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಾಣ ಕಾಮಗಾರಿ ಅಂದಾಜಿಗೆ ಉಲ್ಲೇಖ (2) ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಈ ಕಾಮಗಾರಿಯನ್ನು ಎ.ಐ.ಬಿ.ಪಿ ಕಾರ್ಯಕ್ರಮದಡಿ ಕೈಗೊಳ್ಳಲು ಭಾರತ ಸರ್ಕಾರದ ಅನುಮೋದನೆ ದೊರಕಿರುತ್ತದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಬೀದರ್ ಸಣ್ಣ ನೀರಾವರಿ ವಿಭಾಗದಿಂದ ಕಾಮಗಾರಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	09-05-2011
ಜಿಲ್ಲಾ ಟೆಂಡರ್ ಬುಲೆಟಿನ್	13-05-2011

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಭಾಗವಹಿಸಿದ್ದ ಒಬ್ಬರು ಗುತ್ತಿಗೆದಾರರು ಅರ್ಹತೆ ಹೊಂದಿದ್ದು ಇವರ ಆರ್ಥಿಕ ಬಿಡ್‌ಅನ್ನು ದಿನಾಂಕ 01-08-2011 ರಂದು ತೆರೆದು ಪರಿಶೀಲಿಸಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 2,20,73,359/-
ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 2,83,21,236/-

ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಧನರಾಜ ತಾಳಂಪಳ್ಳಿ, ಒಂದನೇ ದರ್ಜೆ ಗುತ್ತಿಗೆದಾರರು	2,95,06,236/-	33.67 ಹೆಚ್ಚು	4.184 ಹೆಚ್ಚು

ಮೇಲ್ಕಂಡಂತೆ ಶ್ರೀ ಧನರಾಜ ತಾಳಂಪಳ್ಳಿ, ಒಂದನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನ ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಃಠ 4.184 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಅಂಗೀಕರಿಸುವಂತೆ ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 2,83,21,236/-ಗಳ ಮೇಲೆ ಶೇ. 4.184 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 2,95,06,236/- ಗಳಿಗೆ ಅನಿಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 72 ಅಪಿಬಂ 2011 (ತಾಂತ್ರಿಕ) ಬೆಂಗಳೂರು, ದಿನಾಂಕ : 22-11-2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬೀದರ್ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ಹತ್ತರಗಾ ಗ್ರಾಮದ ಹತ್ತಿರ ಬ್ಯಾರೇಜ್ ಸಹಿತ ಸೇತುವೆ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 2,83,21,236/-ಗಳ ಮೇಲೆ ಶೇ. 4.184 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 2,95,06,236/- (ರೂ. ಎರಡು ಕೋಟಿ ತೊಂಭತ್ತೈದು ಲಕ್ಷ ಆರು ಸಾವಿರದ ಇನ್ನೂರ ಮೂವತ್ತಾರು ಮಾತ್ರ)ಗಳಿಗೆ ಶ್ರೀ ಧನರಾಜ ತಾಳಂಪಳ್ಳಿ, ಒಂದನೇ ದರ್ಜೆ ಗುತ್ತಿಗೆದಾರರು ರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002 ದಿನಾಂಕ: 20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ರುದ್ರಮೂರ್ತಿ
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,
ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 2836

ಜಲಸಂಪನ್ಮೂಲ ಸಚಿವಾಲಯ

ವಿಷಯ : ಹಾವೇರಿ ಜಿಲ್ಲೆ ಹಿರೇಕೆರೂರ ತಾಲ್ಲೂಕಿನ ಚಿಕ್ಕೊಣತಿ ಕೆರೆ ಪ್ರವಾಹ ಹಾನಿ ದುರಸ್ತಿ ಕಾಮಗಾರಿಯ ಟೆಂಡರ್ ಅನುಮೋದಿಸುವ ಬಗ್ಗೆ

ಓದಲಾಗಿದೆ : 1. ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಕ್ರಮಾಂಕ: ಮುಇಂ/ಸನೀ(ಉ) ವಲಯ/ಬಿಜೆಪಿ/ಎಇ-3/2011-12/5237, ದಿನಾಂಕ: 12-10-2011.

ಪ್ರಸ್ತಾವನೆ :

ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕಿನ ಚಿಕ್ಕೊಣತಿ ಕೆರೆ ಪ್ರವಾಹ ಹಾನಿ ದುರಸ್ತಿ ಕಾಮಗಾರಿಯ ಅಂದಾಜಿಗೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯರವರ ಕಛೇರಿ ನೊಂದಣಿ ಸಂಖ್ಯೆ: 13/2011-12ರಡಿ ತಾಂತ್ರಿಕ ಮಂಜೂರಾತಿ ನೀಡಲಾಗಿದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಧಾರವಾಡ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಾಲದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	05-07-2011
ಜಿಲ್ಲಾ ಟೆಂಡರ್ ಬುಲೆಟಿನ್	08-07-2011
ಸಂಯುಕ್ತ ಕರ್ನಾಟಕ ದಿನಪತ್ರಿಕೆ	08-07-2011
ವಿಜಯ ಕರ್ನಾಟಕ ದಿನಪತ್ರಿಕೆ	09-07-2011

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು ಇವರು ಅರ್ಹತೆ ಹೊಂದಿದ್ದು ಇವರ ಆರ್ಥಿಕ ಬಿಡ್‌ಅನ್ನು ದಿನಾಂಕ 24-08-2011 ರಂದು ತೆರೆದು ಪರಿಶೀಲಿಸಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರ್ ಇಡಲಾದ ಮೊತ್ತ	ರೂ. 1,42,82,350/-
ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 1,42,55,911/-

ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
Government Order No. SANEEYEE 02 Pranika 2011 (Tech), Bangalore, dated 09-12-2011

Under the above circumstances, administrative approval is hereby accorded for taking up the above work with an estimated cost totaling to Rs. 47.56 crores (Rupees Forty seven crores and fifty six lakhs only) subject to the following conditions.

1. Implementation of these projects should be taken up only after receipt of necessary approval from the GOI.
2. The projects are to be completed within a period specified by Government of India
3. The funding of the scheme is in the ration of 75:25 between the Central Govt. and State Govt.
4. The central share is in the form of grant to the State
5. The projects will be implemented by the Water Resources Department (Minor Irrigation) as per the KTPP act.
6. The schemes shall be implemented as per the conditions and the guidelines issued by the GOI.
7. The implementation of the project shall be as per the required technical specifications and financial specifications as per the approved DPRs.
8. Technical sanction shall be accorded after getting necessary approval of the cabinet

By Order and in the name of the Governor of Karnataka

Rudramurthy

Ex-officio Under Secretary to Government

P.R. 2852 Water Resources Department (Minor Irrigation)

ಕಂದಾಯ ಸಚಿವಾಲಯ

ವಿಷಯ : ರಾಜ್ಯದಲ್ಲಿ ಬರಗಾಲದ ಹಿನ್ನಲೆಯಲ್ಲಿ ಮೇವಿನ ಖರೀದಿ ದರ ಮತ್ತು ಸಾಗಾಣಿಕೆ ದರಗಳನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ :

1. ಸರ್ಕಾರದ ಆದೇಶ ಸಂಖ್ಯೆ: ಕಂಇ 311 ಟಿಎನ್‌ಆರ್ 2002 ದಿನಾಂಕ: 20-06-2003.
2. ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 91 ಟಿಎಸ್‌ವೈ 2003, ದಿನಾಂಕ: 26-12-2003.
3. ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 362 ಟಿಎನ್‌ಆರ್ 2006, ದಿನಾಂಕ: 15-02-2007
4. ಆಯುಕ್ತರು, ಪಶುಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆ ಇವರ ಪತ್ರ ಸಂಖ್ಯೆ: ಆಪಸಂ/ಮೇವು/ವಿವ-17/ಪ್ರಕೃತಿ ವಿಕೋಪ/2011-12, ದಿನಾಂಕ: 22-11-2011.
5. ಜಿಲ್ಲಾಧಿಕಾರಿಗಳಿಂದ ಬಂದ ಬೇಡಿಕೆಯ ಪತ್ರಗಳು

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ ಮೇವು ಸಾಗಾಣಿಕೆ ದರಗಳನ್ನು ನಿಗದಿಗೊಳಿಸಿದ್ದು, ಹಾಗೂ ಉಲ್ಲೇಖ (2)ರ ಸರ್ಕಾರಿ ಆದೇಶದಲ್ಲಿ, ಮೇವು ದರಗಳನ್ನು ನಿಗದಿಗೊಳಿಸಿದ್ದು, ಉಲ್ಲೇಖ (3)ರ ಸರ್ಕಾರಿ ಆದೇಶದಲ್ಲಿ ಉಲ್ಲೇಖ (1) ಮತ್ತು (2)ರಲ್ಲಿ ನಿಗದಿಗೊಳಿಸಿದ ದರಗಳನ್ನೇ ಮುಂದುವರೆಸಿದ್ದು, ಈಗ ಬಹಳ ಸಮಯದವರೆಗೆ ದರಗಳ ಪರಿಷ್ಕರಣೆ ಆಗಿರುವುದಿಲ್ಲ. ಅಲ್ಲದೇ, ಮೇವು ಉತ್ಪಾದನಾ ವೆಚ್ಚ, ಸಾಗಾಣಿಕೆ ವೆಚ್ಚ ಮತ್ತು ಇಂಧನ ವೆಚ್ಚಗಳಲ್ಲಿ ಬಹಳಷ್ಟು ಏರಿಕೆಯಾಗಿರುವುದರಿಂದ 2003-04ರ ಸರ್ಕಾರಿ ಆದೇಶಗಳಲ್ಲಿ ನಿಗದಿಪಡಿಸಿರುವ ದರಗಳನ್ನು ಪರಿಷ್ಕರಿಸುವಂತೆ ಮೇಲೆ ಓದಲಾದ (4) ಮತ್ತು (5)ರಲ್ಲಿ ಅನುಕ್ರಮವಾಗಿ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಮತ್ತು ಜಿಲ್ಲಾಧಿಕಾರಿಗಳು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 289 ಟಿಎನ್‌ಆರ್ 2011, ಬೆಂಗಳೂರು, ದಿನಾಂಕ: 05-12-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಈ ಹಿಂದಿನ ಎಲ್ಲಾ ಆದೇಶಗಳನ್ನು ರದ್ದುಪಡಿಸಿ, ಬರ ಪೀಡಿತ ಪ್ರದೇಶಗಳನ್ನು ಗೋಶಾಲೆ ತೆರೆಯುವ ಸಲುವಾಗಿ ಮತ್ತು ಮೇವು ಬ್ಯಾಂಕ್ ಉದ್ದೇಶಕ್ಕಾಗಿ ಈ ಕೆಳಕಂಡಂತೆ ಮೇವು ಖರೀದಿ ದರ ಮತ್ತು ಸಾಗಾಣಿಕೆ ದರಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಈ ಕೆಳಕಂಡಂತೆ, ಪರಿಷ್ಕರಿಸಿ ಆದೇಶ ಹೊರಡಿಸಲಾಗಿದೆ.

ಕ್ರಮ ಸಂಖ್ಯೆ	ಮೇವಿನ ವಿಧ	ಪ್ರಸ್ತುತ ಚಾಲ್ತಿಯಲ್ಲಿರುವ ದರ ಪ್ರತಿ ಮೆಟ್ರಿಕ್ ಟನ್‌ಗೆ (ಸಾಗಾಣಿಕೆ ದರ ಹೊರತುಪಡಿಸಿ) ದರ ರೂ.	ಪರಿಷ್ಕೃತ ದರ ಪ್ರತಿ ಮೆಟ್ರಿಕ್ ಟನ್‌ಗೆ (ಸಾಗಾಣಿಕೆ ದರ ಹೊರತುಪಡಿಸಿ) ದರ-ರೂ.
1	ಒಣಗಿದ ಜೋಳದ ದಂಟು	2,000/-	3,000/-
2	ಒಣಗಿದ ಮುಸುಕಿನ ಜೋಳದ ಮೇವು	1,500/-	2,000/-
3	ಹಸಿರು ಮೇವು	750/-	1,500/-
4	ಬಾಡಿದ ಕಬ್ಬು (ಸೋಗೆ ಸಹಿತ)	650/-	2,000/-
5	ಭತ್ತದ ಒಣ ಹುಲ್ಲು	1,500/-	2,500/-
6	ರಾಗಿಯ ಒಣಹುಲ್ಲು	750/-	2,500/-

ಮೇವು ಸಾಗಾಣಿಕೆ ದರಗಳು

ಹಾಲಿ ಇರುವ ದರ ಪ್ರತಿ ಕ್ವಿಂಟಾಲ್‌ಗೆ/ಪ್ರತಿ ಕಿ.ಮೀ.ಗೆ-ರೂ.ಗಳು	ಪರಿಷ್ಕೃತ ದರ ಪ್ರತಿ ಕಿ.ಮೀ.ಗೆ- ರೂ.ಗಳು
0.50	1.00

- ಮೇವು ಸಾಗಾಣಿಕೆ ವೆಚ್ಚವನ್ನು ಪ್ರತಿ ಕಿ.ಮೀಗೆ ಗರಿಷ್ಟ 1.00 ರೂ. ಅಂತೆ ಖಾಸಗಿ ವಾಹನಗಳನ್ನು ಬಾಡಿಗೆಗೆ ಪಡೆದಾಗ ಮಾತ್ರ ನೀಡುವುದು.
- ಮೇವು ಸಾಗಾಣಿಕೆಯನ್ನು ಗರಿಷ್ಟ 150 ಕಿ.ಮೀ.ಗಳ ವಿಸ್ತೀರ್ಣದಲ್ಲಿ ಅನುಮತಿಸುವುದು.
- ಸರ್ಕಾರಿ ವಾಹನಗಳು ಲಭ್ಯವಿಲ್ಲದಿದ್ದಲ್ಲಿ ಮಾತ್ರ ಖಾಸಗಿ ವಾಹನಗಳನ್ನು ಬಾಡಿಗೆಗೆ ಪಡೆಯತಕ್ಕದ್ದು.
- ಮೇವು ಸಾಗಾಣಿಕೆ ವೆಚ್ಚವನ್ನು ಬರ ಪೀಡಿತವೆಂದು ಘೋಷಿಸಲಾಗಿರುವ ತಾಲ್ಲೂಕುಗಳಲ್ಲಿ ಮೇವಿನ ಕೊರತೆಯಿದ್ದಲ್ಲಿ ಮಾತ್ರ ಬಳಸಲು ಅನ್ವಯಿಸುತ್ತದೆ.
- ಜಿಲ್ಲಾಧಿಕಾರಿಗಳು ಮೇವಿನ ಕೊರತೆ ಇರುವ ಮತ್ತು ಮೇವಿನ ಸಾಗಾಣಿಕೆ ಮಾಡಬೇಕಾದ ಅಗತ್ಯತೆಯ ಬಗ್ಗೆ ಪ್ರಮಾಣೀಕರಿಸತಕ್ಕದ್ದು.
- ಮೇವು ಸಾಗಾಣಿಕೆ ವೆಚ್ಚವು ಲೋಡಿಂಗ್ ಮತ್ತು ಅನ್‌ಲೋಡಿಂಗ್ ವೆಚ್ಚವನ್ನು ಒಳಗೊಂಡಿರುತ್ತವೆ.

ಮೇಲ್ಕಂಡ ಉದ್ದೇಶಕ್ಕಾಗಿ ತಗಲುವ ವೆಚ್ಚವನ್ನು ಜಿಲ್ಲೆಗಳಿಗೆ ಎಸ್.ಡಿ.ಆರ್.ಎಫ್/ಎನ್.ಡಿ.ಆರ್.ಎಫ್ ನಿಧಿಯ ಅಡಿಯಲ್ಲಿ ಬಿಡುಗಡೆ ಮಾಡಿದ ಅನುದಾನದಿಂದ ಭರಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಎಂ. ಆನಂದಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ವಿ.ನಿ. ಮತ್ತು ಸೇವೆಗಳು-2)

ಪಿ.ಆರ್. ನಂ. 2853

ಕಂದಾಯ ಸಚಿವಾಲಯ

ವಿಷಯ : ಶ್ರೀ ಮಾರೆಪ್ಪ, ತಹಶೀಲ್ದಾರ್, ಕುಷ್ಟಗಿ ತಾಲ್ಲೂಕು, ಕೊಪ್ಪಳ ಜಿಲ್ಲೆ (ನಿವೃತ್ತ) ಇವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಮಾನ್ಯ ಉಪ ಲೋಕಯುಕ್ತರಿಗೆ ವಹಿಸುವ ಬಗ್ಗೆ.

ಓದಲಾಗಿದೆ :
1. ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ: ಲೋಕ್/ಐಎನ್‌ವಿ/(ಜಿ)/ಜಿ-44/ಸಿಆರ್ 10/2010 ಕೊಪ್ಪಳ, ದಿನಾಂಕ: 03-09-2010.
2. ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 58 ಎಡಿಇ 2010, ದಿನಾಂಕ: 23-09-2010.
3. ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ: ಲೋಕ್/ಐಎನ್‌ವಿ(ಜಿ/ಜಿ-44/ಸಿಆರ್ 10/2010 ಕೊಪ್ಪಳ, ದಿನಾಂಕ: 28-02-2011.
4. ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 58 ಎಡಿಇ 2010, ದಿನಾಂಕ: 03-06-2011.
5. ಮಾನ್ಯ ಉಪಲೋಕಾಯುಕ್ತರ ವರದಿ ಸಂಖ್ಯೆ: Compt/Uplok/GLB/232/2011/ARE-6, ದಿನಾಂಕ: 28-10-2011.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಸಂ. (1)ರ ದಿನಾಂಕ: 03-09-2010ರ ಪತ್ರದಲ್ಲಿ ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ಶ್ರೀ ಶಾಮಣ್ಣ ಬಿನ್ ದುರಗಪ್ಪ ಮಾದರ್, ಕೃಷಿಕ, ಗುಡ್ಡದ ಹನುಮಸಾಗರ, ಕುಷ್ಟಗಿ ತಾಲ್ಲೂಕು, ಇವರು ತಮ್ಮ ಗ್ರಾಮದ ಸರ್ವೆ ನಂ. 3/1 ರಲ್ಲಿ 4 ಎಕರೆ 31 ಗುಂಟೆ ಮತ್ತು ತನ್ನ ಅಣ್ಣನ ಮಗ ದುರಗಪ್ಪ ಬಿನ್ ಹನುಮಂತಪ್ಪ ಇದೇ ಸರ್ವೆ ನಂಬರಿನ 4 ಎಕರೆ 31 ಗುಂಟೆ ಜಮೀನಿನ ಸಾಗುವಳಿ ಚೀಟಿ ಪಡೆದುಕೊಂಡಿದ್ದು, ಸದರಿ ಜಮೀನುಗಳ ಪೂರ್ಣ ಅಧಿಕಾರ ಹೊಂದುವ ಸಲುವಾಗಿ ಪಹಣಿಗಳನ್ನು ಪಡೆಯಲು ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿ, ವಿಚಾರಿಸಿದಾಗ, ಶ್ರೀ ಮಾರೆಪ್ಪ, ತಹಶೀಲ್ದಾರ್, ಕುಷ್ಟಗಿ ತಾಲ್ಲೂಕು, ಇವರು ರೂ. 10,000/- ರೂಪಾಯಿಗಳನ್ನು ಲಂಚ ಕೊಡುವಂತೆ ಒತ್ತಾಯಿಸಿದ್ದರಿಂದ ಈ ಕುರಿತು ಸೂಕ್ತ ಕ್ರಮ ಕೈಗೊಳ್ಳವಂತೆ ಲೋಕಾಯುಕ್ತ ಪೊಲೀಸಿನವರಿಗೆ ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ ಕೊಪ್ಪಳ, ಇವರು ಮೇಲ್ಕಂಡ ಆರೋಪಿತ ಅಧಿಕಾರಿಯ ವಿರುದ್ಧ ಲಂಚ ನಿರೋಧಕ ಖಾಯಿದೆ 1998 ರ ಕಲಂ 7, 13, (1) ಡಿ ಜೊತೆಗೆ 13 (2)ರ ಪ್ರಕಾರ ಕೊಪ್ಪಳ ಲೋಕಾಯುಕ್ತ ಠಾಣೆ ಮೊಕದ್ದಮೆ ನಂ. 10/2010 ರಲ್ಲಿ ಪ್ರಕರಣವನ್ನು ದಾಖಲಿಸಿ, ತನಿಖೆಯನ್ನು ಕೈಗೊಂಡು ನಂತರ ಪಂಚ ಸಾಕ್ಷಿಗಳೊಂದಿಗೆ ತನಿಖಾಧಿಕಾರಿ ಮತ್ತು ಅವರ ಸಿಬ್ಬಂದಿಯವರು ದಿನಾಂಕ: 19-08-2010 ರಂದು ಬೀಸಿದ ಬಲೆಗೆ ಆರೋಪಿತ ಅಧಿಕಾರಿಯಾದ ಶ್ರೀ ಮಾರೆಪ್ಪ, ತಹಶೀಲ್ದಾರ್, ಕುಷ್ಟಗಿ ತಾಲ್ಲೂಕು, ಇವರು ತಮ್ಮ ಕಛೇರಿಯಲ್ಲಿ ಸಾಕ್ಷಿದಾರರುಗಳ ಸಮಕ್ಷಮ ದೂರುದಾರರಿಂದ ಲಂಚದ ಹಣ ರೂ. 10,000/-ವನ್ನು ಕೇಳಿ, ದೂರುದಾರರು ಕೊಡಲು ಹೋದಾಗ ಅಲ್ಲಿಯೇ ಇದ್ದ, ಖಾಸಗಿ ವ್ಯಕ್ತಿ ಶ್ರೀ ವೀರೇಶ್ ಬಿನ್ ಯಮನೂರಪ್ಪ ಮಂಗಳೂರು, ಇವರಿಗೆ ಕೊಡುವಂತೆ ತಿಳಿಸಿದ್ದು, ಅದರಂತೆ ಲಂಚದ ಹಣವನ್ನು ದೂರುದಾರರಿಂದ ಸದರಿ ಖಾಸಗಿ ವ್ಯಕ್ತಿಯ ಲಂಚದ ಹಣವನ್ನು ಪಡೆಯುವಾಗ ಸಿಕ್ಕಿಬಿದ್ದಿರುತ್ತಾರೆ. ಈ ರೀತಿ ನಡೆದ ಘಟನೆ ಬಗ್ಗೆ ದೂರುದಾರರು ಮತ್ತು ಸಾಕ್ಷಿದಾರರು ತಮ್ಮ ಹೇಳಿಕೆಯನ್ನು ದೃಢಪಡಿಸಿರುವುದರಿಂದ ಸದರಿ ಇಬ್ಬರು ಅರೋಪಿತರುಗಳನ್ನು ಘನ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ಹಾಜರು ಪಡಿಸಲಾಗಿದೆ. ಎಂದು ತಿಳಿಸುತ್ತಾ, ಶ್ರೀ ಮಾರೆಪ್ಪ ತಹಶೀಲ್ದಾರ್, ಕುಷ್ಟಗಿ ಮತ್ತು ಶ್ರೀ ವೀರೇಶ್, ಖಾಸಗಿ ವ್ಯಕ್ತಿ ಇವರುಗಳ ಮೇಲಿನ ಭ್ರಷ್ಟಾಚಾರದ ಆಪಾದನೆಗಳಲ್ಲಿ ಮೇಲು ನೋಟಕ್ಕೆ ಸತ್ಯಾಂಶವಿರುತ್ತದೆ. ಆದ್ದರಿಂದ ಆರೋಪಿ ಸರ್ಕಾರಿ ಅಧಿಕಾರಿಯಾದ ಶ್ರೀ ಮಾರೆಪ್ಪ, ತಹಶೀಲ್ದಾರ್, ಕುಷ್ಟಗಿ, ಕೊಪ್ಪಳ ಜಿಲ್ಲೆ, ಇವರು ಪ್ರಕರಣದ ಸುಗಮ ತನಿಖೆಗೆ ಅಡ್ಡಿ ಉಂಟು ಮಾಡುವ ಅಥವಾ ತನಿಖೆಯಲ್ಲಿ ಹಸ್ತಕ್ಷೇಪ ಮಾಡುವ ಹಾಗೂ ಸಾಕ್ಷಿ ಪುರಾವೆಗಳನ್ನು ನಾಶಗೊಳಿಸುವ ಸಾಧ್ಯತೆಗಳಿದ್ದರಿಂದ ಇವರನ್ನು 1957 ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 10(1) (ಎ) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಮೇಲೆ ಓದಲಾದ ಕ್ರಸಂ.(2) ದಿನಾಂಕ: 23-09-2010 ರ ಆದೇಶದಲ್ಲಿ ಅಮಾನತ್ತುಗೊಳಿಸಲಾಗಿತ್ತು.

ಮೇಲೆ ಓದಲಾದ ಕ್ರಸಂ. (3)ರ ದಿನಾಂಕ: 28-02-2011 ರ ಪತ್ರದಲ್ಲಿ ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ರವರು ಸದರಿ ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿರುವ ತನಿಖಾಧಿಕಾರಿಯ ಅಂತಿಮ ವರದಿಯೊಂದಿಗೆ ಆರೋಪಿತ ಸರ್ಕಾರಿ ಅಧಿಕಾರಿಯಾದ ಶ್ರೀ ಮಾರೆಪ್ಪ, ತಹಶೀಲ್ದಾರ್, ಕುಷ್ಟಗಿ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1998 ರ ಕಲಂ 7,13(1)ರ ಜೊತೆಗೆ 13(2) ಅಡಿಯಲ್ಲಿ ಎಸಗಿರುವ ಅಪರಾಧಕ್ಕಾಗಿ ಅಭಿಯೋಜನೆಗೆ ಒಳಪಡಿಸಲು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988ರ ಕಲಂ

19(1)(ಬಿ) ರನ್ವಯ ಸಕ್ಷಮ ನ್ಯಾಯಾಲಯದಲ್ಲಿ ಸದರಿ ಆರೋಪಿತ ಅಧಿಕಾರಿಗಳ ಅಭಿಯೋಜನೆಗೆ ಒಳಪಡಿಸಲು ಅರ್ಹರಿರುವುದರಿಂದ ಮಂಜೂರಾತಿಯನ್ನು ನೀಡುವ ಸಕ್ಷಮ ಪ್ರಾಧಿಕಾರ ಅರ್ಥಾತ್ ಸದರಿ ಆಪಾದಿತ ಸರ್ಕಾರಿ ಅಧಿಕಾರಿಯನ್ನು ಹುದ್ದೆಯಿಂದ ತೆಗೆದುಹಾಕುವ ಅಧಿಕಾರವುಳ್ಳ ಪ್ರಾಧಿಕಾರದ ಪೂರ್ವಾನುಮತಿ ಅತ್ಯಗತ್ಯವಾಗಿರುವುದರಿಂದ ಅಭಿಯೋಜನಾ ಮಂಜೂರಾತಿ ನೀಡುವಂತೆ ಕೋರಿದ್ದರು.

ಈ ಬಗ್ಗೆ ಅನುಮತಿ ನೀಡುವ ಸಂಬಂಧ ಅಪರ ಪೊಲೀಸ್ ನಿರ್ದೇಶಕರು ಒದಗಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಅಂದರೆ, ಫಿರ್ಯಾದುದಾರರ ದೂರು, ಪ್ರಥಮ ವರ್ತಮಾನ ವರದಿ, ಟ್ರ್ಯಾಪ್ ಪ್ರಕ್ರಿಯೆಯನ್ನು ಅನುಸರಿಸಿದ ಪಂಚನಾಮೆ, ಮಹಜರ್, ಧ್ವನಿ ಮುದ್ರಣ, ನೆರಳಿನಂತೆ ಹಿಂಬಾಲಿಸಿದ ಸಾಕ್ಷಿದಾರರ ಸಾಕ್ಷ್ಯ, ತನಿಖಾಧಿಕಾರಿಯ ವರದಿ ಮತ್ತು ರಸಾಯನಿಕ ಪರೀಕ್ಷೆಗಳ ವರದಿ ಮುಂತಾದ ದಾಖಲೆಗಳನ್ನು ಗಣನೆಗೆ ತೆಗೆದುಕೊಂಡಾಗ ಶ್ರೀ ಮಾರೆಪ್ಪ ನಿವೃತ್ತ ತಹಶೀಲ್ದಾರರ ವಿರುದ್ಧದ ಆರೋಪಗಳ ಬಗ್ಗೆ 1988ರ ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆಯಡಿ ಅವರನ್ನು ಅಭಿಯೋಜನೆಗೆ ಒಳಪಡಿಸಲು ಮೇಲ್ನೋಟಕ್ಕೆ ಸ್ಪಷ್ಟವಾದ ಒಂದು ಪ್ರಕರಣವಿರುವುದು ಸರ್ಕಾರಕ್ಕೆ ಮನವರಿಕೆಯಾಗಿದೆ. ಆದುದರಿಂದ ಕರ್ನಾಟಕ ಲೋಕಾಯುಕ್ತ ಕಛೇರಿಯ ಅಪರ ಪೊಲೀಸ್ ಮಹಾ ನಿರ್ದೇಶಕರ ವರದಿಯನ್ನು ಸರ್ಕಾರವು ಪರಿಗಣಿಸಿ, ಸದರಿ ನಿವೃತ್ತ ತಹಶೀಲ್ದಾರ್‌ರವರ ಕ್ರಿಮಿನಲ್ ದುರ್ನಡತೆಗಾಗಿ ಅವರನ್ನು ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನಾಗೊಳಿಸಲು ಮೇಲೆ ಓದಲಾದ ಕ್ರಮ ಸಂಖ್ಯೆ: (4)ರ ದಿನಾಂಕ: 03-06-2011 ರ ಆದೇಶದಲ್ಲಿ ಭ್ರಷ್ಟಾಚಾರ ನಿವಾರಣಾ ಅಧಿನಿಯಮ ಕಲಂ 7, 13(1)(ಡಿ) ಇದರ ಜೊತೆಗೆ ಓದಲಾದ ಕಲಂ 13(2) ರಡಿಯಲ್ಲಿ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೊಳಿಸಲು ಅಪರ ಪೊಲೀಸ್ ಶಿಫಾರಸ್ಸು ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಇವರಿಗೆ ಮಂಜೂರಾತಿ ನೀಡಲಾಗಿತ್ತು.

ಮಾನ್ಯ ಉಪ ಲೋಕಾಯುಕ್ತರು ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ದಿನಾಂಕ: 28-10-2011 ರ ತಮ್ಮ ವರದಿಯಲ್ಲಿ ಶ್ರೀ ಮಾರೆಪ್ಪ ಹಿಂದಿನ ತಹಶೀಲ್ದಾರ್, ಕುಷ್ಟಗಿ, ಕೊಪ್ಪಳ ಜಿಲ್ಲೆ ಇವರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1956 ರ ನಿಯಮ 3(1) ರನ್ವಯ ಕರ್ತವ್ಯ ಲೋಪವೆಸಗಿರುತ್ತಾರೆಂದು ತಿಳಿಸುತ್ತಾ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ನಿಯಮ 12(3) ರನ್ವಯ ಶ್ರೀಯುತರ ವಿರುದ್ಧ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸುವಂತೆ ಮತ್ತು ಶ್ರೀಯುತರು ಈಗಾಗಲೇ ನಿವೃತ್ತರಾಗಿರುವುದರಿಂದ ಕೆ.ಸಿ.ಎಸ್.ಆರ್. 1958 ರ ನಿಯಮ 114(2)(ಬಿ)(i) ರನ್ವಯ ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 1957 ರ ನಿಯಮ 14(ಎ) ರಡಿಯಲ್ಲಿ ವಿಚಾರಣೆ ನಡೆಸಲು ತಮಗೆ ವಹಿಸಿಕೊಡುವಂತೆ, ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಮಾನ್ಯ ಉಪ ಲೋಕಾಯುಕ್ತರ ದಿನಾಂಕ: 28-10-2011 ರ ವರದಿಯನ್ನು ಹಾಗೂ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಮಾನ್ಯ ಉಪ ಲೋಕಾಯುಕ್ತರ ಶಿಫಾರಸ್ಸನ್ನು ಒಪ್ಪಿ, ಶ್ರೀ ಮಾರೆಪ್ಪ, ಹಿಂದಿನ ತಹಶೀಲ್ದಾರ್, ಕುಷ್ಟಗಿ, ಕೊಪ್ಪಳ ಜಿಲ್ಲೆ ಇವರ ವಿರುದ್ಧ ಕೆ.ಸಿ.ಎಸ್.ಆರ್. 1958ರ ನಿಯಮ 114(2)(ಬಿ)(i) ರನ್ವಯ ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 1957 ರ ನಿಯಮ 14(ಎ) ರಡಿಯಲ್ಲಿ ವಿಚಾರಣೆ ನಡೆಸಲು ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸಲು ನಿರ್ಧರಿಸಿರುವುದರಿಂದ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಕಂಇ 58 ಎಡಿಇ 2010, ಬೆಂಗಳೂರು, ದಿನಾಂಕ: 07-12-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಮಾರೆಪ್ಪ, ಹಿಂದಿನ ತಹಶೀಲ್ದಾರ್, ಕುಷ್ಟಗಿ, ಕೊಪ್ಪಳ ಜಿಲ್ಲೆ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ ನಿಯಮಗಳು 1958ರ ನಿಯಮ 114(2)(ಬಿ)(i) ರಡಿಯಲ್ಲಿ ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 1957 ರ ನಿಯಮ 14(ಎ) ರಡಿಯಲ್ಲಿ ವಿಚಾರಣೆ ನಡೆಸಲು ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್. ಗೋಪಾಲಯ್ಯ

ಪಿ.ಆರ್. ನಂ. 2854

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಸೇವೆಗಳು-3)

ಕಂದಾಯ ಸಚಿವಾಲಯ

ವಿಷಯ : ಬಳ್ಳಾರಿ ಜಿಲ್ಲೆ, ಸಂಡೂರು ತಾಲ್ಲೂಕು, ಹೆಚ್.ಕೆ. ಹಳ್ಳಿ ಸ.ನಂ. 711 ಪೈಕಿ 5-00 ಎಕರೆ, ಜಮೀನನ್ನು ಕಲ್ಲುಪುಡಿ ತೆಗೆಯಲು ಮತ್ತು ಯಂತ್ರಗಳನ್ನು ಸ್ಥಾಪಿಸಲು ಮೆ. ಜಿ.ವಿ.ಆರ್. ಇನ್‌ಫ್ರಾ ಪ್ರಾಜೆಕ್ಟ್ ಲಿಮಿಟೆಡ್ ಬೆಂಗಳೂರು ಇವರಿಗೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ : ತಮ್ಮ ಪತ್ರ ಸಂಖ್ಯೆ: ಗಣಿ/78/2011-12 ದಿನಾಂಕ: 16-08-2011 ಹಾಗೂ ದಿನಾಂಕ: 29-10-2011.

ಪ್ರಸ್ತಾವನೆ:

ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ, ಬಳ್ಳಾರಿ ರವರು ಓದಲಾದ ದಿನಾಂಕ: 16-08-2011 ಮತ್ತು 29-10-2011ರ ಪತ್ರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಬಳ್ಳಾರಿ ಜಿಲ್ಲೆ, ಸಂಡೂರು ತಾಲ್ಲೂಕು, ಹೆಚ್.ಕೆ. ಹಳ್ಳಿ ಸ.ನಂ. 711 ಪೈಕಿ 5-00 ಎಕರೆ ಜಮೀನನ್ನು ಕಲ್ಲುಪುಡಿ ತೆಗೆಯಲು ಮತ್ತು ಯಂತ್ರಗಳನ್ನು ಸ್ಥಾಪಿಸಲು ಮೆ. ಜಿ.ವಿ.ಆರ್. ಇನ್‌ಫ್ರಾ ಪ್ರಾಜೆಕ್ಟ್ ಲಿಮಿಟೆಡ್ ಬೆಂಗಳೂರು ಇವರಿಗೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡುವ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೆ.

2) ಕಲ್ಲುಪುಡಿ ತೆಗೆಯಲು ಮತ್ತು ಯಂತ್ರಗಳನ್ನು ಸ್ಥಾಪಿಸುವ ಸಲುವಾಗಿ ಮೆ. ಜಿವಿಆರ್. ಇನ್‌ಫ್ರಾ ಪ್ರಾಜೆಕ್ಟ್ ಲಿಮಿಟೆಡ್ ಬೆಂಗಳೂರು ಇವರಿಗೆ ಬಳ್ಳಾರಿ ಜಿಲ್ಲೆ ಸಂಡೂರು-ಕೂಡ್ಲಿಗಿ ರಸ್ತೆ, ಸಂಡೂರು-ಹೊಸಪೇಟೆ ರಸ್ತೆ ಹಾಗೂ ಸಂಡೂರು-ತೋರಣಗಲ್ಲು ರಸ್ತೆ ಕಾಮಗಾರಿ ಕೆಲಸ ಮಾಡಲು ಕೆ.ಆರ್.ಡಿ.ಸಿ.ಎಲ್ ಬೆಂಗಳೂರು ಇವರಿಂದ ಮಂಜೂರಾಗಿದ್ದು, ಸದರಿ ಕಾಮಗಾರಿ ಕೆಲಸಕ್ಕೆ 9 ಲಕ್ಷ ಎಂ.ಟಿ. ಮೆಟಲ್ ಆವಶ್ಯಕವಾಗಿರುತ್ತದೆ. ಅರ್ಜಿದಾರರು ಕೋರಿರುವ ಜಮೀನು ಸರ್ಕಾರಿ ಜಮೀನಾಗಿದ್ದು, ಸದರಿ ಜಮೀನಿನಲ್ಲಿ ಯಾವುದೇ ಅತಿಕ್ರಮಣ ಇರುವುದಿಲ್ಲ.

ದೂರವಿದ್ದು ರಸ್ತೆ ಸಂಪರ್ಕ ಹೊಂದಿದೆ. ಹಾಗೂ ಅರಣ್ಯ ಪ್ರದೇಶಕ್ಕೆ ಸೇರಿಲ್ಲವೆಂದು ವ್ಯವಸಾಯಕ್ಕೆ ಯೋಗ್ಯ ಇರುವುದಿಲ್ಲವೆಂದು ಹಾಗೂ ಸ್ಥಳವು ಸೂಕ್ತವಿರುತ್ತದೆಂದು ವರದಿಸಿರುತ್ತಾರೆ.

3) ಪ್ರಸ್ತಾಪಿತ ಹೆಚ್.ಕೆ. ಹಳ್ಳಿ ಸ.ನಂ. 711 ಪೈಕಿ 5-00 ಎಕರೆ ಜಮೀನು ಸರ್ಕಾರಿ ಕಂದಾಯ ಜಮೀನಾಗಿರುತ್ತದೆ. ಕೆ.ಆರ್.ಡಿ.ಸಿ.ಎಲ್ ಇವರು ತೋರಣಗಲ್ಲಿನಿಂದ ಕೂಡ್ಲಿಗಿವರೆಗೆ ಮತ್ತು ಸಂಡೂರಿನಿಂದ ಹೊಸಪೇಟೆ ವರೆಗಿನ ರಸ್ತೆಗಳು ಸಂಪೂರ್ಣವಾಗಿ ಹಾಳಾಗಿರುವುದರಿಂದ ಅವುಗಳನ್ನು ಉನ್ನತ ದರ್ಜೆ ರಸ್ತೆಗಳನ್ನಾಗಿ ಮಾಡಲು ಟೆಂಡರ್ ಕರೆದಿದ್ದು. ಮೆ. ಜಿವಿಆರ್.ಇನ್‌ಫ್ರಾ ಪ್ರಾಜೆಕ್ಟ್ ಲಿಮಿಟೆಡ್ ಬೆಂಗಳೂರು ಇವರಿಗೆ ಕಾಮಗಾರಿ ನಿರ್ವಹಣೆಯನ್ನು ವಹಿಸಲಾಗಿದ್ದು. ಸದರಿಯವರು ಅಗತ್ಯವಿರುವ ಜೆಲ್ಲಿ ಮೆಟಲ್‌ಗಾಗಿ ಈಗಾಗಲೇ ಉಪನಿರ್ದೇಶಕರು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಹೊಸಪೇಟೆ ಇವರಿಂದ ಶಿಫಾರಸ್ಸು ಪಡೆದಿರುತ್ತಾರೆ. ಸರ್ಕಾರದ ದಿನಾಂಕ: 07-09-2011 ರ ಹೊಸ ನೀತಿಯಂತೆ ನೇಮಕ ಮಾಡಿರುವ ಜಿಲ್ಲಾ ಮಟ್ಟದ ಸಮಿತಿಯು ಇದಕ್ಕೆ ಅನುಮೋದನೆ ನೀಡಬೇಕಾಗಿದ್ದು. ಈಗ ಪ್ರಸ್ತಾಪಿಸಿದ ಜಮೀನಿಗೆ ಮಂಜೂರಾದ ನಂತರವಷ್ಟೆ ಪರವಾನಿಗೆ ನೀಡಬೇಕಾಗಿರುತ್ತದೆ. ಸದರಿ ಕಂಪೆನಿಯು ರಸ್ತೆ ಕಾಮಗಾರಿ ಗುತ್ತಿಗೆ ಪಡೆದಿರುವ ಬಗ್ಗೆ ಡಿವಿಜನಲ್ ಇಂಜಿನಿಯರ್ ಕೆ.ಆರ್.ಡಿ.ಸಿ.ಎಲ್ ಇವರು ದಿನಾಂಕ: 22-07-2011ರಲ್ಲಿ Work Order ನೀಡಿರುತ್ತಾರೆ. ರಸ್ತೆ ಕಾಮಗಾರಿ ನಿರ್ವಹಿಸಲು ಅಗತ್ಯವಾಗಿ ಬೇಕಾದ ಕಲ್ಲಿನ ಪ್ರಮಾಣ ಮತ್ತು ಕಲ್ಲುಗಣಿ ಪ್ರದೇಶದ ಬಗ್ಗೆ ಮಾಡಿರುವ ಅಂದಾಜು ಪಟ್ಟಿಯಂತೆ ಒಟ್ಟು 900788 ಮೆಟ್ರಿಕ್ ಟನ್ ಅಗತ್ಯವಿರುತ್ತದೆಂದು ಅಂದಾಜು ಪಟ್ಟಿಯೊಂದಿಗೆ ಸಲ್ಲಿಸಿರುತ್ತಾರೆ. ಪ್ರಸ್ತಾಪಿತ 5-00 ಎಕರೆ ಜಮೀನನ್ನು ಗುತ್ತಿಗೆ ನೀಡುವುದು ಅವಶ್ಯಕವಾಗಿರುವುದರಿಂದ ಸರ್ಕಾರದ ಪೂರ್ವಾನುಮೋದನೆ ನೀಡಲು ಕೋರಿರುತ್ತಾರೆ.

4) ಜಿಲ್ಲಾಧಿಕಾರಿಗಳು ಬಳ್ಳಾರಿ ರವರ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 54 ಎಲ್‌ಜಿಇ 2011 ಬೆಂಗಳೂರು, ದಿನಾಂಕ: 08-12-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಬಳ್ಳಾರಿ ಜಿಲ್ಲೆ, ಸಂಡೂರು ತಾಲ್ಲೂಕು, ಹೆಚ್.ಕೆ. ಹಳ್ಳಿ ಸ.ನಂ. 711ರ ಪೈಕಿ 5-00 ಎಕರೆ ಜಮೀನನ್ನು ಜೆಲ್ಲಿ ಮೆಟಲ್ ತೆಗೆದು ರಸ್ತೆ ದುರಸ್ತಿಗಾಗಿ ಉಪಯೋಗಿಸಿಕೊಳ್ಳಲು ಮತ್ತು ಯಂತ್ರಗಳನ್ನು ಸ್ಥಾಪಿಸುವ ಉದ್ದೇಶಕ್ಕಾಗಿ ಮೆ. ಜಿವಿಆರ್‌ಇನ್‌ಫ್ರಾ ಪ್ರಾಜೆಕ್ಟ್ ಲಿಮಿಟೆಡ್ ಕಂಪನಿ ಬೆಂಗಳೂರು ಇವರಿಗೆ ಕರ್ನಾಟಕ ಭೂಮಂಜೂರಾತಿ ನಿಯಮಗಳು 1969ರ ನಿಯಮ 19ರನ್ವಯ 2 ವರ್ಷಗಳ ಅವಧಿಗೆ ಮಾರುಕಟ್ಟೆ ದರದ ಶೇಕಡ 10ರಷ್ಟು ಗುತ್ತಿಗೆ ವಿಧಿಸಿ ಗುತ್ತಿಗೆ ಆಧಾರದ ಮೇಲೆ ಈ ಕೆಳಕಂಡ ಷರತ್ತುಗಳನ್ನು ವಿಧಿಸಿ, ಮಂಜೂರು ಮಾಡಲು ಸರ್ಕಾರದ ಅನುಮತಿ ನೀಡಿ ಅದೇಶಿಸಲಾಗಿದೆ.

1) ಕಲ್ಲುಗಣಿ ಕೈಗೊಳ್ಳಲು ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಪರವಾನಿಗೆ ಪಡೆದು ರಸ್ತೆಗಾಗಿ ಬೇಕಾಗುವ ಕಲ್ಲು ಮಾತ್ರ ತೆಗೆಯಬೇಕು.
2) ಪರಿಸರ ರಕ್ಷಣೆ ಬಗ್ಗೆ ನಿಗದಿಪಡಿಸಿದ ಮಾರ್ಗಸೂಚಿ ಹಾಗೂ ನಿಯಮಗಳನ್ನು ಪಾಲಿಸಬೇಕು.
3) ಟೆಂಡರ್ ಅವಧಿಯ ವರೆಗೆ ಮಾತ್ರ ಗುತ್ತಿಗೆ ನೀಡಿ ನಂತರ ರದ್ದುಪಡಿಸಬೇಕು.
4) ಕೆ.ಆರ್.ಡಿ.ಸಿ.ಎಲ್ ಸಂಸ್ಥೆಯು ಗುತ್ತಿಗೆ ಪಡೆದ ಕಂಪನಿ ಕಲ್ಲನ್ನು ರಸ್ತೆಗಾಗಿ ಮಾತ್ರ ಉಪಯೋಗಿಸುತ್ತಿದೆ ಎಂದು ಖಾತರಿಪಡಿಸಿಕೊಳ್ಳಬೇಕು.
5) ಅರಣ್ಯ ಮತ್ತು ಪರಿಸರ ಇಲಾಖೆಯಿಂದ ಅನುಮತಿ ಪಡೆಯಬೇಕು.
6) ಮೇಲೆ ತಿಳಿಸಿದ ಷರತ್ತು ಉಲ್ಲಂಘಿಸಿದರೆ ಜಮೀನು ಗುತ್ತಿಗೆ ನೀಡಿದ ಗುತ್ತಿಗೆ ಕರಾರು ರದ್ದು ಪಡಿಸಬೇಕು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ:857/ವೆಚ್ಚ-7/2011 ದಿನಾಂಕ: 23-11-2011ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್.ಜಿ. ಲಕ್ಷ್ಮೀನಾರಾಯಣ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂ.ಮಂ-3)

ಪಿ.ಆರ್. ನಂ. 2855

ಕಂದಾಯ ಸಚಿವಾಲಯ

ವಿಷಯ : 2006ನೇ ತಂಡದ ತಪಶೀಲ್ದಾರರುಗಳ ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಘೋಷಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಅಧಿಸೂಚನೆ ಸಂ.: ಕಂಇ 51 ಎಎಸ್‌ಡಿ 2008, ದಿನಾಂಕ: 23-05-2008.
2. ಸರ್ಕಾರದ ಅಧಿಕೃತ ಜ್ಞಾಪನ ಸಂ.: ಆರ್‌ಡಿ 223 ಎಎಸ್‌ಡಿ 2008, ದಿನಾಂಕ: 11-06-2008.
3. ಸರ್ಕಾರದ ಆದೇಶ ಸಂ.: ಕಂಇ 462 ಎಎಸ್‌ಡಿ 2010, ದಿನಾಂಕ: 21-10=2011, 27-01-2011, 02-04-2011 ಮತ್ತು 22-06-2011.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಸಂ.: (1) ದಿನಾಂಕ: 23-05-2008 ರ ಸರ್ಕಾರಿ ಅಧಿಸೂಚನೆಯಲ್ಲಿ ಕರ್ನಾಟಕ ಗೆಜೆಟೆಡ್ ಪ್ರೊಬೇಷನರುಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ) ನಿಯಮಗಳು 1997ರ ಅಡಿಯಲ್ಲಿ ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆಗೊಂಡ ಒಟ್ಟು 40 ಅಭ್ಯರ್ಥಿಗಳಿಗೆ ಪರಿವೀಕ್ಷಣಾ ತಹಶೀಲ್ದಾರ್ ಗುಂಪು-ಬಿ ಹುದ್ದೆಗೆ ನೇಮಕಾತಿ ಆದೇಶ ನೀಡಲಾಗಿತ್ತು. ಸದರಿ ಅಧಿಸೂಚನೆಯಲ್ಲಿ ಒಟ್ಟು 40 ಪರಿವೀಕ್ಷಣಾ ತಹಶೀಲ್ದಾರರುಗಳನ್ನು 2 ವರ್ಷಗಳ ಕಾಲ ಪರಿವೀಕ್ಷಣಾ ಅವಧಿಯ ಮೇಲೆ ಇರುತ್ತಾರೆಂದು ಮತ್ತು ಈ ಅವಧಿಯಲ್ಲಿ ಕನ್ನಡ ಭಾಷಾ ಪರೀಕ್ಷೆ ಮತ್ತು ನಿಗದಿತ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕೆಂದು ತಿಳಿಸಲಾಗಿತ್ತು. ನೇಮಕಗೊಂಡ ಎಲ್ಲಾ 40 ಪರಿವೀಕ್ಷಣಾ ತಹಶೀಲ್ದಾರರುಗಳು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.

ಮೇಲೆ ಓದಲಾದ ಕ್ರಸಂ. (2) ದಿನಾಂಕ: 11-06-2008ರಲ್ಲಿ ಎಲ್ಲಾ ಪರಿವೀಕ್ಷಣಾ ತಹಶೀಲ್ದಾರರುಗಳಿಗೆ ಎರಡು ವರ್ಷಗಳ ತರಬೇತಿಗಾಗಿ ವಿವಿಧ ಜಿಲ್ಲೆಗಳಿಗೆ ತೈನಾತಿಸಲಾಗಿತ್ತು. ಆದರೆ. ಇವರುಗಳಲ್ಲಿ ವಿವಿಧ ಕಾರಣಗಳಿಂದ/ಬೇರೆ ಹುದ್ದೆಗೆ ನೇಮಕಗೊಂಡಿದ್ದರಿಂದ ಒಟ್ಟು 5 ಪರಿವೀಕ್ಷಣಾ

ತಹಶೀಲ್ದಾರರುಗಳು (ಶ್ರೀ ಶಂಭುಲಿಂಗಪ್ಪ, ಶ್ರೀ ಅಭ್ಯುದಯ ಎ. ಆನಂದ್, ಶ್ರೀ ಎಂ.ಜಿ. ಚೇತನ, ಶ್ರೀ ಪ್ರಸನ್ನಕುಮಾರ್ ಬಿ.ಕೆ. ಮತ್ತು ಶ್ರೀ ಇಸ್ಲಾವುದ್ದೀನ್) ಸೇವೆಯಿಂದ ಬಿಟ್ಟುಹೋಗಿರುತ್ತಾರೆ.

ಮೇಲೆ ಓದಲಾದ ಕ್ರಸಂ. (3)ರ ಆದೇಶಗಳಲ್ಲಿ ಇನ್ನುಳಿದ 35 ಜನ ಪ್ರೊಬೇಷನರಿ ತಹಶೀಲ್ದಾರರುಗಳ ಪೈಕಿ 31 ಜನ ಪ್ರೊಬೇಷನರಿ ತಹಶೀಲ್ದಾರರು ಇಲಾಖಾ ಪರೀಕ್ಷೆ ಪಾಸಾಗಿದ್ದು ಮತ್ತು ಇವರ ವಿರುದ್ಧ ಯಾವುದೇ ಇಲಾಖಾ ವಿಚಾರಣೆ ಬಾಕಿ ಇರಲಿಲ್ಲವಾದ್ದರಿಂದ ಹಾಗೂ ಅವರುಗಳ ಕಾರ್ಯನಿರ್ವಹಣಾ ವರದಿಗಳು ಸಮರ್ಪಕವಾಗಿದ್ದರಿಂದ ಕರ್ನಾಟಕ ನಾಗರೀಕ ಸೇವಾ (ಪ್ರೊಬೇಷನ್) ನಿಯಮಗಳು 1977ರ ನಿಯಮ 5(1)ರನ್ವಯ ಪ್ರೊಬೇಷನ್ ಅವಧಿಯನ್ನು ತೃಪ್ತಿಕರ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಘೋಷಿಸಿ ಆದೇಶಿಸಲಾಗಿರುತ್ತದೆ.

ಉಳಿದ ಪ್ರೊಬೇಷನರಿ ತಹಶೀಲ್ದಾರರುಗಳ ಪ್ರೊಬೇಷನರಿ ಅವಧಿಯನ್ನು ಘೋಷಿಸುವ ಕುರಿತು ಜಿಲ್ಲಾಧಿಕಾರಿಗಳಿಂದ ಬಂದ ಮಾಹಿತಿಯನ್ನು ಕ್ರೋಢೀಕರಿಸಲಾಗಿದೆ. ಈ ಮಾಹಿತಿ ಪ್ರಕಾರ ಪ್ರೊಬೇಷನ್ ಅವಧಿಯಲ್ಲಿನ ತೃಪ್ತಿಕರ ಕಾರ್ಯನಿರ್ವಹಣಾ ವರದಿಗಳು, ನಿಗದಿ ಪಡಿಸಿದ ಇಲಾಖಾ ಪರೀಕ್ಷೆಗಳಲ್ಲಿ ಪಾಸಾಗಿರುವ ಬಗ್ಗೆ ದೃಢೀಕೃತ ಸರ್ಟಿಫಿಕೇಟ್, ತರಬೇತಿಯು ತೃಪ್ತಿಕರವಾಗಿರುವ ಬಗ್ಗೆ ಮೇಲಾಧಿಕಾರಿಗಳು ಶಿಫಾರಸ್ಸು ಮಾಡಿರುವ ವಿವರ ಮತ್ತು ಪ್ರೊಬೇಷನ್ ಅವಧಿಯಲ್ಲಿ ಯಾವುದೇ ಇಲಾಖಾ ವಿಚಾರಣೆ ಬಾಕಿ ಇಲ್ಲದೇ ಇರುವ ಈ ಕೆಳಕಂಡ 3 ಜನ ಪ್ರೊಬೇಷನರ್ ತಹಶೀಲ್ದಾರರುಗಳು ಪ್ರೊಬೇಷನರಿ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ (ಪ್ರೊಬೇಷನ್) ನಿಯಮಗಳು 1977ರ ನಿಯಮ 5(1)ರನ್ವಯ ಪ್ರೊಬೇಷನ್ ಅವಧಿಯನ್ನು ತೃಪ್ತಿಕರ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಘೋಷಿಸಲು ತೀರ್ಮಾನಿಸಿರುವುದರಿಂದ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 462 ಎಎಸ್‌ಡಿ 2010, ಬೆಂಗಳೂರು, ದಿನಾಂಕ: 22–10–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಈ ಕೆಳಕಂಡ 3 ಪ್ರೊಬೇಷನರಿ ತಹಶೀಲ್ದಾರರುಗಳು ಕರ್ನಾಟಕ ಸಿವಿಲ್ ಸೇವಾ (ಪರಿವೀಕ್ಷಣಾ) ನಿಯಮಗಳು 1977ರ ನಿಯಮ 5(1) ರಡಿ ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸುತ್ತಾರೆಂದು ಘೋಷಿಸಿ ಆದೇಶಿಸಿದೆ.

ಕ್ರಮ ಸಂಖ್ಯೆ	ಪರಿವೀಕ್ಷಣಾ ತಹಶೀಲ್ದಾರರ ಹೆಸರು (ಶ್ರೀ/ಶ್ರೀಮತಿ)	ಪರಿವೀಕ್ಷಣಾ ಅವಧಿ ಪ್ರಾರಂಭವಾದ ದಿನಾಂಕ	ಪರಿವೀಕ್ಷಣಾ ಅವಧಿ ಮುಕ್ತಾಯವಾದ ದಿನಾಂಕ
1	ಭಾಸ್ಕರ್. ಎನ್.	23–05–2008	22–05–2010
2	ವೀರೇಶ್ ಬಿರಾದಾರ್	23–05–2008	22–05–2010
3	ಬಾಳಪ್ಪ ಹಂದಿಗುಂದ	23–05–2008	08–04–2011

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್. ಗೋಪಾಲಯ್ಯ

ಪಿ.ಆರ್. ನಂ. 2856

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಸೇವೆಗಳು–3)

ಕಂದಾಯ ಸಚಿವಾಲಯ

ವಿಷಯ : ಬೆಳಗಾಂ ಜಿಲ್ಲೆ ಚಿಕ್ಕೋಡಿ ತಾಲ್ಲೂಕು, ಸದಲಗಾ ಪಟ್ಟಣದ ಉಪ ನೋಂದಣಿ ಕಛೇರಿ ಸಿಬ್ಬಂದಿ ನಿಯೋಜನೆಯನ್ನು ಮುಂದುವರೆಸುವ ಬಗ್ಗೆ.

ಓದಲಾಗಿದೆ :

1. ಸರ್ಕಾರದ ಆದೇಶ ಸಂಖ್ಯೆ: ಕಂಇ 69 ಮುನೋಸ 2001, ದಿನಾಂಕ: 11–06–2001.
2. ಸರ್ಕಾರದ ಆದೇಶ ಸಂಖ್ಯೆ: ಕಂಇ 87 ಮುನೋಸ 2006, ದಿನಾಂಕ: 11–08–2006.
3. ಸರ್ಕಾರದ ಆದೇಶ ಸಂಖ್ಯೆ: ಕಂಇ 52 ಮುನೋಸ 2007, ದಿನಾಂಕ: 16–10–2007.
4. ಸರ್ಕಾರದ ಆದೇಶ ಸಂಖ್ಯೆ: ಕಂಇ 46 ಮುನೋಸ 2008, ದಿನಾಂಕ: 20–04–2009.
5. ಸರ್ಕಾರದ ಆದೇಶ ಸಂಖ್ಯೆ: ಕಂಇ 69 ಮುನೋಸ 2009, ದಿನಾಂಕ: 17–09–2010.
6. ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಅಯುಕ್ತರವರ ಪತ್ರ ಸಂಖ್ಯೆ: ಇಎಸ್‌ಟಿ 1–103/01–02 ದಿನಾಂಕ: 23–07–2011.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ: 11–06–2011ರ ಸರ್ಕಾರದ ಆದೇಶದಲ್ಲಿ ಬೆಳಗಾವಿ ಜಿಲ್ಲೆಯ, ಚಿಕ್ಕೋಡಿ ತಾಲ್ಲೂಕಿನ, ಸದಲಗಾ ಪಟ್ಟಣದಲ್ಲಿ ಹೊಸದಾಗಿ ಉಪ ನೋಂದಣಿ ಕಛೇರಿ ಪ್ರಾರಂಭಿಸಲು ಅನುಮತಿ ನೀಡಲಾಗಿದೆ. ಉಪ ನೋಂದಣಿ ಕಛೇರಿ ಕರ್ತವ್ಯಗಳ ನಿರ್ವಹಣೆಗೆ ಸಿಬ್ಬಂದಿಯನ್ನು ನಿಯೋಜನೆ ಮೇಲೆ ಭರ್ತಿ ಮಾಡಲು ಅನುಮತಿ ನೀಡಲಾಗಿತ್ತು. ತದನಂತರ ತಾತ್ಕಾಲಿಕವಾಗಿ ಹುದ್ದೆಗಳನ್ನು ಸೃಜಿಸಿ ಆದೇಶಿಸಿದೆ. ಉಪ ನೋಂದಣಿ ಕಛೇರಿಯಿಂದ ಹೆಚ್ಚಿನ ರಾಜಸ್ವ ಸಂಗ್ರಹವಾಗುತ್ತಿರುವುದರಿಂದ ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರವರ ಕೋರಿಕೆಯನ್ವಯ ತಾತ್ಕಾಲಿಕವಾಗಿ ಸೃಜಿಸಲಾಗಿರುವ ಸಿಬ್ಬಂದಿಯನ್ನು ಮೇಲೆ ಓದಲಾದ (2) ರಿಂದ (5)ರ ವರೆಗಿನ ಸರ್ಕಾರದ ಆದೇಶಗಳಲ್ಲಿ ಕಾಲಕಾಲಕ್ಕೆ ಮುಂದುವರೆಸಿಕೊಂಡು ಬರಲಾಗಿದೆ.

ಮೇಲೆ ಓದಲಾದ (6) ದಿನಾಂಕ: 23–07–2011ರ ಪತ್ರದಲ್ಲಿ ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಸದರಿ ಕಛೇರಿಯಿಂದ ಹೆಚ್ಚಿನ ರಾಜಸ್ವವು ಸಂಗ್ರಹಣೆಯಾಗುತ್ತಿರುವುದರಿಂದ ಹಾಗೂ ಸಾರ್ವಜನಿಕರಿಗೆ ಅನುಕೂಲವಾಗುವ ದೃಷ್ಟಿಯಿಂದ ಸದರಿ ಕಛೇರಿಗೆ ಮಂಜೂರಾದ ಹಂಗಾಮಿ ಹುದ್ದೆಗಳನ್ನು ದಿನಾಂಕ: 01–04–2011 ರಿಂದ ಜಾರಿಗೆ ಬರುವಂತೆ ಮುಂದುವರೆಸುವಂತೆ ಕೋರಿರುತ್ತಾರೆ.

ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಬೆಳಗಾವಿ ಜಿಲ್ಲೆಯ, ಚಿಕ್ಕೋಡಿ ತಾಲ್ಲೂಕಿನ, ಸದಲಗಾ ಪಟ್ಟಣದಲ್ಲಿರುವ ಉಪ ನೋಂದಣಿ ಕಛೇರಿ ಸಿಬ್ಬಂದಿಯನ್ನು ದಿನಾಂಕ: 01–04–2011 ರಿಂದ 31–03–2013ರವರೆಗೆ 2 ವರ್ಷಗಳ ಅವಧಿಗೆ ತಾತ್ಕಾಲಿಕವಾಗಿ ಮುಂದುವರೆಸಲು ಸರ್ಕಾರವು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 39 ಮುನೋಸೇ 2011, ಬೆಂಗಳೂರು, ದಿನಾಂಕ: 21-11-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ದಿನಾಂಕ: 11-06-2001ರ ಸರ್ಕಾರದ ಆದೇಶ ಸಂಖ್ಯೆ: ಕಂಇ 69 ಮುನೋಸ 2001 ರಲ್ಲಿ ಸೃಜಿಸಲಾದ ಈ ಕೆಳಗೆ ನಮೂದಿಸಿರುವ ಹುದ್ದೆಗಳನ್ನು ದಿನಾಂಕ: 01-04-2011 ರಿಂದ 31-03-2013 ರವರೆಗೆ 2 ವರ್ಷಗಳ ಅವಧಿಗೆ ತಾತ್ಕಾಲಿಕವಾಗಿ ಮುಂದುವರೆಸಿ ಆದೇಶಿಸಿದೆ.

ಕ್ರಮ ಸಂಖ್ಯೆ	ಪದನಾಮ	ಮಂಜೂರಾದ ಹುದ್ದೆ
1.	ಉಪ ನೋಂದಣಾಧಿಕಾರಿ	1
2.	ಪ್ರಥಮ ದರ್ಜೆ ಸಹಾಯಕ	1
3.	ದ್ವಿತೀಯ ದರ್ಜೆ ಸಹಾಯಕ	2
4.	ಜವಾನ	1
5.	ಕಾವಲುಗಾರ	1

ಈ ಮೇಲ್ಕಂಡ ಸಿಬ್ಬಂದಿಗೆ ವೇತನ ಭತ್ಯೆಗಳನ್ನು 2011-12ನೇ ಸಾಲಿನ ಲೆಕ್ಕ ಶೀರ್ಷಿಕೆ 2030-03-001-1-00 ರಡಿ ಭರಿಸತಕ್ಕದ್ದು. ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: 1 ಟಿಎಫ್‌ಪಿ 96 ದಿನಾಂಕ: 11-07-1996 ರಲ್ಲಿ ಸರ್ಕಾರದ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಲಾಗಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ.ಕೆ. ರಾಮಚಂದ್ರ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ನೋಂದಣಿ ಮತ್ತು ಮುದ್ರಾಂಕ)

ಪಿ.ಆರ್. ನಂ. 2857

ಕಂದಾಯ ಸಚಿವಾಲಯ

ವಿಷಯ : ಶ್ರೀ ಆರ್. ಶ್ರೀನಿವಾಸಯ್ಯ, ಹಿಂದಿನ ತಹಶೀಲ್ದಾರ್, ಗುಡಿಬಂಡೆ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, ಪ್ರಸ್ತುತ ತಹಶೀಲ್ದಾರ್, ಬಿ.ಎಮ್.ಆರ್.ಸಿ.ಎಲ್ ಇವರಿಗೆ ತಹಶೀಲ್ದಾರ್ ಗ್ರೇಡ್-1 ಹುದ್ದೆಗೆ ಪೂರ್ವಾನ್ವಯವಾಗಿ ಬಡ್ತಿ ನೀಡುವ ಬಗ್ಗೆ.

ಓದಲಾಗಿದೆ:
1. ಶ್ರೀ ಆರ್. ಶ್ರೀನಿವಾಸಯ್ಯ, ತಹಶೀಲ್ದಾರ್, ಇವರ ಮನವಿ ದಿನಾಂಕ : 08-10-2010
2. ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 06 ಎಡಿಇ 2006, ದಿನಾಂಕ: 09-01-2009.
3. ಪ್ರಾದೇಶಿಕ ಆಯುಕ್ತರು ಇವರ ಪ್ರಕರಣದ ಸಂಖ್ಯೆ : ಸಿಸಿಎ ವಿವ/78/08-09, ದಿನಾಂಕ : 23-09-2010.
4. ಸರ್ಕಾರದ ಪತ್ರ ದಿನಾಂಕ : 19-07-2011 ರಲ್ಲಿ ಕರ್ನಾಟಕ ಲೋಕ ಸೇವಾ ಆಯೋಗದ ಸಹಮತಿ ಕೋರಿರುವ ಬಗ್ಗೆ
5. ಕರ್ನಾಟಕ ಲೋಕ ಸೇವಾ ಆಯೋಗದ ಪತ್ರ ಸಂಖ್ಯೆ : ಪಿಎಸ್‌ಸಿ 84 ಸಿಎನ್ ಎಸ್ 2011, ದಿನಾಂಕ : 11-08-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಂತೆ, ಶ್ರೀ ಆರ್. ಶ್ರೀನಿವಾಸಯ್ಯ, ತಹಶೀಲ್ದಾರ್, ಗುಡಿಬಂಡೆ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಇವರು ದಿನಾಂಕ : 08-10-2010 ರಂದು ಮನವಿ ಸಲ್ಲಿಸಿ, ಸರ್ಕಾರದ ಅಧಿಸೂಚನೆ ಸಂಖ್ಯೆ : ಆರ್‌ಡಿ 308 ಎಎಸ್‌ಡಿ 2007, ದಿನಾಂಕ : 29-10-2007 ರನ್ವಯ ಜೇಷ್ಠತೆಯಲ್ಲಿ ತಮಗಿಂತ ಕಿರಿಯರಾದ ಶ್ರೀ ರಾಮಯ್ಯ ಟಿ.ಪಿ. ಜೇಷ್ಠತಾ ಪಟ್ಟಿ ಸಂಖ್ಯೆ : 1502 ತಹಶೀಲ್ದರ್ ಗ್ರೇಡ್-1 ಹುದ್ದೆಗೆ ದಿನಾಂಕ : 24-12-2007 ರಿಂದ ಜಾರಿಗೆ ಬರುವಂತೆ ಬಡ್ತಿ ನೀಡಲಾಗಿದೆ. ಅದರಂತೆ, ಶ್ರೀ ಆರ್. ಶ್ರೀನಿವಾಸಯ್ಯ, ಜೇಷ್ಠತಾ ಪಟ್ಟಿ ಸಂಖ್ಯೆ : 1490 ತಹಶೀಲ್ದಾರ್ ಗ್ರೇಡ್-2 ಹುದ್ದೆಯಿಂದ ತಹಶೀಲ್ದಾರ್ ಗ್ರೇಡ್-1 ಹುದ್ದೆಗೆ ದಿನಾಂಕ : 24-12-2007 ರಿಂದ ಪೂರ್ವಾನ್ವಯವಾಗಿ ಬಡ್ತಿ ನೀಡುವಂತೆ ಕೋರಿರುತ್ತಾರೆ.

ತಹಶೀಲ್ದಾರ್ ಗ್ರೇಡ್-2 ಹುದ್ದೆಯಿಂದ ಗ್ರೇಡ್-1 ಹುದ್ದೆಗೆ ಮುಂಬಡ್ತಿ ನೀಡುವ ಸಂಬಂಧದಲ್ಲಿ ದಿನಾಂಕ : 29-10-2007 ರಂದು ನಡೆದಿರುವ ಇಲಾಖಾ ಮುಂಬಡ್ತಿ ಸಮಿತಿ ಸಭೆಯು ಅವರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇದ್ದರಿಂದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ತೀರ್ಮಾನವನ್ನು ಮುಚ್ಚಿದ ಲಕೋಟೆಯಲ್ಲಿ ಇರಿಸಲು ತೀರ್ಮಾನಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಆದೇಶದಲ್ಲಿ, ಸದರಿಯವರ ವಿರುದ್ಧ ಹೂಡಲಾಗಿದ್ದ ಇಲಾಖಾ ವಿಚಾರಣೆಯನ್ನು ಪರಿಶೀಲಿಸಿರುವ ಸರ್ಕಾರವು ಸಂಖ್ಯೆ : ಕಂಇ 6 ಎಡಿಇ 2006, ದಿನಾಂಕ : 09-01-2009 ರಂದು ಅವರಿಗೆ Censure ವಾಗ್ದಂಡನೆ ವಿಧಿಸಿ ಆದೇಶಿಸಿರುತ್ತದೆ. ಇದನ್ನು ವಿಧಿಸಿದ ತಕ್ಷಣದಿಂದ ಇದು ಮುಕ್ತಾಯವಾಗಿರುತ್ತದೆ.

ಮೇಲೆ ಓದಲಾದ ಕ್ರ. ಸಂ. (3) ರಲ್ಲಿ ಇವರ ವಿರುದ್ಧ ಹೂಡಲಾಗಿದ್ದ ಮತ್ತೊಂದು ಶಿಸ್ತು ಪ್ರಕರಣದಲ್ಲಿ ತನಿಖೆ ನಡೆಸಿ, ಆರೋಪಿತರು ಮತ್ತು ಇತರ ಸಿಬ್ಬಂದಿಯವರ ವಿರುದ್ಧ ಜಂಟಿ ಇಲಾಖಾ ವಿಚಾರಣೆಯನ್ನು ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ಇವರ ವಿರುದ್ಧ ಮಾಡಲಾಗಿದ್ದ ಆರೋಪದಿಂದ ಮುಕ್ತಾಯಗೊಳಿಸಿ ಮುಂದಿನ ಸೇವಾ ಅವಧಿಯಲ್ಲಿ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಲು ಆದೇಶಿಸಿದೆ.

ಮೇಲೆ ಓದಲಾದ ಕ್ರ. ಸಂ. (4) ರಲ್ಲಿ ಶ್ರೀ ಆರ್. ಶ್ರೀನಿವಾಸಯ್ಯ, ಹಿಂದಿನ ತಹಶೀಲ್ದಾರ್, ಗುಡಿಬಂಡೆ ತಾಲ್ಲೂಕು ಪ್ರಸ್ತುತ ತಹಶೀಲ್ದಾರ್, ಬಿ.ಎಂ.ಆರ್.ಸಿ.ಎಲ್ (ಮೆಟ್ರೋ) ಬೆಂಗಳೂರು ಇವರಿಗೆ ದಿನಾಂಕ : 29-10-2007 ರಂದು ಇಲಾಖಾ ಮುಂಬಡ್ತಿ ಸಮಿತಿ ಸಭೆಯು ತೆಗೆದುಕೊಂಡ ತೀರ್ಮಾನದಂತೆ ಅವರ ವಿರುದ್ಧ ಹೂಡಲಾಗಿದ್ದ ಇಲಾಖಾ ವಿಚಾರಣೆಯನ್ವಯ ದಿನಾಂಕ : 09-01-2009 ರ ಸರ್ಕಾರಿ ಆದೇಶದಲ್ಲಿ ವಾಗ್ದಂಡನೆ ವಿಧಿಸಿದ ದಿನಾಂಕದಿಂದ ಅನ್ವಯಿಸಿ ಮುಚ್ಚಿದ ಲಕೋಟೆಯನ್ನು ತೆರೆದು ಮುಂಬಡ್ತಿಯನ್ನು ನೀಡಲು ಕರ್ನಾಟಕ ಲೋಕ ಸೇವಾ ಆಯೋಗದ ಸಹಮತಿಯನ್ನು ಕೋರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (5) ರಲ್ಲಿ ಕರ್ನಾಟಕ ಲೋಕ ಸೇವಾ ಆಯೋಗದ ದಿನಾಂಕ : 11-08-2011 ರ ಪತ್ರದಲ್ಲಿ, ಸರ್ಕಾರದ ಪ್ರಸ್ತಾವನೆಗೆ ಸಹಮತಿ ನೀಡಿದೆ.

ಸದರಿ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 633 ಎಎಸ್ ಡಿ 2010, ಬೆಂಗಳೂರು, ದಿನಾಂಕ: 15 ನೇ ನವೆಂಬರ್ 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ಆರ್. ಶ್ರೀನಿವಾಸಯ್ಯ, ಹಿಂದಿನ ತಹಶೀಲ್ದಾರ್, ಗುಡಿಬಂಡೆ ತಾಲ್ಲೂಕು. ಪ್ರಸ್ತುತ ತಹಶೀಲ್ದಾರ್ ಗ್ರೇಡ್-2, ಬಿ.ಎಂ.ಆರ್.ಸಿ.ಎಲ್. (ಮೆಟ್ರೋ) ಬೆಂಗಳೂರು ಇವರಿಗೆ ಕರ್ನಾಟಕ ನಾಗರೀಕ ಸೇವಾ (ಆರ್.ಪಿ.ಪಿ) ನಿಯಮಾವಳಿಗಳು 1978 ರ ನಿಯಮ 2 (1) (ಎ) ರನ್ವಯ ದಿನಾಂಕ : 09-01-2009 ರಿಂದ ಜಾರಿಗೆ ಬರುವಂತೆ ತಹಶೀಲ್ದಾರ್ ಗ್ರೇಡ್-2 ಹುದ್ದೆಯಿಂದ ತಹಶೀಲ್ದಾರ್ ಗ್ರೇಡ್-1 ಹುದ್ದೆಗೆ ವೇತನ ಶ್ರೇಣಿ ರೂ. 14,050 ರೂ. 25,050/- ರಲ್ಲಿ ಪೂರ್ವಾನ್ವಯವಾಗಿ ಪದೋನ್ನತಿ ನೀಡಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿಯೇ ನಿಯುಕ್ತಿಗೊಳಿಸಿ/ಮುಂದುವರೆಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್. ಗೋಪಾಲಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಸೇವೆಗಳು-3)

ಪಿ.ಆರ್.2858

ಕಂದಾಯ ಸಚಿವಾಲಯ

ವಿಷಯ : ಶ್ರೀ ಚಿದಾನಂದ, ತಹಶೀಲ್ದಾರ್, ಅರಸೀಕೆರೆ ತಾಲ್ಲೂಕು ಪ್ರಸ್ತುತ ಬೇಲೂರು ತಾಲ್ಲೂಕು ಇವರನ್ನು ಅಮಾನತ್ತುಗೊಳಿಸುವ ಬಗ್ಗೆ.

ಪ್ರಸ್ತಾವನೆ :

ದಿನಾಂಕ : 5-12-2011 ರಂದು ನಡೆದ ವಿಧಾನಸಭಾ ಕಲಾಪದ ಶೂನ್ಯ ವೇಳೆಯಲ್ಲಿ, ಮಾನ್ಯ ಶಾಸಕರಾದ ಶ್ರೀ ಶಿವಲಿಂಗೇಗೌಡರು, ಅರಸೀಕೆರೆ ಕ್ಷೇತ್ರ ಇವರು ಬಸವಜಯಂತಿಯ ಸಿದ್ಧತಾ ಸಭೆಗೆ ಅಂದಿನ ತಹಶೀಲ್ದಾರರು ತಮ್ಮನ್ನು ಆಹ್ವಾನಿಸದೇ ಇದ್ದು, ಸಭೆಗೆ ಹೋದರೂ ಸಹ ಖರ್ಚಿ ವ್ಯವಸ್ಥೆ ಮಾಡದೇ ನೋವುಂಟು ಮಾಡಿರುತ್ತಾರೆ. ಈ ವಿಷಯವನ್ನು ಮಾನ್ಯ ವಿಧಾನಸಭಾ ಸಭಾಧ್ಯಕ್ಷರಿಗೆ ಎಂಟು ದಿನದ ಹಿಂದೆಯೇ ದೂರು ನೀಡಿದ್ದರೂ ಪ್ರಯೋಜನವಾಗಿರುವುದಿಲ್ಲವೆಂದು, ತಮ್ಮ ಕಣ್ಣೀರನ್ನು ಕೇಳುವವರ್ಯಾರು, ಸದನದಲ್ಲಾದರೂ ಸ್ಪೀಕರ್ ನ್ಯಾಯ ಒದಗಿಸಬೇಕೆಂದು ಕೋರಿರುತ್ತಾರೆ.

ಈ ಹಿನ್ನಲೆಯಲ್ಲಿ, ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ನಗರಾಭಿವೃದ್ಧಿ ಸಚಿವರು ಮಧ್ಯೆ ಪ್ರವೇಶಿಸಿ ಮಾನ್ಯ ಶಾಸಕರು ಸಭಾಧ್ಯಕ್ಷರಿಗೆ ಪತ್ರ ನೀಡಿದ್ದಾರೆ. ಆದರೆ ಈ ವಿಷಯ ಸರ್ಕಾರದ ಗಮನಕ್ಕೆ ಬಂದಿಲ್ಲ. ಸಂಬಂಧಪಟ್ಟ ತಹಶೀಲ್ದಾರರನ್ನು ಕೂಡಲೇ ಅಮಾನತ್ತು ಮಾಡಿ ತನಿಖೆಗೆ ಆದೇಶಿಸಲಾಗುವುದೆಂದು ಗಮನಕ್ಕೆ ಬಂದಿಲ್ಲ. ಸಂಬಂಧಪಟ್ಟ ತಹಶೀಲ್ದರರನ್ನು ಕೂಡಲೇ ಅಮಾನತ್ತು ಮಾಡಿ ತನಿಖೆಗೆ ಆದೇಶಿಸಲಾಗುವುದೆಂದು ಸದನಕ್ಕೆ ಭರವಸೆ ನೀಡಿರುತ್ತಾರೆ.

ಮೇಲ್ಕಂಡ ಅಂಶದ ಹಿನ್ನೆಲೆಯಲ್ಲಿ, ಅಂದಿನ ಅರಸೀಕೆರೆ ತಾಲ್ಲೂಕು ತಹಶೀಲ್ದಾರರು ಪ್ರಸ್ತುತ ಬೇಲೂರು ತಾಲ್ಲೂಕು ತಹಶೀಲ್ದಾರರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಚಿದಾನಂದ ಇವರು ಶಿಷ್ಟಾಚಾರ ಉಲ್ಲಂಘನೆ ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ, ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಸೇವೆಯಿಂದ ಅಮಾನತ್ತುಗೊಳಿಸಲು ಸರ್ಕಾರವು ತೀರ್ಮಾನಿಸಿದೆ. ಆದ್ದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಕಂಇ 81 ಎಡಿಇ 2011, ಬೆಂಗಳೂರು, ದಿನಾಂಕ: 7 ನೇ ಡಿಸೆಂಬರ್ 2011.

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವಾ (ವ.ನಿ & ಮೇ) ನಿಯಮಾವಳಿಗಳು 1957 ರ ನಿಯಮ-10 (1)(ಡಿ) ಮತ್ತು 10(3) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಚಿದಾನಂದ, ತಹಶೀಲ್ದಾರ್, ಬೇಲೂರು ತಾಲ್ಲೂಕು ಇವರು ಈ ಹಿಂದೆ ಅರಸೀಕೆರೆ ತಾಲ್ಲೂಕು ತಹಶೀಲ್ದಾರರಾಗಿ ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿ ಶಿಷ್ಟಾಚಾರ ಉಲ್ಲಂಘನೆ ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ, ಇದು ಕರ್ತವ್ಯಲೋಪವೆಂದು ಪರಿಗಣಿಸಿ, ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಈ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಈ ಕೆಳಕಂಡ ಷರತ್ತುಗಳೊಂದಿಗೆ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಿದೆ.

1) ಅಮಾನತ್ತಿನ ಅವಧಿಯಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 98 ರನ್ವಯ ನಿಗದಿಪಡಿಸಿರುವ ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ.
2) ಅಮಾನತ್ತಿನ ಅವಧಿಯಲ್ಲಿ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆಯದೇ ಕೇಂದ್ರಸ್ಥಾನವನ್ನು ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್. ಗೋಪಾಲಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಸೇವೆಗಳು-3)

ಪಿ.ಆರ್.2859

ಕಂದಾಯ ಸಚಿವಾಲಯ

ವಿಷಯ : ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ದೊಡ್ಡಗುಬ್ಬಿ ಗ್ರಾಮದ ಸ. ನಂ. 14. 38, 49. 50. 87 ಮತ್ತು 120 ರ ಸರ್ಕಾರಿ ಜಮೀನುಗಳನ್ನು ಅಕ್ರಮವಾಗಿ ದಾಖಲೆ ಸೃಷ್ಟಿಸಿಕೊಂಡು ದೊಡ್ಡಗುಬ್ಬಿ ಗ್ರಾಮ ಪಂಚಾಯತಿಯಿಂದ ನಮೂನೆ 9 & 90 ರಲ್ಲಿ ಖಾತೆ ಮಾಡಿಕೊಂಡಿರುವ ಬಗ್ಗೆ.

ಓದಲಾಗಿದೆ:

1. ಶ್ರೀ ಕೆ. ನಾಗರಾಜ ಬಿನ್ ಕೃಷ್ಣಪ್ಪ, ದೊಡ್ಡಗುಬ್ಬಿ ಗ್ರಾಮ ಇವರ ಮನವಿ ದಿನಾಂಕ : 08-06-2011.
2. ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಇವರ ಪತ್ರ ಸಂಖ್ಯೆ : ಎಲ್‌ಎನ್‌ಡಿ (ಇ) ಸಿಆರ್/656/10-11 ದಿನಾಂಕ 15-06-2011.
3. ಶ್ರೀ ಸೋಮಶೇಖರ್, ಮಾನ್ಯ ಮಾಜಿ ಸಚಿವರು, ಕರ್ನಾಟಕ ಸರ್ಕಾರ ಇವರು ಮಾನ್ಯ ಮುಖ್ಯಮಂತ್ರಿಯವರಿಗೆ ವಿಳಾಸಿ ಬರೆದಿರುವ ದಿನಾಂಕ : 29-08-2011ರ ದೂರಿನ ಪತ್ರ.

ಪ್ರಸ್ತಾವನೆ :

ಶ್ರೀ ಕೆ. ನಾಗರಾಜ ಬಿನ್ ಕೃಷ್ಣಪ್ಪ, ದೊಡ್ಡಗುಬ್ಬಿ ಗ್ರಾಮ ಇವರು ಮೇಲೆ ಓದಲಾದ ಕ್ರಮಸಂಖ್ಯೆ (1)ರಲ್ಲಿನ ಪತ್ರದಲ್ಲಿ ದೊಡ್ಡಗುಬ್ಬಿ ಗ್ರಾಮದ ಸ.ನಂ. 14, 38, 49, 50, 87 ಮತ್ತು 120ರಲ್ಲಿನ ಜಮೀನುಗಳು ಸರ್ಕಾರಿ ಜಮೀನುಗಳಾಗಿದ್ದು, [illegible]

ಅಧಿಕಾರೀ ನೌಕರರೊಂದಿಗೆ ಶಾಮೀಲಾಗಿ ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಈ ಜಮೀನುಗಳನ್ನು ಅತಿಕ್ರಮಿಸಿಕೊಂಡಿರುವುದಾಗಿ ದೂರು ನೀಡಿರುತ್ತಾರೆ.

ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿನ ಪತ್ರದಲ್ಲಿ ದೊಡ್ಡಗುಬ್ಬಿ ಗ್ರಾಮದ ಸ.ನಂ. 87, 50, 14 ನಾಡಗೌಡಗೊಲ್ಲಹಳ್ಳಿ ಗ್ರಾಮದ ಸ.ನಂ. 39ರಲ್ಲಿ ಅತಿಕ್ರಮಣ ಒತ್ತುವರಿ ಆಗಿರುವುದಾಗಿ ವರದಿ ಮಾಡಿರುತ್ತಾರೆ.

ಶ್ರೀ ಸೋಮಶೇಖರ್, ಮಾನ್ಯ ಮಾಜಿ ಸಚಿವರು, ಕರ್ನಾಟಕ ಸರ್ಕಾರ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿನ ಪತ್ರದಲ್ಲಿ ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ದೊಡ್ಡಗುಬ್ಬಿ ಗ್ರಾಮದ ವ್ಯಾಪ್ತಿಯಲ್ಲಿ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಸರ್ಕಾರದ ಗೋಮಾಳ ಜಮೀನು ಗುಂಡುತೋಪು, ಹಿಂದೂ ರುದ್ರಭೂಮಿ, ದೊಡ್ಡಗುಬ್ಬಿ ಬೃಹತ್ ಕೆರೆ ಮತ್ತು ಧನಕರುಗಳು ಕುಡಿಯಲು ನಿರ್ಮಿಸಿದ್ದ ನೀರಿನ ಕುಂಟೆಗಳನ್ನು ಸಮಾಜ ವಿರೋದಿ ಶಕ್ತಿಗಳು ನಕಲಿ ದಾಖಲೆಗಳನ್ನು ಸೃಷ್ಟಿಸಿ ಬಡಾವಣೆಗಳನ್ನು ನಿರ್ಮಿಸಿ ಅಕ್ರಮ ಮಾರಾಟ ದಂದೆಯಲ್ಲಿ ತೊಡಗಿರುತ್ತಾರೆಂದು ದೂರು ನೀಡಿರುತ್ತಾರೆ.

ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ದೊಡ್ಡಗುಬ್ಬಿ ಗ್ರಾಮದ ಸ.ನಂ. 14,38,49,50,87 & 120ರ ಹಾಗೂ ಚಿಕ್ಕಗುಬ್ಬಿ ಗ್ರಾಮದ ಸ.ನಂ. 9ರ ಜಮೀನುಗಳು ಕೆರೆ, ಗೋಮಾಳ, ಗುಂಡುತೋಪು ಮತ್ತು ಅರಣ್ಯ ಇಲಾಖೆಗೆ ಸೇರಿದ ಜಮಿನುಗಳಾಗಿದ್ದು, ಈ ಜಮೀನುಗಳು ಖಾಸಗಿ ವ್ಯಕ್ತಿಗಳಿಂದ ಒತ್ತುವರಿಯಾಗಿರುವುದು ಹಾಗೂ ಅಕ್ರಮವಾಗಿ ಖಾತೆಗಳನ್ನು ಮಾಡಿಸಿಕೊಂಡಿರುವುದು ಹಾಗೂ ಇದರಲ್ಲಿ ಸರ್ಕಾರಿ ಅಧಿಕಾರೀ ನೌಕರರ ಭಾಗಿಯಾಗಿರುವ ಕುರಿತು ಸರ್ಕಾರಕ್ಕೆ ದೂರುಗಳು ಬಂದಿದ್ದು, ದೂರುಗಳಲ್ಲಿನ ಅಂಶಗಳು ಗಂಭೀರ ಸ್ವರೂಪದ್ದಾಗಿರುವುದರಿಂದ, ಈ ಪ್ರಕರಣವನ್ನು ಕೂಲಂಕಷ ತನಿಖೆಗಾಗಿ ಕರ್ನಾಟಕ ಲೋಕಾಯುಕ್ತಕ್ಕೆ ವಹಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : 235 ಎಲ್‌ಜಿಬಿ 2011, ಬೆಂಗಳೂರು, ದಿನಾಂಕ: 17 ನೇ ನವೆಂಬರ್ 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ದೊಡ್ಡಗುಬ್ಬಿ ಗ್ರಾಮದ ಸ.ನಂ. 14,38,49,50,87 ಮತ್ತು 120ರಲ್ಲಿನ ಸರ್ಕಾರಿ ಜಮೀನುಗಳನ್ನು ಅಕ್ರಮವಾಗಿ ಅಡ್ಡದಾಖಲೆಗಳನ್ನು (ನಕಲಿ) ಸೃಷ್ಟಿಸಿಕೊಂಡು ಖಾತೆ ಮಾಡಿರುವ ಕುರಿತು ವಿವರವಾದ ತನಿಖೆಯನ್ನು ನಡೆಸಲು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 7(2)ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸಿ ಆದೇಶಿಸಿದೆ.

ಪ್ರಕರಣದ ಸುಗಮ ತನಿಖೆಗಾಗಿ ಸೂಕ್ತ ಸಹಕಾರ ನೀಡಲು ಹಾಗೂ ಸಂಬಂಧಿಸಿದ ದಾಖಲೆಗಳನ್ನು ಲೋಕಾಯುಕ್ತ ಕಛೇರಿಗೆ ಒದಗಿಸಲು ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರಿಗೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ಕೆ. ರಾಮಸ್ವಾಮಿ

ಪಿ.ಆರ್.2860

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಭೂ.ಮಂ)

ಕಂದಾಯ ಸಚಿವಾಲಯ

ವಿಷಯ : ಋಣಭಾರ ಪ್ರಮಾಣ ಪತ್ರಗಳನ್ನು ಬೆಂಗಳೂರು ನಗರದ ಯಾವುದೇ ಉಪ-ನೋಂದಣಿ ಕಛೇರಿಯಿಂದ ನೀಡುವ ಯೋಜನೆ ಕುರಿತು.

ಓದಲಾಗಿದೆ: ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರ ಪತ್ರ ಸಂಖ್ಯೆ : Comp/03/2011-12 ದಿನಾಂಕ : 20-05-2011 ಮತ್ತು 29-07-2011.

ಪ್ರಸ್ತಾವನೆ :

ಮೇಲೆ ಓದಲಾದ ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ತಮ್ಮ ಪ್ರಸ್ತಾವನೆಯಲ್ಲಿ ಸಾರ್ವಜನಿಕರಿಗೆ ಋಣಭಾರ ಪ್ರಮಾಣ ಪತ್ರಗಳನ್ನು ಬೆಂಗಳೂರು ನಗರದ ಯಾವುದೇ ಉಪ-ನೋಂದಣಿ ಕಛೇರಿಯಿಂದ ವಿತರಿಸಲು ಉದ್ದೇಶಿಸಲಾಗಿದ್ದು, ಈ ಸಂಬಂಧವಾಗಿ ತಂತ್ರಾಂಶ ಅಭಿವೃದ್ಧಿ ಪಡಿಸಲು ಮೆ॥ C-DAC, ಪುಣೆರವರನ್ನು ಕೋರಲಾಗಿದ್ದು ಸದರಿ ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ಪರೀಕ್ಷಿಸಿ ಬೆಂಗಳೂರು ನಗರದ 43 ಉಪನೋಂದಣಿ ಕಛೇರಿಗಳಲ್ಲಿ ಅಳವಡಿಸಲಾಗುವುದು ಹಾಗೂ ಸದರಿ ತಂತ್ರಾಂಶವನ್ನು ಅಭಿವೃದ್ಧಿಪಡಿಸಲು 4 man month effort ರೂ. 1,25,000/- (ರೂಪಾಯಿ ಒಂದು ಲಕ್ಷದ ಇಪ್ಪತ್ತೈದು ಸಾವಿರಗಳು ಮಾತ್ರ) ರಂತೆ ಒಟ್ಟು ರೂ. 5,00,000/- (ರೂಪಾಯಿ ಐದು ಲಕ್ಷಗಳು ಮಾತ್ರ) (ತೆರಿಗೆ ಹೊರತುಪಡಿಸಿ) ವೆಚ್ಚ ಆಗುತ್ತದೆಂದು, ಸದರಿ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2030-02-101-2-04-051 ಅಡಿಯಲ್ಲಿ ಲಭ್ಯವಿರುವ ಅನುದಾನದಿಂದ ಭರಿಸಲು ಅನುಮತಿ ನಿಡಬೇಕೆಂದು ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತುರು ಕೋರಿರುತ್ತಾರೆ.

ಮುಂದುವರೆದು, ಋಣಭಾರ ಪ್ರಮಾಣ ಪತ್ರಗಳನ್ನು ಬೆಂಗಳೂರು ನಗರದ ಯಾವುದೇ ಉಪನೋಂದಣಿ ಕಛೇರಿಗಳಿಂದ ನೀಡುವ ಯೋಜನೆಯ ತಂತ್ರಾಂಶವನ್ನು ಪ್ರಸ್ತುತ ಕಾವೇರಿ ಯೋಜನೆಯ ಡಾಟಾ ಉಪಯೋಗಿಸಿಕೊಂಡು ಅಭಿವೃದ್ಧಿಪಡಿಸಬೇಕಾಗಿರುತ್ತದೆ. ಇದಲ್ಲದೇ ಈ ಯೋಜನೆಯು ಕಾವೇರಿ ಯೋಜನೆಯ ಒಂದು ಅಂಗವಾಗಿರುವುದರಿಂದ ಪ್ರಸ್ತುತ ಕಾವೇರಿ ಯೋಜನೆಗೆ ದೊರಕುತ್ತಿರುವ ಸೇವಾ ಗುಣಮಟ್ಟವನ್ನೇ ಈ ಯೋಜನೆಗೂ ಸಹ ಕೊಡಬೇಕಾಗುತ್ತದೆ. ಪ್ರಸ್ತುತ ಕಾವೇರಿ ಯೋಜನೆಯ ತಂತ್ರಾಂಶವನ್ನು ಮೆ.ಸಿ.-ಡಾಕ್‌ರವರು ಅಭಿವೃದ್ಧಿಪಡಿಸಿ 2003-04 ರಿಂದ ನಿರ್ವಹಣೆ ಮಾಡುತ್ತಿರುತ್ತಾರೆ. ಒಂದೇ ತೆರನಾದ ಸೇವಾಗುಣಮಟ್ಟವನ್ನು ಕಾಯ್ದುಕೊಳ್ಳುವ ಸಂಬಂಧ ಈ ಯೋಜನೆಗೆ ತಂತ್ರಾಂಶ ಅಭಿವೃದ್ಧಿ ಹಾಗೂ ನಿರ್ವಹಣೆಯನ್ನು ಮೆ:ಸಿ-ಡಾಕ್ ಸಂಸ್ಥೆಗೆ ವಹಿಸಿಕೊಡುವುದು ಅತ್ಯವಶ್ಯವಿರುತ್ತದೆ. ಈ ಹಿನ್ನೆಲೆಯಲ್ಲಿ ಕೆ.ಟಿ.ಪಿ.ಪಿ. ಕಾಯ್ದೆ ಕಲಂ 4(ಸಿ)ರನ್ವಯ ಟೆಂಡರ್ ಪ್ರಕ್ರಿಯೆ ಮೂಲಕ ಗುತ್ತಿಗೆದಾರರನ್ನು ಆಯ್ಕೆ ಮಾಡಿಕೊಂಡು ತಂತ್ರಾಂಶ ಅಭಿವೃದ್ಧಿಪಡಿಸುವುದರಿಂದ ವಿನಾಯಿತಿ ನೀಡಿ ಸದರಿ ಯೋಜನೆಯ ತಂತ್ರಾಂಶ ಅಭಿವೃದ್ಧಿ ಹಾಗೂ ನಿರ್ವಹಣೆಯನ್ನು ಮೆ.ಸಿ.-ಡಾಕ್ ಸಂಸ್ಥೆಗೆ ವಹಿಸಿಕೊಡಲು ಮತ್ತು ರೂ. 5.00 ಲಕ್ಷ ಮೊತ್ತವನ್ನು ತಂತ್ರಾಂಶ ಅಭಿವೃದ್ಧಿಗಾಗಿ ಪಾವತಿಸಲು ಆದೇಶ ನೀಡಬೇಕೆಂದು ಕೋರಿದ್ದಾರೆ.

ಸದರಿ ತಂತ್ರಾಂಶ ಅಭಿವೃದ್ಧಿಗೆ 4 man month efforts (ಒಬ್ಬರಿಗೆ ರೂ. 1,25,000/- ರಂತೆ ಒಟ್ಟು ರೂ. 5.00 ಲಕ್ಷ) ಬೇಕಾಗುವುದೆಂದು ಮೆ॥ ಸಿ-ಡಾಕ್, ಪುಣೆ, ಸಂಸ್ಥೆಯು ಕೋರಿರುವುದಕ್ಕೆ ಶ್ರೀ ಆರ್. ಚಂದ್ರಶೇಖರ್, ಅಸಿಸ್ಟೆಂಟ್ ಪ್ರೊಫೆಸರ್, ಐಐಟಿ, ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು

ಇವರು ದಿನಾಂಕ : 04-07-2011ರ ಇ-ಮೇಲ್ ಮೂಲಕ ಪತ್ರವನ್ವಯ ಸಲ್ಲಿಸಿದ ಸಮರ್ಥನೆಯ ಪತ್ರವನ್ನು ಒದಗಿಸಿದ್ದು ಶ್ರೀ ಆರ್. ಚಂದ್ರಶೇಖರ್ ರವರು ಇ-ಆಡಳಿತ ಇಲಾಖೆಯ ತಾಂತ್ರಿಕ ಸದಸ್ಯರ ಪಟ್ಟಿಯಲ್ಲಿ ಒಬ್ಬರಾಗಿದ್ದಾರೆಂದೂ ಸಹ ತಿಳಿಸಿದ್ದಾರೆ.

ಕೆ.ಟಿ.ಪಿ.ಪಿ. ಕಾಯ್ದೆ ಕಲಂ 4(ಸ) ಉದ್ಧೃತ ಭಾಗವು ಈ ಕೆಳಕಂಡಂತಿದೆ :

4. Exceptions to acceptability – the provisions of Chapter II shall not apply to Procurement of goods and services –

(a) xxx

(b) xxx

(c) Where the procuring entity having procured goods, services or technology from a supplier or contractor determines that additional supplies must be procured from the same supplier or contractor fro reasons of standardization and compatiability with the existing goods, service or technology.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಅದರಂತೆ, ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಕಂಇ 94 ಮುನೋಮು 2011, ಬೆಂಗಳೂರು, ದಿನಾಂಕ: 11 ನೇ ನವೆಂಬರ್ 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಾವೇರಿ ಯೋಜನೆಯ ತಂತ್ರಾಂಶವನ್ನು ಮೆ॥ ಸಿ-ಡಾಕ್, ಪುಣೆ ಸಂಸ್ಥೆಯು ಅಭಿವೃದ್ಧಿಪಡಿಸಿ ನಿರ್ವಹಣೆ ಮಾಡುತ್ತಿರುವುದರಿಂದ ಮತ್ತು ಪ್ರಸ್ತುತ ಸಾರ್ವಜನಿಕರಿಗೆ ಋಣಭಾರ ಪ್ರಮಾಣ ಪತ್ರಗಳನ್ನು ಬೆಂಗಳೂರು ನಗರದ ಯಾವುದೇ ಉಪ-ನೋಂದಣಿ ಕಛೇರಿಯಿಂದ ವಿತರಿಸುವ ಸಂಬಂಧ ತಂತ್ರಾಂಶ ಅಭಿವೃದ್ಧಿ ಪಡಿಸಲು ಮೆ: C-DAC, ಪುಣೆರವರಿಗೆ ಸದರಿ ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ಪರೀಕ್ಷಿಸಿ ಬೆಂಗಳೂರು ನಗರದ 43 ಉಪನೋಂದಣಿ ಕಛೇರಿಗಳಲ್ಲಿ ಅಳವಡಿಸಲು ಆಗೂ ಸದರಿ ತಂತ್ರಾಂಶವನ್ನು ಅಭಿವೃದ್ಧಿಪಡಿಸಲು 4 man month effort ರೂ. 1,25,000/- (ರೂಪಾಯಿ ಒಂದು ಲಕ್ಷದ ಇಪ್ಪತ್ತೈದು ಸಾವಿರಗಳು ಮಾತ್ರ) ರಂತೆ ಒಟ್ಟು ರೂ. 5,00,000/- (ರೂಪಾಯಿ ಐದು ಲಕ್ಷಗಳು ಮಾತ್ರ) (ತೆರಿಗೆ ಹೊರತುಪಡಿಸಿ) ಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಅಧಿನಿಯಮ 1999ರ ಕಲಂ 4(ಸಿ)ರನ್ವಯ ಮಂಜೂರಾತಿಯನ್ನು ನೀಡಲಾಗಿದೆ.

ಈ ವೆಚ್ಚವನ್ನು ಪ್ರಸಕ್ತ ಸಾಲಿನ ಲೆಕ್ಕ ಶೀರ್ಷಿಕೆ "2030-02-101-2-04-Charges of Supply of registered documents- 051 General Expenses" ಅಡಿಯಲ್ಲಿ ಲಭ್ಯವಿರುವ ಅನುದಾನದಿಂದ ಭರಿಸಲು ಅನುಮತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ.ಕೆ. ರಾಮಚಂದ್ರ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ
(ನೋಂದಣಿ ಮತ್ತು ಮುದ್ರಾಂಕ)

ಪಿ.ಆರ್.2861

ಕಂದಾಯ ಸಚಿವಾಲಯ

ವಿಷಯ : ಕೊಡಗು ಜಿಲ್ಲೆಯ ಜಿಲ್ಲಾ ಕಛೇರಿ ಸಂಕೀರ್ಣ ಕಟ್ಟಡ ಕಾಮಗಾರಿಗಳಿಗೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಆದೇಶ ಸಂಖ್ಯೆ ಕಂಇ 31 ಡಬ್ಲ್ಯೂಬಿಆರ್ 2008, ದಿನಾಂಕ 08/11/2011.
2) ಪತ್ರ ಸಂಖ್ಯೆ: ಕಗೃಮಂ/ಗೃಅ/ಜಿ.ಸಂ/ಮಡಿಕೇರಿ/1273/2011-12, ದಿನಾಂಕ 24/11/2011.

ಪ್ರಸ್ತಾವನೆ:

ಕೊಡಗು ಜಿಲ್ಲೆಯ ಜಿಲ್ಲಾ ಕಛೇರಿ ಸಂಕೀರ್ಣ ಕಟ್ಟಡವನ್ನು ಕರ್ಣಂಗೇರಿ ಗ್ರಾಮದ ಸರ್ವೆ ನಂ. 471/1ರ 2.20 ಎಕರೆ ವಿಸ್ತೀರ್ಣದ ಜಮೀನಿನಲ್ಲಿ ರೂ.12.50 ಕೋಟಿಗಳ ವೆಚ್ಚದಲ್ಲಿ ನಿರ್ಮಿಸುವುದರ ಅಂದಾಜುಗಳಿಗೆ ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿತ್ತು.

ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರು ಮೇಲೆ (2)ರಲ್ಲಿ ಓದಲಾದ ಪತ್ರ ಬರೆಯುತ್ತಾ ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕು ಕರ್ಣಂಗೇರಿ ಗ್ರಾಮದ ಸರ್ವೆ ನಂ. 471/1ರ 2.20 ಎಕರೆ ವಿಸ್ತೀರ್ಣದ ಜಮೀನಿನಲ್ಲಿ ಜಿಲ್ಲಾ ಕಛೇರಿ ಸಂಕೀರ್ಣ ಕಟ್ಟಡ ನಿರ್ಮಿಸುವ ಕುರಿತಂತೆ ದಿನಾಂಕ 28/04/2011 ರಂದು ಟೆಂಡರ್ ಕರೆದ ಮೇರೆಗೆ ಇಬ್ಬರು ಗುತ್ತಿಗೆದಾರರು ಟೆಂಡರ್‌ಗಳನ್ನು ಸಲ್ಲಿಸಿದ್ದು ಪುನಃ ದಿನಾಂಕ 03/10/2011 ರಂದು ತಿದ್ದುಪಡಿ ಟೆಂಡರನ್ನು ಪ್ರಕಟಿಸಲಾಗಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದರು ಆ ಸಂಬಂಧದ ವಿವರ ಈ ಕೆಳಗಿನಂತೆ ಇರುವುದಾಗಿ ತಿಳಿಸಿರುತ್ತಾರೆ.

Sl. No.	Name of the agency	Amount put in tender (In Rs.)	Rate quoted by the agency (In Rs.)	Percentage
1.	Sri G.S.N.Raju, Bangalore	10,55,96,833.00	12,01,90,315.00	13.82%
2.	Sri V. Arunkumar, Bhadravathi		12,58,00,000.00	19.13%

ಮುಂದುವರೆದು, ಗುತ್ತಿಗೆದಾರರ ಪೈಕಿ ಶ್ರೀ ಜಿ.ಎಸ್.ಎನ್. ರಾಜು, ಬೆಂಗಳೂರು ಇವರು ಅತಿ ಕಡಿಮೆ ಮೊತ್ತ ರೂ. 12,01,90,315.00 ನಮೂದಿಸಿದ್ದು, ಇದು ಟೆಂಡರಿಗಿಟ್ಟ ಮೊತ್ತಕ್ಕಿಂತ ಶೇ.13.82 ರಷ್ಟು ಹೆಚ್ಚಾಗಿದ್ದುದರಿಂದ ಸಂಧಾನದ ನಂತರ ರೂ. 11,56,28,532.00 ಗೆ ಕಾಮಗಾರಿಯನ್ನು ನಿರ್ವಹಿಸಲು ಒಪ್ಪಿದ್ದು, ಈ ಮೊತ್ತವು ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.9.5 ರಷ್ಟು ಹೆಚ್ಚಿಗೆ ಇದ್ದು, ಸದರಿ ಮೊತ್ತವು ರೂ. 11,56,28,532.00 ಆಗುವುದಾಗಿ ವರದಿ ಮಾಡುತ್ತಾ ಉಲ್ಲೇಖಿತ ಟೆಂಡರಿಗೆ ಅನುಮೋದನೆ ನೀಡುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಆ ಮೇರೆಗೆ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 31 ಡಬ್ಲ್ಯೂಬಿಆರ್ 2008 ಬೆಂಗಳೂರು, ದಿನಾಂಕ: 30/11/2011

ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕು ಕರ್ಣಂಗೇರಿ ಗ್ರಾಮದ ಸರ್ವೆ ನಂ. 471.1ರ 2.20 ಎಕರೆ ವಿಸ್ತೀರ್ಣದ ಜಮೀನಿನಲ್ಲಿ ಜಿಲ್ಲಾ ಕಛೇರಿ ಸಂಕೀರ್ಣ ಕಟ್ಟಡ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಗೃಹ ಮಂಡಳಿಯು ಕರೆದ ಟೆಂಡರ್ ಪರಿಶೀಲನಾ ಸಮಿತಿ ಪರಿಶೀಲಿಸಿ ಒಪ್ಪಿರುವ ಶ್ರೀ ಜಿ.ಎಸ್.ಎನ್. ರಾಜು. ಬೆಂಗಳೂರು ಇವರು ಟೆಂಡರ್‌ಗಿಟ್ಟ ಮೊತ್ತವಾದ ರೂ. 10,55,96,833.00 ಮೇಲೆ ಶೇ.9.5 ರಷ್ಟು ಹೆಚ್ಚಾದ ರೂ. 11,56,28,532.00 (ರೂಪಾಯಿ ಹನ್ನೊಂದು ಕೋಟಿ ಐವತ್ತಾರು ಲಕ್ಷದ ಇಪ್ಪತ್ತೆಂಟು ಸಾವಿರದ ಐನೂರ ಮೂವತ್ತೆರಡು ಮಾತ್ರ) ಮೊತ್ತದ ಟೆಂಡರಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರದ ಅನುಮೋದನೆ ನೀಡಲಾಗಿದೆ.

11. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
12. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳತಕ್ಕದ್ದಲ್ಲ.
13. ಸಕ್ಷಮ ಪ್ರಾಧಿಕಾರವು ಕಾಮಗಾರಿಗಳ ಪರಿವೀಕ್ಷಣೆ ನಡೆಸಿ ಗುಣಮಟ್ಟವನ್ನು ಕಾಯ್ದುಕೊಳ್ಳತಕ್ಕದ್ದು.
14. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ (1999) ಹಾಗೂ ಅದರಡಿ ರೂಪಿಸಿರುವ ನಿಯಮಗಳಲ್ಲಿ ನಮೂದಿಸಿರುವ ಕಾರ್ಯ ವಿಧಾನ ಪಾಲಿಸತಕ್ಕದ್ದು.

ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ವಿ. ಶ್ರೀರಾಮರೆಡ್ಡಿ

ಪಿ.ಆರ್. ನಂ. 2862 ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಭೂ ಸುಧಾರಣಾ ಕೋಶ).

ಕಂದಾಯ ಸಚಿವಾಲಯ

ವಿಷಯ : ಬಂಗಾರಪೇಟೆ ತಾಲ್ಲೂಕು, ಬೂದಿಕೋಟೆ ಹೋಬಳಿ, ಬಲಮಂದೆ, ಪಲಮಡಗು, ಯರಗೋಳು ಗ್ರಾಮಗಳ ಸರ್ಕಾರಿ ಜಮೀನನ್ನು ಯರಗೋಳು ಚೆಕ್ ಡ್ಯಾಮ್ ನಿರ್ಮಾಣ ಮಾಡುವ ಯೋಜನೆಗೆ ಕರ್ನಾಟಕ ನಗರ ನೀರು ಸರಬರಾಜು ಮಂಡಳಿಗೆ ವರ್ಗಾಯಿಸುವ ಬಗ್ಗೆ.

ಓದಲಾಗಿದೆ : ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆ, ಕೋಲಾರ ಇವರ ಪತ್ರ ಸಂಖ್ಯೆ: ಎಲ್‌ಎನ್‌ಡಿ/ಸಿಆರ್/84/09-10 ದಿ:01.03.2010 ಮತ್ತು 28.04.2011.

ಪ್ರಸ್ತಾವನೆ:

ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆ, ಕೋಲಾರ ರವರು ದಿ:01.03.2010 ಮತ್ತು 28.04.2011ರ ಪತ್ರಗಳಲ್ಲಿ ಸರ್ಕಾರಕ್ಕೆ ವರದಿ ಮಾಡುತ್ತಾ, ಕೋಲಾರ ಜಿಲ್ಲೆಯಲ್ಲಿ ಕುಡಿಯುವ ನೀರಿನ ತೀವ್ರ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸುವ ದೃಷ್ಟಿಯಿಂದ ಕೋಲಾರ ಜಿಲ್ಲೆಯ ಕೋಲಾರ, ಮಾಲೂರು ಮತ್ತು ಬಂಗಾರಪೇಟೆ ಪಟ್ಟಣಗಳಿಗೆ ಹಾಗೂ ಇವುಗಳ ಮಾರ್ಗ ಮಧ್ಯೆ ಬರುವ 45 ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ವ್ಯವಸ್ಥೆ ಕಲ್ಪಿಸಲು ಬಂಗಾರಪೇಟೆ ತಾಲ್ಲೂಕಿನ ಯರಗೋಳು ಗ್ರಾಮದ ಬಳಿ ಮಾರ್ಕಂಡೇಯ ನದಿಗೆ ಅಡ್ಡಲಾಗಿ ಅಣೆಕಟ್ಟೆ ಕಟ್ಟಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಉದ್ದೇಶಿಸಿರುತ್ತದೆ. ಈ ಯೋಜನೆಗೆ ಸಂಬಂಧಿಸಿದಂತೆ ಪೈಪ್‌ಲೈನ್ ಕಾಮಗಾರಿ ಹಾಗೂ ಇತರೆ ಕಾಮಗಾರಿಗಳು ಈಗಾಗಲೇ ಪ್ರಾರಂಭವಾಗಿದ್ದು, ಮುಖ್ಯ ಅಣೆಕಟ್ಟು ಕಾಮಗಾರಿ ಪ್ರಾರಂಭವಾಗಲು ಬಾಕಿ ಇರುತ್ತದೆ. ಇದಕ್ಕಾಗಿ ಒಟ್ಟು 308.37 ಎಕರೆ ಜಮೀನು ಅಗತ್ಯವಾಗಿರುತ್ತದೆ.124.10 ಎಕರೆ ಖಾಸಗಿ ಒಡೆತನಕ್ಕೆ ಸೇರಿದ್ದು, ಇದನ್ನು ಭೂ ಸ್ವಾಧೀನ ಪಡಿಸಿಕೊಳ್ಳಲು ಅಗತ್ಯವಾದ ಭೂ ಸ್ವಾಧೀನ ಪ್ರಕ್ರಿಯೆ ಪ್ರಾರಂಭವಾಗಿರುತ್ತದೆ. ಭೂ ಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಿರುವ 124.10 ಎಕರೆ ಜಮೀನನ್ನು ಬಿಟ್ಟು ಉಳಿದ 184.27 ಎಕರೆ ಸರ್ಕಾರಿ ಜಮೀನಾಗಿದ್ದು, ಸದರಿ ಜಮೀನಿನ ವಿವರ ಈ ಕೆಳಕಂಡಂತಿರುತ್ತದೆ ಎಂಬುದಾಗಿ ವರದಿ ಮಾಡಿರುತ್ತಾರೆ.

ಗ್ರಾಮ	ಸ.ನಂ.	ಜಮೀನಿನ ವರ್ಗೀಕರಣ ಆರ್.ಟಿ.ಸಿ.ಯ ಕಾಲಂ 9ರಲ್ಲಿ ನಮೂದಿಸಿರುವಂತೆ	ವರ್ಗಾಯಿಸಬೇಕಾದ ವಿಸ್ತೀರ್ಣ (ಎ/ಗು)
ಯರಗೋಳು	52	ಸರ್ಕಾರಿ ಗೋಮಾಳ	73.29
ಪಲಮಡುಗು	20	ಸರ್ಕಾರಿ ಗೋಮಾಳ	14.20
ಪಲಮಡಗು	21	ಅರಣ್ಯ	56.28
ಬಲಮಂದೆ	214	ಹಲ್ಲು ಬನ್ನಿ ಖರಾಬು	38.25
ಬಲಮಂದೆ	215	ಗೋಮಾಳ	1.05
		ಒಟ್ಟು	**184.27**

2) ಮೇಲ್ಕಂಡ 5 ಸರ್ವೆ ನಂಬರುಗಳ ಪೈಕಿ ಪಲಮಡಗು ಗ್ರಾಮದ ಸ.ಸಂ.21ರಲ್ಲಿನ 56.28 ಎಕರೆ ಜಮೀನು ಅರಣ್ಯ ಜಮೀನಾಗಿದ್ದು, ಸದರಿ ಜಮೀನು ಹೊರತುಪಡಿಸಿ ಉಳಿದ 127.39 ಎಕರೆ ಜಮೀನು ಸರ್ಕಾರಿ ಗೋಮಾಳ ಜಮೀನಾಗಿದ್ದು, ಸದರಿ ಜಮೀನು ಪೂರ್ಣ ಕಂದಾಯ ಇಲಾಖೆಗೆ ಸೇರಿದ ಜಮೀನಾಗಿರುತ್ತದೆ. ಸದರಿ ಗ್ರಾಮಗಳಲ್ಲಿ ಇರುವ ಜಾನುವಾರುಗಳಿಗೆ ಸಾಕಷ್ಟು ಗೋಮಾಳ ಇರುವುದಾಗಿ ವರದಿ ಮಡುತ್ತಾ, ಚೆಕ್ ಡ್ಯಾಮ್ ನಿರ್ಮಿಸುವುದಾಗಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಒಳಚರಂಡಿ ಮಂಡಳಿ ಇವರಿಗೆ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 71ರಡಿ ಮಂಜೂರು ಮಾಡುವಂತೆ ಕೋರಿರುತ್ತಾರೆ.

3) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಒಂದು ಸ್ವಾಯತ್ತ ಸಂಸ್ಥೆಯಾಗಿದ್ದು, ಸದರಿ ಸಂಸ್ಥೆಗೆ ಪ್ರಸ್ತಾಪಿತ ಜಮೀನನ್ನು ಉಚಿತವಾಗಿ ಹಾಗೂ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 71ರಡಿ ಕಾಯ್ದಿರಿಸಲು ಅವಕಾಶವಿರುವುದಿಲ್ಲ. ಸದರಿ ಜಮೀನನ್ನು ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 20(1)(ಸಿ) ರನ್ವಯ ಸದರಿ ಜಮೀನಿನ ಪ್ರಚಲಿತ ಮಾರುಕಟ್ಟೆ ಬೆಲೆಯ ಶೇ. 50ರಷ್ಟನ್ನು ವಿಧಿಸಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರಿಗೆ ಮಂಜೂರು ಮಾಡಲು ಅವಕಾಶವಿದೆ.

ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿದೆ ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 67 ಎಲ್‌ಜಿಕೆ 2010, ಬೆಂಗಳೂರು, ದಿನಾಂಕ: 08/11/2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬಂಗಾರಪೇಟೆ ತಾಲ್ಲೂಕು, ಯರಗೋಳು ಗ್ರಾಮದ ಸ.ನಂ. 52 ರಲ್ಲಿ 73.29 ಎಕರೆ, ಪಲಮಡಗು ಗ್ರಾಮದ ಸ.ನಂ.20ರಲ್ಲಿ 14.20 ಎಕರೆ, ಬಲಮಂದೆ ಗ್ರಾಮದ ಸ.ನಂ. 214ರಲ್ಲಿ 38.25 ಎಕರೆ ಮತ್ತು ಸ.ನಂ.215 ರಲ್ಲಿ 1.05 ಎಕರೆ, ಒಟ್ಟು 127.39 ಎಕರೆ ಗೋಮಾಳ ಜಮೀನನ್ನು ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 97(4)ರಡಿಯಲ್ಲಿನ ಅವಕಾಶದಂತೆ ಗೋಮಾಳ ಶೀರ್ಷಿಕೆಯಿಂದ ತಗ್ಗಿಸಿ, ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 20(1)(ಸಿ) ರನ್ವಯ ಸದರಿ ಜಮೀನಿನ ಪ್ರಚಲಿತ ಮಾರುಕಟ್ಟೆ ದರದ ಶೇ. 50ರಷ್ಟನ್ನು ವಿಧಿಸಿ ಸಾರ್ವಜನಿಕರ ಕುಡಿಯುವ ನೀರಿನ ವ್ಯವಸ್ಥೆಗಾಗಿ ಚೆಕ್ ಡ್ಯಾಮ್ ನಿರ್ಮಾಣ ಮಾಡುವ ಉದ್ದೇಶಕ್ಕಾಗಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಮಂಜೂರು ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ಕೆ ರಾಮಸ್ವಾಮಿ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಭೂ ಮಂ).

ಪಿ.ಆರ್. ನಂ. 2863

ಕಂದಾಯ ಸಚಿವಾಲಯ

ವಿಷಯ : ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ತಾಲ್ಲೂಕು, ಖಾಂಡ್ಯ ಹೋಬಳಿ, ದೇವದಾನ ಗ್ರಾಮದ ಸರ್ವೆ ನಂ. 362 ರಲ್ಲಿ 19-00 ಎಕರೆ ಜಮೀನನ್ನು ಕಿರು ಜಲ ವಿದ್ಯುತ್ ಯೋಜನೆ ಸ್ಥಾಪನೆಗಾಗಿ ಮೆ: ಐಶ್ವರ್ಯ ಪವರ್ ಪ್ರೈ.ಲಿ. ಬೆಂಗಳೂರು ರವರಿಗೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ : 1) ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು ರವರ ಪತ್ರ ಸಂಖ್ಯೆ: ಎಲ್‌ಎನ್‌ಡಿ (2) ಸಿಆರ್ 52/10-11 ದಿನಾಂಕ: 07-06-2011

2) ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ 78 ಎಲ್‌ಜಿಪಿ 2009 ದಿ: 04.01.2011

ಪ್ರಸ್ತಾವನೆ:

ಮೇಲೆ ಓದಲಾದ (1)ರ ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು ರವರ ದಿ: 07.06.2011ರ ಪತ್ರದಲ್ಲಿ ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ತಾಲ್ಲೂಕು, ಖಾಂಡ್ಯ ಹೋಬಳಿ, ದೇವದಾನ ಗ್ರಾಮದ ಸ.ನಂ. 362ರಲ್ಲಿ 19-00 ಎಕರೆ ಗೋಮಾಳ ಜಮೀನನ್ನು ಕಿರು ಜಲ ವಿದ್ಯುತ್ ಯೋಜನೆ ಸ್ಥಾಪನೆಗಾಗಿ ಮೆ: ಐಶ್ವರ್ಯ ಪವರ್ ಪ್ರೈ.ಲಿ. ಬೆಂಗಳೂರು ರವರಿಗೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಲು ಸರ್ಕಾರದ ಪೂರ್ವಾನುಮೋದನೆ ನೀಡುವಂತೆ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯಲ್ಲಿ, ಸರ್ಕಾರವು ಮೆ: ಐಶ್ವರ್ಯ ಪವರ್ ಪ್ರೈ.ಲಿ. ಕಂಪನಿಗೆ ಚಿಕ್ಕಮಗಳೂರು ತಾಲ್ಲೂಕು, ಖಾಂಡ್ಯ ಹೋಬಳಿ, ದೇವದಾನ ಗ್ರಾಮದ ಬಳಿ ಭದ್ರಾ ನದಿಗೆ ಅಡ್ಡಲಾಗಿ ಹಂಚಿಕೆ ಮಾಡಿರುವ 2.00ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 10.00 ಮೆಗಾ ವ್ಯಾಟ್‌ಗೆ ಹೆಚ್ಚಿಸಿ, ಅನುಷ್ಠಾನ ಮಾಡಲು ಸರ್ಕಾರಿ ಆದೇಶ ಸಂಖ್ಯೆ: ಇಎನ್ 193 ಎನ್‌ಸಿಇ 2008 ದಿ: 21.07.008ರಲ್ಲಿ ಅನುಮತಿ ನೀಡಲಾಗಿದೆ. ಸದರಿ ಯೋಜನೆಯು ದೇವದಾನ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುತ್ತಿದ್ದು, ಯೋಜನೆಯ ಅನುಷ್ಠಾನಕ್ಕೆ ಯಾವುದೇ ಅಭ್ಯಂತರ ಇರುವುದಿಲ್ಲವೆಂದು, ಯೋಜನೆಯ ಅನುಷ್ಠಾನಗೊಳಿಸುವಾಗ ಪರಿಸರಕ್ಕೆ ಯಾವುದೇ ಮಾಲಿನ್ಯ ಉಂಟಾಗದಂತೆ ನೋಡಿಕೊಳ್ಳಬೇಕೆಂಬ ನಿಬಂಧನೆಗೊಳಪಟ್ಟು ದಿ: 06.05.2009ರಂದು ನಿರಾಕ್ಷೇಪಣ ಪತ್ರವನ್ನು ನೀಡಿರುವುದಾಗಿ ತಿಳಿಸಿರುತ್ತಾರೆ. ದಿ: 15.10.2008ರಲ್ಲಿ ಮೆ: ಐಶ್ವರ್ಯ ಪವರ್ ಪ್ರೈ.ಲಿ. ಕಂಪನಿಯವರು ಸರ್ಕಾರ ಹಾಗೂ ಕಂಪನಿ ಇವರುಗಳು ಮಾಡಿಕೊಂಡಿರುವ ಒಪ್ಪಂದದಂತೆ ಯೋಜನೆ ಅನುಷ್ಠಾನಕ್ಕಾಗಿ 30 ವರ್ಷಗಳ ಅವಧಿಗೆ ಯೋಜನೆ ನಿರ್ವಹಿಸಲು ಒಪ್ಪಂದ ಮಾಡಿಕೊಳ್ಳಲಾಗಿದೆ.

ಪ್ರಸ್ತಾಪಿತ ದೇವದಾನ ಗ್ರಾಮದ ಸ.ನಂ. 362ರಲ್ಲಿ ಒಟ್ಟು 204.37 ಎಕರೆ ಗೋಮಾಳ ಜಮೀನಿದ್ದು, ಈ ಪೈಕಿ 2.20 ಎಕರೆ ಪ್ರದೇಶವನ್ನು ಖಾಸಗಿ ವ್ಯಕ್ತಿಗಳಾದ ಶ್ರೀ ಎನ್.ಸಿ. ಅನೂಪ್ ಕುಮಾರ್ ಮತ್ತು ಶ್ರೀ ಸಿ. ಅರುಣ್ ಕುಮಾರ್‌ರವರುಗಳು ಒತ್ತುವರಿ ಮಾಡಿ ಸ್ವಾಧೀನ ಅನುಭವದಲ್ಲಿದ್ದು ಒತ್ತುವರಿ ಜಮೀನನ್ನು ಬಿಟ್ಟುಕೊಡಲು ಒಪ್ಪಿಗೆ ನೀಡಿರುತ್ತಾರೆ. ಭದ್ರಾದಂಡೆಯ ಮೇಲೆ 19-00 ಎಕರೆ ಜಮೀನನ್ನು ಯೋಜನೆಗೆ ಉಪಯೋಗಿಸಿಕೊಳ್ಳಲು ಯಾವುದೇ ತಂಟೆ ತಕರಾರು ಇರುವುದಿಲ್ಲವೆಂದು ಜಿಲ್ಲಾಧಿಕಾರಿಗಳು ವರದಿ ಮಾಡಿರುತ್ತಾರೆ.

ಪ್ರಸ್ತಾಪಿತ ಜಮೀನು ಗೋಮಾಳ ಜಮೀನಾಗಿದ್ದು, ಕರ್ನಾಟಕ ಭೂ ಕಂದಾಯ ನಿಯಮಾವಳಿಗಳು 1966ರ ನಿಯಮ 97(1)ರಂತೆ ಪ್ರತಿಯೊಂದು ಗ್ರಾಮದಲ್ಲಿ 100 ಜಾನುವಾರುಗಳಿಗೆ 12 ಹೆಕ್ಟೇರ್ ಗೋಮಾಳ ಜಮೀನನ್ನು ಮೇವಿಗಾಗಿ ಕಾಯ್ದಿರಿಸಬೇಕಾಗಿದೆ. ಸದರಿ ಗ್ರಾಮದಲ್ಲಿ 2089 ಜಾನುವಾರುಗಳಿದ್ದು, ನಿಯಮಾನುಸಾರ 600-00 ಎಕರೆ ಗೋಮಾಳ ಜಮೀನು ಇರಬೇಕಾಗಿದ್ದು, 1489 ಎಕರೆ ಹೆಚ್ಚಿನ ಗೋಮಾಳ ಇರುವುದಾಗಿ ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ.

ಸದರಿ ಪ್ರದೇಶದಲ್ಲಿ ಕಾಡುಜಾತಿಯ ಒಂದು ಗರಿಗೆ, ಒಂದು ನೇರಲೆ, ಒಂದು ತಾರೆ ಮರಗಳಿದ್ದು, ಬೆಲೆಬಾಳುವ ಮರಗಳಿರುವುದಿಲ್ಲ. ಉಪಅರಣ್ಯ ಸಂರಕ್ಷಣಾಧಿಕಾರಿಗಳು, ಕೊಪ್ಪ ರವರು ಪ್ರಕಟಿಸಿರುವ ಪಟ್ಟಿಯಲ್ಲಿ ಈ ಸರ್ವೆ ನಂ. ಅರಣ್ಯ/ ಡೀಮ್ಡ್ ಫಾರೆಸ್ಟ್‌ಗೆ ಸೇರುವುದಿಲ್ಲ. ಪ್ರಸ್ತಾಪಿತ ಜಮೀನಿನ ಮಾರ್ಗಸೂಚಿ ಬೆಲೆ ಎಕರೆ ಒಂದಕ್ಕೆ ರೂ. 60,000/-ಗಳಿದ್ದು ವ್ಯವಸಾಯೇತರ ಉದ್ದೇಶದ ಪರಿವರ್ತನೆಗೆ ರೂ. 21,780 - ಗಳಂತೆ

ಒಟ್ಟು ರೂ. 81.780/- ರೂಗಳನ್ನು ನಿಗಧಿಪಡಿಸಿ, ಒಟ್ಟು ಮೊಬಲಗಿನ ಶೇ. 5ನ್ನು ಅಭಿವೃದ್ಧಿಯಾಗದ ವ್ಯವಸಾಯೇತರ ಜಮೀನಿನ ಬೆಲೆ ಆಧರಿಸಿ, ಎಕರೆ ಒಂದಕ್ಕೆ ವಾರ್ಷಿಕ ಗುತ್ತಿಗೆ ಮೊತ್ತ ರೂ. 4899/- ರೂಗಳನ್ನು ಅಂದರೆ, ಎಕರೆ ಒಂದಕ್ಕೆ ರೂ. 5000/-ಗಳ ವಾರ್ಷಿಕ ಬಾಡಿಗೆ ವಿಧಿಸಿ, ಮೆ: ಐಶ್ವರ್ಯ ಪ್ರೈಲಿ. ಬೆಂಗಳೂರು ಇವರಿಗೆ ಕಿರು ಜಲ ವಿದ್ಯುತ್ ಉತ್ಪಾದನೆಗಾಗಿ ಸಂಬಂಧಿಸಿದ ಕೆಲಸಗಳಿಗೆ ಮಾತ್ರ ಉಪಯೋಗಿಸುವ ಷರತ್ತಿಗೆ ಒಳಪಡಿಸಿ, ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿಗಳು ನಿಯಮ 19(1)ಡಿ ಪ್ರಕಾರ 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಲು ಸರ್ಕಾರದ ಪೂರ್ವಾನುಮೋದನೆ ನೀಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ (2)ರ ಕಂದಾಯ ಇಲಾಖೆ ಸುತ್ತೋಲೆಯಲ್ಲಿ ದಿ: 03.11.2011ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ನಡೆದ ಸಭೆಯಲ್ಲಿ ಇಂಧನ ಇಲಾಖೆಯ ಕೋರಿಕೆಯಂತೆ ಇನ್ನು ಮುಂದೆ ಸರ್ಕಾರಿ ಜಮೀನುಗಳನ್ನು ಗುತ್ತಿಗೆ ಆಧಾರದ ಮೇಲೆ ಕರ್ನಾಟಕ ನವೀಕರಿಸಬಹುದಾದ ಇಂಧನ ನಿಯಮಿತ ಇವರಿಗೆ ಮಂಜೂರು ಮಾಡುವ ಬದಲಾಗಿ ಯೋಜನೆ ಕೈಗೊಳ್ಳುವ ಸಂಸ್ಥೆಗೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಲು ನಿರ್ಣಯಿಸಲಾಗಿರುತ್ತದೆ.

ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗದಲ್ಲಿ ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶ ಹೊರಡಿಸಲು ತೀರ್ಮಾನಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 41 ಎಲ್‌ಜಿಯು 2011, ಬೆಂಗಳೂರು ದಿನಾಂಕ:11.11.2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ತಾಲ್ಲೂಕು, ಖಾಂಡ್ಯ ಹೋಬಳಿ, ದೇವದಾನ ಗ್ರಾಮದ ಸ.ನಂ. 362 ರಲ್ಲಿ 19-00 ಎಕರೆ ಜಮೀನನ್ನು ಕರ್ನಾಟಕ ಭೂ ಕಂದಾಯ ನಿಯಮಾವಳಿಗಳು 1966ನಿಯಮ 97(4)ಅಡಿಯಲ್ಲಿನ ಅವಕಾಶದಂತೆ ಗೋಮಾಳ ಶೀರ್ಷಿಕೆಯಿಂದ ತಗ್ಗಿಸಿ, ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿಗಳು 1969ರ ನಿಯಮ 21ರಡಿ ಪ್ರಚಲಿತ ಮಾರುಕಟ್ಟೆ ದರದ ಶೇ.10ರಷ್ಟು ಗುತ್ತಿಗೆ ದರ ನಿಗಧಿಪಡಿಸಿ, ಪ್ರತಿ 2 ವರ್ಷಗಳಿಗೊಮ್ಮೆ ಗುತ್ತಿಗೆ ದರವನ್ನು ಶೇ.10 ರಷ್ಟು ಹೆಚ್ಚಿಸುವ ಷರತ್ತಿಗೆ ಒಳಪಟ್ಟು ಸದರಿ 19-00 ಎಕರೆ ಸರ್ಕಾರಿ ಜಮೀನನ್ನು ಉದ್ದೇಶಿತ ಕಿರು ಜಲವಿದ್ಯುತ್ ಯೋಜನೆ ಸ್ಥಾಪನೆಗಾಗಿ ಮಾತ್ರ ಬಳಸಬೇಕೆಂದು ಹಾಗೂ ಯಾವುದೇ ಬೇರೆ ಉದ್ದೇಶಕ್ಕಾಗಿ ಬಳಸಿಕೊಳ್ಳಕೂಡದೆಂದು ಷರತ್ತು ವಿಧಿಸಿ, ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿಗಳು 1969ರ ನಿಯಮ 19(1)ರನ್ವಯ 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಮೆ: ಐಶ್ವರ್ಯ ಪ್ರೈಲಿ. ಬೆಂಗಳೂರು ಇವರಿಗೆ ಮಂಜೂರು ಮಾಡಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆ.ಇ 848 ವೆಚ್ಚ-7/2011 ದಿ: 26.9.2011ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಗೀತಾ ರಮೇಶ್
ಸರ್ಕಾರದ ಜಂಟಿ ಕಾರ್ಯದರ್ಶಿ
(ಭೂಮಂ, ಭೂಕಂ. ಮತ್ತು ಸೇವೆಗಳು)
ಕಂದಾಯ ಇಲಾಖೆ.

ಪಿ.ಆರ್. ನಂ. 2864

ಕಂದಾಯ ಸಚಿವಾಲಯ

ವಿಷಯ : ಕೊಡಗು ಜಿಲ್ಲಾ ಕೇಂದ್ರವಾದ ಮಡಿಕೇರಿಯಲ್ಲಿ ಜಿಲ್ಲಾ ಕಛೇರಿಗಳ ಸಂಕೀರ್ಣ ಕಟ್ಟಡ ಕಾಮಗಾರಿಯ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ :
1) ಸರ್ಕಾರದ ಆದೇಶ ಸಂಖ್ಯೆ ಕಂಇ 31 ಡಬ್ಲ್ಯೂಬಿಆರ್ 2007, ದಿನಾಂಕ 09/10/2009.
2) ಸರ್ಕಾರದ ಆದೇಶ ಸಂಖ್ಯೆ ವಾಕೈ/6/ಕೈಯೋವಿ 2010, ದಿನಾಂಕ 3/7/2010. ಕಂಇ
3) ಪತ್ರ ಸಂಖ್ಯೆ ಕಗೃಮಂ/ಮುಅ/ಮಡಿಕೇರಿ/ಜಿಕ 1151/010-11, ದಿನಾಂಕ 30/09/2010.
4) ಪತ್ರ ಸಂಖ್ಯೆ ಕಗೃಮಂ/ಮುಅ/ಮಡಿಕೇರಿ/ಜಿಕ 222/2010-11, ದಿನಾಂಕ 16/05/2011.

ಪ್ರಸ್ತಾವನೆ:

ಜಿಲ್ಲಾ ಮಟ್ಟದ ಎಲ್ಲಾ ಇಲಾಖೆಗಳ ಕಛೇರಿಗಳು ಒಂದೇ ಕಟ್ಟಡದಲ್ಲಿರುವಂತೆ ಜಿಲ್ಲಾ ಕೇಂದ್ರದಲ್ಲಿ ಜಿಲ್ಲಾ ಕಛೇರಿ ಸಂಕೀರ್ಣ ಕಟ್ಟಡವನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ನಿರ್ಮಿಸುವುದು ಸರ್ಕಾರದ ನೀತಿಯಾಗಿರುತ್ತದೆ. ಅದರಂತೆ, ಕೊಡಗು ಜಿಲ್ಲಾ ಕೇಂದ್ರವಾದ ಮಡಿಕೇರಿಯಲ್ಲಿ ಕರವಾಲೆಬಾಡಗಾ ಗ್ರಾಮದ 5.19 ಎಕರೆ ಪ್ರದೇಶದಲ್ಲಿ ರೂ.9.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಜಿಲ್ಲಾ ಕಛೇರಿಗಳ ಸಂಕೀರ್ಣ ಕಟ್ಟಡವನ್ನು ನಿರ್ಮಾಣ ಮಾಡಲು ಕಾಮಗಾರಿಯನ್ನು ಕರ್ನಾಟಕ ಗೃಹ ಮಂಡಳಿಗೆ ವಹಿಸುವುದರೊಂದಿಗೆ ಪ್ರಥಮವಾಗಿ ರೂ.1.00 ಕೋಟಿಗಳ ಅನುದಾನವನ್ನು ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಬಿಡುಗಡೆ ಮಾಡಲಾಗಿತ್ತು.

ಕೊಡಗು ಜಿಲ್ಲಾ ಕಛೇರಿ ಸಂಕೀರ್ಣ ಕಟ್ಟಡವನ್ನು ಮಡಿಕೇರಿಯ ಕರವಾಲೆಬಾಡಗಾ ಗ್ರಾಮದ 5.19 ಎಕರೆ ವಿಸ್ತೀರ್ಣದ ಜಮೀನಿಗೆ ಬದಲಾಗಿ ಮಡಿಕೇರಿ ತಾಲ್ಲೂಕು ಕರ್ಣಂಗೇರಿಯ ಸರ್ವೆ ನಂ. 471/1ರ 2.20 ಎಕರೆ ವಿಸ್ತೀರ್ಣದ ಸರ್ಕಾರಿ ಜಮೀನಿನಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ. ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯು ಮೇಲೆ (2)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಈ ನಿವೇಶನವನ್ನು ಕಂದಾಯ ಇಲಾಖೆಗೆ ಹಸ್ತಾಂತರಿಸಲು ಮಂಜೂರಾತಿ ನೀಡಿರುತ್ತದೆ.

ಕರ್ಣಂಗೇರಿ ಗ್ರಾಮದ ಸರ್ವೆ ನಂ. 471/1ರ 2.20 ಎಕರೆ ವಿಸ್ತೀರ್ಣದ ಜಮೀನಿನಲ್ಲಿ ಕೊಡಗು ಜಿಲ್ಲಾ ಕಛೇರಿ ಸಂಕೀರ್ಣ ಕಟ್ಟಡವನ್ನು ನಿರ್ಮಾಣ ಮಾಡಲು ರೂ. 12.50 ಕೋಟಿ ವೆಚ್ಚದ ಕಾಮಗಾರಿ ಸವಿವರ ಅಂದಾಜುಪಟ್ಟಿಯನ್ನು ಕರ್ನಾಟಕ ಗೃಹ ಮಂಡಳಿಯು ಮೇಲೆ (3) ಮತ್ತು (4)ರಲ್ಲಿ ಓದಲಾದ ತಮ್ಮ ಪತ್ರಗಳಲ್ಲಿ ಸಲ್ಲಿಸುತ್ತಾ, ಆಡಳಿತಾತ್ಮಕ ಅನುಮೋದನೆಯನ್ನು ನೀಡುವಂತೆ ಸರ್ಕಾರವನ್ನು ಕೋರಿದೆ.

ಕರ್ಣಂಗೇರಿ ಗ್ರಾಮದ ಸರ್ವೆ ನಂ. 471/1ರ ಜಮೀನು ಕೇವಲ 2.20 ಎಕರೆ ವಿಸ್ತೀರ್ಣವಿರುವುದರಿಂದ ವಾಹನ ನಿಲುಗಡೆ ಸ್ಥಳಾವಕಾಶವನ್ನು ಕಟ್ಟಡದ ಸ್ಟಿಲ್ಟ್/ಬೇಸ್‌ಮೆಂಟ್ ಮಹಡಿಯಲ್ಲಿ ವ್ಯವಸ್ಥೆಯನ್ನು ಕಲ್ಪಿಸಬೇಕಾಗಿರುವುದರಿಂದ ಕಾಮಗಾರಿ ಅಂದಾಜು ವೆಚ್ಚದಲ್ಲಿ ರೂ. 3.50 ಕೋಟಿ ಹೆಚ್ಚುವರಿಯಾಗಿರುವುದನ್ನು ಸರ್ಕಾರವು ಮನಗಂಡಿದೆ.

ವಿಷಯವನ್ನು ಸಂಬಂಧಿಸಿದ. ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದ ನಂತರ, ಕೊಡಗು ಜಿಲ್ಲಾ ಕಛೇರಿ ಸಂಕೀರ್ಣ ಕಟ್ಟಡವನ್ನು ಮಡಿಕೇರಿಯ ಕರವಾಲೆಬಾಡಗಾ ಗ್ರಾಮದ 5.19 ಎಕರೆ ವಿಸ್ತೀರ್ಣದ ಜಮೀನಿಗೆ ಬದಲಾಗಿ ಕರ್ಣಂಗೇರಿ ಗ್ರಾಮದ ಸರ್ವೆ ನಂ.471/1ರ 2.20 ಎಕರೆ ವಿಸ್ತೀರ್ಣದ ಜಮೀನಿನಲ್ಲಿ ನಿರ್ಮಿಸಲು ಮತ್ತು ಕಟ್ಟಡ ನಿರ್ಮಾಣ ಕಾಮಗಾರಿಯ ರೂ. 12.50 ಕೋಟಿಗಳ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲು ಸರ್ಕಾರವು ತೀರ್ಮಾನಿಸಿ ಈ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 31 ಡಬ್ಲ್ಯೂಬಿಆರ್ 2008, ಬೆಂಗಳೂರು ದಿನಾಂಕ:08/11/2011.

(1) ಕೊಡಗು ಜಿಲ್ಲಾ ಕಛೇರಿ ಸಂಕೀರ್ಣ ಕಟ್ಟಡವನ್ನು ಕೊಡಗು ಜಿಲ್ಲಾ ಕೇಂದ್ರವಾದ ಮಡಿಕೇರಿಯ ಕರವಾಲೆಬಾಡಗಾ ಗ್ರಾಮದ 5.19 ಎಕರೆ ವಿಸ್ತೀರ್ಣದ ಜಮೀನಿಗೆ ಬದಲಾಗಿ ಕರ್ಣಂಗೇರಿ ಗ್ರಾಮದ ಸರ್ವೆ ನಂ. 471/1ರ 2.20 ಎಕರೆ ವಿಸ್ತೀರ್ಣದ ಜಮೀನಿನಲ್ಲಿ ನಿರ್ಮಿಸಲು ಮಂಜೂರಾತಿಯನ್ನು ನೀಡಲಾಗಿದೆ.

(2) ಕರ್ಣಂಗೇರಿ ಗ್ರಾಮದ ಸರ್ವೆ ನಂ. 471/1ರ 2.20 ಎಕರೆ ವಿಸ್ತೀರ್ಣದ ಜಮೀನಿನಲ್ಲಿ ಕೊಡಗು ಜಿಲ್ಲಾ ಕಛೇರಿ ಸಂಕೀರ್ಣ ಕಟ್ಟಡವನ್ನು ನಿರ್ಮಾಣ ಮಾಡುವ ಕಾಮಗಾರಿಯ ರೂ. 12.50 ಕೋಟಿ (ರೂಪಾಯಿ ಹನ್ನೆರಡು ಕೋಟಿ ಐವತ್ತು ಲಕ್ಷಗಳು ಮಾತ್ರ)ಗಳ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

ಕಾಮಗಾರಿ ಅಂದಾಜಿನಲ್ಲಿ ಬದಲಾವಣೆಯಾದ ಅಥವಾ ಹೆಚ್ಚುವರಿಯಾದ ಐಟಂಗಳಿಗೆ ಸಕ್ಷಮ ಪ್ರಾಧಿಕಾರದಿಂದ ಸರಿಯಾದ ತಾಂತ್ರಿಕ ಮಂಜೂರಾತಿಯನ್ನು ಪಡೆಯತಕ್ಕದ್ದು.

ಹೆಚ್ಚುವರಿಯನ್ನೊಳಗೊಂಡಂತೆ ಇದಕ್ಕೆ ತಗಲುವ ವೆಚ್ಚವನ್ನು 4059–80–051–0–42–386 (ಯೋಜನೆ) ಲೆಕ್ಕಶೀರ್ಷಿಕೆ ಅಡಿಯಲ್ಲಿ ಭರಿಸತಕ್ಕದ್ದು.

ಈ ಕಾಮಗಾರಿಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮಗಳು 2000 ಪ್ರಕಾರ ಮಾಡತಕ್ಕದ್ದು.

ಸರ್ಕಾರದ ಪೂರ್ವಾನುಮೋದನೆ ಇಲ್ಲದೆ ಕಾಮಗಾರಿಯಲ್ಲಿ ಯಾವುದೇ ಬದಲಾವಣೆ ಅಥವಾ ಹೆಚ್ಚುವರಿ ಐಟಂಗಳನ್ನು ಸೇರಿಸತಕ್ಕದ್ದಲ್ಲ.

ಸಕ್ಷಮ ಪ್ರಾಧಿಕಾರವು ಸದರಿ ಕಟ್ಟಡ ಕಾಮಗಾರಿಯ ಗುಣಮಟ್ಟ ಕಾಯ್ದುಕೊಳ್ಳುವಿಕೆಯನ್ನು ಕಾಲಕಾಲಕ್ಕೆ ಖಾತರಿಪಡಿಸಿಕೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ ಆಇ 557 ವೆಚ್ಚ–7/2011, ದಿನಾಂಕ 19/09/2011ರ ಸಹಮತಿಯೊಂದಿಗೆ ಮತ್ತು ಪ್ರಕರಣ ಸಂಖ್ಯೆ ಸಿ:483/2011ರ, ದಿನಾಂಕ 18/10/2011ರ ಸಚಿವ ಸಂಪುಟದ ಅನುಮೋದನೆಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ವಿ. ಶ್ರೀರಾಮರೆಡ್ಡಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ. (ಭೂ ಸುಧಾರಣಾ ಕೋಶ).

ಪಿ.ಆರ್. ನಂ. 2865

ಕಂದಾಯ ಸಚಿವಾಲಯ

ವಿಷಯ : ಶ್ರೀ ಶ್ರೀಧರ ಸುಬ್ರಾಯಚಾರ್, ಹಿಂದಿನ ತಹಶೀಲ್ದಾರ್, ಬಂಟ್ವಾಳ್ ತಾಲ್ಲೂಕು, ಶ್ರೀ ಕೆ. ರಘುಚಂದ್ರ ಆಚಾರ್, ಕಂದಾಯ ನಿರೀಕ್ಷಕರು, ಪಾಣೆ, ಮಂಗಳೂರು ಹೋಬಳಿ, ಬಂಟ್ವಾಳ್ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಇವರುಗಳ ವಿರುದ್ಧ ಇಲಾಖಾ ವಿಚಾರಣೆ ಜರುಗಿಸಲು ಮಾನ್ಯ ಲೋಕಾಯಕ್ತರಿಗೆ ವಹಿಸಿಕೊಡುವ ಬಗ್ಗೆ.

ಓದಲಾಗಿದೆ : ಉಪನಿಬಂಧಕರು/ಸಾರ್ವಜನಿಕ ಅಭಿಯೋಜಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬೆಂಗಳೂರು ಇವರ ಪತ್ರ ಸಂಖ್ಯೆ: D.O.No Compt/Uplok/Mys-755/2008/PR, ದಿನಾಂಕ: 09.06.2011

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದೊಂದಿಗೆ ಉಪ ನಿಬಂಧಕರು/ಸಾರ್ವಜನಿಕ ಅಭಿಯಂತರರು ಕರ್ನಾಟಕ ಲೋಕಾಯುಕ್ತ ಕಛೇರಿ, ಬೆಂಗಳೂರು, ಬಂಟ್ವಾಳ ತಾಲ್ಲೂಕು ತಹಶೀಲ್ದಾರರಾದ ಶ್ರೀ ಶ್ರೀಧರ ಸುಬ್ರಾಯಚಾರ್ ಮತ್ತು ಶ್ರೀ ಕೆ. ರಘುಚಂದ್ರ ಆಚಾರ್, ಕಂದಾಯ ನಿರೀಕ್ಷಕರು, ಪಾಣೆ, ಮಂಗಳೂರು ಹೋಬಳಿ, ಬಂಟ್ವಾಳ್ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಇವರು ಮಾನ್ಯ ಲೋಕಾಯುಕ್ತರಿಗೆ ಸಲ್ಲಿಸಿರುವ ದೂರಿನ ಬಗ್ಗೆ ಪ್ರಾಥಮಿಕ ವಿಚಾರಣೆಯನ್ನು ನಡಸಿ ಮಾನ್ಯ ಉಪ ಲೋಕಾಯುಕ್ತರು ನೀಡಿರುವ ವರದಿಯನ್ನು ಕಳುಹಿಸಿ ವರದಿಯ ಬಗ್ಗೆ ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ.

ಸದರಿ ವರದಿಯನ್ನು ಪರಿಶೀಲಿಸಲಾಗಿ ದಕ್ಷಿಣ ಕನ್ನಡ ಜಿಲ್ಲೆ, ಬಂಟ್ವಾಳ್ ತಾಲ್ಲೂಕಿನ ತಹಶೀಲ್ದಾರ್ ಕಛೇರಿಯ ಶ್ರೀ ಕೆ. ರಘುಚಂದ್ರ ಆಚಾರ್, ಕಂದಾಯ ನಿರೀಕ್ಷಕರು, ಪಾಣೆ, ಮಂಗಳೂರು ಹೋಬಳಿ, ಬಂಟ್ವಾಳ್ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ರವರುಗಳ ಟ್ರ್ಯಾಪ್ ಪ್ರಕರಣದಲ್ಲಿ ಲೋಕಾಯುಕ್ತ ಕಾಯ್ದೆ 1984 ರ ಕಲಂ 7(2) ರಂತೆ ಗೌರವಾನ್ವಿತ ಉಪಲೋಕಾಯುಕ್ತರವರು ವಿಚಾರಣೆ ನಡೆಸಲು ಅನುಕೂಲವಾಗುವಂತೆ ಈ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲಾತಿಗಳ ಪ್ರತಿಗಳು ಮತ್ತು ತನಿಖಾಧಿಕಾರಿಯವರ ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಅರ್ಜಿದಾರರಾದ ಶ್ರೀ ಪ್ರೇಮಾನಂದ. ಎನ್, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಇವರು ಹಿಂದಿನ ತಹಶೀಲ್ದಾರರಾದ ಶ್ರೀ ಶ್ರೀಧರ ಸುಬ್ರಾಯಚಾರ್ ಹಾಗೂ ಶ್ರೀ ಕೆ. ರಘುಚಂದ್ರಾಚಾರ್, ಕಂದಾಯ ನಿರೀಕ್ಷಕರು, ಪಾಣೆ ಮಂಗಳೂರು ಇವರುಗಳ ವಿರುದ್ಧ ಮಾನ್ಯ ಲೋಕಾಯುಕ್ತರಿಗೆ ದೂರು ಸಲ್ಲಿಸಿರುತ್ತಾರೆ. ಸದರಿ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಸಿಸಿಎ ನಿಯಮ 14–ಎ ರನ್ವಯ ಇಲಾಖಾ ವಿಚಾರಣೆಯನ್ನು ಉಪ ಲೋಕಾಯುಕ್ತರಿಗೆ/ ಸಾರ್ವಜನಿಕ ಅಭಿಯೋಜಕರು ವಹಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ. ಹಾಗೂ ಅಂತಹ ಕ್ರಮಗಳನ್ನು ಕೈಗೊಂಡ ಬಗ್ಗೆ ಸದರಿ ಕಾಯ್ದೆಯ 12(4) ರನ್ವಯ 3 ತಿಂಗಳೊಳಗಾಗಿ ಮಾನ್ಯ ಲೋಕಾಯುಕ್ತರಿಗೆ ಮಾಹಿತಿ ನೀಡುವಂತೆ ಕೋರಿರುತ್ತಾರೆ.

ತನಿಖಾ ವರದಿಯಲ್ಲಿನ ಶಿಫಾರಸ್ಸನ್ನು ಪರಿಶೀಲಿಸಲಾಗಿ ಸರ್ಕಾರವು ಈ ಪ್ರಕರಣದಲ್ಲಿ ಆರೋಪಿತರೆಂದು ಹೇಳಲಾದ ಶ್ರೀ ಶ್ರೀಧರ ಸುಬ್ರಾಯಚಾರ್, ಹಿಂದಿನ ತಹಶೀಲ್ದಾರ್, ಬಂಟ್ವಾಳ್ ತಾಲ್ಲೂಕು, ಶ್ರೀ ಕೆ. ರಘುಚಂದ್ರ ಆಚಾರ್, ಕಂದಾಯ ನಿರೀಕ್ಷಕರು, ಪಾಣೆ, ಮಂಗಳೂರು

ಇವರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ ನಿಯಮಗಳು 1957ರ ನಿಯಮ 11 ಮತ್ತು 11–ಎ ರನ್ವಯ ವಿಚಾರಣೆ ನಡೆಸುವ ಸಲುವಾಗಿ ಸದರಿ ನಿಯಮಾವಳಿ ನಿಯಮ 14–ಎ ರಡಿಯಲ್ಲಿ ಮಾನ್ಯ ಲೋಕಾಯುಕ್ತರು, ಬೆಂಗಳೂರು ಇವರಿಗೆ ವಹಿಸಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 82 ಎಡಿಇ 2006, ಬೆಂಗಳೂರು, ದಿನಾಂಕ: 04.11.2011

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳಿಂದ ಶ್ರೀ ಶ್ರೀಧರ ಸುಭ್ರಾಯಾಚಾರ್, ಹಿಂದಿನ ತಹಶೀಲ್ದಾರ್, ಹಾಗೂ ಶ್ರೀ ಕೆ. ರಘುಚಂದ್ರಆಚಾರ್, ಕಂದಾಯ ನಿರೀಕ್ಷಕರು, ಪಾಣೆ, ಮಂಗಳೂರು ಇವರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ ನಿಯಮಗಳು 1957ರ ನಿಯಮ 11 ಮತ್ತು 11–ಎ ರನ್ವಯ ವಿಚಾರಣೆ ನಡೆಸುವ ಸಲುವಾಗಿ ಸದರಿ ನಿಯಮಾವಳಿಯ ನಿಯಮ 14–ಎರ ಅಡಿಯಲ್ಲಿ ವಿಚಾರಣೆ ಜರುಗಿಸಿ ಸರ್ಕಾರಕ್ಕೆ ವರದಿ ನೀಡಲು ಮಾನ್ಯ ಉಪ ಲೋಕಾಯುಕ್ತರು, ಬೆಂಗಳೂರು ಇವರಿಗೆ ವಹಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎನ್. ಗೋಪಾಲಯ್ಯ

ಪಿ.ಆರ್. ನಂ. 2866

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ. (ಸೇವೆಗಳು–3).

ಕಂದಾಯ ಸಚಿವಾಲಯ

ವಿಷಯ : ಬೆಂಗಳೂರಿನ ಶಿವಾಜಿನಗರ ವಿಧಾನ ಸಭಾ ಕ್ಷೇತ್ರಕ್ಕೆ ಆರಾಧನಾ ಸಮಿತಿ ರಚಿಸುವ ಬಗ್ಗೆ.

ಓದಲಾಗಿದೆ : ಸರ್ಕಾರದ ಆದೇಶ ಸಂಖ್ಯೆ: ಕಂಇ 35 ಮುಸರ 2009, ದಿನಾಂಕ: 25.02.2009

ಪ್ರಸ್ತಾವನೆ:

ಮೇಲೆ ಓದಲಾದ ಆದೇಶದಲ್ಲಿ ಬೆಂಗಳೂರು (ನಗರ) ಜಿಲ್ಲೆಯ ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಯನ್ನು ಈ ಕೆಳಕಂಡವರೊಂದಿಗೆ ರಚಿಸಲು ಆದೇಶಿಸಲಾಗಿತ್ತು.

1)	ಮಾನ್ಯ ವಿಧಾನಸಭಾ ಸದಸ್ಯರು, ಶಿವಾಜಿನಗರ ವಿಧಾನಸಭಾ ಕ್ಷೇತ್ರ	ಅಧ್ಯಕ್ಷರು
2)	ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ.	ಸದಸ್ಯರು
3)	ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಯಲಹಂಕ	ಸದಸ್ಯರು
4)	ತಹಶೀಲ್ದಾರ್, ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಯಲಹಂಕ	ಸದಸ್ಯ ಕಾರ್ಯದರ್ಶಿ

ಮುಂದುವರೆದು, ನಾಲ್ಕು ಅಧಿಕಾರೇತರ ಸದಸ್ಯರನ್ನು ನಂತರ ನಾಮ ನಿರ್ದೇಶನ ಮಾಡಲಾಗುವುದೆಂದು ನಮೂದಿಸಲಾಗಿತ್ತು.

ಈ ಹಿನ್ನೆಲೆಯಲ್ಲಿ ಪರಿಶೀಲಿಸಿ, ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 65 ಮುಸರ 2011: ಬೆಂಗಳೂರು, ದಿನಾಂಕ: 23ನೇ ನವೆಂಬರ್, 2011

ಬೆಂಗಳೂರು (ನಗರ) ಜಿಲ್ಲೆಯ ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ಈ ಕೆಳಕಂಡಂತೆ ಅಧಿಕಾರೇತರ ಸದಸ್ಯರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ನಾಮ ನಿರ್ದೇಶನ ಮಾಡಲಾಗಿದೆ.

ಕ್ರಮ ಸಂ.	ಹೆಸರು/ವಿಳಾಸ	ಪ್ರವರ್ಗ
1	ಶ್ರೀ ಆರ್. ಗುರುಮೂರ್ತಿ, ನಂ. 10/1, ಶೇಷಾದ್ರಿ ರಸ್ತೆ, ಮಾರಪ್ಪ ಗಾರ್ಡನ್ ಬೆನ್‌ಸನ್ ಟೌನ್ ಅಂಚೆ, ಬೆಂಗಳೂರು–560046	ಸಾಮಾನ್ಯ
2	ಶ್ರೀಮತಿ ಎಂ. ಚಿತ್ರಕಲಾವತಿ ನಂ. 10/1,ಯಲ್ಲಮ್ಮ ಕೋಯಿಲ್ ಸ್ಟ್ರೀಟ್, 2ನೇ ಅಡ್ಡರಸ್ತೆ, ಬೆಂಗಳೂರು–560051	ಮಹಿಳೆ
3	ಶ್ರೀ ಕೆ.ಸುನೀಲ್ ಕುಮಾರ್ ನಂ.68, 2ನೇ ಅಡ್ಡರಸ್ತೆ, ಬ್ರಾಡ್‌ವೇ ರಸ್ತೆ, ಶಿವಾಜಿನಗರ, ಬೆಂಗಳೂರು–560051	ಪರಿಶಿಷ್ಟ ಜಾತಿ
4	ಶ್ರೀ ಸಿದ್ಧಿ ವಿನಾಯಕ ನಂ. 58, 1ನೇ ಮಹಡಿ, ನ್ಯೂ ಮಾರ್ಕೆಟ್, ಶಿವಾಜಿನಗರ, ಬೆಂಗಳೂರು–560008	ಪರಿಶಿಷ್ಟ ಪಂಗಡ

ಸದರಿ ಸಮಿತಿಯ ಅಧಿಕಾರೇತರ ಸದಸ್ಯರು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 2 ಎಸ್‌ಆರ್‌ಎ 2000, ದಿನಾಂಕ: 03.02.2001ರ ಪ್ರಕಾರ ಸಂಬಂಧಪಟ್ಟ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.

ಈ ಸಮಿತಿಯು ಐದು ವರ್ಷ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ: ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಸ್ತಿತ್ವದಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ. ಉಮಾಪತಿ

ಪಿ.ಆರ್. ನಂ. 2867

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ. (ಮುಜರಾಯಿ).

ಇಂಧನ ಸಚಿವಾಲಯ

ವಿಷಯ : ಮೆ॥ ಮದ್ರಾಸ್ ಹಾರ್ಡ್‌ಟೂಲ್ಸ್ ಪ್ರೈವೇಟ್ ಲಿಮಿಟೆಡ್ ರವರಿಗೆ 0.5 ಮೆ.ವ್ಯಾ. ಪವನ ವಿದ್ಯುತ್ ಯೋಜನೆಯನ್ನು ಮೆ॥ ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ರವರಿಂದ ವರ್ಗಾಯಿಸುವ ಬಗ್ಗೆ.

ಓದಲಾಗಿದೆ :
1) ಸಕಾರಿ ಆದೇಶ ಸಂಖ್ಯೆ: ಡಿಇ 26 ಎನ್‌ಸಿಇ 1999 ದಿನಾಂಕ: 13.5.1999.
2) ಸರ್ಕಾರಿ ಆದೇಶ ಸಂಖ್ಯೆ: ಇಎನ್ 259 ಎನ್‌ಸಿಇ 2004 ದಿನಾಂಕ: 18.3.2005.
3) ಸರ್ಕಾರಿ ಆದೇಶ ಸಂಖ್ಯೆ: ಇಎನ್ 448 ಎನ್‌ಸಿಇ 2008 ದಿನಾಂಕ: 20.6.2009.
4) ಸರ್ಕಾರಿ ಆದೇಶ ಸಂಖ್ಯೆ: ಇಎನ್ 448 ಎನ್‌ಸಿಇ 2008 ದಿನಾಂಕ: 04.3.2011.
5) ಸರ್ಕಾರಿ ಆದೇಶ ಸಂಖ್ಯೆ: ಇಎನ್ 448 ಎನ್‌ಸಿಇ 2008 ದಿನಾಂಕ: 02.8.2011.
6) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/MHPL-0.5AMTL/-2011/4107 ದಿನಾಂಕ: 13/19.10.2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಮೆ॥ ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ರವರಿಗೆ ಚಿತ್ರದುರ್ಗ ಜಿಲ್ಲೆಯ ಅರಸಿನಗುಂಡಿ ಗಾಳಿವಲಯ ಪ್ರದೇಶದ ತುರುವನೂರು (4 ಮೆ.ವ್ಯಾ.) ಮತ್ತು ಮದನಾಯಕನಹಳ್ಳಿ ಗ್ರಾಮಗಳಲ್ಲಿ ಒಟ್ಟು 11.2 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಮಂಜೂರು ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ಮೆ॥ ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಕಂಪನಿಗೆ ಚಿತ್ರದುರ್ಗ ಜಿಲ್ಲೆಯ ತುರುವನೂರು ಮತ್ತು ಅರಸಿನಗುಂಡಿ ಗಾಳಿವಲಯ ಪ್ರದೇಶಗಳಲ್ಲಿ ಹಂಚಿಕೆಮಾಡಲಾಗಿರುವ 11.2 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನಾ ಸಾಮರ್ಥ್ಯವನ್ನು 17.25 ಮೆ.ವ್ಯಾಗೆ ಹೆಚ್ಚಿಸಿ ಅನುಷ್ಠಾನ ಮಾಡಲು ಅನುಮತಿ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಆದೇಶದಲ್ಲಿ ಮೆ॥ ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ರವರಿಗೆ ಚಿತ್ರದುರ್ಗ ಜಿಲ್ಲೆಯ ತುರುವನೂರು ಮತ್ತು ಮದನಾಯಕನಹಳ್ಳಿ ಗ್ರಾಮಗಳಲ್ಲಿ ಹಂಚಿಕೆ ಮಾಡಲಾಗಿದ್ದ 11.2 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಹಂಚಿಕೆ ಆದೇಶ ಮತ್ತು ಈ ಸಂಬಂಧ ಮಾಡಿಕೊಂಡಿರುವ ಒಡಂಬಡಿಕೆಯನ್ನು ರದ್ದು ಪಡಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಆದೇಶದಲ್ಲಿ ಮೆ॥ ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಕಂಪನಿಗೆ ಚಿತ್ರದುರ್ಗ ಜಿಲ್ಲೆಯ ತುರುವನೂರು ಮತ್ತು ಮದನಾಯಕನಹಳ್ಳಿ ಗ್ರಾಮಗಳಲ್ಲಿ ಹಂಚಿಕೆ ಮಾಡಲಾಗಿದ್ದ 11.2 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ರದ್ಧತಿ ಆದೇಶವನ್ನು ಹಿಂಪಡೆದು ಯೋಜನೆಯ ಅನುಷ್ಠಾನಕ್ಕಾಗಿ ಕೊನೆಯ ಅವಕಾಶವಾಗಿ ಕಾಲಾವಕಾಶವನ್ನು ದಿನಾಂಕ 31.12.2011ರವರೆಗೆ ವಿಸ್ತರಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ಆದೇಶದಲ್ಲಿ ಮೆ॥ ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಕಂಪನಿಗೆ ಚಿತ್ರದುರ್ಗ ಜಿಲ್ಲೆಯ ತುರುವನೂರು ಮತ್ತು ಅರಸಿನಗುಂಡಿ ವಲಯ ಪ್ರದೇಶಗಳಲ್ಲಿ ಹಂಚಿಕೆಯಾಗಿರುವ 6.05 ಮೆ.ವ್ಯಾ. ಹೆಚ್ಚುವರಿ ಸಾಮರ್ಥ್ಯ (17.25 – 11.2 = 6.05 ಮೆ.ವ್ಯಾ.) ಪವನ ವಿದ್ಯುತ್ ಯೋಜನೆಯ ಅನುಷ್ಠಾನಕ್ಕಾಗಿ ಕಾಲಾವಕಾಶವನ್ನು ದಿನಾಂಕ 31.12.2011 ರವರೆಗೆ ವಿಸ್ತರಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (6)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ॥ ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಕಂಪನಿಗೆ ಚಿತ್ರದುರ್ಗ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲು ಅನುಮತಿಸಲಾದ 17.25 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಿಂದ 0.5 ಮೆ.ವ್ಯಾ. ಸಾಮರ್ಥ್ಯದ ಯೋಜನೆಯನ್ನು ಮೆ॥ ಮದ್ರಾಸ್ ಹಾರ್ಡ್‌ಟೂಲ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ವರ್ಗಾಯಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ. ಸದರಿ ಯೋಜನೆಗೆ ಅವಶ್ಯಕವಾದ ಜಮೀನು ಕಂದಾಯ ಜಮೀನಾಗಿದ್ದು, ಈ ಯೋಜನೆಯನ್ನು 31.12.2011ರೊಳಗೆ ಪೂರ್ಣಗೊಳಿಸಲಿದ್ದು, ಉತ್ಪಾದನೆ ಆಗುವ ವಿದ್ಯುತ್ತನ್ನು ಪಿಪಿಎ ಮೂಲಕ ಎಸ್ಕಾಂಗೆ ಮಾರಾಟಮಾಡುವುದಾಗಿಯೂ ಸಹ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಇವರು ತಿಳಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಇಎನ್ 417 ಎನ್‌ಸಿಇ 2011, ಬೆಂಗಳೂರು, ದಿನಾಂಕ 16–11–2011

ಮೆ॥ ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಕಂಪನಿಯವರಿಗೆ ಚಿತ್ರದುರ್ಗ ಜಿಲ್ಲೆಯ ತುರುವನೂರು ಮತ್ತು ಅರಸಿನಗುಂಡಿ ಗಾಳಿವಲಯ ಪ್ರದೇಶಗಳಲ್ಲಿ ಅನುಮತಿಸಲಾದ 17.25 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಿಂದ 0.5 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಮೆ॥ ಮದ್ರಾಸ್ ಹಾರ್ಡ್‌ಟೂಲ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆಯವರಿಗೆ ಈ ಕೆಳಗಿನ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹಾಗೂ ಕೆಳಕಂಡ ಷರತ್ತಿಗೊಳಪಟ್ಟು ವರ್ಗಾಯಿಸಲಾಗಿದೆ.

Village	Taluk	District	MW	Type of land	Land Survey Number	No. of WTGs	Extent in Land (Acres)
Turuvanur	Chitradurga	Chitradurga	0.25	Revenue	339	AMTL-6	0.56
Turuvanur	Chitradurga	Chitradurga	0.25	Revenue	339	AMTL-7	0.56
			0.50				**1.12**

1) ಮೆ॥ ಮದ್ರಾಸ್ ಹಾರ್ಡ್‌ಟೂಲ್ಸ್ ಪ್ರೈವೇಟ್ ಲಿಮಿಟೆಡ್ ರವರು 45 ದಿನಗಳ ಒಳಗೆ ಸರ್ಕಾರದೊಂದಿಗೆ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.

2) PPA is assined to BESCOM, BESCOM shall execute the PPA with M/s. Madras Private Limited within the period of one month.

3) ಸದರಿ ಕಂಪನಿಯ ಯೋಜನೆಯನ್ನು ದಿನಾಂಕ 31-12-2011ರೊಳಗಾಗಿ ಅನುಷ್ಠಾನಗೊಳಿಸುವುದು. ಈ ಕುರಿತಂತೆ ಕ್ರೆಡಲ್ ಅಭಿವೃದ್ಧಿದಾರರಿಂದ ಒಪ್ಪಿಗೆ ಪತ್ರ ಪಡೆಯತಕ್ಕದ್ದು (commitment letter)

4) ಸದರಿ ಆದೇಶವನ್ನು ರದ್ದುಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಓದಲಾದ (1) ರ ಹಂಚಿಕೆ ಆದೇಶದ ಇತರ ನಿಬಂಧನೆಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್. 2868

ಇಂಧನ ಸಚಿವಾಲಯ

ವಿಷಯ : M/s. Regen Powertech Private Limited ಇವರಿಗೆ 10.5 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ಅನುಮತಿ ನೀಡುವ ಬಗ್ಗೆ.

ಓದಲಾಗಿದೆ : 1) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್ಇಡಿ/08/RPPL-(6+7.5 MW)/Chikkaballapur /2011/586 ದಿನಾಂಕ 11.1.2011/11.2.2011 ಮತ್ತು ಕೆಆರ್ಇಡಿ/ 08/ RPPL-13.5 MW/2011/2576 ದಿನಾಂಕ: 29/30.8.2011.

2 ದಿನಾಂಕ: 27.05.2011ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು M/s. Regen Powertech Private Limited ಇವರಿಗೆ ಚಿಕ್ಕಬಳ್ಳಾಪುರ ಜಿಲ್ಲೆಯ, ಬಾಗೇಪಲ್ಲಿ ತಾಲ್ಲೂಕಿನ ನರಸಾಪುರ, ಬದ್ರಪಲ್ಲಿ, ಕೃಷ್ಣಪಿರ, ಪೆಸರ್‌ಪರ್ತಿ ಎಸ್‌ಎಫ್, ಮದಪಲ್ಲಿ, ಗುಂಡಲಪಲ್ಲಿ ಮತ್ತು ಕಮ್ಮವರಪಲ್ಲ, ಗೂರ್ತಿಪಲ್ಲಿ ಎಸ್‌ಎಫ್, ಸಾದೇಪಲ್ಲಿ, ಶ್ರೀರಾಮಪುರಂ, ದೋಣಕೊಂಡ, ಕೋಲಿಮ್‌ಪಲ್ಲಿ, ವಸಂತಪುರ ಎಸ್‌ಎಫ್ ಮತ್ತು ಗೊಂಡಮರಿಪಲ್ಲಿ ಪ್ರದೇಶಗಳಲ್ಲಿ 10.5 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ನಡುವಳಿಯಲ್ಲಿ ಹಂಚಿಕೆ ಸಮಿತಿ ಸಭೆಯ ಮುಂದೆ ಸದರಿ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು. M/s. Regen Powertech Private Limited ಇವರಿಗೆ 10.5 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲು ಹಂಚಿಕೆ ಸಮಿತಿಯು ಪರಿಗಣಿಸಿರುತ್ತದೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಇಎನ್ 113 ಎನ್‌ಸಿಇ 2011, ಬೆಂಗಳೂರು, ದಿನಾಂಕ 05-12-2011

M/s. Regen Powertech Private Limited ಇವರಿಗೆ ಚಿಕ್ಕಬಳ್ಳಾಪುರ ಜಿಲ್ಲೆಯ, ಬಾಗೇಪಲ್ಲಿ ತಾಲ್ಲೂಕಿನ ನರಸಾಪುರ, ಬದ್ರಪಲ್ಲಿ, ಕೃಷ್ಣಪಿರ, ಪೆಸರ್‌ಪರ್ತಿ ಎಸ್‌ಎಫ್, ಮದಪಲ್ಲಿ, ಗುಂಡಲಪಲ್ಲಿ ಮತ್ತು ಕಮ್ಮವರಪಲ್ಲ, ಗೂರ್ತಿಪಲ್ಲಿ ಎಸ್‌ಎಫ್, ಸಾದೇಪಲ್ಲಿ, ಶ್ರೀರಾಮಪುರಂ, ದೋಣಕೊಂಡ, ಕೋಲಿಮ್‌ಪಲ್ಲಿ, ವಸಂತಪುರ ಎಸ್‌ಎಫ್ ಮತ್ತು ಗೊಂಡಮರಿಪಲ್ಲಿ ಪ್ರದೇಶಗಳಲ್ಲಿ 10.5 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಘಟಕದ ಸ್ಥಾಪನೆಗೆ ಪ್ರಸ್ತಾವಿತ ಭೂಮಿಯು ಕಂದಾಯ ಮತ್ತು ಖಾಸಗಿ ಜಮೀನಿನ ಹಿನ್ನೆಲೆಯಲ್ಲಿ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಈ ಆದೇಶದಲ್ಲಿನ ನಿಬಂಧನೆಗೊಳಪಟ್ಟು ಹಂಚಿಕೆ ಮಾಡಿದೆ.

Sl. No.	Topo Sheet No.	Proposed capacity in MW	Near by villages of the proposed area and district	Geographical area description of the project
1.	57 G/13	13.5-3.0=10.5 MW (21 Nos. x 500 KW)	Part A: (7.5-1=6.5 MW) Narasapura, Badrapalli, Krishnapura, Pesarparti SF, Madapalli, Gundalapalli and Kammavarapalli villages of Bagepalli Taluk, Chikkaballapura District.	Two proposed area comprises of 2 Regions (1) as 5 sub parts and are identification of Area A, B, C, D & E. This area are independent hillocks and of non-contiguous. All these are havig open scrub featur and covered with Boulders and Rocky knobs. The individual areas are held in the following Geographical Co-ordinates: Area A:1.00 MW Latitude: 13°45'31'- 13"47'39" N Longitude: 77° 48'28"-77°49'29"E Ridge peaks: 782 Amsl. Area-B: 1.5 MW Latitude: 13°45'30"-13°46'29"N Longitude: 77° 51'33"-77°52'29"E

			Part-B: (6-2=4 MW) Gortipalli SF, Sadepalli, Srirampuram, Donnakonda, Kolimpalli, Vasanthapura SF and Bairannagaripalli villages.	Area-C: 1.00 MW Latitude: 13°48'15"-13°50'24"N Longitude: 77° 51'8"-77° 52'28"E Ridge peaks: 887, 894 Amsl. Area D: 1.5 MW Latitude: 13°51'22"-13°53'10"N Longitude: 77° 51'18"-77° 53'29"E Ridge peaks: 857, 861, 818 Amsl. Area E: 1.5 MW Latitude: 13°54'1"-13°55'20" N Longitude: 77° 50'51"-77° 52'6" E Ridge peaks: 848 Amsl. The proposed area comprises of 2 Regions of (2) as 4 sub parts and are identification of Area P.Q.R & S. This area are independent hillocks and of non-contiguous. All these are having open scrup feature and covered with Boulders and Rocky knobs and Sheet Rocks, The Individual areas are held in the following Geographical co-ordinates.
				Area P: 1.00 MW Latitude: 13°45'26"-13°47'12"N Longitude: 77° 55'54"-77°57'21"E Ridge peaks: 836 Amsl. Area Q : 1.00 MW Latitude: 13°48'15"-13°49'11"N Longitude: 77° 55'41"-77°58'19"E Ridge peaks: 837, 834 Amsl. Area R: 1.5 MW Latitude: 13°52'36"-13°53'36"N Longitude: 77° 55'13"-77° 56'23"E Ridge peaks: 755 Amsl. Area S: 1.00 MW Latitude: 13°53'34"-13°54'45" N Longitude: 77° 57'19"-77° 58'33" E Ridge peaks: 836 Amsl
		10.5 MW		

1. ಈ ಯೋಜನೆಯನ್ನು 3 ವರ್ಷದ ಅವಧಿಯೊಳಗೆ ಅನುಷ್ಠಾನಗೊಳಿಸತಕ್ಕದ್ದು.
2. ಈ ಆದೇಶ ಹೊರಡಿಸಿದ ದಿನಾಂಕದಿಂದ 45 ದಿನಗಳೊಳಗಾಗಿ ಯೋಜನಾಭಿವೃದ್ಧಿದಾರರು ರೂ. 400ರ ಛಾಪಾ ಕಾಗದದಲ್ಲಿ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳುವುದು. ತಪ್ಪಿದಲ್ಲಿ ಈ ಹಂಚಿಕೆ ಆದೇಶ ತಂತಾನೆ ರದ್ದಾಗಿದೆ ಎಂದು ಭಾವಿಸುವುದು. (ಒಡಂಬಡಿಕೆಯನ್ನು ಕಡ್ಡಾಯವಾಗಿ ಕನ್ನಡದಲ್ಲಿ ಸಲ್ಲಿಸತಕ್ಕದ್ದು)
3. ಹಂಚಿಕೆದಾರರು ಪೂರ್ತಿ ಒಂದು ಪವನ ವರ್ಷಕ್ಕೆ ಕಡಿಮೆ ಇಲ್ಲದಂತೆ 10 ಮೀಟರ್ ಮತ್ತು ಹಬ್ ಹೈಟ್ ಮಟ್ಟದಲ್ಲಿ ಪವನ ವೇಗದ ಅಳತೆಯನ್ನು ಮಾಡಿಕೊಳ್ಳಬೇಕು. ಅಲ್ಲದೇ ಕಾಲ ಕಾಲಕ್ಕೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದಿಂದ ಹೊರಡಿಸತಕ್ಕ ಮಾರ್ಗಸೂಚಿಗಳಿಗನುಗುಣವಾಗಿ ಮೈಕ್ರೋ ಸೈಟಿಂಗ್ ಮಾಡಿರುವ ಅಂಶಗಳನ್ನೊಳಗೊಂಡ [illegible] [illegible]

ವರದಿಗಳ 3 ಪ್ರತಿಗಳನ್ನು ತಯಾರಿಸಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಮಂಡಿಸಬೇಕು. ತಾಂತ್ರಿಕ ಅವಶ್ಯಕತೆ ಮತ್ತು ಹೆಚ್ಚಿನ ವಿದ್ಯುತ್ ಉತ್ಪಾದನೆಯನ್ನು ಸೇಫ್‌ನಕ್ಷೆ ಮತ್ತು ವಿಂಡ್ ಫಾರ್ಮ್‌ನ ಲೇಔಟ್‌ನ ಬದಲಾವಣೆಗನುಗುಣವಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಶಿಫಾರಸ್ಸಿನಂತೆ ಇದೆ ಎಂಬುದನ್ನು ಖಾತರಿ ಪಡಿಸಬೇಕು.

4. ಗಾಳಿ ಚಕ್ರದ ಹಬ್ ಹೈಟಿನಲ್ಲಿ ಪವನ ವೇಗದ ಅಳತೆ ಖಾತರಿ ಪಡಿಸಲು ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವಂತೆ ಪ್ರತಿ 5 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ಒಂದರಂತೆ ಗಾಳಿ ಕಂಬವನ್ನು (ವಿಂಡ್ ಮಾಸ್ಟ್) ಅಳವಡಿಸಬೇಕು. ಅಳತೆ ವಿವರಗಳನ್ನು ಕರ್ನಾಟಕ ನವೀಕರಿಸಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಸಲ್ಲಿಸುವುದು.

ಗಾಳಿ ಶಕ್ತಿ ವಿದ್ಯುತ್ತಿನ ದೂರ ಸಾಮರ್ಥ್ಯ	5 ಮೆಗಾವ್ಯಾಟ್ ಗಾಳಿ ಯೋಜನೆಯಲ್ಲಿ ಸಾಧಾರಣ ಗಾಳಿ ಶಕ್ತಿ ವಿದ್ಯುತ್ತಿನ ಸಂಖ್ಯೆ	ಹಾಕಬೇಕಾಗಿರುವ ಗಾಳಿ ಕಂಬ (ವಿಂಡ್ ಮಾಸ್ಟ್‌ಗಳ ಸಂಖ್ಯೆ)
➢ 200 ಕಿ.ವ್ಯಾ. ನಿಂದ 300 ಕಿ.ವ್ಯಾ.	18	1
➢ 300 ಕಿ.ವ್ಯಾ. ನಿಂದ 500 ಕಿ.ವ್ಯಾ.	15	1
➢ 500 ಕಿ.ವ್ಯಾ. ನಿಂದ 750 ಕಿ.ವ್ಯಾ.	12	1
➢ 750 ಕಿ.ವ್ಯಾ. ನಿಂದ 1000 ಕಿ.ವ್ಯಾ.	8 ರಿಂದ 10	1

5. ಯೋಜನೆಯ ವಿವಿಧ ಹಂತದ ಚಟುವಟಿಕೆಗಳು ಹಾಗೂ ಯೋಜನೆಗಳಿಂದ ಪ್ರಾರಂಭದ ಹಂತದ ತನಕ ವಿವಿಧ ಮೈಲುಗಲ್ಲುಗಳನ್ನು ತೋರಿಸುವ ಪರ್ಟ್ ನಕ್ಷೆಯನ್ನು ತಯಾರಿಸಿ ಮೇಲುಸ್ತುವಾರಿಗಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಸಲ್ಲಿಸಬೇಕು.

6. ಎಲ್ಲೆಲ್ಲಿ ಶಾಸನಬದ್ಧ ಅನುಮೋದನೆ ಅವಶ್ಯಕತೆಯಿದೆಯೋ ಅಂದರೆ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ/ಕಂದಾಯ ಇಲಾಖೆಗಳ ಮತ್ತು ಇತರ ಸಂಬಂಧಿತ ಇಲಾಖೆಗಳಿಂದ ಅನುಮೋದನೆಯನ್ನು ಹಂಚಿಕೆದಾರರು ಪಡೆದುಕೊಳ್ಳತಕ್ಕದ್ದು. ಅಭಿವೃದ್ಧಿದಾರರು ಈ ಯೋಜನೆಯನ್ನು ಖಾಸಗಿ ಜಮೀನಿನಲ್ಲಿ ಕೈಗೊಳ್ಳುತ್ತಿರುವುದರಿಂದ, ಈ ಜಮೀನಿನ ಮಾಲೀಕರಿಂದ ಒಪ್ಪಿಗೆ/ಒಡಂಬಡಿಕೆಯನ್ನು ಪಡೆಯತಕ್ಕದ್ದು.

7. ಅಭಿವೃದ್ಧಿದಾರರು ಸಂಬಂಧಿಸಿ ವಿದ್ಯುತ್ ಸರಬರಾಜು ಕಂಪನಿಯೊಂದಿಗೆ/ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದೊಂದಿಗೆ ನೀತಿ ನಿಯಮಾನುಸಾರ ವಿದ್ಯುತ್ ಖರೀದಿ ಒಡಂಬಡಿಕೆ ಮಾಡಿಕೊಳ್ಳಲು ಅನುಮತಿಸಲಾಗಿದೆ.

8. ಕಾಲ ಕಾಲಕ್ಕೆ ಇರುವ ನೀತಿ ನಿಯಮಗಳಿಗೆ ಅನುಗುಣವಾಗಿ ಯಂತ್ರೋಪಕರಣಗಳಿಗೆ ಪ್ರವೇಶ ತೆರಿಗೆಯಿಂದ ವಿನಾಯಿತಿ ನೀಡಲಾಗುವುದು.

9. ಯೋಜನೆಯನ್ನು ತ್ವರಿತವಾಗಿ ಅನುಷ್ಠಾನ ಮಾಡಲು ಅನುವಾಗುವಂತೆ ರಾಜ್ಯ ಮತ್ತು ಜಿಲ್ಲಾ ಮಟ್ಟದ ಸರ್ಕಾರಿ ಅಧಿಕಾರಿಗಳು ಸಹಕರಿಸುವುದು.

10. ಸದರಿ ಪವನ ವಿದ್ಯುತ್ ಯೋಜನೆಗಾಗಿ ಇಂಧನ ಇಲಾಖೆಯಿಂದ ಜಮೀನನ್ನು ಹಂಚಿಕೆ ಮಾಡಲಾಗುವುದಿಲ್ಲ ಹಾಗೂ ಈ ಹಂಚಿಕೆ ಆದೇಶವು ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯದ ಹಂಚಿಕೆ ಮಾತ್ರ ಸೀಮಿತವಾಗಿದೆ ಹಾಗೂ ಅಭಿವೃದ್ಧಿದಾರರಿಗೆ ಯೋಜನೆಯ ಜಾಗದಲ್ಲಿಯ ಖನಿಜ ಸಂಪತ್ತು ಹಾಗೂ ಭೂಮಿಯ ಬಗ್ಗೆ ಯಾವುದೇ ಹಕ್ಕು ಇರುವುದಿಲ್ಲ ಎಂಬುದನ್ನು ಮನಗಾಣತಕ್ಕದ್ದು.

11. ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್. 2728

ಇಂಧನ ಸಚಿವಾಲಯ

ತಿದ್ದುಪಡಿ

ಸಂಖ್ಯೆ ಇಎನ್ 328 ಎನ್‌ಸಿಇ 2011, ಬೆಂಗಳೂರು, ದಿನಾಂಕ : 16–11–2011.

ಸರ್ಕಾರಿ ಆದೇಶ ಸಂಖ್ಯೆ: ಇಎನ್ 328 ಎನ್‌ಸಿಇ 2011 ದಿನಾಂಕ: 15.9.2011 ರಲ್ಲಿ ಮೆ॥ KSK Wind Power Aminabhavi Chikkodi Private Limited ಇವರಿಗೆ 15 ಮೆ.ವ್ಯಾ. ಪವನ ವಿದ್ಯುತ್ ಯೋಜನೆ ಸಾಮರ್ಥ್ಯದ ವರ್ಗಾವಣೆ ಆದೇಶದ ಕಂಡಿಕೆ 3ರಲ್ಲಿ ಆರ್ಥಿಕ ವರ್ಷ

2013–14

ಎಂಬುದರ ಬದಲಾಗಿ

2012–13

ಎಂದು ತಿದ್ದುಪಡಿ ಮಾಡಿಕೊಂಡು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್. 2741

ಇಂಧನ ಸಚಿವಾಲಯ

ವಿಷಯ : ಮೆ॥ ಭಾವನ ಹೈಡ್ರೊ ಎಲೆಕ್ಟ್ರಿಕ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರಿಗೆ 1.25 ಮೆಗಾ ವ್ಯಾಟ್ ಸಾಮರ್ಥ್ಯದ ಗಂಗನಹಾಳ ಕಿರು ಜಲ ವಿದ್ಯುತ್ ಯೋಜನೆಗಾಗಿ ಕಾಲಾವಕಾಶ ವಿಸ್ತರಣೆ ಬಗ್ಗೆ.

ಓದಲಾಗಿದೆ :
1) ಸರ್ಕಾರಿ ಆದೇಶ ಸಂಖ್ಯೆ : ಇಂಇ 298 ಎನ್‌ಸಿಇ 2004, ದಿನಾಂಕ : 13-09-2004.
2) ಸರ್ಕಾರಿ ಆದೇಶ ಸಂಖ್ಯೆ : ಇಂಇ 298 ಎನ್‌ಸಿಇ 2004, ದಿನಾಂಕ 20-12-2004.
3) ಸರ್ಕಾರಿ ಆದೇಶ ಸಂಖ್ಯೆ : ಇಂಇ 430 ಎನ್‌ಸಿಇ 2007, ದಿನಾಂಕ 10-12-2007.
4) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಕೆಆರ್‌ಇಡಿ/06/SH-169/2011/1918, ದಿನಾಂಕ 30-6-2011 / 2-7-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮಾಂಕ (1)ರ ಆದೇಶದಲ್ಲಿ ಮೆ॥ ಭಾವನ ಹೈಡ್ರೊ ಎಲೆಕ್ಟ್ರಿಕ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಗುಲ್ಬರ್ಗಾ ಜಿಲ್ಲೆಯ ಶಹಾಪುರ ತಾಲ್ಲೂಕಿನ ಗಂಗನಹಾಳ ಗ್ರಾಮ ಶಹಾಪುರ ಬ್ರ್ಯಾಂಚ್ ಕೆನಾಲ್‌ನ ಡಿಸ್ಟ್ರಿಬ್ಯುಟರಿ-7 ಕ್ಕೆ ಅಡ್ಡಲಾಗಿ 800 ಕಿಲೊ ವ್ಯಾಟ್ ಸಾಮರ್ಥ್ಯದ ಗಂಗನಹಾಳ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮಾಂಕ (2)ರ ಆದೇಶದಲ್ಲಿ ಮೆ॥ ಭಾವನ ಹೈಡ್ರೊ ಎಲೆಕ್ಟ್ರಿಕ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಹಂಚಿಕೆ ಮಾಡಲಾಗಿರುವ 800 ಕಿಲೊ ವ್ಯಾಟ್ ಸಾಮರ್ಥ್ಯದ ಗಂಗನಹಾಳ ಕಿರು ಜಲ ವಿದ್ಯುತ್ ಯೋಜನೆಯನ್ನು 1.25 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸಿ ಅನುಷ್ಠಾನ ಮಾಡಲು ಅನುಮತಿ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮಾಂಕ (3)ರ ಆದೇಶದಲ್ಲಿ ಮೆ॥ ಭಾವನ ಹೈಡ್ರೊ ಎಲೆಕ್ಟ್ರಿಕ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಗುಲ್ಬರ್ಗಾ ಜಿಲ್ಲೆಯ ಗಂಗನಹಾಳ ಗ್ರಾಮ ಶಹಾಪುರ ಬ್ರ್ಯಾಂಚ್ ಕೆನಾಲ್‌ನ ಡಿಸ್ಟ್ರಿಬ್ಯುಟರಿ-7 ಕ್ಕೆ ಅಡ್ಡಲಾಗಿ ಹಂಚಿಕೆ ಮಾಡಲಾಗಿದ್ದ 1.25 ಮೆಗಾ ವ್ಯಾಟ್ ಸಾಮರ್ಥ್ಯದ ಗಂಗನಹಾಳ ಕಿರು ಜಲ ವಿದ್ಯುತ್ ಯೋಜನೆಯ ಕಾಲಾವಕಾಶವನ್ನು 3 ವರ್ಷಗಳ ಅವಧಿಗೆ ವಿಸ್ತರಿಸಲಾಗಿತ್ತು.

ಮೇಲೆ ಓದಲಾದ ಕ್ರಮಾಂಕ (4)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ರವರು ಅಭಿವೃದ್ಧಿದಾರರು ಈ ಯೋಜನೆಯು ಖಾಸಗಿ ಜಮೀನಿನಲ್ಲಿ ಬರುತ್ತಿದ್ದು, ಭೂ ಮಾಲೀಕರೊಡನೆ ಒಪ್ಪಂದ ಮಾಡಿಕೊಂಡಿದ್ದಾರೆ. ಡಿಸೆಂಬರ್ 2011 ರೊಳಗೆ ಅನುಷ್ಠಾನಗೊಳಿಸುವುದಾಗಿ ತಿಳಿಸಿದ್ದನ್ನು ಪರಿಶೀಲಿಸಿ ಮೆ॥ ಭಾವನ ಹೈಡ್ರೊ ಎಲೆಕ್ಟ್ರಿಕ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ 8 ತಿಂಗಳ ಅವಧಿಗೆ ಕಾಲಾವಕಾಶವನ್ನು ವಿಸ್ತರಿಸಲು ಶಿಫಾರಸ್ಸು ಮಾಡಿದ್ದಾರೆ.

ಮೇಲಿನ ಶಿಫಾರಸನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:-

ಸರ್ಕಾರಿ ಆದೇಶ ಸಂಖ್ಯೆ : ಇಎನ್ 293 ಎನ್‌ಸಿಇ 2011, ಬೆಂಗಳೂರು, ದಿನಾಂಕ: 16-11-2011

ಸರ್ಕಾರವು ಮೆ॥ ಭಾವನ ಹೈಡ್ರೊ ಎಲೆಕ್ಟ್ರಿಕ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಗುಲ್ಬರ್ಗಾ ಜಿಲ್ಲೆಯ ಶಹಾಪುರ ತಾಲೂಕಿನ ಗಂಗನಹಾಳ ಗ್ರಾಮ ಶಹಾಪುರ ಬ್ರ್ಯಾಂಚ್ ಕೆನಾಲ್‌ನ ಡಿಸ್ಟ್ರಿಬ್ಯುಟರಿ-7 ಕ್ಕೆ ಅಡ್ಡಲಾಗಿ ಹಂಚಿಕೆ ಮಾಡಲಾಗಿರುವ **2.00 ಮೆಗಾ ವ್ಯಾಟ್** ಸಾಮರ್ಥ್ಯದ ಗಂಗನಹಾಳ ಕಿರು ಜಲ ವಿದ್ಯುತ್ ಯೋಜನೆಯನ್ನು ಅನುಷ್ಠಾನ ಮಾಡಲು ಕಾಲಾವಕಾಶವನ್ನು **ದಿನಾಂಕ 31-12-2011 ರವರೆಗೆ** ವಿಸ್ತರಿಸಲಾಗಿದೆ.

ಈ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ

ಪಿಆರ್.ನಂ. 01

ಇಂಧನ ಸಚಿವಾಲಯ

ವಿಷಯ : ಮೆ॥ ಕೆಪಿಆರ್ ಶುಗರ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಬಿಜಾಪುರ ಜಿಲ್ಲೆಯ, ಸಿಂಧಗಿ ತಾಲ್ಲೂಕಿನ, ಅಲ್ಮೆಲ್ ಗ್ರಾಮದಲ್ಲಿ ಕಬ್ಬಿನ ಸಿಪ್ಪೆ ಆಧಾರಿತ ಸಹ-ವಿದ್ಯುತ್ ಯೋಜನಾ ಘಟಕವನ್ನು ಸ್ಥಾಪಿಸಲು ನಿರಾಕ್ಷೇಪಣೆಯನ್ನು ನೀಡುವ ಬಗ್ಗೆ.

ಓದಲಾಗಿದೆ :
1) ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಆದೇಶ ಸಂಖ್ಯೆ ವಾಕೈ 136 ಎಸ್‌ಜಿಎಫ್ ದಿನಾಂಕ 23-12-2006.
3) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಕೆಆರ್‌ಇಡಿ/04/KPR-SPL/2009/2682, ದಿನಾಂಕ 03/09-9-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಮೆ॥ ಕೆಪಿಆರ್ ಶುಗರ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಬಿಜಾಪುರ ಜಿಲ್ಲೆಯ, ಸಿಂಧಗಿ ತಾಲ್ಲೂಕಿನ, ಅಲಮೇಲ್ ಗ್ರಾಮದಲ್ಲಿ 2500 ಟಿಸಿಡಿ ಸಾಮರ್ಥ್ಯದ ಸಕ್ಕರೆ ಕಾರ್ಖಾನೆ ಸ್ಥಾಪಿಸಲು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯು ಅನುಮೋದನೆ ನೀಡಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ॥ ಕೆಪಿಆರ್ ಶುಗರ್ಸ್ ಪ್ರೈವೇಟ್ ಲಿಮಿಟೆಡ್ ರವರಿಗೆ ಬಿಜಾಪುರ ಜಿಲ್ಲೆಯ, ಸಿಂಧಗಿ ತಾಲ್ಲೂಕಿನ, ಅಲ್ಮೆಲ್ ಗ್ರಾಮದಲ್ಲಿ 30 ಮೆ.ವ್ಯಾ. (ಗ್ರಾಸ್) ಜೊತೆಗೆ 18.36 ಮೆ.ವ್ಯಾ. (ಎಕ್ಸ್‌ಪೋರ್ಟೆಬಲ್) during season ಹಾಗೂ 26.7 ಮೆ.ವ್ಯಾ (ಎಕ್ಸ್‌ಪೋರ್ಟೆಬಲ್) during off season ಸಾಮರ್ಥ್ಯವನ್ನು ಸ್ಥಾಪಿಸಲು ನಿರಾಕ್ಷೇಪಣೆಯನ್ನು ನೀಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:-

ಸರ್ಕಾರಿ ಆದೇಶ ಸಂಖ್ಯೆ : ಇಎನ್ 366 ಎನ್‌ಸಿಇ 2011, ಬೆಂಗಳೂರು, ದಿನಾಂಕ: 15-11-2011

ಮೆ॥ ಕೆಪಿಆರ್ ಶುಗರ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಬಿಜಾಪುರ ಜಿಲ್ಲೆಯ, ಸಿಂಧಗಿ ತಾಲ್ಲೂಕಿನ, ಅಲ್ಮೆಲ್ ಗ್ರಾಮದಲ್ಲಿ 30 ಮೆ.ವ್ಯಾ. (ಗ್ರಾಸ್) ಜೊತೆಗೆ 18.36 ಮೆ.ವ್ಯಾ. (ಎಕ್ಸ್‌ಪೋರ್ಟೆಬಲ್) during season ಹಾಗೂ 26.7 ಮೆ.ವ್ಯಾ (ಎಕ್ಸ್‌ಪೋರ್ಟೆಬಲ್) during off season ಹಾಗೂ 26.7 ಮೆ.ವ್ಯಾ. (ಎಕ್ಸ್‌ಪೋರ್ಟೆಬಲ್) ಸಾಮರ್ಥ್ಯದ ಕಬ್ಬಿನ ಸಿಪ್ಪೆ ಆಧಾರಿತ ಸಹ ವಿದ್ಯುತ್ ಘಟಕವನ್ನು ಸ್ಥಾಪಿಸಲು ಈ ಕೆಳಗಿನ ನಿಬಂಧನೆಗಳಿಗೊಳಪಟ್ಟು "ನಿರಾಕ್ಷೇಪಣೆಯನ್ನು" ನೀಡಲಾಗಿದೆ.

1. The company shall obtain separate clearance from Karnataka Power Transmission Corporation Limited in respect of evacuation of power.
2. The company shall enter into power purchase agreement for selling of power to Karnataka Power Transmission Corporation Limited.
3. The company shall obtain necessary statutory clearance wherever required from the respective Departments/Organizations such as Forest, Department, Revenue Department, & Karnataka State Pollution Control Board, etc. for the Power Plant.
4. The Detailed Project Report (D.P.R.) for the power plant shall be got approved by Karnataka Renewable Energy Development Limited, before the commencement of the power plant.
5. The company shall complete the project before December 2012.

ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ

ಪಿಆರ್.ನಂ. 02

ಇಂಧನ ಸಚಿವಾಲಯ

ವಿಷಯ : ಮೆ॥ ಶ್ರೀ ರೇಣುಕ ಶುಗರ್ಸ್ ಲಿಮಿಟೆಡ್ ಇವರಿಗೆ ಬೆಳಗಾವಿ ಜಿಲ್ಲೆಯ, ಅಥಣಿ ತಾಲ್ಲೂಕಿನ, ಬುರ್ಲಟ್ಟಿ ಗ್ರಾಮದಲ್ಲಿ ಸ್ಥಾಪಿಸಲು ಅನುಮತಿಸಲಾಗಿರುವ ಕಬ್ಬಿನ ಸಿಪ್ಪೆ ಆಧಾರಿತ ಸಹ-ವಿದ್ಯುತ್ ಯೋಜನಾ ಘಟಕದ ಸಾಮರ್ಥ್ಯವನ್ನು ಹೆಚ್ಚಿಸುವ ಬಗ್ಗೆ.

ಓದಲಾಗಿದೆ :
1) ಸರ್ಕಾರಿ ಪತ್ರ ಸಂಖ್ಯೆ : ಡಿಇ 91 ಎನ್‌ಸಿಇ 2000, ದಿನಾಂಕ : 10-07-2000.
2) ಸರ್ಕಾರಿ ಆದೇಶ ಸಂಖ್ಯೆ : ಇಎನ್ 135 ಎನ್‌ಸಿಇ 2006, ದಿನಾಂಕ 22-04-2006.
3) ಸರ್ಕಾರಿ ಆದೇಶ ಸಂಖ್ಯೆ : ಇಎನ್ 393 ಎನ್‌ಸಿಇ 2007, ದಿನಾಂಕ 11-12-2007 ಮತ್ತು ತಿದ್ದುಪಡಿ ಆದೇಶ ಸಂಖ್ಯೆ ಇಎನ್ 35 ಎನ್‌ಸಿಇ 2008, ದಿನಾಂಕ 16-2-2008.
4) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಕೆಆರ್‌ಇಡಿ/04/ಎಸ್‌ಆರ್‌ಎಸ್‌ಎಲ್-ಬುರ್ಲಟ್ಟಿ-ಬಿಇಎಲ್/2009/2673, ದಿನಾಂಕ : 07/09-9-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಮೆ॥ ಹರಿ ಪ್ರಿಯ ಶುಗರ್ಸ್ ವರ್ಕ್ಸ್ ಲಿಮಿಟೆಡ್ ಇವರಿಗೆ 25 ಮೆಗಾ ವ್ಯಾಟ್ ಸಾಮರ್ಥ್ಯದ ಕಬ್ಬಿನ ಸಿಪ್ಪೆ ಆಧಾರಿತ ಸಹ ವಿದ್ಯುತ್ ಘಟಕವನ್ನು ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ, ಬುರ್ಲಟ್ಟಿ, ಕೊತನೂರ್ ಹೋಬ್ಳಿ ಇಲ್ಲಿ ಸ್ಥಾಪಿಸಲು ಅನುಮತಿ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ಮೆ॥ ಹರಿ ಪ್ರಿಯ ಶುಗರ್ಸ್ ವರ್ಕ್ಸ್ ಲಿಮಿಟೆಡ್ ಇವರಿಗೆ ಹಂಚಿಕೆಯಾಗಿದ್ದು ಮೇಲ್ಕಂಡ 25 ಮೆಗಾ ವ್ಯಾಟ್ ಸಾಮರ್ಥ್ಯದ ಕಬ್ಬಿನ ಸಿಪ್ಪೆ ಆಧಾರಿತ ಸಹ ವಿದ್ಯುತ್ ಯೋಜನೆಯನ್ನು ಮೆ॥ ರೇಣುಕ ಶುಗರ್ಸ್ ಲಿಮಿಟೆಡ್ ರವರಿಗೆ ವರ್ಗಾವಣೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ದಿನಾಂಕ 11-12-2007ರ ಆದೇಶದಲ್ಲಿ ಮೆ॥ ರೇಣುಕ ಶುಗರ್ಸ್ ಲಿಮಿಟೆಡ್ ರವರಿಗೆ ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ, ಬುರ್ಲಟ್ಟಿ, ಕೊತನೂರ್ ಹೋಬ್ಳಿ ಇಲ್ಲಿ ಕಬ್ಬಿನ ಸಿಪ್ಪೆ ಆಧಾರಿತ ಸಹ ವಿದ್ಯುತ್ ಘಟಕದ ಸಾಮರ್ಥ್ಯವನ್ನು 25 ಮೆಗಾ ವ್ಯಾಟ್ ನಿಂದ 38 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸಲಾಗಿತ್ತು. ತದನಂತರ, ದಿನಾಂಕ 16-2-2008ರ ತಿದ್ದುಪಡಿಯಲ್ಲಿ ದಿನಾಂಕ 11-12-2007ರ ಆದೇಶದಲ್ಲಿ 38 ಮೆಗಾ ವ್ಯಾಟ್ ಎಂದಿರುವುದನ್ನು 38 ಮೆಗಾ ವ್ಯಾಟ್ (ಗ್ರಾಸ್) ಮತ್ತು 25.76 (ಎಕ್ಸ್‌ಪೋರ್ಟೆಬಲ್) ಎಂದು ತಿದ್ದುಪಡಿ ಮಾಡಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ॥ ಶ್ರೀ ರೇಣುಕ ಶುಗರ್ಸ್ ಲಿಮಿಟೆಡ್ ರವರಿಗೆ ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ, ಬುರ್ಲಟ್ಟಿ, ಕೊತನೂರ್ ಹೋಬ್ಳಿ ಇಲ್ಲಿ ಕಬ್ಬಿನ ಸಿಪ್ಪೆ ಆಧಾರಿತ ಸಹ-ವಿದ್ಯುತ್ ಘಟಕದ ಸಾಮರ್ಥ್ಯವನ್ನು ಪ್ರಸ್ತುತ ಇರುವ 38 ಮೆಗಾ ವ್ಯಾಟ್ (ಗ್ರಾಸ್) ಮತ್ತು 25.76 ಮೆಗಾ ವ್ಯಾಟ್ (ಎಕ್ಸ್‌ಪೋರ್ಟೆಬಲ್) ಸಾಮರ್ಥ್ಯವನ್ನು 68 ಮೆಗಾ ವ್ಯಾಟ್ (ಗ್ರಾಸ್) ಮತ್ತು 47.53 ಮೆಗಾ ವ್ಯಾಟ್ (ಎಕ್ಸ್‌ಪೋರ್ಟೆಬಲ್) ಸಾಮರ್ಥ್ಯಕ್ಕೆ ಹೆಚ್ಚಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:-

ಸರ್ಕಾರಿ ಆದೇಶ ಸಂಖ್ಯೆ : ಇಎನ್ 364 ಎನ್‌ಸಿಇ 2011, ಬೆಂಗಳೂರು, ದಿನಾಂಕ: 15-11-2011

ಮೆ॥ ಶ್ರೀ ರೇಣುಕ ಶುಗರ್ಸ್ ಲಿಮಿಟೆಡ್ ಇವರಿಗೆ ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ, ಬುರ್ಲಟ್ಟಿ, ಕೊತನೂರ್ ಹೋಬ್ಳಿ ಇಲ್ಲಿ ಸ್ಥಾಪಿಸಲು ಅನುಮತಿಸಲಾಗಿರುವ ಸಹ-ವಿದ್ಯುತ್ ಘಟಕದ ಸಾಮರ್ಥ್ಯವನ್ನು ಮಂಜೂರಾಗಿರುವ 38 ಮೆಗಾ ವ್ಯಾಟ್ (ಗ್ರಾಸ್) ಮತ್ತು 25.76 ಮೆಗಾ ವ್ಯಾಟ್ (ಎಕ್ಸ್‌ಪೋರ್ಟೆಬಲ್) ಸಾಮರ್ಥ್ಯವನ್ನು 68 ಮೆಗಾ ವ್ಯಾಟ್ (ಗ್ರಾಸ್) ಮತ್ತು 47.53 ಮೆಗಾ ವ್ಯಾಟ್ (ಎಕ್ಸ್‌ಪೋರ್ಟೆಬಲ್) ಸಾಮರ್ಥ್ಯಕ್ಕೆ ಹೆಚ್ಚಿಸಲಾಗಿದೆ.

ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ

ಪಿಆರ್.ನಂ. 03

ಇಂಧನ ಸಚಿವಾಲಯ

ವಿಷಯ : ಶ್ರೀ ಜಿ. ಗಿರೀಶ್, ಉಪ ವಿದ್ಯುತ್ ಪರಿವೀಕ್ಷಕರು, ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿ, ಬೆಂಗಳೂರು ದಕ್ಷಿಣ, ಬಸವನಗುಡಿ, ಬೆಂಗಳೂರು ಇವರು ಟ್ರ್ಯಾಪ್ ಪ್ರಕರಣದಲ್ಲಿ ಲೋಕಾಯುಕ್ತರ ಬಲೆಗೆ ಸಿಕ್ಕಿಬಿದಿದ್ದು, ಅಮಾನತ್ತಿನಲ್ಲಿಡುವ ಬಗ್ಗೆ.

ಓದಲಾಗಿದೆ :
1) ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಪತ್ರ ಸಂಖ್ಯೆ : ಲೋಕ್/ಐಎನ್‌ವಿ(ಜಿ)/ಸಿಟಿ/ಕ್ರೈಂ. 52/2011, ದಿನಾಂಕ : 28-10-2011.
2) ಮುಖ್ಯ ವಿದ್ಯುತ್ ಪರಿವೀಕ್ಷಕರ ಪತ್ರ ಸಂಖ್ಯೆ : ಮುವಿಪ/ಸಿಸಿ1/ಕಲೋಆ/22146/ 11-12, ದಿನಾಂಕ 31-10-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಈ ಕೆಳಕಂಡಂತೆ ವರದಿ ಮಾಡಿರುತ್ತಾರೆ:-

1. ಶ್ರೀ ಶರಣಪ್ಪ, ವಿದ್ಯುತ್ ಗುತ್ತಿಗೆದಾರರು, ವಾಜರಹಳ್ಳಿ, ಕನಕಪುರ ರಸ್ತೆ, ಬೆಂಗಳೂರು (ಫಿರ್ಯಾದುದಾರರಾದ) ಇವರು ಶ್ರೀ ಸಿದ್ಧಗಂಗ ಎಲೆಕ್ಟ್ರಿಕಲ್ ಎಂಟರ್‌ಪ್ರೈಸಸ್ ಎಂಬ ಹೆಸರಿನಲ್ಲಿ ವಿದ್ಯುತ್ ಗುತ್ತಿಗೆ ಪರವಾನಿಗೆಯನ್ನು ಹೊಂದಿದ್ದು, ಅವರ ಪರಿಚಯಸ್ಥ ಶ್ರೀ ಹೆಚ್.ಆರ್. ಮಧುಸೂದನ್ ರೆಡ್ಡಿ ಎಂಬುವವರ ಕಾರ್ಖಾನೆ ಶೆಡ್‌ಗೆ ವಿದ್ಯುತ್ ಸಂಪರ್ಕ ಪಡೆಯಲು ಕಾರ್ಯನಿರ್ವಾಹಕ ಅಭಿಯಂತರರು, ಬೆಂಗಳೂರು ವಿದ್ಯುಚ್ಛಕ್ತಿ ಮಂಡಳಿ, ಚಂದಾಪುರ ಇಲ್ಲಿಗೆ ಅರ್ಜಿ ಸಲ್ಲಿಸಿ ಮಂಜೂರಾತಿ ಪಡೆದಿದ್ದು, ಈ ಸಂಬಂಧ ವಿದ್ಯುತ್ ಸರಬರಾಜು ತೆಗೆದುಕೊಳ್ಳುವ ಮುನ್ನ ವಿದ್ಯುತ್ ಪರಿವೀಕ್ಷಕರವರಿಂದ ವಿದ್ಯುತ್ ಕಾಮಗಾರಿಯ ಬಗ್ಗೆ ದೃಢೀಕರಣ ಪಡೆದುಕೊಳ್ಳುವುದು ಅವಶ್ಯಕವಾಗಿದ್ದು, ಈ ಹಿನ್ನೆಲೆಯಲ್ಲಿ ಫಿರ್ಯಾದುದಾರರು ಒಂದು ಟ್ರಾನ್ಸ್‌ಫಾರ್ಮರ್ ಸಬ್ ಸ್ಟೇಷನ್ ನೀಲಿ ನಕ್ಷೆಯನ್ನು ತಯಾರಿಸಿ, ಅದರ ಮಂಜೂರಾತಿಗಾಗಿ ಅರ್ಜಿಯನ್ನು ನಿಗದಿತ ಶುಲ್ಕ ಮತ್ತು ದಾಖಲಾತಿಗಳೊಂದಿಗೆ ಉಪ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ದಕ್ಷಿಣ ರವರಿಗೆ ಸಲ್ಲಿಸಿ ಶ್ರೀ ಜಿ. ಗಿರೀಶ್, ಉಪ ವಿದ್ಯುತ್ ಪರಿವೀಕ್ಷಕರನ್ನು ಭೇಟಿ ಮಾಡಿ ವಿಚಾರಿಸಿದಾಗ, ಆರೋಪಿ ಶ್ರೀ ಜಿ. ಗಿರೀಶ್ ರವರು ಫಿರ್ಯಾದುದಾರರು ಮಾಡಿದ ವಿದ್ಯುತ್ ಕಾಮಗಾರಿಯನ್ನು ಪರಿವೀಕ್ಷಿಸಿ, ವರದಿಗೆ ಸಹಿ ಮಾಡಿ, ಮೇಲಾಧಿಕಾರಿಗಳಿಗೆ ಕಡತವನ್ನು ಕಳುಹಿಕೊಡಲು ಲಂಚದ ಹಣ ರೂ. 10,000/- ಗಳಿಗೆ ಒತ್ತಾಯಿಸಿದ್ದು ಫಿರ್ಯಾದುದಾರರು ಆರೋಪಿತರು ಒತ್ತಾಯಿಸಿದ ಲಂಚದ ಹಣವನ್ನು ಕೊಡಲು ಇಷ್ಟವಿಲ್ಲದ ಕಾರಣ ದಿನಾಂಕ 22-10-2011 ರಂದು ಕರ್ನಾಟಕ ಲೋಕಾಯುಕ್ತ ರವರಿಗೆ ಶ್ರೀ ಜಿ. ಗಿರೀಶ್, ಉಪ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ದಕ್ಷಿಣ, ಇವರ ವಿರುದ್ಧ ಕಾನೂನು ರೀತ್ಯ ಕ್ರಮವನ್ನು ಕೈಗೊಳ್ಳಬೇಕೆಂದು ಕೋರಿ ದೂರನ್ನು ನೀಡಿರುವುದಾಗಿ ತಿಳಿಸಿರುತ್ತಾರೆ.

2. ಅದರಂತೆ ಶ್ರೀ ವಿ. ಅನಿಲ್ ಕುಮಾರ್, ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ರವರು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ 1988ರ ಕಲಂ 7, 13 (1) (ಡಿ) ಸಹವಾಚನ ಕಲಂ 13 (2)ರ ರೀತ್ಯ ದಿನಾಂಕ 22-10-2011 ರಂದು ಬೆಂಗಳೂರು ನಗರ ಲೋಕಾಯುಕ್ತ ಪೊಲೀಸ್ ಠಾಣಾ ಮೊಕದ್ದಮೆ ಸಂಖ್ಯೆ : 52/2011 ರಡಿ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆಯನ್ನು ಕೈಗೊಂಡು, ನಂತರ ಪಂಚಸಾಕ್ಷಿಗಳೊಂದಿಗೆ ತನಿಖಾಧಿಕಾರಿ ಮತ್ತು ಅವರ ಸಿಬ್ಬಂದಿಯವರು ದಿನಾಂಕ 24-10-2011 ರಂದು ಬೀಸಿದ ಬಲೆಯಲ್ಲಿ ಶ್ರೀ ಜಿ. ಗಿರೀಶ್, ಉಪ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ದಕ್ಷಿಣ-1, ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿ, ಬುಲ್ ಟೆಂಪಲ್ ರಸ್ತೆ, ಬೆಂಗಳೂರು ರವರು ಫಿರ್ಯಾದುದಾರರಿಂದ ಸನ್ನೆ ಮೂಲಕ ಕೇಳಿ ರೂ. 10,000/- ಗಳನ್ನು ಸ್ವೀಕರಿಸುವಾಗ ಸಿಕ್ಕಿಬಿದ್ದಿದ್ದು ಆರೋಪಿಯಾದ ಶ್ರೀ ಜಿ. ಗಿರೀಶ್, ಉಪ ವಿದ್ಯುತ್ ಪರಿವೀಕ್ಷಕರು, ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿ, ಬುಲ್ ಟೆಂಪಲ್ ರಸ್ತೆ, ಬಸವನಗುಡಿ, ಬೆಂಗಳೂರು ಇವರ ಎರಡೂ ಕೈಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ಮಿಶ್ರಣದ ದ್ರಾವಣದಲ್ಲಿ ಪ್ರತ್ಯೇಕವಾಗಿ ಅದ್ದಿಸಿ ತೊಳೆಸಿದಾಗ, ಬಣ್ಣ ರಹಿತವಾದ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗುವುದರ ಮೂಲಕ ಸಕಾರಾತ್ಮಕವಾಗಿ ಪ್ರತಿಕ್ರಯಿಸಿರುತ್ತವೆ. ಇದರಿಂದ ಲಂಚದ ಹಣವನ್ನು ಸ್ವೀಕರಿಸಿರುವುದು ದೃಢಪಟ್ಟಿರುತ್ತದೆ. ಅದರಂತೆ ದಿನಾಂಕ 24-10-2011 ರಂದು ಆರೋಪಿತರನ್ನು ದಸ್ತಗಿರಿ ಮಾಡಿ

ಘನ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ್ದು ನ್ಯಾಯಾಧೀಶರ ಆದೇಶದಂತೆ ಆರೋಪಿತರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿರುವುದಾಗಿ ವರದಿ ಮಾಡಿರುತ್ತಾರೆ.

3. ಫಿರ್ಯಾದುದಾರರಿಂದ ಲಂಚನ ಹಣವನ್ನು ಕೇಳಿ ಪಡೆದ ಬಗ್ಗೆ ಫೀರ್ಯಾದು ಮತ್ತು ನೆರಳು ಸಾಕ್ಷಿದಾರರು ತಮ್ಮ ಹೇಳಿಕೆಗಳಲ್ಲಿ ದೃಢಪಡಿಸಿರುತ್ತಾರೆ. ಆರೋಪಿಯಾದ ಶ್ರೀ ಜಿ. ಗಿರೀಶ್. ಉಪ ವಿದ್ಯುತ್ ಪರಿವೀಕ್ಷಕರು ಇವರ ಮೇಲಿನ ಭ್ರಷ್ಟಾಚಾರದ ಆಪಾದನೆ ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಶ್ರೀ ಜಿ. ಗಿರೀಶ್, ಉಪ ವಿದ್ಯುತ್ ಪರಿವೀಕ್ಷಕರು ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿಯೇ ಮುಂದುವರೆದಲ್ಲಿ ಪ್ರಕರಣದ ಸುಗಮ ತನಿಖೆಗೆ ಅಡ್ಡಿ ಉಂಟು ಮಾಡುವ ಅಥವಾ ತನಿಖೆಯಲ್ಲಿ ಹಸ್ತಕ್ಷೇಪ ಮಾಡುವ ಹಾಗು ಸಾಕ್ಷಿ ಪುರಾವೆಗಳನ್ನು ನಾಶಪಡಿಸುವ ಸಾಧ್ಯತೆಗಳಿರುವುದರಿಂದ ಇವರನ್ನು ತಕ್ಷಣದಿಂದ ಅಮಾನತ್ತಿನಲ್ಲಿಡಬೇಕೆಂದು ಹಾಗೂ ಅವರ ಲೀನ್ (ಸ್ಥಾನ)ವನ್ನು ಬೇರೆ ಕಡೆಗೆ ವರ್ಗಾಯಿಸುವಂತೆಯೂ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ಮುಖ್ಯ ವಿದ್ಯುತ್ ಪರಿವೀಕ್ಷಕರು ದಿನಾಂಕ 24-10-2011 ರಂದು ಸಂಜೆ 6-30 ಗಂಟೆಗೆ ಶ್ರೀ ಜಿ. ಗಿರೀಶ್, ಉಪ ವಿದ್ಯುತ್ ಪರಿವೀಕ್ಷಕರು, ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿ, ಬೆಂಗಳೂರು ದಕ್ಷಿಣ, ಬಸವನಗುಡಿ, ಬೆಂಗಳೂರು ಇವರ ವಿರುದ್ಧ ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ರವರು ಲಂಚ ನಿರೋಧ ಕಾಯ್ದೆ-1988ರ ಕಲಂ 7, 13 (1) (ಡಿ) ಸಹವಾಚನ 13(2) ರನ್ವಯ ದಿನಾಂಕ 22-10-2011 ರಂದು ಲೋಕಾಯುಕ್ತ ಪೊಲೀಸ್ ಠಾಣಾ ಮೊಕದ್ದಮೆ ಸಂಖ್ಯೆ : 52/2011 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ದಸ್ತಗಿರಿ ಮಾಡಿರುವುದಾಗಿ ತಿಳಿಸಿರುತ್ತಾರೆ.

ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದೆ. ಆಪಾದಿತ ಅಧಿಕಾರಿಯು ದಿನಾಂಕ 24-10-2011 ರಂದು ರೂ. 10,000/-ಗಳ ಲಂಚದ ಹಣವನ್ನು ಸ್ವೀಕರಿಸುತ್ತಿರುವಾಗ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿಬಿದ್ದಿರುವುದರಿಂದ ಹಾಗೂ ಅವರ ಎರಡೂ ಕೈಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೊಳೆಸಿದಾಗ ಬಣ್ಣ ಬದಲಾಗಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಶ್ರೀ ಜಿ. ಗಿರೀಶ್, ಉಪ ವಿದ್ಯುತ್ ಪರಿವೀಕ್ಷಕರು, ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿ, ಬೆಂಗಳೂರು ದಕ್ಷಿಣ, ಬಸವನಗುಡಿ, ಬೆಂಗಳೂರು ಇವರು ಅಲ್ಲಿಯೇ ಮುಂದುವರೆದಲ್ಲಿ ಸುಗಮ ತನಿಖೆಗೆ ಅಡ್ಡಿ ಉಂಟು ಮಾಡುವ ಅಥವಾ ತನಿಖೆಯಲ್ಲಿ ಹಸ್ತಕ್ಷೇಪ ಮಾಡುವ ಹಾಗೂ ಸಾಕ್ಷಿ ಪುರಾವೆಗಳನ್ನು ನಾಶಪಡಿಸುವ ಸಾಧ್ಯತೆಗಳು ಇರುವುದರಿಂದ ಅಧಿಕಾರಿಯವರ ವಿರುದ್ಧದ ಮುಂದಿನ ತನಿಖೆ/ವಿಚಾರಣೆಯನ್ನು ಬಾಕಿ ಇಟ್ಟು ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ : ಇಎನ್ 116 ಇಬಿಎಸ್ 2011, ಬೆಂಗಳೂರು, ದಿನಾಂಕ: 21-11-2011

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಜಿ. ಗಿರೀಶ್, ಉಪ ವಿದ್ಯುತ್ ಪರಿವೀಕ್ಷಕರು, ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿ, ಬೆಂಗಳೂರು ದಕ್ಷಿಣ, ಬಸವನಗುಡಿ, ಬೆಂಗಳೂರು ಇವರ ವಿರುದ್ಧ ವಿಚಾರಣೆ ಬಾಕಿ ಇಟ್ಟು ಇವರನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 10 (1)ಎ ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅಮಾನತ್ತಿನಲ್ಲಿಡಲಾಗಿದೆ.

ಶ್ರೀ ಜಿ. ಗಿರೀಶ್, ಉಪ ವಿದ್ಯುತ್ ಪರಿವೀಕ್ಷಕರು, ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿ, ಬೆಂಗಳೂರು ದಕ್ಷಿಣ, ಬಸವನಗುಡಿ, ಬೆಂಗಳೂರು ಇವರು ಅಮಾನತ್ತಿನಲ್ಲಿರುವ ಅವಧಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳನ್ವಯ ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ. ಹಾಗೂ ಈ ಅವಧಿಯಲ್ಲಿ ಸಕ್ಷಮ ಪ್ರಾಧಿಕಾರದ ಲಿಖಿತ ಅನುಮತಿಯಿಲ್ಲದೆ ಕೇಂದ್ರ ಕಾರ್ಯ ಸ್ಥಾನವನ್ನು ಬಿಡತಕ್ಕದ್ದಲ್ಲ ಎಂದು ಸರ್ಕಾರವು ಈ ಮೂಲಕ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸುಜಾತಮ್ಮ,
ಪೀಠಾಧಿಕಾರಿ,
ಇಂಧನ ಇಲಾಖೆ

ಪಿಆರ್.ನಂ. 04

ಇಂಧನ ಸಚಿವಾಲಯ

ವಿಷಯ : ಇಂಧನ ಇಲಾಖೆಗೆ ಲೇಖನ ಸಾಮಗ್ರಿಗಳನ್ನು ಖರೀದಿಸುವ ಬಗ್ಗೆ.

ಓದಲಾಗಿದೆ :
1) ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 3 ಡಿಎಸ್‌ವೈ 2011, ದಿನಾಂಕ : 03-05-2011.
2) ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 3 ಡಿಎಸ್‌ವೈ 2011, ದಿನಾಂಕ : 18-08-2011.
3) ಸರ್ಕಾರಿ ಪತ್ರ ಸಂಖ್ಯೆ : ಇಎನ್ 04 ಸಮನ್ವಯ 2011, ದಿನಾಂಕ 01-10-2011.
4) ಸರ್ಕಾರಿ ಪತ್ರ ಸಂಖ್ಯೆ : ಇಎನ್ 04 ಸಮನ್ವಯ 2011, ದಿನಾಂಕ 02-11-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಆದೇಶದಲ್ಲಿ ಸಚಿವಾಲಯವಲ್ಲಿ ವಿವಿಧ ಇಲಾಖೆಗಳಿಗೆ ಬೇಕಾಗುವ ಲೇಖನ ಸಾಮಗ್ರಿಗಳನ್ನು ಮತ್ತು ಇನ್ನಿತರ ಬಳಕೆ ಪದಾರ್ಥಗಳನ್ನು ಖರೀದಿಸುವ ಅಧಿಕಾರವನ್ನು ಆಯಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗಳಿಗೆ ವಹಿಸಲಾಗಿದೆ ಮತ್ತು ಈ ಆದೇಶದಲ್ಲಿ ಇಂಧನ ಇಲಾಖೆಗೆ ಲೇಖನ ಸಾಮಗ್ರಿಗಳನ್ನು ಖರೀದಿಸಲು ಲೆಕ್ಕ ಶೀರ್ಷಿಕೆ 2052-00-090-0-01-051 (ಸಾಮಾನ್ಯ ವೆಚ್ಚ) ರಲ್ಲಿ ರೂ.30,000/- (ಮೂವತ್ತು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಒದಗಿಸಿದ್ದು ಇದರಲ್ಲಿ ರೂ.28,033/- ಗಳು ಲೇಖನ ಸಾಮಗ್ರಿಗಳಿಗೆ ವೆಚ್ಚವಾಗಿದ್ದು, ಉಳಿದ ರೂ. 1,967/-ಗಳು ಉಳಿದಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಇಂಧನ ಇಲಾಖೆಗೆ ಮತ್ತೆ ಲೇಖನ ಸಾಮಗ್ರಿಗಳನ್ನು ಮೇಲ್ಕಂಡ ಲೆಕ್ಕ ಶೀರ್ಷಿಕೆಯಡಿ ರೂ. 55,000/-ಗಳನ್ನು ಒದಗಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಪತ್ರದಲ್ಲಿ ಇಂಧನ ಇಲಾಖೆಗೆ ಅಗತ್ಯವಿರುವ ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡಲು ದರಪಟ್ಟಿಗಳನ್ನು ಸಲ್ಲಿಸುವಂತೆ ಸಂಸ್ಥೆಗಳಿಗೆ ಕೋರಲಾಗಿತ್ತು. ಅದರಂತೆ ಮೆ॥ ಸನ್‌ರೇಸ್ ಇಂಪ್ರೆಷನ್, ನಂ.14 & 15, ನಾರ್ತ್ ಬ್ಲಾಕ್, ಮಣಿಪಾಲ್ ಸೆಂಟರ್, ಡಿಕೆಂಸನ್ ರಸ್ತೆ, ಬೆಂಗಳೂರು-560042, ಮೆ॥ ಹೈಟೆಕ್ ಸ್ಟೇಷನರೀಸ್, ಇಬ್ರಾಹಿಂ ಸಾಹೇಬ್ ರಸ್ತೆ, ಶಿವಾಜಿನಗರ, ಬೆಂಗಳೂರು. ಮೆ॥ ಪ್ಯಾರಾಮೌಂಟ್ ಸ್ಟೇಷನರೀಸ್, ಪ್ಲಾಟ್ ನಂ. ಗಿ-4, ಕೆಎಸ್‌ಎಸ್‌ಐಡಿಸಿ, ಕಾಂಪೌಂಡ್, ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು. ಇವರು ದರಪಟ್ಟಿಯನ್ನು ಸಲ್ಲಿಸಿರುತ್ತಾರೆ. ಈ ಮೂರು ಸಂಸ್ಥೆಗಳ ದರಪಟ್ಟಿಯನ್ನು ಪರಿಶೀಲಿಸಿದಾಗ ಮೆ॥ ಸನ್‌ರೇಸ್ ಇಂಪ್ರೆಷನ್ ಇವರು ಸಲ್ಲಿಸಿರುವ ಬೆಲೆಗಳ ದರಪಟ್ಟಿ ಕಡಿಮೆ ಇರುತ್ತದೆ. ಆದುದರಿಂದ ಮೆ॥ ಸನ್‌ರೇಸ್ ಇಂಪ್ರೆಷನ್, ಇವರಿಂದ ಲೇಖನ ಸಾಮಗ್ರಿಗಳನ್ನು ಪಡೆಯಲು ತೀರ್ಮಾನಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ಪತ್ರದಲ್ಲಿ ಇಂಧನ ಇಲಾಖೆಗೆ ಅಗತ್ಯವಿರುವ ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡುವಂತೆ ಮೆ॥ ಸನ್‌ರೇಸ್ ಇಂಪ್ರೆಷನ್, ಇವರನ್ನು ಕೋರಲಾಗಿತ್ತು. ಅದರಂತೆ, ಮೆ॥ ಸನ್‌ರೇಸ್ ಇಂಪ್ರೆಷನ್, ಇವರು ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡಿ ಇದಕ್ಕೆ ಸಂಬಂಧಿಸಿದ ವೆಚ್ಚ ಬಾಬ್ತು ರೂ. 56,798/- (ಐವತ್ತಾರು ಸಾವಿರದ ಏಳುನೂರ ತೊಂಬತ್ತ ಎಂಟು ರೂಪಾಯಿಗಳು ಮಾತ್ರ) (ಮೌಲ್ಯವರ್ಧಿತ ತೆರಿಗೆ ಸೇರಿ) ಗಳನ್ನು ಸಂದಾಯ ಮಾಡುವಂತೆ ಬಿಲ್ಲನ್ನು ದಿನಾಂಕ 15-10-2011 ರಂದು ಸಲ್ಲಿಸಿರುತ್ತಾರೆ. ಆದುದರಿಂದ ಮೆ॥ ಸನ್‌ರೇಸ್ ಇಂಪ್ರೆಷನ್, ಇವರಿಗೆ ಬಿಲ್ಲಿನ ಹಣವನ್ನು ಸಂದಾಯ ಮಾಡಲು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಇಎನ್ 04 ಸಮನ್ವಯ 2011, ಬೆಂಗಳೂರು, ದಿನಾಂಕ: 03-12-2011

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಹಿನ್ನೆಲೆಯಲ್ಲಿ ಇಂಧನ ಇಲಾಖೆಗೆ ಅಗತ್ಯವಿರುವ ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡುವ ಸಂಬಂಧ ಬಿಲ್ಲಿನ ಮೊತ್ತ ವೆಚ್ಚ ರೂ. 55,853/- (ಐವತ್ತೈದು ಸಾವಿರದ ಎಂಟುನೂರ ಐವತ್ತ ಮೂರು ರೂಪಾಯಿಗಳು ಮಾತ್ರ) (ಮೌಲ್ಯವರ್ಧಿತ ತೆರಿಗೆ ಸೇರಿ) ಗಳನ್ನು ಮೆ॥ ಸನ್‌ರೇಸ್ ಇಂಪ್ರೆಷನ್, ನಂ.14 & 15, ನಾರ್ತ್ ಬ್ಲಾಕ್, ಮಣಿಪಾಲ್ ಸೆಂಟರ್, ಡಿಕೆಂಸನ್ ರಸ್ತೆ, ಬೆಂಗಳೂರು-560042. ಇವರಿಗೆ ಸಂದಾಯ ಮಾಡಲು ಮಂಜೂರಾತಿ ನೀಡಿದೆ.

ಇದಕ್ಕೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ "2052-00-090-0-01-051 (ಸಾಮಾನ್ಯ ವೆಚ್ಚ) (ಯೋಜನೇತರ)" ರಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 96 ದಿನಾಂಕ 10-07-1996 ರಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸುರೇಶ್ ಬಿ. ಕೃಷ್ಣಪ್ಪನವರ್

ಪಿಆರ್.ನಂ. 05

ಸರ್ಕಾರದ ಅಧೀನ ಕಾರ್ಯದರ್ಶಿ,

ಇಂಧನ ಇಲಾಖೆ

ಇಂಧನ ಸಚಿವಾಲಯ

ವಿಷಯ : ಮೆ॥ ಇಂಡೊವಿಂಡ್ ಎನರ್ಜಿ ಲಿಮಿಟೆಡ್ 9.0 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ಅನುಷ್ಠಾನಕ್ಕೆ ಕಾಲಾವಕಾಶ ವಿಸ್ತರಣೆ ಕುರಿತು.

ಓದಲಾಗಿದೆ :

1) ಸರ್ಕಾರಿ ಆದೇಶ ಸಂಖ್ಯೆ : ಇಎನ್ 133 ಎನ್‌ಸಿಇ 1997 (4), ದಿನಾಂಕ : 20-04-1998.
2) ಸರ್ಕಾರಿ ಆದೇಶ ಸಂಖ್ಯೆ : ಇಎನ್ 190 ಎನ್‌ಸಿಇ 2006, ದಿನಾಂಕ 25-07-2006.
3) ಸರ್ಕಾರಿ ಆದೇಶ ಸಂಖ್ಯೆ : ಇಎನ್ 457 ಎನ್‌ಸಿಇ 2008, ದಿನಾಂಕ 16-09-2009.
4) ಸರ್ಕಾರಿ ಆದೇಶ ಸಂಖ್ಯೆ : ಇಎನ್ 371 ಎನ್‌ಸಿಇ 2010, ದಿನಾಂಕ 10-01-2011.
5) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಕೆಆರ್‌ಇಡಿ/08/IWEL-9/MW/2011/2204, ದಿನಾಂಕ : 20/25-7-2011.
6) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಕೆಆರ್‌ಇಡಿ/08/IWEL-9/MW/2011/2713, ದಿನಾಂಕ : 12/13-9-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಮೆ॥ Devlina power private Limited ರವರಿಗೆ ಚಿತ್ರದುರ್ಗ ಜಿಲ್ಲೆಯ ಪಲವನಹಳ್ಳಿ, ಜೋಗಿಮಠ ವಲಯ ಎಂಬಲ್ಲಿ 8 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ಯೋಜನೆಯ ಸಾಮರ್ಥ್ಯವನ್ನು 8 ಮೆ.ವ್ಯಾ. ನಿಂದ 9 ಮೆ.ವ್ಯಾ.ಗೆ ಹೆಚ್ಚಿಸಿ ಸದರಿ ಯೋಜನೆಯನ್ನು ಮೆ॥ ಇಂಡೊವಿಂಡ್ ಎನರ್ಜಿ ಲಿಮಿಟೆಡ್‌ರವರಿಗೆ ವರ್ಗಾಯಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಆದೇಶದಲ್ಲಿ ಸದರಿ ಯೋಜನೆಯ ಹಂಚಿಕೆ ಆದೇಶವನ್ನು ರದ್ದುಪಡಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಆದೇಶದಲ್ಲಿ ಯೋಜನೆಯ ಹಂಚಿಕೆ ಆದೇಶದ ರದ್ದತಿಯನ್ನು ಹಿಂಪಡೆದು, ಯೋಜನೆಯನ್ನು ದಿನಾಂಕ 31-03-2011 ರೊಳಗಾಗಿ ಪ್ರಾರಂಭ ಮಾಡಬೇಕೆಂಬ ಷರತ್ತಿಗೊಳಪಟ್ಟ ಪೂರ್ವಸ್ಥಿತಿಗೆ ತರಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (5) ಮತ್ತು (6) ರಲ್ಲಿ ಓದಲಾದ ಪತ್ರಗಳಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ॥ ಇಂಡೊವಿಂಡ್ ಎನರ್ಜಿ ಲಿಮಿಟೆಡ್‌ರವರು ಯೋಜನೆಗೆ ಅಗತ್ಯವಿರುವ 132.53 ಎಕರೆ ಖಾಸಗಿ ಜಮೀನನ್ನು ಖರೀದಿಸಿದ್ದಾರೆಂದು ಹಾಗೂ ಅಗತ್ಯವಿರುವ ಯಂತ್ರೋಪಕರಣಗಳ ಖರೀದಿಗೆ ಕ್ರಮ ವಹಿಸಿರುವುದರಿಂದ ಸದರಿ ಯೋಜನೆಯ ಅನುಷ್ಠಾನಕ್ಕಾಗಿ ಕಾಲಾವಕಾಶ ವಿಸ್ತರಣಾ ಶುಲ್ಕವನ್ನು ಕ್ರೆಡಲ್‌ಗೆ ಪಾವತಿಸತಕ್ಕದ್ದೆಂಬ ಷರತ್ತಿಗೊಳಪಟ್ಟು ಕಾಲಾವಕಾಶವನ್ನು ದಿನಾಂಕ 31-3-2012 ರವರೆಗೆ ವಿಸ್ತರಿಸಬಹುದಾಗಿಯೆಂದು ಸದರಿ ಅಭಿವೃದ್ಧಿದಾರರು ವೀಲಿಂಗ್ ಮತ್ತು ಬ್ಯಾಂಕಿಂಗ್ undertaking ಬರೆದುಕೊಟ್ಟಿರುವುದನ್ನು ಪರಿಶೀಲಿಸಿ ಶಿಫಾರಸ್ಸು ಮಾಡಿರುತ್ತಾರೆ.

ಇದನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಲಾಗಿದೆ.–

ಸರ್ಕಾರಿ ಆದೇಶ ಸಂಖ್ಯೆ : ಇಎನ್ 325 ಎನ್‌ಸಿಇ 2011, ಬೆಂಗಳೂರು, ದಿನಾಂಕ: 11-11-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ವಾಸ್ತವಾಂಶಗಳ ಹಿನ್ನೆಲೆಯಲ್ಲಿ ಮೆ॥ ಇಂಡೊವಿಂಡ್ ಎನರ್ಜಿ ಲಿಮಿಟೆಡ್‌ರವರಿಗೆ ಚಿತ್ರದುರ್ಗ ಜಿಲ್ಲೆಯ ಪಲವನಹಳ್ಳಿ, ಜೋಗಿಮಠ ವಲಯ ಎಂಬಲ್ಲಿ ಹಂಚಿಕೆ ಮಾಡಿರುವ **9.0** ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಅನುಷ್ಠಾನಕ್ಕಾಗಿ ಕ್ರೆಡಲ್‌ಗೆ ಕಾಲಾವಕಾಶದ ವಿಸ್ತರಣಾ ಶುಲ್ಕವನ್ನು ಪಾವತಿಸತಕ್ಕದ್ದೆಂಬ ಷರತ್ತಿಗೊಳಪಟ್ಟು ದಿನಾಂಕ 01-04-2011 ರಿಂದ ದಿನಾಂಕ **31-3-2012** ರವರೆಗೆ ಕಾಲಾವಕಾಶವನ್ನು ವಿಸ್ತರಿಸಲಾಗಿದೆ. ಸದರಿ ಕಂಪನಿಯವರು ಸಂಬಂಧಪಟ್ಟ ಎಸ್ಕಾಂ/ಕವಿಪ್ರನಿನಿ ನೊಂದಿಗೆ ವೀಲಿಂಗ್ ಮತ್ತು ಬ್ಯಾಂಕಿಂಗ್ ಮಾಡಿಕೊಳ್ಳಲು ಅನುಮತಿಸಿದೆ.

ಈ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಓದಲಾದ (1)ರ ಹಂಚಿಕೆ ಆದೇಶದ ಇತರ ನಿಬಂಧನೆಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ

ಪಿಆರ್.ನಂ. 06

ಇಂಧನ ಸಚಿವಾಲಯ

ವಿಷಯ : ಮೆ॥ ಕೆ.ಕೆ.ವಿ. ಎನರ್ಜಿ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಇವರಿಗೆ 4.00 ಮೆಗಾ ವ್ಯಾಟ್ ಸಾಮರ್ಥ್ಯದ ನಲ್ಗಂದಿನ್ನಿ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ : 1)ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕ್ರೆಡಲ್/06/SH-763/Nalgamdinni MHS/548, ದಿನಾಂಕ 11-02-2011 ಮತ್ತು ಕ್ರೆಡಲ್/06/SH-763/Nalgamdinni MHS/1436 ದಿನಾಂಕ 19-05-2011.

2) ದಿನಾಂಕ 27-05-2011ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರಗಳಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ॥ ಕೆ.ಕೆ.ವಿ. ಎನರ್ಜಿ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಇವರಿಗೆ ರಾಯಚೂರು ಜಿಲ್ಲೆ, ಮಾನ್ವಿ ತಾಲ್ಲೂಕು, ನಲ್ಗಂದಿನ್ನಿ ಗ್ರಾಮದ ಹತ್ತಿರ ಮಸ್ಕಿ ನದಿಗೆ ಅಡ್ಡಲಾಗಿ 4.00 ಮೆಗಾ ವ್ಯಾಟ್ ಸಾಮರ್ಥ್ಯದ ನಲ್ಗಂದಿನ್ನಿ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಹಂಚಿಕೆ ಸಮಿತಿ ಸಭೆಯ ಮುಂದೆ ಸದರಿ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು. ಮೆ॥ ಕೆ.ಕೆ.ವಿ. ಎನರ್ಜಿ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಇವರಿಗೆ 4.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲು ಹಂಚಿಕೆ ಸಮಿತಿಯು ಪರಿಗಣಿಸಿರುತ್ತದೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರದ ಆದೇಶ ಸಂಖ್ಯೆ : ಇಎನ್ 110 ಎನ್‌ಸಿಇ 2011, ಬೆಂಗಳೂರು, ದಿನಾಂಕ : 02-11-2011.

ಮೆ॥ ಕೆ.ಕೆ.ವಿ. ಎನರ್ಜಿ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಇವರಿಗೆ ರಾಯಚೂರು ಜಿಲ್ಲೆ, ಮಾನ್ವಿ ತಾಲ್ಲೂಕು, ನಲ್ಗಂದಿನ್ನಿ ಗ್ರಾಮದ ಹತ್ತಿರ ಮಸ್ಕಿ ನದಿಗೆ ಅಡ್ಡಲಾಗಿ 4.00 ಮೆಗಾ ವ್ಯಾಟ್ ಸಾಮರ್ಥ್ಯದ ನಲ್ಗಂದಿನ್ನಿ ಕಿರು ಜಲ ವಿದ್ಯುತ್ ಯೋಜನೆಯನ್ನು ಈ ಕೆಳಕಂಡ ಶೆಡ್ಯೂಲ್ ಹಾಗೂ ಷರತ್ತಿಗೊಳಪಟ್ಟು ಹಂಚಿಕೆ ಮಾಡಲಾಗಿದೆ:–

Company	MHS	Location	MW	Weir Latitude	Weir Longitude	Power House Latitude	Power House Longitude	FRL (M)	TWL (M)	Design Head	Design Discharge (Cumees)
M/s. KKV Energy India Pvt Ltd.	Nalgamdinni	Nalgamdinni village, Manvi Taluk, Raichur District.	4.00	15°52' 15''	76°58' 36''	15°52' 28''	76°59' 40''	351.5	342	9.5	80

1 ಸದರಿ ಯೋಜನೆಯಿಂದ ಕೆಳತೊರೆ ಮತ್ತು ಮೇಲ್ತೊರೆ ಯೋಜನೆಗಳಿಗೆ ಯಾವುದೇ ಹಾನಿಯಾಗಬಾರದು.

1(ಅ) ಹಂಚಿಕೆದಾರರು ಈ ಆದೇಶ ಹೊರಡಿಸಿದ 45 ದಿನಗಳ ಒಳಗಾಗಿ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳತಕ್ಕದ್ದು ಇಲ್ಲದಿದ್ದಲ್ಲಿ, ಈ ಹಂಚಿಕೆ ತಂತಾನೇ ರದ್ದಾಗುವುದು, ನಂತರ, ಕಂಪನಿಯು ಹಂಚಿಕೆಗೋಸ್ಕರ ಪುನಃ ಹೊಸದಾಗಿ ಅರ್ಜಿ ಸಲ್ಲಿಸತಕ್ಕದ್ದು, ಯಾವ ಕಾರಣಕ್ಕೂ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಸ್ವೀಕರಿಸಿದ ಅರ್ಜಿ ಪರಿಷ್ಕರಣಾ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

(ಆ) ಒಡಂಬಡಿಕೆಯನ್ನು ರೂ. 400.00ರ ಛಾಪಾ ಕಾಗದದ ಮೇಲೆ ಮಾಡಿಕೊಂಡು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದವರಿಗೆ ಕಳುಹಿಸಿ ಪ್ರಮಾಣೀಕರಿಸಿ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು (ಒಡಂಬಡಿಕೆಯನ್ನು ಕಡ್ಡಾಯವಾಗಿ ಕನ್ನಡದಲ್ಲಿಯೇ ಸಲ್ಲಿಸತಕ್ಕದ್ದು)

(ಇ) ಈ ಒಡಂಬಡಿಕೆಯನ್ನು ಮಾಡಿಕೊಳ್ಳುವ ಮೊದಲು ಯೋಜನಾ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್.) ಪರಿಷ್ಕರಿಸಲು ಮೆಗಾ ವ್ಯಾಟ್ ಒಂದಕ್ಕೆ ಸರ್ಕಾರದ ಆದೇಶಾನುಸಾರ ವಿವರವಾದ ಯೋಜನಾ ವರದಿ ಪರಿಷ್ಕರಣ ಶುಲ್ಕವನ್ನು ತುಂಬುವುದು.

(ಈ) ಯೋಜನಾ ಅಭಿವೃದ್ಧಿದಾರರು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದಲೂ ಅಂದರೆ ಜಲಸಂಪನ್ಮೂಲ ಇಲಾಖೆ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕಂದಾಯ ಮುಂತಾದ ಇಲಾಖೆಗಳಿಂದ ಕ್ಲಿಯರೆನ್ಸ್ ಪಡೆಯತಕ್ಕದ್ದು ಸಲ್ಲಿಸತಕ್ಕದ್ದು. ಒಡಂಬಡಿಕೆ ಮಾಡಿಕೊಂಡ ಒಂದು ವರ್ಷದೊಳಗಾಗಿ ವಿವರವಾದ ಯೋಜನಾ ವರದಿಯನ್ನು ಸಲ್ಲಿಸತಕ್ಕದ್ದು.

2. ಹಂಚಿಕೆದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಠೇವಣಿ ಇಡುವ ಹಣವನ್ನು, ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ಅವಿಷ್ಕರಿಸುವುದಕ್ಕೋಸ್ಕರ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

3. ಯೋಜನೆಯನ್ನು ಆದೇಶ ಹೊರಡಿಸಿದ ದಿನಾಂಕದಿಂದ **3 ವರ್ಷದ** (ಮೂರು ವರ್ಷ) ಅವಧಿಯೊಳಗೆ ಅನುಷ್ಠಾನಗೊಳಿಸತಕ್ಕದ್ದು.

4. ಯೋಜನಾ ಅನುಷ್ಠಾನ ಮಾಡಲು ಸಫಲವಾಗದಿದ್ದಲ್ಲಿ ಈ ಹಂಚಿಕೆಯು ತಂತಾನೇ ಯಾವ ಮುನ್ಸೂಚನೆಯನ್ನೂ ನೀಡದೆ ರದ್ದಾಗುವುದೆಂದು ತಿಳಿಯತಕ್ಕದ್ದು.

5. ಯೋಜನಾ ಅಭಿವೃದ್ಧಿದಾರರು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ವಿದ್ಯುತ್ತನ್ನು ಮಾರಾಟ ಮಾಡುವ ಸಂದರ್ಭದಲ್ಲಿ ವಿದ್ಯುತ್ ಖರೀದಿ ಒಡಂಬಡಿಕೆ (ಪಿಪಿಎ) ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

6. ಈ ವಿಷಯದಲ್ಲಿ ಹಂಚಿಕೆದಾರರು ರಾಜ್ಯ ಮತ್ತು ಜಿಲ್ಲಾ ಮಟ್ಟಕ್ಕೆ ಸಂಬಂಧಿಸಿದ ಅಧಿಕಾರಿಗಳ ಸಹಾಯ/ಸಹಕಾರವನ್ನು ಪಡೆದು ನಿಗದಿತ **3 ವರ್ಷದ** ಅವಧಿಯೊಳಗೆ ಯೋಜನಾ ಅನುಷ್ಠಾನ ಪೂರ್ಣಗೊಳಿಸತಕ್ಕದ್ದು.

7. ಈ ಕಿರು ಜಲ ವಿದ್ಯುತ್ ಯೋಜನೆಯ ಸ್ಥಳದಲ್ಲಿ ಯಾವುದಾದರೂ ಸರ್ಕಾರಿ ಜಲ ವಿದ್ಯುತ್/ನೀರಾವರಿ/ ಕುಡಿಯುವ ನೀರಿನ ಯೋಜನೆಗಳು ಬಂದಲ್ಲಿ ಸರ್ಕಾರಿ ಯೋಜನೆಗಳಿಗೆ ಮೊದಲ ಆದ್ಯತೆ ದೊರಕುವುದು ಹಾಗೂ ಈ ಯೋಜನೆಗೆ ಯಾವುದಾದರೂ ಇತರೆ ಯೋಜನೆಗಳಿಂದ ಧಕ್ಕೆಯಾದ್ದಲ್ಲಿ ಯಾವುದೇ ಪರಿಹಾರವನ್ನು ಅಭಿವೃದ್ಧಿದಾರರು ನಿರೀಕ್ಷಿಸುವಂತಿಲ್ಲ.

8. ಸ್ಥಳೀಯವಾಗಿ ಉದ್ಭವಿಸುವ ಯಾವುದಾದರೂ ಆಕ್ಷೇಪಣೆಗಳಿಗೆ ಅಭಿವೃದ್ಧಿದಾರರೇ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ.

9. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಯಾವುದೇ ಯೋಜನೆಗಳಿಂದಾಗಿ ಸದರಿ ಯೋಜನೆಯು ಮುಳುಗಡೆಯಾದಲ್ಲಿ, ಒದಗಬಹುದಾದ ಸಂಪೂರ್ಣ ತೊಂದರೆಗಳಿಗೆ ಅಭಿವೃದ್ಧಿದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.

10. ಡಿ.ಪಿ.ಆರ್. ತಯಾರು ಮಾಡಿದ ಕ್ರೆಡಲ್ ಸಂಸ್ಥೆಯು ಪರಿಶೀಲಿಸಿದ ನಂತರ ಇತರ ಸಂಬಂಧಿಸಿದ ಇಲಾಖೆಗಳಿಗೆ ಡಿ.ಪಿ.ಆರ್. ಸಲ್ಲಿಸುವುದು ಹಾಗೂ ತದನಂತರ ತಾಂತ್ರಿಕ ಅನುಮೋದನೆಗಾಗಿ ಕ್ರೆಡಲ್‌ಗೆ ಅರ್ಜಿ ಸಲ್ಲಿಸತಕ್ಕದ್ದು.

11. ಸದರಿ ಯೋಜನೆಯನ್ನು ಅಭಿವೃದ್ಧಿದಾರರು ಕಾರ್ಯಗತ (Implement) ಮಾಡದಹೊರತು ವರ್ಗಾವಣೆ/ಮಾರಾಟಕ್ಕೆ ಅನುಮೋದನೆ ನೀಡಲಾಗುವುದಿಲ್ಲ.

12. ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಸುರೇಶ್ ಬಿ. ಕೃಷ್ಣಪ್ಪನವರ್

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ

ಪಿ.ಆರ್. 07

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವಿವಿಧ ವೃಂದಗಳಲ್ಲಿ ಒಟ್ಟು 24 ಹುದ್ದೆಗಳನ್ನು ತಾತ್ಕಾಲಿಕವಾಗಿ ಸೃಜಿಸುವ ಬಗ್ಗೆ.

ಓದಲಾಗಿದೆ :

1. ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಪತ್ರ ಸಂ. ಮೈನಪ್ರಾ/ಸಿಬ್ಬಂದಿ-1/2006-07, ದಿನಾಂಕ : 1-6-2006.
2. ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಪತ್ರ ಸಂ. ಮೈನಪ್ರಾ/ಸಿಬ್ಬಂದಿ-1/ಪಿಆರ್/45, 2008-09, ದಿನಾಂಕ : 30-10-2008.
3. ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಪತ್ರ ಸಂ. ಮೈನಪ್ರಾ/ಸಿಬ್ಬಂದಿ-1/ಪಿಆರ್/45/2008-09. ದಿನಾಂಕ : 20-10-2009.
4. ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಪತ್ರ ಸಂ. ಮೈನಪ್ರಾ/ಸಿಬ್ಬಂದಿ-3/ಪಿಆರ್/307/2009-10. ದಿನಾಂಕ : 26-8-2011.

ಪ್ರಸ್ತಾವನೆ :

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ನೂರು ವರ್ಷಗಳ ಇತಿಹಾಸವನ್ನು ಪೂರೈಸಿದ್ದು ಪ್ರಾಧಿಕಾರದ ವ್ಯಾಪ್ತಿಯು ವಿಸ್ತಾರಗೊಂಡಿರುತ್ತದೆ. ಇದಕ್ಕನುಗುಣವಾಗಿ ತ್ವರಿತವಾದ ವಿವಿಧ ಯೋಜನೆಗಳ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಮತ್ತು ಎಲ್ಲಾ ಕ್ಷೇತ್ರಗಳಲ್ಲಿ ಕ್ಷಿಪ್ರಗತಿಯಲ್ಲಿ ಅಭಿವೃದ್ಧಿ ಸಾಧಿಸಬೇಕಾಗುತ್ತದೆ. ಈ ರೀತಿಯ ಸರ್ವಾಂಗೀಣ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಸಿಬ್ಬಂದಿ/ಅಧಿಕಾರಿಗಳ ಕೊರತೆ ಇರುವುದರಿಂದ ಈ ಕೊರತೆಗಳನ್ನು ನಿವಾರಿಸಲು ಅಗತ್ಯಕ್ಕೆ ತಕ್ಕಂತೆ ಸಿಬ್ಬಂದಿಯನ್ನು ನಿಯೋಜಿಸಲು ಹಾಲಿ ಇರುವ ದಿನಾಂಕ : 19-2-2004 ರಂದು ಪ್ರಕಟಿಸಿರುವ Mysore Development Authority (Cadre & Recruitment) regulations 2003 ರಂತೆ ಮತ್ತು

ನೇಮಕಾತಿ ನಿಯಮಗಳಲ್ಲಿನ ಹುದ್ದೆಗಳಲ್ಲದೆ, ಹೆಚ್ಚುವರಿ ಹುದ್ದೆಗಳನ್ನು ವಿವಿಧ ವೃಂದಗಳಲ್ಲಿ ಸೃಜಿಸುವ ಅನಿವಾರ್ಯತೆ ಉಂಟಾಗಿರುತ್ತದೆ. ಆದ್ದರಿಂದ ಉಲ್ಲೇಖ-1 ರಿಂದ ಉಲ್ಲೇಖ-3ರ ಪತ್ರಗಳ ಪ್ರಸ್ತಾವನೆಯಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಕೆಲವು ಹುದ್ದೆಗಳನ್ನು ಸೃಜಿಸಿ, ಅಲ್ಲದೆ ಪ್ರಾಧಿಕಾರದಲ್ಲಿ ಭಾರಿ ವಾಹನಗಳು ಇಲ್ಲದೇ ಇರುವುದರಿಂದ 5 ಕ್ಲೀನರ್ ಹುದ್ದೆಗಳು ಅವಶ್ಯಕತೆ ಇಲ್ಲದೇ ಇರುವುದರಿಂದ ಇವುಗಳನ್ನು ಕಡಿತಗೊಳಿಸಲು ಹಾಗೂ ಸಹಾಯಕ ಅಭಿಯಂತರರ 2 ಹುದ್ದೆ ಹಾಗೂ ಕಿರಿಯ ಅಭಿಯಂತರರ 2 ಹುದ್ದೆಗಳನ್ನು ಕಡಿತಗೊಳಿಸಿ ವೃಂದ ಮತ್ತು ನೇಮಕಾತಿ ನಿಯಮಕ್ಕೆ ತಿದ್ದುಪಡಿ ಮಾಡಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಪ್ರಾಧಿಕಾರದ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರದ ಪತ್ರ ಸಂಖ್ಯೆ : ನಅಇ 31 ಅಪ್ರಾಸೇ 2005 ದಿನಾಂಕ : 24-1-2011 ದಿನಾಂಕ : 24-2-2011 ಮತ್ತು 22-8-2011ರ ಪತ್ರಗಳಲ್ಲಿ ವೃಂದ ಮತ್ತು ನೇಮಕಾತಿ ನಿಯಮದ ಪ್ರಕಾರ ಪ್ರಾಧಿಕಾರದಲ್ಲಿ ಮಂಜೂರಾಗಿರುವ ಹುದ್ದೆಗಳು ಪ್ರಸ್ತುತ ವಿವಿಧ ವೃಂದಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರ, ಹುದ್ದೆಗಳ ಸೃಜನೆಯಿಂದ ಪ್ರಾಧಿಕಾರಕ್ಕೆ ತಗಲುವ ಆರ್ಥಿಕ ವೆಚ್ಚ ಇತ್ಯಾದಿ ವಿವರಗಳೊಂದಿಗೆ ಪ್ರಾಧಿಕಾರದಲ್ಲಿ ತಾತ್ಕಾಲಿಕ 43 ಹುದ್ದೆಗಳನ್ನು ಹೆಚ್ಚುವರಿಯಾಗಿ ಸೃಜನೆ ಮಾಡುವ ಸಂಬಂಧದಲ್ಲಿ ಪ್ರತಿಯೊಂದು ವೃಂದದ ಕಾರ್ಯ ಒತ್ತಡ ವಿವರಗಳೊಂದಿಗೆ ವೃಂದವಾರು ಸಮರ್ಥನೆಗಳನ್ನು ನೀಡುವಂತೆ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದವರನ್ನು ಕೋರಲಾಗಿತ್ತು.

ಮೇಲೆ ಕ್ರಮ ಸಂಖ್ಯೆ : 4ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರರವರು ವರದಿ ಸಲ್ಲಿಸಿ ದಿನಾಂಕ : 19-2-2004ರಲ್ಲಿ ಪ್ರಕಟಿಸಿರುವ ವೃಂದ ಮತ್ತು ನೇಮಕಾತಿ ನಿಯಮಗಳು 2003ಕ್ಕೆ ತಿದ್ದುಪಡಿ ತರುವ ಸಂಬಂಧ ಪ್ರಾಧಿಕಾರದ ಉಪ-ಸಮಿತಿಯು ದಿನಾಂಕ: 19-3-2011 ರಂದು ತೆಗೆದುಕೊಂಡ ತೀರ್ಮಾನವನ್ನು ದಿನಾಂಕ : 23-7-2011ರಂದು ನಡೆದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಾಮಾನ್ಯ ಸಭೆಯಲ್ಲಿ ಅನುಮೋದಿಸಿರುವುದನ್ನು ಉಲ್ಲೇಖಿಸಿ ಪ್ರಾಧಿಕಾರದಲ್ಲಿ ಇರುವ ಕಾರ್ಯ ಒತ್ತಡದ ವಿವರಗಳೊಂದಿಗೆ ಸೃಜಿಸಬೇಕಾದ ಹುದ್ದೆಗಳ ಬಗ್ಗೆ ಸಮರ್ಥನೆಯನ್ನು ನೀಡಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದವರು 43 ಹುದ್ದೆಗಳನ್ನು ಹೆಚ್ಚುವರಿಯಾಗಿ ಸೃಜನೆ ಮಾಡುವ ಸಂಬಂಧದಲ್ಲಿ ಪ್ರತಿಯೊಂದು ಹುದ್ದೆಯ ಸೃಜನೆಯ ಅಗತ್ಯತೆಯನ್ನು ವಿವರಿಸಿರುವುದರಿಂದ ಹಾಗೂ ಇದಕ್ಕೆ ಸರ್ಕಾರದಿಂದ ಯಾವುದೇ ಅನುದಾನ ನೀಡುವ ಅವಶ್ಯಕತೆ ಇಲ್ಲದಿರುವುದರಿಂದ, ಅಲ್ಲದೇ 43 ಹುದ್ದೆಗಳ ಪೈಕಿ 19 ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳನ್ನು ಖಾಯಂಗೊಳಿಸಲು ಕೋರಿದ್ದು, ಆದರೆ, ಹುದ್ದೆಗಳನ್ನು ತಾತ್ಕಾಲಿಕ ನೆಲೆಯಲ್ಲಿ ಸೃಜಿಸಬೇಕಾಗಿರುವುದರಿಂದ, ಈಗಾಗಲೇ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಪ್ರಸ್ತುತ ಚಾಲ್ತಿಯಲ್ಲಿ ಇರುವ ದಿನಾಂಕ : 19-2-2004 ರಂದು ಪ್ರಕಟಿಸಿರುವ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸದರಿ 19 ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳನ್ನು ತಾತ್ಕಾಲಿಕ ನೆಲೆಯಲ್ಲಿ ಮಂಜೂರು ಮಾಡಿರುವುದರಿಂದ, ಈ 19 ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳನ್ನು ಹೊರತುಪಡಿಸಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ತಾತ್ಕಾಲಿಕವಾಗಿ ಹೆಚ್ಚುವರಿ ವಿವಿಧ ವೃಂದದ 24 ಹುದ್ದೆಗಳನ್ನು ಸೃಜಿಸಿ, ಸದರಿ ಸೃಜನೆಯನ್ನು ಖಾಯಂ ಆಗಿ ಮುಂದೆ ಅನುಮೋದಿಸಬಹುದಾದ ಏಕರೂಪ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಳವಡಿಸಿಕೊಳ್ಳುವ ಷರತ್ತಿಗೊಳಪಡಿಸಿ, ಆಡಳಿತಾತ್ಮಕ ಹಿತದೃಷ್ಟಿಯಿಂದ ಸದರಿ ಪ್ರಸ್ತಾವನೆಯನ್ನು ಪರಿಗಣಿಸಬಹುದೆಂದು ಅಭಿಪ್ರಾಯಪಟ್ಟು ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ನಅಇ 31 ಅಪ್ರಾಸೇ 2005, ಬೆಂಗಳೂರು, ದಿನಾಂಕ : 12-1-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಈ ಕೆಳಕಂಡ 24 ವಿವಿಧ ವೃಂದದ ಹುದ್ದೆಗಳನ್ನು ಮುಂದೆ ಅನುಮೋದಿಸಬಹುದಾದ ಏಕರೂಪ ವೃಂಧ ಮತ್ತು ನೇಮಕಾತಿ ನಿಯಮಗಳಲ್ಲಿ ಅಳವಡಿಸಿಕೊಳ್ಳುವ ಷರತ್ತಿಗೊಳಪಡಿಸಿ, ತಾತ್ಕಾಲಿಕವಾಗಿ ಸೃಜಿಸಿ ಆದೇಶಿಸಿದೆ.

ಸೃಜಿಸಲಾದ ಹುದ್ದೆಗಳು

ಕ್ರಮ ಸಂ.	ಹುದ್ದೆಯ ಹೆಸರು ಮತ್ತು ವೇತನ ಶ್ರೇಣಿ	ಹಾಲಿ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಇರುವ ಹುದ್ದೆಗಳ ಸಂಖ್ಯೆ	ತಾತ್ಕಾಲಿಕವಾಗಿ ಸೃಜಿಸಲಾಗಿರುವ ಹುದ್ದೆಗಳ ಸಂಖ್ಯೆ	ನೇಮಕಾತಿ ವಿಧಾನ
1	2	3	4	5
1	ಕಾರ್ಯಪಾಲಕ ಅಭಿಯಂತರರು ವೇತನ ಶ್ರೇಣಿ : 18150-26925	1	1	ಒಂದು ಹುದ್ದೆಯನ್ನು ಲೋಕೋಪಯೋಗಿ ಇಲಾಖೆಯಿಂದ ನಿಯೋಜನೆ ಮೇಲೆ ಹಾಗೂ ಮತ್ತೊಂದು ಹುದ್ದೆಯನ್ನು ಪ್ರಾಧಿಕಾರದಲ್ಲಿನ ಸಹಾಯಕ ಕಾರ್ಯಪಾಲಕ ಅಭಿಯಂತರರ ವೃಂದದಿಂದ ಮುಂಬಡ್ತಿ ಮೂಲಕ ಭರ್ತಿ ಮಾಡುವುದು.
2	ಸಹಾಯಕ ಕಾರ್ಯಪಾಲಕ ಅಭಿಯಂತರರು ವೇತನ ಶ್ರೇಣಿ : 14050 ರಿಂದ 25050	6	2	ಸೃಜಿಸಲಾಗಿರುವ 2 ಸಹಾಯಕ ಕಾರ್ಯಪಾಲಕ ಅಭಿಯಂತರರ ಹುದ್ದೆಗಳಿಗೆ ಪ್ರಾಧಿಕಾರದ ಸಹಾಯಕ ಅಭಿಯಂತರರ ವೃಂದದಿಂದ ನಿಯಮಾನುಸಾರ ಮುಂಬಡ್ತಿ ಮೂಲಕ ಭರ್ತಿ ಮಾಡುವುದು.
3	ತಾಂತ್ರಿಕ ಸಹಾಯಕರು ವೇತನ ಶ್ರೇಣಿ 14050 ರಿಂದ 25050	-	3	ಸೃಜಿಸಲಾಗಿರುವ 3 ತಾಂತ್ರಿಕ ಸಹಾಯಕರ ಹುದ್ದೆಗಳನ್ನು ಪ್ರಾಧಿಕಾರದ ಸಹಾಯಕ ಅಭಿಯಂತರರ ವೃಂದದಿಂದ ನಿಯಮಾನುಸಾರ ಮುಂಬಡ್ತಿ ಮೂಲಕ ಭರ್ತಿ ಮಾಡುವುದು. ಈ ಪೈಕಿ ಒಂದು ಹುದ್ದೆಯನ್ನು ಅಧೀಕ್ಷಕ ಅಭಿಯಂತರರಿಗೆ ತಾಂತ್ರಿಕ ಸಹಾಯಕರಾಗಿ ಹಾಗೂ ಉಳಿದ ಎರಡು ಹುದ್ದೆಗಳನ್ನು ಕಾರ್ಯಪಾಲಕ ಅಭಿಯಂತರರಿಗೆ ತಾಂತ್ರಿಕ ಸಹಾಯಕರಾಗಿ ಕರ್ತವ್ಯ ನಿರ್ವಹಿಸುವುದು.

4	ತಾಂತ್ರಿಕ ಸಲಹೆಗಾರರು ಆಯುಕ್ತರಿಗೆ ವೇತನ ಶ್ರೇಣಿ : 14050 ರಿಂದ 25050	–	1	ಸೃಜಿಸಲಾಗಿರುವ 1 ತಾಂತ್ರಿಕ ಸಲಹೆಗಾರರ ಹುದ್ದೆಯನ್ನು ಪ್ರಾಧಿಕಾರದ ಸಹಾಯಕ ಅಭಿಯಂತರರ ವೃಂದದಿಂದ ನಿಯಮಾನುಸಾರ ಮುಂಬಡ್ತಿ ಮೂಲಕ ಭರ್ತಿ ಮಾಡುವುದು. (ಈ ಹುದ್ದೆಯನ್ನು ಆಯುಕ್ತರಿಗೆ ತಾಂತ್ರಿಕ ಸಲಹೆಗಾರರಾಗಿ ಕರ್ತವ್ಯ ನಿರ್ವಹಿಸಲು ನಿಯೋಜಿಸುವುದು).
5	ನಗರ ಯೋಜನಾ ಸಹಾಯಕ ನಿರ್ದೇಶಕರು ವೇತನ ಶ್ರೇಣಿ : 14050 ರಿಂದ 25050	–	1	ಸೃಜಿಸಲಾಗಿರುವ 1 ನಗರ ಯೋಜನಾ ಸಹಾಯಕ ನಿರ್ದೇಶಕರ ಹುದ್ದೆಯನ್ನು ಪ್ರಾಧಿಕಾರದ ನಗರ ಯೋಜನಾ ಶಾಖೆಯಲ್ಲಿ ಅನುಭವ ಹೊಂದಿರುವ ಪ್ರಾಧಿಕಾರದ ಸಹಾಯಕ ಅಭಿಯಂತರರ ಹುದ್ದೆಯಲ್ಲಿ ನಿಯಮಾನುಸಾರ ಮುಂಬಡ್ತಿ ಮೂಲಕ ಭರ್ತಿ ಮಾಡುವುದು. ಈ ಹುದ್ದೆಯನ್ನು ನಗರ ಯೋಜನಾ ಸದಸ್ಯರ/ ಜಂಟಿ ನಿರ್ದೇಶಕರ ಅಧೀನದಲ್ಲಿ ಕರ್ತವ್ಯ ನಿರ್ವಹಿಸಲು ನಿಯೋಜಿಸುವುದು.
6	ಸಹಾಯಕ ಕಾರ್ಯದರ್ಶಿ ವೇತನ ಶ್ರೇಣಿ : 11400 ರಿಂದ 21600	1	1	ಸೃಜಿಸಲಾಗಿರುವ 1 ಸಹಾಯಕ ಕಾರ್ಯದರ್ಶಿ ಹುದ್ದೆಯನ್ನು ಪ್ರಾಧಿಕಾರದ ವ್ಯವಸ್ಥಾಪಕರಿಗೆ ಬಡ್ತಿ ನೀಡುವುದರ ಮೂಲಕ ತುಂಬುವುದು.
7	ಸಹಾಯಕ ನಿರ್ದೇಶಕರು ತೋಟಗಾರಿಕೆ ವೇತನ ಶ್ರೇಣಿ : 11400 ರಿಂದ 21600	–	1	ಸೃಜಿಸಲಾಗಿರುವ 1 ಸಹಾಯಕ ನಿರ್ದೇಶಕರ ಹುದ್ದೆಯನ್ನು ಪ್ರಾಧಿಕಾರದ ಸಹಾಯಕ ತೋಟಗಾರಿಕಾ ಅಧಿಕಾರಿ ಹುದ್ದೆಯಿಂದ ನಿಯಮಾನುಸಾರ ಮುಂಬಡ್ತಿ ಮೂಲಕ ಭರ್ತಿ ಮಾಡುವುದು.
8	ವಿಶೇಷ ತಹಶೀಲ್ದಾರ್ ವೇತನ ಶ್ರೇಣಿ : 11400 ರಿಂದ 21600	1	2	ಸೃಜಿಸಲಾಗಿರುವ 2 ವಿಶೇಷ ತಹಶೀಲ್ದಾರ್ ಹುದ್ದೆಗಳನ್ನು ಕಂದಾಯ ಇಲಾಖೆ ತಹಶೀಲ್ದಾರ್ ಹುದ್ದೆಯಿಂದ ನಿಯೋಜನೆ ಮೇಲೆ ಭರ್ತಿ ಮಾಡುವುದು
9	ಸಿಸ್ಟಂ ಅನಾಲಿಸ್ಟ್ ವೇತನ ಶ್ರೇಣಿ : 18150 ರಿಂದ 26925	–	1	ಪ್ರಸ್ತುತ ಪ್ರಾಧಿಕಾರದಲ್ಲಿ ಈ ಹುದ್ದೆಯನ್ನು ಪಡೆಯಲು ಶೈಕ್ಷಣಿಕ ಅರ್ಹತೆ ಹೊಂದಿದವರಿಗೆ ಬಡ್ತಿ ನೀಡಬಹುದಾಗಿದೆ ಅಥವಾ ಪ್ರಾಧಿಕಾರದಲ್ಲಿ ಲಭ್ಯವಿಲ್ಲದಿದ್ದಲ್ಲಿ ಎನ್.ಐ.ಸಿ., ಇಂದ ನಿಯೋಜನೆ ಮೂಲಕ ಭರ್ತಿ ಮಾಡಬಹುದಾಗಿದೆ.
10	ವ್ಯವಸ್ಥಾಪಕರು ವೇತನ ಶ್ರೇಣಿ : 10000 ರಿಂದ 18150	4	4	2 ಹುದ್ದೆಗಳನ್ನು ಕಂದಾಯ ಇಲಾಖೆಯಿಂದ ಪ್ರತಿನಿಯೋಜನೆ ಮೇರೆಗೆ ಹಾಗೂ ಉಳಿದ 6 ಹುದ್ದೆಗಳನ್ನು ಪ್ರಾಧಿಕಾರದ ಪ್ರಥಮ ದರ್ಜೆ ಸಹಾಯಕರ/ ಶೀಘ್ರಲಿಪಿಗಾರರ ವೃಂದದಿಂದ 1:8ರ ಅನುಪಾತದಲ್ಲಿ ಬಡ್ತಿ ನೀಡುವುದು.
11	ಪ್ರಥಮ ದರ್ಜೆ ರಾಜಸ್ವ ನಿರೀಕ್ಷಕರು ವೇತನ ಶ್ರೇಣಿ : 7275 ರಿಂದ 13350	2	3	ಪ್ರಥಮ ದರ್ಜೆ ರಾಜಸ್ವ ನಿರೀಕ್ಷಕರ ಹುದ್ದೆಗಳನ್ನು ಕಂದಾಯ ಇಲಾಖೆಯಿಂದ ನಿಯೋಜನೆ ಮೇಲೆ ತುಂಬುವುದು.
12	ಲೆಕ್ಕ ಗುಮಾಸ್ತರು ವೇತನ ಶ್ರೇಣಿ : 7275 ರಿಂದ 13350	2	2	ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ತುಂಬಬಹುದು.
13	ಪ್ರಥಮ ದರ್ಜೆ ಮೋಜಣಿದಾರರು ವೇತನ ಶ್ರೇಣಿ : 7275 ರಿಂದ 13350	1	2	ಪ್ರಥಮ ದರ್ಜೆ ಮೋಜಣಿದಾರರ ಹುದ್ದೆಗಳನ್ನು ಭೂ ಮಾಪನ ಇಲಾಖೆಯಿಂದ ಪ್ರತಿ ನಿಯೋಜನೆ ಮೇರೆಗೆ ಭರ್ತಿ ಮಾಡುವುದು.
	ಒಟ್ಟು ಹುದ್ದೆ		**24**	

ಈ ಆದೇಶವನ್ನು ಆರ್ಥಿಕ ಇಲಾಖೆಯ ಸಂ. ಆಇ 553 ವೆಚ್ಚ-9/2010, ದಿನಾಂಕ: 17-1-2011 ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ಎಂ. ಹಿರೇಮಠ್
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಪಿ.ಆರ್. 336

ಇಂಧನ ಸಚಿವಾಲಯ

ವಿಷಯ : ಮೆ: ಇಂಡೊವಿಂಡ್ ಎನರ್ಜಿ ಲಿಮಿಟೆಡ್ ರವರಿಗೆ 1.92 ಮೆ.ವ್ಯಾ. ಪವನ ವಿದ್ಯುತ್ ಯೋಜನೆಯನ್ನು ಮೆ: ಆರ್‌ಪಿಜಿ ಕೇಬಲ್ಸ್ ಲಿಮಿಟೆಡ್ ರವರಿಂದ ವರ್ಗಾಯಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ : ಡಿಇ 55 ಎನ್‌ಸಿಇ 1996, ದಿನಾಂಕ : 17-1-1996.

2. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಕೆಆರ್‌ಇಡಿ/08/IWEL-1.92 MW (RPG Cables Ltd/2011/4098, ದಿನಾಂಕ : 17/18-10-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಮೆ: ಆರ್‌ಪಿಜಿ ಕೇಬಲ್ಸ್ ಲಿಮಿಟೆಡ್ ಕಂಪನಿಗೆ ರಾಯಚೂರು ಜಿಲ್ಲೆಯ ಹನುಮಸಾಗರ ಇಲ್ಲಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಸ್ವಂತ ಬಳಕೆಗಾಗಿ ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ: ಆರ್‌ಪಿಜಿ ಕೇಬಲ್ಸ್ ಲಿಮಿಟೆಡ್ ಕಂಪನಿಗೆ ರಾಯಚೂರು ಜಿಲ್ಲೆಯ ಹನುಮಸಾಗರದಲ್ಲಿ ಮಂಜೂರಾಗಿರುವ (ಪ್ರಸಕ್ತ ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕು, ಮಾವಿನಇಟಗಿ ಹಾಗೂ ಹನುಮಸಾಗರ ಗ್ರಾಮಗಳಲ್ಲಿ) 2.00 ಮೆಗಾ ವ್ಯಾಟ್‌ನಲ್ಲಿ ಅನುಷ್ಠಾನಗೊಂಡಿರುವ 1.92 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಮೆ: ಇಂಡೊವಿಂಡ್ ಎನರ್ಜಿ ಲಿಮಿಟೆಡ್ ಕಂಪನಿಗೆ ವರ್ಗಾಯಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ :-

ಸರ್ಕಾರಿ ಆದೇಶ ಸಂಖ್ಯೆ : ಇಎನ್ 415 ಎನ್‌ಸಿಇ 2011, ಬೆಂಗಳೂರು, ದಿನಾಂಕ : 22-11-2011

ಮೆ: ಆರ್‌ಪಿಜಿ ಕೇಬಲ್ಸ್ ಲಿಮಿಟೆಡ್ ಕಂಪನಿಗೆ ರಾಯಚೂರು ಜಿಲ್ಲೆಯ ಹನುಮಸಾಗರದಲ್ಲಿ ಮಂಜೂರಾಗಿರುವ (ಪ್ರಸಕ್ತ ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕು, ಮಾವಿನಇಟಗಿ ಹಾಗೂ ಹನುಮಸಾಗರ ಗ್ರಾಮಗಳಲ್ಲಿ) 2.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಿಂದ ಅನುಷ್ಠಾನಗೊಂಡಿರುವ 1.92 ಮೆ.ವ್ಯಾ. ಸಾಮರ್ಥ್ಯದ ಯೋಜನೆಯನ್ನು ಮೆ: ಇಂಡೊವಿಂಡ್ ಎನರ್ಜಿ ಲಿಮಿಟೆಡ್ ಕಂಪನಿಗೆಯವರಿಗೆ ಕೊಪ್ಪಳ ಜಿಲ್ಲೆಯ, ಕುಷ್ಟಗಿ ತಾಲ್ಲೂಕಿನ ಮಾವಿನಇಟಗಿ ಮತ್ತು ಹನುಮಸಾಗರ ಗ್ರಾಮಗಳಲ್ಲಿ ಈ ಕೆಳಗಿನ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹಾಗೂ ಕೆಳಕಂಡ ಷರತ್ತಿಗೊಳಪಟ್ಟು ವರ್ಗಾಯಿಸಲಾಗಿದೆ :-

Sl. No.	Village Name	Taluk & District	Land Survey Number	Extent (A-G)	Wind Turbine Generator location Nos.
1.	Mavinaitagi	Kustagi/Koppal	75/1	5.27	K24/H K25/H
2.	Mavinaitagi		75/4	2.33	K23/H
3.	Hanumasagar		3	8.05	K20/H K21/H K22/H

1. ಮೆ: ಇಂಡೊವಿಂಡ್ ಎನರ್ಜಿ ಲಿಮಿಟೆಡ್ ರವರು 45 ದಿನಗಳ ಒಳಗೆ ಸರ್ಕಾರದೊಂದಿಗೆ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.
2. ಮೆ: ಇಂಡೊವಿಂಡ್ ಎನರ್ಜಿ ಲಿಮಿಟೆಡ್ ರವರು ಸಂಬಂಧಪಟ್ಟ ಎಸ್ಕಾಂ/ಕವಿಪ್ರನಿನಿ ನೊಂದಿಗೆ ವೀಲಿಂಗ್ ಮತ್ತು ಬ್ಯಾಂಕಿಂಗ್ ಮಾಡಿಕೊಳ್ಳಲು ಅನುಮತಿಸಿದೆ.
3. ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಓದಲಾದ (1) ರ ಹಂಚಿಕೆ ಆದೇಶದ ಇತರ ನಿಬಂಧನೆಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಸುರೇಶ್. ಬಿ. ಕೃಷ್ಣಪ್ಪನವರ್

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 8 ಇಂಧನ ಇಲಾಖೆ.

ಇಂಧನ ಸಚಿವಾಲಯ

ವಿಷಯ : ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ 2011-12ರ ಹಣಕಾಸು ವರ್ಷದಲ್ಲಿ ಮೂರನೇ ಕಂತು ಸಹಾಯಾನುದಾನದ ಹಣ ಬಿಡುಗಡೆ ಕುರಿತು.

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ : ಇಎನ್ 21 ಪಿಎಸ್‌ಆರ್ 2011, ದಿನಾಂಕ : 20-4-2011.

2. ಸರ್ಕಾರಿ ಆದೇಶ ಸಂಖ್ಯೆ : ಇಎನ್ 21 ಪಿಎಸ್‌ಆರ್ 2011, ದಿನಾಂಕ : 6-7-2011.

ಪ್ರಸ್ತಾವನೆ :

1. 2011-12ನೇ ಸಾಲಿನ ಆಯವ್ಯಯ ಸವಿವರ ವೆಚ್ಚದ ಅಂದಾಜುಗಳ ಸಂಪುಟ-7 ರಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಸಹಾಯಾನುದಾನ ಸಲುವಾಗಿ 408 ಲಕ್ಷ ರೂ.ಗಳ ಅವಕಾಶವನ್ನು ಕಲ್ಪಿಸಲಾಗಿದೆ. ಈ ಸಹಾಯಾನುದಾನವನ್ನು 4 ಕಂತುಗಳಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಬಿಡುಗಡೆ ಮಾಡಲು ಉದ್ದೇಶಿಸಲಾಗಿದೆ.

2. ಮೇಲೆ ಓದಲಾದ ಸರ್ಕಾರಿ ಆದೇಶ 1 ಮತ್ತು 2ರಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಸಿಬ್ಬಂದಿ ಮತ್ತು ಸಾಮಾನ್ಯ ವೆಚ್ಚ ಸಲುವಾಗಿ 2011-12ನೇ ಸಾಲಿಗೆ ಮೊದಲನೇ ಹಾಗೂ ಎರಡನೇ ತ್ರೈಮಾಸಿಕ ಅವಧಿಗೆ ಸಹಾಯಾನುದಾನ ರೂ. 2,04,00,000/-ನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಬಿಡುಗಡೆ ಮಾಡಲಾಗಿರುತ್ತದೆ.

3. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಸಿಬ್ಬಂದಿ ಮತ್ತು ಸಾಮಾನ್ಯ ವೆಚ್ಚ ಸಲುವಾಗಿ 2011-12ನೇ ಸಾಲಿಗೆ ಮೂರನೇ ತ್ರೈಮಾಸಿಕ ಅವಧಿಗೆ ಸಹಾಯಾನುದಾನ ರೂ. 1,02,00,000/-ನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗಕ್ಕೆ ಬಿಡುಗಡೆ ಮಾಡುವ ಬಗ್ಗೆ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಇಎನ್ 21 ಪಿಎಸ್‌ಆರ್ 2011, ಬೆಂಗಳೂರು, ದಿನಾಂಕ : 17-11-2011

ಸರ್ಕಾರವು, 2011-12ನೇ ಹಣಕಾಸು ವರ್ಷದ ಮೂರನೇ ತ್ರೈಮಾಸಿಕ ಅವಧಿಗೆ "2801-80-101-1-07-101 ಸಹಾಯಾನುದಾನ (ಯೋಜನೇತರ)" ಲೆಕ್ಕ ಶೀರ್ಷಿಕೆಯಡಿ ಸಿಬ್ಬಂದಿ ಮತ್ತು ಸಾಮಾನ್ಯ ವೆಚ್ಚ ಸಲುವಾಗಿ ರೂ. 1,02,00,000/- (ಒಂದು ಕೋಟಿ ಎರಡು ಲಕ್ಷ ರೂ.ಗಳು ಮಾತ್ರ) ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಬಿಡುಗಡೆ ಮಾಡಿದೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ ಇವರ ಮೇಲು ರುಜುವನ್ನು "Payees Receipt" ನಲ್ಲಿ ಪಡೆದು ಹಣವನ್ನು ಪಡೆಯತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 21 ಟಿಎಫ್‌ಪಿ 2006, ದಿನಾಂಕ : 2-9-2006, ಎಫ್‌ಡಿ 1 ಟಿಎಫ್‌ಪಿ 2008 ದಿನಾಂಕ : 16-5-2008, ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ : 20-4-2010 ಮತ್ತು ಎಫ್‌ಡಿ 4 ಬಿಪಿಇ 2011, ದಿನಾಂಕ : 31-3-2011ರಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್. ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.

ಪಿ.ಆರ್. 9

ಇಂಧನ ಸಚಿವಾಲಯ

ವಿಷಯ : ಮೆ: ಕುಕ್ಕೆ ಹೈಡ್ರೋ ಪ್ರಾಜೆಕ್ಟ್ ಪ್ರೈವೇಟ್ ಲಿಮಿಟೆಡ್ ರವರ ಕುಕ್ಕೆ ಸ್ಟೇಜ್-1 ಕಿರು ಜಲ ವಿದ್ಯುತ್ ಯೋಜನೆಯನ್ನು 12.50 ಮೆ.ವ್ಯಾ. ನಿಂದ 24.00 ಮೆ.ವ್ಯಾ. ಸಾಮರ್ಥ್ಯಕ್ಕೆ ಹೆಚ್ಚಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ : ಇಎನ್ 126 ಎನ್‌ಸಿಇ 2011 (1), ದಿನಾಂಕ : 26-3-2011.
2. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಕೆಆರ್‌ಇಡಿಎಲ್/06/SH-205A/Kukke Stage-1 MHS/4218, ದಿನಾಂಕ : 29-10-2011.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೆ: ಕುಕ್ಕೆ ಹೈಡ್ರೋ ಪ್ರಾಜೆಕ್ಟ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ದಕ್ಷಿಣ ಕನ್ನಡ ಜಿಲ್ಲೆ, ಪುತ್ತೂರು ತಾಲ್ಲೂಕಿನ, ಪೆರಾಬೆ ಕಂತೂರು ಮತ್ತು ಚಾರ್ವಾಕ ಗ್ರಾಮಗಳಲ್ಲಿ ಕುಮಾರಧಾರ ನದಿಗೆ ಅಡ್ಡಲಾಗಿ 12.50 ಮೆ.ವ್ಯಾ ಸಾಮರ್ಥ್ಯದ ಕುಕ್ಕೆ ಸ್ಟೇಜ್-1 ಕಿರು ಜಲ ವಿದ್ಯುತ್ ಯೋಜನೆಯನ್ನು ಅನುಷ್ಠಾನ ಮಾಡಲು ಅನುಮತಿ ನೀಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ರವರು ಮೆ: ಕುಕ್ಕೆ ಹೈಡ್ರೋ ಪ್ರಾಜೆಕ್ಟ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರು ಕುಮಾರಧಾರ ನದಿಗೆ ಅಡ್ಡಲಾಗಿ 12.50 ಮೆ.ವ್ಯಾ ಸಾಮರ್ಥ್ಯದ ಕುಕ್ಕೆ ಸ್ಟೇಜ್-1 ಕಿರು ಜಲ ವಿದ್ಯುತ್ ಯೋಜನೆಯ ಸ್ಥಳವು ಪಶ್ಚಿಮ ಘಟ್ಟಗಳ ಪ್ರದೇಶದಲ್ಲಿ ಬರುತ್ತಿದ್ದರೂ, ಖಾಸಗಿ ಜಮೀನಿನಲ್ಲಿ ಬರುತ್ತದೆ. ಸರ್ಕಾರಿ ಜಮೀನು ಮತ್ತು ಅರಣ್ಯ ಭೂಮಿ ಹೊಂದಿರುವುದಿಲ್ಲವಾದ್ದರಿಂದ ಮತ್ತು ಖಾಸಗಿ ಜಮೀನಿನ ಮಾಲೀಕರು ಯೋಜನೆಗೆ ಅಗತ್ಯವಿರುವ ಜಮೀನಿನ ಮಾರಾಟಕ್ಕೆ ಒಪ್ಪಿಗೆ ನೀಡಿದ್ದಾರೆ ಹಾಗೂ ಈ ಯೋಜನೆಯು ನ್ಯಾಯಾಲಯದ ಮುಂದಿರುವ ಪಿಐಎಲ್‌ಗೆ ಸಂಬಂಧಿಸಿರುವುದಿಲ್ಲ. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಯೋಜನೆಗಳು ಯಾವುದೂ ಈ ಯೋಜನಾ ಪ್ರದೇಶದಲ್ಲಿ ಇರುವುದಿಲ್ಲ. ಪ್ರಸ್ತುತ ಕುಕ್ಕೆ ಸ್ಟೇಜ್-1 ಕಿರು ಜಲ ವಿದ್ಯುತ್ ಯೋಜನೆಯನ್ನು ಮಾತ್ರ ಪರಿಗಣಿಸಿ ಮಂಜೂರಾಗಿರುವ 12.50 ಮೆ.ವ್ಯಾ. ಸಾಮರ್ಥ್ಯದಿಂದ 24.00 ಮೆ.ವ್ಯಾ. ಸಾಮರ್ಥ್ಯಕ್ಕೆ ಹೆಚ್ಚಿಸಲು ಹಾಗೂ ಅಭಿವೃದ್ಧಿದಾರರು ಈ ಯೋಜನೆಯನ್ನು ಡಿಸೆಂಬರ್ 2014ರೊಳಗಾಗಿ ಅನುಷ್ಠಾನಗೊಳಿಸುವುದಾಗಿಯೂ ತಿಳಿಸಿದ್ದರ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ :-

ಸರ್ಕಾರಿ ಆದೇಶ ಸಂಖ್ಯೆ : ಇಎನ್ 126 ಎನ್‌ಸಿಇ 2011, ಬೆಂಗಳೂರು, ದಿನಾಂಕ : 28-11-2011

ಮೆ: ಕುಕ್ಕೆ ಹೈಡ್ರೋ ಪ್ರಾಜೆಕ್ಟ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ದಕ್ಷಿಣ ಕನ್ನಡ ಜಿಲ್ಲೆ, ಪುತ್ತೂರು ತಾಲ್ಲೂಕಿನ, ಪೆರಾಬೆ ಕಂತೂರು ಮತ್ತು ಚಾರ್ವಾಕ ಗ್ರಾಮಗಳಲ್ಲಿ ಕುಮಾರಧಾರ ನದಿಗೆ ಅಡ್ಡಲಾಗಿ 12.50 ಮೆ.ವ್ಯಾ ಸಾಮರ್ಥ್ಯದ ಕುಕ್ಕೆ ಸ್ಟೇಜ್-1 ಕಿರು ಜಲ ವಿದ್ಯುತ್ ಯೋಜನೆಯ ಹಂಚಿಕೆ ಸಾಮರ್ಥ್ಯವನ್ನು 24.00 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸಲು ಈ ಕೆಳಕಂಡ ಷರತ್ತಿಗೊಳಪಟ್ಟು ಅನುಮೋದನೆ ನೀಡಲಾಗಿದೆ :-

1. ಮೆ: ಕುಕ್ಕೆ ಹೈಡ್ರೋ ಪ್ರಾಜೆಕ್ಟ್ ಪ್ರೈವೇಟ್ ಲಿಮಿಟೆಡ್ ರವರು 45 ದಿನಗಳ ಒಳಗೆ ಸರ್ಕಾರದೊಂದಿಗೆ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.
2. ಸದರಿ ಕಂಪನಿಯು ಯೋಜನೆಯನ್ನು ಡಿಸೆಂಬರ್ 2013 ರೊಳಗಾಗಿ ಅನುಷ್ಠಾನಗೊಳಿಸಬೇಕು.
3. ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.
4. ಮೇಲೆ ಓದಲಾದ (1) ರ ಆದೇಶದ ಇತರ ನಿಬಂಧನೆಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್. ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 10

ಇಂಧನ ಸಚಿವಾಲಯ

ವಿಷಯ : ಕರ್ನಾಟಕ ವಿದ್ಯುತ್ ನಿಗಮ ನಿಯಮಿತಕ್ಕೆ 5.00 ಮೆ.ವ್ಯಾ. ಸಾಮರ್ಥ್ಯದ ಸೌರ ವಿದ್ಯುತ್ ಘಟಕ ಸ್ಥಾಪಿಸಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆ : 1. ಅಧಿಸೂಚನೆ ಸಂಖ್ಯೆ : ಇಎನ್ 61 ಎನ್‌ಸಿಇ 2011, ದಿನಾಂಕ : 1-7-2011.

2. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಸಿಇ (ಇಐ&ಟಿಎ)/ಸೌರಶಕ್ತಿ/230, ದಿನಾಂಕ : 28-7-2011.

ಪ್ರಸ್ತಾವನೆ :

ಕರ್ನಾಟಕ ನವೀಕರಿಸಬಹುದಾದ ಇಂಧನ ನೀತಿಯಡಿಯಲ್ಲಿ ಸೌರವಿದ್ಯುತ್ತನ್ನು ಉತ್ತೇಜಿಸುವ ಮುಖ್ಯ ಉದ್ದೇಶದಿಂದ ಮೇಲೆ ಓದಲಾದ (1)ರ ಅಧಿಸೂಚನೆಯಲ್ಲಿ ಸರ್ಕಾರವು ಸೌರ ವಿದ್ಯುತ್ ನೀತಿ 2011-16ರನ್ನು ಪ್ರಕಟಿಸಿರುತ್ತದೆ. ಈ ನೀತಿಯ ನಿಯಮ (9) ಈ ಕೆಳಕಂಡಂತಿವೆ :

ಸೌರ ವಿದ್ಯುತ್ತನ್ನು ಹೊರ ರಾಜ್ಯದ ಶಾಖೋತ್ಪನ್ನ ವಿದ್ಯುತ್‌ನೊಂದಿಗೆ ಸಂಯೋಜಿಸಿ, ಕೆ.ಇ.ಆರ್.ಸಿ. ಯಿಂದ ಅನುಮೋದನೆಗೊಳಪಟ್ಟು, ಸರ್ಕಾರವು ನಿಗದಿ ಪಡಿಸಿದ ದರದಂತೆ ವಿದ್ಯುತ್ ನೀಡುವ ಸಲುವಾಗಿ, ಕೇಂದ್ರ ಅಥವಾ ಕರ್ನಾಟಕ ರಾಜ್ಯದ ಸ್ವಾಮ್ಯಕ್ಕೊಳಪಟ್ಟ ಸಂಸ್ಥೆಗಳಿಂದ ಸ್ಥಾಪಿಸಲ್ಪಡುವ. 50 ಮೆ.ವ್ಯಾ. ಯೋಜನೆ ಸಾಮರ್ಥ್ಯವನ್ನು, ಸೌರ ವಿದ್ಯುತ್ ಘಟಕಗಳಿಗೆ ಹಂಚಿಕೆ ನೀಡುವ ಹಕ್ಕನ್ನು ಸರ್ಕಾರವು ಮೀಸಲಿರಿಸಿಕೊಂಡಿರುತ್ತವೆ. ಗರಿಷ್ಠ 50 ಮೆ.ವ್ಯಾ. ಸೌರ ಶಕ್ತಿಯನ್ನು ಈ ಕಲಮಿನಡಿ ಅನುಮೋದನೆ ನೀಡಲಾಗುತ್ತದೆ ಕಲಂ 4 ರಲ್ಲಿ ಸೂಚಿಸಿರುವ ಒಟ್ಟು ಸಾಮರ್ಥ್ಯದ 200 ಮೆ.ವ್ಯಾ. ವನ್ನೂ ಬಿಟ್ಟು ಇದು ಸೇರಿರುತ್ತದೆ.

ಮೇಲೆ ಓದಲಾದ (2)ರ ದಿನಾಂಕ : 28-7-2011ರ ಪತ್ರದಲ್ಲಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಕಾಗಿನಲೆ ಗ್ರಾಮದ ಸರ್ವೆ ನಂ. 74ರ 50 ಎಕರೆ ಸರ್ಕಾರಿ ಜಮೀನಿನಲ್ಲಿ 5.00 ಮೆ.ವ್ಯಾ. ಸಾಮರ್ಥ್ಯದ ಸೌರ ವಿದ್ಯುತ್ ಘಟಕ ನಿರ್ಮಿಸುವ ಉದ್ದೇಶಹೊಂದಿದ್ದು, ಈ ಸಂಬಂಧ ಈಗಾಗಲೇ ಪ್ರಕ್ರಿಯೆಗಳನ್ನು ಪ್ರಾರಂಭಿಸಿರುವುದರಿಂದ ಈ ಯೋಜನೆಗೆ ಸರ್ಕಾರದಿಂದ ಮಂಜೂರಾತಿಯನ್ನು ನೀಡುವಂತೆ ಕೋರಿರುತ್ತಾರೆ.

ಸೌರ ವಿದ್ಯುತ್ ನೀತಿ 2011-16ರ ಪ್ರಕಾರ ರಾಜ್ಯ ಸರ್ಕಾರ/ಕೇಂದ್ರ ಸರ್ಕಾರದ ನಿಗಮಗಳಿಗೆ ಅನುಮತಿ ನೀಡಲು ಅವಕಾಶ ಇರುವುದರಿಂದ ಕರ್ನಾಟಕ ವಿದ್ಯುತ್ ನಿಗಮ ನಿಯಮಿತಕ್ಕೆ ಬ್ಯಾಡಗಿ ತಾಲ್ಲೂಕಿನ ಕಾಗಿನಲೆ ಗ್ರಾಮದಲ್ಲಿ 5.00 ಮೆ.ವ್ಯಾ. ಸಾಮರ್ಥ್ಯದ ಸೌರ ವಿದ್ಯುತ್ ಘಟಕವನ್ನು ಸ್ಥಾಪಿಸಲು ಅನುಮತಿ ನೀಡುವ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಇಎನ್ 53 ಎನ್‌ಸಿಇ 2011, ಬೆಂಗಳೂರು, ದಿನಾಂಕ : 21-11-2011

ಕರ್ನಾಟಕ ವಿದ್ಯುತ್ ನಿಗಮ ನಿಯಮಿತಕ್ಕೆ ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನ ಕಾಗಿನಲೆ ಗ್ರಾಮದ ಸರ್ವೆನಂ. 74ರಲ್ಲಿನ 50 ಎಕರೆ ಸರ್ಕಾರಿ ಜಮೀನಿನಲ್ಲಿ 5.00 ಮೆ.ವ್ಯಾ. ಸಾಮರ್ಥ್ಯದ ಸೌರ ವಿದ್ಯುತ್ ಘಟಕವನ್ನು ಸ್ಥಾಪಿಸಲು ಸರ್ಕಾರದ ಅನುಮತಿಯನ್ನು ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್. ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.

ಪಿ.ಆರ್. 11

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ವಿಷಯ : ಯಾದಗಿರಿ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಛೇರಿಗೆ ಕೇಂದ್ರ ಸರ್ಕಾರದ ICDS (Integrated Child Development Services) ಯೋಜನೆಯ ಅನುಷ್ಠಾನಕ್ಕೆ ಹುದ್ದೆಗಳನ್ನು ಸೃಜಿಸುವ ಬಗ್ಗೆ-ಆದೇಶ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ : ಕಂವಿ 71 ಭೂದಾಪು 2009, ದಿನಾಂಕ : 26-7-2010.

2. ಸರ್ಕಾರದ ಆದೇಶ ಸಂಖ್ಯೆ : ಮಮಇ 250 ಎಸ್‌ಜೆಡಿ 2010, ದಿನಾಂಕ : 5-11-2010.

3. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ರವರ ಕಛೇರಿಯ ಪತ್ರ ಸಂಖ್ಯೆ : ಮಮಅಇ/ಯೋಜನೆ/08/2010-11 (ಭಾಗ-1) ದಿನಾಂಕ : 23-7-2011 ಹಾಗೂ ದಿನಾಂಕ: 29-9-2011.

ಪ್ರಸ್ತಾವನೆ :

ನೂತನವಾಗಿ ರಚನೆಯಾದ ಯಾದಗಿರಿ ಜಿಲ್ಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಛೇರಿಗೆ ಕೇಂದ್ರ ಸರ್ಕಾರದ ICDS (Integrated Child Development Services) ಯೋಜನೆಯ ಅನುಷ್ಠಾನಕ್ಕೆ ಹುದ್ದೆಗಳನ್ನು ಸೃಜಿಸುವಂತೆ ಕೋರಿ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರವರು ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ದಿನಾಂಕ : 23-7-2011 ಹಾಗೂ 29-9-2011 ರ ಪತ್ರಗಳಲ್ಲಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸರ್ಕಾರವು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಮಮಇ 130 ಎಸ್‌ಜೆಡಿ 2011, ಬೆಂಗಳೂರು, ದಿನಾಂಕ : 24-11-2011

ಯಾದಗಿರಿ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಛೇರಿಗೆ ಕೇಂದ್ರ ಸರ್ಕಾರದ ICDS (Integrated Child Development Services) ಯೋಜನೆಯ ಅನುಷ್ಠಾನಕ್ಕೆ ಈ ಕೆಳಕಂಡ ಹುದ್ದೆಗಳನ್ನು ಸೃಜಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಕ್ರ. ಸಂ.	ಪದನಾಮ	ವೇತನ ಶ್ರೇಣಿ	ಹುದ್ದೆಗಳ ಸಂಖ್ಯೆ
1.	ಕಛೇರಿ ಅಧೀಕ್ಷಕ	ರೂ. 10,000-18150	01
2.	ಸಾಂಖ್ಯಿಕ ಸಹಾಯಕ	ರೂ. 7275-13350	01
3.	ಪ್ರಥಮ ದರ್ಜೆ ಸಹಾಯಕ	ರೂ. 7275-13350	01
4.	ದ್ವಿತೀಯ ದರ್ಜೆ ಸಹಾಯಕ	ರೂ. 5800-10550	01

ಇದರ ವೆಚ್ಚವನ್ನು ಕೇಂದ್ರ ಸರ್ಕಾರದ ICDS ಯೋಜನೆಯಡಿ ರಾಜ್ಯ ಸರ್ಕಾರಕ್ಕೆ ನೀಡುವ ಅನುದಾನದಿಂದ ಭರಿಸತಕ್ಕದ್ದು. ಹಾಗೂ ಸದರಿ ಯೋಜನೆಯು ಮುಕ್ತಾಯಗೊಂಡ ಕೂಡಲೇ ಈ ಹುದ್ದೆಗಳು ಸಹ ರದ್ದಾಗತಕ್ಕದ್ದು (co-terminus)

ಈ ಆದೇಶವನ್ನು ಆರ್ಥಿಕ ಇಲಾಖೆಯ ಸಹಮತಿ ಸಂಖ್ಯೆ : ಆಇ 732 ವೆಚ್ಚ-3/2011, ದಿನಾಂಕ: 16-11-2011ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಬಿ. ಕಮಲಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ-2,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ಪಿ.ಆರ್. 12

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಡಾ॥ ಶಶಿವರ್ಮ ಡಿ., ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಅಗಡಿ, ಹಾವೇರಿ ತಾಲ್ಲೂಕು/ಜಿಲ್ಲೆ ಇವರ ರಾಜೀನಾಮೆಯನ್ನು ಅಂಗೀಕರಿಸುವ ಬಗ್ಗೆ.

ಓದಲಾಗಿದೆ : ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರ ಪತ್ರ ಸಂಖ್ಯೆ: ಜೆಆರ್‌ಓ (3) 97/2011-12, ದಿನಾಂಕ : 29-8-2011.

ಪ್ರಸ್ತಾವನೆ :

ಡಾ॥ ಶಶಿವರ್ಮ ಡಿ., ಇವರು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗೆ ಆಯ್ಕೆಗೊಂಡು, ಸರ್ಕಾರದ ಅಧಿಸೂಚನೆ ಸಂಖ್ಯೆ : ಆಕುಕ/303/ಹೆಚ್‌ಎಸ್‌ಹೆಚ್/2010 ಮತ್ತು ಅಧಿಸೂಚನೆ ಸಂಖ್ಯೆ : ಆಕುಕ 500 ಹೆಚ್‌ಎಸ್‌ಹೆಚ್ 2010, ದಿನಾಂಕ : 12-10-2010ರ ಪ್ರಕಾರ ಪ್ರಾಥಮಿಕ ಆರೋಗ್ಯ ಕೇಂದ್ರ, ಅಗಡಿ, ಹಾವೇರಿ ತಾಲ್ಲೂಕು/ಜಿಲ್ಲೆ ನೇಮಕಾತಿ ಮಾಡಲಾಗಿ ದಿನಾಂಕ : 23-10-2010 ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ನಂತರ ಉನ್ನತ ವ್ಯಾಸಂಗದ ಉದ್ದೇಶಕ್ಕಾಗಿ ರಾಜೀನಾಮೆ ಸಲ್ಲಿಸಿ, ದಿನಾಂಕ : 16-7-2011 ರಿಂದ ಜಾರಿಗೆ ಬರುವಂತೆ ರಾಜೀನಾಮೆಯನ್ನು ಅಂಗೀಕರಿಸಲು ಕೋರಿರುತ್ತಾರೆ. ಇವರ ವಿರುದ್ಧ ಯಾವುದೇ ಇಲಾಖಾ ವಿಚಾರಣೆ ಹಾಗೂ ಸರ್ಕಾರಕ್ಕೆ ಯಾವುದೇ ತರಹದ ಬಾಕಿ ಇರುವುದಿಲ್ಲವಾದ್ದರಿಂದ ದಿನಾಂಕ : 16-7-2011 ರಿಂದ ಜಾರಿಗೆ ಬರುವಂತೆ ರಾಜೀನಾಮೆಯನ್ನು ಅಂಗೀಕರಿಸುವ ಕುರಿತು ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರು ಮೇಲೆ ಓದಲಾದ ಪತ್ರದಲ್ಲಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ : ಆಕುಕ 374 ಹೆಚ್‌ಎಸ್‌ಹೆಚ್ 2011, ಬೆಂಗಳೂರು, ದಿನಾಂಕ : 16-11-2011

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಡಾ॥ ಶಶಿವರ್ಮ ಡಿ, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಅಗಡಿ, ಹಾವೇರಿ ತಾಲ್ಲೂಕು/ಜಿಲ್ಲೆ ಇವರು ವೈಯಕ್ತಿಕ ಕಾರಣದಿಂದ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗೆ ನೀಡಿರುವ ರಾಜೀನಾಮೆಯನ್ನು ದಿನಾಂಕ : 16-7-2011 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಅಂಗೀಕರಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಚಿಕ್ಕೇಗೌಡ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಸೇವೆಗಳು).

ಪಿ.ಆರ್. 13

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಡಾ॥ ಭಾರತಿ ಆರ್, ವೈದ್ಯಾಧಿಕಾರಿ, ಪ್ರಾ.ಆ.ಕೇಂದ್ರ, ದಿಬ್ಬೂರು, ಚಿಕ್ಕಬಳ್ಳಾಪುರ ಜಿಲ್ಲೆ ಇವರನ್ನು ಸೇವೆಯಿಂದ ವಿಮೋಚನೆಗೊಳಿಸುವ ಕುರಿತು.

ಓದಲಾಗಿದೆ : ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರ ಪತ್ರ ಸಂಖ್ಯೆ: ಜೆಆರ್‌ಓ (1) 297/2010-11, ದಿನಾಂಕ : 30-9-2011.

ಪ್ರಸ್ತಾವನೆ :

ಡಾ॥ ಭಾರತಿ ಆರ್. ಇವರು ವಿಶೇಷ ನೇಮಕಾತಿ ಸಮಿತಿಯಿಂದ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗೆ ಆಯ್ಕೆಗೊಂಡು, ಸರ್ಕಾರಿ ಅಧಿಸೂಚನೆ ಸಂಖ್ಯೆ : ಆಕುಕ 122 ಹೆಚ್‌ಎಸ್‌ಹೆಚ್ 2007, ದಿನಾಂಕ : 8-3-2008 ರನ್ವಯ ಪ್ರಾಥಮಿಕ ಆರೋಗ್ಯ ಕೇಂದ್ರ, ದಿಬ್ಬೂರು, ಚಿಕ್ಕಬಳ್ಳಾಪುರ ಜಿಲ್ಲೆ ಇಲ್ಲಿ ದಿನಾಂಕ : 26-2-2008 ರಂದು ಹುದ್ದೆಗೆ ಹಾಜರಾಗಿರುತ್ತಾರೆ. ತದನಂತರ ದಿನಾಂಕ : 1-7-2011 ರಿಂದ ಅನಧಿಕೃತ ಗೈರುಹಾಜರಾಗಿ ಸ್ನಾತಕೋತ್ತರ ವ್ಯಾಸಂಗಕ್ಕೆ ತೆರಳಿರುತ್ತಾರೆ. ಇವರ ಖಾಯಂಪೂರ್ವ ಸೇವಾವಧಿ ಘೋಷಣೆಯಾಗದಿರುವುದರಿಂದ, ಪ್ರೊಬೆಷನರಿ ನಿಯಮಗಳ ಪ್ರಕಾರ ಸೇವೆಯಿಂದ ವಿಮೋಚನೆಗೊಳಿಸುವಂತೆ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರು ಮೇಲೆ ಓದಲಾದ ಪತ್ರದಲ್ಲಿ ಕೋರಿರುತ್ತಾರೆ. ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡ ಆದೇಶ.

ಸರ್ಕಾರಿ ಆದೇಶ ಸಂಖ್ಯೆ : ಆಕುಕ 462 ಹೆಚ್‌ಎಸ್‌ಹೆಚ್ 2011, ಬೆಂಗಳೂರು, ದಿನಾಂಕ : 11-11-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಡಾ॥ ಭಾರತಿ ಆರ್. ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ದಿಬ್ಬೂರು, ಚಿಕ್ಕಬಳ್ಳಾಪುರ ಜಿಲ್ಲೆ ಇವರು ಖಾಯಂಪೂರ್ವ ಸೇವಾವಧಿಯಲ್ಲಿ ದಿನಾಂಕ : 1-7-2011 ರಿಂದ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿರುವುದರಿಂದ ಇವರು ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗೆ ಸೂಕ್ತರಲ್ಲವೆಂದು ಪರಿಗಣಿಸಿ, ಕರ್ನಾಟಕ ನಾಗರೀಕ ಸೇವಾ (ಖಾಯಂಪೂರ್ವ) ನಿಯಮಾವಳಿ 1977ರ ನಿಯಮ 6 ರಡಿಯಲ್ಲಿ ಸದರಿಯವರನ್ನು ದಿನಾಂಕ: 1-7-2011 ರಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ವಿಮೋಚನೆಗೊಳಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಚಿಕ್ಕೇಗೌಡ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಸೇವೆಗಳು).

ಪಿ.ಆರ್. 14

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಡಾ॥ ಆರ್. ಸುನೀಲ್ ಕುಮಾರ್, ವೈದ್ಯಾಧಿಕಾರಿ, ಸ.ಆ. ಕೇಂದ್ರ, ಇಟಗಿ, ಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರ ರಾಜೀನಾಮೆಯನ್ನು ಅಂಗೀಕರಿಸುವ ಬಗ್ಗೆ.

ಓದಲಾಗಿದೆ : ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರ ಪತ್ರ ಸಂಖ್ಯೆ: ಜೆಆರ್‌ಒ (4ಎ) 65/2011-12, ದಿನಾಂಕ : 9-9-2011.

ಪ್ರಸ್ತಾವನೆ :

ಡಾ॥ ಆರ್. ಸುನೀಲ್ ಕುಮಾರ್, ವೈದ್ಯಾಧಿಕಾರಿ, ಇವರು ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆಯಾಗಿ ಸರ್ಕಾರಿ ಅಧಿಸೂಚನೆ ಸಂಖ್ಯೆ : ಆಕುಕ 303 ಹೆಚ್‌ಎಸ್‌ಹೆಚ್ 2010 ದಿನಾಂಕ : 9-9-2010ರನ್ವಯ ಸಮುದಾಯ ಆರೋಗ್ಯ ಕೇಂದ್ರ, ಇಟಗಿ, ಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇಲ್ಲಿ ದಿನಾಂಕ : 18-9-2010 ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ಸದರಿ ವೈದ್ಯರು ದಿನಾಂಕ : 19-9-2010 ರಿಂದ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿದ್ದು, ನಂತರ ದಿನಾಂಕ : 4-3-2011 ರಂದು ಮನವಿ ಸಲ್ಲಿಸಿ, ಹೆಚ್ಚಿನ ವ್ಯಾಸಂಗಕ್ಕೆ ತೆರಳುವುದರಿಂದ ರಾಜೀನಾಮೆಯನ್ನು ಅಂಗೀಕರಿಸುವಂತೆ ಕೋರಿರುತ್ತಾರೆ. ಆದರೆ ಈ ವೈದ್ಯರು ಖಾಯಂಪೂರ್ವ ಸೇವಾವಧಿಯಲ್ಲೇ ಅನಧಿಕೃತ ಗೈರುಹಾಜರಾಗಿರುವುದರಿಂದ ಪ್ರೊಬೆಷನರಿ ನಿಯಮಗಳನ್ವಯ ದಿನಾಂಕ: 19-9-2010 ರಿಂದ ಜಾರಿಗೆ ಬರುವಂತೆ ಸೇವೆಯಿಂದ ವಿಮೋಚನೆಗೊಳಿಸುವಂತೆ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರು ಮೇಲೆ ಓದಲಾದ ಪತ್ರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ವೈದ್ಯರು ರಾಜೀನಾಮೆಯನ್ನು ಸಲ್ಲಿಸಿ ಅಂಗೀಕರಿಸಲು ಕೋರಿರುವುದನ್ನು ಪರಿಗಣಿಸಿ ಈ ಕೆಳಕಂಡಂತೆ ಆದೇಶ.

ಸರ್ಕಾರಿ ಆದೇಶ ಸಂಖ್ಯೆ : ಆಕುಕ 392 ಹೆಚ್‌ಎಸ್‌ಹೆಚ್ 2011, ಬೆಂಗಳೂರು, ದಿನಾಂಕ : 17-11-2011

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಡಾ॥ ಆರ್. ಸುನೀಲ್ ಕುಮಾರ್, ವೈದ್ಯಾಧಿಕಾರಿ, ಸಮುದಾಯ ಆರೋಗ್ಯ ಕೇಂದ್ರ, ಇಟಗಿ, ಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರು ವೈಯಕ್ತಿಕ ಕಾರಣದಿಂದ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗೆ ನೀಡಿರುವ ರಾಜೀನಾಮೆಯನ್ನು ದಿನಾಂಕ : 19-9-2010 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಅಂಗೀಕರಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಚಿಕ್ಕೇಗೌಡ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಸೇವೆಗಳು).

ಪಿ.ಆರ್. 15

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಗೃಹ ವೈದ್ಯ, ಸ್ನಾತಕೋತ್ತರ ಮತ್ತು ಎಂಸಿಹೆಚ್/ಡಿಎಂ/ಫೆಲೋಶಿಪ್ (ಸೂಪರ್ ಸ್ಪೆಷಾಲಿಟಿ) ವಿದ್ಯಾರ್ಥಿಗಳ ಮಾಸಿಕ ಶಿಷ್ಯ ವೇತನ (stipend) ವನ್ನು ಹೆಚ್ಚಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: ಆಕುಕ 122 ಎಂಎಸ್‌ಎಫ್ 2006, ದಿನಾಂಕ 26-06-2006.
2. ಸರ್ಕಾರದ ಆದೇಶ ಸಂಖ್ಯೆ: ಆಕುಕ 28 ಎಂಪಿಎಸ್ 2009, ದಿನಾಂಕ 26-09-2008
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ: ಎಂಇಎಸ್ (2)/49/2008-09, ದಿನಾಂಕ 20-10-2009.
4. ನಿರ್ದೇಶಕರು, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಬೆಂವೈವಿಸಂಸಂ/ಶಿ.ವೇ/9/2011-12, ದಿನಾಂಕ 03-11-2011

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ: (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಗೃಹ ವೈದ್ಯ, ಸ್ನಾತಕೋತ್ತರ ಮತ್ತು ಎಂಸಿಹೆಚ್/ಡಿಎಂ (ಸೂಪರ್ ಸ್ಪೆಷಾಲಿಟಿ) ವಿದ್ಯಾರ್ಥಿಗಳಿಗೆ ಕ್ರಮವಾಗಿ ರೂ. 6,000, ರೂ. 11,000 ಮತ್ತು ರೂ. 13,000/-ಗಳ ಮಾಸಿಕ ಶಿಷ್ಯ ವೇತನ (stipend) ವನ್ನು ನಿಗಧಿಗೊಳಿಸಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಗೃಹ ವೈದ್ಯ, ಸ್ನಾತಕೋತ್ತರ ಮತ್ತು ಎಂಸಿಹೆಚ್/ಡಿಎಂ (ಸೂಪರ್ ಸ್ಪೆಷಾಲಿಟಿ) ವಿದ್ಯಾರ್ಥಿಗಳಿಗೆ ಕ್ರಮವಾಗಿ ರೂ. 8,000, ರೂ. 14,000 ಮತ್ತು ರೂ. 17,000/-ಗಳ ಮಾಸಿಕ ಶಿಷ್ಯ ವೇತನ (stipend) ವನ್ನು ನಿಗಧಿಗೊಳಿಸಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಪತ್ರದಲ್ಲಿ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರು ಕರ್ನಾಟಕ ಕಿರಿಯ ವೈದ್ಯರ ಸಂಘವು ಗೃಹ ವೈದ್ಯ, ಸ್ನಾತಕೋತ್ತರ ಮತ್ತು ಎಂಸಿಹೆಚ್/ಡಿಎಂ (ಸೂಪರ್ ಸ್ಪೆಷಾಲಿಟಿ) ವಿದ್ಯಾರ್ಥಿಗಳ ಮಾಸಿಕ ಶಿಷ್ಯ ವೇತನವನ್ನು ಕ್ರಮವಾಗಿ ರೂ. 12,000, ರೂ. 24,000 ಮತ್ತು ರೂ. 30,000 ಗಳಿಗೆ ಪರಿಷ್ಕರಿಸಿ ನಿಗಧಿಗೊಳಿಸುವಂತೆ ಮನವಿಯನ್ನು ಸಲ್ಲಿಸಿದ್ದು, ಹಾಲಿ ನೀಡುತ್ತಿರುವ (stipend) ಮತ್ತು ಪರಿಷ್ಕೃತ (stipend) ಪಟ್ಟಿಗಳನ್ನು ಲಗತ್ತಿಸಿ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (4) ರಲ್ಲಿ ಓದಲಾದ ಪತ್ರದಲ್ಲಿ ನಿರ್ದೇಶಕರು, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇವರು ಈ ಸಂಸ್ಥೆಯಲ್ಲಿ ಪ್ರಸ್ತುತ ಫೆಲೋಶಿಪ್ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಆಡಳಿತ ಪರಿಷತ್ತಿನ ಅನುಮೋದನೆಯಂತೆ ಮಾಸಿಕ ರೂ. 13,000 ಸ್ಟೈಫಂಡ್‌ನ್ನು ನೀಡಲಾಗುತ್ತಿದೆಯೆಂದು, ಫೆಲೋಶಿಪ್ ವಿದ್ಯಾರ್ಥಿಗಳಿಗೂ ಸಹ ಸೂಪರ್ ಸ್ಪೆಷಾಲಿಟಿ ವಿದ್ಯಾರ್ಥಿಗಳಿಗೆ (ಎಂಸಿಹೆಚ್.ಡಿಎಂ) ನೀಡುವ ರೀತಿಯಲ್ಲಿಯೇ ಶಿಷ್ಯ ವೇತನವನ್ನು ಹೆಚ್ಚಿಸಲು ಶಿಫಾರಸ್ಸು ಮಾಡಿರುತ್ತಾರೆ.

ವಿಷಯವನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದ ನಂತರ, ಗೃಹ ವೈದ್ಯ, ಸ್ನಾತಕೋತ್ತರ ಮತ್ತು ಎಂಸಿಹೆಚ್/ಡಿಎಂ/ಫೆಲೋಶಿಪ್ (ಸೂಪರ್ ಸ್ಪೆಷಾಲಿಟಿ) ವಿದ್ಯಾರ್ಥಿಗಳ ಮಾಸಿಕ ಶಿಷ್ಯ ವೇತನ (stipend) ವನ್ನು ಕ್ರಮವಾಗಿ ರೂ. 15,000/-

ರೂ. 25,000/- ಮತ್ತು ರೂ. 30,000- ಗಳಿಗೆ ಪರಿಷ್ಕರಿಸಿ ದಿನಾಂಕ 01-11-2011 ರಿಂದ ಜಾರಿಗೆ ಬರುವಂತೆ ನಿಗಧಿಗೊಳಿಸಲು ಸರ್ಕಾರವು ತೀರ್ಮಾನಿಸಿ, ಈ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 89 ಎಂಪಿಎಸ್ 2011, ಬೆಂಗಳೂರು, ದಿನಾಂಕ : 08-11-2011.

ಗೃಹ ವೈದ್ಯ, ಸ್ನಾತಕೋತ್ತರ ಮತ್ತು ಎಂಸಿಹೆಚ್/ಡಿಎಂ/ಫೆಲೋಶಿಪ್ (ಸೂಪರ್ ಸ್ಪೆಷಾಲಿಟಿ) ವಿದ್ಯಾರ್ಥಿಗಳ ಮಾಸಿಕ ಶಿಷ್ಯ ವೇತನ (stipend) ವನ್ನು ದಿನಾಂಕ 01-11-2011 ರಿಂದ ಜಾರಿಗೆ ಬರುವಂತೆ ಕೆಳಕಂಡಂತೆ ಪರಿಷ್ಕರಿಸಿ ನಿಗಧಿಗೊಳಿಸಲಾಗಿದೆ.

ವ್ಯಾಸಂಗದ ಹಂತ	ಪ್ರಸ್ತುತ ಇರುವ ದರ	ಪರಿಷ್ಕೃತ ದರ	ಮೊತ್ತ ಅಕ್ಷರಗಳಲ್ಲಿ
ಗೃಹ ವೈದ್ಯ	ರೂ. 8,000	ರೂ. 15,000	(ಹದಿನೈದು ಸಾವಿರ ರೂ.ಗಳು ಮಾತ್ರ
ಸ್ನಾತಕೋತ್ತರ	ರೂ. 14,000	ರೂ. 25,000	(ಇಪ್ಪತ್ತೈದು ಸಾವಿರ ರೂ.ಗಳು ಮಾತ್ರ)
ಎಂಸಿಹೆಚ್/ಡಿಎಂ/ಫೆಲೋಶಿಪ್ (ಸೂಪರ್ ಸ್ಪೆಷಾಲಿಟಿ)	ರೂ. 17,000	ರೂ. 30,000	(ಮೂವತ್ತು ಸಾವಿರ ರೂ.ಗಳು ಮಾತ್ರ)

ಇದಕ್ಕೆ ಸಂಬಂಧಿಸಿದ ಹೆಚ್ಚುವರಿ ವೆಚ್ಚವನ್ನು ಇಲಾಖೆಯ ಆಯವ್ಯಯದ ಉಳಿತಾಯದಿಂದ ಭರಿಸತಕ್ಕದ್ದು

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 1028 ವೆಚ್ಚ-5/2011, ದಿನಾಂಕ 02-09-2011ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎ. ಕೆ. ಭೈರಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ-2
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ)

ಪಿ.ಆರ್. 16

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಡಾ॥ ವಿ. ಆರ್. ನವ್ಯ, ವೈದ್ಯಾಧಿಕಾರಿ, ಸ.ಆ.ಕೇಂದ್ರ, ತಿರುಮಣಿ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ ಇವರನ್ನು ಸೇವೆಯಿಂದ ವಿಮೋಚನೆಗೊಳಿಸುವ ಕುರಿತು.

ಓದಲಾಗಿದೆ : ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರ ಪತ್ರ ಸಂಖ್ಯೆ: ಡಿಪಿಜಿ/ಬೆಂವಿ11/ತು/07/2010-11, ದಿನಾಂಕ 29-11-2010

ಪ್ರಸ್ತಾವನೆ :

ಡಾ॥ ವಿ. ಆರ್. ನವ್ಯ, ಇವರು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗೆ ಆಯ್ಕೆಯಾಗಿ, ಸರ್ಕಾರಿ ಅಧಿಸೂಚನೆ ಸಂಖ್ಯೆ: ಆಕುಕ 739 ಹೆಚ್‌ಎಸ್‌ಹೆಚ್ 2008, ದಿನಾಂಕ 09-01-2009 ರನ್ವಯ ಸಮುದಾಯ ಆರೋಗ್ಯ ಕೇಂದ್ರ, ತಿರುಮಣಿ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ ಇಲ್ಲಿ ದಿನಾಂಕ 05-03-2009 ರಂದು ಹುದ್ದೆಗೆ ಹಾಜರಾಗಿರುತ್ತಾರೆ. ತದನಂತರ ದಿನಾಂಕ 02-04-2009 ರಿಂದ ಅನಧಿಕೃತ ಗೈರು ಹಾಜರಾಗಿದ್ದು, ಸದರಿ ವೈದ್ಯರು ಮನವಿ ಸಲ್ಲಿಸಿ, ಮೂರು ವರ್ಷ ಸ್ನಾತಕೋತ್ತರ ವ್ಯಾಸಂಗಕ್ಕೆ ಆಯ್ಕೆಯಾಗಿರುವುದರಿಂದ ಅನುಮತಿ ನೀಡುವಂತೆ ಕೋರಿರುತ್ತಾರೆ. ಆದರೆ, ನೇಮಕಾತಿ ಷರತ್ತಿನನ್ವಯ ಖಾಯಂಪೂರ್ವ ಸೇವಾವಧಿಯಲ್ಲಿ ಸ್ನಾತಕೋತ್ತರ ವ್ಯಾಸಂಗ ನಡೆಸಲು ಅಥವಾ ಮುಂದುವರಿಸಲು ಅವಕಾಶವಿಲ್ಲದಿರುವುದರಿಂದ ಪ್ರೊಬೇಷನರಿ ನಿಯಮಗಳ ಪ್ರಕಾರ ಸೇವೆಯಿಂದ ವಿಮೋಚನೆಗೊಳಿಸುವಂತೆ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರು ಮೇಲೆ ಓದಲಾದ ಪತ್ರದಲ್ಲಿ ಕೋರಿರುತ್ತಾರೆ. ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 738 ಹೆಚ್‌ಎಸ್‌ಹೆಚ್ 2010, ಬೆಂಗಳೂರು, ದಿನಾಂಕ : 28-11-2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಡಾ॥ ವಿ. ಆರ್. ನವ್ಯ, ವೈದ್ಯಾಧಿಕಾರಿ, ಸಮುದಾಯ ಆರೋಗ್ಯ ಕೇಂದ್ರ, ತಿರುಮಣಿ ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ ಇವರು ಖಾಯಂ ಪೂರ್ವ ಸೇವಾವಧಿಯಲ್ಲಿ ದಿನಾಂಕ 02-04-2009 ರಿಂದ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿರುವುದರಿಂದ ಇವರು ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗೆ ಸೂಕ್ತರಲ್ಲವೆಂದು ಪರಿಗಣಿಸಿ, ಕರ್ನಾಟಕ ನಾಗರೀಕ ಸೇವಾ (ಖಾಯಂ ಪೂರ್ವ) ನಿಯಮಾವಳಿ 1977ರ ನಿಯಮ 6 ರಡಿಯಲ್ಲಿ ಸದರಿಯವರನ್ನು ದಿನಾಂಕ 02-04-2009 ರಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ವಿಮೋಚನೆಗೊಳಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಚಿಕ್ಕೇಗೌಡ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಸೇವೆಗಳು)

ಪಿ.ಆರ್. 17

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಡಾ॥ ಸೈಯದಾ ಹೀನಾ ಕೌಸರ, ವೈದ್ಯಾಧಿಕಾರಿ, ಪ್ರಾ.ಆ.ಕೇಂದ್ರ, ವಿ.ಕೆ. ಸಲಗರ, ಕರುಣಾ ಟ್ರಸ್ಟ್, ಆಳಂದ ತಾ., ಗುಲ್ಬರ್ಗ ಜಿಲ್ಲೆ ಇವರ ರಾಜೀನಾಮೆಯನ್ನು ಅಂಗೀಕರಿಸುವ ಬಗ್ಗೆ.

ಓದಲಾಗಿದೆ : ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರ ಪತ್ರ ಸಂಖ್ಯೆ: ಜೆಆರ್‌ಓ/(4ಎ)/65/2010-12, ದಿನಾಂಕ 09-09-2011

ಪ್ರಸ್ತಾವನೆ :

ಡಾ॥ ಸೈಯದಾ ಹೀನಾ ಕೌಸರ, ವೈದ್ಯಾಧಿಕಾರಿ, ಇವರು ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆಯಾಗಿ, ಸರ್ಕಾರಿ ಅಧಿಸೂಚನೆ ಸಂಖ್ಯೆ: ಆಕುಕ 303 ಹೆಚ್‌ಎಸ್‌ಹೆಚ್ 2010 ದಿನಾಂಕ 10-08-2010 ರನ್ವಯ ಪ್ರಾಥಮಿಕ ಆರೋಗ್ಯ ಕೇಂದ್ರ ವಿ. ಕೆ. ಸಲಗರ, ಕರುಣಾ ಟ್ರಸ್ಟ್, ಆಳಂದ ತಾಲ್ಲೂಕು, ಗುಲ್ಬರ್ಗ ಜಿಲ್ಲೆ ಇಲ್ಲಿ ದಿನಾಂಕ 11-10-2010 ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ಸದರಿ ವೈದ್ಯರು ದಿನಾಂಕ 03-11-2010 ರಿಂದ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿದ್ದು, ನಂತರ ದಿನಾಂಕ 04-06-2011 ರಂದು ಮನವಿ ಸಲ್ಲಿಸಿ, ರಾಜೀನಾಮೆಯನ್ನು ಅಂಗೀಕರಿಸುವಂತೆ ಕೋರಿರುತ್ತಾರೆ. ಆದರೆ ಈ ವೈದ್ಯರು ಖಾಯಂ ಪೂರ್ವ ಸೇವಾವಧಿಯಲ್ಲೇ ಅನಧಿಕೃತ ಗೈರುಹಾಜರಾಗಿರುವುದರಿಂದ ಪ್ರೊಬೇಷನರಿ ನಿಯಮಗಳನ್ವಯ ದಿನಾಂಕ 03-11-2010 ರಿಂದ ಜಾರಿಗೆ ಬರುವಂತೆ ಸೇವೆಯಿಂದ ವಿಮೋಚನೆಗೊಳಿಸುವಂತೆ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರು ಮೇಲೆ ಓದಲಾದ ಪತ್ರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ವೈದ್ಯರು ರಾಜೀನಾಮೆಯನ್ನು ಸಲ್ಲಿಸಿ ಅಂಗೀಕರಿಸಲು ಕೋರಿರುವುದನ್ನು ಪರಿಗಣಿಸಿ ಕೆಳಕಂಡಂತೆ ಆದೇಶ

ಸರ್ಕಾರದ ಆದೇಶ ಸಂಖ್ಯೆ: ಆಕುಕ 392 ಹೆಚ್‌ಎಸ್‌ಹೆಚ್ 2011, ಬೆಂಗಳೂರು, ದಿನಾಂಕ : 29-10-2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಡಾ॥ ಸೈಯದಾ ಹೀನಾ ಕೌಸರ, ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ವಿ.ಕೆ.ಸಲಗರ, ಕರುಣಾ ಟ್ರಸ್ಟ್, ಆಳಂದ ತಾಲ್ಲೂಕು, ಗುಲ್ಬರ್ಗ ಜಿಲ್ಲೆ ಇವರು ವೈಯಕ್ತಿಕ ಕಾರಣದಿಂದ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗೆ ನೀಡಿರುವ ರಾಜೀನಾಮೆಯನ್ನು ದಿನಾಂಕ 03-11-2010 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಅಂಗೀಕರಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಚಿಕ್ಕೇಗೌಡ

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 18 ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಸೇವೆಗಳು)

HEALTH & FAMILY WELFARE SECRETARIAT

Sub : Deputation of Doctors to One Year Diploma Course in Public Health.

Read : Letter No. JRO(M)33/2011-12, dated 01-08-2011 from Commissioner for Health and Family Welfare Services.

Preamble:

The Commissioner, Health and Family Welfare Services in his letter read above has requested to accord approval for deputing seven Medical Officers working in Health and Family Department who have been selected for one year Post Graduate Diploma in Public Health Management (PGDPHM) in the year 2011-12 at Indian Institute of Public Health, Hyderabad Government has examined the said proposal and decided to depute the following two doctors who are eligible for such deputation as per Appendix II – A of the Karnataka Civil Services Rules.

Hence the following Order.

Government Order No. HFW 288 HSH 2011, Bangalore, dated 09-08-2011

Sanction of Government is accorded for deputation of the following two doctors for undergoing one year Post Graduate Diploma in Public Health Management (PGDPHM) studies at Indian Institute of Public Health, Hyderabad.

1. Dr. Gosbal Ramesh Babu, District Malaria Officer, Bellary
2. Dr. Sanjeev R. Nandre, Medical Officer, Primary Health Centre, Uchgaon, Belgaum District.

This deputation of these officials is subject to following conditions:

a. The fees for this course shall be paid pending approval of central Government to the PIP under NRHM.
b. The deputed officials shall submit an undertaking to serve in the Health and Family Welfare Department, Government of Karnataka for a period of minimum 10 years and not to apply for voluntary retirement after the completion of the Diploma on a signed bond.
c. These doctors will not be deputed to work in other department/board Corporation/Autonomous institute (including Medical Education Department) after the completion of Diploma.
d. The deputed officials shall serve only in the designations posts available in the Health and Family Welfare Department Hospitals and shall not claim new post or designation commensurate with their acquiring PG diploma.
e. The deputed officials shall execute a bond in Form 19 appended to the Karnataka Civil Service Rules before they are relieved of their duties to pursue the Diploma.

The Director, Health and Family Welfare services shall relieve the officials selected for deputation from their duties only after obtaining an affidavit and penalty bond in form 19 as provided in the Karnataka Civil Service Rules incorporating the conditions enumerated above.

This order is issued as per the powers delegated to the Departmental Secretaries in Government Order No. FD 02 SRA 2008, dated 05-06-2008.

By Order and in the name of the Governor of Karnataka
Chikkegowda
Under Secretary to Government
Health & Family Welfare Department (Services)

P.R. 19

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : 2011-12ನೇ ಶೈಕ್ಷಣಿಕ ಸಾಲಿಗೆ ಸರ್ಕಾರಿ/ಅನುದಾನಿತ/ಅನುದಾನರಹಿತ ಆಯುಷ್ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಕ್ಕೆ ಸೀಟ್ ಮ್ಯಾಟ್ರಿಕ್ಸ್ ನಿಗಧಿಗೊಳಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಆದೇಶ ಸಂಖ್ಯೆ: ಆಕುಕ 384 ಪಿಟಿಡಿ 2011, ದಿನಾಂಕ 22-10-2011

2) ನಿರ್ದೇಶಕರು, ಆಯುಷ್ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ: ಆಯುಷ್/08/ಅಭಿವೃದ್ಧಿ(1)/2011-12, ದಿನಾಂಕ 10-11-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಸಂ. (1) ಸರ್ಕಾರಿ ಆದೇಶದಲ್ಲಿ, 2011-12ನೇ ಶೈಕ್ಷಣಿಕ ಸಾಲಿಗೆ ರಾಜ್ಯದಲ್ಲಿನ 02 ಸರ್ಕಾರಿ, 04 ಅನುದಾನಿತ ಹಾಗೂ 10 ಅನುದಾನರಹಿತ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಹಾಗೂ 05 ಅನುದಾನರಹಿತ ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪದವಿ ಕೋರ್ಸಿನ ಪ್ರವೇಶಕ್ಕೆ ಸಂಬಂಧಿಸಿದಂತೆ ನಿಯಮಾನುಸಾರ ಸೀಟುಗಳ ಹಂಚಿಕೆಯನ್ನು ಮಾಡಿ, ಸೀಟ್ ಮ್ಯಾಟ್ರಿಕ್ಸ್ ಹಾಗೂ ರೋಸ್ಟರ್ ಪಾಯಿಂಟ್‌ನ್ನು ನಿಗಧಿಪಡಿಸಿ ಆದೇಶಿಸಿದೆ.

ಮೇಲೆ ಓದಲಾದ ಕ್ರಸಂ. (2)ರ ಆಯುಷ್ ನಿರ್ದೇಶಕರ ಪ್ರಸ್ತಾವನೆಯಲ್ಲಿ ತಾರಾನಾಥ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಬಳ್ಳಾರಿ ಹಾಗೂ ಆಯುರ್ವೇದ ಮಹಾವಿದ್ಯಾಲಯ, ಬಿಜಾಪುರ ಈ ಎರಡು ಸಂಸ್ಥೆಗಳಿಗೆ 2011-12ನೇ ಶೈಕ್ಷಣಿಕ ಸಾಲಿನಲ್ಲಿ ವಿದ್ಯಾರ್ಥಿಗಳ ಪ್ರವೇಶಕ್ಕೆ ಕೇಂದ್ರ ಸರ್ಕಾರವು ಅನುಮತಿ/ಮಾನ್ಯತೆ ನೀಡಿಲ್ಲದಿರುವ ಹಿನ್ನೆಲೆಯಲ್ಲಿ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕೇಂದ್ರ ಸರ್ಕಾರದ ಆದೇಶದ ವಿರುದ್ಧ ರಾಜ್ಯ ಉಚ್ಚ ನ್ಯಾಯಾಲಯದ ಧಾರವಾಡ ಹಾಗೂ ಗುಲ್ಬರ್ಗಾ ಸಂಚಾರಿ ಪೀಠಗಳಲ್ಲಿ ರಿಟ್ ಅರ್ಜಿಗಳನ್ನು ಸಲ್ಲಿಸಲಾಗಿದೆ ಎಂದು, ನ್ಯಾಯಾಲಯವು ಕೇಂದ್ರ ಸರ್ಕಾರದ ಆದೇಶಕ್ಕೆ ತಡೆಯಾಜ್ಞೆ ನೀಡಿ ಮಧ್ಯಂತರ ಆದೇಶ ನೀಡಿದ ಹಿನ್ನೆಲೆಯಲ್ಲಿ, ತಾರಾನಾಥ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಬಳ್ಳಾರಿ ಇಲ್ಲಿನ ರಸಶಾಸ್ತ್ರ ಸ್ನಾತಕೋತ್ತರ ಕೋರ್ಸ್‌ನ ತಜ್ಞತೆಯಲ್ಲಿ 07 ಸೀಟುಗಳು ಹಾಗೂ ಆಯುರ್ವೇದ ಮಹಾವಿದ್ಯಾಲಯ, ಬಿಜಾಪುರ ಇಲ್ಲಿನ ರಸಶಾಸ್ತ್ರ ಸ್ನಾತಕೋತ್ತರ ಕೋರ್ಸ್‌ನ ತಜ್ಞತೆಯಲ್ಲಿ 01 ಸೀಟು ಲಭ್ಯವಾಗಿದ್ದು, ಸದರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಲಭ್ಯವಿರುವ ಒಟ್ಟು 08 ಸೀಟುಗಳ ಪ್ರವೇಶಕ್ಕೆ ಅನುಬಂಧ- I & II ರಂತೆ ಸೀಟ್ ಮ್ಯಾಟ್ರಿಕ್ಸ್ ಹಾಗೂ ರೋಸ್ಟರ್ ಪಾಯಿಂಟ್ಸ್‌ಗಳನ್ನು ನಿಗಧಿಪಡಿಸಿ ಆದೇಶ ಹೊರಡಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 384 ಪಿಟಿಡಿ 2011 (ಭಾಗ-1), ಬೆಂಗಳೂರು, ದಿನಾಂಕ : 08-12-2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯ ಉಚ್ಚ ನ್ಯಾಯಾಲಯದ ಅಂತಿಮ ಆದೇಶ ಕಾಯ್ದಿರಿಸಿ 2011-12ನೇ ಶೈಕ್ಷಣಿಕ ಸಾಲಿಗೆ ತಾರಾನಾಥ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಬಳ್ಳಾರಿ ಇಲ್ಲಿನ ರಸಶಾಸ್ತ್ರ ಸ್ನಾತಕೋತ್ತರ ಕೋರ್ಸ್‌ನ ತಜ್ಞತೆಯಲ್ಲಿ ಲಭ್ಯವಾಗಿರುವ 07 ಸರ್ಕಾರಿ ಸೀಟುಗಳು ಹಾಗೂ ಆಯುರ್ವೇದ ಮಹಾವಿದ್ಯಾಲಯ, ಬಿಜಾಪುರ ಇಲ್ಲಿನ ರಸಶಾಸ್ತ್ರ ಸ್ನಾತಕೋತ್ತರ ಕೋರ್ಸ್‌ನ ತಜ್ಞತೆಯಲ್ಲಿ ಲಭ್ಯವಾಗಿರುವ 08 ಸರ್ಕಾರಿ ಸೀಟು, ಒಟ್ಟಾರೆ 01 ಸರ್ಕಾರಿ ಸೀಟುಗಳಿಗೆ ನಿಯಮಾನುಸಾರ ಸೀಟುಗಳ ಹಂಚಿಕೆಯನ್ನು ಮಾಡಿ, ಸೀಟ್ ಮ್ಯಾಟ್ರಿಕ್ಸ್ ಹಾಗೂ ರೋಸ್ಟರ್ ಪಾಯಿಂಟ್‌ನ್ನು ಅನುಬಂಧ I & II ರಲ್ಲಿ ನಿಗದಿಪಡಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಆರ್. ಎಸ್. ಇಟಗಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾರತೀಯ ವೈದ್ಯ ಪದ್ಧತಿ)

Annexure-I

Statement showing the Post Graduate Seats in Government / Aided Private Ayurvedic Medical Colleges for the Academic Year 2011-12

Sl No.	Subjects	TGAMC BELLARY			AMV BIJAPUR		
			1			2	
		TS	IS	GS	TS	MS	GS
1	Dravyaguna	0	0	0	0	0	0
2	Panchakarma	0	0	0	0	0	0
3	Shalyatantra	0	0	0	0	0	0
4	Kayachikitsa	0	0	0	0	0	0

5	Shalakyatantra	0	0	0	0	0	0
6	Rasashastra	7	2	5	5	4	1
7	Ayurveda Siddantha	0	0	0	0	0	0
8	Rachana Shareera	0	0	0	0	0	0
9	Roga Nidhana	0	0	0	0	0	0
10	Baishajya Kalpana	0	0	0	0	0	0
11	Parsooti Tantra & Streeroga	0	0	0	0	0	0
12	Swasthavritha	0	0	0	0	0	0
13	Ayurveda Samhitha	0	0	0	0	0	0
14	Koumara Brithya	0	0	0	0	0	0
15	Manasa Roga	0	0	0	0	0	0
16	AgadaTantra	0	0	0	0	0	0
17	Sangyaharana	0	0	0	0	0	0
18	Kriya Shareera	0	0	0	0	0	0
	Total	7	2	5	5	4	1

TS: Total Seats, IS: Inservice, GS: Government Seats, MS: Management Seats

R. S. Itagi
Under Secretary to Government
Health & Family Welfare Department IMD

Annexure-II

Statement showing the details of seats available for candidates who are born in Karnataka & obtained degree in Karnataka & Classification of Roaster points as per Govt. order No. DPAR/8/SAHI/MA/95, dated 20-06-95 during the academic year 2011-12 in respect of Post Graduate Course in Ayurveda.

Sl No.	Subject	Seats available for candidate who are born & obtained degree in Karnataka	Last roaster point of 2011-12	Roaster point for 2011-12	Name of the colleges & No. of seats available	Remarks
1	2	3	4	5	6	7
1	Rasashastra	Eight	17-III A	18-GM 19-III B 20-GM 21-II A 22-GM 23-SC	TGAMC Bellary 01 TGAMC Bellary 01 TGAMC Bellary 01 TGAMC Bellary 01 TGAMC Bellary 01 AVM Bijapur 01 **In Service Quota:** TGAMC Bellary 01 TGAMC Bellary 01	
				Total	08	

R. S. Itagi
Under Secretary to Government
Health & Family Welfare Department IMD

ಪಿ.ಆರ್. 20

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಆಕುಕ 110 ಪಿಟಿಡಿ 2009 (ಭಾಗ-1), ಬೆಂಗಳೂರು, ದಿನಾಂಕ 04-11-2011

ಅಧಿಸೂಚನೆ ಸಂಖ್ಯೆ: HFW 110 PTD 2009, ದಿನಾಂಕ 22-07-2011ರ Schedule-IIರ ಕ್ರಮ ಸಂಖ್ಯೆ 28ರಲ್ಲಿ ನಮೂದಿಸಿರುವ "Dr. Shilpa Shree P.N." ಎಂಬ ಹೆಸರನ್ನು "Dr. Shilpa P.N." ಎಂಬುದಾಗಿ ಹಾಗೂ ಅವರ ಹೆಸರಿನ ಮುಂದೆ ನಮೂದಿಸಿರುವ ಜನ್ಮದಿನಾಂಕವನ್ನು "28-09-79" ರ ಬದಲಾಗಿ "23-09-79" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಆರ್. ಎಸ್. ಇಟಗಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಭಾರತೀಯ ವೈದ್ಯ ಪದ್ಧತಿ)

ಪಿ. ಆರ್. 21

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವಾಲಯ

ವಿಷಯ : 2011-12ನೇ ಸಾಲಿನ ಬೇಡಿಕೆ ಸಂಖ್ಯೆ: 7 ರಡಿಯಲ್ಲಿ ಲೆಕ್ಕ ಶೀರ್ಷಿಕೆ 2515-00-102-0-08 (ಯೋಜನೆ) ಉಪ ಶೀರ್ಷಿಕೆ "101" ಗೆ ಹೆಚ್ಚುವರಿ ಅನುದಾನ "ಅನಸಾರಾಗ್ರಾ.ಸಂಸ್ಥೆ, ಮೈಸೂರು ರಾಜ್ಯ ಗ್ರಾಮೀಣಾಭಿವೃದ್ಧಿ ತರಬೇತಿ ಸಂಸ್ಥೆಗೆ ಬಿಡುಗಡೆಗೊಳಿಸುವ ಬಗ್ಗೆ.

ಓದಲಾಗಿದೆ : ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು ಇವರ ಪತ್ರ ಸಂಖ್ಯೆ: ರಾಗ್ರಾಸಂ/ಎಸಿಪಿ/ಸಿಆರ್/4/2009-10, ದಿನಾಂಕ 29-6-2011.

ಪ್ರಸ್ತಾವನೆ :

ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಗೆ 2011-12ನೇ ಸಾಲಿಗೆ ಆವರ್ತಕ ಅನುದಾನವನ್ನಾಗಿ ಲೆಕ್ಕ ಶೀರ್ಷಿಕೆ 2515-00-101-0-08 (ಯೋಜನೆ) ರಡಿ ಸಂಸ್ಥೆಯ ಆಡಳಿತ ನಿರ್ವಹಣೆ ಹಾಗೂ ವೇತನ ಮತ್ತಿತರೆ ಭತ್ಯೆಗಳಿಗೆ ಒಟ್ಟಾರೆ ರೂ. 200.00 ಲಕ್ಷಗಳ ಅವಕಾಶವನ್ನು ಕಲ್ಪಿಸಲಾಗಿದೆ. ಈ ಅನುದಾನದಲ್ಲಿ ಸಹಾಯಾನುದಾನದ ಉಪ ಲೆಕ್ಕ ಶೀರ್ಷಿಕೆ "101"ರಲ್ಲಿ ರೂ. 57.60 ಲಕ್ಷಗಳನ್ನು ಒದಗಿಸಿದ್ದು, ಇನ್ನುಳಿದ ಅನುದಾನದ ಮೊತ್ತವನ್ನು ವೇತನ ಮತ್ತು ಇತರೆ ಭತ್ಯೆಗಳ ಉಪ ಶೀರ್ಷಿಕೆಯಡಿ ಒದಗಿಸಲಾಗಿರುತ್ತದೆ. ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯು ಸಹಾಯಾನುದಾನದ ಸಂಸ್ಥೆಯಾಗಿದ್ದು ಅನುದಾನದ ಮೊತ್ತವನ್ನು ಪೇಯಿಸ್ ರಸೀದಿ ಮೂಲಕ ಡ್ರಾ ಮಾಡಿಕೊಳ್ಳಬೇಕಾಗಿರುತ್ತದೆ. ಆದರೆ, ಈಗ ಒದಗಿಸಿರುವ ವೇತನ ಮತ್ತು ಇತರೆ ಭತ್ಯೆಗಳ ಅನುದಾನವನ್ನು ಪಡೆದುಕೊಳ್ಳಲು ಸಂಸ್ಥೆಗೆ ಪ್ರತ್ಯೇಕ ಡ್ರಾಯಿಂಗ್ ಕೋಡ್ ಇರುವುದಿಲ್ಲ. ಆದುದರಿಂದ ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುವ ಮೊತ್ತದ ಸಮಾನ ಪಾಲಿನ ಮೊತ್ತ ರೂ. 104.65 ಲಕ್ಷಗಳನ್ನು ಉಪ ಲೆಕ್ಕ ಶೀರ್ಷಿಕೆ "101" ರಡಿ ಒದಗಿಸುವಂತೆ ಪ್ರಸ್ತಾವನೆಯಲ್ಲಿ ಕೋರಲಾಗಿದೆ.

ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯು ಸಹಾಯಾನುದಾನದ ಸಂಸ್ಥೆಯಾಗಿದ್ದು, ಇದಕ್ಕೆ ಬಿಡುಗಡೆ ಮಾಡುವ ಒಟ್ಟಾರೆ ಸಹಾಯಾನುದಾನವನ್ನು ಲೆಕ್ಕ ಶೀರ್ಷಿಕೆ 2515-00-101-0-08 (ಯೋಜನೆ) ರಡಿಯ ಉಪ ಲೆಕ್ಕ ಶೀರ್ಷಿಕೆ "101-ಸಹಾಯಾನುದಾನ" ರಡಿ ಬಿಡುಗಡೆ ಮಾಡಿದರೆ ಸಂಸ್ಥೆಯು ಪೇಯಿಸ್ ರಸೀದಿ ಮೂಲಕ ಡ್ರಾ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಆದ ಕಾರಣ ಉಪ ಲೆಕ್ಕ ಶೀರ್ಷಿಕೆ "101" ರಡಿಗೆ ಈಗಾಗಲೇ ಒದಗಿಸಲಾಗಿರುವ ರೂ. 57.60 ಲಕ್ಷಗಳ ಜೊತೆಗೆ ಹೆಚ್ಚುವರಿಯಾಗಿ ರೂ. 47.05 ಲಕ್ಷಗಳನ್ನು ಆರ್ಥಿಕ ಇಲಾಖೆಯು ಬಿಡುಗಡೆ ಮಾಡಿದ್ದು, ಬೇರೆ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಒದಗಿಸಲಾಗಿರುವ ಅನುದಾನದ ಅದ್ಯರ್ಪಣೆ ಮಾಡುವ ಷರತ್ತಿಗೊಳಪಟ್ಟು ಒಟ್ಟಾರೆ ಈ ಉಪ ಲೆಕ್ಕ ಶೀರ್ಷಿಕೆಯಡಿ ರೂ. 104.65 ಲಕ್ಷಗಳನ್ನು ಒದಗಿಸಲಾಗಿರುತ್ತದೆ. ಈ ಅನುದಾನದ ಮೊತ್ತವನ್ನು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಗೆ ಬಿಡುಗಡೆ ಮಾಡುವ ಬಗ್ಗೆ ಪರಿಶೀಲಿಸಲಾಗಿದೆ.

ಅದರಂತೆ ಈ ಕೆಳಕಂಡಂತೆ ಆದೇಶಿಸಿದೆ

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 45 ತಾಪಸ 2011, ಬೆಂಗಳೂರು, ದಿನಾಂಕ : 19-11-2011.

ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು ಇವರಿಗೆ 2011-12ನೇ ಸಾಲಿನ ಆವರ್ತಕ ಅನುದಾನವನ್ನಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಬೇಡಿಕೆ ಸಂಖ್ಯೆ: 07ರಡಿ ಲೆಕ್ಕ ಶೀರ್ಷಿಕೆ 2515-00-102-0-08-101 (ಯೋಜನೆ) ರಡಿಯಲ್ಲಿ ಒಟ್ಟಾರೆ ಲಭ್ಯವಾಗುವ ₹104.65 ಲಕ್ಷ (ರೂಪಾಯಿ ಒಂದು ನೂರಾ ನಾಲ್ಕು ಲಕ್ಷ ಅರವತ್ತೈದು ಸಾವಿರ) ಗಳನ್ನು ಬಿಡುಗಡೆ ಮಾಡಲಾಗಿದೆ. ಈ ಮೊತ್ತವನ್ನು ಮಹಾನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು ಇವರು ಜಿಲ್ಲಾ ಖಜಾನೆಯಿಂದ ಪೇಯಿಸ್ ರಸೀದಿ ಮೇಲೆ ಡ್ರಾ ಮಾಡಿ, ಉಳಿತಾಯ ಖಾತೆಗೆ ಜಮೆ ಮಾಡಿ ನಿಗದಿತ ಉದ್ದೇಶಕ್ಕೆ ಬಳಕೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆದೇಶ ಸಂ: ಎಫ್‌ಡಿ/367/ವೆಚ್ಚ-6/2011, ದಿನಾಂಕ 10-11-2011ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಹೆಚ್. ಬಿ. ರಘುನಾಥ್
ಸರ್ಕಾರದ ಅಧೀನ ಕಾರ್ಯದರ್ಶಿ (ಪಂ. ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪಿ.ಆರ್. 22

ತೋಟಗಾರಿಕೆ ಸಚಿವಾಲಯ

ವಿಷಯ : ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಗೆ ಆಡಳಿತಾತ್ಮಕ ಹುದ್ದೆಗಳನ್ನು ಸೃಜಿಸುವ ಬಗ್ಗೆ.

ಓದಲಾಗಿದೆ : ಕುಲಸಚಿವರು, ತೋಟಗಾರಿಕೆ ವಿಶ್ವವಿದ್ಯಾನಿಲಯ ಬಾಗಲಕೋಟೆರವರ ಪತ್ರ ಸಂಖ್ಯೆ: R/UHSB/Posts/11/12, ದಿನಾಂಕ 02-09-2011.

ಪ್ರಸ್ತಾವನೆ :

ಕುಲಸಚಿವರು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ಇವರು ಮೇಲೆ ಓದಲಾದ ಪತ್ರದಲ್ಲಿ ಬೀದರ್, ಬಾಗಲಕೋಟೆ ಮತ್ತು ಕೋಲಾರ ತೋಟಗಾರಿಕೆ ಮಹಾವಿದ್ಯಾಲಯಗಳಿಗೆ ತಲಾ ಒಂದು ಡೀನ್ ಹುದ್ದೆಗಳನ್ನು ಹಾಗೂ ಕೆಲವು ಮುಖ್ಯ ಆಡಳಿತಾಧಿಕಾರಿ ಹುದ್ದೆಗಳನ್ನು ಸೃಜಿಸಿ ಭರ್ತಿ ಮಾಡಲು ಸರ್ಕಾರದ ಅನುಮತಿ ನೀಡುವಂತೆ ಕೋರಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ: ತೋಇ 346 ತೋಇವಿ 2010 (ಭಾಗ), ಬೆಂಗಳೂರು, ದಿನಾಂಕ 17-11-2011.

ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ಇಲ್ಲಿ ಹಾಗೂ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿರುವ ತೋಟಗಾರಿಕೆ ಕಾಲೇಜುಗಳಲ್ಲಿ ಈ ಕೆಳಕಂಡ ಹುದ್ದೆಗಳನ್ನು ಸೃಜಿಸಿ ಹಾಗೂ ಭರ್ತಿ ಮಾಡಲು ಅನುಮತಿ ನೀಡಿ ಆದೇಶಿಸಿದೆ

Sl.No.	Posts	2011-12	2012-13
1	Dean, COH, Bagalkote	1 (One)	...
2	Dean, COH, Bidar	1 (One)	...
3	Dean, COH, Kolar	1 (One)	...
4	Registrar	...	1 (One)
5	University Librarian	...	1 (One)
6	Comptroller	...	1 (One)
	Total	3 (Three)	3 (Three)

ಮೇಲಿನ ಹುದ್ದೆಗಳಲ್ಲಿ ಕ್ರಮ ಸಂಖ್ಯೆ:5 ಮತ್ತು 6ರಲ್ಲಿನ University Librarian ಮತ್ತು Comptroller ಹುದ್ದೆಗಳಿಗೆ ರಾಜ್ಯ ಸರ್ಕಾರದ ವೇತನ ಶ್ರೇಣಿ ನೀಡತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: FD 435 ವೆ:4/2011, ದಿನಾಂಕ 03-11-2011ರ ಸಹಮತಿ ಅನ್ವಯ ಆದೇಶ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಬಿ. ಸಿ. ಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ
ತೋಟಗಾರಿಕೆ ಇಲಾಖೆ

ಪಿ.ಆರ್. 23

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ವಿಷಯ : ಉದ್ಯೋಗಸ್ಥ ಅಂಗವಿಕಲರ ಮಹಿಳೆಯರ ಮತ್ತು ವಿದ್ಯಾರ್ಥಿನಿಯರ ವಸತಿ ನಿಲಯಗಳನ್ನು ರಾಮನಗರ, ಚಿಕ್ಕಬಳ್ಳಾಪುರ ಮತ್ತು ಯಾದಗಿರಿ ಜಿಲ್ಲೆಗಳಿಗೆ ವಿಸ್ತರಿಸಿ ಮಂಜೂರಾತಿ ನೀಡುವ ಕುರಿತು.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: ಮಮಇ:145:ಪಿಹೆಚ್‌ಪಿ2006(2), ದಿನಾಂಕ: 29/07/2006.
2. ಸರ್ಕಾರದ ಆದೇಶ ಸಂಖ್ಯೆ: ಮಮಇ:325:2006, ದಿನಾಂಕ: 17/03/2007.
3. ಸರ್ಕಾರದ ಆದೇಶ ಸಂಖ್ಯೆ: ಮಮಅ:244:ಪಿಹೆಚ್‌ಪಿ:2006(4), ದಿನಾಂಕ: 25/06/2007.
4. ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಇವರ ಪತ್ರ ಸಂಖ್ಯೆ:ನಿವಿಹಿಸಇ/ಯೋಜನಾಶಾಖೆ/ಸಿ.9/೧6/2010-11/1009, ದಿನಾಂಕ: 06/06/2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರದ ಆದೇಶದಲ್ಲಿ ಅಂಗವಿಕಲರ ಹಾಗೂ ಹಿರಿಯ ನಾಗರೀಕರ ಕಲ್ಯಾಣ ಇಲಾಖೆಯ ವತಿಯಿಂದ ಉದ್ಯೋಗಸ್ಥ ಅಂಗವಿಕಲ ಮಹಿಳೆಯರ ಮತ್ತು ವಿದ್ಯಾರ್ಥಿನಿಯರ ವಸತಿ ನಿಲಯಗಳನ್ನು ಕರ್ನಾಟಕ ರಾಜ್ಯದ ಬೆಳಗಾಂ, ಧಾರವಾಡ, ದಾವಣಗೆರೆ, ಚಿತ್ರದುರ್ಗ, ಗುಲ್ಬರ್ಗಾ, ರಾಯಚೂರು, ಬಾಗಲಕೋಟೆ, ಬಿಜಾಪುರ, ಉತ್ತರಕನ್ನಡ, ಕೋಲಾರ, ಹಾಸನ, ತುಮಕೂರು, ಮೈಸೂರು, ಶಿವಮೊಗ್ಗ, ಹಾವೇರಿ, ಗದಗ, ಬಳ್ಳಾರಿ, ಬೆಂಗಳೂರು(ನ), ಬೆಂಗಳೂರು(ಗ್ರಾ), ಮತ್ತು ಬೀದರ್ ಜಿಲ್ಲೆಗಳಲ್ಲಿ ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದೆ.

ಮೇಲೆ ಓದಲಾದ ಕ್ರಮಸಂಖ್ಯೆ:(2)ರ ಆದೇಶದಲ್ಲಿ ದಿನಾಂಕ: 29/07/2006ರ ಅನುಬಂಧ-1ರಲ್ಲಿ ಮೊದಲಿದ್ದ ಷರತ್ತು ಮತ್ತು ನಿಬಂಧನೆಗಳನ್ನು ಪರಿಷ್ಕರಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಸರ್ಕಾರದ ಆದೇಶದಲ್ಲಿ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ವತಿಯಿಂದ ಉದ್ಯೋಗಸ್ಥ ಅಂಗವಿಕಲ ಮಹಿಳೆಯರ ಮತ್ತು ವಿದ್ಯಾರ್ಥಿನಿಯರ ವಸತಿ ನಿಲಯಗಳನ್ನು ಮಂಡ್ಯ, ಚಿಕ್ಕಮಗಳೂರು, ದಕ್ಷಿಣಕನ್ನಡ, ಕೊಡಗು, ಚಾಮರಾಜನಗರ, ಕೊಪ್ಪಳ ಮತ್ತು ಉಡುಪಿ ಜಿಲ್ಲೆಗಳಿಗೆ ವಿಸ್ತರಿಸಿ ಮಂಜೂರಾತಿ ನೀಡಲಾಗಿದೆ.

ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಇವರ ಮೇಲೆ ಓದಲಾದ ಕ್ರಮ ಸಂಖ್ಯೆ:(4)ರ ಪತ್ರದಲ್ಲಿ 2007ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ ಕೋಲಾರ ಜಿಲ್ಲೆಗಳಿಂದ ವಿಭಜಿಸಿ ಕ್ರಮವಾಗಿ ರಾಮನಗರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳು ಸೃಜನೆಯಾಗಿದ್ದು 2010-11ನೇ ಸಾಲಿನಿಂದ ಗುಲ್ಬರ್ಗ ಜಿಲ್ಲೆಯಿಂದ ವಿಭಜಿಸಿ ಯಾದಗಿರಿ ಜಿಲ್ಲೆಯನ್ನು ಸೃಜಿಸಲಾಗಿದ್ದು, ಬೆಂಗಳೂರು ಗ್ರಾಮಾಂತರ, ಕೋಲಾರ ಹಾಗೂ ಗುಲ್ಬರ್ಗ ಜಿಲ್ಲೆಗಳಲ್ಲಿ ಸ್ಥಾಪಿಸಲಾಗಿದ್ದ ವಸತಿ ನಿಲಯಗಳು ಅದೇ ಜಿಲ್ಲೆಗಳಲ್ಲಿ ಮುಂದುವರೆದಿದ್ದು ವಿಭಜಿತ ರಾಮನಗರ, ಚಿಕ್ಕಬಳ್ಳಾಪುರ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ವಸತಿ ನಿಲಯಗಳು ಇರುವುದಿಲ್ಲವಾದ್ದರಿಂದ ಅಂಗವಿಕಲರ ಮಹಿಳೆಯರನ್ನು ಸಮಾಜದ ಹಾಗೂ ಶಿಕ್ಷಣದ ಮುಖ್ಯವಾಹಿನಿಗೆ ತರುವ ಅಗತ್ಯವಿದ್ದು, ವಿಭಜಿತಗೊಂಡು ಹೊಸದಾಗಿ ರಚನೆಯಾದ ರಾಮನಗರ, ಚಿಕ್ಕಬಳ್ಳಾಪುರ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ವಸತಿ ನಿಲಯಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡುವಂತೆ ಕೋರಿರುತ್ತಾರೆ.

ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಮಮಇ 170 ಪಿಹೆಚ್‌ಪಿ 2011 ಬೆಂಗಳೂರು, ದಿನಾಂಕ: 22/11/2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ ಹೊಸದಾಗಿ ರಚಿತವಾಗಿರುವ ರಾಮನಗರ, ಚಿಕ್ಕಬಳ್ಳಾಪುರ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಲೆಕ್ಕಶೀರ್ಷಿಕೆ: 2235-02-101-0-50 (ಯೋಜನೇತರ) ಅಡಿ ಲಭ್ಯವಿರುವ ಅನುದಾನದಲ್ಲಿ ಉದ್ಯೋಗಸ್ಥ ಅಂಗವಿಕಲ ಮಹಿಳೆಯರ ಮತ್ತು

ವಿದ್ಯಾರ್ಥಿನಿಯರ ಮೂರು ವಸತಿ ನಿಲಯಗಳಿಗೆ ತಗಲುವ ವೆಚ್ಚವನ್ನು ಭರಿಸುವ ಷರತ್ತಿಗೆ ಒಳಪಟ್ಟು ಪ್ರಾರಂಭಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಉದ್ಯೋಗಸ್ಥ ಅಂಗವಿಕಲರ ಮಹಿಳೆಯರ ಮತ್ತು ವಿದ್ಯಾರ್ಥಿನಿಯರ ವಸತಿ ನಿಲಯಗಳನ್ನು ಪ್ರಾರಂಭಿಸುವುದಕ್ಕಾಗಿ ಸ್ವಯಂ ಸೇವಾ ಸಂಸ್ಥೆಗಳನ್ನು ಆಯ್ಕೆ ಮಾಡಲು ದಿನಾಂಕ: 29/07/2006 ಹಾಗೂ ದಿನಾಂಕ: 17/03/2007ರ ಸರ್ಕಾರಿ ಆದೇಶದ ಮಾರ್ಗಸೂಚಿ/ಮಾನದಂಡಗಳನ್ನು ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 624 ವೆಚ್ಚ-3/2011, ದಿನಾಂಕ: 19/10/2011ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಬಿ.ಕಮಲಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ-2
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಪಿ.ಆರ್. 24

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ವಿಷಯ : ನೂತನ ಜಿಲ್ಲೆಯಾಗಿ ರಚನೆಗೊಂಡಿರುವ ಯಾದಗಿರಿ ಜಿಲ್ಲೆಗೆ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ಜಿಲ್ಲಾ ಮಟ್ಟದ ಕಛೇರಿಗೆ ಹುದ್ದೆಗಳ ಸೃಜನೆ ಹಾಗೂ ಭರ್ತಿ ಮಾಡುವ ಬಗ್ಗೆ ಆದೇಶ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: ಕಂವಿ 71 ಭೂದಾಮು 2009, ದಿನಾಂಕ: 26/07/2010.
2. ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ಪತ್ರ ಸಂಖ್ಯೆ: ನಿಅಕಇ/ಯೋಜನೆ/17/ಹು.ಸೃ/2011-12/342, ದಿನಾಂಕ: 07/05/2011.

ಪ್ರಸ್ತಾವನೆ :

ನೂತನವಾಗಿ ರಚನೆಯಾದ ಯಾದಗಿರಿ ಜಿಲ್ಲೆಯಲ್ಲಿ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ಜಿಲ್ಲಾ ಮಟ್ಟದ ಕಛೇರಿಗೆ ಅಗತ್ಯ ಹುದ್ದೆಗಳನ್ನು ಸೃಜಿಸುವಂತೆ ಕೋರಿ ನಿರ್ದೇಶಕರು ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ರವರು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿ: 07/05/2011ರ ಪತ್ರದಲ್ಲಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸರ್ಕಾರವು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಮಮಇ 701 ಎಸ್‌ಜಿಡಿ 2010 ಬೆಂಗಳೂರು, ದಿನಾಂಕ 11-11-2011

ನೂತನವಾಗಿ ರಚನೆಯಾದ ಯಾದಗಿರಿ ಜಿಲ್ಲೆಯಲ್ಲಿ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ಜಿಲ್ಲಾ ಮಟ್ಟದ ಕಛೇರಿಗೆ ಈ ಕೆಳಕಂಡ ಹುದ್ದೆಗಳನ್ನು ಸೃಜಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಕ್ರಮ ಸಂಖ್ಯೆ	ಪದನಾಮ	ವೇತನ ಶ್ರೇಣಿ	ಹುದ್ದೆಗಳ ಸಂಖ್ಯೆ	ನೇಮಕಾತಿ ವಿಧಾನ
1	ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿ	ರೂ. 11400-21600	1	ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ
2	ಯೋಜನಾ ಸಹಾಯಕ	ರೂ. 7275-13350	1	ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ
3	ಬೆರಳಚ್ಚುಗಾರ	ರೂ. 5800-10550	1	ಹೊರಗುತ್ತಿಗೆ (Out Source) ಆಧಾರದಿಂದ

ಮೇಲ್ಕಂಡ ಹುದ್ದೆಗಳ ಸೃಜನೆ ಹಾಗೂ ಭರ್ತಿಗೆ ಪ್ರಸ್ತುತ ಜಾರಿಯಲ್ಲಿರುವ ಮಿತವ್ಯಯ ಆದೇಶ ಸಡಿಲಿಸಿ ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: ಆಇ 683 ವೆಚ್ಚ-3/11 ದಿ: 28/10/2011ರಲ್ಲಿ ಸಹಮತಿ ನೀಡಿರುತ್ತದೆ. ಅದರನ್ವಯ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಬಿ. ಕಮಲಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ-2
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಪಿ.ಆರ್. 25

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ವಿಷಯ : ಬಾಲ್ಯವಿವಾಹ ನಿಷೇಧ ಕಾಯ್ದೆ-2006ನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿರ್ದೇಶನಾಲಯದಲ್ಲಿ ಉಸ್ತುವಾರಿ ಕೋಶವನ್ನು ಸ್ಥಾಪಿಸಿ ಹುದ್ದೆಗಳ ಸೃಜನೆ ಹಾಗೂ ಭರ್ತಿ ಮಾಡುವ ಬಗ್ಗೆ-ಆದೇಶ.

ಓದಲಾಗಿದೆ :
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಮಮಇ 170 ಮಮಅ 2006 ದಿ: 22/11/2010
2. ಬಾಲ್ಯ ವಿವಾಹ ತಡೆ ಕೋರ್ ಕಮಿಟಿಯ ಅಂತಿಮ ವರದಿ ದಿ: 30/06/2011
3. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಿಕಕಡತ ಸಂಖ್ಯೆ: ಮಮಅಇ/ಮಕ/17/2011-12

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿ: 22/11/2010ರ ಆದೇಶದಲ್ಲಿ ಬಾಲ್ಯವಿವಾಹ ಕಾಯ್ದೆ 2006ನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಂಬಂಧ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:11154/2006ರಲ್ಲಿ [illegible]

ಯೋಜನೆಯನ್ನು ತಯಾರಿಸಲು ಭಾರತದ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳಾದ ಜಸ್ಟಿಸ್ ಶಿವರಾಜ್ ವಿ. ಪಾಟೀಲ್ ಇವರ ಅಧ್ಯಕ್ಷತೆಯಲ್ಲಿ ಕೋರ್ ಕಮಿಟಿಯನ್ನು ರಚಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ(2)ರಲ್ಲಿ ಓದಲಾದ ದಿ: 30/06/2011ರ ಕೋರ್ ಕಮಿಟಿಯ ವರದಿಯಲ್ಲಿ ಬಾಲ್ಯವಿವಾಹವನ್ನು ತಡೆಗಟ್ಟುವ ನಿಟ್ಟಿನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಸಂಬಂಧಪಟ್ಟ ಇತರೆ ಇಲಾಖೆಗಳು ತೆಗೆದುಕೊಳ್ಳಬೇಕಾದ ಕ್ರಮಗಳು ಹಾಗೂ ಬಾಲ್ಯವಿವಾಹ ನಿಷೇಧ ಕಾಯ್ದೆಯನ್ನು ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಜಾರಿಗೊಳಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿರ್ದೇಶನಾಲಯದಲ್ಲಿ ಒಂದು ಉಸ್ತುವಾರಿ ಕೋಶವನ್ನು ಸ್ಥಾಪಿಸಲು ಶಿಫಾರಸ್ಸು ಮಾಡಿದೆ.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಏಕ ಕಡತದಲ್ಲಿ ನಿರ್ದೇಶನಾಲಯವು ಪ್ರಸ್ತಾವನೆ ಸಲ್ಲಿಸಿ ಪ್ರಸ್ತುತ ಇಲಾಖೆಯಲ್ಲಿರುವ ನಿರ್ದೇಶಕರು ಹಾಗೂ ಜಂಟಿ ನಿರ್ದೇಶಕರು (ಪಿಡಿಎಂ) ಹುದ್ದೆಗಳ ಜೊತೆಗೆ ಈ ಕೆಳಕಂಡ ಹುದ್ದೆಗಳನ್ನು ಉಸ್ತುವಾರಿ ಕೋಶಕ್ಕೆ ಸೃಜಿಸಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಸರ್ಕಾರವು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಮಮಇ 501 ಎಸ್‌ಜೆಡಿ 2011 ಬೆಂಗಳೂರು, ದಿನಾಂಕ: 16/11/2011

ರಾಜ್ಯದಲ್ಲಿ ಬಾಲ್ಯವಿವಾಹ ನಿಷೇಧ ಕಾಯ್ದೆ 2006ನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಉಸ್ತುವಾರಿ ಕೋಶವನ್ನು ಸ್ಥಾಪಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಈ ಕೆಳಕಂಡ ಹುದ್ದೆಗಳನ್ನು ಸೃಜಿಸಿ ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಕ್ರಮ ಸಂಖ್ಯೆ	ಪದನಾಮ	ಹುದ್ದೆಗಳ ಸಂಖ್ಯೆ	ನೇಮಕಾತಿ ವಿಧಾನ
1	ಉಪನಿರ್ದೇಶಕರು	1	ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ
2	ಸಹಾಯಕ ನಿರ್ದೇಶಕರು	1	ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ
3	ಪ್ರಥಮ ದರ್ಜೆ ಸಹಾಯಕರು	2	ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ
4	ಗಣಕಯಂತ್ರ ನಿರ್ವಾಹಕರು	2	ಹೊರಗುತ್ತಿಗೆ (Out Source) ಆಧಾರದಿಂದ
5	ಸೇವಕರು	1	ಹೊರಗುತ್ತಿಗೆ (Out Source) ಆಧಾರದಿಂದ

ಮೇಲ್ಕಂಡ ಹುದ್ದೆಗಳ ಸೃಜನೆ ಹಾಗೂ ಭರ್ತಿಗೆ ಪ್ರಸ್ತುತ ಜಾರಿಯಲ್ಲಿರುವ ಮಿತವ್ಯಯ ಆದೇಶ ಸಡಿಲಿಸಿ ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: ಆಇ 706 ವೆಚ್ಚ-3/11 ದಿ: 03/11/2011 ರಲ್ಲಿ ಸಹಮತಿ ನೀಡಿರುತ್ತದೆ. ಅದರನ್ವಯ ಅದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ಕಮಲಮ್ಮ

ಸರ್ಕಾರದ ಅಧೀನ ಕಾರ್ಯದರ್ಶಿ-2

ಪಿ.ಆರ್. 26 ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ : ಮೈಸೂರು ವಿಮಾನ ನಿಲ್ದಾಣದ ವಿದ್ಯುಚ್ಛಕ್ತಿ ಬಿಲ್ಲನ್ನು ಪಾವತಿಸಲು ಹಣ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 48 ರಾಅವಿ 2010, ದಿನಾಂಕ: 20/05/2011
2. ಜಿಲ್ಲಾಧಿಕಾರಿಗಳು, ಮೈಸೂರು ಇವರ ಪತ್ರ ಸಂಖ್ಯೆ: ಎಲ್.ಎ.ಕ್ಯೂ.ಸಿ.ಆರ್. 172/2011 12 ದಿನಾಂಕ: 12/09/2011.
3. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, (ವಿ) ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಚಾಮುಂಡಿಪುರಂ, ಉಪ ವಿಭಾಗ, ಇವರು ಜಿಲ್ಲಾಧಿಕಾರಿಗಳಿಗೆ ಬರೆದಿರುವ ಪತ್ರ ಸಂಖ್ಯೆ: ಸಕಾಇಂ (ವಿ)/ಸಲೆ/ಚಾಉವಿ/3484, ದಿನಾಂಕ: 03/09/2011.

ಪ್ರಸ್ತಾವನೆ :

ಮೈಸೂರು ವಿಮಾನ ನಿಲ್ದಾಣದ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರವು ದಿನಾಂಕ: 06/10/2005ರಂದು ಭಾರತ ವಿಮಾನ ನಿಲ್ದಾಣಗಳ ಪ್ರಾಧಿಕಾರದೊಂದಿಗೆ ಮಾಡಿಕೊಂಡಿರುವ ಒಪ್ಪಂದದ ಅನುಸಾರ ವಿಮಾನ ನಿಲ್ದಾಣದ ವಿದ್ಯುಚ್ಛಕ್ತಿ ಬಳಕೆ ಬಿಲ್ಲನ್ನು ವಿಮಾನಯಾನ ಸೇವೆ ಕಾರ್ಯಾರಂಭಗೊಂಡ ದಿನಾಂಕದಿಂದ 5 ವರ್ಷಗಳ ಅವಧಿಗೆ ರಾಜ್ಯ ಸರ್ಕಾರದಿಂದ ಭರಿಸಬೇಕಾಗಿರುತ್ತದೆ.

2. ಮೇಲೆ ಓದಲಾದ ಕ್ರಮ ಸಂಖ್ಯೆ.(1)ರ ಆದೇಶದಲ್ಲಿ ನವೆಂಬರ್ 2010 ರಿಂದ ಏಪ್ರಿಲ್ 2011 ರವರೆಗೆ ಮೈಸೂರು ವಿಮಾನ ನಿಲ್ದಾಣದ ವಿದ್ಯುಚ್ಛಕ್ತಿ ಬಿಲ್ಲನ್ನು ಪಾವತಿಸಲು ಬಿಲ್ಲಿನ ಮೊತ್ತ ರೂ. 28,85,360/-ಗಳನ್ನು ಜಿಲ್ಲಾಧಿಕಾರಿಗಳು, ಮೈಸೂರು ಇವರಿಗೆ ಬಿಡುಗಡೆ ಮಾಡಲಾಗಿದೆ.

3. ಮೇಲೆ ಓದಲಾದ ಕ್ರಮ ಸಂಖ್ಯೆ.(2)ರಲ್ಲಿ ಜಿಲ್ಲಾಧಿಕಾರಿಗಳು, ಮೈಸೂರು ಇವರು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ), ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ.(3)ರ ಪತ್ರದಲ್ಲಿ ಕಳುಹಿಸಿರುವ ವಿದ್ಯುಚ್ಛಕ್ತಿ ಬಿಲ್ಲುಗಳನ್ನು ಲಗತ್ತಿಸಿ ಮೇ 2011ರಿಂದ ಆಗಸ್ಟ್ 2011ರವರೆಗೆ ಮೈಸೂರು ವಿಮಾನ ನಿಲ್ದಾಣದ ವಿದ್ಯುಚ್ಛಕ್ತಿ ಬಿಲ್ಲಿನ ಮೊತ್ತ ರೂ.17,12,028/-ಗಳನ್ನು ಪಾವತಿಸಲು ಹಣ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

4. ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಮೂಅಇ 48 ರಾಅವಿ 2010, ಬೆಂಗಳೂರು, ದಿನಾಂಕ: 16/11/2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಮೈಸೂರು ವಿಮಾನ ನಿಲ್ದಾಣದ ವಿದ್ಯುಚ್ಛಕ್ತಿ ಬಿಲ್ಲಿನ ಮೊತ್ತ ಮೇ 2011 ರಿಂದ ಆಗಸ್ಟ್ 2011 ರವರೆಗೆ ರೂ.15,98,216/- ಗಳನ್ನು (ರೂ. ಹದಿನೈದು ಲಕ್ಷಗಳ ತೊಂಬತ್ತೆಂಟು ಸಾವಿರದ ಎರಡುನೂರು ಹದಿನಾರು ಮಾತ್ರ) ಜಿಲ್ಲಾಧಿಕಾರಿಗಳು ಮೈಸೂರು ಜಿಲ್ಲೆ ಮೈಸೂರು ಇವರಿಗೆ ಬಿಡುಗಡೆ ಮಾಡಿದೆ.

2. ಈ ಮೊತ್ತವನ್ನು 2011-12ನೇ ಸಾಲಿನ ಲೆಕ್ಕ ಶೀರ್ಷಿಕೆ 5465-01-190-1-05 ಸಣ್ಣ ವಿಮಾನ ನಿಲ್ದಾಣಗಳ ಅಭಿವೃದ್ಧಿ-211-ಬಂಡವಾಳ ಹೂಡಿಕೆ (ಯೋಜನೆ)-ಯಡಿಯಲ್ಲಿ ಭರಿಸತಕ್ಕದ್ದು.

3. ಈ ಹಣವನ್ನು ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು, ಇವರು ಪೇಯೀಸ್ ರಶೀದಿ ಮೂಲಕ ಸರ್ಕಾರದ ಅಧೀನ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ, ಇವರ ಮೇಲು ರುಜುವಿನೊಂದಿಗೆ ಪಡೆದು ತದನಂತರ ಈ ಮೊತ್ತವನ್ನು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು ಇಲ್ಲಿ ಪಾವತಿಸಿ ಉಪಯೋಗಿತ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.

4. ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಆಇ 1 ಟಿಎಫ್‌ಪಿ 2008 ದಿನಾಂಕ: 16/05/2008 ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ನೀಡಿರುವ ಆರ್ಥಿಕ ಪ್ರತ್ಯಾಯೋಜನೆಯ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್.ಜಿ. ಸಂಪತ್‌ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 27 ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ : ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮ ನಿಯಮಿತದಲ್ಲಿನ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನೆ ಕೋಶದ ಕಾರ್ಯನಿರ್ವಹಣೆಗಾಗಿ ಹಣ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 7 ರಾಅವಿ 2002, ದಿನಾಂಕ: 22/04/2002
2. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 7 ರಾಅವಿ 2002, ದಿನಾಂಕ: 25/11/2002
3. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 7 ರಾಅವಿ 2002, ದಿನಾಂಕ: 20/02/2003
4. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 18 ರಾಅವಿ 2003, ದಿನಾಂಕ: 28/05/2003
5. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 147 ಮೂಇವಿ 2005, ದಿನಾಂಕ: 18/04/2006
6. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 18 ರಾಅವಿ 2003, ದಿನಾಂಕ: 09/01/2007
7. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 169 ರಾಅವಿ 2008, ದಿನಾಂಕ: 18/12/2008
8. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 122 ರಾಅವಿ 2010, ದಿನಾಂಕ: 04/03/2011
9. ಡೆಪ್ಯುಟಿ ಜನರಲ್ ಮ್ಯಾನೇಜರ್, ಕೆ.ಎಸ್.ಐ.ಐ.ಡಿ.ಸಿ. ಇವರ ಪತ್ರ ಸಂಖ್ಯೆ:DGM(IPD-I)/1125/2011-12, ದಿನಾಂಕ: 17/08/2011
10. ಡೆಪ್ಯುಟಿ ಜನರಲ್ ಮ್ಯಾನೇಜರ್, ಕೆ.ಎಸ್.ಐ.ಐ.ಡಿ.ಸಿ. ಇವರ ಪತ್ರ ಸಂಖ್ಯೆ:DGM(IPD-I)/1454/2011-12, ದಿನಾಂಕ: 28/09/2011

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂ.(1)ರ ದಿನಾಂಕ: 22/04/2002ರ ಆದೇಶದಲ್ಲಿ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನೆ ಜಾರಿಗೆ ಸಂಬಂಧಿಸಿದ ವಿಷಯಗಳನ್ನು ನಿರ್ವಹಿಸಲು ಯೋಜನೆಯ ನೋಡಲ್ ಏಜೆನ್ಸಿಯಾದ ಕೆ.ಎಸ್.ಐ.ಐ.ಡಿ.ಸಿ.ಯಲ್ಲಿ ಬಿ.ಐ.ಎ.ಪಿ ಕೋಶವನ್ನು ಸೃಜಿಸಲಾಯಿತು.

2. ಮೇಲೆ ಓದಲಾದ ಕ್ರಮ ಸಂ.(5)ರಲ್ಲಿನ ಆದೇಶದಲ್ಲಿ 2006-೦7ನೇ ಸಾಲಿನ ಆರ್ಥಿಕ ವರ್ಷದಲ್ಲಿ ಈ ಯೋಜನೆಯನ್ನು ಮುಂದುವರೆದ ಯೋಜನೆಯೆಂದು ಪರಿಗಣಿಸಿ ಮಂಜೂರಾತಿಯನ್ನು ನೀಡಲಾಗಿದೆ.

3. ಮೇಲೆ ಓದಲಾದ (2) ರಿಂದ (4) ಮತ್ತು (6), (7), (8)ರಲ್ಲಿರುವ ಆದೇಶಗಳಲ್ಲಿ ಈ ಕೋಶದ ಕಾರ್ಯನಿರ್ವಹಣೆಗಾಗಿ ಸರ್ಕಾರವು ಕಾಲಕಾಲಕ್ಕೆ ಹಣವನ್ನು ಬಿಡುಗಡೆ ಮಾಡಿದೆ.

4. ಮೇಲೆ ಓದಲಾದ (9) & (10) ರಲ್ಲಿ ಉಪ ಪ್ರಧಾನ ವ್ಯವಸ್ಥಾಪಕರು (IPD-I) ಕೆ.ಎಸ್.ಐ.ಐ.ಡಿ.ಸಿ. ಬೆಂಗಳೂರು ಇವರು ಬಿ.ಐ.ಎ.ಪಿ ಕೋಶದ ನಿರ್ವಹಣೆಗಾಗಿ 2002-03ನೇ ಸಾಲಿನಿಂದ 2010-11ನೇ ಸಾಲಿನವರೆಗೆ (ಡಿಸೆಂಬರ್ 2010 ರವರೆಗೆ) ರೂ.1,93,90,674.00 ಖರ್ಚು ಮಾಡಲಾಗಿದೆ ಎಂದು ತಿಳಿಸುತ್ತಾ, ಈ ಕೋಶದ ವೆಚ್ಚವನ್ನು ಭರಿಸಲು 2011-12ನೇ ಸಾಲಿಗೆ ರೂ.25.00 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

5. ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಮೂಅಇ 122 ರಾಅವಿ 2010, ಬೆಂಗಳೂರು, ದಿನಾಂಕ: 10/11/2011

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ಕೆ.ಎಸ್.ಐ.ಐ.ಡಿ.ಸಿ.ಯಲ್ಲಿರುವ ಬಿ.ಐ.ಎ.ಪಿ ಕೋಶದ ಕಾರ್ಯನಿರ್ವಹಣೆಗಾಗಿ 2011-12ನೇ ಆರ್ಥಿಕ ವರ್ಷದಲ್ಲಿ ರೂ.25.00ಲಕ್ಷಗಳನ್ನು (ಇಪ್ಪತ್ತೈದು ಲಕ್ಷ ರೂಪಾಯಿಗಳು ಮಾತ್ರ) ಕೆಳಕಂಡ ಷರತ್ತುಗಳೊಂದಿಗೆ ಬಿಡುಗಡೆ ಮಾಡಲು ಮಂಜೂರಾತಿಯನ್ನು ನೀಡಿದೆ:

"ಜನವರಿ 2011 ರಿಂದ ಈವರೆವಿಗೂ ಮಾಡಿರುವ ವೆಚ್ಚಗಳ ವಿವರಗಳನ್ನು ಸರ್ಕಾರಕ್ಕೆ ಒದಗಿಸುವುದು"

2. ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 5465-01-190-2-03- ಕೆ.ಎಸ್.ಐ.ಐ.ಡಿ.ಸಿ- ಬಿಐಎಪಿ ಕೋಶ-211 ಹೂಡಿಕೆಗಳು ಇದರಡಿಯಲ್ಲಿ 2011-12ನೇ ಸಾಲಿನಲ್ಲಿ ಒದಗಿಸಿರುವ ಆಯವ್ಯಯದಿಂದ ಭರಿಸತಕ್ಕದ್ದು.

3. ಈ ಹಣವನ್ನು ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಐ.ಐ.ಡಿ.ಸಿ. ಬೆಂಗಳೂರು ಇವರು ಪೇಯೀಸ್ ರಸೀದಿಯ ಮೂಲಕ ಸರ್ಕಾರದ ಅಧೀನ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಇವರ ಮೇಲು ರುಜುವಿನೊಂದಿಗೆ ರಾಜ್ಯ ಹುಜೂರು ಖಜಾನೆ, ಬೆಂಗಳೂರು ಇಲ್ಲಿ ತೆಗೆಯಲು ಅನುಮತಿಸಿದೆ.

4. ಈ ಆದೇಶವನ್ನು ಸರ್ಕಾರದ ಆದೇಶ ಸಂ. FD 1 TFP 2008 ದಿನಾಂಕ: 16/05/2008ರಲ್ಲಿ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್.ಜೆ. ಸಂಪತ್‌ಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ
ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ

ಪಿ.ಆರ್. 28

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವಾಲಯ

ವಿಷಯ : ದಾವಣಗೆರೆ ಜಿಲ್ಲೆ, ಹೊನ್ನಾಳಿ ತಾಲ್ಲೂಕು ಹಲಗೇರಿ ಹಾಲ್ಕಲ್ ರಸ್ತೆ (ರಾಹೆ-26) ಶ್ರೀ ರಾಘವೇಂದ್ರಸ್ವಾಮಿ ಮಠವನ್ನು ಸಂಪರ್ಕಿಸುವ 0.20 ಕಿ.ಮಿ. ಉದ್ದದ ಗ್ರಾಮೀಣ ರಸ್ತೆಯನ್ನು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಿಂದ ಅಭಿವೃದ್ಧಿಪಡಿಸಲು ಒಂದು ಬಾರಿ ಮೇಲ್ದರ್ಜೆಗೇರಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಕಾರ್ಯದರ್ಶಿಗಳು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 21-10-2011 ರಂದು ನಡೆದ ರಾಜ್ಯದಲ್ಲಿನ ರಸ್ತೆಗಳನ್ನು ಮೇಲ್ದರ್ಜೆಗೇರಿಸುವ/ಕೆಳದರ್ಜೆಗಿಳಿಸುವ ಪ್ರಸ್ತಾವನೆಗಳನ್ನು ಪರಿಗಣಿಸಲು ರಚಿಸಲಾಗಿರುವ ಸಮಿತಿಯ ಸಭೆ.

ಪ್ರಸ್ತಾವನೆ :

ಮೇಲೆ ಓದಲಾದ ಸಮಿತಿಯ ನಡವಳಿಯಲ್ಲಿ ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲ್ಲೂಕು ಹಲಗೇರಿ ಹಾಲ್ಕಲ್ ರಸ್ತೆ (ರಾಹೆ-26) ಶ್ರೀ ರಾಘವೇಂದ್ರಸ್ವಾಮಿ ಮಠವನ್ನು ಸಂಪರ್ಕಿಸುವ 0.20 ಕಿ.ಮೀ. ಉದ್ದದ ಗ್ರಾಮೀಣ ರಸ್ತೆಯನ್ನು ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಿಂದ ಒಂದು ಬಾರಿ ಅಭಿವೃದ್ಧಿಪಡಿಸಿ ಪುನಃ ಪಂಚಾಯತ್ ರಾಜ್ ಮತ್ತು ಇಂಜಿನಿಯರಿಂಗ್ ಇಲಾಖೆಗೆ ವಾಪಸ್ ನೀಡಲು ಅನುಮೋದಿಸುವ ಬಗ್ಗೆ ಕೂಲಂಕಷವಾಗಿ ಚರ್ಚಿಸಲಾಯಿತು.

ಹಾಲಿ ಈ ರಸ್ತೆಯುನ್ನು ಅಭಿವೃದ್ಧಿಪಡಿಸಲು ರೂ. 15.00 ಲಕ್ಷಗಳ ಅನುದಾನ ಲಭ್ಯವಿರುತ್ತದೆಂದು ಸಮಿತಿಗೆ ತಿಳಿಸಲಾಯಿತು. ಹಾಗೂ ಈ ರಸ್ತೆಯು ದೇವಸ್ಥಾನವನ್ನು ಸಂಪರ್ಕಿಸುವ ರಸ್ತೆಯಾದ್ದರಿಂದ ಜನಸಂಚಾರ ಹೆಚ್ಚಾಗಿದ್ದು. ವಾಹನ ದಟ್ಟಣೆ ಕೂಡ ಹೆಚ್ಚು ಇರುತ್ತದೆ. ಈ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಒಂದು ಬಾರಿ ಲೋಕೋಪಯಾಗಿ. ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಿಂದ ಅಭಿವೃದ್ಧಿಪಡಿಸಿ ನಂತರ ಪಂಚಾಯತ್ ರಾಜ್ ಮತ್ತು ಇಂಜನಿಯರಿಂಗ್ ಇಲಾಖೆಗೆ ಹಿಂತಿರುಗಿಸಲು ತೀರ್ಮಾನಿಸಲಾಯಿತು.

ಸರ್ಕಾರವು ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ

ಸರ್ಕಾರದ ಆದೇಶ ಸಂಖ್ಯೆ : ಲೋಇ 509 ಸಿಆರ್‌ಎಂ 2011, ಬೆಂಗಳೂರು, ದಿನಾಂಕ : 18ನೇ ನವೆಂಬರ್ 2011

ದಾವಣಗೆರೆ ಜಿಲ್ಲೆ, ಹೊನ್ನಾಳಿ ತಾಲ್ಲೂಕು ಹಲಗೇರಿ ಹಾಲ್ಕಲ್ ರಸ್ತೆ (ರಾಹೆ-26) ಶ್ರೀ ರಾಘವೇಂದ್ರಸ್ವಾಮಿ ಮಠವನ್ನು ಸಂಪರ್ಕಿಸುವ 0.20 ಕಿ.ಮೀ. ಉದ್ದದ ಗ್ರಾಮೀಣ ರಸ್ತೆಯನ್ನು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಿಂದ ಒಂದು ಬಾರಿ ಅಭಿವೃದ್ಧಿಪಡಿಸಿ ಪುನಃ ಪಂಚಾಯತ್ ರಾಜ್ ಮತ್ತು ಇಂಜನಿಯರಿಂಗ್ ಇಲಾಖೆಗೆ ವಾಪಸ್ ನೀಡಲು ಸರ್ಕಾರದ ಅನುಮೋದನೆ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್.ಆರ್. ರೇವಣ್ಣ
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ, ಬಂದರು ಮತ್ತು
ಒಳನಾಡು ಜಲಸಾರಿಗೆ ಇಲಾಖೆ (ಸಂಪರ್ಕ-1)

ಪಿ.ಆರ್. 29

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವಾಲಯ

ವಿಷಯ : ಕೃಷ್ಣಾಭಾಗ್ಯ ಜಲ ನಿಗಮ ನಿಯಮಿತದಿಂದ ಲೋಕೋಪಯೋಗಿ ಇಲಾಖೆಗೆ ಹಸ್ತಾಂತರವಾಗಿರುವ ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕು ಲೋಕೋಪಯೋಗಿ ಇಲಾಖೆಯ ಅಡಿಯಲ್ಲಿ ಬರುವ ಯರಗಟ್ಟಿ - ಬಬಲೇಶ್ವರ ರಾಜ್ಯ ಹೆದ್ದಾರಿ 55ರ ಕಿ.ಮೀ. 74.79 ರಿಂದ 78.29ರ ವರೆಗೆ - 3.50 ಕಿ.ಮಿ. ಉದ್ದದ ರಸ್ತೆಯನ್ನು ಲೋಕೋಪಯೋಗಿ ಇಲಾಖೆ ರಸ್ತೆ ಎಂದು ಪರಿಗಣಿಸಿ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ : 1. ಮುಖ್ಯ ಇಂಜನಿಯರ್, ಸಂಪರ್ಕ ಮತ್ತು ಕಟ್ಟಡ (ಉತ್ತರ) ಧಾರವಾಡ ಇವರ ಪತ್ರ ಸಂಖ್ಯೆ: ಸಿಬಿಎನ್:ಹೈಆ್ಯಸೇ:ಕ.ಸಂ.7:2:ಅಧಿಸೂಚನೆ:2011-12:2089 ದಿನಾಂಕ: 06-06-2011.

2. ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯದಲ್ಲಿನ ರಸ್ತೆಗಳನ್ನು ಮೇಲ್ದರ್ಜೆಗೇರಿಸುವ/ ಕೆಳದರ್ಜೆಗಿಳಿಸುವ ಪ್ರಸ್ತಾವನೆಗಳನ್ನು ಪರಿಗಣಿಸಲು ರಚಿಸಲಾಗಿರುವ ದಿನಾಂಕ: 21-10-2011ರ ಸಮಿತಿಯ ಸಭೆಯ ನಡವಳಿಗಳು.

ಪ್ರಸ್ತಾವನೆ :

ಮೇಲೆ ಓದಲಾದ (1)ರಲ್ಲಿ ಮುಖ್ಯ ಇಂಜನಿಯರ್, ಸಂಪರ್ಕ ಮತ್ತು ಕಟ್ಟಡ (ಉತ್ತರ) ಧಾರವಾಡ ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನ ಲೋಕೋಪಯೋಗಿ ಇಲಾಖೆಯ ಅಡಿಯಲ್ಲಿ ಬರುವ ಯರಗಟ್ಟಿ - ಬಬಲೇಶ್ವರ ರಾಜ್ಯ ಹೆದ್ದಾರಿ-55ರ

ಕಿ.ಮೀ. 74.79 ರಿಂದ 78.29ರ ವರೆಗೆ ಒಟ್ಟು 3.50 ಕಿ.ಮೀ. ರಸ್ತೆಯನ್ನು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಇವರು ಅಭಿವೃದ್ಧಿಪಡಿಸಿ ಲೋಕೋಪಯೋಗಿ ಇಲಾಖೆಗೆ ಹಸ್ತಾಂತರ ಮಾಡಿರುವುದಾಗಿ ಸರ್ಕಾರಕ್ಕೆ ವರದಿ ಮಾಡಿರುತ್ತಾರೆ. ಅದರಂತೆ ಓದಲಾದ (2) ರ ಸಮಿತಿಯ ಸಭೆಯಲ್ಲಿ ಕೃಷ್ಣಾಭಾಗ್ಯ ಜಲನಿಗಮ ನಿಯಮಿತದಿಂದ ಲೋಕೋಪಯೋಗಿ ಇಲಾಖೆಗೆ ಹಸ್ತಾಂತರವಾಗಿರುವ ರಸ್ತೆಯನ್ನು ಲೋಕೋಪಯೋಗಿ ಇಲಾಖೆಯ ರಸ್ತೆ ಎಂದು ಪರಿಗಣಿಸಿ ಆದೇಶ ಹೊರಡಿಸಲು ಸಮಿತಿಯು ಅನುಮೋದಿಸಿದೆ. ಈ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಲೋಇ 377 ಸಿಆರ್‌ಎಂ 2011 ಬೆಂಗಳೂರು, ದಿನಾಂಕ : 16ನೇ ನವೆಂಬರ್ 2011

ಕೃಷ್ಣಾಭಾಗ್ಯ ಜಲ ನಿಗಮ ನಿಯಮಿತದಿಂದ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಗೆ ಹಸ್ತಾಂತರವಾಗಿರುವ ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕು ಲೋಕೋಪಯೋಗಿ ಇಲಾಖೆಯಡಿಯಲ್ಲಿ ಬರುವ ಯರಗಟ್ಟಿ – ಬಬಲೇಶ್ವರ ರಾಜ್ಯ ಹೆದ್ದಾರಿ–55ರ ಕಿ.ಮಿ. 74.79 ರಿಂದ 78.29ರ ವರೆಗೆ ಒಟ್ಟು 3.50 ಕಿ.ಮಿ. ಉದ್ದದ ರಸ್ತೆಯನ್ನು ಲೋಕೋಪಯೋಗಿ ಇಲಾಖೆ ರಸ್ತೆ ಎಂದು ಪರಿಗಣಿಸಿ ಸರ್ಕಾರದ ಅನುಮೋದನೆ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್.ಆರ್. ರೇವಣ್ಣ
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ, ಬಂದರು ಮತ್ತು
ಒಳನಾಡು ಜಲಸಾರಿಗೆ ಇಲಾಖೆ (ಸಂಪರ್ಕ–1)

ಪಿ.ಆರ್. 30

ಸಮಾಜ ಕಲ್ಯಾಣ ಸಚಿವಾಲಯ

ವಿಷಯ : ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ರಾಜ್ಯಮಟ್ಟದ ಜಾಗೃತ ಮತ್ತು ಉಸ್ತುವಾರಿ ಸಮಿತಿ ರಚಿಸುವ ಬಗ್ಗೆ.
ಓದಲಾಗಿದೆ : ಸರ್ಕಾರಿ ಆದೇಶ ಸಂಖ್ಯೆ : ಸಕಇ 28 ಎಸ್‌ಪಿಎ 08 ದಿನಾಂಕ: 17–09–2009.

ಸರ್ಕಾರದ ಆದೇಶ ಸಂಖ್ಯೆ : ಸಕಇ 33 ಎಸ್‌ಪಿಎ 2011, ಬೆಂಗಳೂರು, ದಿನಾಂಕ : 11ನೇ ನವೆಂಬರ್ 2011

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ (ದೌರ್ಜನ್ಯ ಪ್ರತಿಬಂಧ) ನಿಯಮಾವಳಿ 1995ರ 16ನೇ ನಿಯಮದ ಮೇರೆಗೆ ರಾಜ್ಯ ಮಟ್ಟದ ಜಾಗೃತ ಮತ್ತು ಉಸ್ತುವಾರಿ ಸಮಿತಿಯನ್ನು ಮೇಲೆ ಓದಲಾದ ಆದೇಶದಲ್ಲಿ ರಚಿಸಲಾಗಿತ್ತು. ಇತ್ತೀಚೆಗೆ ಸರ್ಕಾರ ಬದಲಾದ ಹಿನ್ನೆಲೆಯಲ್ಲಿ ಸದರಿ ಸಮಿತಿಯನ್ನು ಈ ಕೆಳಗಿನಂತೆ ಪುನರ್ ರಚಿಸಲಾಗಿದೆ.

1	ಮಾನ್ಯ ಮುಖ್ಯಮಂತ್ರಿಗಳು	ಅಧ್ಯಕ್ಷರು
2	ಮಾನ್ಯ ಗೃಹ ಸಚಿವರು	ಸದಸ್ಯರು
3	ಮಾನ್ಯ ಸಮಾಜ ಕಲ್ಯಾಣ ಸಚಿವರು	ಸದಸ್ಯರು
4	ಮಾನ್ಯ ನಗರಾಭಿವೃದ್ಧಿ ಮತ್ತು ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ, ಸಂಸದೀಯ ವ್ಯವಹಾರಗಳ ಸಚಿವರು	ಸದಸ್ಯರು
5	ಶ್ರೀ ರೇವುನಾಯ್ಕ ಬೆಳಮಗಿ, ಮಾನ್ಯ ಪಶುಸಂಗೋಪನೆ ಮತ್ತು ಮೀನುಗಾರಿಕೆ, ಸಣ್ಣ ಉಳಿತಾಯ ಮತ್ತು ಲಾಟರಿ ಲೋಕಶಿಕ್ಷಣ ಮತ್ತು ಸಾರ್ವಜನಿಕ ಗ್ರಂಥಾಲಯ ಸಚಿವರು	ಸದಸ್ಯರು
6	ಶ್ರೀ ಗೋವಿಂದ ಎಂ. ಕಾರಜೋಳ, ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು	ಸದಸ್ಯರು
7	ಶ್ರೀ ಬಾಲಚಂದ್ರ ಲಕ್ಷ್ಮಣ್‌ರಾವ್ ಜಾರಕಿಹೊಳಿ, ಮಾನ್ಯ ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು	ಸದಸ್ಯರು
8	ಶ್ರೀ ನರಸಿಂಹನಾಯ್ಕ (ರಾಜುಗೌಡ) ಮಾನ್ಯ ಸಣ್ಣ ಕೈಗಾರಿಕಾ ಸಚಿವರು	ಸದಸ್ಯರು
9	ಶ್ರೀ ಎಂ. ಚಂದ್ರಪ್ಪ, ಮಾನ್ಯ ವಿಧಾನಸಭಾ ಸದಸ್ಯರು, ಹೊಳಲ್ಕರೆ ಕ್ಷೇತ್ರ	ಸದಸ್ಯರು
10	ಶ್ರೀ ಎಸ್.ವೈ. ಗೋಪಾಲಕೃಷ್ಣ, ಮಾನ್ಯ ವಿಧಾನಸಭಾ ಸದಸ್ಯರು, ಮೊಳಕಾಲ್ಮುರು ವಿಧಾನಸಭಾ ಕ್ಷೇತ್ರ	ಸದಸ್ಯರು
11	ಶ್ರೀ ಸುನೀಲ್ ವಲ್ಯಾಪುರ, ಮಾನ್ಯ ವಿಧಾನಸಭಾ ಸದಸ್ಯರು, ಚಿಂಚೋಳಿ ವಿಧಾನಸಭಾ ಕ್ಷೇತ್ರ	ಸದಸ್ಯರು
12	ಶ್ರೀ ಎಂ. ಬಸವರಾಜ್ ನಾಯ್ಕ, ಮಾನ್ಯ ವಿಧಾನಸಭಾ ಸದಸ್ಯರು, ಮಾಯಕೊಂಡ ವಿಧಾನಸಭಾ ಕ್ಷೇತ್ರ	ಸದಸ್ಯರು
13	ಶ್ರೀ ರಮೇಶ್ ಜಿಗಜಿಣಗಿ, ಮಾನ್ಯ ಲೋಕಸಭಾ ಸದಸ್ಯರು, ಬಿಜಾಪುರ	ಸದಸ್ಯರು
14	ಶ್ರೀಮತಿ ಶಾಂತಾ, ಮಾನ್ಯ ಲೋಕಸಭಾ ಸದಸ್ಯರು, ಬಳ್ಳಾರಿ	ಸದಸ್ಯರು

15	ಶ್ರೀ ಅರ್. ಧ್ರುವನಾರಾಯಣ, ಮಾನ್ಯ ಲೋಕಸಭಾ ಸದಸ್ಯರು, ಚಾಮರಾಜನಗರ	ಸದಸ್ಯರು
16	ಶ್ರೀ ವಿ. ಶ್ರೀನಿವಾಸ್‌ಪ್ರಸಾದ್, ನಂಜನಗೂಡು ಕ್ಷೇತ್ರ ಮಾನ್ಯ ವಿಧಾನಸಭಾ ಸದಸ್ಯರು,	ಸದಸ್ಯರು
17	ಶ್ರೀ ಅಮರೇಶ್, ಮಾನ್ಯ ವಿಧಾನಸಭಾ ಸದಸ್ಯರು, ಮುಳವಾಗಿಲು ವಿಧಾನಸಭಾ ಕ್ಷೇತ್ರ, ಕೋಲಾರ ಜಿಲ್ಲೆ	ಸದಸ್ಯರು
18	ಶ್ರೀ ಹೆಚ್.ಕೆ. ಕುಮಾರಸ್ವಾಮಿ, ಮಾನ್ಯ ವಿಧಾನಸಭಾ ಸದಸ್ಯರು, ಸಕಲೇಶ್‌ಪುರ ಕ್ಷೇತ್ರ	ಸದಸ್ಯರು
19	ಶ್ರೀ ಎಸ್. ಚಿಕ್ಕಮಾದು, ಮಾನ್ಯ ವಿಧಾನಪರಿಷತ್ತಿನ ಸದಸ್ಯರು	ಸದಸ್ಯರು
20	ಶ್ರೀ ಡಿ.ಎಸ್. ವೀರಯ್ಯ, ಮಾನ್ಯ ವಿಧಾನ ಪರಿಷತ್ ಸದಸ್ಯರು	ಸದಸ್ಯರು
21	ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ	ಸದಸ್ಯರು
22	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ಒಳಾಡಳಿತ ಇಲಾಖೆ	ಸದಸ್ಯರು
23	ಡೈರೆಕ್ಟರ್ ಜನರಲ್ ಅಂಡ್ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್, ಬೆಂಗಳೂರು	ಸದಸ್ಯರು
24	ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಬೆಂಗಳೂರು	ಸದಸ್ಯರು
25	ನಿರ್ದೇಶಕರು, ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗ, (ಕರ್ನಾಟಕ), ಬೆಂಗಳೂರು	ಸದಸ್ಯರು
26	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ	ಸಮಾವೇಶಕರು

ಸದರಿ ಸಮಿತಿ ಸಭೆಯನ್ನು ವರ್ಷದಲ್ಲಿ ಎರಡು ಬಾರಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ ಅಧಿನಿಯಮ 1989)ರ ಪ್ರಕಾರ ನಡೆಸಬೇಕಾಗಿದೆ. ವಿವಿಧ ಇಲಾಖೆ ಏಜೆನ್ಸಿಗಳು ಸಂಬಂಧಪಟ್ಟ ಅಧಿನಿಯಮ : ನಿಯಮಗಳನ್ನು ಅನುಷ್ಠಾನಗೊಳಿಸುವ ಮುಖಾಂತರ ದೌರ್ಜನ್ಯಕ್ಕೆ ಒಳಗಾದ ಪರಿಶಿಷ್ಟ ಜಾತಿ ಹಾಗು ಪರಿಶಿಷ್ಟ ಪಂಗಡದ ಜನರ ಹಿತ ರಕ್ಷಿಸುವಲ್ಲಿ ತೆಗೆದುಕೊಂಡ ಕ್ರಮದ ವಿವರ ಪರಿಶೀಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಆರ್. ಲೀಲಾವತಿ
ಸರ್ಕಾರದ ಉಪ ಕಾರ್ಯದರ್ಶಿ-1
ಪಿ.ಆರ್. 31 ಸಮಾಜ ಕಲ್ಯಾಣ ಇಲಾಖೆ

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಚಿತ್ರದುರ್ಗ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತನ ಸದಸ್ಯರುಗಳನ್ನು ನೇಮಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ : ಯೋಇ 309 ಪಿಟಿಪಿ 94, ದಿನಾಂಕ: 07-08-1995
2. ಅಧ್ಯಕ್ಷರು, ಭಾರತೀಯ ಜನತಾ ಪಾರ್ಟಿ, ಬೆಂಗಳೂರು ಇವರ ಪತ್ರದ ಸಂಖ್ಯೆ: ರಾಕಾ/ನಾನಿ/305/2011 ದಿನಾಂಕ: 04-07-2011.
3. ಮಾನ್ಯ ಮುಖ್ಯಮಂತ್ರಿಯವರು ಸಚಿವಾಲಯದ ಟಿಪ್ಪಣಿ ಸಂಖ್ಯೆ: ಮುಮಂಸ /ಡಿಎಸ್/ 602/ಎನ್‌ಒಎಂ/11, ದಿನಾಂಕ: 07-07-2011.

ಪ್ರಸ್ತಾವನೆ :

ಮೇಲೆ ಓದಲಾದ (1)ರ ದಿನಾಂಕ: 07-08-1995ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದ/ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗಳನ್ನು ರಚಿಸಲಾಗಿರುತ್ತದೆ. ಮೇಲೆ ಓದಲಾದ (2) ರಲ್ಲಿರುವ ಪತ್ರಗಳಲ್ಲಿ ಅಧ್ಯಕ್ಷರು, ಭಾರತೀಯ ಜನತಾ ಪಾರ್ಟಿ, ಬೆಂಗಳೂರು ಇವರ ಪತ್ರಗಳಲ್ಲಿನ ಶಿಫಾರಸ್ಸು ಮೇರೆಗೆ ಮೇಲೆ ಓದಲಾದ (3)ರ ಪತ್ರದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಅನುಮೋದಿಸಿರುವಂತೆ ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ತಾಲ್ಲುಕುಗಳಿಗೆ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ, ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲು ಸರ್ಕಾರ ತೀರ್ಮಾನಿಸಿದೆ. ಆದ್ದರಿಂದ, ಈ ಆದೇಶವನ್ನು ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಯೋಇ 91 ಯೋವಿವಿ 2011 ಬೆಂಗಳೂರು, ದಿನಾಂಕ : 30ನೇ ನವೆಂಬರ್ 2011

ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಈ ಕೆಳಕಂಡ ಆರು ಜನರನ್ನು ಚಿತ್ರದುರ್ಗ ತಾಲ್ಲೂಕಿನ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರನ್ನಾಗಿ ನೇಮಿಸಲಾಗಿದೆ.

ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ತಾಲ್ಲೂಕು

ಕ್ರಸಂ.	ಹೆಸರು	ವರ್ಗ
1	ಶ್ರೀಮತಿ ಲಕ್ಷ್ಮೀ ಕೋ. ಮಲ್ಲಣ್ಣ, ಐ.ಯು.ಡಿ.ಪಿ. ಲೇಔಟ್, 4ನೇ ಅಡ್ಡರಸ್ತೆ, ಚಿತ್ರದುರ್ಗ	ಮಹಿಳೆ
2	ಶ್ರೀ ಎಸ್.ಎಂ. ಕೊಟ್ರಸ್ವಾಮಿ ಬಿನ್ ಎಸ್.ಎಂ. ಗಂಗಾದರಯ್ಯ, ಚಿಕ್ಕಪ್ಪನಹಳ್ಳಿ ಮಾಡನಾಯ್ಕನಹಳ್ಳಿ ಪೋಸ್ಟ್ ಚಿತ್ರದುರ್ಗ ತಾಲ್ಲೂಕು	ಸಾಮಾನ್ಯ
3	ಶ್ರೀ ಎಸ್.ಸಿದ್ದಪ್ಪ ಬಿನ್ ಸಿದ್ದಲಿಂಗಪ್ಪ ಜಾನುಕೊಂಡ, ಪಂಡ್ರಹಳ್ಳಿ ಅಂಚೆ, ಚಿತ್ರದುರ್ಗ ತಾಲ್ಲೂಕು	ಸಾಮಾನ್ಯ
4	ಶ್ರೀ ಬಿ.ಸಿ.ಸುಧಾಕರ ಬಿನ್ ಚಂದ್ರಪ್ಪ ಮೇಗಳಹಳ್ಳಿ, ಕಡ್ಲೇಗುದ್ದು ಅಂಚೆ, ಚಿತ್ರದುರ್ಗ ತಾಲ್ಲೂಕು	ಎಸ್.ಟಿ.
5	ಶ್ರೀ ಕೆ.ವಿ.ರವಿ ಒಡೆಯರ್ ಬಿನ್ ಕರಿಸಿದ್ದಯ್ಯ ಒಡೆಯರ್, ಸೊಲ್ಲಾಪುರ, ಸಿದ್ದಾಪುರ ಅಂಚೆ, ಚಿತ್ರದುರ್ಗ ತಾಲ್ಲೂಕು	ಬಿ.ಸಿ.ಎಂ.
6	ಶ್ರೀ ಮಹಮ್ಮದ್ ಮಕ್ಸೂದ್ ಪಾಷಾ ಬಿನ್ ಅಬ್ದುಲ್ ಬಷೀರ್ ಮ್ಯಾಕ್ಸ್ ನೆಟ್‌ವರ್ಲ್ಡ್, ಸೂಪರ್ ಕಾಂಪ್ಲೆಕ್ಸ್ ಪ್ರಸನ್ನ ರಸ್ತೆ ಚಿತ್ರದುರ್ಗ	ಅ.ಸಂ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ಚಿಕ್ಕರಾಜು

ಸರ್ಕಾರದ ಅಧೀನ ಕಾರ್ಯದರ್ಶಿ-1 ಮತ್ತು 2,

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ಪಿ.ಆರ್. 32

HORTICULTURE SECRETARIAT

Sub : "Scheme for Integrated Farming in Coconut for Productivity/Improvement with Coconut Development Board Assistance (100%CDB)" – Release of funds-reg.

Read:
1) Government Order No. HCD 108 HPP 2011 dated: 12-05-2011
2) Government Order No. HCD 208 HPP 2011 dated: 26-07-2011
3) Government Order No. HCD 100 HPP 2011 dated: 28-07-2011
4) CDB letter No. 505/2006- DEV (Karnataka) dated: 01-09-2011
5) CDB letter No. 597/2009- DEV (Karnataka) dated: 03-10-2011
6) Letter of Director of Horticulture No. ತೋಇ/ತೋಬೆ/ಸತೋಅ–2/3/2011-12 dated: 11-11-2011.

Preamble:

Sanction had been accorded to the Director of Horticulture to implement the "Scheme for Integrated Farming in Coconut for Productivity/Improvement in the State" under the Head of Account 2401-00-108-2-35-100 (Financial Assistance/Relief) during 2011-12, Rs. 298,07,628/- (Rs. 7,50,000 = Rs. 264,37,628/- = Rs. 26,20,000) has been released as per Government Orders read at (1), (2) and (3) above.

2. Coconut Development Board vide its letters read at (4) and (5) above has released an amount of Rs. 1,25,000.00 and Rs. 14,00,000.00 to the Secretary, Horticulture through 3 Demand Drafts as detailed below:

Sl. No.	Scheme	D.D. No.	Date	Amount in Rs.
1	"Production & Distribution of hybrids/ other local tall seedlings"	065026	01-09-2011	1,25,000.00
2	"Integrated farming in coconut holdings for productivity improvement- Laying out of demonstration plots"	065522	01-10-2011	9,00,000.00
		065523	01-10-2011	5,00,000.00
	Sub Total			14,00,000.00
	GRAND TOTAL			**15,25,000.00**

3. The Director of Horticulture has requested to release the said amount and the State share for further utilization as per the letter read at (5) above.

4. Hence this Order:

Government Order No. HCD 100 HPP 2011 Bangalore, Dated 5th December 2011

Government sanction is hereby accorded to release an amount of Rs.16,50,000.00 (Rupees Sixteen Lakhs Fifty Thousand only) to the Director of Horticulture under the "Scheme for Integrated Farming in Coconut for Productivity/ Improvement in the State" during 2011-12 under the Head of Account 2401-00-108-2-35-100 (Financial Assistance/ Relief) towards Coconut Development Board share and State share as detailed below:

Sl.	Scheme	Amount in Rs.
1	"Integrated farming in coconut holdings for productivity improvement in Karnataka State – Laying out of demonstration plots" (100%)	14,00,000.00
2	"Production & Distribution of hybrids/ other local tall seedlings"	1,25,000.00
3	State Share	1,25,000.00
	GRAND TOTAL	16,50,000.00

2. This order is issued with the concurrence by the Internal Financial Advisor, Agriculture and Horticuture Department vide Note: ಕೃತೋಇ 11 ಆಂಆಸ 2011 dated: 29-11-2011

By Order and in the name of the Governor of Karnataka,
B.C.PRAKASH
Under Secretary to Government,
Horticuture Department.

PR. 33

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಚಿಕ್ಕಬಳ್ಳಾಪುರ ಜಿಲ್ಲೆ ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನೇಮಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ : ಯೋಇ 309 ಪಿಟಿಪಿ 94, ದಿನಾಂಕ: 07-08-1995.
2. ಶ್ರೀ ಕೆ.ಎಸ್. ಈಶ್ವರಪ್ಪ, ರಾಜ್ಯಾಧ್ಯಕ್ಷರು, ಭಾ.ಜ.ಪ. ಇವರ ಪತ್ರ ಸಂಖ್ಯೆ: ರಾಕಾ/ಸಾನಿ/420/2011, ದಿನಾಂಕ: 20-09-2011.

ಪ್ರಸ್ತಾವನೆ :

ಮೇಲೆ ಓದಲಾದ (1)ರ ದಿನಾಂಕ 07-09-1995ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದ/ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗಳನ್ನು ರಚಿಸಲಾಗಿರುತ್ತದೆ. ಮಾನ್ಯ ಯೋಜನಾ ಸಚಿವರ ಶಿಫಾರಸ್ಸು ಮೇರೆಗೆ ಮಾನ್ಯ ಮುಖ್ಯಮಂತ್ರಿಯವರು ಅನುಮೋದಿಸಿರುವಂತೆ ಚಿಕ್ಕಬಳ್ಳಾಪುರ ಜಿಲ್ಲೆಯ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತನ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲು ಸರ್ಕಾರ ತೀರ್ಮಾನಿಸಿದೆ. ಆದ್ದರಿಂದ, ಸರ್ಕಾರ ಈ ಆದೇಶವನ್ನು ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಯೋಇ 64 ಯೋವಿವಿ 2009(ಭಾ) ಬೆಂಗಳೂರು, ದಿನಾಂಕ : 18ನೇ ನವೆಂಬರ್ 2011

ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ಸಂಖ್ಯೆ ಯೋಇ 64 ಯೋವಿವಿ 2009 (ಭಾ) ದಿನಾಂಕ: 22-06-2010ರಂದು ಹೊರಡಿಸಿರುವ ಆದೇಶದ ಕ್ರಮಸಂಖ್ಯೆ 4ರ ಶ್ರೀ ಪಿ.ವಿ. ನಾಗರಾಜ್ ಬಿನ್ ಪಿ.ವೀರಪ್ಪ, ಅನೂರು, ತಿಪ್ಪೇನಹಳ್ಳಿ ಅಂಚೆ, ಶಿಡ್ಲಘಟ್ಟ ತಾಲ್ಲೂಕು ಇವರ ನಾಮ ನಿರ್ದೇಶನವನ್ನು ರದ್ದುಗೊಳಿಸಿ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲು ಸರ್ಕಾರ ತೀರ್ಮಾನಿಸಿದೆ. ಆದ್ದರಿಂದ, ಸರ್ಕಾರ ಈ ಆದೇಶವನ್ನು ಹೊರಡಿಸಿದೆ. ಕೆಡಿಪಿ ಸಮಿತಿಗೆ ಶ್ರೀ ಪಿ.ವಿ. ನಾಗರಾಜು, ಅನೂರು, ಶಿಡ್ಲಘಟ್ಟ ತಾಲ್ಲೂಕು ಚಿಕ್ಕಬಳ್ಳಾಪುರ ಜಿಲ್ಲೆ, ಇವರ ಸದಸ್ಯತ್ವವನ್ನು ರದ್ದುಗೊಳಿಸಿ ಸದರಿಯವರ ಬದಲಾಗಿ ಈ ಕೆಳಕಂಡ ಹೆಸರನ್ನು ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತನ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲಾಗಿದೆ.

<u>ಚಿಕ್ಕಬಳ್ಳಾಪುರ ಜಿಲ್ಲೆ: ಕೆಡಿಪಿ ಸದಸ್ಯರು</u>

ಕ್ರ.ಸಂ.	ಈ ಮೊದಲು ಇದ್ದ ಸದಸ್ಯರ ವಿವರ	ನಾಮಕರಣ ಮಾಡಬೇಕಾದ ಸದಸ್ಯರ ವಿವರ	ವರ್ಗ
1	ಶ್ರೀ ಪಿ.ವಿ. ನಾಗರಾಜು, ಬಿನ್ ಪಿ. ವೀರಪ್ಪ ಅನೂರು, ತಿಪ್ಪೇನಹಳ್ಳಿ ಅಂಚೆ, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ	1) ಶ್ರೀ ಎಂ.ಕೆ. ಗಿರೀಶ್ ಬಿನ್ ಎನ್. ಮುನಿಯಪ್ಪ ಮಳ್ಳೂರು ಗ್ರಾಮ, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ	ಸಾಮಾನ್ಯ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಬಿ. ಚಿಕ್ಕರಾಜು
ಸರ್ಕಾರದ ಅಧೀನ ಕಾರ್ಯದರ್ಶಿ-1 ಮತ್ತು 2,
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ಪಿ.ಆರ್. 34

ಕೃಷಿ ಸಚಿವಾಲಯ

ವಿಷಯ : ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳಲ್ಲಿನ ವಿದ್ಯಾಸಂಸ್ಥೆಗಳಲ್ಲಿ ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಪ್ರಾರಂಭಿಸಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆ : 1. ಮಾನ್ಯ ಮುಖ್ಯಮಂತ್ರಿಯವರು ದಿನಾಂಕ: 24-02-2011ರಂದು ಮಾಡಿದ ಕೃಷಿ ಆಯವ್ಯಯ ಭಾಷಣ.
2. (1) ಬೆಂಗಳೂರು, (2) ಧಾರವಾಡ ಮತ್ತು (3) ರಾಯಚೂರು ಕೃಷಿ ವಿಶ್ವವಿದ್ಯಾಲಯಗಳು ಸಲ್ಲಿಸಿರುವ ದಿನಾಂಕ: 19-05-2011, ದಿನಾಂಕ: 23-05-2011 ಮತ್ತು 23-05-2011ರ ಪ್ರಸ್ತಾವನೆ

ಪ್ರಸ್ತಾವನೆ :

ಮಾನ್ಯ ಮುಖ್ಯಮಂತ್ರಿಯವರು ಮೇಲೆ-1ರಲ್ಲಿ ಓದಲಾದ ದಿನಾಂಕ: 24-02-2011ರಂದು ಮಾಡಿದ ಕೃಷಿ ಆಯವ್ಯಯ ಭಾಷಣ ಕಂಡಿಕೆ-4/ರಲ್ಲಿ ಕೃಷಿ, ತೋಟಗಾರಿಕೆ, ಪಶುಪಾಲನೆ ಹಾಗೂ [illegible]

2011-12ನೇ ಸಾಲಿನಿಂದಲೇ ಪ್ರಾರಂಭಿಸುವುದಾಗಿ ಘೋಷಿಸಿದ್ದಾರೆ. ಸದರಿ ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಪ್ರಾರಂಭಿಸುವ ಬಗ್ಗೆ ಮೇಲೆ-2ರಲ್ಲಿ ಓದಲಾದ ಪತ್ರಗಳಂತೆ ಬೆಂಗಳೂರು ಧಾರವಾಡ ಮತ್ತು ರಾಯಚೂರು ಕೃಷಿ ವಿಶ್ವವಿದ್ಯಾಲಯಗಳಿಂದ ವಿವರವಾದ ಮಾಹಿತಿ ಮತ್ತು ಪ್ರಸ್ತಾವನೆಗಳನ್ನು ಪಡೆದು ಪರಿಶೀಲಿಸಲಾಗಿದೆ.

ಪ್ರಸ್ತಾವನೆಯ ಬಗ್ಗೆ ಯೋಜನಾ ಇಲಾಖೆಯು ದಿನಾಂಕ: 24-06-2011ರಂದು ತನ್ನ ಸಹಮತಿಯನ್ನು ನೀಡಿದೆ. ಅಂತೆಯೇ ಆರ್ಥಿಕ ಇಲಾಖೆಯೂ ದಿನಾಂಕ: 28-07-2011ರಂದು ಪ್ರಸ್ತಾವನೆಗೆ ತಗಲುವ ವೆಚ್ಚವನ್ನು ಪೂರಕ ಆಯವ್ಯಯ-2ರಲ್ಲಿ ಭರಿಸುವ ಷರತ್ತಿಗೆ ಒಳಪಟ್ಟು ತನ್ನ ಅನುಮೋದನೆಯನ್ನು ನೀಡಿದೆ. ಮುಂದುವರೆದು ತಕ್ಷಣದ ವೆಚ್ಚದ ಉದ್ದೇಶಗಳಿಗಾಗಿ ಆಯವ್ಯಯದ ಯೋಜನಾ ಅನುದಾನದಲ್ಲಿ ಲಭ್ಯವಿರುವ ಮೊತ್ತದಿಂದ ಭರಿಸುವ ಬಗ್ಗೆ ಪರಿಶೀಲಿಸುವಂತೆಯೂ ತಿಳಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕೃಇ 120 ಕೃವಿವಿ 2011, ಬೆಂಗಳೂರು, ದಿನಾಂಕ : 22-11-2011.

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಮೇರೆಗೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಆಡಳಿತ ವ್ಯಾಪ್ತಿಗೆ ಒಳಪಟ್ಟ ವಿ.ಸಿ. ಫಾರಂ (ಕೃಷಿ ಮಹಾವಿದ್ಯಾಲಯ, ಮಂಡ್ಯ ಜಿಲ್ಲೆ) ಮತ್ತು ಕತ್ತಲಗಿ (ಕೃಷಿ ಸಂಶೋಧನಾ ಕೇಂದ್ರ, ದಾವಣಗೆರೆ ಜಿಲ್ಲೆ), ಧಾರವಾಡ ಕೃಷಿ ವಿಶ್ವವಿದ್ಯಾಲಯದ ಆಡಳಿತ ವ್ಯಾಪ್ತಿಗೆ ಒಳಪಟ್ಟ ಧಾರವಾಡ, ಬಿಜಾಪುರ, ಶಿರಸಿ, ಬಾಗಲಕೋಟೆ, ಬೇಳಗಾವಿ ಮತ್ತು ಹಾವೇರಿ ಜಿಲ್ಲೆ ಹಾಗೂ ರಾಯಚೂರು ಕೃಷಿ ವಿಶ್ವವಿದ್ಯಾಲಯದ ಆಡಳಿತ ವ್ಯಾಪ್ತಿಗೆ ಒಳಪಟ್ಟ ರಾಯಚೂರು (ಕೃಷಿ ಮಹಾವಿದ್ಯಾಲಯ, ಮತ್ತು ಕೃಷಿ ತಾಂತ್ರಿಕ ಮಹಾವಿದ್ಯಾಲಯ) ಮತ್ತು ಭೀಮರಾಯನಗುಡಿಯಲ್ಲಿ (ಕೃಷಿ ಮಹಾವಿದ್ಯಾಲಯ, ಶಹಪುರ ತಾಲ್ಲೂಕು) 2011-12ನೇ ಸಾಲಿನಿಂದ 2 ವರ್ಷಗಳ ಕೃಷಿಯಲ್ಲಿ ಡಿಪ್ಲೊಮಾ ಮತ್ತು 6 ತಿಂಗಳುಗಳ ಅವಧಿಯಲ್ಲಿ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಪ್ರಾರಂಭಿಸಲು ಅನುಮತಿಯನ್ನು ನೀಡಲಾಗಿದೆ.

ಮೇಲ್ಕಂಡ ಡಿಪ್ಲೊಮಾ ಮತ್ತು ಸರ್ಟಿಫಕೇಟ್ ಕೋರ್ಸ್‌ಗಳನ್ನು 2011-12ನೇ ಸಲಿನಿಂದ ಪ್ರಾರಂಭಿಸಲು ಮೂರು ಕೃಷಿ ವಿಶ್ವವಿದ್ಯಾಲಯಗಳಿಗೆ 2011-12ನೇ ಸಾಲಿನಲ್ಲಿ ರೂ. 15.00 ಕೋಟಿ ಒದಗಿಸಲಾಗಿದೆ. ರೂ. 15.00 ಕೋಟಿಗಳನ್ನು 2012-13ನೇ ಸಾಲಿಗೆ ನಿಗದಿಪಡಿಸಿದ್ದು ಆ ಹಣ ಮುಂದಿನ ವರ್ಷದಲ್ಲಿ ತೆಗೆದುಕೊಳ್ಳುವ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಅವಶ್ಯಕತೆ ಆಧಾರದ ಮೇಲೆ ಬಿಡುಗಡೆ ಮಾಡಲಾಗುವುದು. ಪ್ರಸ್ತುತ 2011-12ನೇ ಸಾಲಿನಲ್ಲಿ ಆಯಾ ವಿದ್ಯಾಸಂಸ್ಥೆಗಳಲ್ಲಿ ಪ್ರವೇಶಾವಕಾಶಕ್ಕೆ ನಿಗದಿಪಡಿಸಿರುವ ವಿದ್ಯಾರ್ಥಿಗಳ ಸಂಖ್ಯೆಯಂತೆ, ಪ್ರತಿಯೊಬ್ಬ ವಿದ್ಯಾರ್ಥಿಗೆ ಮಾಸಿಕ ರೂ. 1000/-ದಂತೆ ವಿದ್ಯಾರ್ಥಿ ವೇತನ ನೀಡತಕ್ಕದ್ದು. ಬೋಧಕ ಮತ್ತು ಭೋಧಕೇತರ ಸಿಬ್ಬಂದಿಯ ವೇತನ ಇತ್ಯಾದಿ, ಕಟ್ಟಡ, ಪೀಠೋಪಕರಣ ಮುಂತಾದ ಸ್ಥಿರ ಹಾಗೂ ಪುನರಾರ್ವತಿತ ವೆಚ್ಚಗಳನ್ನು ಭರಿಸುವ ಸಲುವಾಗಿ ಅಗತ್ಯವಾದ ಅನುದಾನವನ್ನು ಅನುಬಂಧ-1ರಲ್ಲಿ ಗುರುತಿಸಿದ್ದು ಶೀಘ್ರವಾಗಿ ಬಿಡುಗಡೆ ಮಾಡಲಾಗುವುದು. ಇದನ್ನು ಅವಶ್ಯಕತೆ ಗಮನಿಸಿ, ಪೂರ್ವಭಾವಿಯಾಗಿ ಯೋಜಿಸಿ, ಖರ್ಚು ಮಾಡತಕ್ಕದ್ದು. ಸ್ಥಿರ ವೆಚ್ಚವನ್ನು ಒಮ್ಮೆ ಮಾತ್ರ ಅನುದಾನವಾಗಿ 2011-12ನೇ ಸಾಲಿಗೆ ನೀಡಲಾಗಿದೆ.

ಪ್ರಸ್ತುತ ಸಾಲಿನ ಅಯವ್ಯಯದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯಕ್ಕೆ ರೂ. 498.63 ಲಕ್ಷಗಳು, ಧಾರವಾಡ ಕೃಷಿ ವಿಶ್ವವಿದ್ಯಾಲಯಕ್ಕೆ ರೂ. 488.60 ಲಕ್ಷಗಳು ಮತ್ತು ರಾಯಚೂರು ಕೃಷಿ ವಿಶ್ವವಿದ್ಯಾಲಯಕ್ಕೆ ರೂ. 493.20 ಲಕ್ಷಗಳಂತೆ ಹಂಚಿಕೆ ಮಾಡಿದ್ದು ಈ ಮೊತ್ತವನ್ನು ಲಭ್ಯವಿರುವ ಯೋಜನಾ ಅನುದಾನದಿಂದ ಬಿಡುಗಡೆ ಮಾಡಬೇಕಾಗುತ್ತದೆ.

ಈ ಆದೇಶವನ್ನು ದಿನಾಂಕ: 24-06-2011ರ ಟಿಪ್ಪಣಿ ಸಂಖ್ಯೆ: ಪಿಡಿ 47 ಪಿಎಫ್‌ಒ 2011ರಲ್ಲಿ ಯೋಜನೆ, ಕಾರ್ಯಕ್ರಮ ನಿರ್ವಹಣೆ ಮತ್ತು ಸಾಂಖ್ಯಿಕ ಇಲಾಖೆಯು ಮತ್ತು ದಿನಾಂಕ: 28-07-2011ರ ಟಿಪ್ಪಣಿ ಸಂಖ್ಯೆ: ಎಫ್‌ಡಿ 284ವ-4/2011ರಲ್ಲಿ ಅರ್ಥಿಕ ಇಲಾಖೆಯು ನೀಡಿರುವ ಅಭಿಪ್ರಾಯ ಹಾಗೂ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಮಂಜುನಾಥ್ ಪಾಟೀಲ್
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಸೇವೆಗಳು)

ANNEXURE

BREAKUP FOR RS. 15.00 CRORES

MAXIMUM OF RS. 5.00 CRORES FOR EACH UNIVERSITY

Name of the Agricultural University	Stipend	Non-Recurring	Recurring	Total
Bangalore	48.63	350.00	100.00	498.63
Dharwad	63.60	325.00	100.00	488.60
Raichur	43.20	350.00	100.00	493.20
Total	155.43	1025.00	300.00	1480.43

ಮಂಜುನಾಥ್ ಪಾಟೀಲ್
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಸೇವೆಗಳು)

ಪಿ.ಆರ್. 35

ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಸಚಿವಾಲಯ

ವಿಷಯ : 2010ನೇ ಸಾಲಿನ "ಬಸವ ಪುರಸ್ಕಾರ ಪ್ರಶಸ್ತಿ" ನೀಡುವ ಕುರಿತು

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 389 ಕಸಧ 2010 ದಿನಾಂಕ: 24-08-2011

2. ಕನ್ನಡ ಮತ್ತು ಸಂಸ್ಕೃತಿ ಆಯುಕ್ತರ ಅ.ಸ.ಪತ್ರ ಸಂಖ್ಯೆ: ಕಸನಿ/23/ಬ.ಪು/2010-11, ದಿನಾಂಕ: 24-10-2011.

ಪ್ರಸ್ತಾವನೆ :

ಓದಲಾದ (1)ರ ಆದೇಶದಲ್ಲಿ 2010ನೇ ಸಾಲಿನ "ಬಸವ ಪುರಸ್ಕಾರ ಪ್ರಶಸ್ತಿ" ಗೆ ಅರ್ಹರಾದವರನ್ನು ಆಯ್ಕೆ ಮಾಡಲು ಡಾ: ಎಂ.ಎಂ. ಕಲಬುರ್ಗಿ ರವರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯನ್ನು ರಚಿಸಲಾಗಿತ್ತು. ಆಯ್ಕೆ ಸಮಿತಿಯು ದಿನಾಂಕ: 23-09-2011 ಮತ್ತು 21-10-2011 ರಂದು ಸಭೆ ಸೇರಿ, 2010ನೇ ಸಾಲಿನ "ಬಸವ ಪುರಸ್ಕಾರ ಪ್ರಶಸ್ತಿ" ಗೆ ಸಮಾಜಿಕ ಸೇವಾ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿದ **ಶ್ರೀಮತಿ ಮೇಧಾ ಪಾಟ್ಕರ್** ಇವರನ್ನು ಆಯ್ಕೆ ಮಾಡಿದ್ದು. ಈ ಬಗ್ಗೆ ಸರ್ಕಾರದ ಆದೇಶ ಹೊರಡಿಸುವಂತೆ ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಓದಲಾದ (2)ರ ಪತ್ರದಲ್ಲಿ ಸರ್ಕಾರವನ್ನು ಕೋರಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ : ಕಸಂವಾಪ್ರ 1262 ಕಸಧ 2011, ಬೆಂಗಳೂರು, ದಿನಾಂಕ : 03-12-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2010ನೇ ಸಾಲಿನ "ಬಸವ ಪುರಸ್ಕಾರ ಪ್ರಶಸ್ತಿ" ಯನ್ನು **ಶ್ರೀಮತಿ ಮೇಧಾ ಪಾಟ್ಕರ್** ಇವರಿಗೆ ನೀಡಲು ಸರ್ಕಾರವು ಹರ್ಷಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಹೆಚ್.ವಿ. ರಾಮಚಂದ್ರರಾವ್
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ವಾರ್ತಾ ಇಲಾಖೆ

ಪಿ.ಆರ್. 36

ಕನ್ನಡ ಸಂಸ್ಕೃತಿ ಮತ್ತು ವಾರ್ತಾ ಸಚಿವಾಲಯ

ವಿಷಯ : ಶ್ರೀರಂಗಪಟ್ಟಣ ಪಾರಂಪರಿಕ ಪ್ರದೇಶದ ಅಭಿವೃದ್ಧಿ ಮತ್ತು ಸಂರಕ್ಷಣೆಗಾಗಿ ರಚಿಸಲಾದ ತಜ್ಞರ ಸಮಿತಿಯನ್ನು ಮುಂದುವರಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ: ಸಂಕಇ 39 ಕೆಎಂಯು 2004, ದಿನಾಂಕ: 25-01-2005.

2. ಸರ್ಕಾರದ ಆದೇಶ ಸಂಖ್ಯೆ: ಸಂಕಇ 245 ಕೆಎಂಯು 2005, ದಿನಾಂಕ: 9-1-2006.

3. ಆಯುಕ್ತರು ಪ್ರಾಚ್ಯವಸ್ತು: ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ರವರ ದಿನಾಂಕ 08-12-2010 ರಂದು ಕೊನೆಗೊಂಡ ಪತ್ರ ಸಂ: ಅಪ್ರಾಸಂಪ/ಮೈ- ಶ್ರೀ.ತ.ಸ/2010-11 19.

ಪ್ರಸ್ತಾವನೆ :

ಮೈಸೂರು ಮತ್ತು ಶ್ರೀರಂಗಪಟ್ಟಣ ನಗರಗಳಿಗೆ ಪಾರಂಪರಿಕ ಪ್ರದೇಶದ ಅಭಿವೃದ್ಧಿ ಮತ್ತು ಸಂರಕ್ಷಣೆ ಕುರಿತಂತೆ ತಜ್ಞರ ಸಮಿತಿಯನ್ನು ದಿನಾಂಕ: 25-1-2005 ರಿಂದ ಒಂದು ವರ್ಷದ ಅವಧಿಗೆ ಅಧಿಕಾರಿ ಹಾಗೂ ಅಧಿಕಾರೇತರ ಸದಸ್ಯರನ್ನೊಳಗೊಂಡಂತೆ ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ರಚಿಸಲಾಗಿತ್ತು. ಸದರಿ ಸಮಿತಿಯನ್ನು ದಿನಾಂಕ: 25-1-2006 ರಿಂದ ದಿನಾಂಕ: 25-01-2008 ರವರೆಗೆ ಎರಡು ವರ್ಷಗಳ ಅವಧಿಗೆ ಮೇಲೆ (2) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮುಂದುವರಿಸಲಾಗಿತ್ತು.

ಮೈಸೂರು- ಶ್ರೀರಂಗಪಟ್ಟಣ ನಗರಗಳಿಗೆ ಸಂಬಂದಿಸಿದಂತೆ ಆಯಾ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪ್ರತ್ಯೇಕ ತಜ್ಞರ ಸಮಿತಿಯನ್ನು ರಚಿಸುವಂತೆ ಸದಸ್ಯರುಗಳ ಪಟ್ಟಿಯೊಂದಿಗೆ ಮೇಲೆ (3)ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು ಪ್ರಾಚ್ಯವಸ್ತು ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ರವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದೆ, ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಕಸಂವಾಪ್ರ 80 ಕೆಎಂಯು 2010(2), ಬೆಂಗಳೂರು, ದಿನಾಂಕ : 22-11-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀರಂಗಪಟ್ಟಣ ಪಾರಂಪರಿಕ ಪ್ರದೇಶದ ಅಭಿವೃದ್ಧಿ ಮತ್ತು ಸಂರಕ್ಷಣೆಗಾಗಿ ಅನುಬಂಧದಲ್ಲಿ ಕಾಣಿಸಿರುವ ಸದಸ್ಯನ್ನೊಳಗೊಂಡ ತಜ್ಞರ ಸಮಿತಿಯನ್ನು ಪುನರ್ ರಚಿಸಿ ಸಮಿತಿಯ ಅವಧಿಯನ್ನು ದಿನಾಂಕ 25-1-2008 ರಿಂದ 31-03-2012ರವರೆಗೆ ಮುಂದುವರೆಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎನ್. ಗೀತಾಕುಮಾರಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಸಂಸ್ಕೃತಿ ಮತ್ತು ವಾರ್ತಾ ಇಲಾಖೆ
(ಆಡಳಿತ ಕನ್ನಡ)

ದಿನಾಂಕ: 22-11-2011ರ ಆದೇಶ ಸಂಖ್ಯೆ: ಕಸಂವಾಪ್ರ 80 ಕೆಎಂಯು 2010 (2)ಕ್ಕೆ

ಅನುಬಂಧ

ಕ್ರಮ ಸಂಖ್ಯೆ	ಅಧಿಕಾರಿ/ಅಧಿಕಾರೇತರ ಸದಸ್ಯರ ಹೆಸರು	ಹುದ್ದೆ
1.	ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ	ಅಧ್ಯಕ್ಷರು
2.	ಆಯುಕ್ತರು, ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ವೆಂಕಟಪ್ಪ ಚಿತ್ರಶಾಲೆ, ಕಸ್ತೂರ್ ಬಾ ರಸ್ತೆ, ಬೆಂಗಳೂರು-560 001	ಉಪಾಧ್ಯಕ್ಷರು
3.	ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯತ್, ಮಂಡ್ಯ ಜಿಲ್ಲೆ, ಮಂಡ್ಯ	ಸದಸ್ಯರು
4	ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಮಂಡ್ಯ ಜಿಲ್ಲೆ, ಮಂಡ್ಯ	ಸದಸ್ಯರು
5	ನಿರ್ದೇಶಕರು, ಪ್ರಾಚ್ಯವಸ್ತು, ಸಂಗ್ರಹಾಲಗಳ ನಿರ್ದೇಶನಾಲಯ, ದಸರಾ ವಸ್ತುಪ್ರದರ್ಶನ ಅವರಣ, ದೊಡ್ಡಕೆರೆ ಮೈದಾನ, ಮೈಸೂರು-570 010	ಸದಸ್ಯರು
6	ತಹಸೀಲ್ದಾರ್ ಶ್ರೀರಂಗಪಟ್ಟಣ ತಾಲ್ಲೂಕು, ಶ್ರೀರಂಗಪಟ್ಟಣ	ಸದಸ್ಯರು
7	ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಶ್ರೀರಂಗಪಟ್ಟಣ ಉಪ ವಿಭಾಗ, ಶ್ರೀರಂಗಪಟ್ಟಣ	ಸದಸ್ಯರು
8	ಮುಖ್ಯಾಧಿಕಾರಿಗಳು, ಪುರಸಭೆ, ಶ್ರೀರಂಗಪಟ್ಟಣ	ಸದಸ್ಯರು
9	ಕಾರ್ಯನಿರ್ವಹಣಾಧಿಕಾರಿ, ಶ್ರೀರಂಗನಾಥಸ್ವಾಮಿ ದೇವಸ್ಥಾನ, ಶ್ರೀರಂಗಪಟ್ಟಣ	ಸದಸ್ಯರು
10	ಸಹಾಯಕ ಪುರಾತತ್ವ ಅಧೀಕ್ಷಕರು, ಕೇಂದ್ರ ಪುರಾತತ್ವ ಸರ್ವೇಕ್ಷಣೆ, ಭಾರತ ಸರ್ಕಾರ, ದರಿಯಾ ದೌಲತ್ ಭಾಗ, ಶ್ರೀರಂಗಪಟ್ಟಣ	ಸದಸ್ಯರು
11	ಕರೀಮುದ್ದೀನ್ ನಿವೃತ್ತ ಪ್ರಾಧ್ಯಪಕರು, ಗಂಜಾಂ, ಶ್ರೀರಂಗಪಟ್ಟಣ	ಸದಸ್ಯರು
12	ಶ್ರೀ ರವೀಂದ್ರ ಗುಂಡೂರಾವ್, ವಾಸ್ತುಶಿಲ್ಪ ಸಂರಕ್ಷಕರು ಎ-5, ಹೇಮಾವತಿ ಅಪಾರ್ಟ್‌ಮೇಂಟ್ಸ್, ನಂ. 22/23, ಟೆಂಪಲ್ ರಸ್ತೆ ಜಯಲಕ್ಷ್ಮೀಪುರಂ, ಮೈಸೂರು-570 002	ಸದಸ್ಯರು
13	ಶ್ರೀ ಹೆಚ್.ಡಿ. ನಾಗೇಶ್, ನಗರ ವಿನ್ಯಾಸ ತಜ್ಞರು ನಂ. 596, 1ನೇ ಕ್ರಾಸ್, ವಿಶ್ವಮಾನವ ಜೋಡಿ ರಸ್ತೆ, ಕುವೆಂಪುನಗರ, ಮೈಸೂರು- 570 023	ಸದಸ್ಯರು
14	ಡಾ: ಬಿ.ವಿ. ಸುಧಾರಾಣಿ, ಇತಿಹಾಸ ತಜ್ಞರು, ನಂ. 299, 12ನೇ ಕ್ರಾಸ್, ವಿಜಯನಗರ ರೈಲ್ವೆ ಲೇಔಟ್, ಮೈಸೂರು- 570 016	ಸದಸ್ಯರು
15	ಉಪ ನಿರ್ದೇಶಕರು, ಪ್ರಾಚ್ಯವಸ್ತು, ಸಂಗ್ರಹಾಲಯ ಮತ್ತು ಪಂರಂಪರೆ ಇಲಾಖೆ, ಅರಮನೆ, ಅವರಣ, ಮೈಸೂರು- 570 001	ಸದಸ್ಯ ಕಾರ್ಯದರ್ಶಿ

ಎನ್. ಗೀತಾಕುಮಾರಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಕನ್ನಡ ಸಂಸ್ಕೃತಿ ಮತ್ತು ವಾರ್ತಾ ಇಲಾಖೆ

(ಆಡಳಿತ ಕನ್ನಡ)

ಪಿ.ಆರ್. 37

ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಸಚಿವಾಲಯ

ವಿಷಯ : ಮೈಸೂರು 'ಪಾರಂಪರಿಕ ಪ್ರದೇಶದ ಅಭಿವೃದ್ಧಿ ಮತ್ತು ಸಂರಕ್ಷಣೆಗಾಗಿ ರಚಿಸಲಾದ ತಜ್ಞರ ಸಮಿತಿಯನ್ನು ಮುಂದುವರಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: ಸಂಕಇ 39 ಕೆಎಂಯು 2004, ದಿನಾಂಕ: 25-01-2005.
2. ಸರ್ಕಾರದ ಆದೇಶ ಸಂಖ್ಯೆ: ಸಂಕಇ 245 ಕೆಎಂಯು 2005, ದಿನಾಂಕ: 9-1-2006.
3. ಆಯುಕ್ತರು ಪ್ರಾಚ್ಯವಸ್ತು: ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ರವರ ದಿನಾಂಕ 08-12-2010 ರಂದು ಕೊನೆಗೊಂಡ ಪತ್ರ ಸಂ: ಅಪ್ರಾಸಂಪ/ಮೈ- ಶ್ರೀ.ತ.ಸ/2010-11

ಪ್ರಸ್ತಾವನೆ :

ಮೈಸೂರು ಮತ್ತು ಶ್ರೀರಂಗಪಟ್ಟಣ ನಗರಗಳಿಗೆ ಪಾರಂಪರಿಕ ಪ್ರದೇಶದ ಅಭಿವೃದ್ಧಿ ಮತ್ತು ಸಂರಕ್ಷಣೆ ಕುರಿತಂತೆ ತಜ್ಞರ ಸಮಿತಿಯನ್ನು ದಿನಾಂಕ: 25-1-2005 ರಿಂದ ಒಂದು ವರ್ಷದ ಅವಧಿಗೆ ಅಧಿಕಾರಿ ಹಾಗೂ ಅಧಿಕಾರೇತರ ಸದಸ್ಯರನ್ನೊಳಗೊಂಡಂತೆ ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ರಚಿಸಲಾಗಿತ್ತು. ಸದರಿ ಸಮಿತಿಯನ್ನು ದಿನಾಂಕ: 25-1-2006 ರಿಂದ ದಿನಾಂಕ: 25-01-2008 ರವರೆಗೆ ಎರಡು ವರ್ಷಗಳ ಅವಧಿಗೆ ಮೇಲೆ (2) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮುಂದುವರಿಸಲಾಗಿತ್ತು.

ಮೈಸೂರು- ಶ್ರೀರಂಗಪಟ್ಟಣ ನಗರಗಳಿಗೆ ಸಂಬಂದಿಸಿದಂತೆ ಆಯಾ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪ್ರತ್ಯೇಕ ತಜ್ಞರ ಸಮಿತಿಯನ್ನು ರಚಿಸುವಂತೆ ಸದಸ್ಯರುಗಳ ಪಟ್ಟಿಯೊಂದಿಗೆ ಮೇಲೆ (3)ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು ಪ್ರಾಚ್ಯವಸ್ತು ಸಂಗ್ರಹಾಲಯ ಮತ್ತ ಪರಂಪರೆ ಇಲಾಖೆ ರವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದೆ, ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಕಸಂವಾಪ್ರ 80 ಕೆಎಂಯು 2010 (1), ಬೆಂಗಳೂರು, ದಿನಾಂಕ : 22-11-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮೈಸೂರು ಪಾರಂಪರಿಕ ಪ್ರದೇಶದ ಅಭಿವೃದ್ಧಿ ಮತ್ತು ಸಂರಕ್ಷಣೆಗಾಗಿ ಅನುಬಂಧದಲ್ಲಿ ಕಾಣಿಸುವ ಸದಸ್ಯರನ್ನೊಳಗೊಂಡ ತಜ್ಞರ ಸಮಿತಿಯನ್ನು ಪುನರ್ ರಚಿಸಿ ಸಮಿತಿಯ ಅವಧಿಯನ್ನು ದಿನಾಂಕ 25-01-2008 ರಿಂದ 31-03-2012 ರವರೆಗೆ ಮುಂದುವರೆಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎನ್. ಗೀತಾಕುಮಾರಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ
(ಆಡಳಿತ ಕನ್ನಡ)

ದಿನಾಂಕ: 22-11-2011ರ ಆದೇಶ ಸಂಖ್ಯೆ: ಕಸಂವಾಪ್ರ 80 ಕೆಎಂಯು 2010 (1)ಕ್ಕೆ

ಅನುಬಂಧ

ಕ್ರಮ ಸಂಖ್ಯೆ	ಅಧಿಕಾರಿ/ಅಧಿಕಾರೇತರ ಸದಸ್ಯರ ಹೆಸರು	ಹುದ್ದೆ
1.	ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು	ಅಧ್ಯಕ್ಷರು
2.	ಆಯುಕ್ತರು, ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ವೆಂಕಟಪ್ಪ ಚಿತ್ರಶಾಲೆ, ಕಸ್ತೂರ್ ಬಾ ರಸ್ತೆ, ಬೆಂಗಳೂರು-560 001	ಉಪಾಧ್ಯಕ್ಷರು
3.	ಆಯುಕ್ತರು, ಮೈಸೂರು ನಗರ ಪೊಲೀಸ್, ಮೈಸೂರು	ಸದಸ್ಯರು
4	ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಮೈಸೂರು ಜಿಲ್ಲೆ, ಮೈಸೂರು	ಸದಸ್ಯರು
5	ನಿರ್ದೇಶಕರು, ಪ್ರಾಚ್ಯವಸ್ತು, ಸಂಗ್ರಹಾಲಗಳ ನಿರ್ದೇಶನಾಲಯ, ದಸರಾ ವಸ್ತುಪ್ರದರ್ಶನ ಅವರಣ, ದೊಡ್ಡಕೆರೆ ಮೈದಾನ, ಮೈಸೂರು-570 010	ಸದಸ್ಯರು
6	ಡಾ. ಎಂ.ಎಸ್. ನಾಗರಾಜರಾವ್ ನಿವೃತ್ತ ಮಹಾನಿರ್ದೇಶಕರು ಭಾರತೀಯ ಪುರಾತತ್ವ ಇಲಾಖೆ, ನಂ. 15, ಗಂಗೋತ್ರಿ ಬಡಾವಣೆ, ಮೈಸೂರು	ಸದಸ್ಯರು
7	ಮೇಜರ್ ಜನರಲ್ (ನಿವೃತ್ತ) ಡಾ. ಎಸ್.ಜಿ. ಒಂಬತ್ಕೆರೆ, ಪರಿಸರ ತಜ್ಞರು, ನಂ. 475, 7ನೇ ಮುಖ್ಯರಸ್ತೆ, ವಿಜಯನಗರ, 1ನೇ ಹಂತ ಮೈಸೂರು	ಸದಸ್ಯರು
8	ಶ್ರೀ ಆರ್. ಗುರು ಹಿರಿಯ ನಾಗರೀಕರು, ಅಧ್ಯಕ್ಷರು, ಎನ್.ಆರ್. ಗ್ರೂಪ್ಸ್, ನಂ. 1553, ವಿ.ವಿ. ರೋಡ್, ಮೈಸೂರು- 570 004	ಸದಸ್ಯರು

9	ಡಾ. ಎನ್. ಎಸ್. ರಂಗರಾಜು ಮುಖ್ಯಸ್ಥರು ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು	ಸದಸ್ಯರು
10	ಶ್ರೀ ರವೀಂದ್ರ ಗುಂಡೂರಾವ್ ವಾಸ್ತುಶಿಲ್ಪ ಸಂರಕ್ಷಕರು ಎ-5, ಹೇಮಾವತಿ ಅಪಾರ್ಟ್‌ಮೆಂಟ್ಸ್, ನಂ. 22/23, ಟೆಂಪಲ್ ರಸ್ತೆ, ಜಯಲಕ್ಷ್ಮೀಪುರಂ, ಮೈಸೂರು– 570 002	ಸದಸ್ಯರು
11	ಶ್ರೀ. ಹೆಚ್.ಡಿ. ನಾಗೇಶ್, ನಗರ ವಿನ್ಯಾಸ ತಜ್ಞರು ನಂ. 596, 1ನೇ ಕ್ರಾಸ್, ವಿಶ್ವಮಾನವ ಜೋಡಿ ರಸ್ತೆ, ಕುವೆಂಪುನಗರ, ಮೈಸೂರು–570 023	ಸದಸ್ಯರು
12	ಶ್ರೀ ವಿ.ಎ. ದೇಶಪಾಂಡೆ, ಡೀನ್, ಚಾಮರಾಜೇಂದ್ರ ದೃಶ್ಯ ಕಲಾ ಅಕಾಡೆಮಿ, ಸಯ್ಯಾಜಿ ರಸ್ತೆ, ಮೈಸೂರು– 570 001	ಸದಸ್ಯರು
13	ಶ್ರೀ ಎನ್. ಆರ್. ಅಶೋಕ್, ಸ್ಟ್ರಕ್ಚರಲ್ ಇಂಜಿನಿಯರ್, ಪ್ಲಾಟ್ ನಂ: 1, ಸಂಕಲ್ಪ ಗಾರ್ಡನಿಯ ಅಪಾರ್ಟ್‌ಮೆಂಟ್ಸ್, ಗೋಕುಲಂ ಮುಖ್ಯರಸ್ತೆ, ವಿ.ವಿ. ಮೊಹಲ್ಲಾ, ಮೈಸೂರು– 570 002	ಸದಸ್ಯರು
14	ಶ್ರೀ ಈಚನೂರು ಕುಮಾರ್ ಇತಿಹಾಸ ತಜ್ಞರು, ನಂ. 796, "ಎಂ" ಬ್ಲಾಕ್, ಕುವೆಂಪುನಗರ, ಮೈಸೂರು– 570 023	ಸದಸ್ಯರು
15	ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು	ಸದಸ್ಯರು
16	ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ, ಮೈಸೂರು	ಸದಸ್ಯರು
17	ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಮೈಸೂರು ವಿಭಾಗ, ಮೈಸೂರು	ಸದಸ್ಯರು
18	ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಇರ್ವಿನ್ ರಸ್ತೆ, ಮೈಸೂರು	ಸದಸ್ಯರು
19	ಉಪ ನಿರ್ದೇಶಕರು, ಪ್ರಾಚ್ಯವಸ್ತು ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ, ಅರಮನೆ ಅವರಣ, ಮೈಸೂರು– 570 001	ಸದಸ್ಯರು ಕಾರ್ಯದರ್ಶಿ

ಎನ್. ಗೀತಾಕುಮಾರಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ (ಆಡಳಿತ ಕನ್ನಡ)

ಪಿ.ಆರ್. 38

ವಸತಿ ಸಚಿವಾಲಯ

ವಿಷಯ : ಶ್ರೀ ಪಿ. ಗೋಪಾಲಕೃಷ್ಣ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್‌ರವರನ್ನು ಕಾರ್ಯನಿರ್ವಾಹಕ ಇಂಜಿನಿಯರ್ ಹುದ್ದೆಗೆ ಉನ್ನತೀಕರಿಸುವ ಬಗ್ಗೆ.

ಓದಲಾಗಿದೆ:
1) ಸರ್ಕಾರಿ ಆದೇಶದ ಸಂಖ್ಯೆ: ಹೆಚ್‌ಯುಡಿ 49 ಎಂಸಿಎಸ್ 95, ದಿನಾಂಕ 1-7-99
2) ಸರ್ಕಾರಿ ಆದೇಶ ಸಂಖ್ಯೆ: ವಇ 3 ಕೊಮಂಸೇ 06, ದಿನಾಂಕ 03-11-2010
3) ಆಯುಕ್ತರು, ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ ರವರ ಪತ್ರ ಸಂಖ್ಯೆ:ಕಕೊನಿಮ: ಆಡಳಿತ:116:1999–2000/986, ದಿನಾಂಕ 09-03-2011.
4) ಆಯುಕ್ತರು, ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ ರವರ ಪತ್ರ ಸಂಖ್ಯೆ:ಕಕೊನಿಮ: ಆಡಳಿತ:116:1999–2000/275, ದಿನಾಂಕ 26-07-2011.
5) ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ (ಅಭಿಪ್ರಾಯ-3) ಹಿಂಬರಹ ಸಂಖ್ಯೆ: ಲಾ 132/ಅಭಿ/2011, ದಿನಾಂಕ 30-03-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಗೆ ವೃಂದ ಮತ್ತು ನೇಮಕಾತಿ ಮತ್ತು ಸೇವಾ ನಿಬಂಧನೆ ನಿಯಮಾವಳಿಗಳನ್ನು ಹೊರಡಿಸಲಾಗಿದೆ.

ಮೇಲೆ (2) ರಲ್ಲಿ ಓದಲಾದ ಅಧಿಸೂಚನೆಯಲ್ಲಿ, ಮಂಡಳಿಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡಿ ಆದೇಶ ಹೊರಡಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ಮತ್ತು (4)ರ ಆಯುಕ್ತರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿರವರ ಪತ್ರಗಳಲ್ಲಿ ಶ್ರೀ ಪಿ. ಗೋಪಾಲಕೃಷ್ಣ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್‌ಗೆ ಕಾರ್ಯಪಾಲಕ ಅಭಿಯಂತರರ ಹುದ್ದೆಗೆ ಮುಂಬಡ್ತಿ ನೀಡುವ ವಿಚಾರವಾಗಿ ಸರ್ಕಾರದ ಅನುಮೋದನೆಯನ್ನು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (5) ರಲ್ಲಿ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ (ಅಭಿಪ್ರಾಯ-3) ಯು ನೀಡಿರುವ ಹಿಂಬರಹದಲ್ಲಿ ಶ್ರೀಯುತರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ವಿರುದ್ಧ ಮುಂಬಡ್ತಿ ವಿಚಾರದಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿ ಸಂಖ್ಯೆ 41267/2004ರ ಪ್ರಕರಣವನ್ನು ಹಿಂತೆಗೆದುಕೊಂಡ ನಂತರ ಶ್ರೀ ಪಿ. ಗೋಪಾಲಕೃಷ್ಣ, ಇವರಿಗೆ ಕಾರ್ಯನಿರ್ವಾಹಕ ಇಂಜಿನಿಯರ್ ಹುದ್ದೆಗೆ ಅವರ ಜೇಷ್ಠತೆ ಮತ್ತು ಅರ್ಹತೆಯ ಆಧಾರದ ಮೇಲೆ ಮುಂಬಡ್ತಿ ನೀಡಲು ಕಾನೂನಿನಲ್ಲಿ ಯಾವುದೇ ಅಡ್ಡಿ ಇರುವುದಿಲ್ಲವೆಂದು ಅಭಿಪ್ರಾಯ ನೀಡಿರುತ್ತಾರೆ.

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಕ್ರಮ ಸಂಖ್ಯೆ (4)ರ ಪತ್ರದಲ್ಲಿ ಇವರು ಸೇವಾ ಹಿರಿತನವನ್ನು ಹೊಂದಿದ್ದು, ದಿನಾಂಕ 03-11-2010ರ ಸರ್ಕಾರದ ಅಧಿಸೂಚನೆಯಲ್ಲಿ ಮಂಡಳಿಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡಿದ್ದು, ಅದರಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ವೃಂದದಲ್ಲಿನ ಒಂದು ಹುದ್ದೆಯನ್ನು ಕಾರ್ಯಪಾಲಕ ಇಂಜಿನಿಯರ್ ಹುದ್ದೆಗೆ ಉನ್ನತೀಕರಿಸಿದಲ್ಲಿ, ಒಟ್ಟಾರೆ ವೃಂದ ಬಲದಲ್ಲಿ ಬದಲಾವಣೆ ಆಗುವುದಿಲ್ಲ ಮತ್ತು ಮಂಡಳಿಗೆ ಹೆಚ್ಚಿನ ಆರ್ಥಿಕ ಹೊಣೆಗಾರಿಕೆ ಬೀಳುವುದಿಲ್ಲವಾದ್ದರಿಂದ ಮಂಡಳಿಯ ವೃಂದ ಮತ್ತು ನೇಮಕಾತಿ ನಿಯಮಗಳು 2010ರ ತಿದ್ದುಪಡಿಯನ್ನು ಕಾಯ್ದಿರಿಸಿ, ಮಂಡಳಿಗೆ ಮಂಜೂರಾಗಿರುವ 20 ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹುದ್ದೆಗಳಲ್ಲಿ ಶ್ರೀ ಪಿ. ಗೋಪಾಲಕೃಷ್ಣ ರವರ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಹುದ್ದೆಯನ್ನು ಸದರಿಯವರು ಸೇವೆಯಲ್ಲಿರುವವರೆಗೆ ಕಾರ್ಯನಿರ್ವಾಹಕ ಇಂಜಿನಿಯರ್ ಹುದ್ದೆಗೆ ವೇತನ ಶ್ರೇಣಿ ರೂ. 18150-26925ರಂತೆ ಮುಂಬಡ್ತಿ ನೀಡುವ ಪ್ರಸ್ತಾವನೆಗೆ ಅನುಮೋದನೆ ಕೋರಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ವಇ 8 ಕೊಮಂಸೇ 2011, ಬೆಂಗಳೂರು, ದಿನಾಂಕ: 25-11-2011.

ಪ್ರಸ್ತಾವನೆಗಳಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ವೃಂದ ಮತ್ತು ನೇಮಕಾತಿ ನಿಯಮಗಳು-2010ರ ತಿದ್ದುಪಡಿಯನ್ನು ಕಾಯ್ದಿರಿಸಿ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಮಂಜೂರಾಗಿರುವ 20 ಸಹಾಯಕ ಕಾರ್ಯಪಾಲಕ ಅಭಿಯಂತರರ ಹುದ್ದೆಗಳ ಪೈಕಿ 1 ಹುದ್ದೆಯನ್ನು ಕಾರ್ಯಪಾಲಕ ಅಭಿಯಂತರ ಹುದ್ದೆಗೆ ಉನ್ನತೀಕರಿಸಿ ಶ್ರೀ ಪಿ. ಗೋಪಾಲಕೃಷ್ಣ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್‌ರನ್ನು ಕಾರ್ಯನಿರ್ವಾಹಕ ಅಭಿಯಂತರ ಹುದ್ದೆಗೆ ಮುಂಬಡ್ತಿ ನೀಡಿ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 39

ಜಿ.ಆರ್. ನಾಗರಾಜ

ಪೀಠಾಧಿಕಾರಿ-4, ವಸತಿ ಇಲಾಖೆ

ವಸತಿ ಸಚಿವಾಲಯ

ವಿಷಯ : ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ಪಟ್ಟಣ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರ ನೇಮಕಾತಿ ಬಗ್ಗೆ.

ಓದಲಾಗಿದೆ: ಸರ್ಕಾರದ ಆದೇಶ ಸಂ: ವಇ 42 ಹೆಚ್‌ಎಎಂ 1999 ದಿನಾಂಕ 10-05-2000

ಪ್ರಸ್ತಾವನೆ :

ಸರ್ಕಾರವು ನಗರ ಆಶ್ರಯ ಸಮಿತಿಗಳನ್ನು ಮೇಲೆ ಓದಲಾದ ಸರ್ಕಾರದ ಆದೇಶದನ್ವಯ ವಿಧಾನಸಭಾ ಕ್ಷೇತ್ರವಾರು ಪಟ್ಟಣ ಹಾಗೂ ಗ್ರಾಮೀಣ ಪ್ರದೇಶಗಳಿಗೆ ಪ್ರತ್ಯೇಕ ಆಶ್ರಯ ಸಮಿತಿಗಳನ್ನು ಪುನರ್ ರಚಿಸಿ, ಸಮಿತಿಯ ಸದಸ್ಯರ ಅಧಿಕಾರ ಮತ್ತು ಕರ್ತವ್ಯಗಳನ್ನು ನಿಗದಿಪಡಿಸಿ ಆದೇಶವನ್ನು ಹೊರಡಿಸಿದೆ. ಈ ಪರಿಷ್ಕೃತ ಆದೇಶದನ್ವಯ ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ಪಟ್ಟಣ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರನ್ನು ನೇಮಿಸುವ ಬಗ್ಗೆ ಪರಿಶೀಲಿಸಿ, ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂ. ವಇ 73 ಹೆಚ್‌ಎಎಸ್ 2011, ಬೆಂಗಳೂರು, ದಿನಾಂಕ: 23ನೇ ನವೆಂಬರ್ 2011

ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ಪಟ್ಟಣ ಆಶ್ರಯ ಸಮಿತಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನು ನೇಮಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡಿ ಆದೇಶಿಸಿದೆ.

ಕ್ರ.ಸಂ.	ಅಭ್ಯರ್ಥಿಯ ಹೆಸರು	ವರ್ಗ
1	ಶ್ರೀ ಎಂ.ಸಿ. ಸುರೇಶ್ ಕುಮಾರ್ ಬಿನ್ ಚನ್ನಬಸಪ್ಪ, ಸಾಯಿರಾಮ ಬಿಲ್ಡಿಂಗ್, ನಂ. 31, ಸದಾಶಿವನಗರ, ಲಾಯರ್ ಮಂಜಪ್ಪ ಬಿಲ್ಡಿಂಗ್, ನೆಲಮಂಗಲ.	ಸಾಮಾನ್ಯ
2	ಶ್ರೀಮತಿ ಎಸ್. ಮಾಲತಿ ಕೋಂ ಎಂ.ಸಿ. ಶಿವಲಿಂಗಯ್ಯ, ಸೋಮೋಜಿರಾವ್ ಲೇಔಟ್, ಶಿವಗಣಪತಿ ದೇವಸ್ಥಾನದ ಹಿಂಭಾಗ, ಸುಭಾಷ್‌ನಗರ, ನೆಲಮಂಗಲ ಟೌನ್.	ಎಸ್.ಸಿ. (ಮಹಿಳೆ)
3	ಶ್ರೀ ಎನ್.ಎಂ. ಚಂದ್ರಶೇಖರ್ ಬಿನ್ ಎನ್.ಹೆಚ್. ಮುರಾರಯ್ಯ, ಸೊಂಡೆಕೊಪ್ಪ ರಸ್ತೆ, ಭೈರವೇಶ್ವರ ನಗರ, ನೆಲಮಂಗಲ ಟೌನ್.	ಬಿ.ಸಿ.ಎಂ.
4	ಶ್ರೀ ಮಹಮದ್ ಅನ್ಸಾರ್ ಬಿನ್ ಮಹಮದ್ ಯೂಸೂಫ್, ಕೋಟೆ ಬೀದಿ, ಮಾರಮ್ಮನ ದೇವಸ್ಥಾನದ ಹತ್ತಿರ ನೆಲಮಂಗಲ ಟೌನ್.	ಅಲ್ಪಸಂಖ್ಯಾತ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 40

ಬಿ. ಶಂಕರಪ್ಪ

ಪೀಠಾಧಿಕಾರಿ-2, ವಸತಿ ಇಲಾಖೆ

ವಸತಿ ಸಚಿವಾಲಯ

ವಿಷಯ : ಕೊಪ್ಪಳ ಜಿಲ್ಲೆ ಯಲಬುರ್ಗಾ ಪಟ್ಟಣ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರ ನೇಮಕಾತಿ ಬಗ್ಗೆ.

ಓದಲಾಗಿದೆ: ಸರ್ಕಾರದ ಆದೇಶ ಸಂ: ವಇ 42 ಹೆಚ್ಎಎಂ 1999 ದಿನಾಂಕ 10-05-2000

ಪ್ರಸ್ತಾವನೆ :

ಸರ್ಕಾರವು ನಗರ ಆಶ್ರಯ ಸಮಿತಿಗಳನ್ನು ಮೇಲೆ ಓದಲಾದ ಸರ್ಕಾರದ ಆದೇಶದನ್ವಯ ವಿಧಾನಸಭಾ ಕ್ಷೇತ್ರವಾರು ಪಟ್ಟಣ ಹಾಗೂ ಗ್ರಾಮೀಣ ಪ್ರದೇಶಗಳಿಗೆ ಪ್ರತ್ಯೇಕ ಆಶ್ರಯ ಸಮಿತಿಗಳನ್ನು ಪುನರ್ ರಚಿಸಿ, ಸಮಿತಿಯ ಸದಸ್ಯರ ಅಧಿಕಾರ ಮತ್ತು ಕರ್ತವ್ಯಗಳನ್ನು ನಿಗದಿಪಡಿಸಿ ಆದೇಶವನ್ನು ಹೊರಡಿಸಿದೆ. ಈ ಪರಿಷ್ಕೃತ ಆದೇಶದನ್ವಯ ಕೊಪ್ಪಳ ಜಿಲ್ಲೆ ಯಲಬುರ್ಗಾ ಪಟ್ಟಣ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರನ್ನು ನೇಮಿಸುವ ಬಗ್ಗೆ ಪರಿಶೀಲಿಸಿ, ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂ. ವಇ 76 ಹೆಚ್ಎಎಸ್ 2011, ಬೆಂಗಳೂರು, ದಿನಾಂಕ: 23ನೇ ನವೆಂಬರ್ 2011

ಕೊಪ್ಪಳ ಜಿಲ್ಲೆ ಯಲಬುರ್ಗಾ ಪಟ್ಟಣ ಆಶ್ರಯ ಸಮಿತಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನು ನೇಮಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡಿ ಆದೇಶಿಸಿದೆ.

ಕ್ರ.ಸಂ.	ಅಭ್ಯರ್ಥಿಯ ಹೆಸರು	ವರ್ಗ
1	ಶ್ರೀ ಶಂಕರ ಭಾವಿಮನಿ	ಎಸ್.ಸಿ.
2	ಶ್ರೀ ಮರ್ದಾನ್ ಸಾಬ್ ಕಾಸಿಂಸಾಬ್ ಮಲಕಸಮುದ್ರ	ಅಲ್ಪಸಂಖ್ಯಾತ
3	ಶ್ರೀ ಮೈಲಾರಪ್ಪ ಬಸಪ್ಪ ಅರಕೇರಿ	ಸಾಮಾನ್ಯ
4	ಶ್ರೀಮತಿ ವಿಜಯಲಕ್ಷ್ಮಿ ಕೃಷ್ಣಮೂರ್ತಿ ಚಾಲಗಾರ್	ಹಿಂದುಳಿದ ವರ್ಗ (ಮಹಿಳೆ)

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 41

ಬಿ. ಶಂಕರಪ್ಪ

ಪೀಠಾಧಿಕಾರಿ-2, ವಸತಿ ಇಲಾಖೆ

ವಸತಿ ಸಚಿವಾಲಯ

ವಿಷಯ : ಗುಲ್ಬರ್ಗಾ ಪಟ್ಟಣಕ್ಕೆ ಹೊಂದಿಕೊಂಡಂತಿರುವ ಕುಸನೂರು ಗ್ರಾಮದಲ್ಲಿ ಕರ್ನಾಟಕ ಗೃಹ ಮಂಡಳಿಯ 225 ವಸತಿ ಯೋಜನೆಗಾಗಿ ಜಮೀನು ಖರೀದಿಗೆ ಅನುಮೋದನೆ ನೀಡುವ ಕುರಿತು.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ: ವಇ 102 ಕಗೃಮಂ 2010 ದಿನಾಂಕ: 18-05-2010.

2) ಆಯುಕ್ತರು, ಕರ್ನಾಟಕ ಗೃಹ ಮಂಡಳಿ ರವರ ಕಛೇರಿ ಪತ್ರ ಸಂಖ್ಯೆ: ಕಗೃಮಂ/ಭೂಸ್ವಾವಿ/51/2009-10, ದಿನಾಂಕ 07-02-2011, 25-07-2011 ಮತ್ತು 26-09-2011.

ಪ್ರಸ್ತಾವನೆ :

ಕರ್ನಾಟಕ ಗೃಹ ಮಂಡಳಿಯು 2010-11ನೇ ಸಾಲಿನಲ್ಲಿ 225 ವಸತಿ ಯೋಜನೆಗಾಗಿ, ಗುಲ್ಬರ್ಗಾ ಪಟ್ಟಣದಲ್ಲಿ 450 ಎಕರೆ ಜಮೀನಿನಲ್ಲಿ ರೂ. 405-00 ಕೋಟಿಗಳ ಅಂದಾಜು ವೆಚ್ಚದಲ್ಲಿ ಸಂಯುಕ್ತ ವಸತಿ ಯೋಜನೆಯನ್ನು ಕೈಗೊಳ್ಳಲು ಮೇಲೆ ಓದಲಾದ ಕ್ರಮಾಂಕ (1)ರ ಸರ್ಕಾರಿ ಆದೇಶದಲ್ಲಿ ಮಂಜೂರಾತಿ ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (2)ರ ಪತ್ರಗಳಲ್ಲಿ ಕರ್ನಾಟಕ ಗೃಹ ಮಂಡಳಿಯ ಆಯುಕ್ತರು ಪ್ರಸ್ತಾವನೆ ಸಲ್ಲಿಸುತ್ತಾ, ಕರ್ನಾಟಕ ಗೃಹ ಮಂಡಳಿಯ 225 ವಸತಿ ಯೋಜನೆ ಅಡಿಯಲ್ಲಿ ಗುಲ್ಬರ್ಗಾ ಪಟ್ಟಣಕ್ಕೆ ಹೊಂದಿಕೊಂಡಂತಿರುವ ಕುಸನೂರು ಗ್ರಾಮದ ಸರ್ವೆ ನಂ. 103, 104, ಮತ್ತು ಇತರೆಗಳಲ್ಲಿ 287 ಎಕರೆ ಜಮೀನನ್ನು ಖರೀದಿಸಲು ನಿರ್ಣಯಿಸಿದ್ದು, ಸದರಿ ಜಮೀನಿಗೆ ಬೆಲೆ ನಿಗದಿಪಡಿಸುವ ಸಲುವಾಗಿ ಗುಲ್ಬರ್ಗಾ ಜಿಲ್ಲಾಧಿಕಾರಿಗಳನ್ನು ಕೋರಿದ ಹಿನ್ನೆಲೆಯಲ್ಲಿ, ದಿನಾಂಕ: 10-05-2011ರ ಜಿಲ್ಲಾ ಭೂ-ಖರೀದಿ ಸಮಿತಿ ಸಭೆಯಲ್ಲಿ ಪ್ರತಿ ಎಕರೆ ಜಮೀನನ್ನು ರೂ. 13.00 ರಿಂದ 13.25 ಲಕ್ಷಗಳಂತೆ ಖರೀದಿಸಲು ದರ ನಿಗದಿಪಡಿಸಿದ್ದು, ದಿನಾಂಕ: 18-06-2011ರ ಕರ್ನಾಟಕ ಗೃಹ ಮಂಡಳಿ ಸಭೆಯಲ್ಲಿ ಪ್ರತಿ ಎಕರೆ ಜಮೀನನ್ನು ರೂ. 13-00 ಲಕ್ಷದಂತೆ ಖರೀದಿಸಲು ನಿರ್ಣಯಿಸಿರುತ್ತದೆ. ಸದರಿ ನಿರ್ಣಯದನ್ವಯ, ಗುಲ್ಬರ್ಗಾ ಪಟ್ಟಣಕ್ಕೆ ಹೊಂದಿಕೊಂಡಂತಿರುವ ಕುಸನೂರು ಗ್ರಾಮದ ಸರ್ವೆ ನಂ. 103, 104 ಮತ್ತು ಇತರೆಗಳಲ್ಲಿ ಒಟ್ಟು 287 ಎಕರೆ ಜಮೀನನ್ನು ಕರ್ನಾಟಕ ಗೃಹ ಮಂಡಳಿಯ 225 ವಸತಿ ಯೋಜನೆಗಾಗಿ ಪ್ರತಿ ಎಕರೆ ಜಮೀನನ್ನು ರೂ. 13-00 ಲಕ್ಷದಂತೆ ಖರೀದಿಸಲು, ಕರ್ನಾಟಕ ಗೃಹ ಮಂಡಳಿ ಕಾಯ್ದೆ 1962 ಸೆಕ್ಷನ್ 33 (1) ರನ್ವಯ ಸರ್ಕಾರದ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಕರ್ನಾಟಕ ಗೃಹ ಮಂಡಳಿಯ ಆಯುಕ್ತರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ವಇ 101 ಕಗೃಮಂ 2011, ಬೆಂಗಳೂರು, ದಿನಾಂಕ: 15-11-2011.

ಮೇಲಿನ ಪ್ರಸ್ತಾವನೆಯ ಹಿನ್ನೆಲೆಯಲ್ಲಿ, ಗುಲ್ಬರ್ಗಾ ಪಟ್ಟಣಕ್ಕೆ ಹೊಂದಿಕೊಂಡಂತಿರುವ ಕುಸನೂರು ಗ್ರಾಮದ ಸರ್ವೆ ನಂ. 103, 104 ಮತ್ತು ಇತರೆಗಳಲ್ಲಿ ಒಟ್ಟು 287 ಎಕರೆ ಜಮೀನನ್ನು ಕರ್ನಾಟಕ ಗೃಹ ಮಂಡಳಿಯ 225, ವಸತಿ ಯೋಜನೆಯಡಿಯ ವಸತಿ ಯೋಜನೆಗಾಗಿ ಪ್ರತಿ ಎಕರೆ ಜಮೀನನ್ನು ರೂ. 13-00 ಲಕ್ಷ ದರದಂತೆ (ರೂ. ಹದಿಮೂರು ಲಕ್ಷಗಳು ಮಾತ್ರ) ಈ ಕೆಳಕಂಡ ಷರತ್ತುಗಳಿಗೊಳಪಡಿಸಿ ಖರೀದಿಸಲು ಕರ್ನಾಟಕ ಗೃಹ ಮಂಡಳಿ ಕಾಯ್ದೆ 1962 ಸೆಕ್ಷನ್ 33 (1) ರನ್ವಯ ಸರ್ಕಾರದ ಅನುಮೋದನೆ ನೀಡಿದೆ.

1) ಖರೀದಿಗೆ ಸಂಬಂಧಿಸಿದ ಇತರೆ ವೆಚ್ಚಗಳನ್ನು ನಿಯಮಾನುಸಾರ ಭರಿಸಲು.
2) ಸರ್ಕಾರದ ಆರ್ಥಿಕ ನೆರವನ್ನು ಅಪೇಕ್ಷಿಸದೆ ಹಾಗೂ ಸದರಿ ಜಮೀನಿನ ಮೇಲೆ ಯಾವುದೇ ಋಣಭಾರವಿಲ್ಲವೆಂದು ಖಚಿತಪಡಿಸಿಕೊಳ್ಳತಕ್ಕದ್ದು.
3) ಜಮೀನುಗಳು ಜನವಸತಿಗೆ ಮತ್ತು ಮುಖ್ಯ ರಸ್ತೆಗಳಿಗೆ ಹೊಂದಿಕೊಂಡಂತಿರಬೇಕು.
4) ವಸ್ತುನಿಷ್ಠವಾದ ಬೇಡಿಕೆ ಸಮೀಕ್ಷೆ ಕೈಗೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 42 ಎನ್. ಪಾರ್ವತಿ

ಪೀಠಾಧಿಕಾರಿ-3, ವಸತಿ ಇಲಾಖೆ

ವಸತಿ ಸಚಿವಾಲಯ

ವಿಷಯ : ಬೆಳಗಾವಿ ಜಿಲ್ಲೆ, ಬೆಳಗಾವಿ ತಾಲ್ಲೂಕು, ಕೆ.ಕೆ. ಕೊಪ್ಪ, ಖಮಕಾರಟ್ಟಿ ಮತ್ತು ಕೊಂಡಸಕೊಪ್ಪ ಗ್ರಾಮಗಳಲ್ಲಿ ಕರ್ನಾಟಕ ಗೃಹ ಮಂಡಳಿಯ 225 ವಸತಿ ಯೋಜನೆಗಾಗಿ ಜಮೀನು ಖರೀದಿಗೆ ಅನುಮೋದನೆ ನೀಡುವ ಕುರಿತು.

ಓದಲಾಗಿದೆ: ಆಯುಕ್ತರು, ಕರ್ನಾಟಕ ಗೃಹ ಮಂಡಳಿ ರವರ ಕಛೇರಿ ಪತ್ರ ಸಂಖ್ಯೆ: ಕಗೃಮಂ/ಭೂಸ್ವಾವಿ/51/2009-10. ದಿನಾಂಕ 07-02-2011, 25-07-2011 ಮತ್ತು 26-09-2011.

ಪ್ರಸ್ತಾವನೆ :

ಮೇಲೆ ಓದಲಾದ ಪತ್ರದಲ್ಲಿ ಕರ್ನಾಟಕ ಗೃಹ ಮಂಡಳಿಯ ಆಯುಕ್ತರು ಪ್ರಸ್ತಾವನೆ ಸಲ್ಲಿಸುತ್ತಾ, ಕರ್ನಾಟಕ ಗೃಹ ಮಂಡಳಿಯ 225 ವಸತಿ ಯೋಜನೆಗಾಗಿ ಬೆಳಗಾವಿ ಜಿಲ್ಲೆ, ಬೆಳಗಾವಿ ತಾಲ್ಲೂಕು, ಕೆ.ಕೆ. ಕೊಪ್ಪ ಗ್ರಾಮದ ಸರ್ವೆ ನಂ. 122, 123 ಮತ್ತು ಇತರೆಗಳಲ್ಲಿ, ಖಮಕಾರಟ್ಟಿ ಗ್ರಾಮದ ಸರ್ವೆ ನಂ. 34, 35, 36 ಮತ್ತು ಇತರೆಗಳಲ್ಲಿ ಹಾಗೂ ಕೊಂಡಸಕೊಪ್ಪ ಗ್ರಾಮದ ಸರ್ವೆ ನಂ. 17, 18, 29, 33, 34 ಮತ್ತು ಇತರೆಗಳಲ್ಲಿ ಸುಮಾರು 750 ಎಕರೆ ಜಮೀನನ್ನು ಖರೀದಿಸಲು ನಿರ್ಣಯಿಸಿದ್ದು, ಸದರಿ ಜಮೀನಿಗೆ ಬೆಲೆ ನಿಗದಿಪಡಿಸುವ ಸಲುವಾಗಿ ಬೆಳಗಾವಿ ಜಿಲ್ಲಾಧಿಕಾರಿಗಳನ್ನು ಕೋರಿದ್ದ ಹಿನ್ನೆಲೆಯಲ್ಲಿ, ದಿನಾಂಕ: 27-04-2011 ರಂದು ನಡೆದ ಜಿಲ್ಲಾ ಭೂ-ಖರೀದಿ ಸಮಿತಿ ಸಭೆಯಲ್ಲಿ ಪ್ರತಿ ಎಕರೆ ಜಮೀನನ್ನು ರೂ. 10.80 ಲಕ್ಷಗಳಂತೆ ಖರೀದಿಸಲು ದರ ನಿಗದಿಪಡಿಸಿದ್ದು, ದಿನಾಂಕ: 18-06-2011ರ ಕರ್ನಾಟಕ ಗೃಹ ಮಂಡಳಿ ಸಭೆಯಲ್ಲಿ ಪ್ರತಿ ಎಕರೆ ಜಮೀನನ್ನು ರೂ. 10.80 ಲಕ್ಷದಂತೆ ಖರೀದಿಸಲು ನಿರ್ಣಯಿಸಿರುತ್ತದೆ. ಸದರಿ ನಿರ್ಣಯದನ್ವಯ, ಬೆಳಗಾವಿ ತಾಲ್ಲೂಕು, ಕೆ.ಕೆ.ಕೊಪ್ಪ ಗ್ರಾಮದ ಸರ್ವೆ ನಂ. 122, 123 ಮತ್ತು ಇತರೆಗಳಲ್ಲಿ, ಖಮಕಾರಟ್ಟಿ ಗ್ರಾಮದ ಸರ್ವೆ ನಂ. 34, 35, 36, ಮತ್ತು ಇತರೆಗಳಲ್ಲಿ ಹಾಗೂ ಕೊಂಡಸಕೊಪ್ಪ ಗ್ರಾಮದ ಸರ್ವೆ ನಂ. 17, 18, 29, 33, 34 ಮತ್ತು ಇತರೆಗಳಲ್ಲಿ ಒಟ್ಟು 750 ಎಕರೆ ಜಮೀನನ್ನು ಪ್ರತಿ ಎಕರೆಗೆ ರೂ. 10.80 ಲಕ್ಷಗಳಂತೆ ಖರೀದಿಸಲು, ಕರ್ನಾಟಕ ಗೃಹ ಮಂಡಳಿ ಕಾಯ್ದೆ 1962 ಸೆಕ್ಷನ್ 33 (1) ರನ್ವಯ ಸರ್ಕಾರದ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಕರ್ನಾಟಕ ಗೃಹ ಮಂಡಳಿಯ ಆಯುಕ್ತರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ವಇ 317 ಕಗೃಮಂ 2011, ಬೆಂಗಳೂರು, ದಿನಾಂಕ: 15ನೇ ನವೆಂಬರ್ 2011.

ಮೇಲಿನ ಪ್ರಸ್ತಾವನೆಯ ಹಿನ್ನೆಲೆಯಲ್ಲಿ, ಬೆಳಗಾವಿ ಜಿಲ್ಲೆ, ಬೆಳಗಾವಿ ತಾಲ್ಲೂಕು, ಕೆ.ಕೆ.ಕೊಪ್ಪ ಗ್ರಾಮದ ಸರ್ವೆ ನಂ. 122, 123 ಮತ್ತು ಇತರೆಗಳಲ್ಲಿ, ಖಮಕಾರಟ್ಟಿ ಗ್ರಾಮದ ಸರ್ವೆ ನಂ. 34, 35, 36 ಮತ್ತು ಇತರೆಗಳಲ್ಲಿ ಹಾಗೂ ಕೊಂಡಸಕೊಪ್ಪ ಗ್ರಾಮದ ಸರ್ವೆ ನಂ. 17, 18, 29, 33, 34 ಮತ್ತು ಇತರೆಗಳಲ್ಲಿ ಒಟ್ಟು 750 ಎಕರೆ ಜಮೀನನ್ನು ಪ್ರತಿ ಎಕರೆಗೆ ರೂ. 10.80 ಲಕ್ಷ (ರೂ. ಹತ್ತು ಲಕ್ಷದ ಎಂಭತ್ತು ಸಾವಿರ ರೂ.ಗಳು ಮಾತ್ರ) ದಂತೆ, ಈ ಕೆಳಕಂಡ ಷರತ್ತುಗಳಿಗೊಳಪಡಿಸಿ ಖರೀದಿಸಲು ಕರ್ನಾಟಕ ಗೃಹ ಮಂಡಳಿ ಕಾಯ್ದೆ 1962 ಸೆಕ್ಷನ್ 33 (1) ರನ್ವಯ ಸರ್ಕಾರದ ಅನುಮೋದನೆ ನೀಡಿದೆ.

1) ಖರೀದಿಗೆ ಸಂಬಂಧಿಸಿದ ಇತರೆ ವೆಚ್ಚಗಳನ್ನು ನಿಯಮಾನುಸಾರ ಭರಿಸಲು.
2) ಸರ್ಕಾರದ ಆರ್ಥಿಕ ನೆರವನ್ನು ಅಪೇಕ್ಷಿಸದೆ ಹಾಗೂ ಸದರಿ ಜಮೀನಿನ ಮೇಲೆ ಯಾವುದೇ ಋಣಭಾರವಿಲ್ಲವೆಂದು ಖಚಿತಪಡಿಸಿಕೊಳ್ಳತಕ್ಕದ್ದು.
3) ಜಮೀನುಗಳು ಜನವಸತಿಗೆ ಮತ್ತು ಮುಖ್ಯ ರಸ್ತೆಗಳಿಗೆ ಹೊಂದಿಕೊಂಡಂತಿರಬೇಕು.
4) ವಸ್ತುನಿಷ್ಠವಾದ ಬೇಡಿಕೆ ಸಮೀಕ್ಷೆ ಕೈಗೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 43 ಎನ್. ಪಾರ್ವತಿ

ಪೀಠಾಧಿಕಾರಿ-3, ವಸತಿ ಇಲಾಖೆ

ವಸತಿ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆ, ಚಿತ್ತಾಪೂರ ಪಟ್ಟಣ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರ ನೇಮಕಾತಿ ಬಗ್ಗೆ.

ಓದಲಾಗಿದೆ: ಸರ್ಕಾರದ ಆದೇಶ ಸಂ: ವಇ 42 ಹೆಚ್‌ಎಎಂ 1999 ದಿನಾಂಕ 10-05-2000.

ಪ್ರಸ್ತಾವನೆ :

ಸರ್ಕಾರವು ನಗರ ಆಶ್ರಯ ಸಮಿತಿಗಳನ್ನು ಮೇಲೆ ಓದಲಾದ ಸರ್ಕಾರದ ಆದೇಶದನ್ವಯ ವಿಧಾನಸಭಾ ಕ್ಷೇತ್ರವಾರು ಪಟ್ಟಣ ಹಾಗೂ ಗ್ರಾಮೀಣ ಪ್ರದೇಶಗಳಿಗೆ ಪ್ರತ್ಯೇಕ ಆಶ್ರಯ ಸಮಿತಿಗಳನ್ನು ಪುನರ್ ರಚಿಸಿ, ಸಮಿತಿಯ ಸದಸ್ಯರ ಅಧಿಕಾರ ಮತ್ತು ಕರ್ತವ್ಯಗಳನ್ನು ನಿಗದಿಪಡಿಸಿ ಆದೇಶವನ್ನು ಹೊರಡಿಸಿದೆ. ಈ ಪರಿಷ್ಕೃತ ಆದೇಶದನ್ವಯ ಗುಲ್ಬರ್ಗಾ ಜಿಲ್ಲೆ, ಚಿತ್ತಾಪೂರ ಪಟ್ಟಣ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರನ್ನು ನೇಮಿಸುವ ಬಗ್ಗೆ ಪರಿಶೀಲಿಸಿ, ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂ. ವಇ 65 ಹೆಚ್‌ಎಎಸ್ 2011, ಬೆಂಗಳೂರು, ದಿನಾಂಕ: 19ನೇ ನವೆಂಬರ್ 2011

ಗುಲ್ಬರ್ಗಾ ಜಿಲ್ಲೆ ಚಿತ್ತಾಪೂರ ಪಟ್ಟಣ ಆಶ್ರಯ ಸಮಿತಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನು ನೇಮಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡಿ ಆದೇಶಿಸಿದೆ.

ಕ್ರ.ಸಂ.	ಅಭ್ಯರ್ಥಿಯ ಹೆಸರು	ವರ್ಗ
1	ಶ್ರೀ ಬಸವರಾಜ ಎಂ. ಚಿನ್ಮಳ್ಳಿ, ರಿಂಗ್ ರೋಡ್, ಚಿತ್ತಾಪೂರ.	ಹಿಂದುಳಿದ ವರ್ಗ
2	ಶ್ರೀ ರಾಮದಾಸ ಬಿನ್ ಕೀಶನ ಚವ್ಹಾಣ, ಸ್ಟೇಶನ ತಾಂಡಾ, ಚಿತ್ತಾಪೂರ.	ಎಸ್.ಸಿ.
3	ಶ್ರೀಮತಿ ಸುಮಿತ್ರಾ ಉದಯ ಸಿಂಪಿ, ಮಠಪತಿ ಗಲ್ಲಿ, ಚಿತ್ತಾಪೂರ.	ಮಹಿಳೆ
4	ಶ್ರೀ ಬಾಬುಮಿಯ್ಯಾ ಬಿನ್ ಗೌಸಸಾಬ, ಕಲಗುರ್ತಿ.	ಅ.ಸಂ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 44

ಬಿ. ಶಂಕರಪ್ಪ

ಪೀಠಾಧಿಕಾರಿ-2, ವಸತಿ ಇಲಾಖೆ

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಗುಲ್ಬರ್ಗಾ ಮಹಾನಗರಪಾಲಿಕೆಯ ಕುಡಿಯುವ ನೀರು ಸರಬರಾಜು ಮತ್ತು ಒಳಚರಂಡಿ ನಿರ್ವಹಣೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಹಸ್ತಾಂತರಿಸುವ ಕುರಿತು.

ಓದಲಾಗಿದೆ: 1) ಆಯುಕ್ತರು, ಗುಲ್ಬರ್ಗಾ ವಿಭಾಗ, ಗುಲ್ಬರ್ಗಾರವರ ಪತ್ರ ಸಂಖ್ಯೆ:ಕಂ.ಪ್ರಾಆಗು:ಪುರಸಭೆ:ಸಿಆರ್:76-08-09, ದಿ: 8-12-2008.

2) ಜಿಲ್ಲಾಧಿಕಾರಿಗಳು, ಗುಲ್ಬರ್ಗಾ ಜಿಲ್ಲೆರವರ ಅ.ಸ.ಪತ್ರ ಸಂಖ್ಯೆ:ಜಿನಕೋ:ಯೋಜನೆ:58:2010-11:11 ದಿ: 20-11-2010 ಮತ್ತು ಸಂಖ್ಯೆ: ಡಿಯುಡಿಸಿ: ಸಾಮಾನ್ಯ: 2011-12:8672 ದಿನಾಂಕ: 13-9-2011.

3) ವ್ಯ.ನಿ., ಕನನೀಸ ಒಚಮಂ ರವರ ಪತ್ರ ಸಂಖ್ಯೆ:ಕಜಮ/ಹೆಚಾರ್ ಡಿ-2/ಗುನಿದು-13/2010-11/2202, ದಿನಾಂಕ 04-01-2011.

4) ಸರ್ಕಾರದ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆರವರ ಅಧ್ಯಕ್ಷತೆಯಲ್ಲಿ ದಿನಾಂಕ: 04.02.2011 ಮತ್ತು 16.05.2011 ನಡೆದ ಸಭೆಯ ನಡವಳಿಗಳು.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮಾಂಕ (1)ರ ಪತ್ರದಲ್ಲಿ ಆಯುಕ್ತರು ಹಾಗೂ ವಿಭಾಗಾಧಿಕಾರಿಗಳು ಗುಲ್ಬರ್ಗಾ ವಿಭಾಗ, ಗುಲ್ಬರ್ಗಾ ರವರು ಗುಲ್ಬರ್ಗಾ ನಗರದ ಕುಡಿಯುವ ನೀರು ಸರಬರಾಜು ಹಾಗೂ ಒಳಚರಂಡಿ ವ್ಯವಸ್ಥೆಯ ನಿರ್ವಹಣೆ ಮತ್ತು ದುರಸ್ತಿಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಗುಲ್ಬರ್ಗಾ ವಿಭಾಗ ಇವರಿಗೆ ಹಸ್ತಾಂತರಿಸಲು ಕೋರಿರುತ್ತಾರೆ. ಇದಲ್ಲದೆ, ಜಿಲ್ಲಾಧಿಕಾರಿಗಳು, ಗುಲ್ಬರ್ಗಾ ಜಿಲ್ಲೆ, ರವರು ಮೇಲೆ ಓದಲಾದ ಕ್ರಮಾಂಕ (2)ರ ಪತ್ರಗಳಲ್ಲಿ ಗುಲ್ಬರ್ಗಾ ಮಹಾನಗರಪಾಲಿಕೆಯ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಜಲಮಂಡಳಿಗೆ ಹಸ್ತಾಂತರಿಸಲು ಅಗತ್ಯ ಮಾಹಿತಿಯನ್ನು ಮತ್ತು ಒಪ್ಪಂದ ಪತ್ರಗಳನ್ನು ಸರ್ಕಾರದ ಅವಗಾಹನೆಗೆ ಮತ್ತು ಅನುಮೋದನೆಗೆ ಸಲ್ಲಿಸಿರುತ್ತಾರೆ. ಈ ಕುರಿತು ಮೇಲೆ ಓದಲಾದ ಕ್ರಮಾಂಕ (3)ರ ಪತ್ರದಲ್ಲಿ ಜಲಮಂಡಳಿಯು ಗುಲ್ಬರ್ಗಾ ಮಹಾನಗರಪಾಲಿಕೆ ನೀರು ಸರಬರಾಜು ವ್ಯವಸ್ಥೆಯನ್ನು ಕೆಲವು ಷರತ್ತುಗಳೊಂದಿಗೆ ವಹಿಸಿಕೊಳ್ಳಲು ಒಪ್ಪಿದ್ದು, ಮೇಲೆ ಓದಲಾದ ಕ್ರಮಾಂಕ (4) ರ ಸಭೆಗಳಲ್ಲಿ ನಿರ್ಣಯಿಸಿದಂತೆ ಸರ್ಕಾರದ ಹಂತದಲ್ಲಿ ನಡೆದ ಸಭೆಗಳಲ್ಲಿ ಕೂಲಂಕಷವಾಗಿ ಚರ್ಚಿಸಿ, ಹಲವಾರು ಸಲಹೆಗಳನ್ನು ಗುಲ್ಬರ್ಗಾ ಮಹಾನಗರಪಾಲಿಕೆ ಮತ್ತು ಜಲಮಂಡಳಿ ಸಂಸ್ಥೆಗಳಿಗೆ ನೀಡಿ ಪ್ರಸ್ತಾವನೆಯನ್ನು ಮರು ಸಲ್ಲಿಸುವಂತೆ ಸೂಚಿಸಲಾಗಿತ್ತು. ಅದರಂತೆ ಜಿಲ್ಲಾಧಿಕಾರಿಗಳು, ಸದರಿ ಪ್ರಸ್ತಾವನೆಯನ್ನು ಪುನಃ ಸರ್ಕಾರದ ಅನುಮೋದನೆ ಕೋರಿ ಸಲ್ಲಿಸಿರುತ್ತಾರೆ.

ಎರಡನೆಯದಾಗಿ, ಗುಲ್ಬರ್ಗಾ ಮಹಾನಗರಪಾಲಿಕೆಯ ಕುಡಿಯುವ ನೀರು ಸರಬರಾಜು ವ್ಯವಸ್ಥೆಯನ್ನು ಸುಧಾರಿಸುವ ದೃಷ್ಟಿಯಿಂದ ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಹಿನ್ನೆಲೆಯಲ್ಲಿ ಮಾನ್ಯ ಜಲಸಂಪನ್ಮೂಲ ಇಲಾಖೆ ಸಚಿವರೊಂದಿಗೆ ಚರ್ಚಿಸಿದಂತೆ ಮತ್ತು ಗುಲ್ಬರ್ಗಾ ಮಹಾನಗರಪಾಲಿಕೆಯ ಹಾಗೂ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ಈ ಕುರಿತು ಸರ್ಕಾರದ ಹಂತದಲ್ಲಿ ಹಲವಾರು ಸಭೆಗಳನ್ನು ನಡೆಸಿ ಎರಡೂ ಸಂಸ್ಥೆಗಳು ನೀರು ಸರಬರಾಜು ನಿರ್ವಹಣೆಯನ್ನು ಹಸ್ತಾಂತರಿಸಲು ಮತ್ತು ನಿರ್ವಹಿಸಲು ಪರಸ್ಪರ ಒಪ್ಪಂದವನ್ನು ದಿನಾಂಕ: 1-4-2011 ರಂದು ಕೆಲವು ಷರತ್ತು ಮತ್ತು ನಿಬಂಧನೆಗಳನ್ವಯ ಒಡಂಬಡಿಕೆ ಮಾಡಿಕೊಂಡಿದ್ದು, ಸದರಿ ನೀರು ಸರಬರಾಜು ನಿರ್ವಹಣೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಹಸ್ತಾಂತರಿಸಲು ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ಮುಂದುವರೆದು ಸರ್ಕಾರಕ್ಕೆ ಶಿಫಾರಸ್ಸನ್ನು ಮಾಡಿರುತ್ತಾರೆ. ಇದಲ್ಲದೆ, ಮಾನ್ಯ ಮುಖ್ಯ ಮಂತ್ರಿಯವರು ದಿನಾಂಕ: 20-9-2011ರ ಟಿಪ್ಪಣಿಯಲ್ಲಿ ತಾವು ದಿನಾಂಕ: 17-9-2011ರಂದು ಗುಲ್ಬರ್ಗಾ ನಗರದ ಪ್ರವಾಸದ ಸಮಯದಲ್ಲಿ ಸಾರ್ವಜನಿಕರ ಕುಂದು ಕೊರತೆಗಳನ್ನು ಆಲಿಸಿ ಕುಡಿಯುವ ನೀರು ಸರಬರಾಜಿನಲ್ಲಿ

ಸಾರ್ವಜನಿಕರು ಎದುರಿಸುತ್ತಿರುವ ತೊಂದರೆ ಕುರಿತು ಶೀಘ್ರವಾಗಿ ಅಗತ್ಯ ಕ್ರಮ ಕೈಗೊಂಡು ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ಸೂಚಿಸಿರುತ್ತಾರೆ.

ಹಾಲಿ ಗುಲ್ಬರ್ಗಾ ಮಹಾನಗರಪಾಲಿಕೆಯಲ್ಲಿ ನೀರು ಸರಬರಾಜು ವ್ಯವಸ್ಥೆಗೆ ತಾಂತ್ರಿಕ ಸಿಬ್ಬಂದಿಗಳ ಕೊರತೆ, ನೀರಿನ ಶುಲ್ಕದ ಅಸಮರ್ಪಕ ವಸೂಲಾತಿ, ನೀರು ಸೋರುವಿಕೆ, ನೀರಿನ ಪೋಲಾಗುವಿಕೆ, ಸೂಕ್ತ ಮೇಲ್ವಿಚಾರಣಾ ಕೊರತೆ ಇತ್ಯಾದಿ ಕಾರಣಗಳಿಂದ ಮಹಾನಗರಪಾಲಿಕೆಯು ನೀರು ಸರಬರಾಜು ನಿರ್ವಹಣೆ ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸಲು ಸಂಪೂರ್ಣವಾಗಿ ವಿಫಲವಾಗಿರುವುದರಿಂದ ಸದರಿ ವ್ಯವಸ್ಥೆಯನ್ನು ಮಹಾನಗರಪಾಲಿಕೆಯಿಂದ ಸುಧಾರಣಾ ಕ್ರಮ ಜರುಗಿಸುವುದು ಕಷ್ಟ ಸಾಧ್ಯವಾಗಿರುವುದೆಂದು ಗುಲ್ಬರ್ಗಾ ಮಹಾನಗರಪಾಲಿಕೆಯ ನೀರು ಸರಬರಾಜು ವ್ಯವಸ್ಥೆಯನ್ನು (ನೀರು ಶುಲ್ಕ ವಸೂಲಾತಿ) ಮತ್ತು ಒಳಚರಂಡಿ ವ್ಯವಸ್ಥೆ ನಿರ್ವಹಣೆಯನ್ನು ಸಿಬ್ಬಂದಿ ಸಮೇತವಾಗಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಹಸ್ತಾಂತರಿಸುವಂತೆ ಜಿಲ್ಲಾಧಿಕಾರಿಗಳು, ಗುಲ್ಬರ್ಗಾ ಜಿಲ್ಲೆರವರು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 04 ಯುಡಬ್ಲ್ಯೂಎಸ್ 2010, ಬೆಂಗಳೂರು, ದಿನಾಂಕ: 11-11-2011.

ಪ್ರಸ್ತಾವನೆಗಳಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಗುಲ್ಬರ್ಗಾ ಮಹಾನಗರಪಾಲಿಕೆಯ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯ ನಿರ್ವಹಣೆಯನ್ನು (ನೀರಿನ ಕರ ವಸೂಲಾತಿ ಸೇರಿದಂತೆ ಸಿಬ್ಬಂದಿ ಸಮೇತವಾಗಿ) ಗುಲ್ಬರ್ಗಾ ಮಹಾನಗರ ಪಾಲಿಕೆಯಿಂದ ದಿನಾಂಕ 1-12-2011 ರಿಂದ ಜಾರಿಗೆ ಬರುವಂತೆ ಸಂಪೂರ್ಣವಾಗಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವಿಭಾಗ, ಗುಲ್ಬರ್ಗಾರವರಿಗೆ ವಹಿಸಿಕೊಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಈ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ರವರು ಕೂಡಲೇ ಸೂಕ್ತ ಕ್ರಮ ಕೈಗೊಳ್ಳುವುದು ಮತ್ತು ತತ್ಸಂಬಂಧವಾಗಿ ಈಗಾಗಲೇ ಉಬಯ ಸಂಸ್ಥೆಗಳು ಮಾಡಿಕೊಂಡ ಒಪ್ಪಂದದಂತೆ ಹಾಗೂ ಈ ಆದೇಶದೊಂದಿಗೆ ಲಗತ್ತಿಸಿರುವ ಷರತ್ತು ಮತ್ತು ನಿಬಂಧನೆಗಳನ್ವಯ ತಕ್ಷಣವೆ ಮುಂದಿನ ಸೂಕ್ತ ಕ್ರಮ ಕೈಗೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಂ. ಹಿರೇಮಠ

ಸರ್ಕಾರದ ಅಧೀನ ಕಾರ್ಯದರ್ಶಿ

ನಗರಾಭಿವೃದ್ಧಿ ಇಲಾಖೆ

ಅನುಬಂಧ

ಗುಲ್ಬರ್ಗಾ ನಗರದ ಕುಡಿಯುವ ನೀರು ಸರಬರಾಜು ಮತ್ತು ಒಳಚರಂಡಿ ನಿರ್ವಹಣೆ ಹಾಗೂ ದುರಸ್ಥಿಯನ್ನು ಕ.ನ.ನೀ.ಸ. ಮತ್ತು ಒ.ಚ.ಮಂಡಳಿಗೆ ಹಸ್ತಾಂತರಿಸಲು ಹೊರಡಿಸಿದ ಸರ್ಕಾರದ ಆದೇಶ ಸಂಖ್ಯೆ:ನಅಇ 04 ಯುಡಬ್ಲ್ಯೂಎಸ್ 2010, ದಿನಾಂಕ: 11.11.2011 ಕ್ಕೆ ಷರತ್ತು ಮತ್ತು ನಿಬಂಧನೆಗಳು:

1) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ದಿನಾಂಕ: 01.12.2011 ರಿಂದ ಅನ್ವಯಿಸುವಂತೆ ಗುಲ್ಬರ್ಗಾ ನಗರದ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯನ್ನು ನಿರ್ವಹಿಸತಕ್ಕದ್ದು. ಗುಲ್ಬರ್ಗಾ ಮಹಾ ನಗರಪಾಲಿಕೆಯು ತನ್ನ ಅಧೀನದಲ್ಲಿರುವ ನೀರು ಸರಬರಾಜು ಯೋಜನೆಯ ಛರ ಮತ್ತು ಸ್ಥಿರ ಆಸ್ತಿ, ರಿಪೇರಿ, ನಿರ್ವಹಣೆ, ನೀರಿನ ಕರ ವಸೂಲಾತಿ, ಗುತ್ತಿಗೆದಾರರಿಗೆ ಪಾವತಿ ಮಾಡಿದ ಮತ್ತು ಬಾಕಿ ಪಾವತಿ ಮಾಡಬೇಕಾಗಿರುವ ವಿವರಗಳು, ರೇಖಾ ಚಿತ್ರಗಳು (ಡ್ರಾಯಿಂಗ್ಸ್), ನೀರು ವಿತರಣಾ ಜಾಲದ ನಕ್ಷೆಗಳು, ದಾಖಲೆಗಳ ಕಡತಗಳು ಮತ್ತು ಸ್ಟಾಕ್ ಪುಸ್ತಕಗಳು, ಮತ್ತು ನಗರಸಭೆಯಲ್ಲಿ ಬಾಕಿ ಉಳಿದಿರುವ ಇತರೆ ಸಂಬಂಧಪಟ್ಟ ಸಾಮಗ್ರಿಗಳನ್ನು ಕ.ನ.ನೀ.ಸ.ಒ.ಚ. ಮಂಡಳಿಗೆ ಹಸ್ತಾಂತರಿಸತಕ್ಕದ್ದು.

2) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಸರ್ಕಾರವು ಕಾಲದಿಂದ ಕಾಲಕ್ಕೆ ನಿಗದಿಪಡಿಸುವ ಕನಿಷ್ಠ ದರಗಳಿಗೆ ಮೇಲ್ಪಟ್ಟು ದುರಸ್ಥಿ ಮತ್ತು ನಿರ್ವಹಣಾ ವೆಚ್ಚ ಹಾಗೂ ಇತ್ಯಾದಿ ವೆಚ್ಚಗಳನ್ನೊಳಗೊಂಡಂತೆ ಗುಲ್ಬರ್ಗಾ ಮಹಾನಗರ ಪಾಲಿಕೆಯೊಂದಿಗೆ ಚರ್ಚಿಸಿ, ಒಪ್ಪಂದಕ್ಕೆ ಬಂದು ನೀರಿನ ಕರವನ್ನು/ಕಂದಾಯ, ವಿಧಿಸುವುದು ಮತ್ತು ಬಾಡಿಗೆ, ಶುಲ್ಕ, ಠೇವಣಿ ಇತ್ಯಾದಿಯನ್ನು ಬಳಕೆದಾರರಿಂದ ಮಹಾ ನಗರ ಪಾಲಿಕೆಯ ಪರವಾಗಿ ವಸೂಲು ಮಾಡಿ ಸಂಗ್ರಹಿಸುವುದು, ಮಂಡಳಿಯು ಅನಧಿಕೃತ ನೀರು ಸಂಪರ್ಕಗಳನ್ನು ಸಕ್ರಮಗೊಳಿಸುವುದು/ನೀರಿನ ಸಂಪರ್ಕ ತೆಗೆದುಹಾಕುವುದು ಮತ್ತು ನೀರಿನ ಸರಬರಾಜು ವ್ಯವಸ್ಥೆಯನ್ನು ಸುಧಾರಿಸಲು ಅಗತ್ಯ ಕ್ರಮ ಜರುಗಿಸಬಹುದಾಗಿರುತ್ತದೆ. ಸಾರ್ವಜನಿಕರಿಗೆ ನ್ಯಾಯಯುತವಾಗಿ ನೀರು ಸರಬರಾಜು ಮಾಡುವ ಉದ್ದೇಶದಿಂದ ಮುಖ್ಯ ಕೊಳವೆ ಮಾರ್ಗಗಳಿಂದ ಪಡೆದಿರುವ ಎಲ್ಲಾ ಸಂಪರ್ಕಗಳನ್ನು ಕಡೆದು ವಿತರಣಾ ಕೊಳವೆ ಮಾರ್ಗದಿಂದ ಮಾತ್ರ ಪ್ರತಿಯೊಂದು ಸಂಪರ್ಕಕ್ಕೂ ನೀರು ಒದಗಿಸತಕ್ಕದ್ದು.

3) ನೀರಿನ ಕಂದಾಯ ವಸೂಲಿ ಹಾಗೂ ವೆಚ್ಚಗಳ ಲೆಕ್ಕಪತ್ರಗಳನ್ನು ಪ್ರತಿ ತಿಂಗಳು ಆಡಿಟ್ ಮಾಡಿ ಸದರಿ ಪ್ರತಿಯನ್ನು ಮಹಾನಗರ ಪಾಲಿಕೆಗೆ ಕಳುಹಿಸುವುದು. ಕ.ನ.ನೀ.ಸ.ಒ.ಚ. ಮಂಡಳಿ ನೀರು ನಿರ್ವಹಣೆಗೆ ಅಗತ್ಯವಿರುವ ತುರ್ತು ಕೆಲಸಗಳ ನಿಮಿತ್ತ ಸಿವಿಲ್ ಕಾಮಗಾರಿಗಳಿಗೆ ರೂ. 10.00 ಲಕ್ಷದವರೆವಿಗೂ ಹಾಗೂ ಎಲೆಕ್ಟ್ರೋ ಮೆಕ್ಯಾನಿಕಲ್ ಕಾಮಗಾರಿಗಳಿಗೆ ರೂ. 10.00 ಲಕ್ಷಗಳವರೆವಿಗೂ ಭರಿಸಿ ನಂತರ ಮಾಸಿಕ ಬಿಲ್‌ನಲ್ಲಿ ಮಹಾನಗರಪಾಲಿಕೆಗೆ ಸಲ್ಲಿಸಬಹುದಾಗಿರುತ್ತದೆ. ಸದರಿ ಮೊತ್ತಕ್ಕಿಂತ ಮೇಲ್ಪಟ್ಟ ನಿರ್ವಹಣಾ ವೆಚ್ಚಗಳನ್ನು ಮಹಾನಗರ ಪಾಲಿಕೆಯ ಅನುಮೋದನೆ ಪಡೆದು ನಂತರ ಭರಿಸುವುದು.

4) ಸಿಗಬೇಕಾದ ಅನುದಾನ ನಿಗದಿಪಡಿಸುವ ನಿರ್ವಹಣೆ ವೆಚ್ಚವನ್ನು ಭರಿಸಲು ಮಹಾನಗರ ಪಾಲಿಕೆಯು 3 ತಿಂಗಳ ನೀರು ನಿರ್ವಹಣೆ ವೆಚ್ಚದ ಮೊತ್ತವನ್ನು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಠೇವಣಿ ರೂಪದಲ್ಲಿ ನೀಡುವುದು. ಈ ಕುರಿತು ಆಗಾಗ್ಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ, ಜಲಮಂಡಳಿ ಹಾಗೂ ಮಹಾನಗರಪಾಲಿಕೆಯ ಕಾರ್ಯಪಾಲಕ ಅಭಿಯಂತರರುಗಳು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರುಗಳನ್ನೊಳಗೊಂಡ ಸಮಿತಿಯನ್ನು ರಚಿಸಿ, ಸದರಿ ಮೊತ್ತವನ್ನು ಮಹಾನಗರಪಾಲಿಕೆಯು ಜಲಮಂಡಳಿಗೆ ಠೇವಣಿ ರೂಪದಲ್ಲಿ ನೀಡುವುದು. ನೀರು ಸರಬರಾಜು ನಿರ್ವಹಣೆಗೆ ಅಗತ್ಯವಿರುವ ತುರ್ತು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ರೂ. 2.00 ಕೋಟಿ ಹಣವನ್ನು, ಮಹಾನಗರಪಾಲಿಕೆಯು ತಕ್ಷಣವೇ ಕ.ನ.ನೀ.ಸ. ಮತ್ತು ಒ.ಚ.ಮಂ.ಗೆ ತನ್ನ ಸಂಪನ್ಮೂಲದಿಂದ ಒಂದೇ ಕಂತಿನಲ್ಲಿ ಪಾವತಿಸುವುದು, ಮತ್ತು ಬಾಕಿ ಉಳಿದ ರೂ. 2.00 ಕೋಟಿಗಳ ಮೊತ್ತವನ್ನು ಹಂತ ಹಂತವಾಗಿ ಮಂಡಳಿಗೆ ಜಮಾ ಮಾಡುವುದು. ಒಂದು ವೇಳೆ ಸದರಿ ಮೊತ್ತವು ತಕ್ಷಣದ ದುರಸ್ಥಿ ಕಾಮಗಾರಿಗಳಿಗೆ ಕಡಿಮೆ ಎಂದು ಕಂಡುಬಂದಲ್ಲಿ ಮೇಲಿನ ಸಮಿತಿಯು ತೀರ್ಮಾನಿಸಿದ ಮೊತ್ತವನ್ನು, ಮಹಾನಗರಪಾಲಿಕೆಯು ತನ್ನ ಸ್ವಂತ ಸಂಪನ್ಮೂಲಗಳಿಂದ ಅಥವಾ ಎಸ್.ಎಫ್.ಸಿ. ಅನುದಾನದಿಂದ ಬಿಡುಗಡೆ ಮಾಡಲು ಸೂಕ್ತ ಕ್ರಮವಹಿಸುವುದು.

5) ಕ.ನ.ನೀ.ಸ ಮತ್ತು ಒ.ಚ ಮಂಡಳಿಯು ನೀರು ಸರಬರಾಜು ನಿರ್ವಹಣೆಗೆ ಅಗತ್ಯವಿರುವ ವೆಚ್ಚವನ್ನು ಭರಿಸುವುದು ಮತ್ತು ಸದರಿ ಮೊತ್ತವನ್ನು ಮಹಾನಗರಪಾಲಿಕೆಯಿಂದ ಮರುಪಾವತಿ ಪಡೆಯುವುದು. ನೀರಿನ ಕಂದಾಯ ವಸೂಲಾತಿಯ ವ್ಯತ್ಯಾಸದ ಮೊತ್ತವನ್ನು ಮಹಾನಗರ ಪಾಲಿಕೆಯು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ನೀಡಲು ಒಪ್ಪದಿದ್ದಲ್ಲಿ ಸದರಿ ಬಾಕಿಯನ್ನು ನೀರಿನ ಕರದ ಮೂಲಕ ಮಂಡಳಿಯೇ ನೇರವಾಗಿ ವಸೂಲಿ ಮಾಡುವುದು. ಅಥವಾ ಎಸ್.ಎಫ್.ಸಿ. ಅನುದಾನದಿಂದ ಕಡಿತಗೊಳಿಸುವುದಕ್ಕೆ ಮಹಾನಗರ ಪಾಲಿಕೆಯು ತನ್ನ ಸಮ್ಮತವನ್ನು ಸರ್ಕಾರಕ್ಕೆ ನೀಡುವುದು.

6) ನೀರು ನಿರ್ವಹಣಾ ವ್ಯವಸ್ಥೆಯಡಿಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ನೌಕರರುಗಳು ಮಹಾನಗರ ಪಾಲಿಕೆಯಿಂದ ಅನ್ಯ ಸೇವೆಯ ಮೇಲೆ ನೀರು ನಿರ್ವಹಣಾ ಕಾರ್ಯವನ್ನು ಕ.ನ.ನೀ.ಸ. ಮತ್ತು ಒ.ಚ.ಮಂಡಳಿಯ ಅಧೀನದಲ್ಲಿ ಕಾರ್ಯನಿರ್ವಹಿಸುವುದು. ಸದರಿ ನೌಕರರ ಸಂಬಳವನ್ನು ಮಹಾನಗರ ಪಾಲಿಕೆ/ಜಲಮಂಡಳಿ (ನೀರಿನ ಕರ ವಸೂಲಿಯಿಂದ) ಪ್ರತಿ ತಿಂಗಳು ನೀಡುವುದು. ಪ್ರಸ್ತುತ ಅಗತ್ಯವಿರುವ ತಾಂತ್ರಿಕ ಮತ್ತು ತಾಂತ್ರಿಕವಲ್ಲದ ಸಿಬ್ಬಂದಿಯನ್ನು ಕ.ನ.ನೀ.ಸ.ಒ.ಚ.ಮಂಡಳಿಯು ಸುಸೂತ್ರ ನೀರು ಸರಬರಾಜು ನಿರ್ವಹಣೆಗೆ ನೇಮಿಸಿದ್ದಲ್ಲಿ ಸದರಿ ನೌಕರರನ್ನು ಮಹಾನಗರ ಪಾಲಿಕೆಯು ನೀರು ಸರಬರಾಜು ನಿರ್ವಹಣೆಯನ್ನು ಪುನಃ ಹಿಂದಕ್ಕೆ ಪಡೆಯುವಾಗ ಎಲ್ಲಾ ನಿರ್ವಹಣಾ ಸಿಬ್ಬಂದಿಯೊಂದಿಗೆ ಹಿಂದಕ್ಕೆ ಪಡೆಯುವುದು. ನೀರು ಸರಬರಾಜು ನಿರ್ವಹಣೆಯನ್ನು ಹಿಂದಕ್ಕೆ ಪಡೆಯಲು 3 ತಿಂಗಳ ನೋಟೀಸ್‌ನ್ನು ಮಹಾನಗರ ಪಾಲಿಕೆಯು ಪೂರಕವಾಗಿ ನೀಡಿ ಸರ್ಕಾರದ ಅನುಮೋದನೆ ಪಡೆಯತಕ್ಕದ್ದು.

7) ನೀರು ಸರಬರಾಜು ನಿರ್ವಹಣೆಯನ್ನು ಕ.ನ.ನೀ.ಸ.ಒ.ಚ.ಮಂಗೆ ಹಸ್ತಾಂತರಿಸಲು ಅಗತ್ಯವಿರುವ ಎಲ್ಲಾ ಕಾನೂನು ರೀತಿಯ ಕ್ರಮಗಳನ್ನು ಕೈಗೊಳ್ಳುವುದು. ನೀರು ಸರಬರಾಜು ನಿರ್ವಹಣೆಯನ್ನು ಗ್ರಾಹಕರವರೆವಿಗೆ ಸರಬರಾಜು ಮಾಡಲು ಅನುವಾಗುವಂತೆ ಅವಶ್ಯವಿರುವ ಉಪ-ವಿಭಾಗಗಳನ್ನು ಪ್ರಾರಂಭಿಸಲು ಪ್ರತ್ಯೇಕ ಕಟ್ಟಡದ ವ್ಯವಸ್ಥೆಯನ್ನು ಮಹಾನಗರ ಪಾಲಿಕೆಯು ಮಾಡುವುದು.

8) ನೀರು ಸರಬರಾಜು ವ್ಯವಸ್ಥೆಯಲ್ಲಿ ಅಳವಡಿಸಿರುವ ಎಲ್ಲಾ ವಿದ್ಯುತ್‌ಶಕ್ತಿ ಬಿಲ್‌ಗಳನ್ನು ಮಹಾನಗರಪಾಲಿಕೆಯು ಭರಿಸತಕ್ಕದ್ದು.

9) ಗುಲ್ಬರ್ಗಾ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯ ಯೋಜನೆಯನ್ನು ಅನುಷ್ಠಾನಗೊಳಿಸಲು ಪಡೆದಿರುವ ಸಾಲದ ಮೊತ್ತ ಮತ್ತು ಅದರ ಬಡ್ಡಿಯನ್ನು ಮಹಾನಗರಪಾಲಿಕೆ ಭರಿಸತಕ್ಕದ್ದು.

10) ಜಲಮಂಡಳಿಯು ಪ್ರಸ್ತುತ ಗುಲ್ಬರ್ಗಾ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ನೀರಿನ ಸಂಪರ್ಕಗಳಿಗೆ ಮೀಟರ್‌ಗಳನ್ನು ಅಳವಡಿಸುವುದು. ಒಂದು ವೇಳೆ ಅಕ್ರಮ ಸಂಪರ್ಕಗಳು ಕಂಡು ಬಂದಲ್ಲಿ, ಸದರಿ ಸಂಪರ್ಕಗಳಿಗೆ ಒಂದು ಬಾರಿ ನೀರು ಸಂಪರ್ಕಗಳಿಗೆ ವಿಧಿಸುವ ದರಗಳ ಮೇಲೆ ದಂಡವನ್ನು ವಿಧಿಸಿ ಸದರಿ ಸಂಪರ್ಕವನ್ನು ಸಕ್ರಮಗೊಳಿಸುವುದು. ನೀರಿನ ಕರಗಳನ್ನು ಸರ್ಕಾರವು ಆದೇಶ ಸಂಖ್ಯೆ:ನಅಇ07ಯುಡಬ್ಲ್ಯೂಎಸ್ 2011 ದಿನಾಂಕ: 20-7-2011ರಲ್ಲಿ ನಿಗದಿಪಡಿಸಿದಂತೆ ವಿಧಿಸಿ, ನೀರಿನ ಕರ ಬಾಕಿಯನ್ನು ವಸೂಲು ಮಾಡುವುದು. ನೀರು ಸರಬರಾಜು ನಿರ್ವಹಣೆಯಿಂದ ವಸೂಲಾದ ಮೊತ್ತದಲ್ಲಿ ಶೇ. 8ರಷ್ಟು ಮೊತ್ತವನ್ನು ಮಹಾನಗರ ಪಾಲಿಕೆಯು ಕ.ನ.ನೀಸ.ಒ.ಚ.ಮಂಡಳಿಗೆ ಪ್ರೋತ್ಸಾಹ ಧನವಾಗಿ ನೀಡುವುದು.

11) ಮಹಾನಗರಪಾಲಿಕೆಯು ನೀರು ನಿರ್ವಹಣಾ ವ್ಯವಸ್ಥೆಯ ಷರತ್ತು ಮತ್ತು ನಿಬಂಧನೆಗಳ ಬಗ್ಗೆ ಕ.ನ.ನೀ.ಸ.ಒ.ಚ.ಮಂಡಳಿಯೊಂದಿಗೆ ಮಾಡಿಕೊಂಡಿರುವ ಕರಡು ಒಪ್ಪಂದವನ್ನು ಮತ್ತು ಸರ್ಕಾರವು ವಿಧಿಸಿರುವ ಇತರೆ ಷರತ್ತುಗಳನ್ನೊಳಗೊಂಡಂತೆ ಅಳವಡಿಸಿಕೊಂಡು ಛಾಪಾ ಕಾಗದದ ಮೇಲೆ ಒಪ್ಪಂದ ಸಹಿ ಮಾಡುವುದು. ಸದರಿ ಒಪ್ಪಂದದಂತೆ ಮಹಾನಗರ ಪಾಲಿಕೆಯು ನಡೆದುಕೊಳ್ಳಲು ವಿಫಲವಾದಲ್ಲಿ ನೀರು ಸರಬರಾಜು ನಿರ್ವಹಣೆಯನ್ನು ಮಂಡಳಿಯು ಸರ್ಕಾರದ ಆದೇಶ ಸಂಖ್ಯೆ:ನಅಇ07ಯುಡಬ್ಲ್ಯೂಎಸ್ 2011 ದಿನಾಂಕ: 20-7-2011ರಲ್ಲಿ [illegible] ಸರ್ಕಾರದ ಅನುಮೋದನೆ ಪಡೆದ ನಂತರ ಹಿಂದಕ್ಕೆ ಹಸ್ತಾಂತರಿಸಬಹುದಾಗಿರುತ್ತದೆ.

ಎಂ.ಎಂ. ಹಿರೇಮಠ

ಸರ್ಕಾರದ ಅಧೀನ ಕಾರ್ಯದರ್ಶಿ

ನಗರಾಭಿವೃದ್ಧಿ ಇಲಾಖೆ

ಪಿ.ಆರ್. 45

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಕೃತ ಜ್ಞಾಪನ

ಸಂಖ್ಯೆ: ಸಿಆಸುಇ 03 ರಾರಾಆ 2012 ಬೆಂಗಳೂರು, ದಿನಾಂಕ: 16-01-2012

ವಿಷಯ : ಭಾರತದ ಸ್ವಾತಂತ್ರ್ಯಕ್ಕಾಗಿ ಪ್ರಾಣತೆತ್ತು ಹುತಾತ್ಮರಾದವರ ಸ್ಮರಣಾರ್ಥವಾಗಿ ಪ್ರತಿವರ್ಷ ಜನವರಿ 30ರಂದು ಮೌನ ಆಚರಿಸುವ ಬಗ್ಗೆ.

* * * * *

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪ್ರಾಣತೆತ್ತು ಹುತಾತ್ಮರಾದವರ ಸ್ಮರಣಾರ್ಥವಾಗಿ ಪ್ರತಿವರ್ಷ ಜನವರಿ 30ರಂದು ಪೂರ್ವಾಹ್ನ 11-00 ಘಂಟೆಗೆ ಎಲ್ಲಾ ಕೆಲಸ ಕಾರ್ಯಗಳನ್ನು ಹಾಗೂ ಚಲನೆಯನ್ನು ಸ್ಥಗಿತಗೊಳಿಸಿ ಮೌನ ಆಚರಿಸುವಾಗ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಪ್ರತಿ ವರ್ಷವೂ ಸೂಚನೆಗಳನ್ನು ನೀಡಲಾಗುತ್ತಿದೆ. ಹುತಾತ್ಮರ ಸ್ಮರಣಾರ್ಥವಾಗಿ ಜನವರಿ 30 ರಂದು ನಡೆಸುವ ಮೌನ ಆಚರಣೆಗೆ ಭಾರತ ಸರ್ಕಾರದ ಸೂಚನೆಗಳಂತೆ ಸ್ಥಾಯಿ ಸೂಚನೆಗಳನ್ನು ನೀಡಲಾಗಿದೆ.

1. ಜನವರಿ 30 ರಂದು ಪೂರ್ವಾಹ್ನ 11-00 ಘಂಟೆಗೆ ರಾಜ್ಯದಲ್ಲೆಡೆ ಎಲ್ಲಾ ಕೆಲಸ ಕಾರ್ಯಗಳನ್ನು ಮತ್ತು ಚಲನೆಯನ್ನು ಸ್ಥಗಿತಗೊಳಿಸಿ 2 ನಿಮಿಷಗಳ ಕಾಲ ಮೌನ ಆಚರಿಸುವುದು.
2. ಎಲ್ಲಿ ಸೈರನ್‌ಗಳು ಅಥವಾ ಸೈನಿಕರ ಬಂದೂಕುಗಳು ಲಭ್ಯ ಇವೆಯೋ ಅಂತಹ ಕಡೆಗೆ ಎರಡು ನಿಮಿಷಗಳು ಮೌನ ಆಚರಣೆಯ ಕಾಲವನ್ನು ಪ್ರಾರಂಭ ಮತ್ತು ಮುಕ್ತಾಯಕ್ಕೆ ಸೈರನ್ ಅಥವಾ ಸೈನಿಕರ ಬಂದೂಕುಗಳ ಶಬ್ದದ ಮೂಲಕ ಎರಡು ನಿಮಿಷ ಮೌನ ಆಚರಣೆ ಪೂರ್ವಾಹ್ನ 10.59 ರಿಂದ 11-00 ಘಂಟೆಯ ವರೆಗೆ ಸೈರನ್ : ಬಂದೂಕು ಶಬ್ದಮಾಡಿಸುವುದು. ಹಾಗೂ ಎರಡು ನಿಮಿಷದ ಮೌನ ಆಚರಣೆ ನಂತರ ಪುನಃ 11-02 ರಿಂದ 11-03 ನಿಮಿಷದವರೆಗೆ ಸೈರನ್ ಶಬ್ದವನ್ನು ಮಾಡಿಸುವುದು. ಈ ಪದ್ಧತಿಯನ್ನು ಸೈರನ್ ಸೌಲಭ್ಯವಿರುವ ಕಡೆ ಅಳವಡಿಸಿಕೊಳ್ಳುವುದು.
3. ಶಬ್ದವು (ಎಲ್ಲಿ ಲಭ್ಯ ಇದೆಯೋ ಅಲ್ಲಿ) ಕೇಳಿದ ಕೂಡಲೇ ಅಲ್ಲಿ ವ್ಯಕ್ತಿಗಳು ಆರಂಭದ ಸೂಚನೆಗಾಗಿ ನಿಂತುಕೊಳ್ಳಬೇಕು ಮತ್ತು ಮೌನವನ್ನು ಆಚರಿಸಬೇಕು. ಪ್ರತಿಯೊಬ್ಬ ವ್ಯಕ್ತಿಯು ತನ್ನ ಕೊಠಡಿಯಲ್ಲಿ ಅಥವಾ ಇತರೆ ಯಾವುದೇ ಸ್ಥಳದಲ್ಲಿ ನಿಂತುಕೊಂಡು ಮೌನ ಆಚರಿಸುವುದಕ್ಕಿಂತ, ಒಂದು ವೇಳೆ ವ್ಯಕ್ತಿಗಳು ಒಂದು ಸ್ಥಳದಲ್ಲಿ ಮೌನ ಆಚರಿಸಿದರೆ ಅದು ತುಂಬಾ ಪರಿಣಾಮಕಾರಿಯಾಗಿ ಮತ್ತು ಪ್ರಭಾವಕಾರಿ (effective and impressive) ಆಗುತ್ತದೆ. ಆದಾಗ್ಯೂ ಕೆಲಸ ಕಾರ್ಯಗಳಿಗೆ ತೀವ್ರ ತೊಂದರೆ ಆಗುವಂತೆ ಇದ್ದರೆ ಮೇಲೆ ತಿಳಿಸಿದಂತೆ ಒಂದೇ ಸ್ಥಳದಲ್ಲಿ ಸೇರಲು ಪ್ರಯತ್ನಿಸದೇ ಇರಬಹುದು. ಈ 2 ನಿಮಿಷದಲ್ಲಿ ಎಲ್ಲಾ ವರ್ಕ್‌ಶಾಪ್‌ಗಳು ಮತ್ತು ಕಾರ್ಖಾನೆಗಳು ಕೆಲಸ ಸ್ಥಗಿತಗೊಳಿಸಬೇಕು. ಈ 2 ನಿಮಿಷದ ಅವಧಿಯಲ್ಲಿ ವರ್ಕ್‌ಶಾಪ್‌ಗಳು ಕಾರ್ಖಾನೆಗಳು ಪ್ರಸಾರ ಮಾಡುವುದನ್ನು ನಿಲ್ಲಿಸಬೇಕು, ಮತ್ತು ರಸ್ತೆಗಳಲ್ಲಿ ಸಂಚಾರ ಸ್ಥಗಿತಗೊಳಿಸಬೇಕು. ವಿಮಾನಗಳು, ಹಡಗುಗಳು, ರೈಲುಗಳು ಹೊರಡಲು 11.00 A.M. ನಿಗಧಿಪಡಿಸಿದ್ದಲ್ಲಿ ಅಂತಹುಗಳನ್ನು ಆಯ ನಿಲ್ದಾಣಗಳಲ್ಲಿ 2 ನಿಮಿಷಗಳು ತಡೆ ಹಿಡಿಯಬೇಕು.
4. ಸಂಕೇತ (Signal) ವ್ಯವಸ್ಥೆ ಇರದಂತಹ ಪ್ರದೇಶದಲ್ಲಿ, 11.00 A.M. ಗೆ 2 ನಿಮಿಷಗಳ ಮೌನ ಆಚರಿಸಲು ಸಂಬಂಧಪಟ್ಟವರಿಗೆಲ್ಲ ಸೂಕ್ತ ನಿರ್ದೇಶನವನ್ನು ಕಳುಹಿಸುವುದು.
5. ಇಲಾಖಾ ಮುಖ್ಯಸ್ಥರು ಮತ್ತು ಜಿಲ್ಲಾಧಿಕಾರಿಗಳು ವಿವರವಾದ ಕಾರ್ಯಕ್ರಮಗಳನ್ನು ರೂಪಿಸುವ ಸಂಪೂರ್ಣ ಜವಾಬ್ದಾರಿಯುಳ್ಳವರಾಗಿರುತ್ತಾರೆ. (dis-oreation) 10.44 A.M. ರಿಂದ 10.56 A.M. ವರೆಗೆ (1) "ಸುಮಿರನ ಕರಲೆ ಮೇರೆ ಮನ್" (2) "ವೈಷ್ಣವೋ ಜನತೋ ತೇನೇ ಕಹಿಯೇ" ಮತ್ತು "ರಘುಪತಿ ರಾಘವ ರಾಜಾರಾಂ" ಈ ಕ್ರಮದಲ್ಲಿ 3 ಭಜನೆಗಳನ್ನು ಹಾಡಬೇಕು ಮತ್ತು ಈ ಕಾರ್ಯಕ್ರಮವು ಸಮಾರಂಭದ ಭಾಗ ಆಗಬಹುದು.
6. ಶಬ್ಧ ಮಾಡುವ ಬಗ್ಗೆ ಬಂದೂಕು ಹೊಡೆಯುವುದರಿಂದ ಅಥವಾ siron ಗಳನ್ನು ಬೆಂಗಳೂರಿನಲ್ಲಿ ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಇತರ ನಗರ ಪಟ್ಟಣಗಳಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಸೂಕ್ತ ವ್ಯವಸ್ಥೆಗಳನ್ನು ಕರ್ನಾಟಕ ರಾಜ್ಯದ ಆರಕ್ಷಕ ಮಹಾನಿರೀಕ್ಷಕರು ಕ್ರಮ ತೆಗೆದುಕೊಳ್ಳುವುದು.

2. ಕೆಲವು ಕಛೇರಿಗಳಲ್ಲಿ ಈ 2 ನಿಮಿಷಗಳ ಮೌನ ಆಚರಣೆಯನ್ನು ಮಾಡುತ್ತಿರುವಾಗ ಸಾಮಾನ್ಯ ಜನತೆ ಈ ಮೌನ ಆಚರಣೆ ಸಂದರ್ಭದ ಪಾವಿತ್ರ್ಯತೆಯನ್ನು ಗಮನದಲ್ಲಿ ಇಡದೇ ತನ್ನ ಕಾರ್ಯದಲ್ಲಿ ನಿರತವಾಗುವುದನ್ನು ಗಮನಿಸಲಾಗಿದೆ. ಆದುದರಿಂದ ಹುತಾತ್ಮರ ದಿನಾಚರಣೆಯ ಸೂಕ್ತವಾಗಿ ಸಲ್ಲಿಸಬೇಕಾದ ಪಾವಿತ್ರ್ಯತೆ ಮತ್ತು ಸಾಮಾನ್ಯ ಜನತೆಯು ಭಾಗವಹಿಸುವುದರೊಡನೆ ಈ ಹುತಾತ್ಮರ ದಿನಾಚರಣೆಯನ್ನು ತಪ್ಪದೇ ಆಚರಿಸಬೇಕಾಗಿರುವ ಎಲ್ಲಾ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಸಂಬಂಧಪಟ್ಟ ಎಲ್ಲಾ ಪ್ರಾಧಿಕಾರಿಗಳಿಗೆ ಸೂಚಿಸಲಾಗಿದೆ. ಈ ಉದ್ದೇಶಕ್ಕಾಗಿ ಕೆಳಕಂಡ ಕ್ರಮಗಳನ್ನು ಕೈಗೊಳ್ಳಬೇಕೆಂದು ಕೋರಲಾಗಿದೆ.

1. ಹುತಾತ್ಮರ ದಿನವನ್ನು ಪೂರ್ಣ ಪಾವಿತ್ರ್ಯತೆ ಮತ್ತು ತಕ್ಕುದಾದ (befitting) ರೀತಿಯಲ್ಲಿ ಆಚರಿಸಲು ರಾಜ್ಯದ ಎಲ್ಲಾ ವಿದ್ಯಾ ಸಂಸ್ಥೆಗಳಿಗೆ ಸೂಚನೆಗಳನ್ನು ನೀಡುವುದು. ಈ ದಿನದ ವಿಶೇಷತ್ವಕ್ಕೆ (significance) ಸಂಬಂಧಿಸಿದಂತೆ ಭಾಷಣಗಳನ್ನು, ಅದರಲ್ಲೂ ವಿಶೇಷವಾಗಿ ಭಾರತದ ಸ್ವಾತಂತ್ರ್ಯದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಪಾತ್ರವನ್ನು ತಿಳಿಸುವಂತಹ ಭಾಷಣಗಳನ್ನು ಚರ್ಚೆಗಳನ್ನು (talks) ಏರ್ಪಡಿಸಬೇಕು. ಈ ಭಾಷಣಗಳ ಮುಖ್ಯಾಂಶಗಳಲ್ಲಿ ಕಷ್ಟಪಟ್ಟು ಗಳಿಸಿದ ಸ್ವಾತಂತ್ರ್ಯವನ್ನು ಉಳಿಸುವುದು, ಸಂರಕ್ಷಿಸುವುದು ಮತ್ತು ಶ್ರೀಮಂತಗೊಳಿಸುವುದಲ್ಲದೆ ರಾಷ್ಟ್ರದ ಐಕ್ಯತೆಯನ್ನು ಉತ್ತೇಜಿಸುವುದು (promote) ಮತ್ತು ಒಂದೇ ಗುರಿಗಳು ಮತ್ತು ಆದರ್ಶಗಳಿಗೆ (ideal) ಬದ್ಧರಾಗುವ ಅಂಶಗಳನ್ನೊಳಗೊಂಡಿರಬೇಕು.

2. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಹುತಾತ್ಮರಾದವರ ಪಾತ್ರ ಮತ್ತು ರಾಷ್ಟ್ರೀಯ ಐಕ್ಯತೆಯ (National Integration) ಮೂಲ ಉದ್ದೇಶಗಳು ಇರುವ ಸಾಂಸ್ಕೃತಿಕ ಕಾರ್ಯಕ್ರಮಗಳು Documentary ಚಿತ್ರಗಳ ಪ್ರದರ್ಶನ : ಏರ್ಪಾಡುಗಳನ್ನು ರಾಜ್ಯದ ಪ್ರಚಾರ ಘಟಕಗಳು ಮಾಡಬಹುದು.
3. ಹುತಾತ್ಮರ ದಿನಾಚರಣೆಯನ್ನು ಸೂಕ್ತವಾಗಿ ಆಚರಿಸುವ ಬಗ್ಗೆ ತಮ್ಮ ಸದಸ್ಯರು ಹಾಗೂ ಸಂಯೋಜಿತ ಸಂಘ ಸಂಸ್ಥೆಗಳು ಹುತಾತ್ಮರ ದಿನಾಚರಣೆಯನ್ನು ಖಾತ್ರಿಯಾಗಿ ಸೂಕ್ತವಾಗಿ ಆಚರಿಸಬೇಕೆಂದು Chamber of Commerce ಮತ್ತು ಕೈಗಾರಿಕೆಗಳನ್ನು ಕೋರಬಹುದು.

3. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು, ಎಲ್ಲಾ ಪ್ರಾದೇಶಿಕ ಆಯುಕ್ತರು, ಇಲಾಖಾ ಮುಖ್ಯಸ್ಥರು ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮತ್ತು ಮತ್ತಿತರೆ ಸಂಬಂಧಪಟ್ಟ ಅಧಿಕಾರಿಗಳು ಮೇಲೆ ಸೂಚಿಸಿರುವ ನಿರ್ದೇಶನಗಳನ್ನು ತಕ್ಕುದಾದ ರೀತಿಯಲ್ಲಿ ಅನುಸರಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಲಾಗಿದೆ.

ಎ. ಶಿವಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ
ಸಿ.ಆ.ಸು.ಇ (ರಾಜಕೀಯ)

ಪಿ.ಆರ್. ನಂ. 361

ಕಂದಾಯ ಸಚಿವಾಲಯ

ತಿದ್ದುಪಡಿ ಆದೇಶ

ಸಂಖ್ಯೆ: ಆರ್‌ಡಿ 671 ಎಲ್‌ಜಿಬಿ 2011 ಬೆಂಗಳೂರು ದಿನಾಂಕ: 11-01-2012.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 367 ಎಲ್‌ಜಿಬಿ 2011 ದಿನಾಂಕ: 20-09-2011ರ ಆದೇಶದ ಭಾಗದಲ್ಲಿರುವ **ಶೈಕ್ಷಣಿಕ ಉದ್ದೇಶಕ್ಕಾಗಿ** ಎಂಬುದರ ಜೊತೆಗೆ **ಗುರುಪೀಠ ಸ್ಥಾಪನೆ, ಶೈಕ್ಷಣಿಕ ಸಂಸ್ಥೆಗಳು, ವಿದ್ಯಾರ್ಥಿ ನಿಲಯ, ಸಮುದಾಯ ಭವನ, ಧಾರ್ಮಿಕ ಚಟುವಟಿಕೆ, ಆಸ್ಪತ್ರೆ ನಿರ್ಮಾಣ, ಆರೋಗ್ಯ ಕೇಂದ್ರ ಮತ್ತು ಅಂಗವಿಕಲರಿಗೆ ಶಾಲೆ ಸ್ಥಾಪನೆಗಾಗಿ** ಎಂಬುದಾಗಿ ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ.ಕೆ. ರಾಮಸ್ವಾಮಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂ.ಮಂ.)

ಪಿ.ಆರ್. ನಂ. 389

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಹುದ್ದೆಯನ್ನು ಕೆಳದರ್ಜೆಗಿಳಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಅಧಿಸೂಚನೆ ಸಂಖ್ಯೆ : ಡಿ.ಪಿ.ಎ.ಆರ್. 247 ಎಸ್.ಎ.ಎಸ್. 2011, ದಿನಾಂಕ : 13-5-2011.
2. ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ : ಡಿಎಸ್‌ಕೆ/ಸಿಬ್ಬಂದಿ/16/2010-11, ದಿನಾಂಕ : 16-7-2011.
3. ಟಿಪ್ಪಣಿ ಸಂಖ್ಯೆ : ಸಿಆಸುಇ 365 ಸೇಅಸೆ 2009, ದಿನಾಂಕ : 7-10-2011.

ಪ್ರಸ್ತಾವನೆ :

ಮೇಲೆ ಓದಲಾದ (1)ರಲ್ಲಿನ ದಿನಾಂಕ : 13-5-2011ರ ಸಿ.ಆ.ಸು.ಇಲಾಖೆ ಅಧಿಸೂಚನೆಯಲ್ಲಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಹುದ್ದೆಗೆ ಶ್ರೀ ಕೆ.ಎಸ್. ಸತ್ಯಮೂರ್ತಿ, ಭಾ.ಆ.ಸೇ. ರವರನ್ನು ನೇಮಿಸಲಾಗಿದೆ.

ಮೇಲೆ ಓದಲಾದ (2)ರಲ್ಲಿರುವ ದಿನಾಂಕ : 16-7-2011 ರ ಪತ್ರದಲ್ಲಿ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಹುದ್ದೆಯನ್ನು ದಿನಾಂಕ : 1-8-2011 ರಿಂದ 31-1-2012 ರವರೆವಿಗೆ ಅಥವಾ ಈ ಹುದ್ದೆಯನ್ನು ಪುನರ್ ಜೀವಿತಗೊಳಿಸುವವರೆವಿಗೆ (ಯಾವುದು ಮೊದಲೋ ಅಲ್ಲಿಯವರೆವಿಗೆ) ಐ.ಎ.ಎಸ್. ಸೀನಿಯರ್ ಸ್ಕೇಲ್ ವೇತನ ಶ್ರೇಣಿಗೆ ಕೆಳದರ್ಜೆಗಿಳಿಸಿ ಆದೇಶ ಹೊರಡಿಸಬೇಕೆಂದು ಆಯುಕ್ತರು ಕೋರಿದ್ದಾರೆ.

ಮೇಲೆ ಓದಲಾದ (3)ರಲ್ಲಿರುವ ಸರ್ಕಾರದ ಅಧೀನ ಕಾರ್ಯದರ್ಶಿ, ಸಿ.ಆ.ಸು.ಇ. (ಸೇವೆಗಳು-1)ರವರ ದಿನಾಂಕ : 7-10-2011ರ ಟಿಪ್ಪಣಿಯಲ್ಲಿ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಹುದ್ದೆಯನ್ನು ದಿನಾಂಕ : 1-8-2011 ರಿಂದ 31-1-2012 ರವರೆವಿಗೆ ಅಥವಾ ಹುದ್ದೆಯನ್ನು ಪುನರ್‌ಜೀವಿತಗೊಳಿಸುವವರೆಗೆ ಇದೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಐ.ಎ.ಎಸ್. ಸೀನಿಯರ್ ಸ್ಕೇಲ್ ವೇತನ ಶ್ರೇಣಿಗೆ ಕೆಳದರ್ಜೆಗಿಳಿಸಿ ಆದೇಶ ಹೊರಡಿಸುವಂತೆ ತಿಳಿಸಿದ್ದಾರೆ.

ಸರ್ಕಾರದ ಆದೇಶ ಸಂಖ್ಯೆ : ಸಿಐ 146 ಎಸ್‌ಜಿಎಫ್ 2011, ಬೆಂಗಳೂರು, ದಿನಾಂಕ : 24-11-2011

ಪ್ರಸ್ತಾವನೆಯಲ್ಲಿ ತಿಳಿಸಿರುವ ಅಂಶಗಳ ಮೇರೆಗೆ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಹುದ್ದೆಯನ್ನು ದಿನಾಂಕ : 1-8-2011 ರಿಂದ 31-1-2012 ಅಥವಾ ಈ ಹುದ್ದೆಯನ್ನು ಪುನರ್‌ಜೀವಿತಗೊಳಿಸುವವರೆಗೆ ಇದೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಐ.ಎ.ಎಸ್. ಸೀನಿಯರ್ ಸ್ಕೇಲ್ ವೇತನ ಶ್ರೇಣಿಗೆ ಕೆಳದರ್ಜೆಗಿಳಿಸಿ ಆದೇಶಿಸಲಾಗಿದೆ.

ಈ ಆದೇಶವನ್ನು ಟಿಪ್ಪಣಿ ಸಂಖ್ಯೆ : ಸಿಆಸುಇ 365 ಸೇಅಸೆ 2009, ದಿನಾಂಕ : 17-10-2011 ರಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ (ಇಲಾಖೆ (ಸೇವೆಗಳು-ಎ) ಶಾಖೆಯು ನೀಡಿರುವ ಸಹಮತಿ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಶಿವಶಂಕರ್ ನಾಯಕ್, ಎಲ್.
ಪೀಠಾಧಿಕಾರಿ (ಸಕ್ಕರೆ) ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಪಿ.ಆರ್. 51

ಕಂದಾಯ ಸಚಿವಾಲಯ

ವಿಷಯ: ಕಂದಾಯ ಇಲಾಖೆಯ ಕಾರ್ಯದರ್ಶಿಗಳ ವ್ಯವಹಾರ ನಿರ್ವಹಣೆ ಕಾರ್ಯಗಳ ಮರು ಹಂಚಿಕೆ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ:ಕಂಇ 9 ಬಿಎಂಎಂ 2003, ದಿನಾಂಕ:08.09.2005.
2. ಸರ್ಕಾರದ ಆದೇಶ ಸಂಖ್ಯೆ:ಕಂಇ 9 ಬಿಎಂಎಂ 2003, ದಿನಾಂಕ:19.09.2006.
3. ಸರ್ಕಾರದ ಆದೇಶ ಸಂಖ್ಯೆ:ಕಂಇ 179 ಸಮಿತಿ 2010, ದಿನಾಂಕ:01.10.2010.
4. ಸರ್ಕಾರದ ಆದೇಶ ಸಂಖ್ಯೆ:ಕಂಇ 179 ಸಮಿತಿ 2010, ದಿನಾಂಕ:01.12.2010.
5. ಸರ್ಕಾರದ ಆದೇಶ ಸಂಖ್ಯೆ:ಕಂಇ 179 ಸಮಿತಿ 2010, ದಿನಾಂಕ:14.12.2010.
6. ಸರ್ಕಾರದ ಆದೇಶ ಸಂಖ್ಯೆ:ಕಂಇ 55 ಸಮಿತಿ 2011, ದಿನಾಂಕ:06.07.2011.

ಪ್ರಸ್ತಾವನೆ:

ಮೇಲೆ ಓದಲಾದ (2) ರ ಸರ್ಕಾರಿ ಆದೇಶದಲ್ಲಿ ದಿನಾಂಕ:08.09.2005ರ ಸರ್ಕಾರಿ ಆದೇಶ ಸಂಖ್ಯೆ:ಕಂಇ 9 ಬಿಎಂಎಂ 2003ರ ರೀತ್ಯ ರದ್ದು ಮಾಡಲಾದ ಕಂದಾಯ ಇಲಾಖೆಯ ಸರ್ಕಾರದ ಕಾರ್ಯದರ್ಶಿ (ಭೂ ಸುಧಾರಣೆ, ನೋಂದಣಿ ಮತ್ತು ಮುದ್ರಾಂಕ, ಮುಜರಾಯಿ ಹಾಗೂ ಭೂದಾಖಲೆಗಳು), ಹುದ್ದೆಯ ಪರಿಣಾಮವಾಗಿ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆಯ ಕಾರ್ಯದರ್ಶಿ (ವಿಪತ್ತು ನಿರ್ವಹಣೆ) ಹಾಗೂ ಕಂದಾಯ ಇಲಾಖೆಯ ವಿಶೇಷ ಕಾರ್ಯದರ್ಶಿ (ಭೂಮಿ), ಇವರುಗಳಿಗೆ ಆ ಆದೇಶದೊಂದಿಗೆ ಲಗತ್ತಿಸಿದ್ದ ಅನುಬಂಧ-1, 2 ಮತ್ತು 3ರಲ್ಲಿರುವಂತೆ ಕಂದಾಯ ಇಲಾಖೆಯ ಕಾರ್ಯ ನಿರ್ವಹಣೆಯನ್ನು ಮರುಹಂಚಿಕೆ ಮಾಡಿ ಆದೇಶ ಹೊರಡಿಸಲಾಗಿದೆ.

ತದನಂತರ, ಮೇಲೆ ಓದಲಾದ (3) ರಿಂದ (6) ರ ಸರ್ಕಾರಿ ಆದೇಶಗಳಲ್ಲಿ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹಾಗೂ ಕಾರ್ಯದರ್ಶಿಗಳ ವ್ಯವಹಾರ ನಿರ್ವಹಣೆ ಕಾರ್ಯಗಳನ್ನು ಆಯಾ ಸಂದರ್ಭಗಳಿಗೆ ಅನುಸಾರವಾಗಿ ಮರು ಹಂಚಿಕೆ ಮಾಡಲಾಗಿರುತ್ತದೆ.

ಕಂದಾಯ ಇಲಾಖೆಯಲ್ಲಿರುವ ಕಾರ್ಯನಿರ್ವಹಣಾ ವಿಷಯಗಳನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ ಹಾಗೂ ಕಾರ್ಯದರ್ಶಿಗಳಿಗೆ ಮರು ಹಂಚಿಕೆ ಮಾಡುವುದು ಅವಶ್ಯಕವೆಂದು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ:ಕಂಇ 20 ಸಮಿತಿ 2012, ಬೆಂಗಳೂರು, ದಿನಾಂಕ:25.01.2012

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕಂದಾಯ ಇಲಾಖೆಯಲ್ಲಿನ ಕಾರ್ಯಗಳು ಸುಗಮವಾಗಿ ನಡೆಯುವ ಉದ್ದೇಶದಿಂದ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮತ್ತು ಕಾರ್ಯದರ್ಶಿಗಳ ನಡುವೆ ವ್ಯವಹಾರ ಕಾರ್ಯನಿರ್ವಹಣೆ ಹಂಚಿಕೆ ಕುರಿತು ಈ ಮೊದಲು ಹೊರಡಿಸಿದ್ದ ಎಲ್ಲಾ ಆದೇಶಗಳನ್ನು ರದ್ದುಪಡಿಸಿ ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧ-1, ಅನುಬಂಧ-2 ಮತ್ತು ಅನುಬಂಧ-3 ರಲ್ಲಿರುವಂತೆ ಕಂದಾಯ ಇಲಾಖೆಯ ಕಾರ್ಯ ನಿರ್ವಹಣೆ ವಿಷಯಗಳನ್ನು ಮರು ಹಂಚಿಕೆ ಮಾಡಿ ಈ ಮೂಲಕ ಆದೇಶಿಸಿದೆ.

2. ಸರ್ಕಾರದ ಕಾರ್ಯದರ್ಶಿ (ವಿಪತ್ತು ನಿರ್ವಹಣೆ), ಕಂದಾಯ ಇಲಾಖೆ, ಇವರು ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಪೂರ್ಣ ಮೇಲ್ವಿಚಾರಣೆ ಮತ್ತು ಆಡಳಿತಾಧೀನದಲ್ಲಿ ಕಾರ್ಯನಿರ್ವಹಿಸುವುದು. ಅವರಿಗೆ ಹಂಚಿಕೆ ಮಾಡಲಾದ ವಿಷಯಗಳಿಗೆ ಸಂಬಂಧಿಸಿದ ಕಡತಗಳನ್ನು ಮಾನ್ಯ ಸಚಿವರಿಗೆ ನೇರವಾಗಿ ಸಲ್ಲಿಸಬಹುದು. ಆದರೆ ಅವರ ವ್ಯಾಪ್ತಿಯಲ್ಲಿ ಹೊರಡಿಸುವ ಎಲ್ಲಾ ಆದೇಶಗಳ ಪ್ರತಿಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ ತಪ್ಪದೇ ಕಳುಹಿಸುವುದು.

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಅಶೋಕ್ ಕುಮಾರ್ ಸಿ. ಮನೋಳಿ
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಕಂದಾಯ ಇಲಾಖೆ.

ಅನುಬಂಧ-1

ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆರವರ ಕಾರ್ಯನಿರ್ವಹಣೆ ವಿಷಯಗಳು

1. ಪ್ರಾದೇಶಿಕ ಆಯುಕ್ತರು, ಜಿಲ್ಲಾಧಿಕಾರಿಗಳು, ವಿಶೇಷ ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳ, ತಹಶೀಲ್ದಾರರುಗಳ ಅಧಿಕಾರ ನಿಯೋಜನೆ ವಿಷಯಗಳು.
2. ತಹಶೀಲ್ದಾರರ ಎಲ್ಲಾ ಸೇವಾ ವಿಷಯಗಳು.
3. ಭೂ ಮಂಜೂರಾತಿ, ಭೂ ಪರಿವರ್ತನೆ, ಪಿಟಿಸಿಎಲ್ ಪ್ರಕರಣಗಳು, ಭೂ ಕಂದಾಯ ಕಾಯಿದೆ ಮತ್ತು ನಿಯಮಾವಳಿಗಳ ಅಡಿ ಒತ್ತುವರಿಯನ್ನು ತೆರವುಗೊಳಿಸುವ ಎಲ್ಲಾ ವಿಷಯಗಳು.
4. ಭೂಸ್ವಾಧೀನತೆಯ ಎಲ್ಲಾ ವಿಷಯಗಳು.
5. ಭೂ ಮಾಪನ ಮತ್ತು ಭೂ ದಾಖಲೆಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳು.
6. ಪುನರ್ ವ್ಯವಸ್ಥೆ ಮತ್ತು ಪುನರ್ವಸತಿಗೆ (ಕೃಷ್ಣ ಮೇಲ್ದಂಡೆ ಯೋಜನೆ, ಸೀಬರ್ಡ್, ಇತ್ಯಾದಿ) ಸಂಬಂಧಿಸಿದ ಎಲ್ಲಾ ವಿಷಯಗಳು.
7. ವಿವಿಧ ಮಂಡಳಿ / ಪ್ರಾಧಿಕಾರಗಳು ಅಂದರೆ ಕೂಡಲ ಸಂಗಮ ಅಭಿವೃದ್ಧಿ ಮಂಡಳಿ, ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿ, ಬಾಗಲಕೋಟೆ ಅಭಿವೃದ್ಧಿ ಮಂಡಳಿ ಇತ್ಯಾದಿಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳು.
8. ಕಾಗಿನೆಲೆ ಅಭಿವೃದ್ಧಿ, ಸೊನ್ನತಿ ಅಭಿವೃದ್ಧಿ, ಬಾದಾಮಿ, ಐಹೊಳೆ, ಪಟ್ಟದಕಲ್ಲು ಅಭಿವೃದ್ಧಿಗಳ ಮಾಸ್ಟರ್ ಯೋಜನೆ.
9. ಕರ್ನಾಟಕ ಭೂ ಸುಧಾರಣೆ ಕಾಯಿದೆ ಮತ್ತು ನಿಯಮಗಳು ಮತ್ತು ಇನಾಂಗಳ ಬಗೆಗಿನ ಎಲ್ಲಾ ವಿಷಯಗಳು.
10. ಪ್ರಾದೇಶಿಕ ಆಯುಕ್ತರು / ಜಿಲ್ಲಾಧಿಕಾರಿಗಳ ಪ್ರವಾಸ ಟಿಪ್ಪಣಿಯ ಪರಿಷ್ಕರಣೆ ಮತ್ತು ಪ್ರಾದೇಶಿಕ ಆಯುಕ್ತರು / ಜಿಲ್ಲಾಧಿಕಾರಿಗಳ ಸಮ್ಮೇಳನದ ಟಿಪ್ಪಣಿಗಳ ಪರಿಷ್ಕರಣೆ.

11. ಕಂದಾಯ ಇಲಾಖೆಯ (ಸಮನ್ವಯ) ವ್ಯವಸ್ಥೆ ಮತ್ತು ನಿರ್ವಹಣೆ.
12. ಕಂದಾಯ ಕಚೇರಿಗಳು ಅಂದರೆ ಕಂದಾಯ ಭವನ, ಮಿನಿ ವಿಧಾನಸೌಧ, ಇತ್ಯಾದಿಗಳ ನಿರ್ಮಾಣ.
13. ಕಂದಾಯ ಇಲಾಖೆ ಕಚೇರಿಗಳಿಗೆ ವಾಹನಗಳನ್ನು ಒದಗಿಸುವುದು.
14. ಕಚೇರಿಗಳ ಆಧುನೀಕರಣ / ಕಂದಾಯ ಆಡಳಿತದ ಬಲವರ್ಧನೆ.
15. ನಾಡ ಕಚೇರಿ ಬಗೆಗಿನ ವಿಷಯಗಳು.
16. ಎನ್.ಎಸ್.ಎ.ಪಿ./ಸಮಾಜಿಕ ಭದ್ರತಾ ಪಿಂಚಣಿಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳು.
17. ಕರ್ನಾಟಕ ಬಾಡಿಗೆ ಕಾಯಿದೆ, ಕರ್ನಾಟಕ ಸಾರ್ವಜನಿಕ ಆವರಣ ಕಾಯಿದೆಗೆ ಸಂಬಂಧಿಸಿದ ಎಲ್ಲಾ ವಿಷಯಗಳು.
18. ರೋರಿಚ್ ಎಸ್ಟೇಟ್‌ಗೆ ಸಂಬಂಧಿಸಿದ ವಿಷಯಗಳು.
19. ಕಂದಾಯ ವಾರ್ತೆ ಮಾಸಿಕ ಪತ್ರ ಪ್ರಕಟಣೆ.
20. ಕಂದಾಯ ಇಲಾಖೆಯ ಆಡಳಿತ ವಿಧಾನಗಳ ಬಗ್ಗೆ ಸಂಕ್ಷಿಪ್ತ ವರದಿಯನ್ನು ಕಂದಾಯ ಸಚಿವರಿಗೆ ಸಲ್ಲಿಸುವುದು.
21. ಪ್ರಧಾನ ಕಾರ್ಯದರ್ಶಿಗಳು ನಿರ್ವಹಿಸುವ ವಿಷಯಗಳ ಬಗ್ಗೆ ಎಲ್ಲಾ ವಿಧಾನ ಮಂಡಲದ / ವಿಧಾನ ಪರಿಷತ್ತಿನ ವಿಷಯಗಳು, ರಾಜ್ಯ ಸಭೆ ಲೋಕಸಭೆ ಪ್ರಕರಣಗಳು, ರಾಜ್ಯ ವಿಧಾನ ಮಂಡಲದ ಸಮಿತಿಯ ವಿಷಯಗಳು.
22. ವಿಶೇಷ ಕೋಶಗಳು.
23. ಕಂದಾಯ ಸಂಹಿತೆ.
24. ನ್ಯಾಯಾಲಯದ ಪ್ರಕರಣಗಳನ್ನು ಒಳಗೊಂಡಂತೆ ಕಂದಾಯ ಇಲಾಖೆಯ ಗಣಕೀಕರಣ.
25. ಎಫ್.ಎಂ.ಎಸ್. ಮತ್ತು ಎಲ್.ಎಂ.ಎಸ್. ನ ಪರಿಶೀಲನೆ.
26. ವಿವಿಧ ಕಾಯಿದೆ ಮತ್ತು ನಿಯಮಾವಳಿಗಳ ತಿದ್ದುಪಡಿ ಮತ್ತು ಇತರೆ ನೀತಿ ವಿಷಯಗಳ ಪ್ರಸ್ತಾವನೆಗಳು.
27. ಇತರೆ ವಿಷಯಗಳು:
    ಎ) ರಾಜ್ಯ ಹೆಸರಿಸುವ ಪ್ರಾಧಿಕಾರ.
    ಬಿ) ಕರ್ನಾಟಕ ಮೇಲ್ಮನವಿ ಪ್ರಾಧಿಕಾರ.
    ಸಿ) ಲೆಕ್ಕ ಪತ್ರಗಳ ಸಮನ್ವಯ.
    ಡಿ) ಆಯವ್ಯಯ ಭಾಷಣ, ರಾಜ್ಯಪಾಲರ ಭಾಷಣ, ವಾರ್ಷಿಕ ವರದಿ ಮತ್ತು ಅನುಸರಣಾ ವರದಿಗಳು.
    ಇ) ಆರ್ಥಿಕ ಆಯೋಗಕ್ಕೆ ಸಂಬಂಧಿಸಿದ ವಿಷಯಗಳು.
    ಎಫ್) ಆಡಿಟ್, ವೆಚ್ಚ ಮತ್ತು ತನಿಖಾ ವರದಿ.
    ಜಿ) ಆಸ್ತಿಯನ್ನು ತೆರವುಗೊಳಿಸುವ ವಿಷಯಗಳು, ಸಾರ್ವಜನಿಕ ಆವರಣಗಳನ್ನು ತೆರವುಗೊಳಿಸುವುದು ಮತ್ತು ಫೀಲ್ಡ್ ಮತ್ತು ಆರ್ಟಿಲರಿ ಕಾಯಿದೆ, ಟ್ರೆಜರಿ ಟ್ರೋವ್ ಕಾಯಿದೆ.
28. ಕಾರ್ಯದರ್ಶಿ (ವಿಪತ್ತು ನಿರ್ವಹಣೆ) ಕಂದಾಯ ಇಲಾಖೆ ಮತ್ತು ಕಾರ್ಯದರ್ಶಿ (ಭೂಮಿ), ಕಂದಾಯ ಇಲಾಖೆ ಇವರಿಗೆ ಹಂಚಿಕೆ ಮಾಡದೇ ಇರುವ ಬೇರೆ ಯಾವುದೇ ವಿಷಯಗಳು.

ಅಶೋಕ್ ಕುಮಾರ್ ಸಿ. ಮನೋಳಿ
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಕಂದಾಯ ಇಲಾಖೆ.

ಅನುಬಂಧ-2

ಕಂದಾಯ ಇಲಾಖೆಯ ಕಾರ್ಯದರ್ಶಿ (ವಿಪತ್ತು ನಿರ್ವಹಣೆ) ರವರ ಕಾರ್ಯನಿರ್ವಹಣೆ ವಿಷಯಗಳು

1. ಮಳೆ/ಅಭಾವ/ಬರ/ನೆರೆ ಪರಿಹಾರ ಮತ್ತು ಇತರೆ ಸ್ವಾಭಾವಿಕ ವಿಪತ್ತಿನ ಆಕಸ್ಮಿಕ ಬೆಂಕಿ/ವೆಚ್ಚದ ತ:ಖ್ತೆ/ಕೋಮು ಗಲಭೆ ಸಂತ್ರಸ್ತರಿಗೆ ಬಡ್ಡಿ ರಹಿತ ಉಚಿತ ಸಾಲ, ಋತುಮಾನ ಪರಿಸ್ಥಿತಿ, ಬಗೆಗಿನ ಎಲ್ಲಾ ವಿಷಯಗಳು.
2. ಧಾರ್ಮಿಕ ಸಂಸ್ಥೆ ಮತ್ತು ದತ್ತಿ ಸಂಸ್ಥೆಗಳ ಎಲ್ಲಾ ವಿಷಯಗಳು.
3. ನೋಂದಣಿ ಮತ್ತು ಮುದ್ರಾಂಕ.
4. ಎಲ್ಲ ರೀತಿಯ ಗಣತಿಗೆ ಸಂಬಂಧಿಸಿದ ವಿಷಯಗಳು (ಜನಗಣತಿ, ಜಾನುವಾರು ಗಣತಿ, ಕೃಷಿ ಗಣತಿ ಇತ್ಯಾದಿ).
5. ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆಯವರು ವಹಿಸುವ ಯಾವುದೇ ಇತರೆ ವಿಷಯಗಳು.

(ಅಶೋಕ್ ಕುಮಾರ್ ಸಿ. ಮನೋಳಿ)
ಸರ್ಕಾರದ ಪ್ರಧಾನ ಕಾರ್ಯದರ್ಶಿ,

ಅನುಬಂಧ-3

ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ (ಭೂಮಿ ಮತ್ತು ನಗರಾಸ್ತಿ ಮಾಲೀಕತ್ವದ ದಾಖಲೆಗಳು) ರವರ ಕಾರ್ಯ ನಿರ್ವಹಣೆ ವಿಷಯಗಳು

1. ಪೋಡಿ ದಾಖಲೆಗಳು ಸೇರಿದಂತೆ ಭೂದಾಖಲೆಗಳ ಗಣಕೀಕರಣ.
2. ಭೂಮಿ.
3. VSAT ನ Establishment ಸ್ಥಾಪನೆ.
4. ಭೂಮಿಯನ್ನು ಕಾವೇರಿ ಜೊತೆ ಸಂಪರ್ಕ ಮಾಡುವ ಬಗ್ಗೆ.
5. ಭೂ ದಾಖಲೆಗಳನ್ನು ಸ್ಕ್ಯಾನಿಂಗ್ ಮಾಡುವ ಬಗ್ಗೆ.
6. ಗ್ರಾಮೀಣ ನಕ್ಷೆಗಳ ಡಿಜಿಟೈಸೇಷನ್.
7. ಟಿಪ್ಪಣಿಗಳ ಸ್ಕ್ಯಾನಿಂಗ್.
8. ಗ್ರಾಮ ನಕ್ಷೆಗಳ ಲ್ಯಾಮಿನೇಷನ್.
9. ನಗರ ಸರ್ವೆ ಮತ್ತು ಕೃಷಿಯೇತರ ಭೂಮಿ ಡಾಟಗಳ ಗಣಕೀಕರಣ.
10. ಗ್ರಾಮೀಣ ಡಿಜಿಟಲ್ ಸೇವೆ.
3833	812	Dr. HANUMANTHAPPA	01-01-1976	09-01-2009	09-01-2009
3834	813	Dr. BHEEMANNA ALLICHANDI	22-07-1978	09-01-2009	09-01-2009
3835	814	Dr. BHUVANESHWARI DEVI J	04-05-1972	09-01-2009	09-01-2009
3836	815	Dr. ANUPAMA.K.G.	20-08-1976	09-01-2009	09-01-2009

CHIKKEGOWDA,
Under Secretary to Government,
Health and Family Welfare Department,
(Services 1 & 2)

P.R. 1146

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/159/ಡಿಟಿಸಿಆರ್/2010–11, ದಿನಾಂಕ: 28ನೇ ಜುಲೈ 2011

ಉಪಸ್ಥಿತರು : ಜಿ.ವಿ. ಹೂವಪ್ಪಗೌಡ, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಫಿರ್ಯಾದುದಾರರು : ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು

ಆರೋಪಿ : 1) ಕೆ.ಎಸ್ ಅಕ್ಬರ್ , ಬಿನ್:ಮಹಮ್ಮದ್ ಹನೀಫ್, ರಹಮತ್ ಮಂಜಿಲ್, ಕಬಕ, ಪುತ್ತೂರು ತಾಲೂಕು

2) ಗಂಗಾಧರ ರೈ, ಬಿನ್:ದಿ:ಬಾಲಕೃಷ್ಣ ರೈ, ಕೈಕಾರ ಮನೆ, ಒಳಮೊಗ್ರು ಗ್ರಾಮ, ಪುತ್ತೂರು ತಾಲೂಕು (ಪರಾರಿಯಾಗಿರುತ್ತಾರೆ)

ವಾಹನ ಮಾಲೀಕರು : ಶ್ರೀ ಎನ್.ಅಬ್ದುಲ್ಲಾ, ಬಿನ್:ಅಲಿ ಕುಜ್ಞಿ, ಪುರುಷರ ಕಟ್ಟೆ ಹೌಸ್, ನರಿಮೊಗರು ಅಂಚೆ, ಪುತ್ತೂರು ತಾಲೂಕು

ಪ್ರಕರಣದ ಮುಖ್ಯಾಂಶಗಳು :

ದಿನಾಂಕ: 27–12–2010ರಂದು ಅಬಕಾರಿ ನಿರೀಕ್ಷಕರು, ಪುತ್ತೂರು ವಲಯರವರು ಸಂಜೆ 4–30 ಗಂಟೆ ಸಮಯಕ್ಕೆ ಪುತ್ತೂರು ತಾಲೂಕು ಆರ್ಯಾಪು ಗ್ರಾಮದ ಪುತ್ತೂರು ಸುಳ್ಯ ರಸ್ತೆಯ ಕಲ್ಲರ್ಪೆ ಎಂಬಲ್ಲಿ ರಸ್ತೆಗಾವಲು ನಡೆಸುತ್ತಿರುವ ಸಮಯದಲ್ಲಿ ವಾಹನ ಅಟೋರಿಕ್ಷಾ (ಲ್ಯಾಮ್‌ರೆಟೆ) ನೊಂದಣಿ ಸಂ: ಕೆಎ–21–929 ನ್ನು ತಪಾಸಣೆ ಪ್ರಯುಕ್ತ ತಡೆದು ನಿಲ್ಲಿಸಿದಾಗ ಅದರಲ್ಲಿ ಗೋಣಿ ಚೀಲವೊಂದರಲ್ಲಿ ರಟ್ಟಿನ ಬಾಕ್ಸ್‌ಗಳು ಇರುವುದು ಕಂಡು ಬಂದು, ಪರಿಶೀಲಿಸಿದಾಗ 2 ರಟ್ಟಿನ ಪೆಟ್ಟಿಗೆಗಳಲ್ಲಿ 180 ಮಿಲಿಯ ಜಾನ್ ಬುಲ್ ವಿಸ್ಕಿ ಮದ್ಯ ತುಂಬಿರುವ ಒಟ್ಟು 96 ಬಾಟಲಿಗಳು ಇರುವುದು ಹಾಗೂ 2 ರಟ್ಟಿನ ಪೆಟ್ಟಿಗೆಗಳಲ್ಲಿ 180 ಮಿಲಿಯ ಶಾಟ್ ವಿಸ್ಕಿಯ 96 ಬಾಟಲಿಗಳು ಇರುವುದು ಪತ್ತೆಯಾಗಿರುತ್ತದೆ. ಅಟೋರಿಕ್ಷಾ ಚಾಲಕನಾದ ಕೆ.ಎಸ್.ಅಕ್ಬರ್ ಇವರನ್ನು ಸದ್ರಿ ಮದ್ಯ ಸಾಗಾಟದ ಬಗ್ಗೆ ದಾಖಲಾತಿಗಳನ್ನು ಕೇಳಲಾಗಿ ಯಾವುದೇ ಪರವಾನಿಗೆ ಇರುವುದಿಲ್ಲ ಎಂದು ತಿಳಿಸಿದ ಮೇರೆಗೆ ಇದು ಅಕ್ರಮ ಮದ್ಯ ಸಾಗಾಟ ಎಂದು ಖಚಿತಗೊಂಡು ಇದು ಕರ್ನಾಟಕ ಅಬಕಾರಿ ಕಾಯಿದೆ 11, 14ರ ಪ್ರಕಾರ ಅಪರಾಧ ಹಾಗೂ 32 ಮತ್ತು 38ಎ ರ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ, ಮದ್ಯ ಮತ್ತು ಅಟೋ ರಿಕ್ಷಾವನ್ನು ಜಪ್ತುಪಡಿಸಿಕೊಂಡು ಸದ್ರಿ ಮದ್ಯದಿಂದ ಮಾದರಿಗಳನ್ನು ಪ್ರತ್ಯೇಕಿಸಿ ಮಹಜರು ಕ್ರಮ ಜರುಗಿಸಿ ಅಟೋ ರಿಕ್ಷಾ ಚಾಲಕನಾದ ಕೆ.ಯಸ್. ಅಕ್ಬರ್, ಬಿನ್: ಮಹಮ್ಮದ್ ಹನೀಫ್, ರಹಮತ್ ಮಂಜಿಲ್, ಕಬಕ, ಪುತ್ತೂರು ತಾಲೂಕು ಹಾಗೂ ಪ್ರಕರಣ ಸಂದರ್ಭದಲ್ಲಿ ಓಡಿ ತಲೆಮರೆಸಿಕೊಂಡಿರುವ ಅರೋಪಿಯಾದ ಗಂಗಾಧರ ರೈ, ಬಿನ್:ದಿ:ಬಾಲಕೃಷ್ಣ ರೈ, ಕೈಕಾರ ಮನೆ, ಒಳಮೊಗ್ರು ಗ್ರಾಮ, ಪುತ್ತೂರು ತಾಲೂಕು ಇವರುಗಳ ವಿರುದ್ಧ ಪುತ್ತೂರು ವಲಯ ಪ್ರ.ವ.ವರದಿ ಸಂಖ್ಯೆ: 10/2010–11 ದಿ:27–12–2010ರಂದು ಮೊಕದ್ದಮೆ ದಾಖಲಿಸಿ ಕೊಂಡು ಅರೋಪಿ 1ರವನ್ನು ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಒಪ್ಪಿಸಿರುತ್ತಾರೆ.

ಜಪ್ತುಪಡಿಸಿದ ಸೊತ್ತುಗಳು ಈ ಕೆಳಗಿನಂತಿವೆ:

1) 2 ರಟ್ಟಿನ ಪೆಟ್ಟಿಗೆಗಳಲ್ಲಿ 180 ಎಂಎಲ್ ನ ತಲಾ 48ರಂತೆ ಒಟ್ಟು 96 ಬಾಟಲಿಗಳಲ್ಲಿ ಶಾಟ್ ವಿಸ್ಕಿ ಎಂಬ – 17.280 ಲೀ ಮದ್ಯ .

2) 2 ರಟ್ಟಿನ ಪೆಟ್ಟಿಗೆಯಲ್ಲಿ 180 ಎಂಎಲ್ ನ ತಲಾ 48ರಂತೆ ಒಟ್ಟು 96 ಬಾಟಲಿಗಳಲ್ಲಿ ಜಾನ್ ಬುಲ್ ವಿಸ್ಕಿ ಎಂಬ –17.280 ಲೀ ಮದ್ಯ.

3) ಅಟೋ ರಿಕ್ಷಾ ನೊಂದಣಿ ಸಂ: ಕೆಎ–21–929

(4 ರಟ್ಟಿನ ಪೆಟ್ಟಿಗೆಗಳಿಂದ ತಲಾ 4 ಬಾಟಲಿಗಳಂತೆ 180 ಮಿಲಿಯ ಮದ್ಯ ತುಂಬಿದ 16 ಬಾಟಲಿ ಶಾಟ್ ವಿಸ್ಕಿ ಮತ್ತು 16 ಬಾಟಲಿ ಜಾನ್ ಬುಲ್ ವಿಸ್ಕಿಯನ್ನು ರಾಸಾಯನಿಕ ಪರೀಕ್ಷೆಗೆ ಮಾದರಿಗಾಗಿ ತೆಗೆದಿರಿಸಿದೆ.)

ಮೊಕದ್ದಮೆ ಪತ್ತೆ ಹಚ್ಚಿ ತನಿಖೆಯನ್ನು ಕೈಗೊಂಡ ಅಬಕಾರಿ ನಿರೀಕ್ಷಕರು,ಪುತ್ತೂರು ವಲಯ ಇವರು ಸದ್ರಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ಮದ್ಯದಿಂದ ತೆಗೆಯಲಾದ 32 ಮದ್ಯದ ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಲಾಗಿ, ಮಾದರಿಗಳನ್ನು ವಿಶ್ಲೇಷಿಸಿದ ಕರ್ನಾಟಕ ಸರ್ಕಾರದ ಸಹಾಯಕ ರಾಸಾಯನಿಕ ತಜ್ಞ ಮಂಗಳೂರುರವರ ಪತ್ರ ಸಂ:ಇ–03–32, ದಿ:27–4–2011ರ ವರದಿಯಲ್ಲಿ ಮದ್ಯದಲ್ಲಿ ಮದ್ಯಸಾರ ಪ್ರಮಾಣ ಅನುಕ್ರಮವಾಗಿ 44% ಮತ್ತು 43% ಇರುವುದಾಗಿ ದೃಡೀಕರಣ ಪತ್ರವನ್ನು ನೀಡಿರುತ್ತಾರೆ. ಹಾಗೂ ಜಪ್ತುಪಡಿಸಿಕೊಂಡ ವಾಹನದ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಪುತ್ತೂರು ದ.ಕ ಜಿಲ್ಲೆ ಇವರಿಂದ ಪಡೆದು ಸಲ್ಲಿಸಿದ್ದು ಸದ್ರಿ ವರದಿಯ ಪ್ರಕಾರ ಶ್ರೀ. ಎನ್.ಅಬ್ದುಲ್ಲಾ, ಬಿನ್: ಅಲಿ ಕುಜ್ಞಿ, ಪುರುಷರ ಕಟ್ಟೆ ಹೌಸ್, ನರಿಮೊಗರು ಅಂಚೆ, ಪುತ್ತೂರು ತಾಲೂಕು ಇವರು ವಾಹನದ ನೊಂದಾಯಿತ ಮಾಲೀಕರಾಗಿರುವುದಾಗಿ ದೃಢಿಕರಿಸಿರುತ್ತಾರೆ. ಪ್ರಕರಣದ ತನಿಖಾಧಿಕಾರಿಯಾದ ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇವರು ದಿ:10–5–2011ರಂದು ಪ್ರಾಧಿಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಜಪ್ತುಪಡಿಸಿಕೊಳ್ಳಲಾದ ವಾಹನ ಮತ್ತು ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಮದ್ಯವನ್ನು ನಾಶಪಡಿಸಲು ಹಾಗೂ ವಾಹನ ಮತ್ತು ಖಾಲಿ ಬಾಟಲಿಗಳನ್ನು ವಿಲೇವಾರಿಗಾಗಿ ಅದೇಶ ನೀಡಬೇಕಾಗಿ ಕೋರಿರುತ್ತಾರೆ.

ತನಿಖಾದಿಕಾರಿಗಳು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಪುತ್ತೂರು ದ.ಕ ಜಿಲ್ಲೆ ಇವರಿಂದ ಪಡೆದು ಪ್ರಾದಿಕಾರಕ್ಕೆ ಸಲ್ಲಿಸಿದ ಬಿ- ಎಕ್ಸ್‌ಟ್ರಾಕ್ಟ್ ವರದಿಯಲ್ಲಿ ದೃಡೀಕರಿಸಲ್ಪಟ್ಟ ವಾಹನದ ಮಾಲೀಕರಾದ ಶ್ರೀ. ಎನ್. ಅಬ್ದುಲ್ಲಾ, ಬಿನ್: ಅಲಿ ಕುಜ್ಞಿ, ಪುರುಷರ ಕಟ್ಟೆ ಹೌಸ್, ನರಿಮೊಗರು ಅಂಚೆ, ಪುತ್ತೂರು ತಾಲೂಕು ಮತ್ತು ಪ್ರಕರಣದ ಮುಖ್ಯ ಅರೋಪಿತನಾದ ಕೆ.ಯಸ್. ಅಕ್ಬರ್ ,ಬಿನ್: ಮಹಮ್ಮದ್ ಹನೀಫ್ ,ರಹಮತ್ ಮಂಜಿಲ್, ಕಬಕ, ಪುತ್ತೂರು ತಾಲೂಕು ಮತ್ತು ಪ್ರಕರಣ ಸಂದರ್ಭದಲ್ಲಿ ಓಡಿ ತಲೆಮರೆಸಿಕೊಂಡಿರುವ ಅರೋಪಿಯಾದ ಗಂಗಾಧರ ರೈ, ಬಿನ್:ದಿ:ಬಾಲಕೃಷ್ಣ ರೈ, ಕೈಕಾರ ಮನೆ, ಒಳಮೊಗ್ರು ಗ್ರಾಮ, ಪುತ್ತೂರು ತಾಲೂಕು ಇವರುಗಳಿಗೆ ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43ಬಿ ಪ್ರಕಾರ ದಿನಾಂಕ: 20–5–2011ರಂದು ನೀಡಲಾದ ಕಾರಣ ಕೇಳಿ ನೋಟಿಸು ಸಂಬಂಧಿಸಿದವರಿಗೆ ದಿನಾಂಕ: 27–5–2011ರಂದು ಜ್ಯಾರಿಯಾಗಿದ್ದು, ಸದ್ರಿಯವರಿಂದ ಯಾವುದೇ ಉತ್ತರ ಈ ಪ್ರಾದಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ. ಆದರೆ ವಾಹನದ ಮಾಲೀಕರಾದ ಶ್ರೀ. ಎನ್.ಅಬ್ದುಲ್ಲಾ, ಬಿನ್:ಅಲಿ ಕುಜ್ಞಿ, ಪುರುಷರ ಕಟ್ಟೆ ಹೌಸ್, ನರಿಮೊಗರು ಅಂಚೆ, ಪುತ್ತೂರು ತಾಲೂಕು ಇವರು ದಿ:9–5–2011 ರಂದು ಪ್ರಕರಣದ ತನಿಖಾದಿಕಾರಿಯವರಾದ ಅಬಕಾರಿ ನಿರೀಕ್ಷಕರು ಪುತ್ತೂರು ವಲಯ ಕಛೇರಿ ಇಲ್ಲಿ ಖುದ್ದಾಗಿ ಹಾಜರಾಗಿ ಹೇಳಿಕೆಯೊಂದನ್ನು ನೀಡಿದ್ದು ಸದ್ರಿ ಹೇಳಿಕೆಯಲ್ಲಿ ಅವರ ಹೆಸರಿನಲ್ಲಿ ನೊಂದಾಯಿತವಾಗಿರುವ ವಾಹನ ಕೆಎ–21–929 ಅಟೋ ರಿಕ್ಷಾವನ್ನು ಪ್ರಕರಣದ ಅರೋಪಿತನಾದ ಶ್ರೀ. ಕೆ.ಯಸ್. ಅಕ್ಬರ್, ಬಿನ್: ಮಹಮ್ಮದ್ ಹನೀಫ್ ,ರಹಮತ್ ಮಂಜಿಲ್, ಕಬಕ, ಪುತ್ತೂರು ತಾಲೂಕು ಇವರಿಗೆ 4 ವರ್ಷಗಳ ಹಿಂದೆಯೇ ಮಾರಾಟ ಮಾಡಲಾಗಿದ್ದು ಈ ಬಗ್ಗೆ ವಾಹನ ವರ್ಗಾವಣೆ ಫಾರಂಗಳಲ್ಲಿ ಸಹಿ ಮಾಡಿಕೊಡಲಾಗಿದ್ದರೂ ವಾಹನವನ್ನು ಅವರ ಹೆಸರಿಗೆ ವರ್ಗಾಯಿಸಲಾಗಿರುವುದಿಲ್ಲ ಹಾಗೂ ಪ್ರಕರಣದಲ್ಲಿ ಅವರ ಪಾತ್ರ ಏನೂ ಇಲ್ಲವೆಂದು ತಿಳಿಸಿ ಪ್ರಕರಣದಿಂದ ಅವರನ್ನು ಕೈಬಿಡಬೇಕಾಗಿ ಕೋರಿರುತ್ತಾರೆ. ಹಾಗೂ ಪ್ರಕರಣದ ಮುಖ್ಯ ಅರೋಪಿತನಾದ ಕೆ.ಯಸ್. ಅಕ್ಬರ್, ಬಿನ್: ಮಹಮ್ಮದ್ ಹನೀಫ್ ,ರಹಮತ್ ಮಂಜಿಲ್, ಕಬಕ, ಪುತ್ತೂರು ತಾಲೂಕು ಇವರು ದಿ: 9–5–2011ರಂದು ತನಿಖಾಧಿಕಾರಿಯವರ ಕಛೇರಿಯಲ್ಲಿ ಖುದ್ದಾಗಿ ಹಾಜರಾಗಿ ಹೇಳಿಕೆ ಯೊಂದನ್ನು ನೀಡಿದ್ದು, ಸದ್ರಿ ಹೇಳಿಕೆಯಲ್ಲಿ ವಾಹನವನ್ನು 4 ವರ್ಷಗಳ ಹಿಂದೆಯೇ ಮಾರಾಟದ ಸಲುವಾಗಿ ವಾಹನ ವರ್ಗಾವಣೆ ಫಾರಂಗಳಲ್ಲಿ ಶ್ರೀ. ಎನ್. ಅಬ್ದುಲ್ಲಾ, ಬಿನ್: ಅಲಿ ಕುಜ್ಞಿ, ಪುರುಷರ ಕಟ್ಟೆ ಹೌಸ್, ನರಿಮೊಗರು ಅಂಚೆ, ಪುತ್ತೂರು ತಾಲೂಕು ಇವರು ಸಹಿ ಮಾಡಿರುವುದು ಸತ್ಯವಾಗಿರುತ್ತದೆ. ಆದರೂ ವಾಹನದ ವರ್ಗಾವಣೆ ಆಗಿರುವುದಿಲ್ಲ. ಅವರು ತನ್ನ ವಾಹನವನ್ನು ಬಾಡಿಗೆಗೆ ಓಡಿಸುವ ಸಂದರ್ಭದಲ್ಲಿ ಪ್ರಯಾಣಿಕರು ವಾಹನದಲ್ಲಿ ಮದ್ಯವನ್ನು ಇಟ್ಟಿರುವುದಾಗಿ ತಿಳಿಸಿ, ಅಪರಾಧಕ್ಕೂ ವಾಹನಕ್ಕೂ ಯಾವುದೇ ಸಂಬಂಧವಿಲ್ಲವೆಂದು ತಿಳಿಸಿರುತ್ತಾರೆ. ಆದರೆ ಹಕ್ಕು ಚಲಾಯಿಸಿ ಯಾರೊಬ್ಬರೂ ವಾಹನದ ಬಿಡುಗಡೆ ಬಗ್ಗೆ ಪ್ರಯತ್ನ ಪಟ್ಟಿರುವುದಿಲ್ಲ.

1965ನೇ ಕರ್ನಾಟಕ ಅಬಕಾರಿ ಕಾಯ್ದೆ ಅಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ, ಅಥವಾ ಪತ್ತೆಯಾಗುವ ಸಾಧ್ಯತೆ ಇಲ್ಲದಿದ್ದಲ್ಲಿ ಪ್ರಕರಣವನ್ನು ಪತ್ತೆಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಫ್ತಾಗಿರುವ ಸೊತ್ತುಗಳು ತಮ್ಮದೆಂದು ಅವುಗಳು ಕಾನೂನು ಬದ್ಧವಾಗಿದೆಯೆಂದು ಸಾಕ್ಷಧಾರಗಳೊಂದಿಗೆ ಸಾಬೀತು ಪಡಿಸದೇ ಇದ್ದಲ್ಲಿ, ಸದ್ರಿ ಸೊತ್ತುಗಳು, ಅಬಕಾರಿ ಕಾಯ್ದೆ ಕಲಂ 43ರ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತು ಗಳಾಗಿದ್ದಲ್ಲಿ ಅಂತಹ ಸೊತ್ತುಗಳನ್ನು ಕಲಂ 43ಸಿ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಪ್ರಾಧಿಕಾರದಲ್ಲಿ ಲಭ್ಯವಿರುವ ದಾಖಲಾತಿಗಳ ಪ್ರಕಾರ ದಿನಾಂಕ 27–12–2010 ರಂದು ಅಟೋ ರಿಕ್ಷಾ ಸಂ: KA–21–929ರಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೇ ಆರೋಪಿಗಳು 4 ಪೆಟ್ಟಿಗೆಗಳಲ್ಲಿ 180 ಎಂಎಲ್‌ನ ತಲಾ 48ರಂತೆ 192 ಬಾಟಲಿಗಳಲ್ಲಿ 34.560ಲೀ ಮದ್ಯವನ್ನು ಹೊಂದಿ ಸಾಗಾಟ ಮಾಡುತ್ತಿರುವುದನ್ನು ಪತ್ತೆಹಚ್ಚಿ, ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇವರ ಪ್ರಮಾವ ಸಂ:10/10–11 ದಿ:27–12–2010ರಂತೆ ಪ್ರಕರಣ ದಾಖಲಿಸಿಕೊಂಡಿರುವುದು ಹಾಗೂ ವಾಹನದಲ್ಲಿ ಜಪ್ತು ಮಾಡಲ್ಪಟ್ಟಿರುವ ವಸ್ತು ರಾಸಾಯನಿಕ ತಜ್ಞರ ವರದಿಯಂತೆ ಮದ್ಯವಾಗಿರುತ್ತದೆ. ಹಾಗೂ ವಾಹನದ ಮಾಲೀಕತ್ವದ ಬಗ್ಗೆ ಸಂಬಂಧಿಸಿದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ಪಡೆದ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯಲ್ಲಿ ದೃಡೀಕೃತವಾದ ವಾಹನದ ಮಾಲೀಕರಿಗೆ ಮತ್ತು ಅರೋಪಿತ ವ್ಯಕ್ತಿಗಳಿಗೆ ಪ್ರಾದಿಕಾರದಿಂದ ಅಬಕಾರಿ ಕಾಯಿದೆ 43 ಬಿ ರಡಿಯಲ್ಲಿ ಕಾರಣ ಕೇಳಿ ನೋಟಿಸು ನೀಡಲಾಗಿದ್ದರೂ. ಸದ್ರಿಯವರಿಂದ ಯಾವುದೇ ಸಮಜಾಯಿಷಿ ಉತ್ತರ ಈ ಪ್ರಾದಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ. ಆದಾಗ್ಯೂ ವಾಹನದ ಮಾಲೀಕರು ತನಿಖಾಧಿಕಾರಿ ಗಳ ಕಛೇರಿಯಲ್ಲಿ ಹಾಜರಾಗಿ ವಾಹನವನ್ನು ಪ್ರಕರಣದ ಮುಖ್ಯ ಅರೋಪಿತ ವ್ಯಕ್ತಿಗೆ ಮಾರಾಟ ಮಾಡಿರುವುದಾಗಿ ಹೇಳಿಕೆ ನೀಡಿರುವುದು ಹಾಗೂ ಪ್ರಕರಣದ ಮುಖ್ಯ ಅರೋಪಿತ ವ್ಯಕ್ತಿಯು ಕೂಡಾ ತನಿಖಾದಿಕಾರಿಗಳ ಕಛೇರಿಯಲ್ಲಿ ಹಾಜರಾಗಿ ವಾಹನದ ನೊಂದಣಿ ವರ್ಗಾವಣೆ ಬಗ್ಗೆ ಎಲ್ಲಾ ಪ್ರಕ್ರಿಯೆ ಕೈಗೊಳ್ಳಲಾಗಿದ್ದರೂ ವರ್ಗಾವಣೆ ಆಗಿರುವುದಿಲ್ಲ. ಹಾಗೂ ಪ್ರಕರಣ ಸಂದರ್ಭದಲ್ಲಿ ಪತ್ತೆಯಾದ ಮದ್ಯವು ಪ್ರಯಾಣಿಕರಿಗೆ ಸಂಬಂಧಪಟ್ಟದಾಗಿದ್ದು ವಾಹನದ ಸುಪರ್ಧಿ ಹೊಂದಿರುವವರಿಗೆ ಸಂಬಂಧವಿಲ್ಲ ಎಂದು ಹೇಳಿಕೆ ನೀಡಿರುತ್ತಾರೆ. ಅದರೆ ಈ ಪ್ರಾದಿಕಾರದ ಕಾರಣ ಕೇಳಿನೋಟಿಸಿಗೆ ಯಾವುದೇ ಉತ್ತರ ನೀಡಿರುವುದಿಲ್ಲ. ಪ್ರಕರಣ ದಾಖಲಾಗಿ 7 ತಿಂಗಳುಗಳು ಕಳೆದಿದ್ದು ವಾಹನದ ಬಿಡುಗಡೆ ಬಗ್ಗೆ ಯಾರೊಬ್ಬರೂ ಪ್ರಯತ್ನಿಸದೇ ಇರುವುದರಿಂದ ಇದೊಂದು 'ವಾರೀಸುದಾರರು ಇಲ್ಲದ ಪ್ರಕರಣ ಎಂದು' ಪ್ರಾದಿಕಾರವು ಮನಗಂಡು ವಾಹನದ ಮುಟ್ಟುಗೋಲು ನಡವಳಿ ಬಗ್ಗೆ ತೀರ್ಮಾನ ತೆಗೆದು ಕೊಳ್ಳಬೇಕಾಗಿರುತ್ತದೆ.

ಮೇಲಿನ ವಿದ್ಯಾಮಾನಗಳ ಸಂದರ್ಭದಲ್ಲಿ ವಾಹನದ ಮುಟ್ಟುಗೋಲು ನಡವಳಿ ವಿಚಾರಣೆಯನ್ನು ಪ್ರಾರಂಭಿಸಿ ಸರ್ಕಾರದ ಪರ ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಿ ಸಾಕ್ಷಿ ಹೇಳಿಕೆಯನ್ನು ಪಡೆಯಲಾಗಿರುತ್ತದೆ. ವಾಹನದ ಮಾಲೀಕರಾಗಲೀ, ಮಾಲೀಕರ ಪರ ಪ್ರತಿನಿಧಿಗಳಾಗಲೀ ಪ್ರಾದಿಕಾರದ ಮುಂದೆ ಹಾಜರಾಗದೇ ಇದ್ದುದರಿಂದ, ಪ್ರತಿ ರಕ್ಷಾ ಸಾಕ್ಷಿ ಹೇಳಿಕೆಯನ್ನು ಪಡೆಯಲಾಗಿರುವುದಿಲ್ಲ.

ಈ ಪ್ರಕರಣದಲ್ಲಿ ಸರ್ಕಾರ್ರದ ಅಭಿಯೋಜನ ಪರ ಸಲ್ಲಿಸಿರುವ ಸಾಕ್ಷ್ಯಾಧಾರಗಳಿಂದ ಈ ಕಳಗಿನ ವಿವಾದಾಂಶಗಳನ್ನು ತೀರ್ಮಾನಿಸುವುದು ಅಗತ್ಯವಾಗಿದ್ದು ಪರಿಶೀಲನಾಂಶಗಳು ಈ ಕೆಳಗಿನಂತಿರುತ್ತದೆ.

1. ದಿನಾಂಕ:27-12-2010ರಂದು ಅಟೋ ರಿಕ್ಷಾ ನೊಂದಣಿ ಸಂ: KA-21-929ರಲ್ಲಿ ಸಾಗಾಣಿಕೆಯಾದ ಸೊತ್ತು ಮದ್ಯ ಎಂಬ ಬಗ್ಗೆ ರಸಾಯನಿಕ ವಿಶ್ಲೇಷಣಾ ವರದಿಯಿಂದ ದೃಡೀಕೃತವಾಗಿದೆಯೇ?
2. ದಿನಾಂಕ: 27-12-2010ರಂದು ಅಟೋ ರಿಕ್ಷಾ ನೊಂದಣಿ ಸಂ: KA-21-929 ಇದರಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಅಪರಾಧಕ್ಕೆ ಬಳಸಲಾಗಿದೆಯೇ?
3. ವಶಪಡಿಸಿಕೊಂಡಿರುವ ವಾಹನದ ಮಾಲೀಕರು ತನಗೆ ತಿಳಿಯದೇ ಕರ್ನಾಟಕ ಅಬಕಾರಿ ಕಾಯಿದೆಯಡಿ ಮದ್ಯ ಸಾಗಾಣಿಕೆಗ ವಾಹನವನ್ನು ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ಸಾಬೀತು ಪಡಿಸಿದ್ದಾರೆಯೇ? ಅಥವಾ ಇಲ್ಲವೇ?
4. ಜಪ್ತು ಪಡಿಸಲಾಗಿರುವ ವಾಹನ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದು ಮತ್ತು ಎರಡನೇ ಅಂಶಗಳನ್ನು ಗುಣಾತ್ಮಕವಾಗಿ, ಮೂರನೇ ಅಂಶವನ್ನು ನಕರಾತ್ಮಕವಾಗಿ ಹಾಗೂ ನಾಲ್ಕನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸ-1:-

ಪ್ರಕರಣದ ಪಿರ್ಯಾದುದಾರರು ಹಾಗೂ ತನಿಖಾದಿಕಾರಿಗಳಾದ ಶ್ರೀ. ಶಿವಪ್ರಸಾದ್ ಅಬಕಾರಿ ನಿರೀಕ್ಷಕರು,ಪುತ್ತೂರು ವಲಯ ಇವರು ದಿ:21-7-2011 ರಂದು ಪ್ರಾದಿಕಾರದ ಮುಂದೆ ಹಾಜರಾಗಿ ಸಾಕ್ಷ್ಯ ನೀಡುತ್ತಾ, ದಿನಾಂಕ: 27-12-2010 ರಂದು ಸಂಜೆ 4-30 ಗಂಟೆ ಸಮಯದಲ್ಲಿ ತಮ್ಮ ಸಿಬ್ಬಂಧಿಯವರೊಂದಿಗೆ ಪುತ್ತೂರು ತಾಲೂಕಿನ ಅರ್ಯಾಪು ಗ್ರಾಮದ ಪುತ್ತೂರು ಸುಳ್ಯ ರಸ್ತೆಯ ಕಲ್ಲರ್ಪೆಯಲ್ಲಿ ರಸ್ತೆಗಾವಲು ನಡೆಸುತ್ತಿರುವ ಸಂದರ್ಭದಲ್ಲಿ ವಾಹನ ಅಟೋ ರಿಕ್ಷಾ (ಲ್ಯಾಂಬಬೆರಟ್) ನೊಂದಣಿ ಸಂ: KA-21-929 ನ್ನು ಸರ್ಚ್ ಮಹಜರ್ ತಯಾರಿಸಿ ಶೋಧನೆ ಕೈಗೊಂಡು ಒಟ್ಟು 4 ರಟ್ಟಿನ ಪೆಟ್ಟಿಗೆಗಳಲ್ಲಿ ಶಾಟ್ ವಿಸ್ಕಿ ಮತ್ತು ಜಾನ್ ಬುಲ್ ವಿಸ್ಕಿಯ 180 ಎಂಎಲ್‌ನ ಒಟ್ಟು 192 ಬಾಟಲಿಗಳಲ್ಲಿ ಮದ್ಯವನ್ನು ಪತ್ತೆಹಚ್ಚಿ, ಸದ್ರಿ ಮದ್ಯ ಸಾಗಾಟದ ಬಗ್ಗೆ ಯಾವುದೇ ಪರವಾನಿಗೆ ಇಲ್ಲದೇ ಇರುವುದನ್ನು ಖಚಿತ ಪಡಿಸಿಕೊಂಡು, ಇದು ಅಪರಾಧ ಎಂದು ವಾಹನದ ಚಾಲಕನಿಗೆ ತಿಳಿಯಪಡಿಸಿ, ಸ್ಥಳದಲ್ಲಿಯೇ ಪಂಚರು ಯಾರೂ ಸಿಗದೇ ಇರುವ ಕಾರಣ ಸಿಬ್ಬಂಧಿಯವರನ್ನು ಸಾಕ್ಷಿಯಾಗಿರಿಸಿ ವಶಪಡಿಸಿಕೊಂಡ ಬ್ರಾಂಡ್‌ವಾರು ಮದ್ಯದಿಂದ ಒಟ್ಟು 32 ಬಾಟಲಿಗಳನ್ನು ಮಾದರಿ ತೆಗೆದು ಮಹಜರು ಕ್ರಮ ಜರುಗಿಸಿ ಮಾದರಿ ಮೊಹರನ್ನು ತಯಾರಿಸಿ ಸೊತ್ತು ಮತ್ತು ವಾಹನವನ್ನು ಜಪ್ತುಪಡಿಸಿಕೊಂಡು ಆರೋಪಿತನಾದ ಕೆ.ಯಸ್. ಅಕ್ಬರ್ ,ಬಿನ್: ಮಹಮ್ಮದ್ ಹನೀಫ್, ರಹಮತ್ ಮಂಜಿಲ್, ಕಬಕ, ಪುತ್ತೂರು ತಾಲೂಕು ಇವರ ವಿರುದ್ಧ ಕರ್ನಾಟಕ ಅಬಕಾರಿ ಕಾಯಿದೆ ಕಲಂ 11,14 ಹಾಗೂ 32,38ಎ ಪ್ರಕಾರ ಪ್ರ.ಮಾ.ವರದಿ ಸಂ:10/2010-11 ರಂತೆ ಪ್ರಕರಣ ದಾಖಲಿಸಿ ಕೊಂಡ ಬಗ್ಗೆ ಸಾಕ್ಷ್ಯ ನೀಡಿರುತ್ತಾರೆ. ಸಾಕ್ಷಿದಾರರು ಪ್ರಕರಣದ ತನಿಖೆಯನ್ನು ಕೈಗೊಂಡ ಬಗ್ಗೆ ತನ್ನ ಹೇಳಿಕೆ ಮುಂದುವರಿಸುತ್ತಾ -ಪ್ರಕರಣದ ಸೊತ್ತುಗಳನ್ನು ಮುಂದಿನ ಆದೇಶದವರೆಗೆ ತನ್ನ ಸುಪರ್ಧಿಗೆ ಇಟ್ಟುಕೊಳ್ಳಲು ಮಾನ್ಯ ಅಧಿಕೃತ ಅಧಿಕಾರಿಗಳಿಂದ ಅನುಮತಿಯನ್ನು ಕೋರಿದ ಬಗ್ಗೆ, ವಾಹನದ ಮಾಲೀಕರ ಮಾಹಿತಿಯನ್ನು ಪಡೆಯುವ ಕುರಿತು ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿ, ವಾಹನದ ಮೌಲ್ಯ ಮಾಪನ ವರದಿಯನ್ನು ಸಂಬಂಧಿಸಿದ ಪ್ರಾ.ಸಾ ಅಧಿಕಾರಿಗಳಿಂದ ಪಡೆದ ಬಗ್ಗೆ, ಜಪ್ತುಪಡಿಸಿಕೊಂಡ ಮದ್ಯದ ಮಾದರಿಗಳನ್ನು ರಸಾಯನಿಕ ವಿಶ್ಲೇಷಣೆಗೆ ಒಳಪಡಿಸಿ ವಿಶ್ಲೇಷಣಾ ವರದಿ ಪಡೆದುಕೊಂಡ ಬಗ್ಗೆ, ಸೊತ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡುವ ಬಗ್ಗೆ ಅಧಿಕೃತ ಅಧಿಕಾಗಳಿಗೆ ಶಿಫಾರಸ್ಸು ವರದಿ ಸಲ್ಲಿಸಿರುವ ಬಗ್ಗೆ ತಮ್ಮ ಸಾಕ್ಷಿ ನೀಡಿ ಪ್ರಕರಣದ ಮುಖ್ಯ ದಾಖಲಾತಿಗಳನ್ನು ನಿಶಾನೆ ಪಿ-1 ರಿಂದ 11ರವರೆಗೆ ಗುರುತಿಸಿರುತ್ತಾರೆ.

ಪಾಟೀ ಸವಾಲು:- ವಾಹನದ ಮಾಲೀಕರಾಗಲೀ ಮಾಲೀಕರ ಪರ ಪ್ರತಿನಿಧಿಗಳಾಗಲೀ ಪ್ರಾದಿಕಾರದ ಮುಂದೆ ಹಾಜರಾಗಲು ಉತ್ಸುಕರಾಗದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ಮದ್ಯದ ಮಾದರಿಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಲಾಗಿದ್ದು, ಕರ್ನಾಟಕ ಸರ್ಕಾರದ ಸಹಾಯಕ ರಾಸಾಯನಿಕ ವಿಶ್ಲೇಷಕರು, ಮಂಗಳೂರು ವಲಯ ಇವರು ದಿ:27-4-2010ರಂದು ನೀಡಿರುವ ವಿಶ್ಲೇಷಣಾ ವರದಿಯಲ್ಲಿ ಮದ್ಯದಲ್ಲಿ ಮದ್ಯಸಾರ ಪ್ರಮಾಣ ಎಲ್ಲಾ ಮಾದರಿಗಳಲ್ಲೂ 43% ರಿಂದ 44% ಇರುವುದೆಂದು ದೃಡೀಕರಿಸಲ್ಪಟ್ಟಿರುವುದರಿಂದ ಜಪ್ತುಪಡಿಸಿಕೊಂಡ ವಸ್ತುವು ಅಬಕಾರಿ ಸೊತ್ತು (ಮದ್ಯ) ಆಗಿರುವುದು ಸಾಭೀತಾಗಿರುರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ,

ಪ್ರಕರಣದ ಎಲ್ಲಾ ದಾಖಲಾತಿಗಳನ್ನು ಹಾಗೂ ಪ್ರಾ.ಸ-1ರವರು ಫಿರ್ಯಾದುದಾರರಾಗಿ ಹಾಗೂ ತನಿಖಾದಿಕಾರಿಯಾಗಿ ನೀಡಿರುವ ಸಾಕ್ಷಿಯನ್ನು ಅವಲೋಕಿಸಿ ಅಬಕಾರಿ ಕಾಯಿದೆ ಕಲಂ 43 ಬಿ ರಡಿ ನೋಟಿಸು ನೀಡಲಾಗಿದ್ದರೂ ವಾಹನದ ಮಾಲೀಕರು/ಸುಪರ್ಧಿದಾರರಾಗಲೀ ,ಅವರ ಪ್ರತಿನಿಧಿಗಳಾಗಲೀ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಬೇಡಿಕೆ , ಅಕ್ಷೇಪಣೆಗಳನ್ನು ಮಂಡಿಸದೇ ಇರುವುದನ್ನು ಗಮನಿಸಿ, ಅಪರಾಧ ಸ್ಥಳದಲ್ಲಿ ಮಹಜರು ಜರುಗಿಸಿ ಸೊತ್ತುಗಳನ್ನು ಜಪ್ತುಪಡಿಸಿಕೊಂಡು ಪ್ರಕರಣ ದಾಖಲಿಸಿಕೊಂಡ ಅಂಶಗಳನ್ನು ಪರಿಗಣಿಸಿ ವಾಹನ ಅಟೋ ರಿಕ್ಷಾ ನೊಂದಣಿ ಸಂ: KA-21-929 ನ್ನು ಅಕ್ರಮ ಮದ್ಯ ಸಾಗಾಣಿಕೆಗೆ ಬಳಸಿರುವುದು ಸಾಭೀತಾಗಿರುವುದರಿಂದ ಎರಡನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಇಂತಹ ಅಕ್ರಮ ಮದ್ಯ ಸಾಗಾಟ ತನ್ನ ತಿಳುವಳಿಕೆಗೆ ಬಾರದೇ ನಡೆದಿದೆ ಎಂಬುದನ್ನು ಸಾಕ್ಷ್ಯಾಧಾರಗಳಿಂದಾಗಿ ಸಾಭೀತುಪಡಿಸುವುದು ವಾಹನ ಮಾಲೀಕರ ಜವಾಬ್ದಾರಿಕೆಯಾಗಿರುತ್ತದೆ. ಪ್ರಾದಿಕಾರದಿಂದ ನೀಡಲಾದ ಕಾರಣ ಕೇಳಿ ನೋಟೀಸಿಗೆ ವಾಹನದ

ವ್ಯಕ್ತಿಗಳಾಗಲೀ ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಆದರೆ ಪ್ರಕರಣದ ತನಿಖಾಧಿಕಾರಿಗಳ ಕಛೇರಿಯ ಮುಂದೆ ಖುದ್ದಾಗಿ ಹಾಜರಾಗಿ ವಾಹನದ ಮಾಲೀಕರು ವಾಹನವನ್ನು ಪ್ರಕರಣದ ಮುಖ್ಯ ಆರೋಪಿತ ವ್ಯಕಿಗೆ ಮಾರಾಟ ಮಾಡಿರುವುದಾಗಿ ತಿಳಿಸಿ ತಾನು ನಿರಾಪರಾಧಿ ಎಂದು ಹೇಳಿಕೊಂಡಿರುವುದು ಹಾಗೂ ಮಾಲೀಕರು ಸೂಚಿಸಿರುವಂತಹ ಪ್ರಕರಣದ ಮುಖ್ಯ ಆರೋಪಿತ ವ್ಯಕ್ತಿ ಕೂಡಾ ತಾನು ವಾಹನದ ಮಾಲೀಕನೆಂದು ಸ್ಪಷ್ಟವಾಗಿ ಹೇಳಿಕೆಗಳನ್ನು ನೀಡದೇ ಇರುವುದು ಅಪರಾಧದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿರುವ ಆಂಶಗಳೆಂದು ಪ್ರಾಧಿಕಾರವು ಮನಗಂಡಿರುತ್ತದೆ. ಹಾಗೂ ತನ್ನ ನಿರಾಪರಾಧಿತ್ವವನ್ನು ಸಾಬೀತುಪಡಿಸಲು ಸೂಕ್ತ ಪುರಾವೆ ಗಳೊಂದಿಗೆ ಪ್ರಾಧಿಕಾರದ ಮುಂದೆ ಹಾಜರಾಗಲು ವಾಹನದ ಮಾಲೀಕರು/ಸುಪರ್ಧಿ ಹೊಂದಿರುವವರು ವಿಫಲರಾಗಿರುವುದರಿಂದ, ಸದ್ರಿ ವಾಹನವನ್ನು ಅಕ್ರಮ ಮದ್ಯ ಸಾಗಾಣಿಕೆಗೆ ಬಳಸಿರುವುದು ನಿಸ್ಸಂದೇಹವಾಗಿ ಸಾಭೀತಾಗಿರುತ್ತದೆ. ಈ ಮೇಲಿನ ಕಾರಣಗಳಿಂದ ಮೂರನೇಯ ಅಂಶವನ್ನು ನಕಾರಾತ್ಮಕವಾಗಿ ಪರಿಗಣಿಸಿದೆ.

ಈ ಮೇಲಿನ ಎಲ್ಲಾ ಕಾರಣಗಳಿಂದ ಮಹಜರು ಸಾಕ್ಷಿಗಳ ವಿಚಾರಣೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ಹಾಗೂ ವಾಹನದಲ್ಲಿ ಜಪ್ತುಪಡಿಸಿದ ಮದ್ಯದಲ್ಲಿ ಮದ್ಯಸಾರದ ಅಂಶ ಇರುವುದು ವಿಶ್ಲೇಷಣಾ ವರದಿಯಿಂದ ದೃಡಪಟ್ಟಿರುವುದರಿಂದ ಈ ಪ್ರಕರಣದಲ್ಲಿ ಜಪ್ತು ಪಡಿಸಲಾಗಿರುವ ಅಟೋ ರಿಕ್ಷಾ ನೊಂದಣಿ ಸಂ:KA-21-929 ಸಮೇತ ಎಲ್ಲಾ ಸೊತ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಮದ್ಯವನ್ನು ನಾಶಪಡಿಸುವುದು ಸೂಕ್ತವೆಂದು ಪ್ರಾಧಿಕಾರವು ತೀರ್ಮಾನಿಸಿ, ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ಬಿ.ವಿ. ಹೂವಪ್ಪ ಗೌಡ, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,ದ.ಕ.ಜಿಲ್ಲೆ,ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43ಎ ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ.ನಿಯಮ 43 ಬಿ ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿದ ನಂತರ ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇವರ ಕ್ರೈಂ ಸಂ:10/2010-11, ದಿ:27-12-2010ರಲ್ಲಿ ಜಪ್ತು ಪಡಿಸಿರುವ ಅಟೋ ರಿಕ್ಷಾ ನೊಂದಣಿ ಸಂ: KA-21-929 (ಚಾಸೀಸ್ ನಂ: 113679) ನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಅದೇಶಿಸಿರುತ್ತೇನೆ.

ಹಾಗೂ ಜಪ್ತುಪಡಿಸಿ ಕೊಂಡಿರುವ 180 ಎಂಎಲ್‌ನ 192 ಬಾಟಲಿಗಳಲ್ಲಿದ್ದ 34.560 ಲೀಟರು ಮದ್ಯದ ಪೈಕಿ ಮಾದರಿ ತೆಗೆಯಲಾದ 32 ಬಾಟಲಿಗಳನ್ನು ಹೊರತುಪಡಿಸಿ ಉಳಿದ 160 ಬಾಟಲಿಗಳಲ್ಲಿದ್ದ (ಶಾಟ್ ವಿಸ್ಕಿ ಮತ್ತು ಜಾನ್ ಬುಲ್ ವಿಸ್ಕಿ) ಒಟ್ಟು 28.800 ಲೀಟರು ಮದ್ಯವನ್ನು ಕೂಡಾ ಕರ್ನಾಟಕ ಅಬಕಾರಿ ಕಾಯಿದೆ ಕಾಲಂ 43ಸಿ ಯಡಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡ ಮದ್ಯವನ್ನು ಸರಕಾರದ ಅಧಿಸೂಚನೆ ಸಂಖ್ಯೆ: ಎಫ್‌ಡಿ/06/ಪಿಐಎಸ್/2007ರಂತೆ ಮಾರಾಟ ಮಾಡಲು ನಿಷೇದಿಸಿದ್ದು, ಮುಟ್ಟುಗೋಲು ಹಾಕಿ ಕೊಳ್ಳಲಾದ ಸೊತ್ತುಗಳನ್ನು ನಾಶಪಡಿಸುವಂತೆ ಆದೇಶ ಇರುವುದರಿಂದ, ಸದ್ರಿ ಅಧಿಸೂಚನೆಯನ್ನು ಅನುಸರಿಸಿ ಕಲಂ 43(ಎ)3ರ ಅನ್ವಯ ಅಬಕಾರಿ ಉಪ ಅಧೀಕ್ಷಕರು, ಪುತ್ತೂರು ಉಪ ವಿಭಾಗ ಇವರು ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಹಾಗೂ ವ್ಯವಸ್ಥಾಪಕರು, ಕೆ.ಎಸ್.ಬಿ.ಸಿ.ಎಲ್, ಪುತ್ತೂರು ಡಿಪೋ ಇವರನ್ನು ಮತ್ತು ಸ್ಥಳೀಯ ಸಾರ್ವಜನಿಕರು ಹಾಗೂ ಮಾದ್ಯಮ ಪತ್ರಿಕಾ ವರದಿಗಾರರನ್ನು ಸೇರಿಸಿ ಅವರ ಅವರ ಸಮಕ್ಷಮ ಅಬಕಾರಿ ಆಯುಕ್ತರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಇಸಿಸಿ/73/ಸಿಆರ್‌ಎಂ/2004, ದಿನಾಂಕ: 12-09-2005ರ ಮಾರ್ಗಸೂಚಿಗಳನ್ನು ಅನುಸರಿಸಿ ಮಹಜರು ಜರುಗಿಸಿ ಎಲ್ಲಾ ಮದ್ಯವನ್ನು ನಾಶಪಡಿಸಲು ಹಾಗೂ ಉಳಿದ ಖಾಲಿ ಸೀಸೆಗಳಿಗೆ ಪ್ರಚಲಿತ ಹಳೆಯ ಖಾಲಿ ಸೀಸಗಳಿಗೆ ಲಭಿಸುವ ಮೌಲ್ಯಕ್ಕೆ ಮಾರಾಟ ಮಾಡಿ ಬಂದ ಪೂರ್ಣ ಮೊತ್ತವನ್ನು ಸರ್ಕಾರಕ್ಕೆ ಪಾವತಿಸಿ ಸೊತ್ತುಗಳನ್ನು ಸಂಬಂಧಪಟ್ಟ ವ್ಯಕ್ತಿಗಳಿಗೆ ಹಸ್ತಾಂತರ ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 28-07-2011ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜ್ಯಾರಿಯಲ್ಲಿ ಬರುತ್ತದೆ.

ಬಿ.ವಿ. ಹೂವಪ್ಪಗೌಡ,
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಅನುಬಂಧ-I

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ:-

ಪ್ರಾ.ಸಾ-1 : ಶ್ರೀ ಶಿವಪ್ರಸಾದ್, ಅಬಕಾರಿ ನಿರೀಕ್ಷಕರು , ಪುತ್ತೂರು ವಲಯ

ಅನುಬಂಧ-II

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲೆಗಳು:-

ನಿಶಾನೆ ಪಿ-1 : ಶೋಧನಾ ಸಮುಚಿತ ಆಧಾರ, ನಿಶಾನೆ ಪಿ-1ಎ -ಸಾಕ್ಷಿ ಸಹಿ

ನಿಶಾನೆ ಪಿ–2	: ಮಹಜರು ಪ್ರತಿ, ನಿಶಾನೆ ಪಿ–2ಎ –ಸಾಕ್ಷಿ ಸಹಿ
ನಿಶಾನೆ ಪಿ–3	: ಸರ್ಚ್ ಲೀಸ್ಟ್
ನಿಶಾನೆ ಪಿ–4	: ಪ್ರಥಮ ಮಾಹಿತಿ ವರದಿ , ನಿಶಾನೆ ಪಿ–4 ಎ:– ಸಾಕ್ಷಿ ಸಹಿ
ನಿಶಾನೆ ಪಿ–5	: ರಿಮಾಂಡ್ ಅರ್ಜಿ , ನಿಶಾನೆ ಪಿ–5 ಎ:– ಸಾಕ್ಷಿ ಸಹಿ
ನಿಶಾನೆ ಪಿ–6	: ಕ.ಅ.ಕಾಯಿದೆ 43 ಎ ವರದಿ , ನಿಶಾನೆ ಪಿ–6 ಎ:– ಸಾಕ್ಷಿ ಸಹಿ
ನಿಶಾನೆ ಪಿ–7	: ಮಾದರಿ ಸೀಲು
ನಿಶಾನೆ ಪಿ–8	: ಬಿ ಎಕ್ಸ್ ಟ್ರಾಕ್ಟ್ ವರದಿ
ನಿಶಾನೆ ಪಿ–9	: ಮೌಲ್ಯ ಮಾಪನ ವರದಿ
ನಿಶಾನೆ ಪಿ–10	: ರಾಸಾಯನಿಕ ವಿಶ್ಲೇಷಣಾ ವರದಿ
ನಿಶಾನೆ ಪಿ–11	: ತನಿಖಾ ವರದಿ ನಿಶಾನೆಪಿ–11 ಎ:– ಸಾಕ್ಷಿ ಸಹಿ

ಅನುಬಂಧ–III

ವಾಹನ ಮಾಲೀಕರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು :–

ಅರ್ಜಿದಾರರ ಹೇಳಿಕೆ :–_ – ಯಾವುದು ಇಲ್ಲ–

ಅನುಬಂಧ–IV

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ದಾಖಲೆಗಳು :– – ಯಾವುದು ಇಲ್ಲ–

ಬಿ.ವಿ. ಹೂವಪ್ಪಗೌಡ,
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಪಿ.ಆರ್. 909

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/140/ಡಿಟಿಸಿಆರ್/2010–11, ದಿನಾಂಕ: 28ನೇ ಜುಲೈ 2011

ಉಪಸ್ಥಿತರು : ಬಿ.ಪಿ. ಹೂವಪ್ಪಗೌಡ, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಫಿರ್ಯಾದುದಾರರು : ಸಹಾಯಕ ಪೊಲೀಸ್ ಉಪ ನಿರೀಕ್ಷಕರು, ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ, ಪುತ್ತೂರು

ಆರೋಪಿ : 1) ಅಮರನಾಥ ಆಳ್ವ, ಬಿನ್:ರಾಮಣ್ಣ ಆಳ್ವ, ವಾಸ:ಅಮರ ಜ್ಯೋತಿ ನಿಲಯ, ಕರ್ನೂರು ಅಂಚೆ, ನೆಟ್ಟಣಿಗೆ ಮುಡ್ನೂರು ಗ್ರಾಮ, ಪುತ್ತೂರು ತಾಲೂಕು (ಅರೋಪಿ ಮತ್ತು ವಾಹನದ ಮಾಲೀಕ)

2) ಪ್ರದೀಪ್ ರೈ, ಬಿನ್:ಕಿಟ್ಟಣ್ಣ ಉ‌ತ್ತ ಸಣ್ಣಂಗಳ ಮನೆ, ಮೊಡಾವು ಅಂಚೆ, ಕೆಯ್ಯೂರು ಗ್ರಾಮ, ಪುತ್ತೂರು

ಪ್ರಕರಣದ ಮುಖ್ಯಾಂಶಗಳು :

ದಿನಾಂಕ: 14–12–2010ರಂದು ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆಯ ಸಹಾಯಕ ಪೊಲೀಸ್ ಉಪ ನಿರೀಕ್ಷಕರು [illegible] ಮಂಗಲ ಕರ್ನೂರು ಗಾಳಿಮುಖ ಕಡೆಯಿಂದ ಕಾಸರಗೋಡು ಕಡೆಗೆ ಕಾರಿನಲ್ಲಿ ಅಕ್ರಮವಾಗಿ ಮದ್ಯದ ಬಾಟಲಿಗಳು ಸಾಗಾಟವಾಗುತ್ತಿದೆ [illegible] ಖಚಿತ ಮಾಹಿತಿ ಮೇರೆಗೆ ಸದ್ರಿ ಸ್ಥಳಕ್ಕೆ ಹೋಗಿ ವಾಹನ ತಪಾಸಣೆ ಮಾಡುತ್ತಿದ್ದ ಸಂದರ್ಭದಲ್ಲಿ ಕರ್ನೂರು ಬೆದ್ರಾಡಿ ಕಡೆಯಿಂದ [illegible] ಬಣ್ಣದ ಮಾರುತಿ 800 ಕಾರು ಬರುತ್ತಿರುವುದನ್ನು ಕಂಡು ಅನುಮಾನಗೊಂಡು ತಡೆದು ನಿಲ್ಲಿಸಲಾಗಿ ಕಾರಿನಲ್ಲಿ ಇಬ್ಬರು ವ್ಯಕ್ತಿಗಳು [illegible] ಹಾಗೂ ತಳಭಾಗದಲ್ಲಿ ರಟ್ಟಿನ ಪೆಟ್ಟಿಗೆಗಳು ಇದ್ದು ಅವುಗಳನ್ನು ಪರಿಶೀಲಿಸಲಾಗಿ 15 ರಟ್ಟಿನ ಪೆಟ್ಟಿಗೆಗಳಲ್ಲಿ ತಲಾ 48ರಂತೆ [illegible] ಬಾಟಲಿಗಳಲ್ಲಿ ಮದ್ಯ ಇರುವುದನ್ನು ಪತ್ತೆಹಚ್ಚಿ, ಸದ್ರಿ ಮದ್ಯ ಸಾಗಾಟಕ್ಕೆ ಯಾವುದೇ ಪರವಾನಿಗೆ ಇಲ್ಲದಿರುವುದು ಕಂಡು [illegible] ಸಾಗಾಟ ಎಂದು ಖಚಿತಪಡಿಸಿಕೊಂಡು, ಇದು ಕರ್ನಾಟಕ ಅಬಕಾರಿ ಕಾಯಿದೆ 32, 34 ಮತ್ತು 43 ಎ ರ [illegible]

ಶಿಕ್ಷಾರ್ಹವಾಗಿರುವುದರಿಂದ, ಮದ್ಯ ಮತ್ತು ಕಾರನ್ನು ಜಪ್ತುಪಡಿಸಿಕೊಂಡು ಮದ್ಯದಿಂದ ಮಾದರಿಗಳನ್ನು ಪ್ರತ್ಯೇಕಿಸಿ ಮಹಜರು ಕ್ರಮ ಜರುಗಿಸಿ ಕಾರಿನ ಚಾಲಕನಾದ ಅಮರನಾಥ ಆಳ್ವ, ಬಿನ್: ರಾಮಣ್ಣ ಆಳ್ವ, ವಾಸ:ಅಮರ ಜ್ಯೋತಿ ನಿಲಯ, ಕರ್ನೂರು ಅಂಚೆ, ನೆಟ್ಟಣಿಗೆ ಮುಡ್ನೂರು ಗ್ರಾಮ, ಪುತ್ತೂರು ತಾಲೂಕು ಮತ್ತು ಇನ್ನೊರ್ವ ವ್ಯಕ್ತಿಯಾದ ಪ್ರದೀಪ್ ರೈ, ಬಿನ್: ಕಿಟ್ಟಣ್ಣ ರೈ ಸಣ್ಣಂಗಳ ಮನೆ, ಮೊಡಾವು ಅಂಚೆ, ಕೆಯ್ಯೂರು ಗ್ರಾಮ, ಒಳಮೊಗ್ರು ಗ್ರಾಮ, ಪುತ್ತೂರು ತಾಲೂಕು ಇವರುಗಳ ವಿರುದ್ಧ ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣಾ ಕ್ರೈಂ ಸಂ: 117/2010 ದಿನಾಂಕ:14-12-2010ರಂದು ಮೊಕದ್ದಮೆ ದಾಖಲಿಸಿಕೊಂಡು, ಪ್ರಕರಣದ ಸೊತ್ತು ಕಡತವನ್ನು ವಿಲೇಯ ಮುಂದಿನ ಕಾನೂನು ಕ್ರಮದ ಬಗ್ಗೆ ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ .ದ.ಕ ಜಿಲ್ಲೆ ಮಂಗಳೂರು ರವರಿಂದ ದಿ:31-12-2010ರಂದು ಆದೇಶ ಪಡೆದುಕೊಂಡು ದಿ:11-1-2011ರಂದು ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇವರಿಗೆ ಹಸ್ತಾಂತರಿಸಿರುತ್ತಾರೆ.

ಜಪ್ತುಪಡಿಸಿದ ಸೊತ್ತುಗಳು ಈ ಕೆಳಗಿನಂತಿವೆ:

1) ಕೆಂಪು ಬಣ್ಣದ ಮಾರುತಿ 800 ಕಾರು ನೊಂದಣಿ ಸಂ: KA-04-M-938

2) 15 ರಟ್ಟಿನ ಪೆಟ್ಟಿಗೆಗಳಲ್ಲಿ ತಲಾ 48ರಂತೆ ಜಾನ್ ಬುಲ್ ವಿಸ್ಕಿಯ 180 ಎಂಎಲ್ ನ ಒಟ್ಟು 720 ಬಾಟಲಿಗಳಲ್ಲಿ – 129.600 ಲೀ ಮದ್ಯ .

(ಪ್ರತಿ ಪೆಟ್ಟಿಗೆಗಳಿಂದ ತಲಾ 4 ಬಾಟಲಿಗಳಂತೆ 180 ಮಿಲಿಯ ಮದ್ಯ ತುಂಬಿದ ಒಟ್ಟು 60 ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗೆ ಮಾದರಿಗಾಗಿ ತೆಗೆದಿರಿಸಿದೆ.)

ಪ್ರಕರಣದ ತನಿಖೆಯನ್ನು ಕೈಗೊಂಡ ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇವರು ಸದ್ರಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ಮದ್ಯದಿಂದ ತೆಗೆಯಲಾದ 60 ಮದ್ಯದ ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿ, ಸದ್ರಿ ಮಾದರಿಗಳನ್ನು ವಿಶ್ಲೇಷಿಸಿದ ಕರ್ನಾಟಕ ಸರ್ಕಾರದ ಸಹಾಯಕ ರಾಸಾಯನಿಕ ತಜ್ಞ ಮಂಗಳೂರುರವರ ಪತ್ರ ಸಂ: ಇ-20-15, ದಿ:27-4-2011ರ ವರದಿಯಲ್ಲಿ ಮದ್ಯದಲ್ಲಿ ಮದ್ಯಸಾರ ಪ್ರಮಾಣ 44% ಇರುವುದಾಗಿ ದೃಡೀಕರಣ ಪತ್ರವನ್ನು ನೀಡಿರುತ್ತಾರೆ. ಹಾಗೂ ಜಪ್ತುಪಡಿಸಿಕೊಂಡ ವಾಹನದ ಬಿ ರಿಜಿಸ್ಟಾರ್ ಎಕ್ಸ್‌ಟ್ರಾಕ್ಟ್ ವರದಿಯನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಪುತ್ತೂರು ದ,.ಕ ಜಿಲ್ಲೆ ಇವರಿಂದ ಪಡೆದು ಸಲ್ಲಿಸಿದ್ದು,ಸದ್ರಿ ವರದಿಯ ಪ್ರಕಾರ ಶ್ರೀ.ವೇಣುಗೋಪಾಲ ಕೆ. ಬಿನ್:ಹೊನ್ನಪ್ಪ ಗೌಡ, ಪೆರ್ಲಪಾಡಿ ,ಪುತ್ತೂರು ತಾಲೂಕು ಇವರು ವಾಹನದ ನೊಂದಾಯಿತ ಮಾಲೀಕರಾಗಿರುವುದಾಗಿ ದೃಡಿಕರಿಸಿರುತ್ತಾರೆ. ಪ್ರಕರಣದ ತನಿಖಾಧಿಕಾರಿ ಯಾದ ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇವರು ದಿ:17-5-2011ರಂದು ಪ್ರಾಧಿಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಜಪ್ತುಪಡಿಸಿಕೊಳ್ಳಲಾದ ವಾಹನ ಮತ್ತು ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಮದ್ಯವನ್ನು ನಾಶಪಡಿಸಲು ಹಾಗೂ ವಾಹನ ಮತ್ತು ಖಾಲಿ ಬಾಟಲಿಗಳನ್ನು ವಿಲೇವಾರಿಗಾಗಿ ಅದೇಶ ನೀಡಬೇಕಾಗಿ ಕೋರಿರುತ್ತಾರೆ.

ತನಿಖಾಧಿಕಾರಿಗಳು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಪುತ್ತೂರು ದ.ಕ ಜಿಲ್ಲೆ ಇವರಿಂದ ಪಡೆದು ಪ್ರಾಧಿಕಾರಕ್ಕೆ ಸಲ್ಲಿಸಿದ್ದ ಬಿ ಎಕ್ಸ್‌ಟ್ರಾಕ್ಟ್ ವರದಿಯಲ್ಲಿ ದೃಡೀಕರಿಸಲ್ಪಟ್ಟ ವಾಹನದ ಮಾಲೀಕರಾದ ಶ್ರೀ.ವೇಣುಗೋಪಾಲ ಕೆ.ಬಿನ್:ಹೊನ್ನಪ್ಪ ಗೌಡ, ಪೆರ್ಲಂಪಾಡಿ, ಪುತ್ತೂರು ತಾಲೂಕು ಮತ್ತು ಪ್ರಕರಣದ ಮುಖ್ಯ ಅರೋಪಿತನಾದ ಅಮರನಾಥ ಆಳ್ವ, ಬಿನ್:ರಾಮಣ್ಣ ಆಳ್ವ, ವಾಸ:ಅಮರಜ್ಯೋತಿ ನಿಲಯ, ಕರ್ನೂರು ಅಂಚೆ, ನೆಟ್ಟಣಿಗೆ ಮುಡ್ನೂರು ಗ್ರಾಮ, ಪುತ್ತೂರು ತಾಲೂಕು ಮತ್ತು ಇನ್ನೊರ್ವ ವ್ಯಕ್ತಿ ಯಾದ ಪ್ರದೀಪ್ ರೈ, ಬಿನ್:ಕಿಟ್ಟಣ್ಣ ರೈ ಸಣ್ಣಂಗಳ ಮನೆ, ಮೊಡಾವು ಅಂಚೆ, ಕೆಯ್ಯೂರು ಗ್ರಾಮ, ಒಳಮೊಗ್ರು ಗ್ರಾಮ, ಪುತ್ತೂರು ಇವರುಗಳಿಗೆ ಕರ್ನಾಟಕ ಅಬಕಾರಿ ಕಾಯಿದೆ 1965 ಕಲಂ 43ಬಿ ಪ್ರಕಾರ ದಿನಾಂಕ: 30-5-2011ರಂದು ನೀಡಲಾದ ಕಾರಣ ಕೇಳಿ ನೋಟಿಸನ್ನು ಪ್ರಕರಣದ ತನಿಖಾದಿಕಾರಿಗಳ ಮುಖಾಂತರ ಖುದ್ದಾಗಿ ಜ್ಯಾರಿ ಮಾಡಲಾಗಿದ್ದು, ವಾಹನದ ಮಾಲೀಕರು ದಿ: 17-6-2011ರಂದು ಉತ್ತರಿಸುತ್ತಾ ಸದ್ರಿ ವಾಹನವನ್ನು ತುರ್ತು ಹಣದ ಅಗತ್ಯವಿದ್ದ ಕಾರಣ ಶ್ರೀ ಅಮರನಾಥ ಆಳ್ವ, ಬಿನ್:ರಾಮಣ್ಣ ಆಳ್ವ ಕರ್ನೂರು ಅಂಚೆ, ನೆಟ್ಟಣಿಗೆ ಮುಡ್ನೂರು ಗ್ರಾಮ,ಪುತ್ತೂರು ತಾಲೂಕು ಇವರಿಗೆ ಮಾರಾಟ ಮಾಡಿ ನೊಂದಾವಣೆ ವರ್ಗಾವಣೆ ಬಗ್ಗೆ ಮೋಟಾರು ವಾಹನ ಅಧಿನಿಯಮದ ಅಡಿ ಫಾರಂ 29 ಮತ್ತು 30ರಲ್ಲಿ ಸಹಿ ಮಾಡಿ ನೀಡಿರುತ್ತೇನೆ ಹಾಗೂ ಈ ಬಗ್ಗೆ ಅಮರನಾಥ ಆಳ್ವ ಇವರಿಂದ ವಾಹನ ಸ್ವೀಕೃತಿ ದೃಡೀಕರಣ ಪತ್ರ (Delivery confirmation) ಪಡೆದಿರುತ್ತೇನೆ. ಕಾರಣ ಸದ್ರಿ ವಾಹನಕ್ಕೂ ತನಗೂ ಯಾವುದೇ ಸಂಬಂಧವಿಲ್ಲ ಎಂದು ತಿಳಿಸಿ ನಾನು ಯಾವುದೇ ಅಪರಾಧದಲ್ಲಿ ಭಾಗಿಯಾಗದ ಕಾರಣ ನನ್ನ ವಿರುದ್ದ ಪ್ರಕರಣ ದಾಖಲಿಸಬಾರದಾಗಿ ಕೋರಿರುತ್ತಾರೆ. ಹಾಗೂ ಉಳಿದ ಅರೋಪಿತ ವ್ಯಕ್ತಿಗಳಿಂದ ಯಾವುದೇ ಸಮಜಾಯಿಷಿ ಉತ್ತರ ಈ ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

1965ನೇ ಕರ್ನಾಟಕ ಅಬಕಾರಿ ಕಾಯ್ದೆ ಅಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ, ಅಥವಾ ಪತ್ತೆಯಾಗುವ ಸಾಧ್ಯತೆ ಇಲ್ಲದಿದ್ದಲ್ಲಿ ಪ್ರಕರಣವನ್ನು ಪತ್ತೆಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಪ್ತಾಗಿರುವ ಸೊತ್ತುಗಳು ತಮ್ಮದೆಂದು ಅವುಗಳು ಕಾನೂನು ಬದ್ಧವಾಗಿದೆಯೆಂದು ಸಾಕ್ಷಧಾರಗಳೊಂದಿಗೆ ಸಾಬೀತು ಪಡಿಸದೇ ಇದ್ದಲ್ಲಿ, ಸದ್ರಿ ಸೊತ್ತುಗಳು, ಅಬಕಾರಿ ಕಾಯ್ದೆ ಕಲಂ 43ರ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ ಅಂತಹ ಸೊತ್ತುಗಳನ್ನು ಕಲಂ 43ಸಿ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಪ್ರಾಧಿಕಾರದಲ್ಲಿ ಲಭ್ಯವಿರುವ ದಾಖಲಾತಿಗಳ ಪ್ರಕಾರ ದಿನಾಂಕ 14-12-2010 ರಂದು ಮಾರುತಿ 800 ಕಾರು ಸಂ: KA-04-M-938ರಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೇ ಅರೋಪಿಗಳು 15 ರಟ್ಟಿನ ಪೆಟ್ಟಿಗೆಗಳಲ್ಲಿ 180 ಎಂಎಲ್‌ನ ತಲಾ 48ರಂತೆ 720 ಬಾಟಲಿಗಳಲ್ಲಿ 129.600

ಲೀ ಮದ್ಯವನ್ನು ಹೊಂದಿ ಸಾಗಾಟ .ಮಾಡುತ್ತಿರುವುದನ್ನು ಪತ್ತೆಹಚ್ಚಿ, ಸಹಾಯಕ ಪೊಲೀಸ್ ಉಪ ನಿರೀಕ್ಷಕರು, ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ,ಪುತ್ತೂರು ಇವರ ಪ್ರಮಾವ ಸಂ:117/2010, ದಿ: 14-12-2010ರಂತೆ ಪ್ರಕರಣ ದಾಖಲಿಸಿಕೊಂಡಿರುವುದು ಹಾಗೂ ವಾಹನದಲ್ಲಿ ಜಪ್ತು ಮಾಡಲ್ಪಟ್ಟಿರುವ ವಸ್ತು ರಾಸಾಯನಿಕ ತಜ್ಞರ ವರದಿಯಂತೆ ಮದ್ಯವಾಗಿರುತ್ತದೆ. ಹಾಗೂ ವಾಹನದ ಮಾಲೀಕತ್ವದ ಬಗ್ಗೆ ಸಂಬಂಧಿಸಿದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ಪಡೆದ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯಲ್ಲಿ ದೃಡೀಕೃತವಾದ ವಾಹನದ ಮಾಲೀಕರಿಗೆ ಮತ್ತು ಅರೋಪಿತ ವ್ಯಕ್ತಿಗಳಿಗೆ ಪ್ರಾಧಿಕಾರದಿಂದ ಅಬಕಾರಿ ಕಾಯಿದೆ 43 ಬಿ ರಡಿಯಲ್ಲಿ ಕಾರಣ ಕೇಳಿ ನೋಟಿಸನ್ನು ಖುದ್ದಾಗಿ ಜ್ಯಾರಿ ಮಾಡಲಾಗಿ ವಾಹನದ ಮಾಲೀಕರು ಕಾರಣ ಕೇಳಿ ನೋಟಿಸಿಗೆ ಉತ್ತರಿಸುತ್ತಾ ವಾಹನವನ್ನು ಪ್ರಕರಣದ ಒಂದನೇ ಅರೋಪಿತ ವ್ಯಕ್ತಿಗೆ ಮಾರಾಟ ಮಾಡಿದ್ದು ಸದ್ರಿ ವಾಹನಕ್ಕೂ ತನಗೂ ಯಾವುದೇ ಸಂಬಂಧವಿಲ್ಲ ಎಂದು ತಿಳಿಸಿರುತ್ತಾರೆ. ಉಳಿದಂತೆ ವಾಹನವನ್ನು ಖರೀದಿಸಿಕೊಂಡಂತಹ ಅರೋಪಿ ಹಾಗೂ ಇತರ ಅರೋಪಿಯಿಂದ ಯಾವುದೇ ಸಮಜಾಯಿಷಿ ಉತ್ತರ ಈ ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ. ಪ್ರಕರಣ ದಾಖಲಾಗಿ 7 ತಿಂಗಳುಗಳು ಕಳೆದಿದ್ದು ವಾಹನದ ಬಿಡುಗಡೆ ಬಗ್ಗೆ ಯಾರೊಬ್ಬರೂ ಪ್ರಯತ್ನಿಸದೇ ಇರುವುದರಿಂದ ಇದೊಂದು 'ವಾರೀಸುದಾರರು ಇಲ್ಲದ ಪ್ರಕರಣ' ಎಂದು ಪ್ರಾಧಿಕಾರವು ಮನಗಂಡು ವಾಹನದ ಮುಟ್ಟುಗೋಲು ನಡವಳಿ ಬಗ್ಗೆ ತೀರ್ಮಾನ ತೆಗೆದುಕೊಳ್ಳ ಬೇಕಾಗಿರುತ್ತದೆ.

ಮೇಲಿನ ವಿದ್ಯಾಮಾನಗಳನ್ನು ಪರಿಶೀಲಿಸಿ ವಾಹನದ ಮುಟ್ಟುಗೋಲು ನಡವಳಿ ವಿಚಾರಣೆಯನ್ನು ಪ್ರಾರಂಬಿಸಿ, ಸರ್ಕಾರದ ಪರ ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಿ ಸಾಕ್ಷಿ ಹೇಳಿಕೆಗಳನ್ನು ಪಡೆಯಲಾಗಿರುತ್ತದೆ. ವಾಹನದ ಮಾಲೀಕರಾಗಲೀ, ಮಾಲೀಕರ ಪರ ಪ್ರತಿನಿಧಿಗಳಾಗಲೀ ಪ್ರಾಧಿಕಾರದ ಮುಂದೆ ಹಾಜರಾಗದೇ ಇದ್ದುದರಿಂದ, ಪ್ರತಿ ರಕ್ಷಾ ಸಾಕ್ಷಿ ಹೇಳಿಕೆಯನ್ನು ಪಡೆಯಲಾಗಿರುವುದಿಲ್ಲ.

ಈ ಪ್ರಕರಣದಲ್ಲಿ ಸರ್ಕಾರದ ಅಭಿಯೋಜನ ಪರ ಸಲ್ಲಿಸಿರುವ ಸಾಕ್ಷ್ಯಾಧಾರಗಳಿಂದ ಈ ಕಳಗಿನ ವಿವಾಧಾಂಶಗಳನ್ನು ತೀರ್ಮಾನಿಸುವುದು ಅಗತ್ಯವಾಗಿದ್ದು ಪರಿಶೀಲನಾಂಶಗಳು ಈ ಕೆಳಗಿನಂತಿರುತ್ತದೆ.

1) 1) ದಿನಾಂಕ:14-12-2010ರಂದು ಮಾರುತಿ 800 ಕಾರು ನೊಂದಣಿ ಸಂ: KA-04-M-938 ರಲ್ಲಿ ಸಾಗಾಣಿಕೆಯಾದ ಸೊತ್ತು ಮದ್ಯ ಎಂಬ ಬಗ್ಗೆ ರಸಾಯನಿಕ ವಿಶ್ಲೇಷಣಾ ವರದಿಯಿಂದ ದೃಡೀಕೃತವಾಗಿದೆಯೇ?

2) ದಿನಾಂಕ: 14-12-2010ರಂದು ಮಾರುತಿ 800 ಕಾರು ನೊಂದಣಿ ಸಂ: KA-04-M-938 ಇದರಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಅಪರಾಧಕ್ಕೆ ಬಳಸಲಾಗಿದೆಯೇ?

3) ವಶಪಡಿಸಿಕೊಂಡಿರುವ ವಾಹನದ ಮಾಲೀಕರು ತನಗೆ ತಿಳಿಯದೇ ಕರ್ನಾಟಕ ಅಬಕಾರಿ ಕಾಯಿದೆಯಡಿ ಮದ್ಯ ಸಾಗಾಣಿಕೆಗೆ ವಾಹನವನ್ನು ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ಸಾಬೀತು ಪಡಿಸಿದ್ದಾರೆಯೇ? ಅಥವಾ ಇಲ್ಲವೇ?

4) ಜಪ್ತು ಪಡಿಸಲಾಗಿರುವ ವಾಹನ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದು ಮತ್ತು ಎರಡನೇ ಅಂಶಗಳನ್ನು ಗುಣಾತ್ಮಕವಾಗಿ, ಮೂರನೇ ಅಂಶವನ್ನು ನಕರಾತ್ಮಕವಾಗಿ ಹಾಗೂ ನಾಲ್ಕನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸ-1:-

ಪ್ರಕರಣದ ತನಿಖಾದಿಕಾರಿಗಳಾದ ಶ್ರೀ. ಶಿವಪ್ರಸಾದ್ ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇವರು ದಿ:21-7-2011 ರಂದು ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷ್ಯ ನೀಡುತ್ತಾ, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ.ಜಿಲ್ಲೆ ಮಂಗಳೂರು ಇವರ ಅದೇಶ ಸಂ: ಎಸ್‌ಡಿಕೆ:140:ಡಿಟಿಸಿಆರ್:2010-11 ದಿ:31-12-2010ರ ಪ್ರಕಾರ ಸಹಾಯಕ ಪೊ.ಉ.ನಿ ,ಪು.ಗ್ರಾಮ ಪೊ.ಠಾಣೆ ಇವರ ಕ್ರೈಂ ಸಂ:117/2010 ದಿ:14-12-2010ರಲ್ಲಿ ದಾಖಲಿಸಿರುವ ಮೊಕದ್ದಮೆಯಲ್ಲಿ ಜಪ್ತಾದ ಸೊತ್ತುಗಳಾದ, ಮಾರುತಿ 800 ಕಾರು ಸಂ: KA-04-M-938 ಮತ್ತು ಮಾದರಿಗಳನ್ನು ಹೊರತು ಪಡಿಸಿ 180 ಮಿಲಿಯ 660 ಜಾನ್ ಬುಲ್ ವಿಸ್ಕಿ ಮತ್ತು ಪ್ರಕರಣಕ್ಕೆ ಸಂಬಂಧಿಸಿದ ದಾಖಲೆ ಪತ್ರಗಳಾದ ಪ್ರ.ವ.ವ, ಮಹಜರು ಪ್ರತಿ ,ಸೊತ್ತು ಪಟ್ಟಿ ಮತ್ತು ವಾಹನದ ಮೂಲ ಅರ್.ಸಿ ಪುಸ್ತಕವನ್ನು ದಿ:11-1-2011ರಂದು ಅಬಕಾರಿ ಕಾಯಿದೆ ಕಲಂ 43 ರಡಿ ಮುಂದಿನ ವಿಲೇವಾರಿ ಪ್ರಯುಕ್ತ ಹಸ್ತಾಂತರ ಪಡೆದುಕೊಂಡು,ತನಿಖೆ ಮುಂದುವರಿಸಿ ಜಪ್ತುಪಡಿಸಿಕೊಂಡ ವಾಹನದ ಮೌಲ್ಯ ಮಾಪನ ವರದಿ ಮತ್ತು ಬಿ ಎಕ್ಸ್‌ಟ್ರಾಕ್ಟ್ ವಹಿಯನ್ನು ಪಡೆದುಕೊಂಡು ರಾಸಾಯನಿಕ ಮಾಧರಿಗಳ ವಿಶ್ಲೇಷಣಾ ವರದಿಯನ್ನು ಪೊಲೀಸ್ ಅಧಿಕಾರಿಗಳಿಂದ ಪಡೆದು ದಾಖಲೆ ಪ್ರತಿಗಳೊಂದಿಗೆ ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಅಫ್ ಎಕ್ಸೈಜ್ ಇವರಿಗೆ ಸವಿಸ್ತಾರವಾದ ವರದಿಯನ್ನು ದಿನಾಂಕ : 17-5-2011 ರಂದು ಒಪ್ಪಿಸಿರುವ ಬಗ್ಗೆ, ವಾಹನ ಸಮೇತ ಎಲ್ಲಾ ಸೊತ್ತುಗಳ ಮಾಲೀಕತ್ವವನ್ನು ನಿರೂಪಿಸಿ ಯಾರೊಬ್ಬರೂ ಬೇಡಿಕೆ ಅರ್ಜಿ ಸಲ್ಲಿಸದೇ ಇರುವುದರಿಂದ ಪ್ರಕರಣದಲ್ಲಿ ಜಪ್ತಾದ ವಾಹನ ಸಹಿತ ಎಲ್ಲಾ ಸೊತ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಮದ್ಯವನ್ನು ನಾಶಪಡಿಸಲು ಹಾಗೂ ವಾಹನವನ್ನು ವಿಲೇವಾರಿ ಮಾಡಲು ಆದೇಶ ಕೋರಿ ಪ್ರಸ್ತಾವನೆಯನ್ನು ಒಪ್ಪಿಸಿರುತ್ತೇನೆ ಎಂದು ಸಾಕ್ಷಿ ನುಡಿಯುತ್ತಾ ನಿ.ಪಿ-1 ರಿಂದ ನಿ.ಪಿ-5ಎ ರವರೆಗಿನ ದಾಖಲೆಗಳನ್ನು ಗುರುತಿಸಿರುತ್ತಾರೆ.

ಪಾಟೀ ಸವಾಲು:– ವಾಹನದ ಮಾಲೀಕರಾಗಲೀ ಮಾಲೀಕರ ಪರ ಪ್ರತಿನಿಧಿಗಳಾಗಲೀ ಪ್ರಾಧಿಕಾರದ ಮುಂದೆ ಹಾಜರಾಗಲು ಉತ್ಸುಕರಾಗದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಪ್ರಾ.ಸ–2:–

ಪ್ರಕರಣದ ಫಿರ್ಯಾದುದಾರರಾದ ಶ್ರೀ.ವೆಂಕಟ್ರಮಣ ಗೌಡ, ಪೊಲೀಸ್ ಉಪ ನಿರೀಕ್ಷಕರು, ಜಿಲ್ಲಾ ಗುಪ್ತ ವಾರ್ತಾ ವಿಭಾಗ, ಮಂಗಳೂರು ಇವರು ದಿ: 22-7-2011 ರಂದು ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷ್ಯ ನೀಡುತ್ತಾ, ದಿ:14–12–2010ರಂದು ತಾನು ಠಾಣಾ ಪ್ರಭಾರದಲ್ಲಿರುವ ಸಂದರ್ಭದಲ್ಲಿ ಖಚಿತ ಮಾಹಿತಿಯಂತೆ ಪುತ್ತೂರು ತಾಲೂಕಿನ ನೆಟ್ಟಣಿಗೆ ಮುಡ್ನೂರು ಗ್ರಾಮದ ಬೆದ್ರಾಡಿ ಎಂಬಲ್ಲಿ ಸಿಬ್ಬಂಧಿಗಳ ಸಮೇತ ಗಸ್ತು ನಡೆಸುತ್ತಿದ್ದಾಗ ಕರ್ನೂರು–ಬೆದ್ರಾಡಿ ಕಡೆಯಿಂದ ಗಾಳಿಮುಖ ಕಡೆಗೆ ಮಾರುತಿ 800 ಕಾರೊಂದು ಬರುವುದನ್ನು ನೋಡಿ ಅದನ್ನು ತಡೆದು ನಿಲ್ಲಿಸಿ ತಪಾಸಣೆ ಮಾಡಿ ಸದ್ರಿ ಕಾರಿನಲ್ಲಿ ಯಾವುದೇ ಪರವಾನಿಗೆ ಇಲ್ಲದ 15 ರಟ್ಟಿನ ಪೆಟ್ಟಿಗೆಗಳಲ್ಲಿ 180 ಎಂಎಲ್‌ನ 720 ಬಾಟಲಿಗಳಲ್ಲಿ ಜಾನ್ ಬುಲ್ ವಿಸ್ಕಿ ಎಂಬ ಮದ್ಯವನ್ನು ಪತ್ತೆಹಚ್ಚಿ ಇದು ಅಕ್ರಮ ಸಾಗಾಟ ಎಂದು ಖಚಿತ ಪಡಿಸಿಕೊಂಡು ಮದ್ಯ ಮತ್ತು ವಾಹನವನ್ನು ಸರ್ಕಾರಕ್ಕೆ ಜಪ್ತುಪಡಿಸಿಕೊಂಡು ಮಹಜರು ಕ್ರಮ ಜರುಗಿಸಿ ಮಾದರಿಗಳನ್ನು ಪ್ರತ್ಯೇಕಿಸಿ, ಇದು ಕರ್ನಾಟಕ ಅಬಕಾರಿ ಕಾಯಿದೆ ಕಲಂ 32, 34, 43 ಎ ರ ಪ್ರಕಾರ ಅಪರಾಧ ವಾಗಿರುವುದರಿಂದ, ಅರೋಪಿಗಳಾದ ಅಮರನಾಥ ಆಳ್ವ, ಬಿನ್:ರಾಮಣ್ಣ ಆಳ್ವ, ವಾಸ:ಅಮರ ಜ್ಯೋತಿ ನಿಲಯ, ಕರ್ನೂರು ಅಂಚೆ, ನೆಟ್ಟಣಿಗೆ ಮುಡ್ನೂರು ಗ್ರಾಮ, ಪುತ್ತೂರು ತಾಲೂಕು ಮತ್ತು ಇನ್ನೊರ್ವ ವ್ಯಕ್ತಿಯಾದ ಪ್ರದೀಪ್ ರೈ, ಬಿನ್:ಕಿಟ್ಟಣ್ಣ ರೈ ಸಣ್ಣಂಗಳ ಮನೆ, ಮೊಡಾವು ಅಂಚೆ, ಕೆಯ್ಯೂರು ಗ್ರಾಮ, ಪುತ್ತೂರು ಒಳಮೊಗ್ರು ಗ್ರಾಮ, ಪುತ್ತೂರು ಇವರುಗಳ ವಿರುದ್ದ ಪುತ್ತೂರು ಠಾಣೆ ಕ್ರೈಂ ಸಂ:117/2010ರಂತೆ ಮೊಕದ್ದಮೆ ದಾಖಲಿಸಿಕೊಂಡು , ಮಾನ್ಯ ಎ.ಸಿ.ಜೆ (ಕಿ.ವಿ) ಮತ್ತು ಜೆ.ಎಂಎಫ್ ಸಿ ನ್ಯಾಯಾಲಯ ಪುತ್ತೂರು ರವರಿಗೆ ನಿವೇದಿಸಿಕೊಂಡಿರುವ ಬಗ್ಗೆ ಪ್ರಕರಣದ ಎಲ್ಲಾ ಸೊತ್ತುಗಳನ್ನು ಕರ್ನಾಟಕ ಅಬಕಾರಿ ಕಾಯಿದೆಯಡಿ ಅದಿಕೃತ ಅಧಿಕಾರಿಗಳಿಗೆ ಹಸ್ತಾಂತರಿಸಲು ಅನುಮತಿ ಪಡೆದು ಸೊತ್ತುಗಳನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಿದ ಬಗ್ಗೆ ಸಾಕ್ಷ್ಯ ನುಡಿಯುತ್ತಾ ಪ್ರಕರಣಕ್ಕೆ ಸಂಬಂಧಿಸಿದ ಮುಖ್ಯ ದಾಖಲೆಗಳನ್ನು ನಿಶಾನೆ ಪಿ–6ರಿಂದ ನಿಶಾನೆ–9ಎ ರವರೆಗೆ ಗುರುತಿಸಿರುತ್ತಾರೆ.

ಪಾಟೀ ಸವಾಲು: ಜಪ್ತು ಪಡಿಸಿಕೊಂಡ ವಾಹನದ ಮಾಲೀಕರಾಗಲೀ .ಮಾಲೀಕರ ಪರ ಪ್ರತಿನಿಧಿಗಳಾಗಲೀ ಈ ಪ್ರಾಧಿಕಾರದ ಮುಂದೆ ಹಾಜರಾಗದೇ ಇರುವುದರಿಂದ ಪ್ರಕರಣದಲ್ಲಿ ಅಡ್ಡ ವಿಚಾರಣೆ ಇಲ್ಲವೆಂದು ಪರಿಗಣಿಸ ಲಾಯಿತು.

ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ಮದ್ಯದ ಮಾದರಿಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಲಾಗಿದ್ದು, ಕರ್ನಾಟಕ ಸರ್ಕಾರದ ಸಹಾಯಕ ರಾಸಾಯನಿಕ ವಿಶ್ಲೇಷಕರು ,ಮಂಗಳೂರು ವಲಯ ಇವರು ದಿ:27–4–2011ರಂದು ನೀಡಿರುವ ವಿಶ್ಲೇಷಣಾ ವರದಿಯಲ್ಲಿ ಮದ್ಯದಲ್ಲಿ ಮದ್ಯಸಾರ ಪ್ರಮಾಣ ಎಲ್ಲಾ ಮಾದರಿಗಳಲ್ಲೂ 44% ಇರುವುದೆಂದು ದೃಡೀಕರಿಸಲ್ಪಟ್ಟಿರುವುದರಿಂದ ಜಪ್ತುಪಡಿಸಿಕೊಂಡ ವಸ್ತುವು ಅಬಕಾರಿ ಸೊತ್ತು (ಮದ್ಯ) ಆಗಿರುವುದು ಸಾಬೀತಾಗಿರುರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಪ್ರಕರಣದ ಎಲ್ಲಾ ದಾಖಲಾತಿಗಳನ್ನು ಹಾಗೂ ಪ್ರಾ.ಸ–1 ಮತ್ತು 2ರವರು ನೀಡಿರುವ ಸಾಕ್ಷಿಯನ್ನು ಅವಲೋಕಿಸಿ ,ಅಬಕಾರಿ ಕಾಯಿದೆ ಕಲಂ 43 ಬಿ ರಡಿ ನೋಟಿಸು ನೀಡಲಾಗಿದ್ದರೂ ವಾಹನದ ಮಾಲೀಕರು/ ಸುಪರ್ಧಿದಾರರಾಗಲೀ ,ಅವರ ಪ್ರತಿನಿಧಿಗಳಾಗಲೀ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಬೇಡಿಕೆ,ಅಕ್ಷೇಪಣೆಗಳನ್ನು ಮಂಡಿಸದೇ ಇರುವುದನ್ನು ಗಮನಿಸಿ, ಅಪರಾಧ ಸ್ಥಳದಲ್ಲಿ ಮಹಜರು ಜರುಗಿಸಿ ಸೊತ್ತುಗಳನ್ನು ಜಪ್ತು ಪಡಿಸಿಕೊಂಡು ಪ್ರಕರಣ ದಾಖಲಿಸಿಕೊಂಡ ಅಂಶಗಳನ್ನು ಪರಿಗಣಿಸಿ ವಾಹನ ಮಾರುತಿ 800 ಕಾರು ಸಂ: KA-04-M-938ನ್ನು ಅಕ್ರಮ ಮದ್ಯ ಸಾಗಾಣಿಕೆಗೆ ಬಳಸಿರುವುದು ಸಾಬೀತಾಗಿರುವುದರಿಂದ ಎರಡನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸ ಲಾಗಿದೆ.

ಇಂತಹ ಅಕ್ರಮ ಮದ್ಯ ಸಾಗಾಟ ತನ್ನ ತಿಳುವಳಿಕೆಗೆ ಬಾರದೇ ನಡೆದಿದೆ ಎಂಬುದನ್ನು ಸಾಕ್ಷದಾರಗಳೊಂದಿಗೆ ಸಾಬೀತುಪಡಿಸುವುದು ವಾಹನ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಪ್ರಾಧಿಕಾರದಿಂದ ನೀಡಲಾದ ಕಾರಣ ಕೇಳಿ ನೋಟಿಸಿಗೆ ವಾಹನದ ಮೂಲ ಅರ್.ಸಿ ನೋಂದಾಣಿದಾರರು ಸದ್ರಿ ವಾಹವನವನ್ನು ಪ್ರಕರಣದ ಒಂದನೇ ಅರೋಪಿತನಿಗೆ ಪರಭಾರೆ ಮಾಡುವುದಿರುವುದಾಗಿ ಉತ್ತರಿಸಿದ್ದು, ಪ್ರಕರಣದ ಒಂದನೇ ಅರೋಪಿತನಿಗೂ ಕಾರಣ ಕೇಳಿ ನೋಟಿಸು ಖುದ್ದಾಗಿ ಜ್ಯಾರಿ ಮಾಡಲಾಗಿದ್ದರೂ ಅವರಿಂದಲೂ ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸದೇ ಇರುವುದರಿಂದ ವಾಹನದ ಮಾಲೀಕರು/ಸುಪರ್ಧಿ ಹೊಂದಿರುವವರು ತಮ್ಮ ನಿರಾಪರಾಧಿತ್ವವನ್ನು ಸಾಬೀತುಪಡಿಸಲು ವಿಫಲರಾಗಿದ್ದು , ಸದ್ರಿ ವಾಹನವನ್ನು ಅಕ್ರಮ ಮದ್ಯ ಸಾಗಾಣಿಕೆಗೆ ಬಳಸಿರುವುದು ನಿಸ್ಸಂದೇಹವಾಗಿ ಸಾಭೀತಾಗಿರುತ್ತದೆ. ಈ ಮೇಲಿನ ಕಾರಣಗಳಿಂದ ಮೂರನೇಯ ಅಂಶವನ್ನು ನಕಾರಾತ್ಮಕವಾಗಿ ಪರಿಗಣಿಸಿದೆ.

ಮೇಲಿನ ಎಲ್ಲಾ ಕಾರಣಗಳಿಂದ ಮಹಜರು ಸಾಕ್ಷಿಗಳ ವಿಚಾರಣೆ ಮತ್ತು ಲಭ್ಯವಿರುವ ದಾಖಲಾತಿಗಳಿಂದ ಹಾಗೂ ವಾಹನದಲ್ಲಿ ಜಪ್ತುಪಡಿಸಿದ ಮದ್ಯದಲ್ಲಿ ಮದ್ಯಸಾರದ ಅಂಶ ಇರುವುದು ವಿಶ್ಲೇಷಣಾ ವರದಿಯಿಂದ ದೃಡಪಟ್ಟಿರುವುದರಿಂದ ಈ ಪ್ರಕರಣದಲ್ಲಿ ಜಪ್ತು ಪಡಿಸಲಾಗಿರುವ ಮಾರುತಿ 800 ಕಾರು ಸಂ: KA-04-M-938 ವಾಹನ ಸಮೇತ ಎಲ್ಲಾ ಸೊತ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಮದ್ಯವನ್ನು ನಾಶಪಡಿಸುವುದು ಸೂಕ್ತವೆಂದು ಪ್ರಾಧಿಕಾರವು ತೀರ್ಮಾನಿಸಿ, ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ಜಿ.ವಿ.ಹೂವಪ್ಪ ಗೌಡ, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್.ದ.ಕ.ಜಿಲ್ಲೆ.ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43ಎ ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ,ನಿಯಮ 43 ಬಿ ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು

ರುಗಿಸಿದ ನಂತರ ಸಹಾಯಕ ಪೊಲೀಸ್ ಉಪ ನಿರೀಕ್ಷಕರು, ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ, ಪುತ್ತೂರು ಇವರ ಕ್ರೈಂ ಸಂ: 117/2010,):14-12-2010ರಲ್ಲಿ ಜಪ್ತು ಪಡಿಸಿರುವ ಮಾರುತಿ 800 ಕಾರು ಸಂ: KA-04-M-938 (ಚಾಸೀಸ್ ನಂ:367412 ಮತ್ತು ಇಂಜಿನ್ ನಂ:516108) ನ್ನು ರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಅದೇಶಿಸಿರುತ್ತೇನೆ.

ಹಾಗೂ ಜಪ್ತುಪಡಿಸಿಕೊಂಡಿರುವ 15 ರಟ್ಟಿನ ಪೆಟ್ಟಿಗೆಗಳಲ್ಲಿ 180 ಎಂಎಲ್‌ನ 720 ಬಾಟಲಿಗಳಲ್ಲಿದ್ದ 129.600 ಲೀಟರು ಮದ್ಯದ ಪೈಕಿ ಮಾದರಿ ತೆಗೆಯಲಾದ 60 ಬಾಟಲಿಗಳನ್ನು ಹೊರತುಪಡಿಸಿ ಉಳಿದ 660 ಬಾಟಲಿಗಳಲ್ಲಿದ್ದ (ಜಾನ್ ಬುಲ್ ವಿಸ್ಕಿ) ಒಟ್ಟು 118.800 ಲೀಟರು ಮದ್ಯವನ್ನು ೂಡಾ ಕರ್ನಾಟಕ ಅಬಕಾರಿ ಕಾಯಿದೆ ಕಾಲಂ 43ಸಿ ಯಡಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡ ಮದ್ಯವನ್ನು ಸರಕಾರದ ಅಧಿಸೂಚನೆ ಸಂಖ್ಯೆ: ಎಫ್‌ಡಿ/06/ಪಿಐಎಸ್/2007ರಂತೆ ಮಾರಾಟ ಮಾಡಲು ಷೇದಿಸಿದ್ದು, ಮುಟ್ಟುಗೋಲು ಹಾಕಿ ಕೊಳ್ಳಲಾದ ಸೊತ್ತುಗಳನ್ನು ನಾಶಪಡಿಸುವಂತೆ ಆದೇಶ ಇರುವುದರಿಂದ, ಸದ್ರಿ ಅಧಿಸೂಚನೆಯನ್ನು ಅನುಸರಿಸಿ ಕಲಂ 3(3)ರ ಅನ್ವಯ ಅಬಕಾರಿ ಉಪ ಅಧೀಕ್ಷಕರು, ಪುತ್ತೂರು ಉಪ ವಿಭಾಗ ಇವರು ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಹಾಗೂ ವ್ಯವಸ್ಥಾಪಕರು, .ಎಸ್.ಬಿ.ಸಿ.ಎಲ್, ಪುತ್ತೂರು ಡಿಪೋ ಇವರನ್ನು ಮತ್ತು ಸ್ಥಳೀಯ ಸಾರ್ವಜನಿಕರು ಹಾಗೂ ಮಾಧ್ಯಮ ಪತ್ರಿಕಾ ವರದಿಗಾರರನ್ನು ಸೇರಿಸಿ ಅವರ ವರ ಸಮಕ್ಷಮ ಅಬಕಾರಿ ಆಯುಕ್ತರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಇಸಿಸಿ/73/ಸಿಆರ್‌ಎಂ/2004, ನಾಂಕ: 12-09-2005ರ ಮಾರ್ಗಸೂಚಿಗಳನ್ನು ಅನುಸರಿಸಿ ಮಹಜರು ಜರುಗಿಸಿ ಎಲ್ಲಾ ಮದ್ಯವನ್ನು ನಾಶಪಡಿಸಲು ಹಾಗೂ ಉಳಿದ ಖಾಲಿ ಸೀಸೆಗಳಿಗೆ ಚಲಿತ ಹಳೆಯ ಖಾಲಿ ಸೀಸೆಗಳಿಗೆ ಲಭಿಸುವ ಮೌಲ್ಯಕ್ಕೆ ಮಾರಾಟ ಮಾಡಿ ಬಂದ ಪೂರ್ಣ ಮೊತ್ತವನ್ನು ಸರ್ಕಾರಕ್ಕೆ ಪಾವತಿಸಿ ಸೊತ್ತುಗಳನ್ನು ಂಬಂಧಪಟ್ಟ ವ್ಯಕ್ತಿಗಳಿಗೆ ಹಸ್ತಾಂತರ ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿ:28-07-2011ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜ್ಯಾರಿಯಲ್ಲಿ ಬರುತ್ತದೆ.

ಬಿ.ವಿ. ಹೂವಪ್ಪಗೌಡ,
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಅನುಬಂಧ-I

ಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ:-

ಪ್ರಾ.ಸಾ-1 : ಶ್ರೀ ಶಿವಪ್ರಸಾದ್, ಅಬಕಾರಿ ನಿರೀಕ್ಷಕರು , ಪುತ್ತೂರು ವಲಯ

ಪ್ರಾ.ಸಾ-2 : ಶ್ರೀ.ಪಿ.ವೆಂಕಟ್ರಮಣ ಗೌಡ, ಸಹಾಯಕ. ಪೊ.ಉ.ನಿ, ಪುತ್ತೂರು ಗ್ರಾಮಾಂತರ ಪೊ.ಠಾಣೆ, ಪುತ್ತೂರು

ಅನುಬಂಧ-II

ಿರ್ಯಾದುದಾರರ ಪರ ಮಂಡಿಸಲಾದ ದಾಖಲೆಗಳು:-

ನಿಶಾನೆ ಪಿ-1	: ಪ್ರಾಧಿಕಾರಕ್ಕೆ ತನಿಖಾದಿಕಾರಿಯವರಿಂದ ದಿ:14-1-2011ರಂದು ಒಪ್ಪಿಸಿದ್ದ ವರದಿ
ನಿಶಾನೆಪಿ-1ಎ	– ಸಾಕ್ಷಿ ಸಹಿ
ನಿಶಾನೆ ಪಿ-2	: ರಾಸಾಯನಿಕ ವಿಶ್ಲೇಷಣಾ ವರದಿ
ನಿಶಾನೆ ಪಿ-3	: ಮೌಲ್ಯ ಮಾಪನ
ನಿಶಾನೆ ಪಿ-4	: ಬಿ ಎಕ್ಸ್ ಟ್ರಾಕ್ಟ್ ವರದಿ
ನಿಶಾನೆ ಪಿ-5	: ಪ್ರಾಧಿಕಾರಕ್ಕೆ ತನಿಖಾದಿಕಾರಿಯವರಿಂದ ದಿ:17-5-2011ರಂದು ಒಪ್ಪಿಸಿದ್ದ ತನಿಖಾ ವರದಿ
ನಿಶಾನೆ ಪಿ-6	: ಮಹಜರು ಪ್ರತಿ ನಿಶಾನೆಪಿ-6 ಎ:- ಸಾಕ್ಷಿ ಸಹಿ
ನಿಶಾನೆ ಪಿ-7	: ಪ್ರಥಮ ವರ್ತಮಾನ ವರದಿ ನಿಶಾನೆಪಿ-7ಎ:- ಸಾಕ್ಷಿ ಸಹಿ
ನಿಶಾನೆ ಪಿ-8	: ಪಿ.ಎಫ್. ಪ್ರತಿ ನಿಶಾನೆಪಿ-8ಎ:- ಸಾಕ್ಷಿ ಸಹಿ
ನಿಶಾನೆ ಪಿ-9	: ಫಿರ್ಯಾದುದಾರರು ಅಧಿಕೃತ ಅಧಿಕಾರಿಗಳಿಗೆ ಒಪ್ಪಿಸಿದ ವರದಿ ನಿಶಾನೆ ಪಿ-9ಎ
ನಿಶಾನೆ ಪಿ-9 ಎ	: ಅದರ ಮೇಲಿನ ಸಹಿ

ಅನುಬಂಧ-III

ವಾಹನ ಮಾಲೀಕರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು :-

ಅರ್ಜಿದಾರರ ಹೇಳಿಕೆ :-_ - ಯಾವುದು ಇಲ್ಲ-

ಅನುಬಂಧ-IV

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ದಾಖಲೆಗಳು :- - ಯಾವುದು ಇಲ್ಲ-

ಬಿ.ವಿ. ಹೂವಪ್ಪಗೌಡ,
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಪಿ.ಆರ್. 910

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/125/ಡಿಟಿಸಿಆರ್/2010-11, ದಿನಾಂಕ: 04ನೇ ಆಗಸ್ಟ್ 2011

ಉಪಸ್ಥಿತರು : ಬಿ.ವಿ. ಹೂವಪ್ಪಗೌಡ, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಫಿರ್ಯಾದುದಾರರು : ಪೊಲೀಸ್ ಉಪ ನಿರೀಕ್ಷಕರು, ವಿಶೇಷ ಪೊಲೀಸ್ ಠಾಣೆ, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಮಂಗಳೂರು

ಆರೋಪಿ : 1) ಬ್ರಿಜೇಶ್ ಕುಮಾರ್ ಎಂ,ಬಿನ್:ಭಾಸ್ಕರ ಎಂ, ಶಿವಾಜಿ ನಗರ, ಸೋಮೇಶ್ವರ ಗ್ರಾಮ,ಮಂಗಳೂರು ತಾಲೂಕು .

2) ಶ್ರೀ. ಸಚ್ಚೇಂದ್ರ ಬಿನ್:ಕರಿಯ ಪೂಜಾರಿ, ಮಜಲಡ್ಡ ಹೌಸ್, ಡೋರ್ ನಂ:1-178, ನೆಲ್ಲಿಕಾರು ಗ್ರಾಮ, ವಾಲ್ಪಾಡಿ ಅಂಚೆ, ಬೋರುಗುಡ್ಡೆ, ಮೂಡಬಿದ್ರೆ ,ಮಂಗಳೂರು (ವಾಹನದ ಮಾಲೀಕ)

ಪ್ರಕರಣದ ಮುಖ್ಯಾಂಶಗಳು :

ಪೊಲೀಸ್ ಉಪ ನಿರೀಕ್ಷಕರು, ವಿಶೇಷ ಪೊಲೀಸ್ ಠಾಣೆ,ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಮಂಗಳೂರು ಇವರು ದಿ:27-11-2010ರಂದು ಮಂಗಳೂರು ಅನ್ಸಾರಿ ರಸ್ತೆಯ ಎ.ಅರ್.ಸಿ ಟ್ರಾನ್ಸ್‌ಪೋರ್ಟ್ ಕಛೇರಿಗೆ ಬಂದಿರುವ ಅಕ್ರಮ ಮದ್ಯಸಾರ ವನ್ನು ಡೆಲಿವರಿ ತೆಗೆದುಕೊಳ್ಳಲು ಮಂಗಳೂರು ಸೋಮೇಶ್ವರ ಗ್ರಾಮದ ಪಂಡಿತ್ ಹೌಸ್‌ನ ಬ್ರಿಜೇಶ್ ಎಂಬವರು ಬರುತ್ತಾರೆ ಎಂಬ ಖಚಿತ ಮಾಹಿತಿಯ ಮೇರೆಗೆ ವಿಶೇಷ ಪೊಲೀಸ್ ಠಾಣಾ ನಿರೀಕ್ಷಕರು ಮತ್ತು ಸಿಬ್ಬಂಧಿಯವರೊಂದಿಗೆ ಪಂಚರನ್ನು ಕರೆದುಕೊಂಡು ಅನ್ಸಾರಿ ರಸ್ತೆಯಲ್ಲಿರುವ ಎ.ಆರ್ ಸಿ. ಟ್ರಾನ್ಸ್‌ಪೋರ್ಟ್ ಕಛೇರಿಯಿಂದ ಸುಮಾರು 1 ಪರ್ಲಾಂಗ್ ದೂರದಲ್ಲಿ ಜೀಪನ್ನು ಗೌಪ್ಯವಾಗಿ ನಿಲುಗಡೆ ಮಾಡಿ ಎ.ಆರ್.ಸಿ ಕಛೇರಿ ಕಡೆಗೆ ನಿಗಾ ಇರಿಸಿ ಕಾದು ಕುಳಿತಾಗ ಈ ಹಿಂದೆ ಅಬಕಾರಿ ಪ್ರಕರಣಗಳಲ್ಲಿ ಭಾಗಿಯಾದ ಪಂಡಿತ್ ಹೌಸ್‌ನ ಬ್ರಿಜೇಶ್ ಒಂದು ಬೈಕ್‌ನಲ್ಲಿ ಎ.ಆರ್.ಸಿ .ಟ್ರಾನ್ಸ್‌ಪೋಟ್ ರ್ ಕಛೇರಿಗೆ ಬಂದು 3 ದೊಡ್ಡ ಹಸಿರು ಬಣ್ಣದ ಡ್ರಂ ಗಳನ್ನು ಡೆಲಿವರಿ ತೆಗೆದು ಕೊಳ್ಳುತ್ತಿರುವುದನ್ನು ಗಮನಿಸಿ ಮಾಹಿತಿಯನ್ನು ಅನುಸರಿಸಿ ಅಲ್ಲಿಗೆ ದಾವಿಸಿದಾಗ ಸಮವಸ್ತ್ರದಲ್ಲಿದ್ದ ಪೊಲೀಸರನ್ನು ನೋಡಿ ಅಸಾಮಿಯು ಓಡಲು ಪ್ರಯತ್ನಿಸಿದ. ಆತನನ್ನು ತಡದು ನಿಲ್ಲಿಸಿ ವಿಚಾರಿಸಲಾಗಿ ಡ್ರಂ ಗಳಲ್ಲಿ ಮದ್ಯಸಾರ ಇರುವುದನ್ನು ಒಪ್ಪಿಕೊಂಡು ಸದ್ರಿ ಮದ್ಯಸಾರವನ್ನು ಸಾಗಿಸಲು ಪರವಾನಿಗೆ ಇಲ್ಲವೆಂದು ಆತನು ತಿಳಿಸಿದ ಮೇರೆಗೆ ಪಾರ್ಸೆಲ್ ಬಗ್ಗೆ ಮಾಹಿತಿಗಳನ್ನು ಎ.ಆರ್.ಸಿ ಟ್ರಾನ್ಸ್‌ಪೋರ್ಟ್ ಕಛೇರಿಯಿಂದ ಪಡೆಯಲಾಗಿ ಸದ್ರಿ ದಾಖಲೆಗಳಲ್ಲಿ ಡ್ರಂ ಗಳಲ್ಲಿ ಕೆಮಿಕಲ್ ಇರುವುದೆಂಬ ತಪ್ಪು ದಾಖಲೆಗಳನ್ನು ಸೃಷ್ಟಿಸಿರುವುದು ಕಂಡು ಬಂದಿದ್ದು ಇದು ಒಂದು ಅಕ್ರಮ ಮದ್ಯಸಾರ ಸಾಗಾಟದ ದಂಧೆ ಎಂದು ಖಚಿತಪಡಿಸಿಕೊಂಡು, ಡ್ರಂಗಳನ್ನು ಪರಿಶೀಲಿಸಲಾಗಿ ಪ್ರತಿ ಡ್ರಂ ಗಳಲ್ಲಿ ತಲಾ 210 ಲೀಟರಿನಂತೆ ಒಟ್ಟು 630 ಲೀಟರು ಮದ್ಯಸಾರವಿರುವುದು ಪತ್ತೆಯಾಗಿರುತ್ತದೆ. ಪ್ರತಿ ಡ್ರಂ ನಿಂದ ಮಾದರಿಯಾಗಿ ಒಂದು ಲೀಟರು ಮದ್ಯಸಾರವನ್ನು 3 ಪ್ಲಾಸ್ಟಿಕ್ ಕ್ಯಾನುಗಳಲ್ಲಿ ಪ್ರತ್ಯೇಕವಾಗಿ ಸಂಗ್ರಹಿಸಿ, ಉಳಿದ ಮದ್ಯಸಾರವಿರುವ 3 ಡ್ರಂಗಳ ಮುಚ್ಚಳಕ್ಕೆ ಸೀಲು ಮಾಡಿ ಲೇಬಲ್, ಗುರುತು ಚೀಟಿಗಳನ್ನು ಅಂಟಿಸಿ ಸ್ಥಳದಲ್ಲಿಯೇ ಮಹಜರು ತಯಾರಿಸಿ ಅಕ್ರಮವಾಗಿ ಯಾವುದೇ ದಾಖಲೆಗಳು ಇಲ್ಲದೇ ಮದ್ಯಸಾರವನ್ನು ಸಾಗಾಟ ಮಾಡುವುದು ಅಪರಾಧ ಎಂದು ಅರೋಪಿತನಿಗೆ ತಿಳಿಯಪಡಿಸಿ ,ಇದು ಕರ್ನಾಟಕ ಅಬಕಾರಿ ಕಾಯಿದೆ 11,13(3)ರಂತೆ ಅಪರಾಧ ಹಾಗೂ 32,33(ಬಿ) 34 ಮತ್ತು 43 ಎ ರ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ, ಅರೋಪಿತನು ಈ ಬಗ್ಗೆ ಬಳಸಿಕೊಳ್ಳಲಾದ ವಾಹನ ಬಜಾಜ್ ಪಲ್ಸರ್ ಮೋಟಾರ್ ಬೈಕ್ ಸಂ: KA-19-EA-7846 ಮತ್ತು ಮದ್ಯಸಾರವನ್ನು ಜಪ್ತುಪಡಿಸಿಕೊಂಡು ಅರೋಪಿತ ನಾದ ಬ್ರಿಜೇಶ್ ಕುಮಾರ್.ಎಂ. ಬಿನ್: ಭಾಸ್ಕರ ಎಂ. ಶಿವಾಜಿ ನಗರ. ಸೋಮೇಶ್ವರ ಗ್ರಾಮ, ಮಂಗಳೂರು ತಾಲೂಕು ಇವರ ವಿರುದ್ಧ ವಿಶೇಷ ಪೊಲೀಸ್ ಠಾಣೆ , ಅಲಾನಿ ಕ್ರೈಂ ಸಂ: 50/2010 ದಿ:27-11-2010 ರಂತೆ ಮೊಕದ್ದಮೆ ದಾಖಲಿಸಿಕೊಂಡು, ಪ್ರಕರಣದ ಸೊತ್ತು ಕಡತವನ್ನು ವಿಲೇಯ ಮುಂದಿನ ಕಾನೂನು ಕ್ರಮದ ಬಗ್ಗೆ ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್.ದ.ಕ ಜಿಲ್ಲೆ ಮಂಗಳೂರುರವರಿಂದ ದಿ:14-12-2010 ರಂದು ಅದೇಶ ಪಡೆದುಕೊಂಡು ದಿ:28-2-2011ರಂದು ಅಬಕಾರಿ ನಿರೀಕ್ಷಕರು,

ಜಪ್ತುಪಡಿಸಿದ ಸೊತ್ತುಗಳು ಈ ಕೆಳಗಿನಂತಿವೆ:

1) ಬಜಾಜ್ ಪಲ್ಸರ್ ಬೈಕ್ ನೊಂದಣಿ ಸಂ: KA-19-EA-7846

2) ಸುಮಾರು 210 ಲೀ ಪರಿಮಾಣದ 3 ಹಸಿರು ಬಣ್ಣದ ಪ್ಲಾಸ್ಟಿಕ್ ಡ್ರಂಗಳಲ್ಲಿ ಒಟ್ಟು 630 ಲೀ ಮದ್ಯಸಾರ (ತಲಾ ಒಂದು ಲೀಟರಿನಂತೆ ಒಟ್ಟು 3 ಲೀಟರು ಮದ್ಯಸಾರವನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆದಿರಿಸಿದೆ.)

3) ಅಕ್ರಮ ಟ್ರಾನ್ಸ್ ಪೋರ್ಟ್‌ಗೆ ಸಂಬಂಧಿಸಿ ಎ.ಆರ್ ಸಿ ಕಛೇರಿಯ 3 ದಾಖಲಾತಿಗಳ ಪ್ರತಿಗಳು

ಪ್ರಕರಣಕ್ಕೆ ಸಂಬಂಧಿಸಿದಂತೆ ಮದ್ಯಸಾರದ ಮಾದರಿಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಪೊಲೀಸ್ ಅಧಿಕಾರಿಗಳೇ ಒಳಪಡಿಸಿದ್ದು ಮುಖ್ಯ ರಾಸಾಯನಿಕ ತಜ್ಞ ಮತ್ತು ಕರ್ನಾಟಕ ಸರ್ಕಾರದ ಪದನಿಮಿತ್ತ ಸಹಾಯಕ ರಾಸಾಯನ ಪರೀಕ್ಷಕರು .ಕೇಂದ್ರ ರಾಸಾಯನ ಪ್ರಯೋಗಾಲಯ ಬೆಂಗಳೂರು ಇವರ ವರದಿ ಸಂ:ಸಿಎಲ್-75/2011 ದಿ:5-1-2011ರ ರಲ್ಲಿ ಮದ್ಯಸಾರದಲ್ಲಿ ಮದ್ಯಸಾರ ಪ್ರಮಾಣ ಅನುಕ್ರಮವಾಗಿ 67.0 ಡಿಗ್ರಿ .66.4 ಡಿಗ್ರಿ ಮತ್ತು 67.5 ಡಿಗ್ರಿ ಒ.ಪಿ ಇರುವುದಾಗಿ ಹಾಗೂ ಮಾದರಿಗಳಲ್ಲಿ ಇಥೈಲ್ ಅಲ್ಕೋಹಾಲ್ ಕಂಡುಬಂದಿದ್ದು ಅವು ಮಾನವನ ಸೇವನೆಗೆ ಬಳಸಬಹುದಾದ ಮದ್ಯವನ್ನು ತಯಾರಿಸಲು ಯೋಗ್ಯವಾಗಿರುತ್ತದೆ ಎಂದು ದೃಡೀಕರಣ ಪತ್ರವನ್ನು ನೀಡಿರುತ್ತಾರೆ. ಹಾಗೂ ಜಪ್ತು ಪಡಿಸಿಕೊಂಡ ವಾಹನದ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ದ,.ಕ ಜಿಲ್ಲೆ ಮಂಗಳೂರು ಇವರಿಂದ ಪಡೆದು ಸಲ್ಲಿಸಿದ್ದು, ಸದ್ರಿ ವರದಿಯ ಪ್ರಕಾರ ಶ್ರೀ.ಸಚ್ಚೇಂದ್ರ .ಬಿನ್:ಕರಿಯ ಪೂಜಾರಿ.ಮಜಲಡ್ಕ ಹೌಸ್. ಡೋರ್ ನಂ:1-178, ನೆಲ್ಲಿಕಾರು ಗ್ರಾಮ, ವಾಲ್ಪಾಡಿ ಅಂಚೆ.ಬೋರು ಗುಡ್ಡೆ, ಮಂಗಳೂರು ತಾಲೂಕು ಇವರು ವಾಹನದ ನೊಂದಾಯಿತ ಮಾಲೀಕರಾಗಿರುವುದಾಗಿ ದೃಡಿಕರಿಸಿರುತ್ತಾರೆ. ಪ್ರಕರಣದ ತನಿಖಾಧಿಕಾರಿಯಾದ ಅಬಕಾರಿ ನಿರೀಕ್ಷಕರು, ಮಂಗಳೂರು ದಕ್ಷಿಣ ವಲಯ-1 ಇವರು ದಿ:7-3-2011ರಂದು ಪ್ರಾಧಿಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಜಪ್ತುಪಡಿಸಿಕೊಳ್ಳಲಾದ ವಾಹನ ಮತ್ತು ಮದ್ಯಸಾರವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಮದ್ಯಸಾರ ವನ್ನು ನಾಶಪಡಿಸಲು ಹಾಗೂ ವಾಹನ ಮತ್ತು ಖಾಲಿ ಡ್ರಂಗಳ ವಿಲೇವಾರಿಗಾಗಿ ಅದೇಶ ನೀಡಬೇಕಾಗಿ ಕೋರಿರುತ್ತಾರೆ. ಅದರಂತೆ ಪ್ರಕರಣದಲ್ಲಿ ಜಪ್ತುಪಡಿಸಿಕೊಳ್ಳಲಾದ 3 ಡ್ರಂ ಗಳಲಿದ್ದ ಒಟ್ಟು 630 ಲೀ ಮದ್ಯಸಾರ (ಮಾದರಿ ಹೊರತುಪಡಿಸಿ) ವನ್ನು ಪ್ರಾಧಿಕಾರದ ದಿ:19-3-2011ರ ಅದೇಶದಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು, ಸರ್ಕಾರದ ಪ್ರಸ್ತುತ ನೀತಿಯನ್ವಯ ಮುಟ್ಟುಗೋಲು ಹಾಕಿಕೊಳ್ಳಲಾದ ಮದ್ಯಸಾರವನ್ನು ನಾಶ ಪಡಿಸಲು ಆದೇಶಿಸಲಾಗಿರುತ್ತದೆ. ಸದ್ರಿ ಅದೇಶನ್ವಯ ದಿ:12-4-2011ರಂದು ಮಹಜರು ಜರುಗಿಸಿ ಮದ್ಯಸಾರವನ್ನು ನಾಶಪಡಿಸಲಾಗಿರುತ್ತದೆ.

ತನಿಖಾಧಿಕಾರಿಗಳು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು .ದ.ಕ ಜಿಲ್ಲೆ ಮಂಗಳೂರು ಇವರಿಂದ ಪಡೆದು ಪ್ರಾಧಿಕಾರಕ್ಕೆ ಸಲ್ಲಿಸಿದ್ದ ಬಿ ಎಕ್ಸ್‌ಟ್ರಾಕ್ಟ್ ವರದಿಯಲ್ಲಿ ದೃಡೀಕರಿಸಲ್ಪಟ್ಟ ವಾಹನದ ಮಾಲೀಕರಾದ ಶ್ರೀ.ಸಚ್ಚೇಂದ್ರ ಬಿನ್:ಕರಿಯ ಪೂಜಾರಿ, ಮಜಲಡ್ಡ ಹೌಸ್. ಡೋರ್ ನಂ:1-178, ನೆಲ್ಲಿಕಾರು ಗ್ರಾಮ,ವಾಲ್ಪಾಡಿ ಅಂಚೆ, ಬೋರುಗುಡ್ಡೆ, ಮಂಗಳೂರು ತಾಲೂಕು, ವಾಹನದ ಹೆಚ್.ಪಿ.ಎ ದಾರರಾದ ಬಜಾಜ್ ಅಟೋ ಫೈನ್ಯಾನ್ಸ್ ಲಿಮಿಟೆಡ್ , ಪುಣೆ ಮತ್ತು ಪ್ರಕರಣದ ಮುಖ್ಯ ಅರೋಪಿತನಾದ ಬ್ರಿಜೇಶ್ ಕುಮಾರ್ ಎಂ, ಬಿನ್: ಭಾಸ್ಕರ ಎಂ, ಶಿವಾಜಿ ನಗರ, ಸೋಮೇಶ್ವರ ಗ್ರಾಮ.ಮಂಗಳೂರು ತಾಲೂಕು ಇವರುಗಳಿಗೆ ಕರ್ನಾಟಕ ಅಬಕಾರಿ ಕಾಯಿದೆ 1965 ಕಲಂ 43ಬಿ ಪ್ರಕಾರ ದಿ:15-4-2011 ರಂದು ನೊಂದಾಯಿತ ಅಂಚೆಯ ಮೂಲಕ ನೀಡಲಾದ ಕಾರಣ ಕೇಳಿ ನೋಟಿಸು ವಾಹನದ ಮಾಲೀಕರಿಗೆ ದಿ:21-4-2011ರಂದು ಜ್ಯಾರಿಯಾಗಿದ್ದು ಅರೋಪಿತ ವ್ಯಕ್ತಿಗೆ ಜ್ಯಾರಿ ಯಾಗದೇ ಅಂಚೆ ಷರಾದೊಂದಿಗೆ ವಾಪಸ್ಸು ಬಂದಿರುತ್ತದೆ.

1965ನೇ ಕರ್ನಾಟಕ ಅಬಕಾರಿ ಕಾಯ್ದೆ ಅಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ, ಆಥವಾ ಪತ್ತೆಯಾಗುವ ಸಾಧ್ಯತೆ ಇಲ್ಲದಿದ್ದಲ್ಲಿ ಪ್ರಕರಣವನ್ನು ಪತ್ತೆಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಫ್ತಾಗಿರುವ ಸೊತ್ತುಗಳು ತಮ್ಮದೆಂದು ಅವುಗಳು ಕಾನೂನು ಬದ್ಧವಾಗಿದೆಯೆಂದು ಸಾಕ್ಷಧಾರಗಳೊಂದಿಗೆ ಸಾಭೀತು ಪಡಿಸದೇ ಇದ್ದಲ್ಲಿ, ಸದ್ರಿ ಸೊತ್ತುಗಳು. ಅಬಕಾರಿ ಕಾಯ್ದೆ ಕಲಂ 43ರ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ ಅಂತಹ ಸೊತ್ತುಗಳನ್ನು ಕಲಂ 43ಸಿ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಪ್ರಾಧಿಕಾರದಲ್ಲಿ ಲಭ್ಯವಿರುವ ದಾಖಲಾತಿಗಳ ಪ್ರಕಾರ ದಿನಾಂಕ 27-11-2010 ರಂದು ಅಕ್ರಮವಾಗಿ 630 ಲೀ ಮದ್ಯಸಾರವನ್ನು ಟ್ರಾನ್ಸ್ ಪೋರ್ಟ್ ್ ಕಂಪೆನಿಯ ಮೂಲಕ ಪಾರ್ಸೆಲ್ ಪಡೆದುಕೊಂಡು ಸಾಗಾಟ ಮಾಡುವ ಸಂದರ್ಭದಲ್ಲಿ ವಾಹನ ಬಜಾಜ್ ಪಲ್ಸರ್ ಮೋಟಾರ್ ಬೈಕ್ ಸಂ: KA-19-EA-7846 ಇದನ್ನು ಬಳಸಿಕೊಂಡಿರುವುದನ್ನು ಪತ್ತೆಹಚ್ಚಿ, ಪೊಲೀಸ್ ಉಪ ನಿರೀಕ್ಷಕರು, ವಿಶೇಷ ಪೊಲೀಸ್ ಠಾಣೆ, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ,ಬಂದರು,ಮಂಗಳೂರು ಇವರ ಪ್ರಮಾವ ಸಂ: 50/2010.ದಿ:27-11-10 ರಂತೆ ಪ್ರಕರಣ ದಾಖಲಿಸಿಕೊಂಡಿರುವುದು ಮತ್ತು ಪ್ರಕರಣದಲ್ಲಿ ಜಪ್ತು ಮಾಡಲ್ಪಟ್ಟಿರುವ ವಸ್ತು ರಾಸಾಯನಿಕ ತಜ್ಞರ ವರದಿಯಂತೆ ಮದ್ಯಸಾರವಾಗಿರುತ್ತದೆ. ಹಾಗೂ ವಾಹನದ ಮಾಲೀಕತ್ವದ ಬಗ್ಗೆ ಸಂಬಂಧಿಸಿದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ಪಡೆದ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯಲ್ಲಿ ದೃಡೀಕೃತವಾದ ವಾಹನದ ಮಾಲೀಕರಿಗೆ, ವಾಹನದ ಹೆಚ್.ಪಿ.ದಾರರಿಗೆ ಮತ್ತು ಅರೋಪಿತ ವ್ಯಕ್ತಿಗಳಿಗೆ ಪ್ರಾಧಿಕಾರದಿಂದ ಅಬಕಾರಿ ಕಾಯಿದೆ 43 ಬಿ ರಡಿಯಲ್ಲಿ ಕಾರಣ ಕೇಳಿ ನೋಟಿಸನ್ನು ನೊಂದಾಯಿತ ಅಂಚೆಯ ಮೂಲಕ ಜ್ಯಾರಿ ಮಾಡಲಾಗಿದ್ದರೂ ಸದ್ರಿಯವರಿಂದ ಯಾವುದೇ ಸಮಜಾಯಿಷಿ ಉತ್ತರ ಈ ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ. ಪ್ರಕರಣ ದಾಖಲಾಗಿ 8 ತಿಂಗಳುಗಳು ಕಳೆದಿದ್ದು ವಾಹನದ ಬಿಡುಗಡೆ ಬಗ್ಗೆ ಯಾರೊಬ್ಬರೂ ಪ್ರಯತ್ನಿಸದೇ ಇರುವುದರಿಂದ ಇದೊಂದು 'ವಾರೀಸುದಾರರು ಇಲ್ಲದ ಪ್ರಕರಣ' ಎಂದು ಪ್ರಾಧಿಕಾರವು ಮನಗಂಡು ವಾಹನದ ಮುಟ್ಟುಗೋಲು ನಡವಳಿ ಬಗ್ಗೆ ತೀರ್ಮಾನ ತೆಗೆದುಕೊಳ್ಳ ಬೇಕಾಗಿರುತ್ತದೆ.

ಮೇಲಿನ ವಿದ್ಯಮಾನಗಳನ್ನು ಪರಿಶೀಲಿಸಿ ವಾಹನದ ಮುಟ್ಟುಗೋಲು ನಡವಳಿ ವಿಚಾರಣೆಯನ್ನು ಪ್ರಾರಂಬಿಸಿ, ಸರ್ಕಾರದ ಪರ ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಿ ಸಾಕ್ಷ್ಯ ಹೇಳಿಕೆಗಳನ್ನು ಪಡೆಯಲಾಗಿರುತ್ತದೆ. ವಾಹನದ ಮಾಲೀಕರಾಗಲೀ, ಮಾಲೀಕರ ಪರ ಪ್ರತಿನಿಧಿಗಳಾಗಲೀ ಪ್ರಾದಿಕಾರದ ಮುಂದೆ ಹಾಜರಾಗದೇ ಇದ್ದುದರಿಂದ, ಪ್ರತಿ ರಕ್ಷಾ ಸಾಕ್ಷಿ ಹೇಳಿಕೆಯನ್ನು ಪಡೆಯಲಾಗಿರುವುದಿಲ್ಲ.

ಈ ಪ್ರಕರಣದಲ್ಲಿ ಸರ್ಕಾರದ ಅಭಿಯೋಜನ ಪರ ಸಲ್ಲಿಸಿರುವ ಸಾಕ್ಷ್ಯಾಧಾರಗಳಿಂದ ಈ ಕಳಗಿನ ವಿವಾದಾಂಶಗಳನ್ನು ತೀರ್ಮಾನಿಸುವುದು ಅಗತ್ಯವಾಗಿದ್ದು ಪರಿಶೀಲನಾಂಶಗಳು ಈ ಕೆಳಗಿನಂತಿರುತ್ತದೆ.

1) ದಿನಾಂಕ:27-11-2010ರಂದು ಬಜಾಜ್ ಪಲ್ಸರ್ ಮೋಟಾರ್ ಬೈಕ್ ಸಂ: KA-19-EA-7846 ಇದರ ಜೊತೆಯಲ್ಲಿ ಜಪ್ತುಪಡಿಸಿಕೊಳ್ಳಲಾದ ಸೊತ್ತು ಮದ್ಯಸಾರ ಎಂಬ ಬಗ್ಗೆ ರಸಾಯನಿಕ ವಿಶ್ಲೇಷಣಾ ವರದಿಯಿಂದ ದೃಡೀಕೃತವಾಗಿದೆಯೇ?

2) ದಿನಾಂಕ: 27-11-2010ರಂದು ಬಜಾಜ್ ಪಲ್ಸರ್ ಮೋಟಾರ್ ಬೈಕ್ ಸಂ: KA-19-EA-7846 ಇದನ್ನು ಅಕ್ರಮವಾಗಿ ಮದ್ಯಸಾರ ಸಾಗಾಣಿಕೆಗೆ ಬಳಸಲಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಅಪರಾಧಕ್ಕೆ ಬಳಸಲಾಗಿದೆಯೇ?

3) ವಶಪಡಿಸಿಕೊಂಡಿರುವ ವಾಹನದ ಮಾಲೀಕರು ತನಗೆ ತಿಳಿಯದೇ ಕರ್ನಾಟಕ ಅಬಕಾರಿ ಕಾಯಿದೆಯಡಿ ಮದ್ಯಸಾರ ಸಾಗಾಣಿಕೆಗೆ ವಾಹನವನ್ನು ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ಸಾಬೀತು ಪಡಿಸಿದ್ದಾರೆಯೇ? ಅಥವಾ ಇಲ್ಲವೇ?

4) ಜಪ್ತು ಪಡಿಸಲಾಗಿರುವ ವಾಹನ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದು ಮತ್ತು ಎರಡನೇ ಅಂಶಗಳನ್ನು ಗುಣಾತ್ಮಕವಾಗಿ, ಮೂರನೇ ಅಂಶವನ್ನು ನಕರಾತ್ಮಕವಾಗಿ ಹಾಗೂ ನಾಲ್ಕನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸ-1:-

ಪ್ರಕರಣದ ತನಿಖಾದಿಕಾರಿಗಳಾದ ಶ್ರೀ. ಬಿ.ಮಾಧವ ರಾವ್ ಅಬಕಾರಿ ನಿರೀಕ್ಷಕರು, ಮಂಗಳೂರು ದಕ್ಷಿಣ ವಲಯ-1 ಇವರು ದಿ:28-7-2011 ರಂದು ಪ್ರಾದಿಕಾರದ ಮುಂದೆ ಹಾಜರಾಗಿ ಸಾಕ್ಷ್ಯ ನೀಡುತ್ತಾ, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ.ಜಿಲ್ಲೆ ಮಂಗಳೂರು ಇವರ ಆದೇಶ ಸಂ: ಎಸ್‌ಡಿಕೆ: 125: ಡಿಟಿಸಿಆರ್:2010-11 ದಿ:14-12-2010ರ ಪ್ರಕಾರ ಪೊ.ಉ.ನಿ, ಅಲಾನಿ, ವಿಶೇಷ ಪೊ.ಠಾಣೆ, ಮಂಗಳೂರು ಇವರ ಕ್ರೈಂ ಸಂ:50/2010 ದಿ:27-11-2010ರಲ್ಲಿ ದಾಖಲಿಸಿರುವ ಮೊಕದ್ದಮೆಯಲ್ಲಿ ಜಪ್ತಾದ ಸೊತ್ತುಗಳಾದ, ಬಜಾಜ್ ಪಲ್ಸರ್ ಮೋಟಾರ್ ಬೈಕ್ ಸಂ: KA-19-EA-7846 ಮತ್ತು 630 ಲೀ ಮದ್ಯಸಾರವನ್ನು ಮತ್ತು ಪ್ರಕರಣಕ್ಕೆ ಸಂಬಂಧಿಸಿದ ದಾಖಲೆ ಪತ್ರಗಳನ್ನು ಅಬಕಾರಿ ಕಾಯಿದೆ ಕಲಂ 43 ರ ಮುಂದಿನ ವಿಲೇವಾರಿ ಪ್ರಯುಕ್ತ ಪೊಲೀಸ್ ಉಪ ನಿರೀಕ್ಷಕರು, ವಿಶೇಷ ಪೊಲೀಸ್ ಠಾಣೆ, ಅಲಾನಿ,ಮಂಗಳೂರು ಇವರಿಂದ ಹಸ್ತಾಂತರ ಪಡೆದುಕೊಂಡ ಬಗ್ಗೆ , ತನಿಖೆ ಮುಂದುವರಿಸಿ ಸೊತ್ತುಗಳನ್ನು ಅಬಕಾರಿ ಕಾಯಿದೆಯಡಿ ವಿಲೇವಾರಿ ಮಾಡುವ ಬಗ್ಗೆ ಅದೇಶಕ್ಕಾಗಿ ಅಧಿಕೃತ ಅದಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದ.ಕ ಜಿಲ್ಲೆ, ಮಂಗಳೂರು ಇವರಿಗೆ ವರದಿ ಸಲ್ಲಿಸಿರುವ ಬಗ್ಗೆ ಸಾಕ್ಷ್ಯ ನೀಡುತ್ತಾ ಪ್ರಕರಣದ ಅಗತ್ಯ ದಾಖಲೆಗಳನ್ನು ನಿ.ಪಿ-1 ರಿಂದ ನಿ.ಪಿ-4ಎ ರವರೆಗೆ ಗುರುತಿಸಿರುತ್ತಾರೆ.

ಸಾಕ್ಷಿ ಸಂದರ್ಭದಲ್ಲಿ ವಾಹನದ ಮಾಲೀಕರಾಗಲೀ ಮಾಲೀಕರ ಪರ ಪ್ರತಿನಿಧಿಗಳಾಗಲೀ ಪ್ರಾದಿಕಾರದ ಮುಂದೆ ಹಾಜರಾಗಲು ಉತ್ಸುಕರಾಗದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸ ಲಾಯಿತು.

ಪ್ರಾ.ಸ-2:-

ಪ್ರಕರಣದ ಪಿರ್ಯಾದುದಾರರಾದ ಶ್ರೀ.ನಾರಾಯಣ ಬೈಂದೂರ್ ನಿವೃತ್ತ ಪೊ.ಉ.ನಿ ಮಂಗಳೂರು ವಿಶೇಷ ಪೊಲೀಸ್ ಠಾಣೆ ಅಲಾನಿ ಇವರು ದಿ:28-7-2011 ರಂದು ಈ ಪ್ರಾದಿಕಾರದ ಮುಂದೆ ಸಾಕ್ಷ್ಯ ನೀಡುತ್ತಾ , ದಿ:27-11-2010ರಂದು ಮದ್ಯಾಹ್ನ ಮಂಗಳೂರು ಅನ್ಸಾರಿ ರಸ್ತೆಯ ಎಸ್.ಆರ್.ಎಸ್ ಟ್ರಾನ್ಸ್ ಪೋರ್ಟ್ ಕಛೇರಿಗೆ ಅಕ್ರಮವಾಗಿ ಪಾರ್ಸೆಲ್ ಬಂದಿರುವ 3 ಪ್ಲಾಸ್ಟಿಕ್ ಬ್ಯಾರೆಲ್‌ಗಳಲ್ಲಿ 630 ಲೀ ಮದ್ಯಸಾರ ವನ್ನು ಮತ್ತು ಸದ್ರಿ ಮದ್ಯಸಾರವನ್ನು ಡೆಲಿವರಿ ಪಡೆದುಕೊಳ್ಳುವ ಸಂದರ್ಭದಲ್ಲಿ ಅರೋಪಿತ ವ್ಯಕ್ತಿ ಬಳಸಿಕೊಂಡಿರುವ ವಾಹನ ಬಜಾಜ್ ಪಲ್ಸರ್ ಮೋಟಾರ್ ಬೈಕ್ ಸಂ: KA-19-EA-7846 ಇದನ್ನು ಜಪ್ತುಪಡಿಸಿಕೊಂಡು ಮಹಜರು ಕ್ರಮ ಜರುಗಿಸಿ , ಮದ್ಯಸಾರದ ಮಾದರಿ ಪ್ರತ್ಯೇಕಿಸಿ, ಆರೋಪಿತನಾದ ಬ್ರಿಜೇಶ್ ಎಂಬವನ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ಪ್ರಕರಣವನ್ನು ಅಬಕಾರಿ ಕಾಯಿದೆಯಡಿ ವಿಲೇವಾರಿ ಪ್ರಯುಕ್ತ ಅಬಕಾರಿ ಇಲಾಖೆಗೆ ಹಸ್ತಾಂತರಗೊಳಿಸಲು ಆದೇಶ ಪಡೆದಿರುವ ಬಗ್ಗೆ . ಪ್ರಕರಣದಲ್ಲಿ ಜಪ್ತಾದ ಮದ್ಯಸಾರದ ಮಾದರಿಗಳನ್ನು ರಸಾಯನಿಕ ವಿಶ್ಲೇಷಣೆಗೆ ಕಳುಹಿಸಿದ ಬಗ್ಗೆ ಇತ್ಯಾದಿ ಸಾಕ್ಷ್ಯ ನುಡಿಯುತ್ತಾ

ಪ್ರಮುಖ ದಾಖಲೆಗಳನ್ನು ನಿ.ಪಿ-5 ರಿಂದ ನಿಶಾನೆ ಪಿ-9ಎ ರವರೆಗೆ ಗುರುತಿಸಿರುತ್ತಾರೆ .

ಸಾಕ್ಷಿ ಸಂದರ್ಭದಲ್ಲಿ ವಾಹನದ ಮಾಲೀಕರಾಗಲೀ ಮಾಲೀಕರ ಪರ ಪ್ರತಿನಿಧಿ ಗಳಾಗಲೀ ಪ್ರಾದಿಕಾರದ ಮುಂದೆ ಹಾಜರಾಗಲು ಉತ್ಸುಕರಾಗದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ಮದ್ಯಸಾರದ ಮಾದರಿಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಲಾಗಿದ್ದು, ಮುಖ್ಯ ರಸಾಯನಿಕ ತಜ್ಞ ಮತ್ತು ಕರ್ನಾಟಕ ಸರ್ಕಾರದ ಪದನಿಮಿತ್ತ ಸಹಾಯಕ ರಾಸಾಯನಿಕ ಪರೀಕ್ಷಕರು, ಕೇಂದ್ರ ರಾಸಾಯನಿಕ ಪ್ರಯೋಗಾಲಯ, ಅಬಕಾರಿ ಇಲಾಖೆ,ಬೆಂಗಳೂರು ಇವರು ದಿ:5-1-2011ರಂದು ನೀಡಿರುವ ವಿಶ್ಲೇಷಣಾ ವರದಿಯಲ್ಲಿ ಮದ್ಯಸಾರವಲ್ಲಿ ಮದ್ಯಸಾರ ಪ್ರಮಾಣ ಎಲ್ಲಾ ಮಾದರಿ ಗಳಲ್ಲೂ ಅನುಕ್ರಮವಾಗಿ 67.0,66.4 ಮತ್ತು 67.5 ಡಿಗ್ರಿ ಒ.ಪಿ ಇರುವುದಾಗಿ ಹಾಗೂ ಮಾದರಿಗಳಲ್ಲಿ ಈಥೈಲ್ ಅಲ್ಕೋಹಾಲ್ ಕಂಡುಬಂದಿದ್ದು,ಅವು ಮಾನವನ ಸೇವನೆಗೆ ಬಳಸಬಹುದಾದ ಮದ್ಯವನ್ನು ತಯಾರಿಸಲು ಯೋಗ್ಯವಾಗಿರುತ್ತದೆಂದು ದೃಡೀಕರಿಸ ಲ್ಪಟ್ಟಿರುವುದರಿಂದ ಜಪ್ತುಪಡಿಸಿಕೊಂಡ ವಸ್ತುವು ಅಬಕಾರಿ ಸೊತ್ತು (ಮದ್ಯಸಾರ) ಆಗಿರುವುದು ಸಾಭೀತಾಗಿರುರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಪ್ರಕರಣದ ಎಲ್ಲಾ ದಾಖಲಾತಿಗಳನ್ನು ಹಾಗೂ ಪ್ರಾ.ಸ-1 ಮತ್ತು 2ರವರು ನೀಡಿರುವ ಸಾಕ್ಷಿಯನ್ನು ಅವಲೋಕಿಸಿ, ಮದ್ಯಸಾರ ಸಾಗಾಣಿಕೆ ಸಂದರ್ಭದಲ್ಲಿ ಬಳಸಿಕೊಂಡು ಜಪ್ತುಪಡಿಸಿಕೊಳ್ಳಲಾದ ವಾಹನದ ಮಾಲೀಕರಿಗೆ ಅಬಕಾರಿ ಕಾಯಿದೆ ಕಲಂ 43 ಬಿ ರಡಿ ನೋಟಿಸು ನೀಡಲಾಗಿದ್ದರೂ. ವಾಹನದ ಮಾಲೀಕರು/ ಸುಪರ್ಧಿದಾರರಾಗಲೀ ,ಅವರ ಪ್ರತಿನಿಧಿಗಳಾಗಲೀ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಬೇಡಿಕೆ.ಆಕ್ಷೇಪಣೆಗಳನ್ನು ಮಂಡಿಸದೇ ಇರುವುದನ್ನು ಗಮನಿಸಿ, ಅಪರಾಧ ಸ್ಥಳದಲ್ಲಿ ಮಹಜರು ಜರುಗಿಸಿ ಸೊತ್ತು ಗಳನ್ನು ಜಪ್ತು ಪಡಿಸಿಕೊಂಡು ಪ್ರಕರಣ ದಾಖಲಿಸಿಕೊಂಡ ಅಂಶಗಳನ್ನು ಪರಿಗಣಿಸಿ ವಾಹನ ಬಜಾಜ್ ಪಲ್ಸರ್ ಮೋಟಾರ್ ಬೈಕ್ ಸಂ: KA-19-EA-7846 ನ್ನು ಅಕ್ರಮ ಮದ್ಯಸಾರ ಸಾಗಾಣಿಕೆಗೆ ಬಳಸಿರುವುದು ಸಾಭೀತಾಗಿರುವುದರಿಂದ ಎರಡನೇ ಅಂಶವನ್ನು ಗುಣಾತ್ಮಕ ವಾಗಿ ಪರಿಗಣಿಸ ಲಾಗಿದೆ.

ಇಂತಹ ಅಕ್ರಮ ಮದ್ಯಸಾರ ಸಾಗಾಟ ತನ್ನ ತಿಳುವಳಿಕೆಗೆ ಬಾರದೇ ನಡೆದಿದೆ ಮತ್ತು ವಾಹನವನ್ನು ಸದ್ರಿ ಅಕ್ರಮ ಸಾಗಾಣಿಕೆಗೆ ಬಳಸಲಾಗಿರುವುದಿಲ್ಲ ಎಂಬುದನ್ನು ಸಾಕ್ಷದಾರಗಳೊಂದಿಗೆ ಸಾಭೀತುಪಡಿಸುವುದು ವಾಹನ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಪ್ರಾಧಿಕಾರದಿಂದ ನೀಡಲಾದ ಕಾರಣ ಕೇಳಿ ನೋಟಿಸು ನೊಂದಾಯಿತ ಅಂಚೆಯ ಮೂಲಕ ಜ್ಯಾರಿಯಾಗಿದ್ದರೂ, ಸದ್ರಿ ನೋಟಿಸಿಗೆ ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸದೇ ಇರುವುದರಿಂದ ವಾಹನದ ಮಾಲೀಕರು/ಸುಪರ್ಧಿ ಹೊಂದಿರುವವರು ತಮ್ಮ ನಿರಾಪರಾಧಿತ್ವವನ್ನು ಸಾಬೀತು ಪಡಿಸಲು ವಿಫಲರಾಗಿದ್ದು , ಸದ್ರಿ ವಾಹನವನ್ನು ಅಕ್ರಮ ಮದ್ಯಸಾರ ಸಾಗಾಣಿಕೆಗೆ ಬಳಸಿರುವುದು ನಿಸ್ಸಂದೇಹವಾಗಿ ಸಾಭೀತಾಗಿರುತ್ತದೆ. ಈ ಮೇಲಿನ ಕಾರಣಗಳಿಂದ ಮೂರನೇಯ ಅಂಶವನ್ನು ನಕಾರಾತ್ಮಕವಾಗಿ ಪರಿಗಣಿಸಿದೆ.

ಮೇಲಿನ ಎಲ್ಲಾ ಅಂಶಗಳಿಂದ ಮಹಜರು ಸಾಕ್ಷಿಗಳ ವಿಚಾರಣೆ ಮತ್ತು ಲಭ್ಯವಿರುವ ದಾಖಲಾತಿಗಳಿಂದ ಹಾಗೂ ಪ್ರಕರಣದಲ್ಲಿ ಜಪ್ತುಪಡಿಸಿದ ಮದ್ಯಸಾರದಲ್ಲಿ ಮದ್ಯಸಾರದ ಅಂಶ ಇರುವುದು ವಿಶ್ಲೇಷಣಾ ವರದಿಯಿಂದ ದೃಡಪಟ್ಟಿರುವುದರಿಂದ ಈ ಪ್ರಕರಣದಲ್ಲಿ ಅಕ್ರಮ ವಸ್ತುಗಳನ್ನು ಸಾಗಾಟ ಮಾಡಲು ಅನುಕೂಲಕರವಾಗಿ ಬಳಸಿಕೊಳ್ಳಲಾಗಿದೆ ಎಂದು ಖಚಿತಪಡಿಸಿಕೊಂಡು ಜಪ್ತು ಪಡಿಸಲಾಗಿರುವ ಬಜಾಜ್ ಪಲ್ಸರ್ ಮೋಟಾರ್ ಬೈಕ್ ಸಂ: KA-19-EA-7846 ಮತ್ತು ಅಕ್ರಮ ಟ್ರಾನ್ಸ್‌ಪೋರ್ಟ್‌ಗೆ ಸಂಬಂಧಿಸಿ ಎ.ಆರ್.ಸಿ ಕಛೇರಿಯ ಬಿ ದಾಖಲಾತಿಗಳ ಪ್ರತಿಗಳನ್ನು ಸರ್ಕಾರಕ್ಕೆ ಮುಟ್ಟು ಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಪ್ರಾದಿಕಾರವು ತೀರ್ಮಾನಿಸಿ, ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ಬಿ.ವಿ.ಹೂವಪ್ಪ ಗೌಡ, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್. ದ.ಕ.ಜಿಲ್ಲೆ.ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲ0 43ಎ ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ,ನಿಯಮ 43 ಬಿ ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿದ ನಂತರ ಪೊಲೀಸ್ ಉಪ ನಿರೀಕ್ಷಕರು, ವಿಶೇಷ ಪೊಲೀಸ್ ಠಾಣೆ, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ. ಮಂಗಳೂರು ಇವರ ತಕ್ಷೀರು ಸಂಖ್ಯೆ : 50/2010. ದಿನಾಂಕ: 27-11-2010 ರಲ್ಲಿ ಜಪ್ತು ಪಡಿಸಿಕೊಂಡಿರುವ ಬಜಾಜ್ ಪಲ್ಸರ್ ಮೋಟಾರ್ ಬೈಕ್ ಸಂ: KA-19-EA-7846 (ಚಾಸೀಸ್ ನಂ: MD2DHDHZZ SCK 93939 ಇಂಜಿನ್ ನಂ: DHGBSK83284) ಮತ್ತು ಅಕ್ರಮ ಟ್ರಾನ್ಸ್‌ಪೋರ್ಟ್‌ಗೆ ಸಂಬಂಧಿಸಿ ಜಪ್ತುಪಡಿಸಿಕೊಳ್ಳಲಾದ ಎ.ಆರ್.ಸಿ ಕಛೇರಿಯ 3 ದಾಖಲಾತಿಗಳನ್ನು ನಿಯಮ 43ಸಿ ರನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ದಾಖಲಾತಿಗಳನ್ನು ನಾಶಪಡಿಸಲು ಹಾಗೂ ವಾಹನವನ್ನು ಬಹಿರಂಗ ಹರಾಜಿನ ಮೂಲಕ ವಿಲೇವಾರಿ ಮಾಡಲು ಆದೇಶ ನೀಡಿರುತ್ತೇನೆ.

ಸದ್ರಿ ಪ್ರಕರಣದಲ್ಲಿ ಜಪ್ತುಪಡಿಸಲಾದ ಮದ್ಯಸಾರವನ್ನು ಈ ಪ್ರಾದಿಕಾರದ ಸಮ ಸಂಖ್ಯೆ ಅದೇಶ ದಿನಾಂಕ:19-3-2011ರ ಅನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿರುವುದನ್ನು ಸ್ಥಿರೀಕರಿಸಿದ್ದೇನೆ.

ಈ ಆದೇಶವನ್ನು ದಿ:04-08-2011ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜ್ಯಾರಿಯಲ್ಲಿ ಬರುತ್ತದೆ.

ಬಿ.ವಿ. ಹೂವಪ್ಪಗೌಡ,
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಅನುಬಂಧ–I

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ:–

ಪ್ರಾ.ಸಾ–1 : ಶ್ರೀ ಮಾಧವ ರಾವ್.ಬಿ, ಅಬಕಾರಿ ನಿರೀಕ್ಷಕರು, ಮಂಗಳೂರು ದಕ್ಷಿಣ ವಲಯ–1

ಪ್ರಾ.ಸಾ–2 : ಶ್ರೀ. ನಾರಾಯಣ ಬೈಂದೂರು, ಪೊ.ಉ.ನಿ, ವಿಶೇಷ ಪೊ.ಠಾಣೆ, ಅಲಾನಿ, ಮಂಗಳೂರು

ಅನುಬಂಧ–II

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲೆಗಳು:–

ನಿಶಾನೆ ಪಿ–1	: ರಾಸಾಯನಿಕ ವಿಶ್ಲೇಷಣಾ ವರದಿ
ನಿಶಾನೆ ಪಿ–2	: ಬಿ ಎಕ್ಸ್ ಟ್ರಾಕ್ಟ್ ವರದಿ
ನಿಶಾನೆ ಪಿ–3	: ತನಿಖಾದಿಕಾರಿಗಳ ದಿ:7–3–2011ರ ವರದಿ
ನಿಶಾನೆ ಪಿ–3ಎ	: ಅದರ ಸಾಕ್ಷಿ ಸಹಿ
ನಿಶಾನೆ ಪಿ–4	: ತನಿಖಾದಿಕಾರಿಯವರಿಂದ ದಿ:13–4–2011 ರ ವರದಿ
ನಿಶಾನೆ ಪಿ–4 ಎ	: ಅದರ ಮೇಲಿನ ಸಹಿ
ನಿಶಾನೆ ಪಿ–5	: ಮಹಜರು ಪ್ರತಿ ನಿಶಾನೆಪಿ–5 ಎ:– ಸಾಕ್ಷಿ ಸಹಿ
ನಿಶಾನೆ ಪಿ–6	: ಪಿ.ಎಫ್.ನಂ:51/2010 ರ ಪ್ರತಿ ನಿಶಾನೆಪಿ–6ಎ:– ಸಾಕ್ಷಿ ಸಹಿ
ನಿಶಾನೆ ಪಿ–7	: ಪ್ರಥಮ ವರ್ತಮಾನ ವರದಿ ನಿಶಾನೆಪಿ–7ಎ:– ಸಾಕ್ಷಿ ಸಹಿ
ನಿಶಾನೆ ಪಿ–8	: ಫಿರ್ಯಾದುದಾರರು ಅಧಿಕೃತ ಅಧಿಕಾರಿಗಳಿಗೆ ಒಪ್ಪಿಸಿದ ವರದಿ
ನಿಶಾನೆ ಪಿ–8ಎ	ಅದರ ಮೇಲಿನ ಸಹಿ
ನಿಶಾನೆ ಪಿ–9	: ಫಿರ್ಯಾದುದಾರರಿಂದ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾದ ನಿವೇದನೆ ವರದಿ
ನಿಶಾನೆ ಪಿ–9ಎ	ಅದರ ಮೇಲಿನ ಸಹಿ

ಅನುಬಂಧ–III

ವಾಹನ ಮಾಲೀಕರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು :–

ಅರ್ಜಿದಾರರ ಹೇಳಿಕೆ :–_ – ಯಾವುದು ಇಲ್ಲ–

ಅನುಬಂಧ–IV

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ದಾಖಲೆಗಳು :– – ಯಾವುದು ಇಲ್ಲ–

ಬಿ.ವಿ. ಹೂವಪ್ಪಗೌಡ,
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಪಿ.ಆರ್. 917

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/80/ಡಿಟಿಸಿಆರ್/2007–08, ದಿನಾಂಕ: 11ನೇ ಆಗಸ್ಟ್ 2011

ಉಪಸ್ಥಿತರು : ಬಿ.ವಿ. ಹೂವಪ್ಪಗೌಡ, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಫಿರ್ಯಾದುದಾರರು : ಪೊಲೀಸ್ ಮುಖ್ಯ ಅರಕ್ಷಕರು, ನಂ: 629, ಉಪ್ಪಿನಗಂಡಿ ಪೊಲೀಸ್ ಠಾಣೆ, ಉಪ್ಪಿನಂಗಡಿ

ಆರೋಪಿಗಳು : 1) ನಾರಾಯಣ ಗೌಡ, ಬಿನ್: ಬಾಬು ಗೌಡ, ಬೂಡುದಮಕ್ಕಿ, ಹತ್ಯಡ್ಕ ಗ್ರಾಮ, ಬೆಳ್ತಂಗಡಿ ತಾಲೂಕು (ವಾಹನದ ಮಾಲೀಕ)

2) ಮನೋಜ್ ಬಿನ್: ಕುಮಾರನ್, ಅರಸಿನಮಕ್ಕಿ, ಪತ್ಯಡ್ಕ ಗ್ರಾಮ, ಬೆಳ್ತಂಗಡಿ ತಾಲೂಕು

3) ಸುಂದರ, ಬಿನ್:ಕರಿಯ ಪೂಜಾರಿ, ಅರಸಿನ ಮಕ್ಕಿ ಶಾಲೆಯ ಬಳಿ, ಹತ್ಯಡ್ಕ ಗ್ರಾಮ, ಬೆಳ್ತಂಗಡಿ ತಾಲೂಕು

ಪ್ರಕರಣದ ಮುಖ್ಯಾಂಶಗಳು :

ಪೊಲೀಸ್ ಮುಖ್ಯ ಅರಕ್ಷಕರು, ನಂ:629,ಉಪ್ಪಿನಂಗಡಿ ಪೊಲೀಸ್ ಠಾಣೆ, ಉಪ್ಪಿನಂಗಡಿ ಇವರು ದಿ:11-8-2007ರಂದು ಬೆಳಿಗ್ಗೆ 6-00 ಗಂಟೆ ಸಮಯದಲ್ಲಿ ಬೆಳ್ತಂಗಡಿ ತಾಲೂಕು ಹತ್ಯಡ್ಕ ಗ್ರಾಮದ ಅರಸಿನಮಕ್ಕಿ ಸರ್ಕಾರಿ ಶಾಲೆಯ ಮೈದಾನದ ಎದುರುಗಡೆ ಕೊಕ್ಕಡ-ಶಿಶಿಲ ರಸ್ತೆಯ ಬದಿಯಲ್ಲಿ ನಿಂತಿದ್ದ ಜೀಪು ನೊಂದಣಿ ಸಂ: KA-20-M-3124ನ್ನು ಸಂಶಯಗೊಂಡು ಪರಿಶೀಲಿಸಲಾಗಿ ಅದರಲ್ಲಿ 3 ವ್ಯಕ್ತಿಗಳು ಇದ್ದು ಅವರನ್ನು ವಿಚಾರಿಸಲಾಗಿ ಜೀಪಿನಲ್ಲಿ ಚಾಲುಕ್ಯ ವೈನ್ಸ್‌ನಿಂದ ಸಾರ್ವಜನಿಕರಿಗೆ ಮಾರಾಟ ಮಾಡಲು ತಂದಿರುವ ಮದ್ಯ ಇರುವುದೆಂದು ತಿಳಿಸಿದ ಮೇರೆಗೆ ಜೀಪನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಹಿಂದುಗಡೆ ಸೀಟಿನ ಅಡಿಯಲ್ಲಿ 10 ರಟ್ಟಿನ ಪೆಟ್ಟಿಗೆಗಳಲ್ಲಿ ಒಟ್ಟು 86.400 ಲೀ ಮದ್ಯ ಇರುವುದನ್ನು ಪತ್ತೆಹಚ್ಚಿ ಸದ್ರಿ ಮದ್ಯದ ಸಾಗಾಟದ ಬಗ್ಗೆ ಯಾವುದೇ ಪರವಾನಿಗೆ ಇಲ್ಲದೇ ಇರುವುದರಿಂದ ಅಕ್ರಮ ಮದ್ಯ ಸಾಗಾಟ ಎಂದು ಖಚಿತಗೊಂಡು, ಇದು ಕರ್ನಾಟಕ ಅಬಕಾರಿ ಕಾಯಿದೆ ಕಲಂ 14, 15, ರಂತೆ ಅಪರಾಧ ಹಾಗೂ 32, 34 ಮತ್ತು 38ಎ ರ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ, ವಾಹನದಲ್ಲಿದ್ದ 1) ನಾರಾಯಣ ಗೌಡ, ಬಿನ್: ಬಾಬು ಗೌಡ, ಬೂಡುದ ಮಕ್ಕಿ, ಹತ್ಯಡ್ಕ ಗ್ರಾಮ, ಬೆಳ್ತಂಗಡಿ ತಾಲೂಕು 2) ಮನೋಜ್ ಬಿನ್:ಕುಮಾರನ್ ವಾಸ:ಅರಸಿನ ಮಕ್ಕಿ , ಹತ್ಯಡ್ಕ ಗ್ರಾಮ, ಬೆಳ್ತಂಗಡಿ ತಾಲೂಕು 3) ಸುಂದರ, ಬಿನ್:ಕರಿಯ ಪೂಜಾರಿ, ಅರಸಿನ ಮಕ್ಕಿ ಶಾಲೆಯ ಬಳಿ, ಹತ್ಯಡ್ಕ ಗ್ರಾಮ ಬೆಳ್ತಂಗಡಿ ತಾಲೂಕು ಇವರುಗಳನ್ನು ವಶಕ್ಕೆ ತೆಗೆದುಕೊಂಡು ,ಪತ್ತೆಯಾದ ಮದ್ಯದ ಪ್ರತಿ ಬ್ರಾಂಡ್‌ನಿಂದ ತಲಾ 3ರಂತೆ 180 ಮಿಲಿಯ ಒಟ್ಟು 9 ಮದ್ಯದ ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಪಂಚರ ಸಮಕ್ಷಮ ಮಾದರಿ ತೆಗೆದು ಮಹಜರು ಕ್ರಮ ಜರುಗಿಸಿ ವಾಹನ ,ಮದ್ಯ ಮತ್ತು ನಗದು ರೂ. 3,095/-ನ್ನು ಸರ್ಕಾರಕ್ಕೆ ಜಪ್ತುಪಡಿಸಿಕೊಂಡು ಕ್ರೈಂ ಸಂ: 173/2007, ದಿ:11-8-2007 ರಂದು ಮೊಕದ್ದಮೆಯನ್ನು ದಾಖಲಿಸಿಕೊಂಡು ಪ್ರ.ಮಾ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ, ವಶಪಡಿಸಿಕೊಂಡ ಸೊತ್ತುಗಳನ್ನು ಕಡತದೊಂದಿಗೆ ಕಾರ್ಯವ್ಯಾಪ್ತಿಯ ಅಬಕಾರಿ ಉಪ ನಿರೀಕ್ಷಕರು, ಜ್ಯಾರಿ ಮತ್ತು ತನಿಖೆ ಬೆಳ್ತಂಗಡಿ ತಾಲೂಕು ಇವರಿಗೆ ಹಸ್ತಾಂತರಿಸಲು ಪ್ರಾಧಿಕಾರದಿಂದ ದಿ:10-9-2007ರಂದು ಅನುಮತಿಯನ್ನು ನೀಡಲಾಗಿದ್ದು ಆ ಪ್ರಕಾರ ದಿ:13-9-2007ರಂದು ವ್ಯಾಪ್ತಿಯ ಅಬಕಾರಿ ಅಧಿಕಾರಿಗಳಿಗೆ ಸೊತ್ತು ಕಡತಗಳನ್ನು ಹಸ್ತಾಂತರಿಸಿರುತ್ತಾರೆ.

ಜಪ್ತುಪಡಿಸಿಕೊಳ್ಳಲಾದ ಸೊತ್ತುಗಳು:-

1) ಜೀಪು ನೊಂದಣಿ ಸಂ: KA-20-M-3124

2) 5 ರಟ್ಟಿನ ಪೆಟ್ಟಿಗೆಗಳಲ್ಲಿ 180 ಎಂಎಲ್‌ನ ಚೇರ್ ಮ್ಯಾನ್ ಪೈನ್ ವಿಸ್ಕಿಯ ತಲಾ 48 ರಂತೆ ಒಟ್ಟು 240 ಬಾಟಲಿಗಳು

3) 3 ರಟ್ಟಿನ ಪೆಟ್ಟಿಗೆಗಳಲ್ಲಿ 180 ಎಂಎಲ್‌ನ ಕಾರ್ನಿವಲ್ ತ್ರಿಬಲ್ ಎಕ್ಸ್ ರಂ ತಲಾ 48 ರಂತೆ ಒಟ್ಟು 144 ಬಾಟಲಿಗಳು

4) 2 ರಟ್ಟಿನ ಪೆಟ್ಟಿಗೆಗಳಲ್ಲಿ 180 ಎಂಎಲ್‌ನ ಜಿ.ಡಿ ವಿಸ್ಕಿಯ ತಲಾ 48ರಂತೆ ಒಟ್ಟು 96 ಬಾಟಲಿಗಳು

ಒಟ್ಟು 10 ರಟ್ಟಿನ ಪೆಟ್ಟಿಗೆಗಳಲ್ಲಿ 86.400 ಲೀಟರು ಮದ್ಯ

(ಪ್ರತಿ ಬ್ರಾಂಡ್ ನ ಮದ್ಯದಿಂದ ತಲಾ ಮೂರರಂತೆ ಒಟ್ಟು 9 ಬಾಟಲಿಗಳನ್ನು ಮಾದರಿ ತೆಗೆಯಲಾಗಿದೆ)

ಜಪ್ತಾದ ವಾಹನ ಜೀಪು ನೊಂದಣಿ ಸಂ: KA-20-M-3124 ಇದರ ಮಾಲಕರೆಂದು ಹೇಳಿಕೊಂಡ ಶ್ರೀ.ನಾರಾಯಣ ಗೌಡ, ಬಿನ್:ಬಾಬು ಗೌಡ, ಬೂಡುದ ಮಕ್ಕಿ ಮನೆ, ಹತ್ಯಡ್ಕ ಗ್ರಾಮ ಇವರು ತಮ್ಮ ವಕೀಲರ ಮೂಲಕ ದಿನಾಂಕ : 20-9-07 ರಂದು ಅರ್ಜಿಯೊಂದನ್ನು ಸಲ್ಲಿಸಿ, ವಾಹನದ ಮಧ್ಯಂತರ ಬಿಡುಗಡೆಗಾಗಿ ಕೋರಿರುತ್ತಾರೆ. ಅರ್ಜಿಯ ವಿಚಾರಣೆ ಕೈಗೊಂಡು ವಾಹನದ ಮಧ್ಯಂತರ ಬಿಡುಗಡೆ ಬಗ್ಗೆ ಸಹಾಯಕ ಅಭಿಯೋಗ ನಿರ್ದೇಶಕರು ಮತ್ತು ಪ್ರಕರಣದ ತನಿಖಾಧಿಕಾರಿಗಳಿಂದ ಆಕ್ಷೇಪಣೆಗಳನ್ನು ಪಡೆದು, ವಾಹನದ ಆರ್.ಸಿ ಪುಸ್ತಕದ ಪ್ರತಿಯನ್ನು ಪರಿಶೀಲನೆ ನಡೆಸಿ, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಇವರು ದೃಢೀಕರಿಸಿದ ಮೌಲ್ಯ ಮಾಪನ ವರದಿಯನ್ನು ಪರಿಗಣಿಸಿ ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇಐಬಿ, ದ.ಕ ಜಿಲ್ಲೆ, ಮಂಗಳೂರು ಇವರ ಪ್ರಾಧಿಕಾರದಿಂದ ದಿ:26-3-2008ರಂದು ಹೊರಡಿಸಿದ ಮಧ್ಯಂತರ ಆದೇಶದಲ್ಲಿ ರೂ.60,000/- ಮೊತ್ತದ ಬ್ಯಾಂಕ್ ಗ್ಯಾರಂಟಿಯನ್ನು ಭದ್ರತೆಯಾಗಿ ಒದಗಿಸುವ ಹಾಗೂ ಇತರೆ ಷರತ್ತುಗಳ ಮೇಲೆ ವಾಹನವನ್ನು ಮಾಲೀಕರ ಸುಪರ್ಧಿಗೆ ಬಿಡುಗಡೆಗೊಳಿಸಲು ಆದೇಶಿಸಲಾಗಿರುತ್ತದೆ. ಸದ್ರಿ ಆದೇಶದಂತೆ ವಾಹನದ ಮಾಲೀಕರು ರೂ. 60,000/- ಮೊತ್ತದ ಬ್ಯಾಂಕ್ ಗ್ಯಾರಂಟಿಯನ್ನು ಸಿಂಡಿಕೇಟ್ ಬ್ಯಾಂಕ್, ಕೊಕ್ಕಡ ಶಾಖೆ, ಬೆಳ್ತಂಗಡಿ ತಾಲೂಕು ಇಲ್ಲಿಂದ ಪಡೆದು ಪ್ರಾದಿಕಾರಕ್ಕೆ ಸಲ್ಲಿಸಿರುವ ಮೇರೆಗೆ ವಾಹನವನ್ನು ವಾಹನದ ಮಾಲೀಕರಿಗೆ ಬಿಡುಗಡೆಗೊಳಿಸಲಾಗಿರುತ್ತದೆ. ಬ್ಯಾಂಕ್ ಗ್ಯಾರಂಟಿಯ ಮಾನ್ಯತೆ ಅವಧಿಯು ದಿ:30-5-2010ರವರೆಗೆ ಊರ್ಜಿತದಲ್ಲಿದ್ದು, ತದನಂತರದಲ್ಲಿ ಬ್ಯಾಂಕ್ ಗ್ಯಾರಂಟಿಯ ಭದ್ರತೆಯ ದೃಷ್ಟಿಯಿಂದ ದಿ:19-4-2010ರಂದು ಸದ್ರಿ ಬ್ಯಾಂಕ್ ಗ್ಯಾರಂಟಿಯನ್ನು ಇನ್‌ವೋಕ್ ಮಾಡಿಕೊಂಡು ಅಡಕವಾಗಿರುವ ಮೊತ್ತವನ್ನು ಸರ್ಕಾರದ ರೆವೆನ್ಯೂ ಡೆಪಾಸಿಟ್ ಖಾತೆಯಲ್ಲಿ ಚಲನ್ ಸಂ:461 ದಿ:10-5-2010 ರಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮಂಗಳೂರು ಶಾಖೆಯಲ್ಲಿ ಜಮೆಮಾಡಲಾಗಿರುತ್ತದೆ.

ತನಿಖಾದಿಕಾರಿಗಳು ಪ್ರಕರಣದ ತನಿಖೆ ಕೈಗೊಂಡು ಜಪ್ತಾದ ವಾಹನ ಜೀಪು ನೊಂದಣಿ ಸಂ: KA-20-M-3124 ಇದರ ಬಿ ರಿಜಿಸ್ಟಾರ್ ಎಕ್ಸ್‌ಟ್ರಾಕ್ಟ್ ವರದಿಯನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಪುತ್ತೂರು, ದ.ಕ ಜಿಲ್ಲೆ ಇವರಿಂದ ಪಡೆದು ಅಧಿಕೃತ ಅಧಿಕಾರಿಗಳ ಪ್ರಾದಿಕಾರಕ್ಕೆ ಸಲ್ಲಿಸಿದ್ದು, ಸದ್ರಿ ವರದಿಯ ಪ್ರಕಾರ ಶ್ರೀ. ಜಿ.ಆರ್ ಗುಜರನ್, ಬಿನ್:ದಿ:ರಾಮ ಪೂಜಾರಿ, ನ್ಯೂ ಹೌಸ್, ಬಾಣಂಗಡಿ ಅಂಚೆ, ಕಲ್ಲಮುಡ್ಕೂರು, ಕಾರ್ಕಳ ತಾಲೂಕು ಇವರು ವಾಹನದ ನೊಂದಣಿ ಮಾಲೀಕರೆಂದು ದೃಢೀಕೃತವಾಗಿರುವ ಮೇರೆಗೆ ಸದಿ ವಾಹನದ ಮಾಲೀಕರಿಗೆ, ಹೆಚ್.ಪಿ.ಎ.ದಾರರಾದ ಸಿಂಡಿಕೇಟ್

ಬ್ಯಾಂಕ್ ಕಲ್ಲಮುಡ್ಕೂರು ಮತ್ತು ಆರೋಪಿತರಾದ ನಾರಾಯಣ ಗೌಡ, ಬಿನ್: ಬಾಬು ಗೌಡ, ಬೂಡುದ ಮಕ್ಕಿ ,ಹತ್ಯಡ್ಕ ಗ್ರಾಮ ಬೆಳ್ತಂಗಡಿ ತಾಲೂಕು, ಮನೋಜ್ ಬಿನ್:ಕುಮಾರನ್, ಅರಸಿನಮಕ್ಕಿ , ಹತ್ಯಡ್ಕ ಗ್ರಾಮ ಬೆಳ್ತಂಗಡಿ ತಾಲೂಕು ಮತ್ತು ಸುಂದರ ಬಿನ್:ಕರಿಯ ಪೂಜಾರಿ,ಅರಸಿನಮಕ್ಕಿ ಶಾಲೆಯಬಳಿ, ಹತ್ಯಡ್ಕ ಗ್ರಾಮ ಬೆಳ್ತಂಗಡಿ ತಾಲೂಕು ಇವರುಗಳಿಗೆ ಅಂದಿನ ಅಧಿಕೃತ ಅಧಿಕಾರಿಗಳ ಪ್ರಾಧಿಕಾರದಿಂದ ದಿ:26-12-2007ರಂದು ಕರ್ನಾಟಕ ಅಬಕಾರಿ ಕಾಯಿದೆ ಕಲಂ 43 ಬಿ ಪ್ರಕಾರ ಕಾರಣ ಕೇಳಿ ನೋಟಿಸು ನೀಡಲಾಗಿದ್ದು, ಸದ್ರಿ ಕಾರಣ ಕೇಳಿ ನೋಟಿಸು ವಾಹನದ ಮಾಲೀಕ/ ಆರೋಪಿತರಾದ ನಾರಾಯಣ ಗೌಡ, ಮನೋಜ್ ಮತ್ತು ಹೆಚ್.ಪಿ.ಎ ದಾರರಾದ ಸಿಂಡಿಕೇಟ್ ಬ್ಯಾಂಕ್ ಇವರುಗಳಿಗೆ ದಿ:1-1-2008ರಂದು ಹಾಗೂ ಇನ್ನೊರ್ವ ಆರೋಪಿತನಾದ ಸುಂದರ ಇವನಿಗೆ ದಿ:2-1-2008ರಂದು ನೊಂದಾಯಿತ ಅಂಚೆಯ ಮೂಲಕ ಜ್ಯಾರಿಯಾಗಿರುತ್ತದೆ. ಪ್ರಾಧಿಕಾರದಿಂದ ಕೇಳಲಾದ ಕಾರಣ ಕೇಳಿ ನೋಟಿಸಿಗೆ ಆರೋಪಿತನಾದ ನಾರಾಯಣ ಗೌಡ ಇವರು ದಿ: 30-1-2008 ರಂದು ಉತ್ತರಿಸುತ್ತಾ, ಹೊರಿಸಲಾದ ಅಪರಾಧವನ್ನು ಅಲ್ಲಗಳೆದು, ಸದ್ರಿ ವಾಹನ ಸ್ವಂತ ಉಪಯೋಗಕ್ಕಾಗಿ ಇರುವ ವಾಹನವಾಗಿದ್ದು ಪ್ರಕರಣ ಸಂಧರ್ಭದಲ್ಲಿ ವಾಹನದಲ್ಲಿ ಚಾಲಕ ಸಮೇತ 10 ಜನ ಪ್ರಯಾಣಿಕರಿದ್ದು ಅವರೆಲ್ಲರಿಗೂ ಆಟಿ ಅಮಾವ್ಯಾಸೆಯ ಹಬ್ಬದ ದಿವಸ ದೇವರ ನೈವೇಧ್ಯಕ್ಕಾಗಿ 180 ಎಂ ಎಲ್ ನ ತಲಾ 24 ಬಾಟಲಿಗಳಂತೆ ಮದ್ಯವನ್ನು ಚಾಲೂಕ್ಯ ವೈನ್ಸ್, ಎಂಜಿರ ಇಲ್ಲಿಂದ ಖರೀದಿಸಿಕೊಂಡಿದ್ದು ಇದು ಕಾನೂನಿನಲ್ಲಿ ನಿಗದಿ ಪಡಿಸಿದ ಕನಿಷ್ಠ ಪ್ರಮಾಣಕ್ಕಿಂತ ಕಡಿಮೆ ಪ್ರಮಾಣದಾಗಿದ್ದು ಮದ್ಯ ಖರೀದಿಸಿದ ಬಗ್ಗೆ ನಗದು ರಶೀದಿಗಳನ್ನು ಹಾಜರುಪಡಿಸಲಾಗಿರುತ್ತದೆ. ಕಾರಣ ವಾಹನದ ಮಾಲೀಕರು ನಿರಾಪರಾಧಿ ಯಾಗಿದ್ದು ವಾಹನದ ಮುಟ್ಟುಗೋಲು ನಡವಳಿಯನ್ನು ಕೈಬಿಡಬೇಕಾಗಿ ವಿನಂತಿಸಿ ಕೊಂಡಿರುತ್ತಾರೆ. ಉಳಿದಂತೆ ಯಾರಿಂದಲೂ ಸಮಜಾಯಿಷಿ ಉತ್ತರ ಈ ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ತನಿಖಾಧಿಕಾರಿಗಳು ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ಮದ್ಯದ ಮಾದರಿ ಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿ ಕರ್ನಾಟಕ ಸರ್ಕಾರದ ರಾಸಾಯನಿಕ ವಿಶ್ಲೇಷಕರು, ಮಂಗಳೂರು ಇವರಿಂದ ಪಡೆದ ರಾ.ವಿ ಸಂ: ಇಎಕ್ಸ್‌ಇ-308-9, ದಿ:15-10-2007 ರ ಪ್ರತಿಯನ್ನು ತನಿಖಾ ವರದಿ ಸಂ: ಅಇ/ಬಉುವ/ಅವಸಂ/ 29: 2007-08 ದಿನಾಂಕ: 3-12-2007 ಮತ್ತು 20-6-2008ರ ಜೊತೆಯಲ್ಲಿ ಪ್ರಾಧಿಕಾರಕ್ಕೆ ಒಪ್ಪಿಸಿ, ಜಪ್ತುಪಡಿಸಿ ಕೊಂಡ ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ವಿಲೇವಾರಿ ಮಾಡಲು ಶಿಫಾರಸ್ಸು ಮಾಡಿರುವುದರಿಂದ ಹಾಗೂ ಮಾದರಿ ವಿಶ್ಲೇಷಣಾ ವರದಿಯಲ್ಲಿ ಮದ್ಯದ ಮಾದರಿಗಳಲ್ಲಿ ಮದ್ಯಸಾರದ ಅಂಶವು 42.0% ಪತ್ತೆಯಾಗಿರುವುದು ಹಾಗೂ ಮಾದರಿ ಗಳು ಕಶ್ಮಲಯುಕ್ತವಾಗಿದ್ದು, ಭಾರತೀಯ ಮಾನಕ ಬ್ಯೂರೋದ ಅಂಶಗಳಿಗೆ ಅನುಗುಣವಾಗಿರುವುದಿಲ್ಲ ಎಂದು ದೃಡವಾಗಿರುವುದರಿಂದ, ಮದ್ಯವನ್ನು (ಮಾದರಿ ಹೊರತುಪಡಿಸಿ) ದಿ:1-8-2008ರಂದು ಹೊರಡಿಸಿದ ಆದೇಶದಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿ ಕೊಂಡು, ಪ್ರಸ್ತುತ ಚಾಲ್ತಿಯಲ್ಲಿರುವ ಸರ್ಕಾರದ ಆದೇಶದಂತೆ ಮುಟ್ಟುಗೋಲು ಹಾಕಿಕೊಂಡ ಮದ್ಯವನ್ನು ನಾಶಪಡಿಸಲು ಆದೇಶಿಸಲಾಗಿರುತ್ತದೆ.

ನಂತರ ಪ್ರಕರಣದಲ್ಲಿ ವಿಚಾರಣೆಯನ್ನು ಪ್ರಾರಂಬಿಸಿ ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಿ ಅಭಿಯೋಗದ ಪರ ಪ್ರಾ.ಸಾ-1 ರಿಂದ 5ರವರನ್ನು ವಿಚಾರಣೆ ನಡೆಸಿ ನಿಶಾಣೆ ಪಿ-1ರಿಂದ 8 ರವರೆಗೆ ಗುರುತಿಸಿಕೊಳ್ಳಲಾಗಿರುತ್ತದೆ.

ಈ ಪ್ರಕರಣದಲ್ಲಿ ಸರ್ಕಾರದ ಅಭಿಯೋಗದ ಪರ ಸಲ್ಲಿಸಿರುವ ಸಾಕ್ಷಾಧ್ಯಾರಗಳಿಂದ ಈ ಕೆಳಗಿನ ವಿವಾಧಾಂಶಗಳನ್ನು ತೀರ್ಮಾನಿಸುವುದು ಅಗತ್ಯವಾಗಿದ್ದು ಪರಿಶೀಲನಾಂಶಗಳು ಈ ಕೆಳಗಿನಂತಿರುತ್ತದೆ.

ವಿವಾದಾಂಶಗಳು

1) ದಿನಾಂಕ:11-8-2007ರಂದು ಜೀಪು ನೊಂದಣಿ ಸಂ: KA-20-M-3124 ರಲ್ಲಿ ಸಾಗಾಣಿಕೆಯಾದ ಸೊತ್ತು ಮದ್ಯ ಎಂಬ ಬಗ್ಗೆ ರಸಾಯನಿಕ ವಿಶ್ಲೇಷಣಾ ವರದಿಯಿಂದ ದೃಡೀಕೃತವಾಗಿದೆಯೇ?

2) ದಿನಾಂಕ: 11-8-2007ರಂದು ಜೀಪು ನೊಂದಣಿ ಸಂ: KA-20-M-3124 ಇದರಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಅಪರಾಧಕ್ಕೆ ಬಳಸಲಾಗಿದೆಯೇ?

3) ವಶಪಡಿಸಿಕೊಂಡಿರುವ ವಾಹನದ ಮಾಲೀಕರು ತನ್ನ ಗಮನಕ್ಕೆ ಬಾರದೇ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆಯಡಿ ಮದ್ಯ ಸಾಗಾಣಿಕೆಗೆ ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ಸಾಬೀತು ಪಡಿಸಿದ್ದಾರೆಯೇ? ಅಥವಾ ಇಲ್ಲವೇ?

4) ಜಪ್ತು ಪಡಿಸಲಾಗಿರುವ ವಾಹನ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದನೇ ಮತ್ತು ಎರಡನೇ ಅಂಶಗಳನ್ನು ಗುಣಾತ್ಮಕವಾಗಿ, ಮೂರನೇ ಅಂಶವನ್ನು ನಕರಾತ್ಮಕವಾಗಿ ಹಾಗೂ ನಾಲ್ಕನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ-1:

ಪ್ರಕರಣದ ಸ್ವತಂತ್ರ ಸಾಕ್ಷಿದಾರರಾದ ಶ್ರೀ.ಶ್ರೀಕಾಂತ್, ಬಿನ್: ಶ್ರೀನಿವಾಸ, ಕೊಕ್ಕಡ ಅಂಚೆ, ಕೊಕ್ಕಡ ಗ್ರಾಮ, ಬೆಳ್ತಂಗಡಿ ತಾಲೂಕು ಇವರು ದಿ: 18-3-2009ರಂದು ಪ್ರಾಧಿಕಾರದ ಮುಂದೆ ಸಾಕ್ಷಿ ನೀಡುತ್ತಾ . ಪೊಲೀಸರು ಬೆಳ್ತಂಗಡಿ ತಾಲೂಕು ಅರಸಿನಮಕ್ಕಿ ಶಾಲೆಯ ಹತ್ತಿರ ಆರೋಪಿಯಿಂದ ಮದ್ಯವನ್ನು ಜೀಪು ಸಮೇತ ಅಮಾನತುಪಡಿಸುವಾಗ ತಾನು ಇರಲಿಲ್ಲ., ತನ್ನ ಸಮಕ್ಷಮ ಮಹಜರು ಬರೆದಿಲ್ಲ. ಮಹಜರಿಗೆ ತಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಮಹಜರಿನಲ್ಲಿ ಏನು ಬರೆದಿರುವರು ಎಂದು ನನಗೆ ಗೊತ್ತಿಲ್ಲ, ಪ್ರಕರಣದಲ್ಲಿ ತಿಳಿಸಿರುವ ಮದ್ಯ ಮತ್ತು ವಾಹನವನ್ನು ತನ್ನ ಸಮಕ್ಷಮ

ಅಮಾನತುಪಡಿಸಿಕೊಂಡು ಮಹಜರು ಬರೆದಿರುತ್ತಾರೆ ಎಂದರೆ ಸರಿಯಲ್ಲ, ನಾನು ಮತ್ತು ಆರೋಪಿ ಗೋಪಾಲಕೃಷ್ಣ ಒಂದೇ ಪ್ರದೇಶದ ನಿವಾಸಿಗಳಾದ್ದರಿಂದ ಆರೋಪಿ ಮತ್ತು ವಾಹನದ ಮಾಲೀಕರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತೇನೆ ಎಂದರೆ ಸರಿಯಲ್ಲ ಎಂದು ನುಡಿಯುತ್ತ ಅಭಿಯೋಗದ ಪರ ಪ್ರತಿಕೂಲ ಸಾಕ್ಷ್ಯ ನೀಡಿ ಮಹಜರನ್ನು ಮತ್ತು ಅದರ ಮೇಲಿನ ತನ್ನ ಸಹಿಯನ್ನು ಅನುಕ್ರಮವಾಗಿ ನಿಶಾನೆ ಪಿ-1 ಮತ್ತು ನಿಶಾನೆ ಪಿ-1 ಎ ಎಂದು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ರಕ್ಷಣಾ ಪರ ವಕೀಲರು ಪಾಟೀ ಸವಾಲು ನಡೆಸಿರುವುದಿಲ್ಲ

ಪ್ರಾ.ಸಾ-2:-

ಪ್ರಕರಣದ ತನಿಖಾಧಿಕಾರಿಯಾದ ಶ್ರೀ.ಚಂದ್ರಶೇಖರಯ್ಯ, ಸಹಾಯಕ ಪೊಲೀಸ್ ಉಪ ನಿರೀಕ್ಷಕರು, ಬೆಳ್ತಂಗಡಿ ಪೊಲೀಸ್ ಠಾಣೆ ಇವರು ದಿ:30-3-2010ರಂದು ಪ್ರಾಧಿಕಾರದ ಮುಂದೆ ಸಾಕ್ಷಿ ನೀಡುತ್ತಾ, ದಿನಾಂಕ:11-8-2007ರಂದು ತಾನು ಠಾಣಾ ಪಿ.ಎಸ್.ಐ ಆಗಿ ಪ್ರಭಾರದಲ್ಲಿದ್ದು, ಠಾಣಾ ಮುಖ್ಯ ಅಕರಕ್ಷಕ ಸಂ:629 ಇವರು ಪ್ರಕರಣಕ್ಕೆ ಸಂಬಂಧಪಟ್ಟು ಜಪ್ತುಪಡಿಸಿ ಕೊಳ್ಳಲಾದ ಜೀಪು ನೊಂದಣಿ ಸಂ: ಕೆಎ-20-ಎಂ-3124, ಮದ್ಯ ಹಾಗೂ ಪ್ರಕರಣದ ದಾಖಲಾತಿಗಳನ್ನು ತಾನು ಸ್ವೀಕರಿಸಿಕೊಂಡ ಬಗ್ಗೆ ಸಾಕ್ಷ್ಯ ನೀಡುತ್ತಾ ಸಂಬಂಧಿಸಿದ ದಾಖಲಾತಿಗಳಾದ ಮಹಜರು, ಪ್ರಥಮ ವರ್ತಮಾನ ವರದಿ ಮತ್ತು ಅಧಿಕೃತ ಅಧಿಕಾರಿಗಳಿಗೆ ಬರೆದ ವರದಿಯನ್ನು ಅನುಕ್ರಮವಾಗಿ ನಿಶಾನೆ ಪಿ-2, ನಿಶಾನೆ ಪಿ-3 ಮತ್ತು 4 ಎಂದು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ.

ರಕ್ಷಣಾ ಪರ ವಕೀಲರು ಹಾಜರಾಗದೇ ಇರುವುದರಿಂದ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಗಿರುತ್ತದೆ.

ಪ್ರಾ.ಸಾ-3:-

ಪ್ರಕರಣದ ಸ್ವತಂತ್ರ ಸಾಕ್ಷಿದಾರರಾದ ಶ್ರೀ.ಸುಂದರ ಗೌಡ, ಬಿನ್:ಶಿವಣ್ಣ ಗೌಡ, ಕೃಷಿ , ರೆಕ್ಯಾ ಗ್ರಾಮ, ಬೆಳ್ತಂಗಡಿ ತಾಲೂಕು ಇವರು ದಿ:30-3-2010ರಂದು ಪ್ರಾಧಿಕಾರದ ಮುಂದೆ ಸಾಕ್ಷಿ ನೀಡುತ್ತಾ , ಪ್ರಕರಣದ ದಾಖಲೆಗಳಿಗೆ ತನ್ನ ಸಹಿಯನ್ನು ನೆಲ್ಯಾಡಿಯಲ್ಲಿ ಪಡೆದುಕೊಂಡಿರುತ್ತಾರೆ. ತನ್ನ ಸಮಕ್ಷಮದಲ್ಲಿ ಯಾವುದೇ ವಾಹನ, ಮದ್ಯ ಜಪ್ತಿಪಡಿಸಿ ಕೊಳ್ಳಲಾಗಿರುವುದಿಲ್ಲ. ಮಹಜರಿನಲ್ಲಿ ಏನು ಬರೆದಿದೆ ಎಂದು ಸಹ ಗೊತ್ತಿಲ್ಲ ಎಂದು ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಎ.ಡಿ.ಪಿರವರ ಪಾಟೀ ಸವಾಲಿಗೂ ಕೂಡಾ ಅಭಿಯೋಗದ ಪರ ವಿರೋದ್ಯಾತ್ಮಕ ಹೇಳಿಕೆಗಳನ್ನು ನೀಡಿರುತ್ತಾರೆ. ರಕ್ಷಣಾ ಪರ ವಕೀಲರು ಹಾಜರಾಗದೇ ಇರುವುದರಿಂದ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಗಿರುತ್ತದೆ.

ಪ್ರಾ.ಸಾ-4:-

ಪ್ರಕರಣದ ಫಿರ್ಯಾದುದಾರರಾದ ಶ್ರೀ.ಬಿ.ದೇವದಾಸ ಹೆಚ್.ಸಿ 629, ಪುತ್ತೂರು ನಗರ ಪೊಲೀಸ್ ಠಾಣೆ, ಪುತ್ತೂರು ಇವರು ದಿ:27-7-2010ರಂದು ಪ್ರಾಧಿಕಾರದ ಮುಂದೆ ಸಾಕ್ಷಿ ನೀಡುತ್ತಾ, ತಾನು 2007ರಿಂದ ಉಪ್ಪಿನಂಗಡಿ ಪೊಲೀಸ್ ನೆಲ್ಯಾಡಿ ಚೆಕ್ ಪೋಸ್ಟ್ ನಲ್ಲಿ ಕರ್ತವ್ಯದಲ್ಲಿರುತ್ತೇನೆ. ದಿನಾಂಕ: 10-8-2007ರಂದು ನೆಲ್ಯಾಡಿ ಹೊರಠಾಣೆಯಲ್ಲಿ ಸಿಬ್ಬಂಧಿಗಳೊಂದಿಗೆ ರೌಂಡ್ಸ್ ಕರ್ತವ್ಯ ನಡೆಸುತ್ತಿದ್ದ ಸಂಧರ್ಭದಲ್ಲಿ ಬೆಳ್ತಂಗಡಿ ತಾಲೂಕು ಹತ್ಯಡ್ಕ ಗ್ರಾಮದ ಅರಸಿನಮಕ್ಕಿ ಪೇಟೆಯ ಬಳಿ ಬರುತ್ತಿದ್ದಂತೆ ಅಲ್ಲಿ ಸರ್ಕಾರಿ ಶಾಲೆ ಮೈದಾನ ಎದುರು ಕೊಕ್ಕಡ ಶಿಶಿಲ ರಸ್ತೆಯಲ್ಲಿ KA-20-M-3124 ಜೀಪನ್ನು ಸಂಶಯಗೊಂಡು ಪರಿಶೀಲಿಸಿದಾಗ ಅದರಲ್ಲಿ 10 ರಟ್ಟಿನ ಪೆಟ್ಟಿಗೆಗಳಲ್ಲಿ ವಿವಿಧ ಬ್ರಾಂಡಿನ ಒಟ್ಟು 86.400 ಲೀ ಮದ್ಯ ಕಂಡು ಬಂದಿದ್ದು, ಈ ಮದ್ಯದ ಬಗ್ಗೆ ಯಾವುದೇ ರಹದಾರಿ ದಾಖಲೆಗಳು ಇಲ್ಲದ ಕಾರಣ ಇದು ಅಕ್ರಮ ಮದ್ಯ ಸಾಗಾಟ ಎಂದು ಖಚಿತಪಡಿಸಿಕೊಂಡು ಸದ್ರಿ ಜೀಪಿನಲ್ಲಿ ಇದ್ದ ವ್ಯಕ್ತಿಗಳನ್ನು ವಿಚಾರಿಸಲಾಗಿ ಚಾಲಕ ನಾರಾಯಣ ಗೌಡ ಮತ್ತು ಚಾಲಕನ ಎಡಬದಿಯಲ್ಲಿ ಇದ್ದ ವ್ಯಕ್ತಿ ಮನೋಜ್ ಎಂದು .ಜೀಪಿನ ಹಿಂದುಗಡೆ ಇದ್ದ ವ್ಯಕ್ತಿ ಸುಂದರ ಎಂದು ತಿಳಿಸಿದರು. ಜೀಪಿನಲ್ಲಿದ್ದ ಮದ್ಯದ ಬಗ್ಗೆ ವಿಚಾರಿಸಿದಾಗ ಮದ್ಯವನ್ನು ಚಾಲುಕ್ಯ ವೈನ್ಸ್ ನಿಂದ ಖರೀದಿಸಿದ್ದಾಗಿದ್ದು ಸದ್ರಿ ಮದ್ಯದ ಬಾಟಲಿಗಳನ್ನು ಖರೀದಿಸಿದವರು ಸಮವಸ್ತ್ರ ದಲ್ಲಿದ್ದ ಪೊಲೀಸರನ್ನು ಕಂಡು ಓಡಿಹೋಗಿರುವುದಾಗಿ ತಿಳಿಸಿದರು. ನಂತರ ಸದ್ರಿ 3 ಜನ ಆರೋಪಿತರನ್ನು ವಶಕ್ಕೆ ತೆಗೆದುಕೊಂಡು ಸ್ಥಳದಲ್ಲಿಯೇ ವಿವರವಾದ ಮಹಜರನ್ನು ತಯಾರಿಸಿದ್ದು ಅದು ನಿ.ಪಿ-1, ಆಗಿದ್ದು, ಅದರಲ್ಲಿದ್ದ ನನ್ನ ಸಹಿಯನ್ನು ನಿ.ಪಿ-1ಸಿ, ನಂತರ ರಾಸಾಯನಿಕ ಮಾದರಿಗಳನ್ನು ಮಹಜರು ಸಮೇತ ಮುಂದಿನ ಕ್ರಮದ ಬಗ್ಗೆ ಸ್ವಾಧೀನ ಪಡಿಸಿಕೊಂಡಿರುತ್ತೇನೆ. ಜೀಪಿನ ಚಾಲಕ ನಾರಾಯಣ ಗೌಡನ ವಶದಲ್ಲಿ 500 X 4, 100 X 4, 50X1, 20X10, 10X9 ಮತ್ತು 5x1 ರ ನೋಟುಗಳು ಇದ್ದು ಒಟ್ಟು ರೂ. 2,745/- ಇದ್ದು ಇದು ಮದ್ಯ ಮಾರಾಟದಿಂದ ಬಂದ ಹಣವೆಂದು ತಿಳಿಸಿರುತ್ತಾರೆ. ಮತ್ತೋರ್ವ ಆರೋಪಿತ ಮನೋಜ್‌ನ ಬಳಿ ರೂ. 350/- ಇದ್ದು ಅದು ಕೂಡಾ ಮದ್ಯ ಮರಾಟದಿಂದ ಬಂದ ಹಣವೆಂದು ತಿಳಿಸಿರುತ್ತಾರೆ . ಇಬ್ಬರ ಬಳಿ ಇದ್ದ ಹಣವನ್ನು ವಶಪಡಿಸಿಕೊಂಡು ಮಾಲು ಸಮೇತ ಉಪ್ಪಿನಂಗಡಿ ಠಾಣೆಗೆ ಬಂದು ಠಾಣಾ ಪ್ರಭಾರ ಉಪ ನಿರೀಕ್ಷಕರಿಗೆ ಫಿರ್ಯಾದು ನೀಡಿ ಸದ್ರಿ ಫಿರ್ಯಾದನ್ನು ಈಗಾಗಲೇ ನಿಶಾನೆ ಪಿ-2 ಎಂದು. ಅದರ ಮೇಲಿನ ಸಹಿಯನ್ನು ನಿಶಾನೆ ಪಿ-2 ಬಿ ಎಂದು ಗುರುತಿಸಿರುತ್ತೇನೆ. ಆರೋಪಿ ಮತ್ತು ಸೊತ್ತುಗಳನ್ನು ತೋರಿಸಿದರೇ ಈಗ ಗುರುತಿಸಬಲ್ಲೆ. ಉಪ್ಪಿನಂಗಡಿ ಪೊ.ಠಾಣೆಗೆ ಮಾಲು ಮತ್ತು ಆರೋಪಿಗಳನ್ನು ಹಸ್ತಾಂತರಿಸಿರುತ್ತೇನೆ.

ರಕ್ಷಣಾ ಪರ ವಕೀಲರು ಹಾಜರಾಗದೇ ಇರುವುದರಿಂದ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಗಿರುತ್ತದೆ.

ಪ್ರಾ.ಸಾ-5:-

ಪ್ರಕರಣದ ತನಿಖಾಧಿಕಾರಿಯಾದ ಶ್ರೀಮತಿ.ಸೌಮ್ಯಲತಾ, ಅಬಕಾರಿ ನಿರೀಕ್ಷಕರು, ಉಡುಪಿ ವಲಯ ಇವರು ದಿ:27-7-2010ರಂದು ಪ್ರಾಧಿಕಾರದ ಮುಂದೆ ಸಾಕ್ಷಿ ನೀಡುತ್ತಾ, ತಾನು 2005 ರಿಂದ 2009 ರವರೆಗೆ ಅಬಕಾರಿ ಉಪ ನಿರೀಕ್ಷಕರಾಗಿ ಜಾರಿ ಮತ್ತು ತನಿಖೆ ಬೆಳ್ತಂಗಡಿ ತಾಲೂಕು ಇಲ್ಲಿ ಕರ್ತವ್ಯ

ನಿರ್ವಹಿಸುತ್ತಿದ್ದೆ. ದಿ:13-9-2007ರಂದು ಅಬಕಾರಿ ·ಅಧೀಕ್ಷಕರು, ಇಐಬಿ ಇವರ ಅದೇಶ ಸಂ:ಎಂಎನ್‌ಜಿ:ಇಐಬಿ:9:07-08 ದಿ:10-9-07 ರಂತೆ ಸದ್ರಿ ಮೊಕದ್ದಮೆಯಲ್ಲಿ ಜಪ್ತು ಮಾಡಿದ KA-20-M-3124 ನೊಂದಣಿ ಸಂಖ್ಯೆ ಇರುವ ಜೀಪು, ಮದ್ಯ ಹಾಗೂ ದಾಖಲಾತಿಗಳನ್ನು ತಾನು ಸ್ವೀಕರಿಸಿಕೊಂಡ ಬಗ್ಗೆ ಸಾಕ್ಷ್ಯ ನೀಡುತ್ತಾ ಸಂಬಂಧಿಸಿದ ದಾಖಲಾತಿಗಳಾದ ವಾಹನದ ಬಿ ವಹಿ ಮಾಹಿತಿ ಕೋರಿ ದಿ:14-9-07ರಂದು ಪ್ರಾ.ಸಾ.ಅ ಉಡುಪಿ ಜಿಲ್ಲೆ ಇವರಿಗೆ ಪತ್ರ ಬರೆದು ದಿ:11-10-2007 ರಂದು ಬಿ ವರದಿಯನ್ನು ಪಡೆದಿರುತ್ತೇನೆ. ಅದನ್ನು ನೋಡಿ ನಿಶಾನೆಪಿ-5 ಎಂದು ಗುರುತಿಸಿ ರುತ್ತೇನೆ. ದಿ:3-12-2007ರಂದು ಉಪ್ಪಿನಂಗಡಿ ಠಾಣೆಯಿಂದ ಪ್ರಕರಣಕ್ಕೆ ಸಂಬಂಧಿಸಿ ರಾಸಾಯನಿಕ ವಿಶ್ಲೇಷಣಾ ವರದಿಯನ್ನು ಸ್ವೀಕರಿಸಿರುತ್ತೇನೆ .ಅದನ್ನು ನಿಶಾನೆಪಿ-6 ಎಂದು ಗುರುತಿಸಿರುತ್ತೇನೆ, ವಾಹನದ ಮಾಲೀಕರಿಗೆ ಕಾರಣ ಕೇಳಿ ನೋಟಿಸು ನೀಡಿರುತ್ತೇನೆ. ದಿ:3-12-2007ರಂದು ಸೊತ್ತುಗಳನ್ನು ಮುಟ್ಟುಗೋಲು ಹಾಕಿಕೊಂಡು ವಿಲೇವಾರಿ ಮಾಡಲು ಅಧಿಕೃತ ಅಧಿಕಾರಿಗಳಿಗೆ ಸಲ್ಲಿಸಿದ ವರದಿಯನ್ನು ನೋಡಿ ಅದನ್ನು ನಿಶಾನೆ ಪಿ-7 ಎಂದು ಅದರ ಮೇಲಿನ ಸಹಿ ನಿಶಾನೆ ಪಿ-7ಎ ಎಂದು, ವಾಹನದ ಮೌಲ್ಯ ದೃಡೀಕರಣ ಪತ್ರಕ್ಕಾಗಿ ಪ್ರಾ.ಸಾ.ಅ ಪುತ್ತೂರು ಇವರಿಗೆ ಪತ್ರ ಬರೆದು ದಿ:21-2-2008ರಂದು ಪಡೆದ ಮೌಲ್ಯ ಮಾಪನ ವರದಿಯನ್ನು ನಿಶಾನೆ ಪಿ-8 ಎಂದು ಗುರುತಿಸಿ , ಅಧಿಕೃತ ಅದಿಕಾರಿಗಳ ದಿ:26-3-2008ರ ಮಧ್ಯಂತರ ಅದೇಶದನ್ವಯ ವಾಹನವನ್ನು ಮಾಲೀಕರಾದ ನಾರಾಯಣ ಗೌಡ ಇವರಿಗೆ ದಿ:17-6-2008 ರಂದು ಬಿಡುಗಡೆ ಮಾಡಿರುತ್ತೇನೆ. ದಿ:30-6-2009ರಂದು ಮುಟ್ಟುಗೋಲು ಹಾಕಿಕೊಳ್ಳಲಾದ ಮದ್ಯವನ್ನು ಅಬಕಾರಿ ಉಪ ಅಧೀಕ್ಷಕರು, ಬಂಟ್ವಾಳ ಉಪ ವಿಭಾಗದವರ ಸಮಕ್ಷಮ ನಾಶಪಡಿಸಿ ಖಾಲಿ ಸೀಸೆಗಳ ಮೌಲ್ಯವನ್ನು ಎಸ್.ಬಿ.ಐ ಬೆಳ್ತಂಗಡಿ ಶಾಖೆಯಲ್ಲಿ ಚಲನ್ ಮೂಲಕ ಪಾವತಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

ರಕ್ಷಣಾ ಪರ ವಕೀಲರು ಹಾಜರಾಗದೇ ಇರುವುದರಿಂದ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಗಿರುತ್ತದೆ.

ಡಿಡಬ್ಲ್ಯೂ-1

ಶ್ರೀ.ನಾರಾಯಣ ಗೌಡ, ಬಿನ್:ಬೇಬಿ ಗೌಡ, ಶಿಬಾಜೆ ,ಬೆಳ್ತಂಗಡಿ ತಾಲೂಕು ಇವರು ರಕ್ಷಣಾ ಪರ ದಿ:10-3-2011ರಂದು ಸಾಕ್ಷ್ಯ ನೀಡುತ್ತಾ , ತಾನು ಮಹೀಂದ್ರ ಜೀಪು ಸಂ:KA-20-M-3124 ಇದರ ಮಾಲೀಕನಾಗಿದ್ದೇನೆ. ದಿ:10-8-2007ರಂದು ತಾನು ಇತರ 9 ಜನರೊಂದಿಗೆ ರಾತ್ರಿ 8-00 ಗಂಟೆಗೆ ಅರಸಿನ ಮಕ್ಕಿ ಎಂಜಿರಾದ ಚಾಲುಕ್ಯ ವೈನ್ ಶಾಪ್‌ನಿಂದ ದಾಖಲೆಗಳೊಂದಿಗೆ ಖರೀದಿಸಿದ ತಲಾ 180 ಎಂ ಎಲ್ ನ 24 ಬಾಟಲಿಗಳನ್ನು ಸಾಗಿಸುತ್ತಿದ್ದ ಸಮಯದಲ್ಲಿ ಮದ್ಯಕ್ಕೆ ಬೇಕಾದ ದಾಖಲೆಗಳೂ ಇತ್ತು ಹಾಗೂ ಸದ್ರಿ ದಾಖಲೆಗಳ ಜೆರಾಕ್ಸ್ ಪ್ರತಿಗಳನ್ನು ಹಾಜರುಪಡಿಸಲಾಗಿದ್ದು ಅದನ್ನು ನಿಶಾನೆ ಡಿ-1 ರಿಂದ 10ರವರೆಗೆ ಗುರುತಿಸಿರುತ್ತಾರೆ. ಉಪ್ಪಿನಂಗಡಿ ಪೊಲೀಸರು ನಮ್ಮ ಜೀಪನ್ನು ತಡೆದು ನಿಲ್ಲಿಸಿ ವಿಚಾರಣೆ ಮಾಡುವ ಸಂದರ್ಭದಲ್ಲಿ ಇತರೆ 7 ಜನರು ತಪ್ಪಿಸಿಕೊಂಡಿದ್ದು ನಾವು ಮೂವರು ಉಳಿದು ಕೊಂಡೆವು . ವಿಚಾರಣೆ ಸಂದರ್ಭದಲ್ಲಿ ಜೀಪಿನಲ್ಲಿ ಸಾಗಾಟ ಮಾಡುತ್ತಿದ್ದ ಬಗ್ಗೆ ಮೇಲಿನಂತೆ ತೋರಿಸಿರುವ ದಾಖಲೆಗಳ ಪೈಕಿ ಪೊಲೀಸರು ನಮ್ಮಿಂದ 5 ಬಿಲ್ಲುಗಳನ್ನು ಮಾತ್ರ ಪಡೆದು ನಮ್ಮನ್ನು ಠಾಣೆಗೆ ಕರೆದುಕೊಂಡು ಹೋಗಿ ಮೊಕದ್ದಮೆ ದಾಖಲಿಸಿಕೊಂಡರು. ನಾವು ಗೌಡ ಜನಾಂಗದವರಾಗಿದ್ದು ಆಟಿ ಅಮ್ಯಾವಾಸೆ ಸಮಾರಂಭದ ಸಂದರ್ಭದಲ್ಲಿ ದೇವರಿಗೆ ನೈವೇಧ್ಯ ಮಾಡಲು ಮದ್ಯವನ್ನು ಬಳಿಸಿ ಅದನ್ನು ಸೇರಿದವರಿಗೆ ಪ್ರಸಾದವಾಗಿ ಹಂಚುವ ಸಂಪ್ರದಾಯವಿರುವುದರಿಂದ ಸದ್ರಿ ಮದ್ಯವನ್ನು ಸಾಗಾಟ ಮಾಡುತ್ತಿದ್ದೆವು. ಸದ್ರಿ ಮದ್ಯವನ್ನು ನಾವು ಕಾನೂನು ರೀತಿಯಲ್ಲಿ ಸಾಗಾಟ ಮಾಡುತ್ತಿದ್ದೆವು. ನಾನೊಬ್ಬ ಕೃಷಿಕನಾಗಿದ್ದು ಮನೆಯಲ್ಲಿ ಪ್ರಾಯಸ್ಥ ತಂದೆತಾಯಿಯವರು ಇದ್ದು ಜೀವನಕ್ಕೆ ಸದ್ರಿ ವಾಹನವನ್ನೇ ಅವಲಂಭಿಸಿರುತ್ತೇನೆ. ಹಾಗೂ ಈಗ ಪಕ್ಷಪಾತ ರೋಗದಿಂದ ಬಳಲುತ್ತಿದ್ದು ಯಾವುದೇ ಕೆಲಸ ಕಾರ್ಯಗಳನ್ನು ಮಾಡಲು ಅಸಮರ್ಥನಾಗಿದ್ದು, ಬೇರೆಯವರಿಗೆ ಅವಲಂಬಿತನಾಗಿರುತ್ತೇನೆ. ನನ್ನ ಅನಾರೋಗ್ಯದ ಬಗ್ಗೆ ವೈಧ್ಯಕೀಯ ದೃಡೀಕರಣ ಪತ್ರ ಮತ್ತು ಅಂಗವಿಕಲರ ಗುರುತಿನ ಚೀಟಿಯನ್ನು ಪುರಾವೆಯನ್ನಾಗಿ ಹಾಜರುಪಡಿಸುತ್ತಿದ್ದು ಇದನ್ನು ನಿಶಾನೆ ಡಿ-11 ಮತ್ತು ನಿಶಾನೆ ಡಿ-12 ಎಂದು ಗುರುತಿಸಿರುತ್ತಾರೆ. ನಾನು ಯಾವುದೇ ತಪ್ಪು ಮಾಡಿರುವುದಿಲ್ಲ ಎಂದು ರಕ್ಷಣಾ ಸಾಕ್ಷಿ ನೀಡುತ್ತಾ ನನ್ನ ಜೀಪಿನ ಮುಟ್ಟುಗೋಲು ಪ್ರಕ್ರಿಯೆಯನ್ನು ಕೈಬಿಟ್ಟು ಅಂತಿಮವಾಗಿ ಬಿಡುಗಡೆ ಮಾಡಿಕೊಡಬೇಕಾಗಿ ಕೋರುತ್ತೇನೆ.

ಪಾಟೀ ಸವಾಲು:-

ರಕ್ಷಣಾ ಸಾಕ್ಷಿದಾರರನ್ನು ಅಭಿಯೋಗ ನಿರ್ದೇಶಕರು ಪಾಟೀ ಸವಾಲು ನಡೆಸಲಾಗಿ ತಾನು ಆ ದಿವಸ 10 ರಟ್ಟಿನ ಬಾಕ್ಸ್‌ನಲ್ಲಿ ಮದ್ಯವನ್ನು ಸಾಗಾಟ ಮಾಡುತ್ತಿದ್ದೆ, ಹಾಗೂ ನನ್ನ ಬಳಿ ಇದ್ದ ರೂ.2745/- ಮತ್ತು ಮನೋಜ್ ನ ಬಳಿ ಇದ್ದ ಸ್ವಲ್ಪ ಹಣವನ್ನೂ ಪೊಲೀಸ್ ರು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಪೊಲೀಸರು ನನ್ನಿಂದ ಮದ್ಯ, ಹಣ ಮತ್ತು ಜೀಪನ್ನು ವಶಪಡಿಸಿಕೊಂಡಾಗ ನನ್ನಲ್ಲಿ ಯಾವುದೇ ದ್ವೇಷ ಇರಲಿಲ್ಲ. ಪ್ರಕರಣ ಸಂದರ್ಭದಲ್ಲಿ ನಾನೇ ಜೀಪಿನ ಚಾಲಕನಾಗಿದೆ. ನಾನು ನಿಶಾನೆ ಡಿ-1ರಿಂದ 10ರ ದಾಖಲೆಗಳನ್ನು ಈ ಕೇಸಿಗೆಂದೇ ಸೃಷ್ಠಿದೆ ಎಂದರೆ ಸರಿಯಲ್ಲ, ನಾನು ದಿ:11-8-2007ರಂದು ಬೆಳಿಗ್ಗೆ 6-00 ಗಂಟೆ ಅರಸಿನ ಮಕ್ಕಿ ಸರ್ಕಾರಿ ಶಾಲಾ ವಠಾರ ರಸ್ತೆಯಲ್ಲಿ ನನ್ನ ಜೀಪನ್ನು ಅಕ್ರಮವಾಗಿ ಮದ್ಯ ಸಾಗಾಟಕ್ಕೆ ಬಳಿಸಿಕೊಂಡಿದ್ದೇನೆ ಎಂದರೆ ಹಾಗೂ ಜೀಪನ್ನು ವಾಪಾಸ್ಸು ಪಡೆಯಲು ನಾನು ಸುಳ್ಳು ಸಾಧನೆ ಮಾಡುತ್ತೇನೆ ಎಂದರೆ ಸರಿಯಲ್ಲ ಎಂದು ಪಾಟೀ ಸವಾಲಿಗೆ ಉತ್ತರಿಸುತ್ತಾರೆ.

ರಕ್ಷಣಾ ಪರ ವಕೀಲರ ವಾದ ಮಂಡನೆಗಾಗಿ ದಿ:7-4-2011. ದಿ:28-4-2011. 5-5-2011 ಮತ್ತು 14-7-2011ರಂತೆ ನಾಲ್ಕು ಬಾರಿ ಕಾಲಾವಕಾಶ ನೀಡಲಾಗಿ ರಕ್ಷಣಾ ಪರ ವಕೀಲರು ಪ್ರಾಧಿಕಾರದಲ್ಲಿ ಹಾಜರಾಗದೇ ಪ್ರಕರಣವನ್ನು ಮುಂದುವರಿಸುವಂತೆ ದಿ: 27-7-2011ರಂದು Advancement Application ಸಲ್ಲಿಸಿರುವ ಮೇರೆಗೆ ಕೋರಿಕೆ ಮನ್ನಿಸಲಾಗಿ ದಿ:4-8-2011ರಂದು ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ವಾದವನ್ನು ಮಂಡಿಸಿ ಆರೋಪವನ್ನು ಅಲ್ಲಗಳೆಯುತ್ತಾ, ಪ್ರಕರಣ

ವಾಹನದಲ್ಲಿ ಒಟ್ಟು 10 ವ್ಯಕ್ತಿಗಳಿದ್ದು ಚಾಲಕನನ್ನು ಮಾತ್ರ ಅರೋಪಿಯನ್ನಾಗಿ ಮಾಡಿರುವುದು ಸಮಂಜಸವಲ್ಲ, ತಕ್ಷೀರು ಸಮಯದಲ್ಲಿ ಅಕ್ರಮ ಮದ್ಯ ಮಾರಾಟವಾದ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ, ಸದ್ರಿ ಮದ್ಯವನ್ನು ಚಾಲುಕ್ಯ ವೈನ್ಸ್ ಎಂಬ ಅಧಿಕೃತ ಮದ್ಯದಂಗಡಿಯಿಂದ ತರಲಾಗಿತ್ತು, ತಕ್ಷೀರು ಪತ್ತೆ ಸಮಯವು ಬೆಳಿಗ್ಗೆ 6-00 ಗಂಟೆ ಯಾಗಿದ್ದು ಸದ್ರಿ ಸಮಯವು ಮದ್ಯ ಮಾರಾಟ /ಬೇಡಿಕೆ ಇರುವ ಸಮಯವಾಗಿರುವುದಿಲ್ಲ, ಮದ್ಯ ಸಾಗಾಣಿಕೆಯ ಬಗ್ಗೆ ಅಧಿಕೃತವಾಗಿ 10 ಬಿಲ್ಲುಗಳನ್ನು ಹಾಜರುಪಡಿಸಲಾಗಿದ್ದರೂ ಅದನ್ನು ಪರಿಗಣಿಸಲಾಗಿರುವುದಿಲ್ಲ, ಆಟಿ ಅಮಾವಾಸ್ಯೆಯಂತಹ ಹಬ್ಬದ ದಿವಸದಲ್ಲಿ ದೇವರಿಗೆ ನೈವೇದ್ಯಕ್ಕಾಗಿ ಮದ್ಯವನ್ನು ಬಳಸುವುದು ಸ್ಥಳೀಯ ಜನರ ಸಂಪ್ರದಾಯವಾಗಿದ್ದು ವಾಹನದಲ್ಲಿದ್ದ 10 ಜನರು ಸದ್ರಿ ಮದ್ಯವನ್ನು ಸಮಾನ ಪ್ರಮಾಣದಲ್ಲಿ ಹೊಂದಿರುತ್ತಾರೆ, ಖರೀದಿಸಿರುವ ಮದ್ಯದ ಪ್ರಮಾಣ, ಪತ್ತೆಯಾದ ಪ್ರಮಾಣ ಹಾಗೂ ಪತ್ತೆಯಾದ ಮೊತ್ತ ಇವುಗಳು ಒಂದಕ್ಕೊಂದು ತಾಳೆಯಾಗದೇ ಇರುವುದರಿಂದ ಇದೊಂದು ಸುಳ್ಳು ಪ್ರಕರಣ ಎಂದೂ, ಪ್ರಕರಣದಲ್ಲಿ ಇಲಾಖಾ ಸಾಕ್ಷಿಗಳನ್ನು ಹೊರತುಪಡಿಸಿ ಸ್ವತಂತ್ರ ಸಾಕ್ಷಿದಾರರನ್ನು ಗುರುತಿಸಲಾಗಿರುವುದಿಲ್ಲ, ಸಾಕ್ಷಿಗಳ ಹೇಳಿಕೆಗಳಲ್ಲಿ ಸಾಮ್ಯತೆ ಇಲ್ಲದೇ ವ್ಯತಿರಿಕ್ತವಾಗಿರುತ್ತದೆ ಎಂದು ವಾದಿಸುತ್ತಾ ಪ್ರಕರಣವನ್ನು ಕೈಬಿಡಬೇಕೆಂದು ವಾದ ಮಂಡಿಸಿರುತ್ತಾರೆ. ಸಹಾಯಕ ಅಭಿಯೋಗ ನಿರ್ದೇಶಕರು ಪ್ರತಿವಾದ ಮಂಡಿಸುತ್ತ ಪ್ರಕರಣವು ಯಾವುದೇ ಕ್ರಿಮಿನಲ್ ಪ್ರಕರಣವಾಗಿರದೇ , ಮುಟ್ಟುಗೋಲು ನಡವಳಿಯಾಗಿರುವುದರಿಂದ ಅಭಿಯೋಗದ ಪರ ವಿಚಾರಿಸಲಾದ ಇಲಾಖಾ ಸಾಕ್ಷಿಗಳ ಸಾಕ್ಷ್ಯದಲ್ಲಿ ಕೆಲವೊಂದು ಸಣ್ಣಪುಟ್ಟ ವ್ಯತಿರೀಕ್ತತೆಗಳು ಕಂಡುಬಂದರೂ ಅದು ಅಭಿಯೋಜನೆಗೆ ಮಾರಕ ವಾಗುವುದಿಲ್ಲ ಹಾಗೂ ವ್ಯತಿರೀಕ್ತತೆಗಳು ಸಾಕ್ಷಿಗಳ ಸಾಕ್ಷ್ಯದಲ್ಲಿ ಸರ್ವೆ ಸಾಮಾನ್ಯವಾಗಿರುತ್ತದೆ. ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 3ರಡಿ ಮೌಖಿಕ ಸಾಕ್ಷ್ಯವನ್ನು ವಿಚಾರಣೆ ಮಾಡಿದಾಗ ಸಾಕ್ಷ್ಯವು ಗುಣಾತ್ಮಕವಾಗಿರಬೇಕೇ ಹೊರತು ಸಾಕ್ಷ್ಯದ ಒಟ್ಟು ಪ್ರಮಾಣವನ್ನು ಗಣನೆಗೆ ತೆಗೆದುಕೊಳ್ಳಲಾರದು. ಯಾವುದೇ ಒಂದು ಸಂಗತಿಯನ್ನು ಕಾನೂನಡಿ ಸಾಬೀತು ಪಡಿಸಬೇಕಾದರೆ ಒಂದು 'ನಿರ್ಧಿಷ್ಟ ಪ್ರಮಾಣದ ಸಾಕ್ಷಿಗಳು ಬೇಕು ಎಂಬಂತೆ ಕಾನೂನು ಅಂಶ ಇರುವುದಿಲ್ಲ.ಈ ಕಾನೂನಿನ ಅಂಶವನ್ನು ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 134ರಡಿ ಸ್ಪಷ್ಟ ಪಡಿಸಲಾಗಿರುವುದು. ಅಭಿಯೋಗದ ಪರ ವಿಚಾರಿಸಲಾದ ಇಲಾಖಾ ಸಾಕ್ಷಿಗಳು ಪ್ರಕರಣವನ್ನು ಪತ್ತೆಹಚ್ಚಿ ಮುಂದಿನ ತನಿಖೆ ನಡೆಸಿ ಅರೋಪಿ/ವಾಹನದ ಮಾಲೀಕರು ತನ್ನ ವಾಹನವನ್ನು ಈ ಕೃತ್ಯದಲ್ಲಿ ನಿಯೋಜಿಸಿರುವುದು ಅಕ್ರಮವಾಗಿದ್ದು ಯಾವುದೇ ಮುಂಜಾಗತ್ರೆ ಯನ್ನು ತೆಗೆದುಕೊಳ್ಳದೇ ಇರುವುದು ಸಾಭೀತಾಗಿರುತ್ತದೆ. ಈ ಬಗ್ಗೆ ಇಲಾಖಾ ಸಾಕ್ಷಿಗಳು ಬಹಳ ಸ್ಪಷ್ಟವಾಗಿ ಹಾಗೂ ತಮ್ಮ ಕರ್ತವ್ಯದ ನೆಲೆಯಲ್ಲಿ ಪ್ರಮಾಣಿಕವಾಗಿ ಸಾಕ್ಷ್ಯ ನೀಡಿರುವುದು ಹಾಗೂ ಸ್ವತಂತ್ರ ಸಾಕ್ಷಿದಾರರನ್ನು ಪ್ರಕರಣದಲ್ಲಿ ಒಳಪಡಿಸಲಾದರೂ ಸದ್ರಿಯವರ ಸಾಕ್ಷಿಗಳು ಅಭಿಯೋಜನ ಪರ ಪೂರಕವಾಗಬಹುದೆಂದು ಭಾವಿಸಲು ಬರುವುದಿಲ್ಲ. ಹಾಗೂ ಈ ಅಂಶದಿಂದ ಯಾವುದೇ ರೀತಿಯಲ್ಲಿ ಸಾಕ್ಷ್ಯವು ಮುಟ್ಟುಗೋಲು ನಡವಳಿಗೆ ಭಾಧಕ/ಪೂರಕವಾಗುವುದಿಲ್ಲ. ಅಲ್ಲದೇ ರಕ್ಷಣಾ ಪರ ವಕೀಲರು ಹಾಜರು ಪಡಿಸಿರುವ ನಿಶಾನೆ ಡಿ -1ರಿಂದ 10ರವರೆಗಿನ ದಾಖಲಾತಿಗಳನ್ನು ಪರಿಶೀಲಿಸಲಾಗಿ ಪ್ರತಿ ಬಿಲ್ಲಿನಲ್ಲಿ 180 ಎಂಎಲ್‌ನ 24 ಬಾಟಲಿಗಳಂತೆ ಒಟ್ಟು 10 ಬಿಲ್ಲುಗಳಲ್ಲಿ 43.200 ಲೀಟರು ಮದ್ಯ ಖರೀದಿಸಿರುವ ಬಗ್ಗೆ ದಾಖಲೆ ಇದ್ದು, ಪ್ರಕರಣದಲ್ಲಿ ಒಟ್ಟು 86.400ಲೀ ಮದ್ಯ ಜಪ್ತಾಗಿರುವುದರಿಂದ ರಕ್ಷಣಾ ಪರ ಒದಗಿಸಲಾದ ದಾಖಲೆಗಳು ಕೃತಕವಾಗಿ ಸೃಷ್ಟಿಸಿದ ದಾಖಲೆಗಳು ಎಂಬುದು ಸಾಭೀತಾಗಿರುತ್ತದೆ. ರಕ್ಷಣಾ ದಾಖಲಾತಿಗಳೊಂದಿಗೆ ವಾಹನದ ಮಾಲೀಕರು ವಿಚಾರಣಾ ವೇಳೆಯಲ್ಲಿ ತನ್ನ ರಕ್ಷಣಾ ಸಾಕ್ಷ್ಯ ಹೇಳಿಕೊಂಡಿದ್ದರೂ ವಾಹನವನ್ನು ಅಕ್ರಮ ಸಾಗಾಣಿಕೆಗೆ ಬಳಸಲಾಗಿಲ್ಲ ಎಂಬ ಆಂಶದ ಬಗ್ಗೆ ಸೂಕ್ತ ಪುರಾವೆ ಗಳನ್ನು ಒದಗಿಸಿ ತನ್ನ ನಿರಾಪರಾಧಿತ್ವವನ್ನು ಸಾಭೀತುಪಡಿಸಿರುವುದಿಲ್ಲ. ಇದು ಕರ್ನಾಟಕ ಅಬಕಾರಿ ಕಾಯಿದೆ ಕಲಂ 43 ಬಿ ಯಲ್ಲಿ ಹೇಳಿದ ರುಜುವಾತಿನ ಭಾರವನ್ನು ವಾಹನದ ಮಾಲೀಕರು ನಿಭಾಯಿಸುವಲ್ಲಿ ವಿಫಲರಾಗಿರುವುದು ಸಾಭೀತುಪಡಿಸುತ್ತದೆ. ವಾಹನ ಶೋಧನೆ ಸಂದರ್ಭದಲ್ಲಿ ಕಲಂ 53ರಡಿ ಶೋಧನಾ ವಾರೆಂಟನ್ನು ಪಡೆಯದೇ ಇರುವುದು ಅಭಿಯೋಗದ ವಿಫಲತೆ ಎಂಬುದಾಗಿ ಪರಿಗಣಿಸಲಾಗದು. ಏಕೆಂದರೆ ಕಲಂ 54 ರಡಿ ರೆಕಾರ್ಡ್ ಆಫ್ ರೀಜನ್ಸ್‌ನ್ನು ದಾಖಲಿಸದೇ ಇರುವುದು ಕಾನೂನಡಿ ಅಜ್ಞಾಪಕವಾಗಿರುವುದಿಲ್ಲ ಎಂಬುದನ್ನು ಈ ಕೆಳಕಂಡಂತೆ ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪನ್ನು ಆಧರಿಸಿ ವ್ಯಾಖ್ಯಾನಿಸಬೇಕಾಗಿರುತ್ತದೆ. " ಶೋಧನಾ ವಾರೆಂಟ್‌ಗಳನ್ನು ಪಡಯಲು ವಿಫಲರಾದ ಬಗ್ಗೆ ಕಾರಣಗಳನ್ನು ದಾಖಲಿಸದೇ ಇರುವುದು ಕೇವಲ ಕಾನೂನಿನ ಪ್ರಕ್ರಿಯೆಯಲ್ಲಿ ಒಂದು ಅನಿಯಮತೆಯಾಗಿದ್ದು ಕೇವಲ ಅದೇ ಒಂದು ಕಾರಣದಡಿ ಇಡೀ ಶೋಧನೆಯನ್ನು ಅಥವಾ ಮುಟ್ಟುಗೋಲು ವ್ಯವಹರಣೆಯನ್ನು ಅಥವಾ ಪ್ರಾಧಿಕಾರವು ಮಾಡಿದ ಅಂತಿಮ ಮುಟ್ಟು ಗೋಲು ಆದೇಶವನ್ನು ಕಾನೂನಿನಡಿ ಅಸಿಂಧುವೆಂದು ಘೋಷಿಸಲು ಬರುವುದಿಲ್ಲ. ಶೋಧನೆಯನ್ನು ಮಾಡುವ ಮೊದಲು ವಾರೆಂಟ್ ಪಡೆದು ಕೊಳ್ಳದೇ ಇರುವ ಬಗ್ಗೆ ಅಥವಾ ವಾರೆಂಟ್ ಪಡೆಯಲು ವಿಫಲರಾದ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಕಾರಣಗಳನ್ನು ದಾಖಲಿಸದೇ ಇರುವುದು ಅರೋಪಿಯ ಹಕ್ಕಿಗೆ ಅಥವಾ ಆತನ ಹಿತಾಸಕ್ತಿಗೆ ದಕ್ಕೆಯನ್ನು ಉಂಟು ಮಾಡುತ್ತದೆ ಎಂಬುದಾಗಿ ಅರೋಪಿ ತೋರಿಸಿ ಕೊಡಬೇಕಾಗುತ್ತದೆ. ಶೋಧನಾ ವಾರೆಂಟನ್ನು ಪಡೆಯಲೇ ಬೇಕು ಎಂಬುದು ಖಡ್ಡಾಯವಾಗಿರುವುದಿಲ್ಲ ಅಥವಾ ಅಜ್ಞಾಪಕವಾಗಿರುವುದಿಲ್ಲ. ಶೋಧನಾ ವಾರೆಂಟನ್ನು ಪಡೆದುಕೊಳ್ಳಲು ವಿಫಲರಾದ ಬಗ್ಗೆ ಕಾರಣಗಳನ್ನು ನಮೂದಿಸದೇ ಇರುವುದು ಇಡೀ ಶೋಧನೆ ಮತ್ತು ಅದರ ನಂತರದ ಮುಟ್ಟುಗೋಲು ವ್ಯವಹರಣೆಯನ್ನು ಅಥವಾ ಅಂತಿಮ ಮುಟ್ಟುಗೋಲು ಅದೇಶ ಅಸಿಂಧುಗೊಳಿಸುವುದಿಲ್ಲ. ಈ ರೀತಿ ಅಸಿಂಧುಗೊಳಿಸಿದರೇ ಅಕ್ರಮ ಮದ್ಯ ವ್ಯವಹಾರಗಳು ಹಾಡುಹಗಲಲ್ಲೇ ಎಲ್ಲರ ಕಣ್ಣೆದುರಿನಲ್ಲಿಯೇ ನಡೆಯಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಹಾಗೂ ಕಾನೂನನ್ನು ಅಪರಾಧಿಗಳಿಗೆ ಸಹಾಯವಾಗುವ ರೀತಿಯಲ್ಲಿ ಅರ್ಥಮಾಡಿಕೊಂಡಲ್ಲಿ ಇನ್ನೂ ಹೆಚ್ಚಿನ ಅಪರಾಧಗಳು ಆಗುವ ಸಂಭಾವ್ಯತೆಗಳು ಜಾಸ್ತಿಯಾಗಲಿದೆ. ಆದುದರಿಂದ ಕರ್ನಾಟಕ ಅಬಕಾರಿ ಕಾಯಿದೆ ಕಲಂ 54 ರ ಹಿಂದಿನ ಉದ್ದೇಶವನ್ನು ಅರಿತು ವ್ಯಾಖ್ಯಾನಿಸಬೇಕಾಗಿರುತ್ತದೆ. ಈ ಎಲ್ಲಾ ಅಂಶಗಳನ್ನು ಗೌರವಾನ್ವಿತ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠ ನೀಡಿದ ತೀರ್ಪು ಸಂ: ILR: 2004: KAR ರ ಪುಟ ಸಂ:527ರಲ್ಲಿ ವಿವರವಾಗಿ ಪ್ರಸ್ತಾಪಿಸಲಾಗಿದೆ."ಹಾಗೂ ಪ್ರಕರಣದಲ್ಲಿ ಸ್ವತಂತ್ರ ಸಾಕ್ಷಿಗಳ ಹೇಳಿಕೆಗಳು ಸಿಂಧು ಎಂದು ಪರಿಗಣಿಸಲು ಸಾಧ್ಯವಾಗುವುದಿಲ್ಲ. ವಾಹನದಲ್ಲಿ ತನ್ನ ತಿಳುವಳಿಕೆಗೆ ಬಾರದೇ ಮದ್ಯ ಸಾಗಾಟ ವಾಗಿರುವುದು ಎಂಬ ಆಂಶವನ್ನು ವಾಹನದ ಮಾಲೀಕರು ಸ್ಪಷ್ಟ ಪಡಿಸದೇ ಇರುವುದು ಹಾಗೂ ಇಲಾಖಾ ಅಧಿಕಾರಿಗಳು ಸುಳ್ಳು ಪ್ರಕರಣವನ್ನು ದಾಖಲಿಸಿ ಕೊಂಡಿರುವುದು ಎಂದು ರಕ್ಷಣಾ ಹೇಳಿಕೆಗಳನ್ನು ನೀಡಿರುವ ರಾದರೂ ಈ ಬಗ್ಗೆ ಪುರಾವೆಗಳನ್ನು ಒದಗಿಸಿ ರುಜುವಾತು ಪಡಿಸಲು ವಿಫಲರಾಗಿರುತ್ತಾರೆ. ಕಾರಣ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಂತೆ ತಮ್ಮ ಪ್ರತಿವಾದವನ್ನು ಮಂಡಿಸಿರುತ್ತಾರೆ.

ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ಮದ್ಯದ ಮಾದರಿಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಲಾಗಿದ್ದು, ಕರ್ನಾಟಕ ಸರ್ಕಾರದ ಸಹಾಯಕ ರಾಸಾಯನಿಕ ವಿಶ್ಲೇಷಕರು ಮಂಗಳೂರು ವಲಯ ಇವರು ದಿ:15-10-2007ರಂದು ನೀಡಿರುವ ವಿಶ್ಲೇಷಣಾ ವರದಿಯಲ್ಲಿ ಮದ್ಯದಲ್ಲಿ ಮದ್ಯಸಾರ ಪ್ರಮಾಣ ಎಲ್ಲಾ ಮಾದರಿಗಳಲ್ಲೂ 42.0% ಇರುವುದಾಗಿ ಹಾಗೂ Sedimentary and suspended particles observed in this samples . Hence they are not confirming to the standards ಎಂದು ದೃಡೀಕರಿಸಲ್ಪಟ್ಟಿರುವುದರಿಂದ ಜಪ್ತುಪಡಿಸಿಕೊಂಡ ವಸ್ತುವು ಅಬಕಾರಿ ಸೊತ್ತು (ಮದ್ಯ) ಆಗಿರುವುದು ಸಾಭೀತಾಗಿರುತ್ತದೆ. ಮಾತ್ರವಲ್ಲದೇ ಅದು ಮಾನವನ ಸೇವನೆಗೆ ಯೋಗ್ಯವಾಗಿಲ್ಲದ ನಕಲಿ ಮದ್ಯವೆಂಬ ಅಬಕಾರಿ ಸೊತ್ತಾಗಿರುವುದು ಸಹ ಸಾಬೀತಾಗಿರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಪ್ರಕರಣದ ಎಲ್ಲಾ ದಾಖಲಾತಿಗಳನ್ನು ಹಾಗೂ ಪ್ರಾ.ಸ-1 ರಿಂದ 5 ರವರ ಸಾಕ್ಷಿ ವಿಚಾರಣೆಯನ್ನು ನಡೆಸಲಾಗಿ, ಪಾಟೀ ಸವಾಲು ನಡೆಸಲು ರಕ್ಷಣಾ ಪರ ವಕೀಲರು ಮುಂದಾಗಿರುವುದಿಲ್ಲ. ಹಾಗೂ ವಾಹನದ ಮಾಲೀಕರು ತನ್ನ ನಿರಪರಾಧಿತ್ವವನ್ನು ಸಾಬೀತುಪಡಿಸಲು ವಿಫಲರಾಗಿರುವುದು ಹಾಗೂ ಅಪರಾಧ ಸ್ಥಳದಲ್ಲಿ ಪಂಚರ ಸಮಕ್ಷಮ ಮಹಜರು ಜರುಗಿಸಿ ಸೊತ್ತುಗಳನ್ನು ಜಪ್ತುಪಡಿಸಿಕೊಂಡು ಪ್ರಕರಣ ದಾಖಲಿಸಿಕೊಂಡ ಅಂಶಗಳನ್ನು ಅವಲೋಕಿಸಿ ಮಹೀಂದ್ರ ಜೀಪು ನೊಂದಣಿ ಸಂ:KA-20-M-3124ನ್ನು ಅಕ್ರಮ ಮದ್ಯ ಸಾಗಾಣಿಕೆಗೆ ಬಳಸಿರುವುದು ಸಾಭೀತಾಗಿರುವುದರಿಂದ ಎರಡನೇ ಅಂಶವನ್ನು ಗುಣಾತ್ಮಕ ವಾಗಿ ಪರಿಗಣಿಸಲಾಗಿದೆ.

ಇಂತಹ ಅಕ್ರಮ ಮದ್ಯ ಸಾಗಾಟ ತನ್ನ ತಿಳುವಳಿಕೆಗೆ ಬಾರದೇ ನಡೆದಿದೆ ಎಂಬುದನ್ನು ಸಾಕ್ಷ್ಯಾಧಾರಗಳೊಂದಿಗೆ ಸಾಭೀತುಪಡಿಸುವುದು ವಾಹನ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ವಾಹನ ಮಾಲೀಕರು ಪ್ರಾಧಿಕಾರದಿಂದ ನೀಡಲಾದ ಕಾರಣ ಕೇಳಿ ನೋಟಿಸಿಗೆ ಉತ್ತರಿಸುತ್ತಾ ಹೊರಿಸಲಾದ ಅಪರಾಧವನ್ನು ಅಲ್ಲಗಳೆದು, ಪ್ರಕರಣ ಸಂಧರ್ಭದಲ್ಲಿ ವಾಹನದಲ್ಲಿ 3 ಜನ ಪ್ರಯಾಣಿಕರಿದ್ದು ಉಳಿದ 7 ಜನರು ಓಡಿಹೋಗಿರುತ್ತಾರೆ. ಹಾಗೂ ಪತ್ತೆಯಾದ ಮದ್ಯವನ್ನು ಚಾಲೂಕ್ಯ ವೈನ್ಸ್ ,ಎಂಜಿರಾ ಇಲ್ಲಿಂದ ಖರೀದಿಸಿಕೊಂಡಿದ್ದು ಇದು ಕಾನೂನಿನಲ್ಲಿ ನಿಗಧಿಪಡಿಸಿದ ಪ್ರಮಾಣಕ್ಕಿಂತ ಕಡಿಮೆ ಪ್ರಮಾಣದಾಗಿದ್ದು ಮದ್ಯ ಖರೀದಿಸಿದ ಬಗ್ಗೆ ನಗದು ರಶೀದಿಗಳನ್ನು ಹಾಜರುಪಡಿಸಿದೆ ಎಂದು ತಿಳಿಸಿರುತ್ತಾರೆ. ಹಾಗೂ ತನ್ನ ಹೇಳಿಕೆಯಲ್ಲಿ ಪ್ರಕರಣ ಸಂದರ್ಭದಲ್ಲಿ ತಾನು ಮತ್ತು ಇತರ 9 ಜನರೊಂದಿಗೆ ಜೀಪಿನಲ್ಲಿ ಪ್ರಯಾಣಿಸುತ್ತಿದ್ದುದ್ದಾಗಿಯೂ, ಪ್ರಕರಣ ಸಂದರ್ಭದಲ್ಲಿ ಸಮವಸ್ತ್ರದಲ್ಲಿದ್ದ ಪೊಲೀಸರನ್ನು ಕಂಡು 7 ಜನರು ಓಡಿಹೋಗಿರುವುದಾಗಿ ತಿಳಿಸಿ ತಾವು ಮೂವರು ಮಾತ್ರ ಜೀಪಿನಲ್ಲಿ ಉಳಿದುಕೊಂಡಿರುವುದಾಗಿ ತಿಳಿಸಿರುತ್ತಾರೆ. ಆದರೆ ಪ್ರಕರಣದಲ್ಲಿ ಒಟ್ಟು 10 ರಟ್ಟಿನ ಪೆಟ್ಟಿಗೆಗಳಲ್ಲಿ 86.400 ಲೀಟರು ಮದ್ಯ ವಶಪಡಿಸಿ ಕೊಳ್ಳಲಾಗಿದ್ದು, ವಾಹನದಲ್ಲಿದ್ದ ಪ್ರಯಾಣಿಕರ ಸಂಖ್ಯೆಯನ್ನು 10 ಜನ ಎಂದು ಪರಿಗಣಿಸಿ ದರೂ ಸರಾಸರಿಯಾಗಿ ಅವರು ಹೊಂದಿರುವ ಮದ್ಯದ ಪ್ರಮಾಣ ಲೆಕ್ಕ ಹಾಕಲಾಗಿ ಕಾನೂನು ಮಿತಿಗಿಂತಲೂ ಹೆಚ್ಚಾಗಿರುವುದು ಕಂಡು ಬರುತ್ತದೆ. ಅಲ್ಲದೇ ಪ್ರಯಾಣಿಕರ ಪೈಕಿ ಓಡಿ ಹೋದ 7 ಜನರ ಬಗ್ಗೆ ಸೂಕ್ತ ಪುರಾವೆ ಒದಗಿಸಲು ವಾಹನದ ಮಾಲೀಕರು ವಿಫಲರಾಗಿರುತ್ತಾರೆ, ವಾಹನದ ಮಾಲೀಕರು ತನ್ನ ರಕ್ಷಣಾ ಸಾಕ್ಷಿಯಲ್ಲಿ ಮದ್ಯವನ್ನು ರಾತ್ರಿ 8-00 ಗಂಟೆಗೆ ಅರಸಿನಮಕ್ಕಿ ಎಂಜಿರಾದ ಚಾಲೂಕ್ಯ ವೈನ್ಸ್ ಎಂಬ ಮದ್ಯದಂಗಡಿಯಿಂದ ಹಬ್ಬ ಆಚರಣೆಯ ಸಲುವಾಗಿ ಪಡೆದುಕೊಂಡಿರುವುದಾಗಿ ತಿಳಿಸಿರುತ್ತಾರೆ. ಆದರೆ ಪ್ರಕರಣ ದಿ:11-8-2007ರಂದು ಮುಂಜಾನೆ 6-00 ಗಂಟೆ ಸಮಯಕ್ಕೆ ನಡೆದಿರುವುದರಿಂದ ಹಿಂದಿನ ದಿವಸ ರಾತ್ರಿ 8-00 ಗಂಟೆಗೆ ಖರೀದಿಸಲಾದ ಸದ್ರಿ ಮದ್ಯವನ್ನು ಮರುದಿವಸ ಬೆಳಿಗ್ಗೆ 6-00 ಗಂಟೆಯವರೆಗೆ ಜೀಪಿನಲ್ಲಿ ಇರಿಸಿ ಕೊಂಡಿರುವ ಬಗ್ಗೆ ಸಕಾರಣವನ್ನು ರುಜುವಾತುಪಡಿಸಿರುವುದಿಲ್ಲ ಹಾಗೂ ಜಪ್ತುಪಡಿಸಿಕೊಂಡ ಸೊತ್ತು ಅಬಕಾರಿ ಸೊತ್ತಾಗಿರುವುದು ಮಾತ್ರವಲ್ಲದೇ ಅದು ಮಾನವನ ಸೇವನೆಗೆ ಯೋಗ್ಯವಲ್ಲದಂತಹ ನಕಲಿ ಮದ್ಯವಾಗಿದ್ದು ಇಂತಹ ಸೊತ್ತುಗಳನ್ನು ಪಾನೀಕರು ಸೇವಿಸಿದರೇ ಅದರಿಂದ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪಾರಿಣಾಮ ಬೀರುವ ಸಾದ್ಯತೆ ಇರುವುದರಿಂದ ಇಂತಹ ಪ್ರಕರಣ ಗಳನ್ನು ಗಂಭೀರವಾಗಿ ಪರಿಗಣಿಸಬಹುದಾಗಿದೆ. ಪ್ರಕರಣ ಸಂಧರ್ಭದಲ್ಲಿ ವಾಹನದ ಮಾಲೀಕರು ಆರೋಗ್ಯವಂತರಾಗಿದ್ದು ತದನಂತರದಲ್ಲಿ ಅಂದರೆ ದಿ:8-10-2009 ರಿಂದ ಪಾರ್ಶ್ವವಾಯು ಪೀಡಿತರಾಗಿ ಅಂಗ ಊನರಾಗಿರುವುದು ವೈದ್ಯಕೀಯ ದೃಡಪತ್ರ ಮತ್ತು ಅಂಗ ವಿಕಲರ ಗುರುತಿನ ಚೀಟಿಯನ್ನು ರಕ್ಷಣಾ ಪರ ದಾಖಲೆಗಳಾಗಿ ಒದಗಿಸಲಾಗಿದ್ದರೂ ಇದು ಪ್ರಕರಣದ ಮುಟ್ಟುಗೋಲು ನಡವಳಿಗೆ ಭಾದಕವಾಗುವುದಿಲ್ಲ. ಅಲ್ಲದೇ ಎರಡು ಸ್ವತಂತ್ರ ಸಾಕ್ಷಿದಾರರನ್ನು ಹಾಗೂ 3 ಅಭಿಯೋಗ ಸಾಕ್ಷಿದಾರರ ವಿಚಾರಣಾ ಸಂದರ್ಭದಲ್ಲಿ ಕಾಲಾವಕಾಶ ನೀಡಲಾಗಿದ್ದರೂ ರಕ್ಷಣಾ ವಕೀಲರು ಪಾಟೀ ಸವಾಲು ನಡೆಸಲು ವಿಫಲರಾಗಿರುವುದನ್ನು ಅವಲೋಕಿಸಿದಾಗ ವಾಹನದ ಮಾಲೀಕರು ಈ ಪ್ರಾಧಿಕಾರದ ಮುಂದೆ ಸಾಕ್ಷ್ಯಾಧಾರಗಳೊಂದಿಗೆ ಹಾಜರಾಗಿ ವಾಹನವನ್ನು ತನ್ನ ತಿಳುವಳಿಕೆಗೆ ಬಾರದೇ ಅಕ್ರಮ ಮದ್ಯ ಸಾಗಾಣಿಕೆಗೆ ಉಪಯೋಗಿಸಲಾಗಿದೆ ಎಂಬ ಅಂಶವನ್ನು ಕರ್ನಾಟಕ ಅಬಕಾರಿ ಕಾಯಿದೆ ಕಲಂ 43 ಬಿ ಅಡಿಯಲ್ಲಿ ರುಜುವಾತು ಪಡಿಸಲು ವಿಫಲರಾಗಿ, ತದನಂತರದಲ್ಲಿ ತನ್ನ ನಿರಾಪರಾಧಿತ್ವವನ್ನು ಸಾಭೀತುಪಡಿಸಲು ಕೃತಕವಾಗಿ ದಾಖಲೆಗಳನ್ನು ಸೃಷ್ಠಿಸಿರುವುದು ಖಾತ್ರಿಯಾಗಿರುವುದರಿಂದ ವಾಹನವನ್ನು ಅಕ್ರಮ ಮದ್ಯ ಸಾಗಾಣಿಕೆಗೆ ವಾಹನದ ಮಾಲೀಕರು ಬಳಸಿರುವುದು ನಿಸ್ಸಂದೇಹವಾಗಿ ಪ್ರಾಧಿಕಾರವು ಮನಗಂಡು ಮೂರನೇಯ ಅಂಶವನ್ನು ನಕಾರಾತ್ಮಕವಾಗಿ ಪರಿಗಣಿಸಿದೆ.

ಈ ಮೇಲಿನ ಎಲ್ಲಾ ಕಾರಣಗಳಿಂದ ಮಹಜರು ಸಾಕ್ಷಿಗಳ ವಿಚಾರಣೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ಹಾಗೂ ವಾಹನದಲ್ಲಿ ಜಪ್ತುಪಡಿಸಿದ ಮದ್ಯದಲ್ಲಿ ಮದ್ಯಸಾರದ ಅಂಶ ಇರುವುದು ವಿಶ್ಲೇಷಣಾ ವರದಿಯಿಂದ ದೃಡಪಟ್ಟಿರುವುದರಿಂದ ಈ ಪ್ರಕರಣದಲ್ಲಿ ಜಪ್ತು ಪಡಿಸಲಾಗಿರುವ ಮಹೀಂದ್ರ ಜೀಪು ನೊಂದಣಿ ಸಂ:KA-20-M-3124ನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವೆಂದು ಪ್ರಾಧಿಕಾರವು ತೀರ್ಮಾನಿಸಿ, ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ಬಿ.ವಿ.ಹೂವಪ್ಪ ಗೌಡ, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್.ದ.ಕ.ಜಿಲ್ಲೆ,ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43ಎ ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ.ನಿಯಮ 43 ಬಿ ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿದ ನಂತರ ಉಪ್ಪಿನಂಗಡಿ ಪೊಲೀಸ್ ಠಾಣಾ ಕ್ರೈಂ ಸಂ:173/2007, ದಿ:11-8-2007 ರಲ್ಲಿ ಜಪ್ತು ಪಡಿಸಿರುವ ಮಹೀಂದ್ರ ಜೀಪು ನೊಂದಣಿ ಸಂ: KA-20-M-3124 (ಚಾಸೀಸ್ ನಂ:CDR650DI-2LV-175764 ಮತ್ತು ಇಂಜಿನ್ ನಂ:DV-175764)ನ್ನು ನಿಯಮ 43ಎ (2)ರನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿ ಕೊಂಡು ಆದೇಶ ನೀಡಿರುತ್ತೇನೆ.

ಈ ಪ್ರಾಧಿಕಾರದಿಂದ ದಿನಾಂಕ:26-3-2008ರಂದು ತಾತ್ಕಾಲಿಕವಾಗಿ ವಾಹನ ಬಿಡುಗಡೆಗೊಳಿಸಿ ಹೊರಡಿಸಿದ ಮಧ್ಯಂತರ ಬಿಡುಗಡೆ ಅದೇಶವನ್ನು ರದ್ದುಗೊಳಿಸಿ ಆದೇಶಿಸಿದೆ. ಅರ್.ಸಿ ಮಾಲೀಕರು ಸದ್ರಿ ಮಧ್ಯಂತರ ಬಿಡುಗಡೆ ಹೊಂದಿರುವ ಮಹೀಂದ್ರ ಜೀಪು ನೊಂದಣಿ ಸಂ: KA-20-M-3124ನ್ನು ಈ ಆದೇಶದ 30 ದಿನಗಳೊಳಗೆ ಅಬಕಾರಿ ನಿರೀಕ್ಷಕರು, ಬೆಳ್ತಂಗಡಿ ವಲಯ ಇವರ ಮೂಲಕ ಇಲಾಖಾ ವಶಕ್ಕೆ ಒಪ್ಪಿಸಲು ಆದೇಶಿಸಿದೆ. ಅಬಕಾರಿ ನಿರೀಕ್ಷಕರು, ಬೆಳ್ತಂಗಡಿ ವಲಯ ಇವರು, ಸದ್ರಿ ಮುಟ್ಟುಗೋಲು ವಾಹನವನ್ನು ಆರ್.ಸಿ ಮಾಲೀಕರಿಂದ ಇಲಾಖಾ ವಶಕ್ಕೆ ಪಡೆದು ಅವರ ಸುಪರ್ಧಿಯಲ್ಲಿ ಇರಿಸಿಕೊಂಡು ಈ ಪ್ರಾಧಿಕಾರಕ್ಕೆ ವರದಿ ಒಪ್ಪಿಸಲು ಅದೇಶಿಸಿದೆ.

ಮುಟ್ಟುಗೋಲು ಹಾಕಿಕೊಳ್ಳಲಾಗಿರುವ ವಾಹನವನ್ನು ಆರ್.ಸಿ ಮಾಲಿಕರು ಈ ಆದೇಶ ಹೊರಡಿಸಿದ 30 ದಿವಸಗಳೊಳಗೆ ಪ್ರಾಧಿಕಾರದ ಸುಪರ್ಧಿಗೆ ಒಪ್ಪಿಸಲು ವಿಫಲರಾದಲ್ಲಿ, ಅವರು ಈ ಪ್ರಾಧಿಕಾರಕ್ಕೆ ಭದ್ರತೆಯಾಗಿ ಬ್ಯಾಂಕ್ ಗ್ಯಾರಂಟಿ ಆಧಾರದಲ್ಲಿ ನೀಡಿ ಸರ್ಕಾರದ ರೆವೆನ್ಯೂ ಡೆಪಾಸಿಟ್‌ನಲ್ಲಿ ಇಡಲಾದ ಮೊತ್ತ ರೂ.60,000/-ನ್ನು ಇಲಾಖಾ ಖಾತೆಗೆ ಹೊಂದಾಣಿಕೆ ಮಾಡಿಕೊಳ್ಳಲು ಆದೇಶಿಸಿದೆ.

ಸದ್ರಿ ಪ್ರಕರಣದಲ್ಲಿ ಜಪ್ತುಪಡಿಸಲಾದ ಮದ್ಯವನ್ನು ಈ ಪ್ರಾಧಿಕಾರದ ಸಮ ಸಂಖ್ಯೆ ಅದೇಶ ದಿನಾಂಕ:01-08-2008ರ ಅನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿರುವುದನ್ನು ಸ್ಥಿರೀಕರಿಸಿದ್ದೇನೆ.

ಈ ಆದೇಶವನ್ನು ದಿನಾಂಕ: 11-08-2011ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜ್ಯಾರಿಯಲ್ಲಿ ಬರುತ್ತದೆ.

ಬಿ.ವಿ. ಹೂವಪ್ಪಗೌಡ,
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಅನುಬಂಧ-I

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ:-

ಪ್ರಾ.ಸಾ-1 : ಶ್ರೀ.ಶ್ರೀಕಾಂತ್,ಬಿನ್:ಶ್ರೀನಿವಾಸ ಕೊಕ್ಕಡ ಗ್ರಾಮ ಮತ್ತು ಅಂಚೆ, ಬೆಳ್ತಂಗಡಿ (ಸ್ವತಂತ್ರ ಸಾಕ್ಷಿದಾರರು)

ಪ್ರಾ.ಸಾ-2 : ಶ್ರೀ.ಚಂದ್ರಶೇಖರಯ್ಯ, ಸಾ.ಪೊ.ಉ.ನಿ , ಬೆಳ್ತಂಗಡಿ ಪೊ.ಠಾಣೆ

ಪ್ರಾ.ಸಾ 3 : ಶ್ರೀ. ಸುಂದರಗೌಡ, ಬಿನ್:ಶಿವಣ್ಣ ಗೌಡ, ಕೃಷಿಕ,ರೆಕ್ಯಾ ಗ್ರಾಮ, ಬೆಳ್ತಂಗಡಿ

ಪ್ರಾ.ಸಾ-4 : ಶ್ರೀ.ಬಿ.ದೇವದಾಸ, ಹೆಚ್.ಸಿ 629, ಪು.ನಗರ ಪೊ.ಠಾಣೆ

ಪ್ರಾ.ಸಾ-5 : ಶ್ರೀಮತಿ.ಸೌಮ್ಯಲತಾ ಅ.ನಿ ಉಡುಪಿ ವಲಯ

ಅನುಬಂಧ-II

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲೆಗಳು:-

ನಿಶಾನೆ ಪಿ-1 : ಮಹಜರು ಪ್ರತಿ ಮತ್ತು ನಿಶಾನೆ ಪಿ-1ಎ ,ಬಿ,ಸಿ : ಸಾಕ್ಷಿ ಗಳ ಸಹಿ

ನಿಶಾನೆ ಪಿ-2 : ಪೊಲೀಸರ ದಿ:11-8-07ರ ವರದಿ ಮತ್ತು ನಿಶಾನೆ ಪಿ-2ಎ: ಸಾಕ್ಷಿ ಸಹಿ

ನಿಶಾನೆ ಪಿ-3 : ಪ್ರಥಮ ಮಾಹಿತಿ ವರದಿ ಮತ್ತು ನಿಶಾನೆ ಪಿ-3 ಎ : ಸಾಕ್ಷಿ ಸಹಿ

ನಿಶಾನೆ ಪಿ-4 : ಅಧಿಕೃತ ಅದಿಕಾರಿಗಳಿಗೆ ಸಲ್ಲಿಸಿದ್ದ ವರದಿ ಮತ್ತು ನಿಶಾನೆ ಪಿ-4 ಎ : ಸಾಕ್ಷಿ ಸಹಿ

ನಿಶಾನೆ ಪಿ-5 : ಬಿ ಎಕ್ಸ್‌ಟ್ರಾಕ್ಟ್ ವರದಿ

ನಿಶಾನೆ ಪಿ-6 : ರಸಾಯನಿಕ ವಿಶ್ಲೇಷಣಾ ವರದಿ

ನಿಶಾನೆ ಪಿ-7 : ತನಿಖಾ ವರದಿ ಮತ್ತು ನಿಶಾನೆ ಪಿ-7 ಎ : ಸಾಕ್ಷಿ ಸಹಿ

ನಿಶಾನೆ ಪಿ-8 : ಮೌಲ್ಯ ಮಾಪನ ವರದಿ

ಅನುಬಂಧ-III

ವಾಹನ ಮಾಲೀಕರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು :-

ಡಿಡಬ್ಲ್ಯೂ -1 :- ಶ್ರೀ.ನಾರಾಯಣ ಗೌಡ, ಬಿನ್:ಬೇಬಿ ಗೌಡ, ಶಿಬಾಜೆ ,ಬೆಳ್ತಂಗಡಿ

ಅನುಬಂಧ-IV

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ದಾಖಲೆಗಳು :-

ನಿಶಾನೆ ಡಿ-1 ರಿಂದ 10 : ಮೆ:ಜಾಲ್ಯೂಕ ವೈನ್ಸ್ ಬೆಳ್ತಂಗಡಿ ಇಲ್ಲಿಂದ ಮದ್ಯ ಖರೀದಿ ರಶೀದಿ ಸಂ: 4377 ರಿಂದ 4386 ರವರೆಗೆ

ನಿಶಾನೆ ಡಿ-11 : ಮೆಡಿಕಲ್ ಆಫೀಸರ್, ಪ್ರೈಮರಿ ಹೆಲ್ತ್ ಸೆಂಟರ್ ,ಹತ್ಯಡ್ಕ ರವರಿಂದ ವೈದ್ಯಕೀಯ ಪರೀಕ್ಷೆ ಪ್ರಮಾಣ ಪತ್ರ

ನಿಶಾನೆ ಡಿ-12 : ಅಂಗಲವಿಕಲರ ಮತ್ತು ಹಿರಿಯ ನಾಗರೀಕರ ಕಲ್ಯಾಣ ನಿರ್ದೇಶನಾಲಯ ಬೆಂಗಳೂರು ಇವರಿಂದ ನೀಡಲಾದ ಅಂಗವಿಕಲರ ಗುರುತಿನ ಚೀಟಿ

ಬಿ.ವಿ. ಹೂವಪ್ಪಗೌಡ,
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಪಿ.ಆರ್. 976

ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಕಛೇರಿ, ಬಳ್ಳಾರಿ

ಪ್ರಕಟಣೆ

ಸಂ. ಜಿಸಕಅ\ಎಸ್-6\ಕಾ.ಪ.ತ\ಸಿಆರ್- \2011-12, ದಿನಾಂಕ: 10-10-2011.

ವಿಷಯ :- 2011-12ನೇ ಸಾಲಿನಲ್ಲಿ ಪರಿಶಿಷ್ಟ ಜಾತಿಯ ಕಾನೂನು ಪದವೀಧರರಿಗೆ ಆಡಳಿತ ನ್ಯಾಯಾಧೀಕರಣದಲ್ಲಿ ತರಬೇತಿ ನೀಡಲು ಅರ್ಜಿಗಳನ್ನು ಆಹ್ವಾನಿಸುವುದರ ಕುರಿತು.

ಉಲ್ಲೇಖ :-
1) ಸರ್ಕಾರದ ಆದೇಶ ಸಂ.ಎಸ್.ಡಬ್ಲ್ಯೂ.ಎಸ್-681\ಎಸ್.ಡಬ್ಲ್ಯು-89, ಬೆಂಗಳೂರು ದಿನಾಂಕ: 02-11-90.
2) ಸರ್ಕಾರದ ಆದೇಶ ಸಂಖ್ಯೆ: ಸಕ.ಇ.-421/ಪಕವಿ-95. ಬೆಂಗಳೂರು, ದಿನಾಂಕ: 29-07-97.
3) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಪತ್ರ ಸಂ:ಸ.ಕ.ಇ/ಸಮನ್ವಯ.6/ಸಿಆರ್-14/97-98, ದಿನಾಂಕ:07-08-97 ಮತ್ತು 14-10-97,
4) ಸರ್ಕಾರದ ಆದೇಶ ಸಂ.ಸಕ.ಇ.-535\ಸಕನಿ-2000, ಬೆಂಗಳೂರು, ದಿನಾಂಕ: 28-03-01.
5) ಸರ್ಕಾರಿ ಆದೇಶ ಸಂ. ಸಕಇ-349/ಪಕವಿ-05, ದಿನಾಂಕ:28-01-06.
6) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಪತ್ರ ಸಂ:ಸಕನಿ/ಸಿ.ಎಸ್.1/ಸಿ.ಆರ್-133/2007-08 ದಿನಾಂಕ:16-10-2007
7) ಸರ್ಕಾರಿ ಆದೇಶ ಸಂ:ಸಕಇ/187/ಪಕಸೇ/2010 ಬೆಂಗಳೂರು, ದಿನಾಂಕ:28-06-2011.
8) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಪತ್ರ ಸಂ:ಸ.ಕ.ನಿ/ಎಸ್-3/ಸಿ.ಆರ್.-13/2011-12 ದಿನಾಂಕ:20-08-2011.

ಬಳ್ಳಾರಿ ಜಿಲ್ಲೆಯಲ್ಲಿರುವ ಪರಿಶಿಷ್ಟ ಜಾತಿಯ ಕಾನೂನು ಪದವೀಧರರಿಗೆ 2011-12ನೇ ಸಾಲಿಗೆ ಆಡಳಿತ ನ್ಯಾಯಾಧೀಕರಣದಲ್ಲಿ 4 ವರ್ಷಗಳ ತರಬೇತಿಯನ್ನು ನೀಡುವ ಸಲುವಾಗಿ ಅರ್ಹ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಈ ತರಬೇತಿಯನ್ನು ಪಡೆಯಲು ಇಚ್ಛಿಸುವ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳು ಈ ಕೆಳಕಂಡ ಅರ್ಹತೆಯನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು.

1) ಅಭ್ಯರ್ಥಿಗಳು ಪರಿಶಿಷ್ಟ ಜಾತಿಗೆ ಸೇರಿದವರಾಗಿರಬೇಕು.

2) ಬಳ್ಳಾರಿ ಜಿಲ್ಲೆಗೆ ಮಾತ್ರ ಸಂಬಂಧಿಸಿದ ಹಾಗೂ ವಕೀಲ ವೃತ್ತಿ ನಡೆಸಲು ಅರ್ಹತೆಯುಳ್ಳ ಕಾನೂನು ಪದವೀಧರರು ಮಾತ್ರ ಈ ತರಬೇತಿಗೆ ಅರ್ಹರು.

3) ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ 2 ವರ್ಷದೊಳಗೆ ಕಾನೂನು ಪದವಿಯನ್ನು ಪಡೆದಿರುಬೇಕು. (ಅರ್ಜಿಯೊಂದಿಗೆ ಕಾನೂನು ಪದವಿಯ 3 ವರ್ಷದ ಅಂಕಪಟ್ಟಿಗಳ ಜಿರಾಕ್ಸ್ ಪ್ರತಿಗಳನ್ನು ಸಲ್ಲಿಸತಕ್ಕದ್ದು.

4) ಅಭ್ಯರ್ಥಿಯ ವಯಸ್ಸು, ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕದಂದು 35 ವರ್ಷಗಳನ್ನು ಮೀರಿರಬಾರದು ಈ ಕುರಿತು ಅಧಿಕೃತ ಪ್ರಮಾಣ ಪತ್ರ (ಎಸ್.ಎಸ್.ಎಲ್.ಸಿ) ಅಂಕಪಟ್ಟಿ ಪ್ರತಿ ಲಗತ್ತಿಸಬೇಕು.

5) ಈ ತರಬೇತಿಗೆ ಅರ್ಜಿಯನ್ನು ಸಲ್ಲಿಸಲು ಇಚ್ಛಿಸುವ ಅಭ್ಯರ್ಥಿಗಳು ಅರ್ಜಿಗಳನ್ನು ದ್ವಿಪ್ರತಿಗಳಲ್ಲಿ ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಎಲ್ಲಾ ಪರೀಕ್ಷೆಗಳ ಅಂಕಪಟ್ಟಿಗಳ ಝಿರಾಕ್ಸ್ ಮತ್ತು ಜಾತಿ ಪ್ರಮಾಣ ಪತ್ರ, ಬಾರ್ ಕೌನ್ಸಿಲ್ ನಲ್ಲಿ ನೊಂದಣಿ ಮಾಡಿದ ಪ್ರಮಾಣ ಪತ್ರದ ದೃಢೀಕೃತ ಪ್ರತಿಗಳೊಂದಿಗೆ ಸಲ್ಲಿಸಬೇಕು.

6) ಈಗಾಗಲೇ ಕಾನೂನು ವಿಷಯದಲ್ಲಿ ಯಾವುದಾದರೂ ತರಬೇತಿ ಪಡೆದಿರಬಾರದು.

ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

1) ಈ ತರಬೇತಿಗೆ ಪರಿಶಿಷ್ಟ ಜಾತಿಯ ಅರ್ಹ ಎಲ್ಲಾ ಅಭ್ಯರ್ಥಿಗಳನ್ನು ಮಾತ್ರ ಆಯ್ಕೆ ಮಾಡಲಾಗುವುದು.

2) ಆಯ್ಕೆಯಾದ ಅಭ್ಯರ್ಥಿಗಳಿಗೆ 4 ವರ್ಷಗಳ ನ್ಯಾಯಾಂಗ ಆಡಳಿತ ತರಬೇತಿಯನ್ನು ಸರ್ಕಾರಿ ವಕೀಲರು, ಪಬ್ಲಿಕ್ ಪ್ರಾಸಿಕ್ಯೂಟರ್ ಅಥವಾ 20 ವರ್ಷಗಳ ಅನುಭವ ಹೊಂದಿರುವ ಹಿರಿಯ ವಕೀಲರಲ್ಲಿ ನೀಡಲಾಗುವುದು. ಈ ವಿಷಯದ ಬಗ್ಗೆ ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮವಾದದ್ದು.

3) ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾಹೆಯಾನ ರೂ 2,000/- (ರೂ ಎರಡು ಸಾವಿರ ಮಾತ್ರ) 4 ವರ್ಷದವರೆಗೂ ಸ್ಟೈಫಂಡ್ ನೀಡಲಾಗುವುದು.

4) ಈ ತರಬೇತಿಗೆ ಅಭ್ಯರ್ಥಿಗಳನ್ನು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪ0ಚಾಯತ್, ಬಳ್ಳಾರಿ ಇವರ ಅಧ್ಯಕ್ಷತೆಯಲ್ಲಿ ರಚಿತವಾದ ಜಿಲ್ಲಾ ಮಟ್ಟದ ಆಯ್ಕೆ ಸಮತಿಯ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು.

5) ಆಯ್ಕೆಯಾದ ಅಭ್ಯರ್ಥಿಗಳು ತರಬೇತಿಯನ್ನು ಮಧ್ಯದಲ್ಲಿ ಬಿಟ್ಟುಹೋಗಬಾರದು (ಕೇಂದ್ರ / ರಾಜ್ಯ ಸರ್ಕಾರದಲ್ಲಿ ಉದ್ಯೋಗ ದೊರೆತ ಅಭ್ಯರ್ಥಿಗಳಿಗೆ ಈ ನಿಬಂಧನೆ ಅನ್ವಯಿಸುವುದಿಲ್ಲ).

6) ಆಯ್ಕೆಯಾದ ಅಭ್ಯರ್ಥಿಗಳು ಸುಳ್ಳು ಮಾಹಿತಿ ದಾಖಲೆ ಒದಗಿಸಿದ್ದಲ್ಲಿ, ಅಂತಹವರನ್ನು ಕಾನೂನಿನ ಶಿಸ್ತಿನ ಕ್ರಮಕ್ಕೆ ಒಳಪಡಿಸಲಾಗುವುದು. ಹಾಗೂ ತರಬೇತಿಯನ್ನು ಮದ್ಯದಲ್ಲಿ ಬಿಟ್ಟುಹೋದಲ್ಲಿ, ಅಂತಹವರಿಗೆ ನೀಡಿದ ಸ್ಟೈಫಂಡ್ ಹಣವನ್ನು ಶೇ.10%ರಷ್ಟು ಬಡ್ಡಿ ಸೇರಿಸಿ, ಭೂ ಕಂದಾಯ ಬಾಕಿ ಎಂದು ಪರಿಗಣಿಸಿ, ವಸೂಲಿ ಮಾಡಲಾಗುವುದು. ಈ ಬಗ್ಗೆ ಆಯ್ಕೆಯಾದ ಅಭ್ಯರ್ಥಿಗಳು ಕರಾರು ಪತ್ರವನ್ನು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಬಳ್ಳಾರಿ ಇವರಿಗೆ ಬರೆದುಕೊಡತಕ್ಕದ್ದು.

7) ಸಂದರ್ಶನದಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾತ್ರ ಈ ಕಛೇರಿಯಿಂದ ತಿಳಿಸಲಾಗುವುದು. ಹಾಗೂ ತರಬೇತಿ ಪಡೆಯಲು ಆಯ್ಕೆಯಾದ ಅಭ್ಯರ್ಥಿಗಳು ಆಯ್ಕೆ ಪತ್ರ ತಲುಪಿದ 15 ದಿನಗಳೊಳಗಾಗಿ ತಮ್ಮ ಒಪ್ಪಿಗೆ ಪತ್ರವನ್ನು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು,ಬಳ್ಳಾರಿ ಇವರಿಗೆ ಸಲ್ಲಿಸತಕ್ಕದ್ದು.

8) ಪೂರ್ಣ ಭರ್ತಿ ಮಾಡಿದ ಅರ್ಜಿಗಳನ್ನು (ದ್ವಿ ಪ್ರತಿಗಳಲ್ಲಿ) ಕಾರ್ಯದರ್ಶಿಗಳು, ಜಿಲ್ಲಾ ಮಟ್ಟದ ನ್ಯಾಯಾಂಗ ತರಬೇತಿ ಆಯ್ಕೆ ಸಮಿತಿ ಮತ್ತು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು,ಬಳ್ಳಾರಿ ಇವರಿಗೆ ದಿನಾಂಕ:**30-11-2011ರಂದು ಸಾಯಂಕಾಲ 5:30 ಗಂಟೆಯೊಳಗೆ** ಸಲ್ಲಿಸತಕ್ಕದ್ದು.

9) ಅಪೂರ್ಣ ಮಾಹಿತಿ ಸಲ್ಲಿಸಿದ ಹಾಗೂ ಅನರ್ಹ ಅರ್ಜಿಗಳನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕು ಆಯ್ಕೆ ಸಮಿತಿಗೆ ಇರುತ್ತದೆ.

ಸೂಚನೆ:- ಅರ್ಜಿಗಳನ್ನು ಮತ್ತು ಹೆಚ್ಚಿನ ಮಾಹಿತಿಯನ್ನು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಕಛೇರಿ, ಬಳ್ಳಾರಿ ಹಾಗೂ ಸಂಬಂಧಪಟ್ಟ ತಾಲೂಕು ಸಮಾಜ ಕಲ್ಯಾಣಾಧಿಕಾರಿಗಳ ಕಛೇರಿಯಿಂದ ಪಡೆಯತಕ್ಕದ್ದು.

ಎನ್.ರಾಜಪ್ಪ,
ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಹಾಗೂ ಸದಸ್ಯ ಕಾರ್ಯದರ್ಶಿ,
ಕಾನೂನು ಪದವೀಧರರ ನ್ಯಾಯಾಂಗ ಆಡಳಿತ ತರಬೇತಿ ಆಯ್ಕೆ ಸಮಿತಿ, ಬಳ್ಳಾರಿ

ಪಿಆರ್. 1163

ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕು ಉಪನೋಂದಣಿ ಕಛೇರಿಯ ವ್ಯಾಪ್ತಿಗೆ ಒಳಪಡುವ ಸ್ಥಿರಾಸ್ತಿಗಳ ಪರಿಷ್ಕೃತ ಮೌಲ್ಯ
ಚಿಂತಾಮಣಿ ನಗರ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ.

ಕ್ರ.ಸಂ.	ಗ್ರಾಮ/ರಸ್ತೆ/ಪ್ರದೇಶದ ಹೆಸರು	ನಿವೇಶನಕ್ಕೆ ಚಾಲ್ತಿ ಮೌಲ್ಯ ಪ್ರತಿ ಚದರಡಿಗೆ		ನಿವೇಶನಕ್ಕೆ ಪರಿಷ್ಕೃತ ಮೌಲ್ಯ ಪ್ರತಿ ಚದರಡಿಗೆ	
		ವಾಸ ಚದರಡಿಗೆ ರೂ.ಗಳಲ್ಲಿ	ವಾಣಿಜ್ಯ ಚದರಡಿಗೆ ರೂ.ಗಳಲ್ಲಿ	ವಾಸ ಚದರಡಿಗೆ ರೂ.ಗಳಲ್ಲಿ	ವಾಣಿಜ್ಯ ಚದರಡಿಗೆ ರೂ.ಗಳಲ್ಲಿ
	1 ನೇ ವಿಭಾಗ				
1	ಎನ್.ಆರ್.ಬಡಾವಣೆ	300	700	330	770
	01. ಚರ್ಚ್ ರಸ್ತೆ	350	700	385	770
	02. ಅಂಚೆ ಕಛೇರಿ ರಸ್ತೆ / ಪೋಸ್ಟ್ ಆಫೀಸ್ ರಸ್ತೆ	300	1200	330	1320
	03. ಬೆಂಗಳೂರು ರಸ್ತೆ	600	1200	660	1320
2	ಹಳೆ ಬಸ್‌ಸ್ಟ್ಯಾಂಡ್ ರಸ್ತೆ		1600		1760
3	ಎಂ.ಜಿ.ರಸ್ತೆ (1, 2 ಮತ್ತು 3 ನೇ ಡಿವಿಜನ್)		2300		2530
4	ಜೋಡಿ ರಸ್ತೆ		5200		5720
5	ಭೋವಿ ಕಾಲೋನಿ (ವಡ್ಡರ ಕಾಲೋನಿ)	350	800	385	880
6	ವೆಂಕಟೇಶ್ವರ ಬಡಾವಣೆ (ಪ್ರೇಮನಗರ)	300	750	330	830
7	ಭಕ್ತನಗರ	250	600	275	660
8	ಟ್ಯಾಂಕ್‌ಬಂಡ್‌ರಸ್ತೆ (ಮುಖ್ಯ ರಸ್ತೆ)	300	600	330	660
	01. ಟ್ಯಾಂಕ್‌ಬಂಡ್‌ರಸ್ತೆ ಪೂರ್ವ ಬಡಾವಣೆ	250	500	275	550
	02. ಟ್ಯಾಂಕ್‌ಬಂಡ್ ರಸ್ತೆ ಪಶ್ಚಿಮ ಬಡಾವಣೆ	200	400	220	440
	03. ಕಾಲೇಜು, ಪಾಲಿಟೆಕ್ನಿಕ್ ಹಿಂಭಾಗ	300	500	330	550
	04. ನಾರೆಪ್ಪಕುಂಟೆ	200	450	220	500

Approved as per IGR and CS Memo No. CVC-16/10-11, dated 29-06-2011 and it shall come into effect from 20-07-2011

ಕ್ರ.ಸಂ.	ಗ್ರಾಮ/ರಸ್ತೆ/ಪ್ರದೇಶದ ಹೆಸರು	ನಿವೇಶನಕ್ಕೆ ಚಾಲ್ತಿ ಮೌಲ್ಯ ಪ್ರತಿ ಚದರಡಿಗೆ		ನಿವೇಶನಕ್ಕೆ ಪರಿಷ್ಕೃತ ಮೌಲ್ಯ ಪ್ರತಿ ಚದರಡಿಗೆ	
		ವಾಸ ಚದರಡಿಗೆ ರೂ.ಗಳಲ್ಲಿ	ವಾಣಿಜ್ಯ ಚದರಡಿಗೆ ರೂ.ಗಳಲ್ಲಿ	ವಾಸ ಚದರಡಿಗೆ ರೂ.ಗಳಲ್ಲಿ	ವಾಣಿಜ್ಯ ಚದರಡಿಗೆ ರೂ.ಗಳಲ್ಲಿ
9	ಕೆ.ಎಸ್.ಆರ್.ಟಿ.ಸಿ ಡಿಪೋ ಹತ್ತಿರ ಪೂರ್ವದ ಕಡೆ ಬಡಾವಣೆ				
	01. ಬೆಂಗಳೂರು ಮುಖ್ಯ ರಸ್ತೆ	300	600	330	660
	02. ಹಳೆ ಅಂಗನವಾಡಿ ಕಟ್ಟಡ (ಪ್ರಭಾಕರ್ ಮನೆ ಪೂರ್ವ)	250	400	275	440
	03. ಹಳೆ ಅಂಗನವಾಡಿ ಕಟ್ಟಡ (ಪ್ರಭಾಕರ್ ಮನೆ ಪಶ್ಚಿಮ)	200	420	220	470
10	ಕೆ.ಎಸ್.ಆರ್.ಟಿ.ಸಿ ಡಿಪೋ ಹತಿರ ಪಶ್ಚಿಮ ಕಡೆ ಬಡಾವಣೆ				
	01. ಬೆಂಗಳೂರು ಮುಖ್ಯ ರಸ್ತೆ	600	1200	660	1320
	02. ಅಶ್ವಿನಿ ಆಸ್ಪತ್ರೆ ಪೂರ್ವ	250	400	275	440
	03. ಅಶ್ವಿನಿ ಆಸ್ಪತ್ರೆ ಪಶ್ಚಿಮ	200	400	220	440
	04. ಅಫಿಷಿಯಲ್ ರಿಕ್ರಿಯೇಷನ್ ಕ್ಲಬ್ ಪಶ್ಚಿಮ	200	350	220	390
	05. ಅಫಿಷಿಯಲ್ ರಿಕ್ರಿಯೇಷನ್ ಕ್ಲಬ್ ಪೂರ್ವ	200	500	220	550
11	ಅಂಜನಿ ಬಡಾವಣೆ	350	700	385	770
	ಅಂಜನಿ ಬಡಾವಣೆ ಬೆಂಗಳೂರು ರಸ್ತೆ	360	700	400	770
12	ಗಾಂಧಿನಗರ	250	600	275	660
	01. ಗಾಂಧಿನಗರ – ಅಂಚೆ ಕಛೇರಿ ರಸ್ತೆ	300	600	330	660
	02. ಗಾಂಧಿನಗರ – ಬೆಂಗಳೂರು ರಸ್ತೆ	350	700	385	770
13	ಮಾಳಪಲ್ಲಿ	150	350	165	390
	01. ಮಾಳಪಲ್ಲಿ – ಅಂಚೆ ಕಛೇರಿ ರಸ್ತೆ	300	600	330	660
	02. ಮಾಳಪಲ್ಲಿ – ಬೆಂಗಳೂರು ರಸ್ತೆ	350	700	385	770

ಕ್ರಸಂ.	ಗ್ರಾಮ/ರಸ್ತೆ/ಪ್ರದೇಶದ ಹೆಸರು	ನಿವೇಶನಕ್ಕೆ ಚಾಲ್ತಿ ಮೌಲ್ಯ ಪ್ರತಿ ಚದರಡಿಗೆ		ನಿವೇಶನಕ್ಕೆ ಪರಿಷ್ಕೃತ ಮೌಲ್ಯ ಪ್ರತಿ ಚದರಡಿಗೆ	
		ವಾಸ ಚದರಡಿಗೆ ರೂ.ಗಳಲ್ಲಿ	ವಾಣಿಜ್ಯ ಚದರಡಿಗೆ ರೂ.ಗಳಲ್ಲಿ	ವಾಸ ಚದರಡಿಗೆ ರೂ.ಗಳಲ್ಲಿ	ವಾಣಿಜ್ಯ ಚದರಡಿಗೆ ರೂ.ಗಳಲ್ಲಿ
14	ಕನಂಪಲ್ಲಿ				
	01. ಕನಂಪಲ್ಲಿ ಉತ್ತರ	250	450	275	500
	02. ಕನಂಪಲ್ಲಿ ಉತ್ತರ ಬೆಂಗಳೂರು ರಸ್ತೆ	250	600	275	660
	03. ಕನಂಪಲ್ಲಿ ದಕ್ಷಿಣ	150	250	165	280
	04. ಕನಂಪಲ್ಲಿ ದಕ್ಷಿಣ ಬೆಂಗಳೂರು ರಸ್ತೆ	150	300	165	330
15	ಕೆ.ಆರ್.ಬಡಾವಣೆ	250	700	275	770
	01. ಪಾಲಿಟೆಕ್ನಿಕ್ ರಸ್ತೆ	300	800	330	880
	02. ಕೆನರಾ ಬ್ಯಾಂಕ್	250	1200	275	1320
16	ವೆಂಕಟಗಿರಿಕೋಟೆ	250	500	275	550
	01. ವೆಂಕಟಗಿರಿಕೋಟೆ ಕಾಲೋನಿ ಪ್ರದೇಶ	120	400	135	440
	02. ವೆಂಕಟಗಿರಿಕೋಟೆ ಶಿಡ್ಲಘಟ್ಟ ರಸ್ತೆ	250	900	275	990
17	ಬಾಗೇಪಲ್ಲಿ ಕ್ರಾಸ್ ಪೂರ್ವ	200	600	220	660
18	ಬಾಗೇಪಲ್ಲಿ ಕ್ರಾಸ್ ಪಶ್ಚಿಮ	150	450	165	500
19	ಸುಗಟೂರು ರಸ್ತೆ	150	450	165	500
	2 ನೇ ವಿಭಾಗ				
1	ಸೊಣಶೆಟ್ಟಿಹಳ್ಳಿ (1 ಮತ್ತು 2 ನೇ ಡಿವಿಜನ್)	200	600	220	660
	01. ಸೊಣಶೆಟ್ಟಿಹಳ್ಳಿ – ಶ್ರೀನಿವಾಸಪುರ ರಸ್ತೆ	320	780	352	860
2	ತಪತೇಶ್ವರ ಬಡಾವಣೆ	120	600	132	660

ಕ್ರಸಂ.	ಗ್ರಾಮ/ರಸ್ತೆ/ಪ್ರದೇಶದ ಹೆಸರು	ನಿವೇಶನಕ್ಕೆ ಚಾಲ್ತಿ ಮೌಲ್ಯ ಪ್ರತಿ ಚದರಡಿಗೆ		ನಿವೇಶನಕ್ಕೆ ಪರಿಷ್ಕೃತ ಮೌಲ್ಯ ಪ್ರತಿ ಚದರಡಿಗೆ	
		ವಾಸ ಚದರಡಿಗೆ ರೂ.ಗಳಲ್ಲಿ	ವಾಣಿಜ್ಯ ಚದರಡಿಗೆ ರೂ.ಗಳಲ್ಲಿ	ವಾಸ ಚದರಡಿಗೆ ರೂ.ಗಳಲ್ಲಿ	ವಾಣಿಜ್ಯ ಚದರಡಿಗೆ ರೂ.ಗಳಲ್ಲಿ
	01. ತಪತೇಶ್ವರ ಬಡಾವಣೆ – ಶ್ರೀನಿವಾಸಪುರ ರಸ್ತೆ	200	600	220	660
3	ಚೌಡರೆಡ್ಡಿಪಾಳ್ಯ	200	650	220	720
	01. ಚೌಡರೆಡ್ಡಿಪಾಳ್ಯ – ಶ್ರೀನಿವಾಸಪುರ ರಸ್ತೆ	250	700	275	770
4	ಹಳೇ ಸಂತೆ ಮೈದಾನ		1600		1750
5	ಚೇಳೂರು ರಸ್ತೆ		1800		1970
	01. ಚೇಳೂರು ಸರ್ಕಲ್‌ನಿಂದ _ ಎ.ಪಿ.ಎಂ.ಸಿ ಯಾರ್ಡ್‌ವರೆವಿಗೂ		1800		1970
	02. ಎ.ಪಿ.ಎಂ.ಸಿ ಯಾರ್ಡ್‌ನಿಂದ ಕಿಸಾನ್ ಕಾರ್ಖಾನೆವರೆಗೂ		980		1070
	03. ಕಿಸಾನ್ ಪ್ಯಾಕ್ಟರಿಯಿಂದ _ ರೈಲ್ವೇ ಗೇಟ್‌ವರೆವಿಗೂ	200	900	220	980
6	ರಾಮಕುಂಟೆ, ಬಂಬೂಬಜಾರು	200	600	220	660
7	ನೆಕ್ಕುಂದಿಪೇಟೆ	150	500	165	550
8	ನೆಕ್ಕುಂದಿ (2 ಮತ್ತು 5 ನೇ ಡಿವಿಜನ್)	150	450	165	500
	01. ಗಣೇಶನಗರ	100	120	110	140
	02. ಶ್ರೀರಾಮನಗರ	250	1200	275	1320
	03. ಪಿನಾಯಕನಗರ	100	600	110	660
9	ಪಿನೋಬ ಕಾಲೋನಿ	200	600	220	660
10	ಟಿಪ್ಪೂನಗರ	100	700	110	770
11	ಗಾಂಧಿನಗರ (ಎ.ಪಿ.ಎಂ.ಸಿ ಯಾರ್ಡ್‌ನ ದಕ್ಷಿಣದ ಕಡೆ)	150	400	165	440
12	ಎ.ಪಿ.ಎಂ.ಸಿ ಯಾರ್ಡ್ (ವ್ಯವಸಾಯೋತ್ಪನ್ನ ಮಾರುಕಟ್ಟೆ)		600		660

ಕ್ರಸಂ.	ಗ್ರಾಮ/ರಸ್ತೆ/ಪ್ರದೇಶದ ಹೆಸರು	ನಿವೇಶನಕ್ಕೆ ಚಾಲ್ತಿ ಮೌಲ್ಯ ಪ್ರತಿ ಚದರಡಿಗೆ		ನಿವೇಶನಕ್ಕೆ ಪರಿಷ್ಕೃತ ಮೌಲ್ಯ ಪ್ರತಿ ಚದರಡಿಗೆ	
		ವಾಸ ಚದರಡಿಗೆ ರೂ.ಗಳಲ್ಲಿ	ವಾಣಿಜ್ಯ ಚದರಡಿಗೆ ರೂ.ಗಳಲ್ಲಿ	ವಾಸ ಚದರಡಿಗೆ ರೂ.ಗಳಲ್ಲಿ	ವಾಣಿಜ್ಯ ಚದರಡಿಗೆ ರೂ.ಗಳಲ್ಲಿ
13	ಹಳೇ ಪೋಸ್ಟ್ ಆಫೀಸ್ ರಸ್ತೆ _ ಡೈಮಂಡ್ ಟಾಕೀಸ್ ರಸ್ತೆ ಸುಭಾಷ ರಸ್ತೆ	240	650	265	720
	3 ನೇ ವಿಭಾಗ				
1	ನಾರಸಿಂಹಪೇಟೆ – ಪೂರ್ವ ಬಡಾವಣೆ	180	400	200	450
	01. ನಾರಸಿಂಹಪೇಟೆ – ಪಶ್ಚಿಮ ಬಡಾವಣೆ	160	400	180	450
2	ಗುಲ್‌ಜಾರ್‌ಮೊಹಲ್ಲಾ	150	400	165	450
3	ಸಾಲಿಪೇಟೆ	180	400	200	450
4	ಕುರುಬರಪೇಟೆ (3 ಮತು 4 ನೇ ಡಿವಿಜನ್ (ಕುಂಬಾರ ಪೇಟೆ)	150	400	170	450
5	ತಿಮ್ಮಸಂದ್ರ	200	250	220	280
	01. ತಿಮ್ಮಸಂದ್ರ – ಶಿಡ್ಲಘಟ್ಟ ರಸ್ತೆ	150	450	165	500
	4 ನೇ ವಿಭಾಗ				
1	ನಗರ್ತರಪೇಟೆ	150	400	165	450
2	ಆಜಾದ್‌ಚೌಕ	400	1200	440	1320
3	ದೊಡ್ಡಪೇಟೆ	200	900	220	990
4	ಬ್ರಾಹ್ಮಣರ ಬೀದಿ	150	600	165	660
	5 ನೇ ವಿಭಾಗ				
1	ನಾಗನಾಥೇಶ್ವರ ಗುಡಿ ಬೀದಿ	150	500	165	550
	01. ಕೆ.ಜಿ.ಎನ್ ಸ್ಕೂಲ್ ಉತ್ತರ	250	300	275	340

ಕ್ರಸಂ.	ಗ್ರಾಮ/ರಸ್ತೆ/ಪ್ರದೇಶದ ಹೆಸರು	ನಿವೇಶನಕ್ಕೆ ಚಾಲ್ತಿ ಮೌಲ್ಯ ಪ್ರತಿ ಚದರಡಿಗೆ		ನಿವೇಶನಕ್ಕೆ ಪರಿಷ್ಕೃತ ಮೌಲ್ಯ ಪ್ರತಿ ಚದರಡಿಗೆ	
		ವಾಸ ಚದರಡಿಗೆ ರೂ.ಗಳಲ್ಲಿ	ವಾಣಿಜ್ಯ ಚದರಡಿಗೆ ರೂ.ಗಳಲ್ಲಿ	ವಾಸ ಚದರಡಿಗೆ ರೂ.ಗಳಲ್ಲಿ	ವಾಣಿಜ್ಯ ಚದರಡಿಗೆ ರೂ.ಗಳಲ್ಲಿ
	02. ಕೆ.ಜಿ.ಎನ್ ಸ್ಕೂಲ್ ದಕ್ಷಿಣ	200	350	220	390
2	ಮಹಬೂಬ್‌ನಗರ (ನಲ್ಲಗುಟ್ಟ ಬಳಿ)	100	300	110	340
	01. ಶಾಂತಿನಗರ	100	300	110	340
3	ನೆಕ್ಕುಂದಿ ಅಗ್ರಹಾರ (ರೈಲ್ವೆ ಸ್ಟೇಷನ್ ಬಳಿ) ಕಿದ್ವಾಯಿನಗರ	150	300	165	340
	01. ಚೌಡೇಶ್ವರಿ ಓಣಿ	120	300	135	340
	02. ಜಗಜೀವನರಾಂ ನಗರ	100	250	110	280
4	ಗದ್ವಾಲ್‌ಪೇಟೆ	100	300	110	340
	ನೆಕ್ಕುಂದಿ ಅಗ್ರಹಾರ	150	300	165	340
	ಮಹಬೂಬ್ ನಗರ (ನಲ್ಲಗುಟ್ಟಬಳಿ)	100	300	110	340
	ನಾರಸಿಂಹಪೇಟೆ ಪೂರ್ವಬಡಾವಣೆ	180	400	200	450
	ಕುರುಬೂರು ಪೇಟೆ ಕುಂಬಾರಪೇಟೆ	150	400	165	450
	ಭಕ್ತನಗರಿ	250	600	275	660
	ರಾಮಕುಂಟೆ, ಬಂಬೂಬಜಾರ್	200	600	220	660

ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕು ಉಪನೋಂದಣಿ ಕಛೇರಿಯ ವ್ಯಾಪ್ತಿಗೆ ಒಳಪಡುವ ಸ್ಥಿರಾಸ್ತಿಗಳ ಪರಿಷ್ಕೃತ ಮೌಲ್ಯ
ಕಸಬಾ ಹೋಬಳಿ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ.

ಕ್ರ ಸಂ.	ಗ್ರಾಮ/ರಸ್ತೆ/ಪ್ರದೇಶದ ಹೆಸರು	ನಿವೇಶನಕ್ಕೆ ಚಾಲ್ತಿ ಮೌಲ್ಯ ಪ್ರತಿ ಚದರಡಿಗೆ		ನಿವೇಶನಕ್ಕೆ ಪರಿಷ್ಕೃತ ಮೌಲ್ಯ ಪ್ರತಿ ಚದರಡಿಗೆ		ವಾಸೋಪಯೋಗಿ ಭೂಪರಿವರ್ತಿತ ಜಮೀನು ಚಾಲ್ತಿ ಮಾರುಕಟ್ಟೆ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ			ವಾಣಿಜ್ಯ / ಕೈಗಾರಿಕಾ ಚಾಲ್ತಿ ಮಾರುಕಟ್ಟೆ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ			ಕೃಷಿ ಜಮೀನುಗಳ ಚಾಲ್ತಿ ಮಾರುಕಟ್ಟೆ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ			ಪರಿಷ್ಕೃತ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ		ಕೃಷಿ ಜಮೀನುಗಳ ಪರಿಷ್ಕೃತ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ		
		ವಾಸ ಚದರಡಿಗೆ ರೂ.ಗಳಲ್ಲಿ	ವಾಣಿಜ್ಯ ಚದರಡಿಗೆ ರೂ.ಗಳಲ್ಲಿ	ವಾಸ ಚದರಡಿಗೆ ರೂ.ಗಳಲ್ಲಿ	ವಾಣಿಜ್ಯ ಚದರಡಿಗೆ ರೂ.ಗಳಲ್ಲಿ	ಖುಷ್ಕಿ	ತರಿ	ಭಾಗಾಯ್ತು	ಖುಷ್ಕಿ	ತರಿ	ಭಾಗಾಯ್ತು	ಖುಷ್ಕಿ	ತರಿ	ಭಾಗಾಯ್ತು	ವಾಸೋಪಯೋಗಿ ಭೂಪರಿವರ್ತಿತ ಜಮೀನು	ವಾಣಿಜ್ಯ / ಕೈಗಾರಿಕಾ	ಖುಷ್ಕಿ	ತರಿ	ಭಾಗಾಯ್ತು
1	ಚಿಂತಾಮಣಿ					878000	833000	2750000	732000	694000	2750000	2000000	2200000	2500000	4125000	4400000	2200000	2420000	2750000
2	ನೆಕ್ಕುಂದಿ					780000	750000	2750000	650000	625000	2750000	2000000	2100000	2500000	4125000	4400000	2200000	2310000	2750000
3	ಸೊಣ್ಣಶೆಟ್ಟಿಹಳ್ಳಿ					878000	750000	2970000	732000	625000	2970000	2500000	2600000	2700000	4455000	4752000	2750000	2860000	2970000
4	ಊಲವಾಡಿ			50	55	300000	180000	1650000	250000	150000	1650000	1000000	1200000	1500000	2475000	2640000	1100000	1320000	1650000
	ಹೊಸ ಬಡಾವಣೆ	40	50																
5	ಬೂರಗಮಾಕಲಹಳ್ಳಿ	60	80	75	90	300000	300000	2420000	250000	250000	2420000	2000000	2600000	2200000	3630000	3872000	2200000	2860000	2420000
	ಹೊಸ ಲೇಔಟ್																		
6	ಕರಿಯಪಲ್ಲಿ	80	100	100	110	375000	300000	2750000	313000	250000	2750000	2000000	2200000	2500000	4125000	4400000	2200000	2420000	2750000
	ಹೊಸ ಬಡಾವಣೆ																		
7	ಕನ್ನಂಪಲ್ಲಿ	500	600	550	660	750000	675000	2750000	625000	563000	2750000	2200000	2300000	2500000	4125000	4400000	2420000	2530000	2750000
8	ಮಾಳಪಲ್ಲಿ	600	700	660	770	750000	675000	2640000	625000	563000	2640000	2100000	2200000	2400000	3960000	4224000	2310000	2420000	2640000
9	ಗೋಪಸಂದ್ರ	200	300	220	330	375000	180000	1980000	313000	150000	1980000	1500000	1600000	1800000	2970000	3168000	1650000	1760000	1980000
	ಹೊಸ ಬಡಾವಣೆ																		
10	ಕಬ್ಬಹಳ್ಳಿ	50	60	55	70	150000	105000	1870000	125000	88000	1870000	1000000	1300000	1700000	2805000	2992000	1100000	1430000	1870000
	ಹೊಸ ಬಡಾವಣೆ																		

ಕ್ರ ಸಂ.	ಗ್ರಾಮ/ರಸ್ತೆ/ಪ್ರದೇಶದ ಹೆಸರು	ನಿವೇಶನಕ್ಕೆ ಚಾಲ್ತಿ ಮೌಲ್ಯ ಪ್ರತಿ ಚದರಡಿಗೆ		ನಿವೇಶನಕ್ಕೆ ಪರಿಷ್ಕೃತ ಮೌಲ್ಯ ಪ್ರತಿ ಚದರಡಿಗೆ		ವಾಸೋಪಯೋಗಿ ಭೂಪರಿವರ್ತಿತ ಜಮೀನು ಚಾಲ್ತಿ ಮಾರುಕಟ್ಟೆ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ			ವಾಣಿಜ್ಯ / ಕೈಗಾರಿಕಾ ಚಾಲ್ತಿ ಮಾರುಕಟ್ಟೆ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ			ಕೃಷಿ ಜಮೀನುಗಳ ಚಾಲ್ತಿ ಮಾರುಕಟ್ಟೆ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ			ಪರಿಷ್ಕೃತ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ		ಕೃಷಿ ಜಮೀನುಗಳ ಪರಿಷ್ಕೃತ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ		
		ವಾಸ ಚದರಡಿಗೆ ರೂ.ಗಳಲ್ಲಿ	ವಾಣಿಜ್ಯ ಚದರಡಿಗೆ ರೂ.ಗಳಲ್ಲಿ	ವಾಸ ಚದರಡಿಗೆ ರೂ.ಗಳಲ್ಲಿ	ವಾಣಿಜ್ಯ ಚದರಡಿಗೆ ರೂ.ಗಳಲ್ಲಿ	ಖುಷ್ಕಿ	ತರಿ	ಭಾಗಾಯ್ತು	ಖುಷ್ಕಿ	ತರಿ	ಭಾಗಾಯ್ತು	ಖುಷ್ಕಿ	ತರಿ	ಭಾಗಾಯ್ತು	ವಾಸೋಪಯೋಗಿ ಭೂಪರಿವರ್ತಿತ ಜಮೀನು	ವಾಣಿಜ್ಯ / ಕೈಗಾರಿಕಾ	ಖುಷ್ಕಿ	ತರಿ	ಭಾಗಾಯ್ತು
11	ಕಟಮಾಚನಹಳ್ಳಿ			40	45	180000	120000	1760000	150000	100000	1760000	120000	1400000	1600000	2640000	2816000	1320000	1540000	1760000
	ಹೊಸ ಬಡಾವಣೆ	35	40																
12	ವಡಗನಹಳ್ಳಿ	100	150	110	165	390000	330000	1980000	325000	275000	1980000	120000	160000	180000	2970000	3168000	1320000	1760000	1980000
	ಹೊಸ ಬಡಾವಣೆ																		
13	ಪಣಸಚೌಡನಹಳ್ಳಿ	30	40	40	45	90000	98000	550000	75000	82000	550000	600000	550000	500000	825000	880000	660000	605000	550000
14	ಗಡದಾಸನಹಳ್ಳಿ	30	40	40	45	105000	113000	605000	88000	94000	605000	700000	600000	550000	908000	968000	770000	660000	605000
15	ಕೃಷ್ಣಮ್ಮನಹೊಸಹಳ್ಳಿ	30	40	40	45	90000	98000	550000	75000	82000	550000	600000	550000	500000	825000	880000	660000	605000	550000
16	ಸೀಕಲ್ಲು	30	40	40	45	98000	105000	605000	82000	88000	605000	650000	600000	550000	908000	968000	715000	660000	605000
17	ಚಟ್ಲಪಲ್ಲಿಗಡ್ಡೆ	40	50	50	55	105000	90000	110000	88000	75000	110000	800000	900000	100000	165000	176000	880000	990000	110000
	ಹೊಸ ಬಡಾವಣೆ																		
18	ಕಂಬಂಪಲ್ಲಿ	30	35	40	45	90000	98000	495000	75000	82000	495000	500000	500000	450000	743000	792000	550000	550000	495000
19	ದೊಡ್ಡಬೊಮ್ಮನಹಳ್ಳಿ	30	40	40	45	90000	98000	660000	75000	82000	660000	500000	700000	600000	990000	1056000	550000	770000	660000
20	ಕುರುಟಹಳ್ಳಿ	30	40	40	45	120000	128000	220000	100000	107000	220000	200000	250000	200000	330000	352000	220000	275000	220000
21	ಕಾಚಹಳ್ಳಿ	30	40	40	45	105000	98000	990000	88000	82000	990000	180000	150000	900000	1485000	1584000	198000	165000	990000
22	ಮುನಗನಹಳ್ಳಿ	35	50	45	55	105000	113000	121000	88000	94000	121000	100000	120000	110000	182000	194000	110000	132000	121000
23	ಗೊಲ್ಲಪಲ್ಲಿಗಡ್ಡೆ	30	35	40	40	90000	98000	440000	75000	82000	440000	500000	450000	400000	660000	704000	550000	495000	440000
24	ಚಿಕ್ಕಬೊಮ್ಮನಹಳ್ಳಿ	30	40	40	45	98000	83000	660000	82000	69000	660000	500000	550000	600000	990000	1056000	550000	605000	660000

ಕ್ರ ಸಂ	ಗ್ರಾಮ ರಸ್ತೆ ಪ್ರದೇಶದ ಹೆಸರು	ನಿವೇಶನಕ್ಕೆ ಚಾಲ್ತಿ ಮೌಲ್ಯ ಪ್ರತಿ ಚದರಡಿಗೆ		ನಿವೇಶನಕ್ಕೆ ಪರಿಷ್ಕೃತ ಮೌಲ್ಯ ಪ್ರತಿ ಚದರಡಿಗೆ		ವಾಸೋಪಯೋಗಿ ಭೂಪರಿವರ್ತಿತ ಜಮೀನು ಚಾಲ್ತಿ ಮಾರುಕಟ್ಟೆ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ			ವಾಣಿಜ್ಯ / ಕೈಗಾರಿಕಾ ಚಾಲ್ತಿ ಮಾರುಕಟ್ಟೆ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ			ಕೃಷಿ ಜಮೀನುಗಳ ಚಾಲ್ತಿ ಮಾರುಕಟ್ಟೆ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ			ಪರಿಷ್ಕೃತ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ		ಕೃಷಿ ಜಮೀನುಗಳ ಪರಿಷ್ಕೃತ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ		
		ವಾಸ ಚದರಡಿಗೆ ರೂ.ಗಳಲ್ಲಿ	ವಾಣಿಜ್ಯ ಚದರಡಿಗೆ ರೂ.ಗಳಲ್ಲಿ	ವಾಸ ಚದರಡಿಗೆ ರೂ.ಗಳಲ್ಲಿ	ವಾಣಿಜ್ಯ ಚದರಡಿಗೆ ರೂ.ಗಳಲ್ಲಿ	ಖುಷ್ಕಿ	ತರಿ	ಭಾಗಾಯ್ತು	ಖುಷ್ಕಿ	ತರಿ	ಭಾಗಾಯ್ತು	ಖುಷ್ಕಿ	ತರಿ	ಭಾಗಾಯ್ತು	ವಾಸೋಪಯೋಗಿ ಭೂಪರಿವರ್ತಿತ ಜಮೀನು	ವಾಣಿಜ್ಯ / ಕೈಗಾರಿಕಾ	ಖುಷ್ಕಿ	ತರಿ	ಭಾಗಾಯ್ತು
25	ಹೆಬ್ಬೂರು	40	60	50	70	120000	113000	770000	100000	94000	770000	600000	600000	700000	1155000	1232000	660000	660000	770000
26	ಹಿರಣ್ಯಪಲ್ಲಿ	30	40	40	45	113000	105000	605000	94000	88000	605000	500000	550000	550000	908000	968000	550000	605000	605000
27	ಜಮರೆಡ್ಡಿಹಳ್ಳಿ	30	40	40	45	105000	113000	715000	88000	94000	715000	600000	650000	650000	1073000	1144000	660000	715000	715000
28	ಬತ್ತಲಹಳ್ಳಿ	30	40	40	45	90000	83000	605000	75000	69000	605000	500000	500000	550000	908000	968000	550000	550000	605000
29	ಮೊಬ್ಬಾರ್ಜೇನಹಳ್ಳಿ	30	40	40	45	90000	105000	715000	75000	88000	715000	600000	600000	650000	1073000	1144000	660000	660000	715000
30	ಚೀಮನಹಳ್ಳಿ	30	40	40	45	90000	105000	715000	75000	88000	715000	600000	650000	650000	1073000	1144000	660000	715000	715000
31	ಚಿನ್ನಸಂದ್ರ	80	100	100	110	225000	180000	1980000	188000	150000	1980000	200000	180000	180000	2970000	3168000	2200000	1980000	1980000
32	ಸೂಲದೇನಹಳ್ಳಿ	30	40	40	45	90000	105000	1320000	75000	88000	1320000	1500000	1200000	120000	1980000	2112000	1650000	1320000	1320000
33	ನಾಯಿಂದ್ರಹಳ್ಳಿ	30	40	40	45	83000	90000	880000	68800	75000	880000	800000	800000	800000	1320000	1408000	880000	880000	880000
34	ಕೊಡದವಾಡಿ	30	40	40	45	105000	113000	880000	88000	94000	880000	800000	800000	800000	1320000	1408000	880000	880000	880000
35	ಕೋಡಿಹಳ್ಳಿ	30	40	40	45	105000	113000	660000	88000	94000	660000	650000	650000	600000	990000	1056000	715000	715000	660000
36	ಗಿಡದಕೋಡಿಹಳ್ಳಿ	30	40	40	45	98000	105000	715000	82000	88000	715000	650000	650000	650000	1073000	1144000	715000	715000	715000
37	ದೊಡ್ಡನೆತ್ತ	30	40	40	45	90000	98000	770000	75000	82000	770000	700000	700000	700000	1155000	1232000	770000	770000	770000
38	ಹೊಸೂರು	30	40	40	45	90000	98000	550000	75000	82000	550000	500000	500000	500000	825000	880000	550000	550000	550000
39	ತಿಪ್ಪಮಾರ	30	40	40	45	90000	98000	550000	75000	82000	550000	500000	500000	500000	825000	880000	550000	550000	550000
40	ಶಿಂಗನಹಳ್ಳಿ	30	40	40	45	105000	113000	880000	88000	94000	880000	800000	800000	800000	1320000	1408000	880000	880000	880000
41	ನಕ್ಕಲಹಳ್ಳಿಗಡ್ಡೆ	30	40	40	45	75000	83000	880000	63000	69000	880000	800000	800000	800000	1320000	1408000	880000	880000	880000

ಕ್ರ. ಸಂ.	ಗ್ರಾಮ/ರಸ್ತೆ/ಪ್ರದೇಶದ ಹೆಸರು	ನಿವೇಶನಕ್ಕೆ ಚಾಲ್ತಿ ಮೌಲ್ಯ ಪ್ರತಿ ಚದರಡಿಗೆ		ನಿವೇಶನಕ್ಕೆ ಪರಿಷ್ಕೃತ ಮೌಲ್ಯ ಪ್ರತಿ ಚದರಡಿಗೆ		ವಾಸೋಪಯೋಗಿ ಭೂಪರಿವರ್ತಿತ ಜಮೀನು ಚಾಲ್ತಿ ಮಾರುಕಟ್ಟೆ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ			ವಾಣಿಜ್ಯ / ಕೈಗಾರಿಕಾ ಚಾಲ್ತಿ ಮಾರುಕಟ್ಟೆ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ			ಕೃಷಿ ಜಮೀನುಗಳ ಚಾಲ್ತಿ ಮಾರುಕಟ್ಟೆ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ			ಪರಿಷ್ಕೃತ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ		ಕೃಷಿ ಜಮೀನುಗಳ ಪರಿಷ್ಕೃತ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ		
		ವಾಸ ಚದರಡಿಗೆ ರೂ.ಗಳಲ್ಲಿ	ವಾಣಿಜ್ಯ ಚದರಡಿಗೆ ರೂ.ಗಳಲ್ಲಿ	ವಾಸ ಚದರಡಿಗೆ ರೂ.ಗಳಲ್ಲಿ	ವಾಣಿಜ್ಯ ಚದರಡಿಗೆ ರೂ.ಗಳಲ್ಲಿ	ಖುಷ್ಕಿ	ತರಿ	ಭಾಗಾಯ್ತು	ಖುಷ್ಕಿ	ತರಿ	ಭಾಗಾಯ್ತು	ಖುಷ್ಕಿ	ತರಿ	ಭಾಗಾಯ್ತು	ವಾಸೋಪಯೋಗಿ ಭೂಪರಿವರ್ತಿತ ಜಮೀನು	ವಾಣಿಜ್ಯ / ಕೈಗಾರಿಕಾ	ಖುಷ್ಕಿ	ತರಿ	ಭಾಗಾಯ್ತು
42	ಬ್ರಾಹ್ಮಣಗಡ್ಡೆ	30	40	40	45	90000	98000	550000	75000	82000	550000	500000	500000	500000	825000	880000	550000	550000	550000
43	ಆನೂರು	35	50	45	55	98000	105000	550000	82000	88000	550000	400000	300000	500000	825000	880000	440000	330000	550000
44	ಹಾದಿಗೆರೆ	40	60	50	70	150000	165000	770000	125000	138000	770000	500000	400000	700000	1155000	1232000	550000	440000	770000
45	ಮೂಡಚಿಂತಲಹಳ್ಳಿ	30	40	40	45	90000	98000	660000	75000	82000	660000	400000	350000	600000	990000	1056000	440000	385000	660000
46	ದೊಡ್ಡಪುರ	30	40	40	45	98000	105000	660000	82000	88000	660000	500000	250000	600000	990000	1056000	550000	275000	660000
47	ವಿಶ್ವನಾಥಪುರ	30	40	40	45	98000	105000	385000	82000	88000	385000	300000	200000	350000	578000	616000	330000	220000	385000
48	ಬಳಪಾಲಹಳ್ಳಿ	30	40	40	45	98000	105000	440000	82000	88000	440000	300000	–	400000	660000	704000	330000	385000	440000
49	ಕುರುಬೂರು	40	50	50	55	135000	142500	660000	113000	119000	660000	450000	550000	600000	990000	1056000	495000	605000	660000
50	ಕುರುಬೂರು ಅಮಾನಿಕೆರೆ	30	40	40	45	113000	120000	660000	94000	100000	660000	–	600000	–	990000	1056000	660000	660000	660000
51	ಕೂತರಾಜನಹಳ್ಳಿ	30	40	40	45	83000	90000	660000	69000	75000	660000	500000	550000	600000	990000	1056000	550000	605000	660000
52	ರಾಮೇನಹಳ್ಳಿ	30	40	40	45	75000	82500	660000	63000	69000	660000	50000	560000	600000	990000	1056000	550000	616000	660000
53	ಮೈಲಾಂಡ್ಲಹಳ್ಳಿ	30	40	40	45	150000	165000	715000	125000	138000	715000	550000	600000	650000	1073000	1144000	605000	660000	715000
54	ಗಾಜಲಹಳ್ಳಿ	30	40	40	45	99000	105000	688000	83000	88000	688000	55000	600000	625000	1032000	1101000	605000	660000	688000
55	ಯಡಹಳ್ಳಿ	30	40	40	45	83000	90000	715000	69000	75000	715000	550000	600000	650000	1073000	1144000	605000	660000	715000
56	ನಕ್ಕಲಹಳ್ಳಿ	30	40	40	45	83000	90000	715000	69000	75000	715000	570000	600000	650000	1073000	1144000	627000	660000	715000
57	ಬಂಡಾಪ್ಪಹಳ್ಳಿ	30	40	40	45	825000	90000	715000	688000	75000	715000	570000	600000	650000	1073000	1144000	627000	660000	715000

ಕ್ರ ಸಂ.	ಗ್ರಾಮ/ರಸ್ತೆ/ಪ್ರದೇಶದ ಹೆಸರು	ನಿವೇಶನಕ್ಕೆ ಚಾಲ್ತಿ ಮೌಲ್ಯ ಪ್ರತಿ ಚದರಡಿಗೆ		ನಿವೇಶನಕ್ಕೆ ಪರಿಷ್ಕೃತ ಮೌಲ್ಯ ಪ್ರತಿ ಚದರಡಿಗೆ		ವಾಸೋಪಯೋಗಿ ಭೂಪರಿವರ್ತಿತ ಜಮೀನು ಚಾಲ್ತಿ ಮಾರುಕಟ್ಟೆ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ			ವಾಣಿಜ್ಯ / ಕೈಗಾರಿಕಾ ಚಾಲ್ತಿ ಮಾರುಕಟ್ಟೆ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ			ಕೃಷಿ ಜಮೀನುಗಳ ಚಾಲ್ತಿ ಮಾರುಕಟ್ಟೆ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ			ಪರಿಷ್ಕೃತ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ		ಕೃಷಿ ಜಮೀನುಗಳ ಪರಿಷ್ಕೃತ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ		
		ವಾಸ ಚದರಡಿಗೆ ರೂ.ಗಳಲ್ಲಿ	ವಾಣಿಜ್ಯ ಚದರಡಿಗೆ ರೂ.ಗಳಲ್ಲಿ	ವಾಸ ಚದರಡಿಗೆ ರೂ.ಗಳಲ್ಲಿ	ವಾಣಿಜ್ಯ ಚದರಡಿಗೆ ರೂ.ಗಳಲ್ಲಿ	ಖುಷ್ಕಿ	ತರಿ	ಭಾಗಾಯ್ತು	ಖುಷ್ಕಿ	ತರಿ	ಭಾಗಾಯ್ತು	ಖುಷ್ಕಿ	ತರಿ	ಭಾಗಾಯ್ತು	ವಾಸೋಪಯೋಗಿ ಭೂಪರಿವರ್ತಿತ ಜಮೀನು	ವಾಣಿಜ್ಯ / ಕೈಗಾರಿಕಾ	ಖುಷ್ಕಿ	ತರಿ	ಭಾಗಾಯ್ತು
58	ಆಲಂಬಗಿರಿ	40	60	50	70	150000	135000	935000	125000	113000	935000	800000	500000	850000	1403000	1496000	880000	550000	935000
59	ಚನ್ನಕೇಶವಪುರ	30	40	40	45	105000	98000	880000	88000	82000	880000	80000	600000	800000	1320000	1408000	880000	660000	880000
60	ನಿಡಗುರ್ಕಿ	30	40	40	45	105000	90000	220000	88000	75000	220000	120000	50000	200000	330000	352000	132000	150000	220000
61	ಹೊಸಹಳ್ಳಿ	30	40	40	45	98000	105000	385000	82000	88000	385000	30000	150000	350000	577500	616000	330000	165000	385000
62	ಬ್ರಾಹ್ಮಣದಿನ್ನೆ	30	40	40	45	120000	128000	440000	100000	107000	440000	350000	200000	400000	660000	704000	385000	220000	440000
63	ಕಾಗತಿ	40	60	50	70	120000	128000	1045000	100000	107000	1045000	85000	86000	950000	1568000	1672000	935000	946000	1045000
64	ಕೊಂಗತಿಮ್ಮನಹಳ್ಳಿ	30	40	40	45	90000	98000	880000	75000	82000	880000	65000	700000	800000	1320000	1408000	715000	770000	880000
65	ಭೈರರೆಡ್ಡಿಹಳ್ಳಿ	30	40	40	45	105000	113000	935000	88000	94000	935000	750000	800000	850000	1403000	1496000	825000	880000	935000
66	ಬಚ್ಚವಾರಹಳ್ಳಿ	30	40	40	45	105000	113000	990000	88000	94000	990000	750000	820000	900000	1485000	1584000	825000	902000	990000
67	ಬಡಗವಾರಹಳ್ಳಿ	40	50	50	55	113000	113000	990000	94000	94000	990000	800000	850000	900000	1485000	1584000	880000	935000	990000
68	ಮ್ಯಾಕಲಸೊಣ್ಣೇನಹಳ್ಳಿ	30	40	40	45	90000	98000	825000	75000	82000	825000	65000	700000	750000	1238000	1320000	715000	770000	825000
69	ಮರಿಮಾಕಲಹಳ್ಳಿ	30	40	40	45	98000	90000	880000	82000	75000	880000	700000	750000	800000	1320000	1408000	770000	825000	880000
70	ಚೊಕ್ಕರೆಡ್ಡಿಹಳ್ಳಿ	45	55	55	65	120000	128000	1045000	100000	107000	1045000	850000	900000	950000	1568000	1672000	935000	990000	1045000
71	ಶಿಂಗಸಂದ್ರ	30	40	40	45	90000	98000	825000	75000	82000	825000	650000	700000	750000	1238000	1320000	715000	770000	825000
72	ಬಿಗೂರು	30	60	40	70	105000	113000	935000	88000	94000	935000	750000	800000	850000	1403000	1496000	825000	880000	935000
73	ಗೌಡಗಡ್ಡೆ	40	50	50	55	90000	98000	825000	75000	82000	825000	600000	70000	750000	1238000	1320000	660000	770000	825000
74	ಮಾಡಿಕೆರೆ	50	80	100	120	225000	180000	1320000	188000	150000	1320000	1200000	1200000	1200000	1980000	2112000	1320000	1320000	1320000
	ಹೊಸ ಬಡಾವಣೆ	80	100																

ಕ್ರ. ಸಂ.	ಗ್ರಾಮ/ರಸ್ತೆ/ಪ್ರದೇಶದ ಹೆಸರು	ನಿವೇಶನಕ್ಕೆ ಚಾಲ್ತಿ ಮೌಲ್ಯ ಪ್ರತಿ ಚದರಡಿಗೆ		ನಿವೇಶನಕ್ಕೆ ಪರಿಷ್ಕೃತ ಮೌಲ್ಯ ಪ್ರತಿ ಚದರಡಿಗೆ		ವಾಸೋಪಯೋಗಿ ಭೂಪರಿವರ್ತಿತ ಜಮೀನು ಚಾಲ್ತಿ ಮಾರುಕಟ್ಟೆ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ			ವಾಣಿಜ್ಯ / ಕೈಗಾರಿಕಾ ಚಾಲ್ತಿ ಮಾರುಕಟ್ಟೆ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ			ಕೃಷಿ ಜಮೀನುಗಳ ಚಾಲ್ತಿ ಮಾರುಕಟ್ಟೆ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ			ಪರಿಷ್ಕೃತ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ		ಕೃಷಿ ಜಮೀನುಗಳ ಪರಿಷ್ಕೃತ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ		
		ವಾಸ ಚದರಡಿಗೆ ರೂ.ಗಳಲ್ಲಿ	ವಾಣಿಜ್ಯ ಚದರಡಿಗೆ ರೂ.ಗಳಲ್ಲಿ	ವಾಸ ಚದರಡಿಗೆ ರೂ.ಗಳಲ್ಲಿ	ವಾಣಿಜ್ಯ ಚದರಡಿಗೆ ರೂ.ಗಳಲ್ಲಿ	ಖುಷ್ಕಿ	ತರಿ	ಭಾಗಾಯ್ತು	ಖುಷ್ಕಿ	ತರಿ	ಭಾಗಾಯ್ತು	ಖುಷ್ಕಿ	ತರಿ	ಭಾಗಾಯ್ತು	ವಾಸೋಪಯೋಗಿ ಭೂಪರಿವರ್ತಿತ ಜಮೀನು	ವಾಣಿಜ್ಯ / ಕೈಗಾರಿಕಾ	ಖುಷ್ಕಿ	ತರಿ	ಭಾಗಾಯ್ತು
75	ಚಿಕ್ಕಗಂಜೂರು	30	40	40	45	1125000	120000	880000	938000	100000	880000	800000	800000	800000	1320000	1408000	880000	880000	8800[illegible]
76	ದೊಡ್ಡಗಂಜೂರು	40	50	50	55	120000	128000	1100000	100000	107000	1100000	1000000	1000000	1000000	1650000	1760000	1100000	1100000	1100000
77	ಗೊಲ್ಲಪಳ್ಳಿ	30	40	40	45	98000	105000	660000	81300	88000	660000	600000	600000	600000	990000	1056000	660000	660000	660000

ಷರಾ:- ರಾಷ್ಟ್ರೀಯ ಹೆದ್ದಾರಿಗಳ ಸ್ವತ್ತುಗಳಿಗೆ ನಿಗದಿಪಡಿಸಿರತಕ್ಕ ದರಕ್ಕೆ ಶೇ 50% ರಂತೆ ಮತ್ತು ರಾಜ್ಯ ಹೆದ್ದಾರಿಯ ಸ್ವತ್ತುಗಳಿಗೆ ನಿಗದಿಪಡಿಸರತಕ್ಕ ದರಕ್ಕೆ ಶೇ 25% ರಷ್ಟು ಹೆಚ್ಚಿಸಿ ನಿಗದಿಪಡಿಸರಬೇಕಾಗಿರುತ್ತೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕು ಉಪನೋಂದಣಿ ಕಛೇರಿಯ ವ್ಯಾಪ್ತಿಗೆ ಒಳಪಡುವ ಸ್ಥಿರಾಸ್ತಿಗಳ ಪರಿಷ್ಕೃತ ಮೌಲ್ಯ

ಕೈವಾರ ಹೋಬಳಿ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ.

ಕ್ರ. ಸಂ.	ಗ್ರಾಮ ರಸ್ತೆ ಪ್ರದೇಶದ ಹೆಸರು	ನಿವೇಶನಕ್ಕೆ ಚಾಲ್ತಿ ಮೌಲ್ಯ ಪ್ರತಿ ಚದರಡಿಗೆ		ನಿವೇಶನಕ್ಕೆ ಪರಿಷ್ಕೃತ ಮೌಲ್ಯ ಪ್ರತಿ ಚದರಡಿಗೆ		ವಾಸೋಪಯೋಗಿ ಭೂಪರಿವರ್ತಿತ ಜಮೀನು ಚಾಲ್ತಿ ಮಾರುಕಟ್ಟೆ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ			ವಾಣಿಜ್ಯ / ಕೈಗಾರಿಕಾ ಚಾಲ್ತಿ ಮಾರುಕಟ್ಟೆ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ			ಕೃಷಿ ಜಮೀನುಗಳ ಚಾಲಿ ಮಾರುಕಟ್ಟೆ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ			ಪರಿಷ್ಕೃತ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ		ಕೃಷಿ ಜಮೀನುಗಳ ಪರಿಷ್ಕೃತ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ		
		ವಾಸ ಚದರಡಿಗೆ ರೂ.ಗಳಲ್ಲಿ	ವಾಣಿಜ್ಯ ಚದರಡಿಗೆ ರೂ.ಗಳಲ್ಲಿ	ವಾಸ ಚದರಡಿಗೆ ರೂ.ಗಳಲ್ಲಿ	ವಾಣಿಜ್ಯ ಚದರಡಿಗೆ ರೂ.ಗಳಲ್ಲಿ	ಖುಷ್ಕಿ	ತರಿ	ಭಾಗಾಯ್ತು	ಖುಷ್ಕಿ	ತರಿ	ಭಾಗಾಯ್ತು	ಖುಷ್ಕಿ	ತರಿ	ಭಾಗಾಯ್ತು	ವಾಸೋಪಯೋಗಿ ಭೂಪರಿವರ್ತಿತ ಜಮೀನು	ವಾಣಿಜ್ಯ / ಕೈಗಾರಿಕಾ	ಖುಷ್ಕಿ	ತರಿ	ಭಾಗಾಯ್ತು
1	ಕೈವಾರ	75	110	85	125	225000	150000	190000	188000	125000	190000	175000	110000	170000	285000	304000	195000	125000	190000
2	[illegible]	40	60	45	70	150000	135000	150000	125000	113000	150000	1100000	100000	135000	225000	240000	125000	110000	150000
3	[illegible]	30	40	35	45	98000	105000	95000	82000	88000	95000	70000	77000	82000	143000	152000	80000	85000	95000
4	[illegible]	30	35	35	40	150000	105000	125000	125000	88000	125000	110000	77000	110000	188000	200000	125000	85000	125000
5	ಮಸ್ತೇನಹಳ್ಳಿ	30	35	35	40	150000	105000	125000	125000	88000	125000	110000	770000	110000	188000	200000	125000	125000	125000

ಕ್ರ. ಸಂ.	ಗ್ರಾಮ/ರಸ್ತೆ/ಪ್ರದೇಶದ ಹೆಸರು	ನಿವೇಶನಕ್ಕೆ ಚಾಲ್ತಿ ಮೌಲ್ಯ ಪ್ರತಿ ಚದರಡಿಗೆ		ನಿವೇಶನಕ್ಕೆ ಪರಿಷ್ಕೃತ ಮೌಲ್ಯ ಪ್ರತಿ ಚದರಡಿಗೆ		ವಾಸೋಪಯೋಗಿ ಭೂಪರಿವರ್ತಿತ ಜಮೀನು ಚಾಲ್ತಿ ಮಾರುಕಟ್ಟೆ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ			ವಾಣಿಜ್ಯ / ಕೈಗಾರಿಕಾ ಚಾಲ್ತಿ ಮಾರುಕಟ್ಟೆ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ			ಕೃಷಿ ಜಮೀನುಗಳ ಚಾಲಿ ಮಾರುಕಟ್ಟೆ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ			ಪರಿಷ್ಕೃತ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ		ಕೃಷಿ ಜಮೀನುಗಳ ಪರಿಷ್ಕೃತ ಮೌಲ್ಯ ಪ್ರತಿ ಎಕರೆಗೆ ರೂ.ಗಳಲ್ಲಿ		
		ವಾಸ ಚದರಡಿಗೆ ರೂ.ಗಳಲ್ಲಿ	ವಾಣಿಜ್ಯ ಚದರಡಿಗೆ ರೂ.ಗಳಲ್ಲಿ	ವಾಸ ಚದರಡಿಗೆ ರೂ.ಗಳಲ್ಲಿ	ವಾಣಿಜ್ಯ ಚದರಡಿಗೆ ರೂ.ಗಳಲ್ಲಿ	ಖುಷ್ಕಿ	ತರಿ	ಭಾಗಾಯ್ತು	ಖುಷ್ಕಿ	ತರಿ	ಭಾಗಾಯ್ತು	ಖುಷ್ಕಿ	ತರಿ	ಭಾಗಾಯ್ತು	ವಾಸೋಪಯೋಗಿ ಭೂಪರಿವರ್ತಿತ ಜಮೀನು	ವಾಣಿಜ್ಯ / ಕೈಗಾರಿಕಾ	ಖುಷ್ಕಿ	ತರಿ	ಭಾಗಾಯ್ತು
6	ಶೀಗೇಹಳ್ಳಿ	30	35	35	40	113000	120000	100000	94000	100000	100000	82000	88000	88000	150000	160000	95000	100000	100000
7	ಹುಲುಗುಮ್ಮನಹಳ್ಳಿ	30	35	35	40	105000	120000	100000	88000	100000	100000	82000	88000	88000	150000	160000	95000	100000	100000
8	ಗುಟ್ಟಹಳ್ಳಿ	30	35	35	40	90000	105000	90000	75000	88000	90000	66000	77000	82000	135000	144000	75000	85000	90000
ದಾಖಲಾತಿಗಳನ್ನು ಪರಿಶೀಲಿಸಲಾಗಿ ಪ್ರಕರಣದಲ್ಲಿ ಜಪ್ತುಪಡಿಸಿರುವ ಟ್ರ್ಯಾಕ್ಟರ್ ಸಂಖ್ಯೆ: ಕೆಎ–11/ಟಿ–1321 ಮತ್ತು ಟ್ರ್ಯಾಲಿ ಸಂಖ್ಯೆ: ಕೆಎ–11/ಟಿ–1322 ವಾಹನದಲ್ಲಿ ದಿನಾಂಕ:25–12–2008 ರಂದು ಅಕ್ರಮವಾಗಿ ಮದ್ಯಸಾರಯುಕ್ತ ದ್ರವ ವನ್ನು ಹೊಂದಿ ಸಾಗಾಣಿಕೆ ಮಾಡಿರುವುದು ಹಾಗೂ ಹೊರರಾಜ್ಯದ ಮದ್ಯವನ್ನು ರಾಜ್ಯದಲ್ಲಿ ಸಾಗಾಣಿಕೆ ಮಾಡಿ ರಾಜಸ್ವಕ್ಕೆ ನಷ್ಟ ಉಂಟುಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ವಾಹನದ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ, ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನದ ಮಾಲೀಕರಿಗೆ/ಏಜೆಂಟರ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮೀಲಾಗದೇ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿರುವುದಿಲ್ಲ. ವಾಹನವನ್ನು ಚಾಲನೆಯಿಲ್ಲದೇ ಹೆಚ್ಚು ಸಮಯ ಇಟ್ಟುಕೊಂಡಲ್ಲಿ ಹವಾಮಾನದ ವೈಪರೀತ್ಯಕ್ಕೆ ಹಾಳಾಗುವ ಮತ್ತು ಬಿಡಿ ಭಾಗ ಗಳು ತುಕ್ಕು ಹಿಡಿಯುವ ಸಂಭವವಿರುವುದರಿಂದ, ಸರ್ಕಾರದ ಆದಾಯದ ಹಿತದೃಷ್ಠಿಯಿಂದ ಹಾಗೂ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾದ ಅಧಿಕಾರ ಪ್ರಾಧಿಕಾರಕ್ಕೆ ದತ್ತವಾಗಿರುವುದರಿಂದ ಮೇಲ್ಕಂಡ ವಾಹನವನ್ನು ವಾರಸುದಾರರಿಲ್ಲದ ಸ್ವತ್ತು ಎಂದು ಪರಿಗಣಿಸಿ, ಏಕಪಕ್ಷೀಯವಾಗಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆ ಎಂದು ಅಭಿಪ್ರಾಯಪಟ್ಟು ಈ ಕೆಳಕಂಡ ಆದೇಶ.

ಅದೇಶ ಸಂಖ್ಯೆ: ಡಿಟಿಸಿಆರ್/169/2008–09, ದಿನಾಂಕ:28–11–2011.

ಜೆ.ಎನ್.ಸೋಮೇಶ್ವರ್, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್. ಮಂಡ್ಯ ಜಿಲ್ಲೆ, ಮಂಡ್ಯ ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43 (ಸಿ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಅಬಕಾರಿ ಉಪ ನಿರೀಕ್ಷಕರು, ನಂ.1, ನಾಗಮಂಗಲ ವಲಯ. ನಾಗಮಂಗಲ ಇವರ ಪ್ರ.ಮಾ.ವ ಸಂಖ್ಯೆ:15/2008–09, ದಿನಾಂಕ:25–12–2008 ರ ಪ್ರಕರಣದಲ್ಲಿ ಜಪ್ತುಪಡಿಸಿರುವ ಟ್ರ್ಯಾಕ್ಟರ್ ಸಂಖ್ಯೆ: ಕೆಎ–11/ಟಿ–1321 ಮತ್ತು ಟ್ರ್ಯಾಲಿ ಸಂಖ್ಯೆ: ಕೆಎ–11/ಟಿ–1322 ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ಇಂದು ಅಂದರೆ 2011 ನೇ ಇಸವಿ ನವೆಂಬರ್ ತಿಂಗಳ 28 ನೇ ತಾರೀಖಿನಂದು ವಿಷಯ ನಿರ್ವಾಹಕ ರಿಗೆ ಉಕ್ತ ಲೇಖನ ನೀಡಿ, ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿದ ಪ್ರತಿಯಲ್ಲಿನ ತಪ್ಪುಗಳನ್ನು ತಿದ್ದಿ ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್,

ಮಂಡ್ಯ ಜಿಲ್ಲೆ, ಮಂಡ್ಯ.

ಪಿ.ಆರ್. 1299

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ ಇವರ ನ್ಯಾಯಾಲಯದಲ್ಲಿ.

ಡಿಟಿಸಿಆರ್/447/2010–11, ದಿನಾಂಕ:25–11–2011.

ಆರಕ್ಷಕ ನಿರೀಕ್ಷಕರು, ಪುರ ಪೊಲೀಸ್ ಠಾಣೆ, ಮಳವಳ್ಳಿ ಇವರ ಪ್ರ.ಮಾ.ವ ಸಂಖ್ಯೆ: 05/2011, ದಿನಾಂಕ: 11–01–2011.

ಉಪಸ್ಥಿತರು : ಜೆ.ಎನ್.ಸೋಮೇಶ್ವರ್, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ.

ಪಿರ್ಯಾದುದಾರರು	ಆರೋಪಿಗಳು.
ಆರಕ್ಷಕ ನಿರೀಕ್ಷಕರು, ಪುರ ಪೊಲೀಸ್ ಠಾಣೆ, ಮಳವಳ್ಳಿ ಟೌನ್.	ಬಸವರಾಜು ಬಿನ್ ಕಾಮೀರೇಗೌಡ, 30 ವರ್ಷ, ಒಕ್ಕಲಿಗರು, ವ್ಯಾಪಾರ, ವಾಸ:ತಮ್ಮಡಹಳ್ಳಿ ಗ್ರಾಮ, ಮಳವಳ್ಳಿ ತಾಲ್ಲೂಕು.

ಪ್ರಕರಣದ ಮುಖ್ಯಾಂಶಗಳು

ದಿನಾಂಕ:11-01-2011 ರಂದು ಬೆಳಗ್ಗೆ 10-05 ರ ಸಮಯದಲ್ಲಿ ಮಳವಳ್ಳಿ ಟೌನ್ ಮಳವಳ್ಳಿ ಗ ಮೈಸೂರು ರಸ್ತೆಯ ಕೋರ್ಟ್ ಕಡೆಗೆ ಹೋಗುವ ರಸ್ತೆಯ ಸೇರಿದಂತೆ ಅನಧಿಕೃತವಾಗಿ 19.800 ಲೀ ಮದ್ಯವನ್ನು ಬಜಾಜ್ ಚೇತಕ್ ಸ್ಕೂಟರ್ ಸಂಖ್ಯೆ: ಕೆಎ-11/ಇ-6198 ವಾಹನದಲ್ಲಿ ಹೊಂದಿ ಸಾಗಾಣಿಕೆ ಮಾಡುತ್ತಿದ್ದುದನ್ನು ಪತ್ತೆ ಹಚ್ಚಿ ಮಳವಳ್ಳಿ ಪುರ ಪೊಲೀಸ್ ಠಾಣೆ ಈ ಅಕ್ರಮವು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 32 ಮತ್ತು 34 ರ ರೀತ್ಯಾ ಅಪರಾಧವಾದ್ದರಿಂದ ಈ ಬಗ್ಗೆ ಪ್ರ.ಮಾ.ವ ಸಂಖ್ಯೆ: 05/2011 ರಂತೆ ಮೊಕದ್ದಮೆಯನ್ನು ದಾಖಲು ಮಾಡಿರುತ್ತಾರೆ.

ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿದ ತನಿಖಾಧಿಕಾರಿಗಳು ಜಪ್ತುಪಡಿಸಿಕೊಂಡಿರುವ ವಸ್ತುಗಳನ್ನು ತಮ್ಮದೆಂದು ಹಕ್ಕು ಸಾಧಿಸಲು ಯಾರು ಮುಂದೆ ಬಾರದೆ ಇರುವುದರಿಂದ ಮೇಲ್ಕಂಡ ಮದ್ಯ, ವಾಹನ ಮತ್ತು ಇತರೇ ವಸ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ದಿನಾಂಕ:10-03-2011, 14-03-2011 ಮತ್ತು 09-08-2011 ರ ಪತ್ರಗಳ ಮೂಲಕ ಕೋರಿರುತ್ತಾರೆ.

ಈ ಮಧ್ಯೆ ಪ್ರಾಧಿಕಾರವಲ್ಲಿ ಮುಟ್ಟುಗೋಲು ನಡುವಳಿಗಳನ್ನು ಕೈಗೊಂಡಿದ್ದು ತನಿಖಾಧಿಕಾರಿಗಳ ಶಿಫಾರಸ್ಸಿನ ಮೇರೆಗೆ ಪ್ರಕರಣದಲ್ಲಿ ಜಪ್ತುಪಡಿಸಿಕೊಂಡಿರುವ 19.800 ಲೀ ಮದ್ಯ (ರಾಸಾಯನಿಕ ಪರೀಕ್ಷೆಗೆ ತೆಗೆದ ಮಾದರಿ ಹೊರತುಪಡಿಸಿ) ಮತ್ತು ಇತರೇ ವಸ್ತುಗಳನ್ನು ತನ್ನದೆಂದು ಕೋರಿ ಯಾರು ಹಕ್ಕು ಸಾಧಿಸದ ಕಾರಣ ದಿನಾಂಕ:06-04-2011 ರಂದು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಬಜಾಜ್ ಚೇತಕ್ ಸ್ಕೂಟರ್ ಸಂಖ್ಯೆ: ಕೆಎ-11/ಇ-6198 ವಾಹನಕ್ಕೆ ಸಂಬಂಧಪಟ್ಟಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಮಂಡ್ಯ ಇವರು ನೀಡಿರುವ "ಬಿ" ವಹಿಯ ಪರಿಶೀಲನೆಯಿಂದ ಶ್ರೀ ಹೆಚ್.ಕೆ.ಮಂಚಯ್ಯ ಬಿನ್ ಕಾಳಯ್ಯ, ರಾಮಮಂದಿರ ಬೀದಿ, ಹೊಸಹಳ್ಳಿ, ಮಂಡ್ಯ - ಇವರು ವಾಹನದ ಮಾಲೀಕರೆಂಬುದು ತಿಳಿದು ಬಂದಿದ್ದು, ಸದರಿಯವರಿಗೆ ದಿನಾಂಕ:26-10-2011 ರಂದು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43 (ಬಿ) ರನ್ವಯ ಕಾರಣ ಕೇಳುವ ನೋಟೀಸ್‌ನ್ನು ನೊಂದಣಿ ಅಂಚೆಯ ಮೂಲಕ ನೀಡಲಾಗಿತ್ತು. ಸದರಿ ಕಾರಣ ಕೇಳುವ ನೋಟೀಸ್ ವಾಹನದ ಮಾಲೀಕರ ವಿಳಾಸದಲ್ಲಿ ಸ್ವೀಕೃತಿಯಾಗಿರುತ್ತದೆ ಹಾಗೂ ಅಬಕಾರಿ ನಿರೀಕ್ಷಕರು, ಮಳವಳ್ಳಿ ವಲಯ ಇವರ ಮುಖಾಂತರ ಜಾರಿಯಾಗಿರುತ್ತದೆ.

ದಾಖಲಾತಿಗಳನ್ನು ಪರಿಶೀಲಿಸಲಾಗಿ ಪ್ರಕರಣದಲ್ಲಿ ಜಪ್ತುಪಡಿಸಿರುವ ಬಜಾಜ್ ಚೇತಕ್ ಸ್ಕೂಟರ್ ಸಂಖ್ಯೆ: ಕೆಎ-11/ಇ-6198 ವಾಹನದಲ್ಲಿ ದಿನಾಂಕ:11-01-2011 ರಂದು ಅಕ್ರಮವಾಗಿ ಮದ್ಯಸಾರಯುಕ್ತ ದ್ರವವನ್ನು ಹೊಂದಿ ಸಾಗಾಣಿಕೆ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (10) ತಿಂಗಳುಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ ಈ ಬಗ್ಗೆ ತಾನು ವಿಚಾರಣೆ ನಡೆಸಬೇಕೆಂದಾಗಲೀ ಯಾರೊಬ್ಬರು ಖುದ್ದಾಗಿಯಾಗಲೀ, ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನದ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ, ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಪರೋಕ್ಷವಾಗಿ ಒಪ್ಪಿ ಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನದ ಮಾಲೀಕರಿಗೆ/ಚಾಲಕರ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮೀಲಾಗದೇ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿರುವುದಿಲ್ಲ. ವಾಹನವನ್ನು ಚಾಲನೆಯಿಲ್ಲದೇ ಹೆಚ್ಚು ಸಮಯ ಇಟ್ಟುಕೊಂಡಲ್ಲಿ ಹವಾಮಾನದ ವೈಪರೀತ್ಯಕ್ಕೆ ಹಾಳಾಗುವ ಮತ್ತು ಬಿಡಿ ಭಾಗಗಳು ತುಕ್ಕು ಹಿಡಿಯುವ ಸಂಭವವಿರುವುದರಿಂದ, ಸರ್ಕಾರದ ಆದಾಯದ ಹಿತದೃಷ್ಟಿಯಿಂದ ಹಾಗೂ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾದ ಅಧಿಕಾರ ಪ್ರಾಧಿಕಾರಕ್ಕೆ ದತ್ತವಾಗಿರುವುದರಿಂದ ಮೇಲ್ಕಂಡ ವಾಹನವನ್ನು ವಾರಸುದಾರರಿಲ್ಲದ ಸ್ವತ್ತು ಎಂದು ಪರಿಗಣಿಸಿ, ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆ ಎಂದು ಅಭಿಪ್ರಾಯಪಟ್ಟು ಈ ಕೆಳಕಂಡ ಆದೇಶ.

ಅದೇಶ ಸಂಖ್ಯೆ: ಡಿಟಿಸಿಆರ್/447/2010-11, ದಿನಾಂಕ:25-11-2011.

ಜೆ.ಎನ್.ಸೋಮಶೇಖರ್, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43 (ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಆರಕ್ಷಕ ನಿರೀಕ್ಷಕರು, ಪುರ ಪೊಲೀಸ್ ಠಾಣೆ, ಮಳವಳ್ಳಿ ಇವರ ಪ್ರ.ಮಾ.ವ ಸಂಖ್ಯೆ 05/2011, ದಿನಾಂಕ:11-01-2011 ರ ಪ್ರಕರಣದಲ್ಲಿ ಜಪ್ತುಪಡಿಸಿರುವ ಬಜಾಜ್ ಚೇತಕ್ ಸ್ಕೂಟರ್ ಸಂಖ್ಯೆ: ಕೆಎ-11/ಇ-6198 ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ಇಂದು ಅಂದರೆ 2011 ನೇ ಇಸವಿ ನವೆಂಬರ್ ತಿಂಗಳ 25 ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತ ಲೇಖನ ನೀಡಿ, ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿದ ಪ್ರತಿಯಲ್ಲಿನ ತಪ್ಪುಗಳನ್ನು ತಿದ್ದಿ ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್,
ಮಂಡ್ಯ ಜಿಲ್ಲೆ, ಮಂಡ್ಯ.

ಪಿ.ಆರ್. 1300

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ ಇವರ ನ್ಯಾಯಾಲಯದಲ್ಲಿ.

ಡಿಟಿಸಿಆರ್/294/2009-10, ದಿನಾಂಕ:28-11-2011.

ಆರಕ್ಷಕ ಉಪ ನಿರೀಕ್ಷಕರು, ಕೆ.ಆರ್.ಸಾಗರ ಪೊಲೀಸ್ ಠಾಣೆ, ಶ್ರೀರಂಗಪಟ್ಟಣ ತಾಲ್ಲೂಕು ಇವರ ಅಪರಾಧ ಸಂಖ್ಯೆ: 180/09, ದಿನಾಂಕ:26-11-2009.

ಉಪಸ್ಥಿತರು : ಜೆ.ಎನ್.ಸೋಮೇಶ್ವರ್, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ.

ಪಿರ್ಯಾದುದಾರರು	**ಆರೋಪಿಗಳು.**
ಆರಕ್ಷಕ ಉಪ ನಿರೀಕ್ಷಕರು, ಕೆ.ಆರ್.ಸಾಗರ ಪೊಲೀಸ್ ಠಾಣೆ, ಶ್ರೀರಂಗಪಟ್ಟಣ ತಾಲ್ಲೂಕು.	1) ಸಿದ್ದರಾಜು ಬಿನ್ ಜೋರಯ್ಯ, ದಾಮದಹಳ್ಳಿ ಗ್ರಾಮ. 2) ಮಣಿಕಂಠ ಬಿನ್ ಪುಟ್ಟಮಲ್ಲು, ಕೃಷ್ಣನಗರ, ಮೈಸೂರು.

ಪ್ರಕರಣದ ಮುಖ್ಯಾಂಶಗಳು

ದಿನಾಂಕ:26-11-2009 ರಂದು ಸಂಜೆ 04-45 ರ ಸಮಯದಲ್ಲಿ ಪಾಂಡವಪುರ ತಾಲ್ಲೂಕು, ಬನ್ನಂಗಾಡಿ ಗ್ರಾಮದ ಕೆರೆಕೋಡಿ ಬಳಿ ಇರುವ ಮಾರುತಿ ಚಿತ್ರಮಂದಿರದ ಬಳಿ ಅಕ್ರಮವಾಗಿ 11.340 ಲೀ ಮದ್ಯ ಮತ್ತು 15.720 ಲೀ ಬಿಯರ್‌ನ್ನು ಗೂಡ್ಸ್ ಆಟೋ ಸಂಖ್ಯೆ: ಕೆಎ-11/3591 ವಾಹನದಲ್ಲಿ ಹೊಂದಿ ಸಾಗಾಣಿಕೆ ಮಾಡುತ್ತಿದ್ದುದನ್ನು ಪತ್ತೆಮಾಡಿದ ಪಿರ್ಯಾದುದಾರರು ಈ ಅಕ್ರಮವು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 34 ರ ರೀತ್ಯಾ ಅಪರಾಧ ವಾದ್ದರಿಂದ ಈ ಬಗ್ಗೆ ಅಪರಾಧ ಸಂಖ್ಯೆ: 180/09 ರಂತೆ ಮೊಕದ್ದಮೆಯನ್ನು ದಾಖಲು ಮಾಡಿರುತ್ತಾರೆ.

ಪ್ರಕರಣದ ತನಿಖೆಯನ್ನು ಮುಂದುವರೆಸಿದ ತನಿಖಾಧಿಕಾರಿಗಳು ಜಪ್ತುಪಡಿಸಿಕೊಂಡಿರುವ ವಸ್ತುಗಳನ್ನು ತಮ್ಮದೆಂದು ಹಕ್ಕು ಸಾಧಿಸಲು ಯಾರು ಮುಂದೆ ಬಾರದೆ ಇರುವುದರಿಂದ ಮೇಲ್ಕಂಡ ಮದ್ಯ, ಬಿಯರ್, ವಾಹನ ಮತ್ತು ಇತರೇ ವಸ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ದಿನಾಂಕ:03-09-2010 ಮತ್ತು 04-10-2010 ಮತ್ತು 11-04-2011 ರ ಪತ್ರಗಳ ಮೂಲಕ ಕೋರಿರುತ್ತಾರೆ.

ಗೂಡ್ಸ್ ಆಟೋ ಸಂಖ್ಯೆ: ಕೆಎ-11/3591 ವಾಹನಕ್ಕೆ ಸಂಬಂಧಪಟ್ಟಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಮಂಡ್ಯ ಇವರು ನೀಡಿರುವ "ಬಿ" ವಹಿಯ ಪರಿಶೀಲನೆಯಿಂದ ಶ್ರೀ ಗೋಪಿ ಬಿನ್ ಸಿದ್ದೇಗೌಡ, ವಿಶ್ವೇಶ್ವರನಗರ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ - ಇವರು ವಾಹನದ ಮಾಲೀಕರೆಂಬುದು ತಿಳಿದು ಬಂದಿರುತ್ತದೆ. ಸದರಿಯವರು ದಿನಾಂಕ:13-12-2009 ವಾಹನದ ತಾತ್ಕಾಲಿಕ ಬಿಡುಗಡೆ ಸಂಬಂಧ ಅರ್ಜಿ ಸಲ್ಲಿಸಿರುತ್ತಾರೆ. ಈ ಸಂಬಂಧ ಸಹಾಯಕ ಅಭಿಯೋಗ ನಿರ್ದೇಶಕರು, ಮಂಡ್ಯ ಇವರ ಸ್ಪಷ್ಟ ಅಭಿಪ್ರಾಯ ಕೇಳಲಾಗಿ, ಸದರಿಯವರು ಮೇಲ್ಕಂಡ ವಾಹನವನ್ನು ಅರ್ಜಿದಾರರ ಮಧ್ಯಂತರ ಸ್ವಾಧೀನಕ್ಕೆ ಬಿಡುಗಡೆ ಮಾಡಿದ ಪಕ್ಷದಲ್ಲಿ ವಿಚಾರಣಾ ಸಮಯದಲ್ಲಿ ಹಾಜರುಪಡಿಸದೇ ಸದರಿ ವಾಹನವನ್ನು ಸಾಕ್ಷಿಗಳಿಂದ ಗುರ್ತಿಸಲು ಅಡಚಣೆಯಾಗುವ ಸಾಧ್ಯತೆ ಇರುವುದರಿಂದ ಅರ್ಜಿದಾರರ ಕೋರಿಕೆಯನ್ನು ತಿರಸ್ಕರಿಸುವಂತೆ ಆಕ್ಷೇಪಣೆ ಸಲ್ಲಿಸಿರುತ್ತಾರೆ.

ಮೊಕದ್ದಮೆಗೆ ಸಂಬಂಧಿಸಿದ ದಾಖಲೆಗಳನ್ನು ಹಾಗೂ ಅರ್ಜಿದಾರರ ಮನವಿಯ ಅಂಶಗಳನ್ನು ಪರಿಶೀಲಿಸಿ ವಶಪಡಿಸಿಕೊಂಡ ವಾಹನವನ್ನು ತಟಸ್ಥ ಸ್ಥಿತಿಯಲ್ಲಿ ಹಾಗೆಯೇ ಬಿಟ್ಟಲ್ಲಿ ಪ್ರಾಕೃತಿಕ ವೈಪರೀತ್ಯಗಳಿಗನುಗುಣವಾಗಿ ವಾಹನವು ಹಾಳಾಗುತ್ತದೆ ಎಂಬ ಅರ್ಜಿದಾರರ ಮನವಿಯನ್ನು ಪರಿಗಣಿಸಬಹುದೆಂದು ಭಾವಿಸಿ, ತನಿಖೆಯು ಮುಕ್ತಾಯಗೊಳ್ಳುವವರೆಗೂ ವಾಹನವನ್ನು ಇಲಾಖಾ ವಶದಲ್ಲಿಯೇ ಇಟ್ಟುಕೊಳ್ಳುವುದು ಅನಗತ್ಯವೆಂದು ಪ್ರಾಧಿಕಾರಕ್ಕೆ ಮನವರಿಕೆಯಾಗಿ, ಸರ್ಕಾರಕ್ಕೆ ಬರುವ ರಾಜಸ್ವದ ಹಿತದೃಷ್ಟಿಯಿಂದ ಮತ್ತು ವಾಹನದ ಭದ್ರತೆಗಾಗಿ ಉಚ್ಚ ನ್ಯಾಯಾಲಯವು ಇದೇ ರೀತಿಯ ಪ್ರಕರಣ ಆದೇಶ ಸಂಖ್ಯೆ ಕ್ರಿಮಿನಲ್ ಸಂಖ್ಯೆ:106/2008 ರಲ್ಲಿ ನೀಡಿರುವ ಆದೇಶಗಳಲ್ಲಿನ ತತ್ವಗಳನ್ನು ಗಮನದಲ್ಲಿರಿಸಿ ಕೊಂಡು ಈ ಪ್ರಕರಣಕ್ಕೆ ಅನ್ವಯಿಸುವಂತೆ ವಾಹನವನ್ನು ಮಾಲೀಕರ ವಶಕ್ಕೆ ತಾತ್ಕಾಲಿಕ ಸುಪರ್ದಿಗೆ ರೂ.33,000/- (ಮೂವತ್ತಮೂರು ಸಾವಿರ ರೂಪಾಯಿಗಳು ಮಾತ್ರ) ಗಳ ಬ್ಯಾಂಕ್ ಗ್ಯಾರಂಟಿಯನ್ನು ಪ್ರಕರಣ ಇತ್ಯರ್ಥಗೊಳ್ಳುವವರೆಗೂ ಚಾಲ್ತಿಯಲ್ಲಿರುವಂತೆ ದಿನಾಂಕ:09-08-2010 ರಂದು ಆದೇಶಿಸಲಾಗಿರುತ್ತದೆ. ಸದರಿ ಆದೇಶದ ದಿನಾಂಕದಿಂದ 30 ದಿವಸಗಳೊಳಗಾಗಿ ವಾಹನದ ಮಾಲೀಕರು ಷರತ್ತುಗಳ ಅನ್ವಯ ದಾಖಲಾತಿಗಳನ್ನು ಸಲ್ಲಿಸದೇ ಇದ್ದ ಪಕ್ಷದಲ್ಲಿ ಮುಂದಿನ ಕ್ರಮ ಜರುಗಿಸಲಾಗುವುದೆಂದು ತಿಳಿಸಲಾಗಿರುತ್ತದೆ. ಸದರಿ ಆದೇಶವನ್ನು ವಾಹನದ ಮಾಲೀಕರಿಗೆ ನೊಂದಣಿ ಅಂಚೆಯ ಮೂಲಕ ರವಾನಿಸಲಾಗಿದ್ದು, ಆದೇಶವು ವಾಹನದ ಮಾಲೀಕರ ವಿಳಾಸದಲ್ಲಿ ಸ್ವೀಕೃತಿಯಾಗಿರುತ್ತದೆ. ಇದುವರೆವಿಗೂ ವಾಹನದ ಮಾಲೀಕರಿಂದ ಯಾವುದೇ ಪ್ರತಿಕ್ರಿಯೆ ವ್ಯಕ್ತವಾಗಿರುವುದಿಲ್ಲ.

ದಾಖಲಾತಿಗಳನ್ನು ಪರಿಶೀಲಿಸಲಾಗಿ ಪ್ರಕರಣದಲ್ಲಿ ಜಪ್ತುಪಡಿಸಿರುವ ಗೂಡ್ಸ್ ಆಟೋ ಸಂಖ್ಯೆ: ಕೆಎ-11/3591 ವಾಹನದಲ್ಲಿ ಅಕ್ರಮವಾಗಿ ಮದ್ಯಸಾರಯುಕ್ತ ದ್ರವವನ್ನು ಹೊಂದಿ ಸಾಗಾಣಿಕೆ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ವಾಹನದ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಈ ಪ್ರಾಧಿಕಾರ ದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ, ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನದ ಮಾಲೀಕರಿಗೆ/ಏಜೆಂಟರ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮೀಲಾಗದೇ ಹಾಗೂ ಅವರ್ಯಾರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುವನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿರುವುದಿಲ್ಲ. ವಾಹನವನ್ನು [illegible] ಸಮಯ ಇಟ್ಟುಕೊಂಡಲ್ಲಿ ಹವಾಮಾನದ ವೈಪರೀತ್ಯಕ್ಕೆ ಹಾಳಾಗುವ ಮತ್ತು ಬಿಡಿ ಭಾಗಗಳು [illegible]

ಸರ್ಕಾರದ ಆದಾಯದ ಹಿತವೃಷ್ಠಿಯಿಂದ ಹಾಗೂ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾದ ಅಧಿಕಾರ ಪ್ರಾಧಿಕಾರಕ್ಕೆ ದತ್ತವಾಗಿರುವುದರಿಂದ ಮೇಲ್ಕಂಡ ಮದ್ಯ, ಬಿಯರ್ ಮತ್ತು ವಾಹನವನ್ನು ವಾರಸುದಾರರಿಲ್ಲದ ಸ್ವತ್ತು ಎಂದು ಪರಿಗಣಿಸಿ, ಏಕಪಕ್ಷೀಯವಾಗಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆ ಎಂದು ಅಭಿಪ್ರಾಯಪಟ್ಟು ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/294/2009-10, ದಿನಾಂಕ:28-11-2011.

ಜೆ.ಎನ್.ಸೋಮೇಶ್ವರ್, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43 (ಸಿ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಆರಕ್ಷಕ ಉಪ ನಿರೀಕ್ಷಕರು, ಕೆ.ಆರ್.ಸಾಗರ ಪೊಲೀಸ್ ಠಾಣೆ, ಶ್ರೀರಂಗಪಟ್ಟಣ ತಾಲ್ಲೂಕು ಇವರ ಅಪರಾಧ ಸಂಖ್ಯೆ:180/09, ದಿನಾಂಕ:26-11-2009 ರ ಪ್ರಕರಣದಲ್ಲಿ ಜಪ್ತುಪಡಿಸಿರುವ 11.340 ಲೀ ಮದ್ಯ, 15.720 ಲೀ ಬಿಯರ್ (ರಾಸಾಯನಿಕ ವಿಶ್ಲೇಷಣೆಗೆ ತೆಗೆದ ಮಾದರಿ ಹೊರತುಪಡಿಸಿ), ಗೂಡ್ಸ್ ಆಟೋ ಸಂಖ್ಯೆ:ಕೆಎ-11/3591 ವಾಹನ ಮತ್ತು ಇತರೆ ವಸ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ಇಂದು ಅಂದರೆ 2011 ನೇ ಇಸವಿ ನವೆಂಬರ್ ತಿಂಗಳ 28 ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತ ಲೇಖನ ನೀಡಿ, ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿದ ಪ್ರತಿಯಲ್ಲಿನ ತಪ್ಪುಗಳನ್ನು ತಿದ್ದಿ ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್,
ಮಂಡ್ಯ ಜಿಲ್ಲೆ, ಮಂಡ್ಯ.

ಪಿ.ಆರ್. 1301

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ ಇವರ ನ್ಯಾಯಾಲಯದಲ್ಲಿ.

ಡಿಟಿಸಿಆರ್/494/2010-11, ದಿನಾಂಕ:25-11-2011.

ಅಬಕಾರಿ ಉಪ ನಿರೀಕ್ಷಕರು, ಮಳವಳ್ಳಿ ವಲಯ, ಮಳವಳ್ಳಿ ಇವರ ಪ್ರ.ಮಾ.ವ ಸಂಖ್ಯೆ: 22/2010-11, ದಿನಾಂಕ:17-03-2011.

ಉಪಸ್ಥಿತರು : ಜೆ.ಎನ್.ಸೋಮೇಶ್ವರ್, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ.

ಪಿರ್ಯಾದುದಾರರು	**ಆರೋಪಿಗಳು.**
ಅಬಕಾರಿ ಉಪ ನಿರೀಕ್ಷಕರು, ಮಳವಳ್ಳಿ ವಲಯ, ಮಳವಳ್ಳಿ	ಮಲ್ಲಿಕಾರ್ಜುನ ಬಿನ್ ಈರಯ್ಯ, 42 ವರ್ಷ, ಪರಿಶಿಷ್ಟ ಜಾತಿ, 8 ನೇ ತಿರುವು, ಹೊಸ ಬಡಾವಣೆ, ಸಿದ್ದಾರ್ಥನಗರ, ಮಳವಳ್ಳಿ ಟೌನ್.

ಪ್ರಕರಣದ ಮುಖ್ಯಾಂಶಗಳು

ದಿನಾಂಕ:17-03-2011 ರಂದು ಬೆಳಿಗ್ಗೆ 06-40 ರ ಸಮಯದಲ್ಲಿ ಮಳವಳ್ಳಿ ತಾಲ್ಲೂಕು ಮಳವಳ್ಳಿ-ಹಲಗೂರು ರಸ್ತೆಯ ಕ್ಯಾತೇಗೌಡನದೊಡ್ಡಿ ತಿರುವಿನಲ್ಲಿ ಅಕ್ರಮವಾಗಿ 60.000 ಲೀಟರ್ ಕಲಬೆರಕೆ ಸೇಂದಿಯನ್ನು ಟಿ.ವಿ.ಎಸ್ ಚಾಂಪ್ ಸಂಖ್ಯೆ: ಕೆಎ-05/ಹೆಚ್-1449 ವಾಹನದಲ್ಲಿ ಹೊಂದಿ ಸಾಗಾಣಿಕೆ ಮಾಡುತ್ತಿದ್ದುದನ್ನು ಪತ್ತೆಮಾಡಿದ ಪಿರ್ಯಾದುದಾರರು ಈ ಅಕ್ರಮವು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 11,14,32, 43 ಮತ್ತು 43(ಎ) ರ ರೀತ್ಯಾ ಅಪರಾಧವಾದ್ದರಿಂದ ಈ ಬಗ್ಗೆ ಪ್ರ.ಮಾ.ವ ಸಂಖ್ಯೆ: 22/2010-11 ರಂತೆ ಮೊಕದ್ದಮೆಯನ್ನು ದಾಖಲು ಮಾಡಿರುತ್ತಾರೆ.

ಪ್ರಕರಣದ ತನಿಖೆಯನ್ನು ಮುಂದುವರೆಸಿದ ತನಿಖಾಧಿಕಾರಿಗಳು ಜಪ್ತುಪಡಿಸಿಕೊಂಡಿರುವ ಮಾದರಿ ಬಾಟಲುಗಳಲ್ಲಿ ಈಥೈಲ್ ಆಲ್ಕೋಹಾಲ್ ಕಂಡು ಬಂದಿದ್ದು ಅವು ಮಾನವನ ಸೇವನೆಗೆ ಯೋಗ್ಯವಾಗಿರುತ್ತದೆ ಎಂದು ರಸಾಯನ ತಜ್ಞರು ವರದಿ ನೀಡಿರುವುದರಿಂದ ಹಾಗೂ ಜಪ್ತುಪಡಿಸಿಕೊಂಡಿರುವ ವಸ್ತುಗಳನ್ನು ತಮ್ಮ ದೆಂದು ಪಕ್ಕಾ ಸಾಧಿಸಲು ಯಾರು ಮುಂದೆ ಬಾರದೆ ಇರುವುದರಿಂದ ಮೇಲ್ಕಂಡ ಸೇಂದಿ, ವಾಹನ ಮತ್ತು ಇತರೇ ವಸ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ದಿನಾಂಕ:27-05-2011 ರ ಪತ್ರದ ಮೂಲಕ ಕೋರಿರುತ್ತಾರೆ.

ಟಿ.ವಿ.ಎಸ್ ಚಾಂಪ್ ಮೊಪೆಡ್ ಸಂಖ್ಯೆ: ಕೆಎ-05/ಹೆಚ್-1449 ವಾಹನಕ್ಕೆ ಸಂಬಂಧಪಟ್ಟಂತೆ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಬೆಂಗಳೂರು ದಕ್ಷಿಣ ಇವರು ನೀಡಿರುವ "ಬಿ" ವಹಿಯ ಪರಿಶೀಲನೆಯಿಂದ ಶ್ರೀ ಸಿ.ಸತ್ಯಪ್ರಕಾಶ್ ಬಿನ್ ಶ್ರೀನಿವಾಸಮೂರ್ತಿ, ನಂ.10/1ಎ, 5 ನೇ ಮೈನ್ ರೋಡ್, 3 ನೇ ಬ್ಲಾಕ್, ಟಿ.ಆರ್. ನಗರ, ಬೆಂಗಳೂರು - ಇವರು ವಾಹನದ ಮಾಲೀಕರೆಂಬುದು ತಿಳಿದು ಬಂದಿದ್ದು, ಸದರಿಯವರಿಗೆ ದಿನಾಂಕ: 26-10-2011 ರಂದು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43 (ಬಿ) ರನ್ವಯ ಕಾರಣ ಕೇಳುವ ನೋಟೀಸ್‌ನ್ನು ನೊಂದಣಿ ಅಂಚೆಯ ಮೂಲಕ ನೀಡಲಾಗಿತ್ತು. ಸದರಿ ಕಾರಣ ಕೇಳುವ ನೋಟೀಸ್ ವಾಹನದ ಮಾಲೀಕರ ವಿಳಾಸದಲ್ಲಿ ಸ್ವೀಕೃತಿಯಾಗಿರುತ್ತದೆ.

ದಾಖಲಾತಿಗಳನ್ನು ಪರಿಶೀಲಿಸಲಾಗಿ ಪ್ರಕರಣದಲ್ಲಿ ಜಪ್ತುಪಡಿಸಿರುವ ಟಿ.ವಿ.ಎಸ್ ಚಾಂಪ್ ಮೊಪೆಡ್ ಸಂಖ್ಯೆ: ಕೆಎ-05/ಹೆಚ್-1449 ವಾಹನದಲ್ಲಿ ದಿನಾಂಕ:17-03-2011 ರಂದು ಅಕ್ರಮವಾಗಿ ಮದ್ಯಸಾರಯುಕ್ತ ದ್ರವವನ್ನು ಹೊಂದಿ ಸಾಗಾಣಿಕೆ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (೮) ತಿಂಗಳುಗಳಿಗೂ ಹೆಚ್ಚು ಕಾಲ ಕಳೆದರೂ ಸದರಿ [illegible] ವಾಹನವ

ತನ್ನದೆಂದಾಗಲೀ ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರು ಇಂದಿನವರೆವಿಗೂ ಖುದ್ದಾಗಿಯಾಗಲೀ, ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನದ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ, ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನದ ಮಾಲೀಕರಿಗೆ/ಏಜೆಂಟರ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮೀಲಾಗದೇ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿರುವುದಿಲ್ಲ. ವಾಹನವನ್ನು ಚಾಲನೆಯಿಲ್ಲದೇ ಹೆಚ್ಚು ಸಮಯ ಇಟ್ಟುಕೊಂಡಲ್ಲಿ ಹವಾಮಾನದ ವೈಪರೀತ್ಯಕ್ಕೆ ಹಾಳಾಗುವ ಮತ್ತು ಬಿಡಿ ಭಾಗಗಳು ತುಕ್ಕು ಹಿಡಿಯುವ ಸಂಭವವಿರುವುದರಿಂದ, ಸರ್ಕಾರದ ಆದಾಯದ ಹಿತದೃಷ್ಟಿಯಿಂದ ಹಾಗೂ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾದ ಅಧಿಕಾರ ಪ್ರಾಧಿಕಾರಕ್ಕೆ ದತ್ತವಾಗಿರುವುದರಿಂದ ಮೇಲ್ಕಂಡ ಸೇಂದಿ ಮತ್ತು ವಾಹನವನ್ನು ವಾರಸುದಾರರಿಲ್ಲದ ಸ್ವತ್ತು ಎಂದು ಪರಿಗಣಿಸಿ, ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆ ಎಂದು ಅಭಿಪ್ರಾಯಪಟ್ಟು ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/494/2010-11, ದಿನಾಂಕ:25-11-2011.

ಜೆ.ಎನ್.ಸೋಮೇಶ್ವರ್, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43 (ಸಿ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಅಬಕಾರಿ ಉಪ ನಿರೀಕ್ಷಕರು, ಮಳವಳ್ಳಿ ವಲಯ ಇವರ ಪ್ರ.ಮಾ.ವ ಸಂಖ್ಯೆ: 22/2010-11, ದಿನಾಂಕ:17-03-2011 ರ ಪ್ರಕರಣದಲ್ಲಿ ಜಪ್ತುಪಡಿಸಿರುವ 60.000 ಲೀಟರ್ ಕಲಬೆರೆಕೆ ಸೇಂದಿ (ರಾಸಾಯನಿಕ ಪರೀಕ್ಷೆಗೆ ತೆಗೆದ ಮಾದರಿ ಹೊರತುಪಡಿಸಿ), ಟಿ.ವಿ.ಎಸ್ ಚಾಂಪ್ ಮೊಪೆಡ್ ಸಂಖ್ಯೆ: ಕೆಎ-05/ಹೆಚ್-1449 ವಾಹನ ಮತ್ತು ಇತರೆ ವಸ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ಇಂದು ಅಂದರೆ 2011 ನೇ ಇಸವಿ ನವೆಂಬರ್ ತಿಂಗಳ 25 ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತ ಲೇಖನ ನೀಡಿ, ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿದ ಪ್ರತಿಯಲ್ಲಿನ ತಪ್ಪುಗಳನ್ನು ತಿದ್ದಿ ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್,
ಮಂಡ್ಯ ಜಿಲ್ಲೆ, ಮಂಡ್ಯ.

ಪಿ.ಆರ್. 1302

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ ಇವರ ನ್ಯಾಯಾಲಯದಲ್ಲಿ.

ಡಿಟಿಸಿಆರ್/103/2011-12, ದಿನಾಂಕ:24-12-2011.

ಆರಕ್ಷಕ ನಿರೀಕ್ಷಕರು, ವಿಶೇಷ ಪೊಲೀಸ್ ಠಾಣೆ, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ಘಟಕ, ಮಂಡ್ಯ ಜಿಲ್ಲೆ, ಮಂಡ್ಯ
ಇವರ ಅಪರಾಧ ಸಂಖ್ಯೆ:66/2011, ದಿನಾಂಕ:12-07-2011.

ಉಪಸ್ಥಿತರು : ಜೆ.ಎನ್.ಸೋಮೇಶ್ವರ್, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ.

ಪಿರ್ಯಾದುದಾರರು	**ಆರೋಪಿ**
ಆರಕ್ಷಕ ನಿರೀಕ್ಷಕರು, ವಿಶೇಷ ಪೊಲೀಸ್ ಠಾಣೆ, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ಘಟಕ, ಮಂಡ್ಯ ಜಿಲ್ಲೆ.	ನಾಗರಾಜು ಬಿನ್ ನಂಜೇಗೌಡ, 28 ವರ್ಷ, ವಕ್ಕಲಿಗರು, ವ್ಯವಸಾಯ, ವಾಸ-ಪೇಟೆ ವಕ್ಕಲಿಗರ ಬೀದಿ, ಮಳವಳ್ಳಿ ಟೌನ್, ಮಂಡ್ಯ ಜಿಲ್ಲೆ (ಆರೋಪಿ ಓಡಿಹೋಗಿರುತ್ತಾನೆ)

ಪ್ರಕರಣದ ಮುಖ್ಯಾಂಶಗಳು

ದಿನಾಂಕ:12-07-2011 ರಂದು ಬೆಳಿಗ್ಗೆ 09-15 ಗಂಟೆ ಸಮಯದಲ್ಲಿ ಮಳವಳ್ಳಿ ತಾಲ್ಲೂಕು ಕಸಬಾ ಹೋಬಳಿಯ ಮಾರೇಹಳ್ಳಿ ಗ್ರಾಮದ ನಂಜೇಗೌಡ ಎಂಬುವರ ತೋಟದ ಮುಂಭಾಗ ರಸ್ತೆ ಅಂಚಿನಲ್ಲಿ ಅಕ್ರಮವಾಗಿ 25 ಲೀಟರ್ ಅಳತೆಯ 1 ಬಿಳಿ ಪ್ಲಾಸ್ಟಿಕ್ ಕ್ಯಾನ್ ತುಂಬಾ 25 ಲೀಟರ್ ಸೇಂದಿಯನ್ನು ಒಂದು ಹಳೆಯ ಹಿರೋ ಜೆಟ್ ಸೈಕಲ್‌ನಲ್ಲಿ ಹೊಂದಿ ಸಾಗಾಣಿಕೆ ಮಾಡುತ್ತಿದ್ದುದನ್ನು ಪತ್ತೆ ಮಾಡಿದ ಪಿರ್ಯಾದುದಾರರು ಇದು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 32,34 ಮತ್ತು 43(ಎ) ರೀತ್ಯಾ ಶಿಕ್ಷಾರ್ಹವಾದ್ದರಿಂದ ಸೈಕಲ್ ಹಾಗೂ ಸೇಂದಿಯನ್ನು ಪಂಚನಾಮೆಯಡಿಯಲ್ಲಿ ಅಮಾನತ್ತು ಪಡಿಸಿಕೊಂಡು ಈ ಬಗ್ಗೆ ಅಪರಾಧ ಸಂಖ್ಯೆ:66/2011 ರಂತೆ ಮೊಕದ್ದಮೆಯನ್ನು ದಾಖಲು ಮಾಡಿ ಈ ಪ್ರಾಧಿಕಾರಕ್ಕೆ ವರದಿ ಮಾಡಿರುತ್ತಾರೆ.

ಪ್ರಕರಣದ ತನಿಖೆಯನ್ನು ಮುಂದುವರೆಸಿದ ತನಿಖಾಧಿಕಾರಿಗಳು ಜಪ್ತುಪಡಿಸಿದ ಸೇಂದಿ ಮತ್ತು ಸೈಕಲ್‌ನ್ನು ತಮ್ಮದೆಂದು ಹಕ್ಕು ಚಲಾಯಿಸಲು ಯಾರೊಬ್ಬರು ಮುಂದೆ ಬಂದಿಲ್ಲವಾದ್ದರಿಂದ ಸದರಿ ಸೈಕಲ್ ಹಾಗೂ ಸೇಂದಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ದಿನಾಂಕ:01-08-2011 ಮತ್ತು 17-09-2011 ರ ಪತ್ರಗಳ ಮೂಲಕ ಕೋರಿರುತ್ತಾರೆ.

ದಾಖಲಾತಿಗಳನ್ನು ಪರಿಶೀಲಿಸಲಾಗಿ ಪ್ರಕರಣದಲ್ಲಿ ಜಪ್ತುಪಡಿಸಿರುವ ಸೈಕಲ್‌ನಲ್ಲಿ ದಿನಾಂಕ:12-07-2011 ರಂದು ಅಕ್ರಮವಾಗಿ ಮದ್ಯಸಾರಯುಕ್ತ ದ್ರವವನ್ನು ಹೊಂದಿ ಸಾಗಾಣಿಕೆ ಮಾಡಿರುವುದು ಸಾಬೀತಾಗಿರುತ್ತದೆ. ಅಲ್ಲದೇ ಜಪ್ತು ಪಡಿಸಿರುವ ಸೈಕಲ್ ಮತ್ತು ಸೇಂದಿಯನ್ನು ತನ್ನದೆಂದು ಕೋರಿ ಈವರೆವಿಗೂ ಪ್ರಾಧಿಕಾರದ ಮುಂದೆ ಯಾರು ಹಾಜರಾಗದೇ ಇರುವ ಹಿನ್ನೆಲೆಯಲ್ಲಿ, ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾದ ಅಧಿಕಾರ ಪ್ರಾಧಿಕಾರಕ್ಕೆ ದತ್ತವಾಗಿರುವುದರಿಂದ ಹಾಗೂ ಸೈಕಲ್‌ನ್ನು ಚಾಲನೆಯಿಲ್ಲದೇ ಹೆಚ್ಚು ಸಮಯ ಇಟ್ಟುಕೊಂಡಲ್ಲಿ ಅದರ ಬಿಡಿಭಾಗಗಳು ತುಕ್ಕು ಹಿಡಿದು ಹವಾಮಾನದ ವೈಪರೀತ್ಯಕ್ಕೆ ಹಾಳಾಗುವ ಸಂಭವವಿರುವುದರಿಂದ ಹಾಗೂ ಸರ್ಕಾರದ ಆದಾಯದ ಹಿತದೃಷ್ಟಿಯಿಂದ ಮೇಲ್ಕಂಡ ಸೈಕಲ್ ಮತ್ತು ಸೇಂದಿ ಯನ್ನು ವಾರಸುದಾರರಿಲ್ಲದ ಸ್ವತ್ತು ಎಂದು ಪರಿಗಣಿಸಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆ ಎಂದು ಅಭಿಪ್ರಾಯಪಟ್ಟು ಈ ಕೆಳಕಂಡ ಆದೇಶ.

ಅದೇಶ ಸಂಖ್ಯೆ: ಡಿಟಿಸಿಆರ್/103/2011-12, ದಿನಾಂಕ:24-12-2011.

ಜಿ.ಎನ್.ಸೋಮೇಶ್ವರ್, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43 (ಸಿ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಆರಕ್ಷಕ ನಿರೀಕ್ಷಕರು, ವಿಶೇಷ ಪೊಲೀಸ್ ಠಾಣೆ, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ಘಟಕ, ಮಂಡ್ಯ ಜಿಲ್ಲೆ ಇವರ ಅಪರಾಧ ಸಂಖ್ಯೆ:66/2011 ರ ಪ್ರಕರಣದಲ್ಲಿ ಜಪ್ತುಪಡಿಸಿರುವ ಹಿರೋ ಜೆಟ್ ಸೈಕಲ್ ಮತ್ತು 25 ಲೀ ಸೇಂದಿಯನ್ನು (ರಾಸಾಯನಿಕ ಪರೀಕ್ಷೆಗೆ ತೆಗೆದ ಮಾದರಿ ಹೊರತುಪಡಿಸಿ) ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ಇಂದು ಅಂದರೆ 2011 ನೇ ಇಸವಿ ಡಿಸೆಂಬರ್ ತಿಂಗಳ 24 ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿದ ಪ್ರತಿಯಲ್ಲಿನ ತಪ್ಪುಗಳನ್ನು ತಿದ್ದಿ ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್,
ಮಂಡ್ಯ ಜಿಲ್ಲೆ, ಮಂಡ್ಯ.

ಪಿ.ಆರ್. 1407

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ ಇವರ ನ್ಯಾಯಾಲಯದಲ್ಲಿ.

ಡಿಟಿಸಿಆರ್/404/2010-11, ದಿನಾಂಕ:28-11-2011.

ಆರಕ್ಷಕ ಉಪ ನಿರೀಕ್ಷಕರು, ಶ್ರೀರಂಗಪಟ್ಟಣ ಪೊಲೀಸ್ ಠಾಣೆ, ಶ್ರೀರಂಗಪಟ್ಟಣ ಇವರ
ಅಪರಾಧ ಸಂಖ್ಯೆ: 690/2010, ದಿನಾಂಕ:28-12-2010.

ಉಪಸ್ಥಿತರು : ಜಿ.ಎನ್.ಸೋಮೇಶ್ವರ್, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ.

ಪಿರ್ಯಾದುದಾರರು	ಆರೋಪಿಗಳು.
ಆರಕ್ಷಕ ಉಪ ನಿರೀಕ್ಷಕರು, ಶ್ರೀರಂಗಪಟ್ಟಣ ಪೊಲೀಸ್ ಠಾಣೆ, ಶ್ರೀರಂಗಪಟ್ಟಣ.	ರಮೇಶ್ ಬಿನ್ ಆಟೋ ಶಿವನಂಜೇಗೌಡ, 30 ವರ್ಷ, ಒಕ್ಕಲಿಗರ ಜನಾಂಗ, ಆಟೋ ರಿಕ್ಷಾ ಚಾಲಕ/ಮಾಲೀಕ, ನಂ.ಕೆಎ-12/5838, ವಾಸ:442, 7 ನೇ ಕ್ರಾಸ್, ದಟ್ಟಗಳ್ಳಿ, ಮೈಸೂರು ಸಿಟಿ.

ಪ್ರಕರಣದ ಮುಖ್ಯಾಂಶಗಳು

ದಿನಾಂಕ 28-12-2010 ರಂದು ಬೆಳಗ್ಗೆ 11-00 ರಿಂದ ಮಧ್ಯಾಹ್ನ 12-00 ರವರೆಗಿನ ಸಮಯದಲ್ಲಿ ನಗುವನಹಳ್ಳಿ -ಚಿಂದಗಾಲ ಗ್ರಾಮದ ನಡುವೆ ಮಹದೇವಪುರ-ಶ್ರೀರಂಗಪಟ್ಟಣ ರಸ್ತೆಯಲ್ಲಿ ಅಕ್ರಮವಾಗಿ 60.480 ಲೀ ಮದ್ಯವನ್ನು ಪ್ಯಾಸೆಂಜರ್ ಆಟೋ ರಿಕ್ಷಾ ಸಂಖ್ಯೆ ಕೆಎ-12/5838 ವಾಹನದಲ್ಲಿ ಹೊಂದಿ ಸಾಗಾಣಿಕೆ ಮಾಡುತ್ತಿದ್ದ ದಿನ, ಪತ್ತೆಯಾಗಿದ್ದು ಪಿರ್ಯಾದುದಾರರು ಈ ಅಕ್ರಮವು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 32 ಮತ್ತು 34 ರ ರೀತ್ಯಾ [illegible] ಈ ಬಗ್ಗೆ ಅಪರಾಧ ಸಂಖ್ಯೆ 690/2010 ರಂತೆ ಮೊಕದ್ದಮೆಯನ್ನು ದಾಖಲು ಮಾಡಿರುತ್ತಾರೆ.

ಪ್ರಕರಣದ ತನಿಖೆಯನ್ನು ಮುಂದುವರೆಸಿದ ತನಿಖಾಧಿಕಾರಿಗಳು ಜಪ್ತುಪಡಿಸಿದ ವಸ್ತುಗಳು ತಮ್ಮದೆಂದು ಹಕ್ಕು ಸಾಧಿಸಲು ಯಾರು ಮುಂದೆ ಬಾರದೆ ಇರುವುದರಿಂದ ಮೇಲ್ಕಂಡ ಮದ್ಯ, ವಾಹನ ಮತ್ತು ಇತರೇ ವಸ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ದಿನಾಂಕ:28–02–2011ರ ಪತ್ರದ ಮೂಲಕ ಕೋರಿರುತ್ತಾರೆ.

ಈ ಮಧ್ಯೆ ಪ್ರಾಧಿಕಾರದಲ್ಲಿ ಮುಟ್ಟುಗೋಲು ನಡುವಳಿಗಳನ್ನು ಕೈಗೊಂಡಿದ್ದು ತನಿಖಾಧಿಕಾರಿ ಶಿಫಾರಸ್ಸಿನ ಮೇರೆಗೆ ಪ್ರಕರಣದಲ್ಲಿ ವಶಪಡಿಸಿಕೊಂಡಿರುವ 60480 ಲೀ ಮದ್ಯ (ರಾಸಾಯನಿಕ ಪರೀಕ್ಷೆಗೆ ತೆಗೆದ ಮಾದರಿ ಹೊರತುಪಡಿಸಿ) ಮತ್ತು ಇತರೆ ವಸ್ತುಗಳನ್ನು ತಮ್ಮದೆಂದು ಕೋರಿ ಯಾರು ಹಕ್ಕು ಸಾಧಿಸದ ಕಾರಣ ದಿನಾಂಕ:08–03–2011 ರಂದು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಪ್ರಕರಣದಲ್ಲಿ ಆರೋಪಿಯಾಗಿರುವ ಶ್ರೀ ರಮೇಶ್ ಬಿನ್ ಶಿವನಂಜೇಗೌಡ ಇವರು ದಿನಾಂಕ:15–[illegible]–2011 ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮನವಿಯ ಜೊತೆಯಲ್ಲಿ ಪ್ರಸ್ತಾಪಿತ ಪ್ಯಾಸಂಜರ್ ಆಟೋ ರಿಕ್ಷಾ ಸಂಖ್ಯೆ: ಕೆಎ-12/5838 ನ್ನು ಶ್ರೀ ಎನ್.ಅಶೋಕ ಬಿನ್ ಟಿ.ನಾಗರಾಜ್, ಬೃಂದಾವನ್ ಎಕ್ಸ್‌ಟೆನ್ಷನ್, ಕೆ.ಆರ್.ಎಸ್ ರೋಡ್, ಮೈಸೂರು ಇವರಿಂದ ದಿನಾಂಕ:11–01–2011 ರಂದು ವಾಹನವನ್ನು ಖರೀದಿಸಿರುವುದಾಗಿ ಸೇಲ್ ಡೀಡ್‌ನ ಪ್ರತಿಯನ್ನು ಸಲ್ಲಿಸಿ, ವಾಹನವನ್ನು ತಾತ್ಕಾಲಿಕ ಸುಪರ್ದಿಗೆ ಬಿಡುಗಡೆ ಮಾಡಿಕೊಡಲು ಕೋರಿರುತ್ತಾರೆ.

ಪ್ಯಾಸೆಂಜರ್ ಆಟೋ ರಿಕ್ಷಾ ಸಂಖ್ಯೆ: ಕೆಎ–12/5838 ವಾಹನಕ್ಕೆ ಸಂಬಂಧಪಟ್ಟಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಮೈಸೂರು ಇವರು ನೀಡಿರುವ "ಬಿ" ವಹಿಯ ಪರಿಶೀಲನೆಯಿಂದ ಶ್ರೀ ಎನ್.ಅಶೋಕ ಬಿನ್ ಟಿ. ನಾಗರಾಜ್, ನಂ.4[illegible], ಬೃಂದಾವನ್ ಎಕ್ಸ್‌ಟೆನ್ಷನ್, 1 ನೇ ಹಂತ, ಕೆ.ಆರ್.ಎಸ್ ರೋಡ್, ಮೈಸೂರು – ಇವರು ವಾಹನದ ಮಾಲೀಕರೆಂಬುದು ತಿಳಿದು ಬಂದಿದ್ದು, ಸದರಿಯವರಿಗೆ ದಿನಾಂಕ:26–10–2011 ರಂದು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43 (ಬಿ) ರನ್ವಯ ಕಾರಣ ಕೇಳುವ ನೋಟೀಸ್‌ನ್ನು ನೊಂದಣಿ ಅಂಚೆಯ ಮೂಲಕ ನೀಡಲಾಗಿತ್ತು. ಸದರಿ ಕಾರಣ ಕೇಳುವ ನೋಟೀಸ್ ವಾಹನದ ಮಾಲೀಕರ ವಿಳಾಸದಲ್ಲಿ ಸ್ವೀಕೃತಿಯಾಗಿರುತ್ತದೆ ಹಾಗೂ ಅಬಕಾರಿ ನಿರೀಕ್ಷಕರು, ಶ್ರೀರಂಗಪಟ್ಟಣ ವಲಯ ಇವರ ಮುಖಾಂತರ ಜಾರಿಯಾಗಿರುತ್ತದೆ. ಸದರಿಯವರು ದಿನಾಂಕ: 18–11–2011 ರ ಪತ್ರದ ಮೂಲಕ ಪ್ರಸ್ತಾಪಿತ ವಾಹನವನ್ನು ದಿನಾಂಕ:06–12–2010 ರಂದು ಶ್ರೀ ರಮೇಶ್ ಬಿನ್ ಶಿವನಂಜೇಗೌಡ, ನಂ.12, ನಾಗಂದ್ಮನ ಹುಂಡಿ, ಶ್ರೀರಂಗಪಟ್ಟಣ ತಾಲ್ಲೂಕು ಇವರಿಗೆ ಮಾರಿರುವುದಾಗಿ ತಿಳಿಸಿ, ಮೇಲ್ಕಂಡ ಅಕ್ರಮಕ್ಕೂ ಅವರಿಗೂ ಯಾವುದೇ ರೀತಿಯ ಸಂಬಂಧವಿಲ್ಲವೆಂದು ತಿಳಿಸಿ, ವಾಹನವನ್ನು ಮುಟ್ಟುಗೋಲು ಹಾಕಿಕೊಂಡು ಮುಂದಿನ ಕ್ರಮ ಜರುಗಿಸಲು ಅಭ್ಯಂತರವಿರುವುದಿಲ್ಲವೆಂದು ತಿಳಿಸಿರುತ್ತಾರೆ.

ದಾಖಲಾತಿಗಳನ್ನು ಪರಿಶೀಲಿಸಲಾಗಿ ಪ್ರಕರಣದಲ್ಲಿ ಜಪ್ತುಪಡಿಸಿರುವ ಪ್ಯಾಸೆಂಜರ್ ಆಟೋ ರಿಕ್ಷಾ ಸಂಖ್ಯೆ: ಕೆಎ–12/5838 ವಾಹನವು ಅಕ್ರಮವಾಗಿ ಮದ್ಯಸಾರಯುಕ್ತ ದ್ರವವನ್ನು ಹೊಂದಿ ಸಾಗಾಣಿಕೆ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ಅಲ್ಲದೇ ಪ್ರಕರಣದ ಆರೋಪಿಯು ಪ್ರಸ್ತಾಪಿತ ವಾಹನವನ್ನು ದಿನಾಂಕ:11–01–2011 ರಂದು ಖರೀದಿಸಿರುವುದಾಗಿ ದಾಖಲಾತಿ ಸಲ್ಲಿಸಿದ್ದು, ವಾಹನವನ್ನು ಅವರ ಹೆಸರಿಗೆ ವರ್ಗಾಯಿಸಿಕೊಂಡಿರುವ ಬಗ್ಗೆ ನಿಗದಿತ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಸದರಿಯವರನ್ನು ವಾಹನದ ಮಾಲೀಕರೆಂದು ಒಪ್ಪಲು ಬರುವುದಿಲ್ಲ. ಅಲ್ಲದೇ ದಿನಾಂಕ:28–12–2010 ರಂದೇ ವಾಹನವನ್ನು ಜಪ್ತು ಪಡಿಸಲಾಗಿರುತ್ತದೆ. ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನದ ಮಾಲೀಕರಿಗೆ/ಏಜೆಂಟರ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮೀಲಾಗದೇ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿರುವುದಿಲ್ಲ. ವಾಹನವನ್ನು ಚಾಲನೆ ಯಿಲ್ಲದೇ ಹೆಚ್ಚು ಸಮಯ ಇಟ್ಟುಕೊಂಡಲ್ಲಿ ಹವಾಮಾನದ ವೈಪರೀತ್ಯಕ್ಕೆ ಹಾಳಾಗುವ ಮತ್ತು ಬಿಡಿ ಭಾಗಗಳು ತುಕ್ಕು ಹಿಡಿಯುವ ಸಂಭವವಿರುವುದರಿಂದ, ಸರ್ಕಾರದ ಆದಾಯದ ಹಿತದೃಷ್ಟಿಯಿಂದ ಹಾಗೂ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾದ ಅಧಿಕಾರ ಪ್ರಾಧಿಕಾರಕ್ಕೆ ದತ್ತವಾಗಿರುವುದರಿಂದ ಶ್ರೀ ರಮೇಶ್ ಬಿನ್ ಶಿವನಂಜೇಗೌಡ ಇವರು ವಾಹನವನ್ನು ತಾತ್ಕಾಲಿಕ ಸುಪರ್ದಿಗೆ ನೀಡಬೇಕೆಂದು ಕೋರಿರುವ ಮನವಿಯನ್ನು ತಿರಸ್ಕರಿಸಿ ಏಕಪಕ್ಷೀಯವಾಗಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆ ಎಂದು ಅಭಿಪ್ರಾಯಪಟ್ಟು ಈ ಕೆಳಕಂಡ ಆದೇಶ.

ಅದೇಶ ಸಂಖ್ಯೆ: ಡಿಟಿಸಿಆರ್/404/2010–11, ದಿನಾಂಕ:28–11–2011.

ಜೆ.ಎಸ್.ಸೋಮೇಶ್ವರ್, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43 (ಸಿ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಆರಕ್ಷಕ ಉಪ ನಿರೀಕ್ಷಕರು, ಶ್ರೀರಂಗಪಟ್ಟಣ ಪೊಲೀಸ್ ಠಾಣೆ, ಶ್ರೀರಂಗಪಟ್ಟಣ ಇವರ ಅಪರಾಧ ಸಂಖ್ಯೆ: 690/2010, ದಿನಾಂಕ:28–12–2010 ರ ಪಕರಣದಲ್ಲಿ ಜಪ್ತುಪಡಿಸಿರುವ ಪ್ಯಾಸೆಂಜರ್ ಆಟೋ ಸಂಖ್ಯೆ: ಕೆಎ–12/ 5838 ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ಇಂದು ಅಂದರೆ 2011 ನೇ ಇಸವಿ ನವೆಂಬರ್ ತಿಂಗಳ 28 ನೇ [illegible] ನೀಡಿ. ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿದ ಪ್ರತಿಯಲ್ಲಿನ ತಪ್ಪುಗಳನ್ನು ತಿದ್ದಿ ಮುಕ್ತ ನ್ಯಾಯಾಲಯದಲ್ಲಿ [illegible].

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್,
ಮಂಡ್ಯ ಜಿಲ್ಲೆ, ಮಂಡ್ಯ.

ಪಿ.ಆರ್. 1303

ಕೃಷಿ ಮಾರಾಟ ಇಲಾಖೆ.

ಕೃಷಿ ಮಾರಾಟ ನಿರ್ದೇಶಕರ ಕಛೇರಿ, ನಂ. 16, 11ನೇ ರಾಜಭವನ ರಸ್ತೆ, ಪಿ.ಬಿ. ನಂ. 5309, ಬೆಂಗಳೂರು

ಸಂಖ್ಯೆ : ಕೃಮಾಇ/03/ಚುನಾವಣೆ/2011, ಬೆಂಗಳೂರು ದಿನಾಂಕ : 22-12-2011.

ಅಧಿಸೂಚನೆ

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ ಕಲಂ 11ರ ಉಪ ಪ್ರಕರಣ (1) (viii) ರಲ್ಲಿನ ಪ್ರದತ್ತವಾದ ಅಧಿಕಾರದ ಮೇರೆಗೆ ಕರ್ನಾಟಕದಲ್ಲಿನ ಕೃಷಿ ಮಾರಾಟ ಇಲಾಖೆಯ ನಿರ್ದೇಶಕನಾದ ವಿ.ಬಿ. ಪಾಟೀಲ್ ಆದ ನಾನು ಈ ಕೆಳಕಂಡ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಅಧಿಕಾರಿಗಳನ್ನು ಸದಸ್ಯರನ್ನಾಗಿ ನಾಮಕರಣ ಮಾಡಿದ್ದೇನೆ.

ಕ್ರಸಂ	ಜಿಲ್ಲೆಯ ಹೆಸರು	ಕ್ರ. ಸಂ.	ಸಮಿತಿಯ ಹೆಸರು	ಸದಸ್ಯರನ್ನಾಗಿ ನಾಮಕರಣ ಮಾಡಲಾಗಿರುವ ಅಧಿಕಾರಿಗಳು
1	ಕೋಲಾರ	1	ಕೋಲಾರ	ಸಹಾಯಕ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಕೋಲಾರ ಜಿಲ್ಲೆ, ಕೋಲಾರ
		2	ಮಾಲೂರು	ಸಹಾಯಕ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಕೋಲಾರ ಜಿಲ್ಲೆ, ಕೋಲಾರ
		3	ಬಂಗಾರಪೇಟೆ	ಹೆಚ್ಚುವರಿ ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಂಗಳೂರು
		4	ಮುಳಬಾಗಲು	ಸಹಾಯಕ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಕೋಲಾರ ಜಿಲ್ಲೆ, ಕೋಲಾರ
		5	ಶ್ರೀನಿವಾಸಪುರ	ಸಹಾಯಕ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಕೋಲಾರ ಜಿಲ್ಲೆ, ಕೋಲಾರ
		6	ಅರಸೀಕೆರೆ	ಉಪ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಹಾಸನ ಜಿಲ್ಲೆ, ಹಾಸನ.

ವಿ.ಬಿ. ಪಾಟೀಲ್

ಪಿ.ಆರ್. 1375 ನಿರ್ದೇಶಕರು.

ಕೃಷಿ ಮಾರಾಟ ಇಲಾಖೆ.

ಕೃಷಿ ಮಾರಾಟ ನಿರ್ದೇಶಕರ ಕಛೇರಿ, ನಂ. 16, 11ನೇ ರಾಜಭವನ ರಸ್ತೆ, ಪಿ.ಬಿ. ನಂ. 5309, ಬೆಂಗಳೂರು

ಸಂಖ್ಯೆ : ಕೃಮಾಇ/03/ಚುನಾವಣೆ/2011, ಬೆಂಗಳೂರು ದಿನಾಂಕ : 22-12-2011.

ಅಧಿಸೂಚನೆ

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ ಕಲಂ 10(1)(viii)ರಲ್ಲಿನ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕದಲ್ಲಿನ ಕೃಷಿ ಮಾರಾಟ ಇಲಾಖೆಯ ನಿರ್ದೇಶಕನಾದ ವಿ.ಬಿ. ಪಾಟೀಲ್ ಆದ ನಾನು ಈ ಕೆಳಕಂಡ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಅವುಗಳ ಮುಂದೆ ಕಾಣಿಸಿರುವ ಅಧಿಕಾರಿಗಳನ್ನು ಸದಸ್ಯರನ್ನಾಗಿ ನಾಮಕರಣ ಮಾಡಿದ್ದೇನೆ.

ಕ್ರಸಂ	ಜಿಲ್ಲೆಯ ಹೆಸರು	ಸಮಿತಿಯ ಹೆಸರು	ಸದಸ್ಯರನ್ನಾಗಿ ನಾಮಕರಣ ಮಾಡಲಾಗಿರುವ ಅಧಿಕಾರಿಗಳು
1	ಗುಲ್ಬರ್ಗಾ	ಗುಲ್ಬರ್ಗಾ	ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ರಾಯಚೂರು.
		ಜೇವರ್ಗಿ	ಸಹಾಯಕ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ.
2	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	ಸಹಾಯಕ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆ, ಬೆಂಗಳೂರು.

		ಹೊಸಕೋಟೆ	ಸಹಾಯಕ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆ, ಬೆಂಗಳೂರು.
3	ಚಿತ್ರದುರ್ಗ	ಹೊಸದುರ್ಗ	ಉಪ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.
		ಹೊಳಲ್ಕೆರೆ	ಉಪ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.
4	ಚಿಕ್ಕಮಗಳೂರು	ಶೃಂಗೇರಿ	ಸಹಾಯಕ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು

ವಿ.ಬಿ. ಪಾಟೀಲ್
ನಿರ್ದೇಶಕರು.

ಪಿ.ಆರ್. 1376

OFFICE OF THE DEPUTY COMMISSIONER & DISTRICT MAGISTRATE, KODAGU DISTRICT, MADIKERI

No. SECC/5/2011-12, Bangalore, Dated : 3-11-2011.

NOTIFICATION

In exercise of the powers delegated by Government in their Notification No. RD 29 SJY 2011 (A1) dated : 22-9-2011, the undersigned hereby appoints the Officers noted in column 3 as Charge Officers with designation noted in Column 4 for the Jurisdiction noted in column 5 of the table given below for the purpose Socio Economic and Caste Census-2011 (SECC-2011).

Sl. No.	Administrative Unit	Designation	To be appointed as	Jurisdiction
1	2	3	4	5
1	Madikeri City Municipal Council	Commissioner City Municipal Council Madikeri	Charge Office (CMC)	Entire City Municipal Council Madikeri and work in Co-ordination with District Census Officer under the Control of Principal Census Officer
2	Madikeri taluk	Tahsildar Madikeri-taluk Madikeri	Charge Officer (Rural)	Entire Madikeri taluk excluding Urban area
3	Virajpet taluk	Tahsildar Virajpet taluk Virajpet	Charge Officer (Rural)	Entire Virajpet taluk excluding Urban area
4	Somwarpet taluk	Tahsildar Somwarpet-taluk Somwarpet	charge officer (Rural)	Entire Somwarpet taluk excluding Urban area
5	Townpanchayath Virajpet	Chief Officer Town-panchayath Virajpet	Charge Officer (TP)	Entire Virajpet town panchayath jurisdiction
6	Townpanchayath Somwarpet	Chief Officer Town-panchayath Somwarpet	Charge Officer (TP)	Entire Somwarpet town panchayath jurisdiction
7	Townpanchayath Kushalnagar	Chief Officer Town-panchayath Kushalnagar	Charge Officer (TP)	Entire Kushalnagar townpanchayath jurisdiction
14	Gonicoppa Census Town	Tahsildar Virajpet Taluk	Charge-Officer (Rural)	Gonicoppa Town area

DR. N.V. PRASAD,
Principal SECC-2011 Officer &
Deputy Commissioner Kodagu District.

P.R. No. 1377

ಅಬಕಾರಿ ಆಯುಕ್ತರ ಕಛೇರಿ ಒಕ್ಕಲಿಗರ ಭವನ, ಕೆ.ಆರ್.ಸಿ. ವೃತ್ತ, ಬೆಂಗಳೂರು

ಸಂಖ್ಯೆ : ಇಸಿಇ/24/ಕ.ಮಾ.ಹ./2005, ಬೆಂಗಳೂರು ದಿನಾಂಕ : 9-12-2011.

ಅಧಿಸೂಚನೆ

ಈ ಕಛೇರಿಯ ಅಧಿಸೂಚನೆ ಸಂಖ್ಯೆ : ಇಸಿಇ/24/ಕೇಂ.ಮಾ.ಹ./2005. ದಿನಾಂಕ : 3-4-2009 ರಲ್ಲಿ ಅಬಕಾರಿ ಆಯುಕ್ತರ ಕಛೇರಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಒದಗಿಸಲು ಸಾರ್ವಜನಿಕ ಮಾಹಿತಿ ಅಧಿಕಾರಿ, ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ, ಮತ್ತು ಮೇಲ್ಮನವಿ ಪ್ರಾಧಿಕಾರಿಗಳನ್ನು ನೇಮಕ ಮಾಡಲಾಗಿತ್ತು. ಸದರಿ ಅಧಿಸೂಚನೆಯಂತೆ (1) ಶಿಸ್ತು ವಿಭಾಗ (2) ಆಸ್ತಿ ಮತ್ತು ಋಣಪಟ್ಟಿ ಹಾಗೂ ಕಾರ್ಯನಿರ್ವಹಣಾ ವರದಿ ವಿಭಾಗಗಳಿಗೆ ಸಂಬಂಧಿಸಿದಂತೆ ಕೋರುವ ಮಾಹಿತಿ ಒದಗಿಸಲು ಆಡಳಿತ ವಿಭಾಗಕ್ಕೆ ಸಂಬಂಧಿಸಿದಂತೆ ಮಾಹಿತಿ ಒದಗಿಸುವ ಒಂದನೇ ಕೇಂದ್ರ ಸ್ಥಾನಿಕ ಸಹಾಯಕರನ್ನು ಸಾರ್ವಜನಿಕ ಮಾಹಿತಿ ಅಧಿಕಾರಿಯನ್ನಾಗಿ ನೇಮಕ ಮಾಡಲಾಗಿತ್ತು. (1) ಶಿಸ್ತು ವಿಭಾಗ (2) ಆಸ್ತಿ ಮತ್ತು ಋಣಪಟ್ಟಿ ಹಾಗೂ ಕಾರ್ಯನಿರ್ವಹಣಾ ವರದಿ ವಿಭಾಗಗಳನ್ನು ಇದೇ ಕಛೇರಿಯ ಮತ್ತೊಬ್ಬರು ಅಬಕಾರಿ ಅಧೀಕ್ಷಕರು ನಿರ್ವಹಿಸುತ್ತಿರುವುದರಿಂದ ಈ ವಿಭಾಗಗಳಿಗೆ ಸಂಬಂಧಿಸಿದಂತೆ ಮಾಹಿತಿ ಕೋರುವ ವ್ಯಕ್ತಿಗಳಿಗೆ ಅವರೇ ನೇರವಾಗಿ ಮಾಹಿತಿ ಒದಗಿಸಬಹುದಾಗಿರುತ್ತದೆ. ಅದರಂತೆ ಅಬಕಾರಿ ಆಯುಕ್ತರ ಕಛೇರಿಗೆ ಸಂಬಂಧಿಸಿದಂತೆ ಕೇಂದ್ರ ಮಾಹಿತಿ ಹಕ್ಕು ಅಧಿನಿಯಮ 2005ನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಂಬಂಧ ಹಕ್ಕು ಅಧಿನಿಯಮ (central act-22 of 2005) ಸೆಕ್ಷನ್ 5(1). 5(2). 19(1) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮಾಹಿತಿಯನ್ನು ಕೋರುವ ವ್ಯಕ್ತಿಗಳಿಗೆ ಮೇಲಿನ ಕಾಯ್ದೆಯನ್ವಯ ಅಬಕಾರಿ ಇಲಾಖೆಗೆ ಸಂಬಂಧಿಸಿದಂತೆ ಮಾಹಿತಿಯನ್ನು ಒದಗಿಸಲು ಮತ್ತೊಬ್ಬರು ಸಾರ್ವಜನಿಕ ಮಾಹಿತಿ ಅಧಿಕಾರಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಈ ಕೆಳಕಂಡಂತೆ ನೇಮಕ ಮಾಡಲಾಗಿದೆ.

ಕ್ರ. ಸಂ.	ಕಛೇರಿ ಹೆಸರು	ಮಾಹಿತಿ ಪಡೆಯುವ ಹಕ್ಕು ಕಾಯ್ದೆ-2005ರ ಸೆಕ್ಷನ್-5(1)ರ ಪ್ರಕಾರ ರಾಜ್ಯ ಮಟ್ಟದಲ್ಲಿ "ಸಾರ್ವಜನಿಕ ಮಾಹಿತಿ ಅಧಿಕಾರಿ"	ಮಾಹಿತಿ ಪಡೆಯುವ ಹಕ್ಕು ಕಾಯ್ದೆ-2005ರ ಸೆಕ್ಷನ್-5(2)ರ ಪ್ರಕಾರ ರಾಜ್ಯ ಮಟ್ಟದಲ್ಲಿ "ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ"	ಮಾಹಿತಿ ಪಡೆಯುವ ಹಕ್ಕು ಕಾಯ್ದೆ-2005ರ ಸೆಕ್ಷನ್-19(1)ರ ಪ್ರಕಾರ ರಾಜ್ಯ ಮಟ್ಟದಲ್ಲಿ "ಮೇಲ್ಮನವಿ ಪ್ರಾಧಿಕಾರಿ"
1	ಅಬಕಾರಿ ಆಯುಕ್ತರ ಕಛೇರಿ	ಅಬಕಾರಿ ಅಧೀಕ್ಷಕರು ಅಬಕಾರಿ ಆಯುಕ್ತರ ಕಛೇರಿ	1. ಅಬಕಾರಿ ಉಪ ಅಧೀಕ್ಷಕರು, (ಶಿಸ್ತು ವಿಭಾಗ ಮತ್ತು ಆಸ್ತಿ ಮತ್ತು ಋಣ ಪಟ್ಟಿ ವಿಭಾಗ ಹಾಗೂ ಕಾರ್ಯ ನಿರ್ವಹಣಾ ವರದಿ ವಿಭಾಗ) 2. ಅಬಕಾರಿ ಉಪ ಅಧೀಕ್ಷಕರು (ದೂರವಾಣಿ ಮತ್ತು ಕಟ್ಟಡ ವಿಭಾಗ)	ಅಬಕಾರಿ ಜಂಟಿ ಆಯುಕ್ತರು (ಆಡಳಿತ) ಅಬಕಾರಿ ಆಯುಕ್ತರ ಕಛೇರಿ

ಮೇಲ್ಕಂಡ ಪ್ರಾಧಿಕಾರಿಗಳು 2005 ರ ಮಾಹಿತಿ ಹಕ್ಕು ಕಾಯ್ದೆ (2005ರ ಕೇಂದ್ರ ಕಾಯ್ದೆ 22ರ) ಅನ್ವಯ ಸಾರ್ವಜನಿಕರಿಗೆ ನಿಗದಿತ ಅವಧಿಯಲ್ಲಿ ಮಾಹಿತಿ ಒದಗಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

ಪಿ.ಆರ್. 1378

ಅಬಕಾರಿ ಆಯುಕ್ತರು

5ನೇ ಎ.ಸಿ.ಎಂ.ಎಂ. ನ್ಯಾಯಾಲಯ ಬೆಂಗಳೂರು ನಗರ

ದಿನಾಂಕ: 23-12-2011.

ವಾಹನಗಳ ವಿವರಗಳು

Sl. No.	Crime and Cmiss No.	Make of the vehicle & No.	PF No. & date	Engine No.	Chassis No.
1	C Miss No. 285/11,	TVS Moped, Without No.	53/11, 18-3-11	ODIF-4116996	M621RD1541F 76361
2	C Miss No. 307/11	Bajaj CT-100. KA-03. EQ-7152	56/11 22-3-11	DUMBLJ-67683	DUFBLJ-68284

Sl. No.	Crime and Cmiss No.	Make of the vehicle & No.	PF No. & date	Engine No.	Chassis No.
3	Cmiss No. 350/11	Suzuki Samurai, CNO-6540	64/11 31-3-11	7111-M-143364	711-FO 88131
4	Cmiss No. 381/11	Honda Shine, KA-41, L-3991	70/11 10-4-11	JC-36E 9381446	ME4JC366D 9824754
5	Cmiss No. 401/11	Kinetic Nova, Without No.	77/11 17-4-11	NOF-UJ-022046	NOE-UJ-021880
6	Cmiss No. 704/11	Yamaha RX, Without No. Not in condition	137/11 15-7-11	ILI-039934	ILI-039934
7	Cmiss No. 704/11	Hero Puch without	137/11 15-7-11	EB-3636618	MD395JIBRSC-366992

By Order of the Court

ಪಿ.ಆರ್. 1379

Shirestedar

Vth Addl. A.C.M.M. Court, Bangalore

ಸಹಕಾರ ಸಂಘಗಳ ಅಪರ ನಿಬಂಧಕರು (ಬಳಕೆ ಮತ್ತು ಮಾರಾಟ) ಕೇಂದ್ರ ಕಛೇರಿ, ಬೆಂಗಳೂರು ಇವರ ನಡವಳಿಗಳು

ವಿಷಯ: ಮಂಡ್ಯ ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾರಾಟ ಮಳಿಗೆ ನಿ., ಮಂಡ್ಯ ಇದನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72ರ ಮೇರೆಗೆ ಸಮಾಪನೆಗೊಳಿಸುವ ಬಗ್ಗೆ.

ಉಲ್ಲೇಖ:

1. ಜಂಟಿ ನಿಬಂಧಕರು, ಮೈಸೂರು ಇವರ ಪತ್ರ ಸಂಖ್ಯೆ : ಜೆಆರ್‌ಎಂ/ಎಸ್-10/ಎಲ್‌ಕ್ಯೂಡಿ/48/2010-11, ದಿನಾಂಕ : 6-12-2010.
2. ಈ ಕಛೇರಿ ಸಮ ಸಂಖ್ಯೆ : ಪತ್ರ ದಿನಾಂಕ :- 23-12-10, 4-8-2011, 2-9-2011 ಹಾಗೂ 3-11-2011.
3. ಜಂಟಿ ನಿಬಂಧಕರು, ಮೈಸೂರು ಇವರ ಪತ್ರ ಸಂಖ್ಯೆ : ಜೆಆರ್‌ಎಂ/ಎಸ್-10/ಸಮಾಪನೆ/ಸಿಆರ್/2011-12, ದಿನಾಂಕ : 24-11-2011.

ಪ್ರಸ್ತಾವನೆ :

ಮಂಡ್ಯ ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾರಾಟ ಮಳಿಗೆ ನಿ., ಮಂಡ್ಯ ಸಂಖ್ಯೆ : ಆರ್‌ಸಿಎಸ್/1056, ದಿನಾಂಕ : 24-2-1964 ರಲ್ಲಿ ನೋಂದಣಿ ಆಗಿರುತ್ತದೆ. ಇದರ ಕಾರ್ಯ ವ್ಯಾಪ್ತಿಯು ಜಿಲ್ಲಾ ಮಟ್ಟದ್ದಾಗಿರುತ್ತದೆ. ಸದರಿ ಸಂಘದ ಚುನಾವಣಾ ಪ್ರಕ್ರಿಯೆಗಳನ್ನು ನಿಯಮಾನುಸಾರ, ಚುನಾವಣಾಧಿಕಾರಿ, ಕೈಗೊಂಡರೂ ಸಹ ಸಂಘದ ಬೈಲಾ ರೀತ್ಯಾ ಆಯ್ಕೆಯಾಗಬೇಕಾದ ನಿರ್ದೇಶಕರುಗಳ ಸ್ಥಾನಕ್ಕೆ ನಾಮಪತ್ರಗಳು ಸಲ್ಲಿಕೆಯಾಗದ ಕಾರಣ ಸಂಘದ ಚುನಾವಣೆಯನ್ನು ನಿಯಮಾನುಸಾರ ನಡೆಸಿ ಆಡಳಿತ ಮಂಡಳಿಯನ್ನು ರಚಿಸಲು ಸಾಧ್ಯವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಸಂಘವು ಕಾರ್ಯ ಚಟುವಟಿಕೆಗಳನ್ನು ನಡೆಸದೆ ಸ್ಥಗಿತಗೊಂಡಿರುತ್ತದೆ.

ಸದರಿ ಸಂಘದ ಲೆಕ್ಕ ಪರಿಶೋಧನೆಯು 2004-05 ನೇ ಸಾಲಿನವರೆಗೆ ನಡೆದಿರುತ್ತದೆ ಮತ್ತು ವಾರ್ಷಿಕ ಮಹಾಸಭೆಯು 2008-09ನೇ ಸಾಲಿನವರೆಗೆ ನಡೆದಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಸಂಘವನ್ನು ಸಮಾಪನೆಗೊಳಿಸುವ ಬಗ್ಗೆ ದಿನಾಂಕ : 25-10-2010 ರಂದು ಸಹಕಾರ ಸಂಘಗಳ ನಿರೀಕ್ಷಕರು, ಮಂಡ್ಯ ತಾ: ರವರು ಸಾರ್ವಜನಿಕ ಪ್ರಕಟಣೆಯನ್ನು ಹೊರಡಿಸಿ, ಸಂಘವನ್ನು ಪುನಶ್ಚೇತನಗೊಳಿಸುವ ಬಗ್ಗೆ ಸಂಘದ ಸದಸ್ಯರಿಗೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ತಿಳಿಸಲಾಗಿತ್ತು. ಆದರೆ ತಹಲ್‌ವರೆವಿಗೂ ಸಂಘದ ಆಡಳಿತ ಮಂಡಳಿಯ ಸದಸ್ಯರಿಂದಾಗಲೀ ಅಥವಾ ಸಾಮಾನ್ಯ ಸದಸ್ಯರಿಂದಾಗಲೀ ಯಾವುದೇ ಆಕ್ಷೇಪಣೆ ಸ್ವೀಕೃತವಾಗದ ಹಿನ್ನೆಲೆಯಲ್ಲಿ ಯಾರಿಗೂ ಸಂಘದ ಬಗ್ಗೆ ಆಸಕ್ತಿ ಇಲ್ಲದಿರುವುದರಿಂದ ಸಂಘವನ್ನು ಯಥಾ ಸ್ಥಿತಿಯಲ್ಲಿಯೇ ಮುಂದುವರೆಸುವುದರಿಂದ ಸಂಘದ ಸದಸ್ಯರಿಗಾಗಲೀ ಸಾರ್ವಜನಿಕರಾಗಲೀ ಯಾವುದೇ ಪ್ರಯೋಜನ ಇಲ್ಲವೆಂದು ಆದ್ದರಿಂದ ಸಂಘವನ್ನು ಸಮಾಪನೆಗೊಳಿಸುವಂತೆ ಸಹಕಾರ ಸಂಘಗಳ ಉಪ ನಿಬಂಧಕರು, ಮಂಡ್ಯ ಜಿಲ್ಲೆ ರವರು ಸಹಕಾರ ಸಂಘಗಳ ಜಂಟಿ ನಿಬಂಧಕರು, ಮೈಸೂರು ಪ್ರಾಂತ ರವರಿಗೆ ಕೋರಿರುತ್ತಾರೆ.

ಸ್ಥಗಿತಗೊಂಡಿರುವ ಮಂಡ್ಯ ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾರಾಟ ಮಳಿಗೆ, ನಿ., ಮಂಡ್ಯ ಈ ಸಂಘದ ಬಗ್ಗೆ ಉಪ ನಿಬಂಧಕರು, ಮಂಡ್ಯ ಇವರ ಶಿಫಾರಸ್ಸನ್ನು ಪರಿಗಣಿಸಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 72ರ ಮೇರೆಗೆ ಸಮಾಪನೆಗೊಳಿಸಿ ಸಂಘಕ್ಕೆ ಸಮಾಪನಾಧಿಕಾರಿಯಾಗಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮಂಡ್ಯ ಉಪ ವಿಭಾಗ, ಮಂಡ್ಯ ಇವರನ್ನು ನೇಮಿಸಲು ಕೋರಿ ಪ್ರಸ್ತಾವನೆಯನ್ನು ಉಲ್ಲೇಖ (1) ಮತ್ತು (2) ರಲ್ಲಿ ಶಿಫಾರಸ್ಸು ಮಾಡಿ ಸಲ್ಲಿಸಿರುತ್ತಾರೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸದರಿ ಸಂಘವನ್ನು ಕಲಂ 72(2) ರನ್ವಯ ಸಮಾಪನೆಗೊಳಿಸುವುದು ಸೂಕ್ತವೆಂದು ಮನಗಂಡು ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ಸಂಖ್ಯೆ : ಸಸಂನಿ/66/ಸಮಾಪನೆ/2010-11, ದಿನಾಂಕ : 24-12-2011.

ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸಿರುವ ಅಂಶಗಳ ಆಧಾರದ ಮೇಲೆ ಕೆ.ಹೆಚ್. ತಿಮ್ಮಯ್ಯ, ಸಹಕಾರ ಸಂಘಗಳ ಅಪರ ನಿಬಂಧಕರು (ಬಳಕೆ ಮತ್ತು ಮಾರಾಟ) ಕೇಂದ್ರ ಕಛೇರಿ, ಬೆಂಗಳೂರು ಆದ ನಾನು ಸರ್ಕಾರದ ಅಧಿಸೂಚನೆ ಸಂಖ್ಯೆ : ಸಿಒ/139/ಸಿಎಲ್‌ಎಂ/2010, ದಿನಾಂಕ : 4-7-2011 ಹಾಗೂ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 72(2) ರಲ್ಲಿ ದತ್ತವಾಗಿರುವ ಅಧಿಕಾರದನ್ವಯ ಮಂಡ್ಯ ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾರಾಟ ಮಳಿಗೆ ನಿ., ಮಂಡ್ಯ ಇದನ್ನು ಸಮಾಪನೆಗೊಳಿಸಿ ಆದೇಶ ಹೊರಡಿಸಿರುತ್ತೇನೆ.

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 73(1) ರನ್ವಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮಂಡ್ಯ ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಿರುತ್ತೇನೆ. ಸಮಾಪನಾಧಿಕಾರಿಗಳು ಸಂಘದ ಪ್ರಭಾರವನ್ನು 15 ದಿನಗಳೊಳಗಾಗಿ ಪಡೆದುಕೊಂಡು ಪ್ರಭಾರ ಪಟ್ಟಿಯನ್ನು ಸಲ್ಲಿಸತಕ್ಕದ್ದು. ಅಲ್ಲದೆ ಸಂಘದ ಅಡಾವೆ ಪತ್ರದ ಆಧಾರದ ಮೇಲೆ ಆದ್ಯತಾ ಪಟ್ಟಿ ತಯಾರಿಸಿ ಈ ಕಛೇರಿಯಿಂದ ಅನುಮತಿ ಪಡೆದು ಆಸ್ತಿಯು ವಸೂಲಾದಂತೆ ಆದ್ಯತೆ ಮೇಲೆ ಜವಾಬ್ದಾರಿ ತೀರುವಳಿ ಮಾಡಿ ಸಂಘದ ನೊಂದಣಿ ರದ್ದತಿಗೆ ಅರವತ್ತು ದಿನಗಳೊಳಗೆ ಪ್ರಸ್ತಾವೆ ಸಲ್ಲಿಸಲು ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ನನ್ನ ಹಸ್ತಾಕ್ಷರ ಹಾಗೂ ಈ ಕಛೇರಿ ಮೊಹರಿನೊಂದಿಗೆ ಈ ದಿನ ದಿನಾಂಕ : 24-12-2011 ರಂದು ಹೊರಡಿಸಲಾಗಿದೆ.

ಕೆ.ಹೆಚ್. ತಿಮ್ಮಯ್ಯ

ಪಿ.ಆರ್. 1380

ಸಹಕಾರ ಸಂಘಗಳ ಅಪರ ನಿಬಂಧಕರು,

(ಬಳಕೆ ಮತ್ತು ಮಾರಾಟ).

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭	ಬೆಂಗಳೂರು, ಗುರುವಾರ, ಜನವರಿ ೨೬, ೨೦೧೨ (ಮಾಘ ೬, ಶಕ ವರ್ಷ ೧೯೩೩)	ಸಂಚಿಕೆ ೪

ಭಾಗ – ೪ಎ

ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಅಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು, ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು.

ಕಂದಾಯ ಸಚಿವಾಲಯ

ಸಂಖ್ಯೆ: ಕಂಇ 131 ಮುಸೇವಿ 2011 (7) ಬೆಂಗಳೂರು, ದಿನಾಂಕ:24.11.2011

ಅಧಿಸೂಚನೆ

ಕರ್ನಾಟಕ ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, (1997)ರ ಕಲಂ 21 ಅಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಚಿಕ್ಕಮಗಳೂರು ಜಿಲ್ಲೆಗೆ ಈ ಕೆಳಗಿನಂತೆ ಜಿಲ್ಲಾ ಧಾರ್ಮಿಕ ಪರಿಷತ್ತನ್ನು ರಚಿಸಿದೆ:-

ಕ್ರ ಸಂ	ಹೆಸರು ಮತ್ತು ವಿಳಾಸ	ಪದನಾಮ
1	ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು	ಅಧ್ಯಕ್ಷರು
2	ಶ್ರೀ ಬಿ.ಕೆ. ಮನೋಹರ ನಂ. 658, 1ನೇ ಮಹಡಿ, ವಿಜಯ ಮೆಡಿಕಲ್ಸ್ ಮೇಲೆ ಶಂಕರಮಠ ರಸ್ತೆ, ಹಾಸನ.	ನಿವೃತ್ತ ನ್ಯಾಯಾಧೀಶರು (ಚಿಕ್ಕಮಗಳೂರಿಗೆ ಪ್ರಭಾರ)
3	ಶ್ರೀ ಶ್ರೀಕಂಠ ಭಟ್ಟರು, ಪುರೋಹಿತರು, ಕುಡಿನಲ್ಲಿ, ರಾಘವೇಂದ್ರಸ್ವಾಮಿ ಮಠದ ರಸ್ತೆ, ಕಮ್ಮರಡಿ ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.	ವೇದ ವಿದ್ವಾಂಸರು
4	ಶ್ರೀ ಎನ್. ಸಿದ್ದಯ್ಯ ಬಿನ್ ನಂದಯ್ಯ ಅಮೃತಾಪುರ ಅಂಚೆ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು	ಆಗಮ ಪಂಡಿತರು
5	ಶ್ರೀ ಕೆ.ಎಸ್. ಶ್ರೀಧರ ರಾವ್, ಕವಿಲುಕುಡಿಗೆ, ಅಡ್ಡಗದ್ದೆ ಅಂಚೆ, ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು	ಸಾಮಾನ್ಯ
6	ಶ್ರೀ ಟಿ.ಕೆ. ಮಂಜುನಾಥ್, ಗುತ್ತಿಗೆದಾರರು, ಕೆ.ಎಂ. ರಸ್ತೆ, ಕಡೂರು ಅಂಚೆ, ಚಿಕ್ಕಮಗಳೂರು	ಹಿಂದುಳಿದ ವರ್ಗ
7	ಶ್ರೀ ಎನ್. ಮಂಜುನಾಥ್, ದುಗ್ಲಾಪುರ ಅಂಚೆ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು	ಪರಿಶಿಷ್ಟ ಜಾತಿ
8	ಶ್ರೀಮತಿ ರೂಪ ಕೋಂ ಬೆರಣಗೋಡು ಮಹೇಶ್ ಬೆರಣಗೋಡು, ಅವುತಿ ಅಂಚೆ, ಚಿಕ್ಕಮಗಳೂರು ತಾಲ್ಲೂಕು,	ಮಹಿಳೆ
9	ಶ್ರೀ ವೆಂಕಟಸುಬ್ಬಯ್ಯ, ಕಳಸ, ಮೂಡಿಗೆರೆ ತಾಲ್ಲೂಕು, ಚಿಕ್ಕಮಗಳೂರು	ಸಾಮಾನ್ಯ
10	ಧಾರ್ಮಿಕ ದತ್ತಿ ತಹಸೀಲ್ದಾರ್, ಜಿಲ್ಲಾಧಿಕಾರಿಗಳ ಕಛೇರಿ, ಚಿಕ್ಕಮಗಳೂರು	ಪದನಿಮಿತ್ತ ಕಾರ್ಯದರ್ಶಿಗಳು

ಸದರಿ ಪರಿಷತ್ತು, ಉಲ್ಲೇಖಿತ ಅಧಿನಿಯಮದ ಕಲಂ 21ಎ ರಡಿ ನಮೂದಿಸಿರುವ ಕರ್ತವ್ಯ ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

ಅಧಿಸೂಚನೆಯು ಮೂರು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ; ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ. ಉಮಾಪತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಮುಜರಾಯಿ)

ಪಿ.ಆರ್. 1068

ಆರ್ಥಿಕ ಸಚಿವಾಲಯ

ಸಂಖ್ಯೆ:ಆಇ 14 ರಾಲೆಪ 1996, ಬೆಂಗಳೂರು, ದಿನಾಂಕ: 19–12–2011

ಅಧಿಸೂಚನೆ

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ 1978 (1990ರ ಕರ್ನಾಟಕ ಅಧಿನಿಯಮ 14)ರ ಕಲಂ 3ರ ಉಪಕಲಂ (1) ಸಹವಾಚನ ಕಲಂ 8ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸದರಿ ಅಧಿನಿಯಮದ ಕಲಂ 3ರ ಅಡಿಯ ಉಪಕಲಂ (2)ರಲ್ಲಿ ಅಗತ್ಯಪಡಿಸಲಾಗಿರುವಂತೆ ಈ ಕೆಳಕಂಡ ನಿಯಮಗಳ ಕರಡನ್ನು ಅಧಿಸೂಚನೆ ಸಂಖ್ಯೆ:ಆಇ 14 ರಾಲೆಪ 1996 ದಿನಾಂಕ:01.02.2011ರ ಮೂಲಕ ಹೊರಡಿಸಿ, ದಿನಾಂಕ 1ನೇ ಫೆಬ್ರವರಿ 2011ರ ವಿಶೇಷ ಕರ್ನಾಟಕ ರಾಜ್ಯ ಪತ್ರದ ಭಾಗ–IV ಎ ಸಂಖ್ಯೆ:179ರಲ್ಲಿ ಪ್ರಕಟಿಸಿ ಸದರಿ ನಿಯಮಗಳಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆ ಮತ್ತು ಸಲಹೆಗಳನ್ನು ಪ್ರಕಟಣೆಯ ದಿನಾಂಕದಿಂದ 30 ದಿನಗಳ ಒಳಗಾಗಿ ಸಲ್ಲಿಸಲು ಆಹ್ವಾನಿಸಲಾಗಿದ್ದರಿಂದ,

ಸದರಿ ಕರಡನ್ನು ದಿನಾಂಕ:1ನೇ ಫೆಬ್ರವರಿ 2011ರಂದು ಸಾರ್ವಜನಿಕರಿಗೆ ದೊರೆಯುವಂತೆ ಮಾಡಲಾಗಿದ್ದರಿಂದ;

ಮತ್ತು ಈ ಸಂಬಂಧ ಸ್ವೀಕರಿಸಲಾದ ಆಕ್ಷೇಪಣೆ ಮತ್ತು ಸಲಹೆಗಳನ್ನು ಸರ್ಕಾರವು ಪರಿಗಣಿಸಿರುವುದರಿಂದ;

ಆದ್ದರಿಂದ, ಈಗ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ 1978 (1990ರ ಕರ್ನಾಟಕ ಅಧಿನಿಯಮ 14)ರ ಕಲಂ 3ರ ಅಡಿಯ ಉಪಕಲಂ (1) ಸಹವಾಚನ ಕಲಂ 8ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಏನೆಂದರೆ:–

ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ:–** (1) ಈ ನಿಯಮಗಳನ್ನು ಕರ್ನಾಟಕ ರಾಜ್ಯ ಲೆಕ್ಕಪತ್ರ ಸೇವೆಗಳು (ನೇಮಕಾತಿ) ನಿಯಮಗಳು, 2011 ಎಂದು ಕರೆಯತಕ್ಕದ್ದು.

   (2) ಈ ನಿಯಮಗಳು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ನೇಮಕಾತಿ ವಿಧಾನ ಮತ್ತು ನಿಗದಿಪಡಿಸಿರುವ ಕನಿಷ್ಠ ವಿದ್ಯಾರ್ಹತೆ:–** ಕರ್ನಾಟಕ ರಾಜ್ಯ ಲೆಕ್ಕಪತ್ರ ಸೇವೆಗಳಿಗೆ ಅನ್ವಯವಾಗುವ ರಾಜ್ಯ ಸರ್ಕಾರದ ಸೇವೆಗಳ ಸಿಬ್ಬಂದಿ ವೃಂದಗಳಲ್ಲಿ ಈ ಕೆಳಗಿರುವ ಶೆಡ್ಯೂಲಿನ ಕಾಲಂ(2)ರಲ್ಲಿ ನಿಗದಿಪಡಿಸಿರುವ ಪ್ರತಿಯೊಂದು ಹುದ್ದೆ ಮತ್ತು ವೇತನ ಶ್ರೇಣಿ, ಅವುಗಳ ಸಂಖ್ಯೆ ಮತ್ತು ಆಯಾ ಹುದ್ದೆಗಳಿಗೆ ನಿಗದಿಪಡಿಸಿರುವ ನೇಮಕಾತಿ ವಿಧಾನ ಮತ್ತು ಕನಿಷ್ಠ ವಿದ್ಯಾರ್ಹತೆಯನ್ನು ಅವುಗಳ ಎದುರಾಗಿ ಕಾಲಂ(3),(4), (5),(6) ಮತ್ತು (7)ರಲ್ಲಿದ್ದಂತೆ ಹೊಂದಿರತಕ್ಕದ್ದು.

   ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ನೀಡಬೇಕಾದ ತರಬೇತಿಯ ವಿವರಗಳನ್ನು ಮತ್ತು ನಿಯೋಜಿಸಬೇಕಾದ ತರಬೇತಿ ಸಂಸ್ಥೆಗಳ ವಿವರಗಳನ್ನು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿಗದಿಪಡಿಸತಕ್ಕದ್ದು.

   ಪರಂತು, ಈ ಅಧಿಸೂಚನೆಯು ಪ್ರಕಟವಾದ ಆರು ತಿಂಗಳೊಳಗಾಗಿ ಯಾವುದೇ ಹುದ್ದೆಯ ನೇರನೇಮಕಾತಿಗಾಗಿ/ಪದೋನ್ನತಿಗಾಗಿ ನಿರ್ದಿಷ್ಟಪಡಿಸಿರುವ ಹೆಚ್ಚುವರಿ ವಿದ್ಯಾರ್ಹತೆಯನ್ನು ಯಾವುದೇ ವೃಂದಗಳಲ್ಲೂ ಒತ್ತಾಯಪಡಿಸತಕ್ಕದ್ದಲ್ಲ:

   (1) ಆರ್ಥಿಕ ನಿರ್ವಹಣೆ ಮತ್ತು ಸಂಬಂಧಿತ ವಿಷಯಗಳಲ್ಲಿ ತರಬೇತಿ ಪಡೆಯುವುದು **ಮತ್ತು**

   (2) ಟಾಲಿ ಅಥವಾ ತತ್ಸಮಾನ ಅಕೌಂಟಿಂಗ್ ಸಾಫ್ಟ್‌ವೇರ್ ಅಥವಾ ಎಂ.ಎಸ್.ಆಫೀಸ್ ಅಥವಾ ಎಕ್ಸೆಲ್ ವಿಷಯಗಳಲ್ಲಿ ತರಬೇತಿ ಪಡೆಯುವುದಕ್ಕೆ,

   ಪರಂತು, ಮೇಲೆ ಮೊದಲನೇ ಕಂಡಿಕೆಯ 2 ನೇ ಪರಂತುಕದಲ್ಲಿ ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಅರ್ಹತಾ ಪರೀಕ್ಷೆಗೆ ಪರಿಗಣಿಸತಕ್ಕದ್ದೇ ವಿನಹ ನೇರನೇಮಕಾತಿ ಮಾಡಲು ಅರ್ಹತಾ ಮಾನದಂಡವೆಂದು ಪರಿಗಣಿಸತಕ್ಕದ್ದಲ್ಲ.

3. **ನಿರಸನ ಮತ್ತು ಉಳಿಸುವಿಕೆ:** ಕರ್ನಾಟಕ ರಾಜ್ಯ ಲೆಕ್ಕಪತ್ರ ಸೇವೆಗಳು(ನೇಮಕಾತಿ) ನಿಯಮಾವಳಿಗಳು, 1959ರನ್ನು ಈ ಮೂಲಕ ನಿರಸನಗೊಳಿಸಿದೆ. ಆದರೆ, ಈ ನಿರಸನವು ಕೆಳಗಿನವುಗಳಿಗೆ ಅನ್ವಯವಾಗುವುದಿಲ್ಲ.

   (ಎ) ನಿರಸನಗೊಳಿಸಿರುವ ನಿಯಮಗಳಂತೆ ಈಗಾಗಲೇ ಜಾರಿಗೊಳಿಸಿರುವ ಆದೇಶಗಳು ಅಥವಾ ಕ್ರಮಗಳು ಅಥವಾ ಬಾಧ್ಯತೆಗಳು **ಅಥವಾ**

   (ಬಿ) ನಿರಸನಗೊಳಿಸಿರುವ ನಿಯಮಗಳಡಿ ಹೊಂದಿರುವ ಪ್ರಾಪ್ತವಾಗಿರುವ ಯಾವುದೇ ಹಕ್ಕು, ವಿಶೇಷಾಧಿಕಾರ, ಋಣ ಮತ್ತು ವಾಯಿತ್ವಗಳು.

ಶೆಡ್ಯೂಲ್ –1
(ನಿಯಮ 2 ನೋಡಿ)

ಕ್ರಮ ಸಂಖ್ಯೆ:	ಹುದ್ದೆಯ ಪ್ರವರ್ಗ ಮತ್ತು ವೇತನ ಶ್ರೇಣಿ	ಹುದ್ದೆಗಳ ಸಂಖ್ಯೆ: ಖಾಯಂ	ತಾತ್ಕಾಲಿಕ	ನಿಯೋಜನೆ ಮೀಸಲು	ನೇಮಕಾತಿ ವಿಧಾನ	ಕನಿಷ್ಠ ವಿದ್ಯಾರ್ಹತೆ
1	2	3	4	5	6	7
1.	ನಿಯಂತ್ರಕರು (26250–36500)	1	--	--	ಅಪರ ನಿಯಂತ್ರಕರ ವೃಂದದಿಂದ ಆಯ್ಕೆ ಮೂಲಕ ಪದೋನ್ನತಿ **ಅಥವಾ** ಭಾರತೀಯ ಆಡಳಿತ ಸೇವೆ(ಹಿರಿಯ ವೇತನ ಶ್ರೇಣಿ) ವೃಂದದಿಂದ ನಿಯುಕ್ತಿ ಮೂಲಕ.	--
2.	ಅಪರ ನಿಯಂತ್ರಕರು (' 22125–30300)	1	1	7	ಜಂಟಿ ನಿಯಂತ್ರಕರ ವೃಂದದಿಂದ ಪದೋನ್ನತಿ ಮೂಲಕ.	**ಪದೋನ್ನತಿಗಾಗಿ:** ಜಂಟಿ ನಿಯಂತ್ರಕರ ವೃಂದದಲ್ಲಿ ಕನಿಷ್ಠ ಐದು ವರ್ಷಗಳ ಸೇವೆಯನ್ನು ಪೂರೈಸಿರತಕ್ಕದ್ದು.
3.	ಜಂಟಿ ನಿಯಂತ್ರಕರು (' 20025–28275)	1	--	90	ಉಪ ನಿಯಂತ್ರಕರ ವೃಂದದಿಂದ ಪದೋನ್ನತಿ ಮೂಲಕ.	**ಪದೋನ್ನತಿಗಾಗಿ:** (1) ಉಪ ನಿಯಂತ್ರಕರ ವೃಂದದಲ್ಲಿ ಕನಿಷ್ಠ ಐದು ವರ್ಷಗಳ ಸೇವೆಯನ್ನು ಪೂರೈಸಿರತಕ್ಕದ್ದು. (2) ಉಪ ನಿಯಂತ್ರಕರ ವೃಂದದಲ್ಲಿ ಜೇಷ್ಠತೆಯ ಆಧಾರದ ಮೇಲೆ ಇಲಾಖೆಯು ಏರ್ಪಡಿಸುವ ಮತ್ತು ನಿಯೋಜಿಸುವ ಆರ್ಥಿಕ ನಿರ್ವಹಣೆ ಮತ್ತು ಸಂಬಂಧಿತ ವಿಷಯಗಳ ಬಗ್ಗೆ ಕನಿಷ್ಠ ಮೂರು ತಿಂಗಳ ಅವಧಿಯ ತರಬೇತಿಯನ್ನು ಯಶಸ್ವಿಯಾಗಿ ಪೂರೈಸಿರತಕ್ಕದ್ದು.
4.	ಉಪ ನಿಯಂತ್ರಕರು (' 18150–26925)	5	8	45	ಸಹಾಯಕ ನಿಯಂತ್ರಕರ ವೃಂದದಿಂದ ಪದೋನ್ನತಿ ಮೂಲಕ. **ಟಿಪ್ಪಣಿ:** ಉಪ ನಿಯಂತ್ರಕರ ವೃಂದದ ಅಧಿಕಾರಿಗಳನ್ನು ಜೇಷ್ಠತೆ ಆಧಾರದ ಮೇಲೆ ಆರ್ಥಿಕ ನಿರ್ವಹಣೆ ಮತ್ತು ಸಂಬಂಧಿತ ವಿಷಯಗಳ ಬಗ್ಗೆ ಕನಿಷ್ಠ ಮೂರು ತಿಂಗಳ ಅವಧಿಯ ತರಬೇತಿಗೆ ಇಲಾಖೆಯು ನಿಯೋಜಿಸತಕ್ಕದ್ದು.	**ಪದೋನ್ನತಿಗಾಗಿ:** (1) ಸಹಾಯಕ ನಿಯಂತ್ರಕರ ವೃಂದದಲ್ಲಿ ಕನಿಷ್ಠ ಐದು ವರ್ಷಗಳ ಸೇವೆಯನ್ನು ಪೂರೈಸಿರತಕ್ಕದ್ದು. (2) ಸಹಾಯಕ ನಿಯಂತ್ರಕರ ವೃಂದದಲ್ಲಿ ಜೇಷ್ಠತೆಯ ಆಧಾರದ ಮೇಲೆ ಇಲಾಖೆಯು

1	2	3	4	5	6	7
						ಏರ್ಪಡಿಸುವ ಮತ್ತು ನಿಯೋಜಿಸುವ ಆರ್ಥಿಕ ನಿರ್ವಹಣೆ ಮತ್ತು ಸಂಬಂಧಿತ ವಿಷಯಗಳ ಬಗ್ಗೆ ಕನಿಷ್ಠ ಮೂರು ತಿಂಗಳ ಅವಧಿಯ ತರಬೇತಿಯನ್ನು ಯಶಸ್ವಿಯಾಗಿ ಪೂರೈಸಿರತಕ್ಕದ್ದು.
5.	ಸಹಾಯಕ ನಿಯಂತ್ರಕರು (' 14050–25050)	31	45	138	ಶೇಕಡ 50ರಷ್ಟು ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗವು ಏರ್ಪಡಿಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಗಳಿಸುವ ಅಂಕಗಳ ಆಧಾರದ ಮೇಲೆ ನೇರ ನೇಮಕಾತಿ ಮೂಲಕ ಪ್ರಸ್ತುತ ನಿಯಮಗಳಿಗೆ ಒಳಪಟ್ಟಂತೆ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸುವಿಕೆಯು ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್ಸ್ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ) ನಿಯಮಗಳು 1997ರ ನಿಯಮ 5 ಮತ್ತು 7 ಯತ್ತಾವತ್ತಾಗಿ ಅನ್ವಯಿಸತಕ್ಕದ್ದು. ಪರೀಕ್ಷಾ ವಿಧಾನ ಮತ್ತು ವಿವರವಾದ ಪರೀಕ್ಷಾ ಪಠ್ಯಕ್ರಮವು ಈ ನಿಯಮ ಗಳ ಶೆಡ್ಯೂಲ್–2 ರಲ್ಲಿ ವಿವರಿಸಿರುವಂತೆ ಇರತಕ್ಕದ್ದು. **ಟಿಪ್ಪಣಿ:** ಸಹಾಯಕ ನಿಯಂತ್ರಕರ ವೃಂದದ ಅಧಿಕಾರಿಗಳನ್ನು ಜೇಷ್ಠತೆಯ ಆಧಾರದ ಮೇಲೆ ಕನಿಷ್ಠ ಮೂರು ತಿಂಗಳ ಅವಧಿಗೆ ಆರ್ಥಿಕ ನಿರ್ವಹಣೆ ಮತ್ತು ಸಂಬಂಧಿತ ವಿಷಯಗಳ ಬಗ್ಗೆ ತರಬೇತಿಗೆ ಇಲಾಖೆಯು ನಿಯೋಜಿಸತಕ್ಕದ್ದು. **ಮತ್ತು** ಶೇಕಡ 50ರಷ್ಟು ಹುದ್ದೆಗಳನ್ನು ಲೆಕ್ಕಪರಿಶೋಧನಾಧಿಕಾರಿ/ ಸಹಾಯಕ ಲೆಕ್ಕಾಧಿಕಾರಿ ವೃಂದದಿಂದ ಪದೋನ್ನತಿ ಮೂಲಕ.	**ನೇರನೇಮಕಾತಿಗಾಗಿ:** ಭಾರತ ಸರ್ಕಾರದ ಕಾನೂನು ರೀತ್ಯ ಸ್ಥಾಪಿಸಲ್ಪಟ್ಟಿರುವ ವಿಶ್ವವಿದ್ಯಾಲಯದಿಂದ ವಾಣಿಜ್ಯ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ (ಎಂ.ಕಾಂ) **ಅಥವಾ** ಎಂಬಿಎ (ಆರ್ಥಿಕ) ಹೊಂದಿರತಕ್ಕದ್ದು **ಅಥವಾ** ಚಾರ್ಟರ್ಡ್ ಅಕೌಂಟೆಂಟ್ಸ್ **ಅಥವಾ** ಐಸಿಡಬ್ಲ್ಯೂಎ ನಲ್ಲಿ ಫೆಲೋ ಹೊಂದಿರತಕ್ಕದ್ದು. (1) ಟಾಲಿ ಅಥವಾ ತತ್ಸಮಾನ ಅಕೌಂಟಿಂಗ್ ಸಾಫ್ಟ್‌ವೇರ್ ಮತ್ತು ಎಂ.ಎಸ್. ಆಫೀಸ್ ತರಬೇತಿಯನ್ನು ಯಶಸ್ವಿಯಾಗಿ ಪೂರೈಸತಕ್ಕದ್ದು. (2) ಪರೀಕ್ಷಾ ಅವಧಿಯಲ್ಲಿ ಇಲಾಖೆಯು ಏರ್ಪಡಿಸುವ ಮತ್ತು ನಿಯೋಜಿಸುವ ಆರ್ಥಿಕ ನಿರ್ವಹಣೆ ಮತ್ತು ಸಂಬಂಧಿತ ವಿಷಯಗಳಲ್ಲಿ ಕನಿಷ್ಠ ಮೂರು ತಿಂಗಳ ತರಬೇತಿಯನ್ನು ಯಶಸ್ವಿಯಾಗಿ ಪೂರೈಸತಕ್ಕದ್ದು. **ಪದೋನ್ನತಿಗಾಗಿ:** (1) ಲೆಕ್ಕಪರಿಶೋಧನಾಧಿಕಾರಿ/ ಸಹಾಯಕ ಲೆಕ್ಕಾಧಿಕಾರಿ ವೃಂದದಲ್ಲಿ ಕನಿಷ್ಠ ಐದು ವರ್ಷಗಳ ಸೇವೆಯನ್ನು ಪೂರೈಸಿರತಕ್ಕದ್ದು.

1	2	3	4	5	6	7
						ಒಂದು ವೇಳೆ ಲೆಕ್ಕಪರಿಶೋಧನಾ ಅಧಿಕಾರಿ/ ಸಹಾಯಕ ಲೆಕ್ಕಾಧಿಕಾರಿ ವೃಂದದಲ್ಲಿ ಐದು ವರ್ಷಗಳ ಸೇವೆಯನ್ನು ಪೂರೈಸಿರುವ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ, ಲೆಕ್ಕಪರಿಶೋಧನಾಧಿಕಾರಿ/ ಸಹಾಯಕ ಲೆಕ್ಕಾಧಿಕಾರಿ ವೃಂದದಲ್ಲಿ ಕನಿಷ್ಠ ಮೂರು ವರ್ಷಗಳ ಸೇವೆಯನ್ನು ಪೂರೈಸಿರುವವರನ್ನು ಪರಿಗಣಿಸತಕ್ಕದ್ದು. (2) ಟಾಲಿ ಅಥವಾ ತತ್ಸಮಾನ ಅಕೌಂಟಿಂಗ್ ಸಾಫ್ಟ್‌ವೇರ್ ಮತ್ತು ಎಂ.ಎಸ್.ಆಫೀಸ್ ತರಬೇತಿಯನ್ನು ಯಶಸ್ವಿಯಾಗಿ ಪೂರೈಸಿರತಕ್ಕದ್ದು. (3)ಇಲಾಖೆಯು ಜೇಷ್ಠತೆಯ ಆಧಾರದ ಮೇಲೆ ಏರ್ಪಡಿಸುವ ಮತ್ತು ನಿಯೋಜಿಸುವ ಆರ್ಥಿಕ ನಿರ್ವಹಣೆ ಮತ್ತು ಸಂಬಂಧಿತ ವಿಷಯಗಳ ಬಗ್ಗೆ ಕನಿಷ್ಠ ಮೂರು ತಿಂಗಳ ಅವಧಿಯ ತರಬೇತಿಯನ್ನು ಲೆಕ್ಕಪರಿಶೋಧನಾಧಿಕಾರಿ/ ಸಹಾಯಕ ಲೆಕ್ಕಾಧಿಕಾರಿ ವೃಂದದಲ್ಲಿ ಯಶಸ್ವಿಯಾಗಿ ಪೂರೈಸತಕ್ಕದ್ದು.
6.	ಲೆಕ್ಕಪರಿಶೋಧನಾಧಿಕಾರಿ/ ಸಹಾಯಕ ಲೆಕ್ಕಾಧಿಕಾರಿ (' 11400–21600) (**ಗ್ರೂಪ್ ಬಿ**)	68	16	375	ಶೇಕಡ 50ರಷ್ಟು ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗವು ಏರ್ಪಡಿಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಗಳಿಸುವ ಅಂಕದ ಆಧಾರದ ಮೇಲೆ ನೇರನೇಮಕಾತಿ. ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್ಸ್ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ) ನಿಯಮಗಳು 1997ರ ನಿಯಮ 5 ಮತ್ತು 7 ಇವುಗಳಲ್ಲಿ ಅವಕಾಶ ಕಲ್ಪಿಸಿರುವಂತೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುವುದು. ಪರೀಕ್ಷಾ ವಿಧಾನ ಮತ್ತು ವಿವರವಾದ ಪರೀಕ್ಷಾ ವಿಷಯಗಳು ಈ ನಿಯಮಗಳ ಶೆಡ್ಯೂಲ್–2ರಲ್ಲಿದಂತೆ ಅನ್ವಯಿಸತಕ್ಕದ್ದು. **ಟಿಪ್ಪಣಿ:** ಲೆಕ್ಕಪರಿಶೋಧನಾದಿಕಾರಿ/ ಸಹಾಯಕ ಲೆಕ್ಕಾಧಿಕಾರಿ ವೃಂದದ ಅಧಿಕಾರಿಗಳನ್ನು ಜೇಷ್ಠತೆಯ ಆಧಾರದ ಮೇಲೆ ಕನಿಷ್ಠ ಮೂರು ತಿಂಗಳ ಅವಧಿಗೆ ಆರ್ಥಿಕ ನಿರ್ವಹಣೆ ಮತ್ತು	**ನೇರನೇಮಕಾತಿಗಾಗಿ:** ಭಾರತ ಸರ್ಕಾರದ ಕಾನೂನು ರೀತ್ಯ ಸ್ಥಾಪಿಸಲ್ಪಟ್ಟಿರುವ ವಿಶ್ವವಿದ್ಯಾಲಯ ದಿಂದ ವಾಣಿಜ್ಯ ಶಾಸ್ತ್ರದಲ್ಲಿ ಸ್ನಾತಕೋತರ ಪದವಿ (ಎಂ.ಕಾಂ) **ಅಥವಾ** ಎಂಬಿಎ (ಆರ್ಥಿಕ) **ಅಥವಾ** ಚಾರ್ಟರ್ಡ್ ಅಕೌಂಟೆಂಟ್ **ಅಥವಾ** ಐಸಿಡಬ್ಲ್ಯೂಎ ಹೊಂದಿರತಕ್ಕದ್ದು. (1) ಟಾಲಿ ಅಥವಾ ತತ್ಸಮಾನ ಅಕೌಂಟಿಂಗ್ ಸಾಫ್ಟ್‌ವೇರ್ ಮತ್ತು ಎಂ.ಎಸ್. ಆಫೀಸ್ ಗಣಕ ಯಂತ್ರ ತರಬೇತಿ ಹೊಂದತಕ್ಕದ್ದು. (2) ಪರೀಕ್ಷತಾ ಅವಧಿಯಲ್ಲಿ ಇಲಾಖೆಯು ಏರ್ಪಡಿಸುವ ಮತ್ತು ನಿಯೋಜಿಸುವ ಆರ್ಥಿಕ

1	2	3	4	5	6	7
					ಸಂಬಂಧಿತ ವಿಷಯಗಳ ಬಗ್ಗೆ ತರಬೇತಿಗೆ ಇಲಾಖೆಯು ನಿಯೋಜಿಸತಕ್ಕದ್ದು. **ಮತ್ತು** ಶೇಕಡ 50ರಷ್ಟು ಹುದ್ದೆಗಳನ್ನು ಲೆಕ್ಕಾಧೀಕ್ಷಕರ ವೃಂದದಿಂದ ಪದೋನ್ನತಿ ಮೂಲಕ.	ನಿರ್ವಹಣೆ ಮತ್ತು ಸಂಬಂಧಿತ ವಿಷಯಗಳಲ್ಲಿ ಕನಿಷ್ಠ ಮೂರು ತಿಂಗಳ ತರಬೇತಿಯನ್ನು ಯಶಸ್ವಿಯಾಗಿ ಪೂರೈಸತಕ್ಕದ್ದು. **ಪದೋನ್ನತಿಗಾಗಿ:** (1) ಲೆಕ್ಕಾಧೀಕ್ಷಕರ ವೃಂದದಲ್ಲಿ ಕನಿಷ್ಠ ಐದು ವರ್ಷಗಳ ಸೇವೆಯನ್ನು ಪೂರೈಸಿರತಕ್ಕದ್ದು. (2) ಇಲಾಖೆಯು ಏರ್ಪಡಿಸುವ ಮತ್ತು ನಿಯೋಜಿಸುವ ಟಾಲಿ ಅಥವಾ ತತ್ಸಮಾನ ಅಕೌಂಟಿಂಗ್ ಸಾಫ್ಟ್‌ವೇರ್ ಮತ್ತು ಎಂ.ಎಸ್. ಆಫೀಸ್ ಬಗ್ಗೆ ಕನಿಷ್ಠ ಮೂರು ತಿಂಗಳ ಅವಧಿಯ ತರಬೇತಿಯನ್ನು ಯಶಸ್ವಿಯಾಗಿ ಪೂರೈಸತಕ್ಕದ್ದು. (3) ಇಲಾಖೆಯು ಜೇಷ್ಠತೆಯ ಆಧಾರದ ಮೇಲೆ ಏರ್ಪಡಿಸುವ ಮತ್ತು ನಿಯೋಜಿಸುವ ಆರ್ಥಿಕ ನಿರ್ವಹಣೆ ಮತ್ತು ಸಂಬಂಧಿತ ವಿಷಯಗಳ ಬಗ್ಗೆ ಕನಿಷ್ಠ ಮೂರು ತಿಂಗಳ ಅವಧಿಯ ತರಬೇತಿಯನ್ನು ಲೆಕ್ಕಾಧೀಕ್ಷಕರ ವೃಂದದಲ್ಲಿ ಯಶಸ್ವಿಯಾಗಿ ಪೂರೈಸಿರತಕ್ಕದ್ದು.
7.	ಲೆಕ್ಕಾಧೀಕ್ಷಕರು (` 10800–20025) (ಗ್ರೂಪ್ ಬಿ)	12	--	646	ಲೆಕ್ಕ ಸಹಾಯಕರು ಮತ್ತು ಶೀಘ್ರಲಿಪಿಗಾರರು ವೃಂದಗಳಿಂದ 99:1 ಅನುಪಾತದಲ್ಲಿ ಪದೋನ್ನತಿ ಮೂಲಕ. ಲೆಕ್ಕಾಧೀಕ್ಷಕರ ವೃಂದದ ಪ್ರತಿ 100ನೇ ಖಾಲಿ ಹುದ್ದೆಯನ್ನು ಶೀಘ್ರಲಿಪಿಗಾರರ ವೃಂದದಿಂದ ಪದೋನ್ನತಿ ಮೂಲಕ ಭರ್ತಿ ಮಾಡತಕ್ಕದ್ದು. ಅರ್ಹ ಶೀಘ್ರಲಿಪಿಗಾರರು ಬಡ್ತಿಗೆ ಲಭ್ಯವಿಲ್ಲದಿದ್ದಲ್ಲಿ ಲೆಕ್ಕ ಸಹಾಯಕರ ವೃಂದದಿಂದ ಭರ್ತಿ ಮಾಡತಕ್ಕದ್ದು. ಪ್ರತಿಯೊಬ್ಬ ಲೆಕ್ಕಾಧೀಕ್ಷಕರನ್ನು ಈ ಕೆಳಕಂಡ ತರಬೇತಿಗೆ ನಿಯೋಜಿಸತಕ್ಕದ್ದು:	**ಪದೋನ್ನತಿಗಾಗಿ: ಲೆಕ್ಕ ಸಹಾಯಕರು/ ಶೀಘ್ರಲಿಪಿಗಾರರ ವೃಂದದಿಂದ:** (1) ಲೆಕ್ಕಸಹಾಯಕರು/ ಶೀಘ್ರಲಿಪಿಗಾರರ ವೃಂದದಲ್ಲಿ ಕನಿಷ್ಠ ಐದು ವರ್ಷಗಳ ಸೇವೆಯನ್ನು ಪೂರೈಸಿರತಕ್ಕದ್ದು. ಶೀಘ್ರಲಿಪಿಗಾರರು ಒಂದು ವರ್ಷಕ್ಕಿಂತ ಕಡಿಮೆ ಇಲ್ಲದಂತೆ ಲೆಕ್ಕ ಸಹಾಯಕರ ಹುದ್ದೆಯಲ್ಲಿ ಸೇವೆಯನ್ನು ಸಲ್ಲಿಸಿರತಕ್ಕದು.

1	2	3	4	5	6	7
					(1) ಟಾಲಿ ಅಥವಾ ತತ್ಸಮಾನ ಅಕೌಂಟಿಂಗ್ ಸಾಫ್ಟ್‌ವೇರ್ ಮತ್ತು ಎಂ.ಎಸ್.ಆಫೀಸ್. (2) ಜೇಷ್ಠತೆಯ ಆಧಾರದ ಮೇಲೆ ಇಲಾಖೆಯು ಏರ್ಪಡಿಸುವ ಮತ್ತು ನಿಯೋಜಿಸುವ ಕನಿಷ್ಠ ಮೂರು ತಿಂಗಳ ಅವಧಿಗೆ ಆರ್ಥಿಕ ನಿರ್ವಹಣೆ ಮತ್ತು ಸಂಬಂಧಿತ ವಿಷಯಗಳ ಬಗ್ಗೆ.	(2) ಇಲಾಖೆಯು ಜೇಷ್ಠತೆಯ ಆಧಾರದ ಮೇಲೆ ಏರ್ಪಡಿಸುವ ಮತ್ತು ನಿಯೋಜಿಸುವ ಟಾಲಿ ಅಥವಾ ತತ್ಸಮಾನ ಅಕೌಂಟಿಂಗ್ ಸಾಫ್ಟ್‌ವೇರ್ ಮತ್ತು ಎಂ.ಎಸ್. ಆಫೀಸ್ ಬಗ್ಗೆ ತರಬೇತಿಯನ್ನು ಯಶಸ್ವಿಯಾಗಿ ಪೂರೈಸಿರತಕ್ಕದ್ದು. (2) ಇಲಾಖೆಯು ಜೇಷ್ಠತೆಯ ಆಧಾರದ ಮೇಲೆ ಏರ್ಪಡಿಸುವ ಮತ್ತು ನಿಯೋಜಿಸುವ ಆರ್ಥಿಕ ನಿರ್ವಹಣೆ ಮತ್ತು ಸಂಬಂಧಿತ ವಿಷಯಗಳ ಬಗ್ಗೆ ಕನಿಷ್ಠ ಮೂರು ತಿಂಗಳ ಅವಧಿಯ ತರಬೇತಿಯನ್ನು ಲೆಕ್ಕಸಹಾಯಕ/ಶೀಘ್ರಲಿಪಿಗಾರರ ವೃಂದದಲ್ಲಿ ಯಶಸ್ವಿಯಾಗಿ ಪೂರೈಸಿರತಕ್ಕದ್ದು.
8.	ಲೆಕ್ಕ ಸಹಾಯಕರು (' 7275–13350) (ಗ್ರೂಪ್ ಸಿ)	311	23	1620	ಶೇಕಡ 75ರಷ್ಟು ನೇರ ನೇಮಕಾತಿ ಮೂಲಕ **ಮತ್ತು** ಶೇಕಡ 25 ರಷ್ಟು ಕಿರಿಯ ಲೆಕ್ಕ ಸಹಾಯಕರ ವೃಂದದಿಂದ ಪದೋನ್ನತಿ ಮೂಲಕ ಪ್ರತಿಯೊಬ್ಬ ಲೆಕ್ಕಸಹಾಯಕರನ್ನು ಈ ಕೆಳಕಂಡ ತರಬೇತಿಗೆ ನಿಯೋಜಿಸತಕ್ಕದ್ದು. (1) ಟಾಲಿ ಅಥವಾ ತತ್ಸಮಾನ ಅಕೌಂಟಿಂಗ್ ಸಾಫ್ಟ್‌ವೇರ್ ಮತ್ತು ಎಂ.ಎಸ್.ಆಫೀಸ್. (2) ಇಲಾಖೆಯ ಲೆಕ್ಕಪತ್ರ ವ್ಯವಸ್ಥೆ ಮತ್ತು ಸಂಬಂಧಿಸಿದ ವಿಷಯಗಳ ಬಗ್ಗೆ	**ನೇರ ನೇಮಕಾತಿಗಾಗಿ:** 1) ಬಿ.ಕಾಂ ಅಥವಾ ಬಿಬಿಎಂ ಪದವಿ ಯನ್ನು ಹೊಂದಿರತಕ್ಕದ್ದು **ಮತ್ತು** 2) ಪರೀಕ್ಷಾ ಅವಧಿಯಲ್ಲಿ ಟಾಲಿ ಅಥವಾ ತತ್ಸಮಾನ ಅಕೌಂಟಿಂಗ್ ಸಾಫ್ಟ್‌ವೇರ್ ಮತ್ತು ಎಂ.ಎಸ್. ಆಫೀಸ್ ಬಗ್ಗೆ ತರಬೇತಿಯನ್ನು ಯಶಸ್ವಿಯಾಗಿ ಪೂರೈಸತಕ್ಕದ್ದು. **ಪದೋನ್ನತಿಗಾಗಿ:** (1) ಕಿರಿಯ ಲೆಕ್ಕ ಸಹಾಯಕರ ವೃಂದದಲ್ಲಿ ಐದು ವರ್ಷಗಳಿಗಿಂತ ಕಡಿಮೆಯಿಲ್ಲದ ಸೇವೆಯನ್ನು ಸಲ್ಲಿಸಿರಕ್ಕದ್ದು. (2) ಇಲಾಖೆಯು ಜೇಷ್ಠತೆಯ ಆಧಾರದ ಮೇಲೆ ಏರ್ಪಡಿಸುವ ಮತ್ತು ನಿಯೋಜಿಸುವ ಟಾಲಿ ಅಥವಾ ತತ್ಸಮಾನ ಅಕೌಂಟಿಂಗ್ ಸಾಫ್ಟ್‌ವೇರ್ ಮತ್ತು ಎಂ.ಎಸ್. ಆಫೀಸ್ ಬಗ್ಗೆ ತರಬೇತಿಯನ್ನು ಯಶಸ್ವಿಯಾಗಿ ಪೂರೈಸಿರತಕ್ಕದ್ದು.

1	2	3	4	5	6	7
9.	ಶೀಘ್ರಲಿಪಿಗಾರರು (' 7275–13350) (ಗ್ರೂಪ್ ಸಿ)	7	--	--	ಶೇಕಡ 50ರಷ್ಟು ಕರ್ನಾಟಕ ನಾಗರೀಕ ಸೇವೆ (ಶೀಘ್ರಲಿಪಿಗಾರರು ಮತ್ತು ಬೆರಳಚ್ಚುಗಾರರ ನೇಮಕಾತಿ) ನಿಯಮಗಳು 1983 ರಲ್ಲಿದ್ದಂತೆ ನೇರನೇಮಕಾತಿ ಮೂಲಕ ಮತ್ತು ಶೇಕಡ 50ರಷ್ಟು ಹಿರಿಯ ಬೆರಳಚ್ಚುಗಾರರ ವೃಂದದಿಂದ ವರ್ಗಾವಣೆಯ ಮತ್ತು ಬೆರಳಚ್ಚುಗಾರರ ವೃಂದದಿಂದ ಪದೋನ್ನತಿ ಮೂಲಕ ಹಿರಿಯ ಬೆರಳಚ್ಚುಗಾರರ ವೃಂದದಿಂದ ವರ್ಗಾವಣೆಗೆ ಮತ್ತು ಬೆರಳಚ್ಚುಗಾರರ ವೃಂದದಿಂದ ಪದೋನ್ನತಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ, ನೇರ ನೇಮಕಾತಿ ಮೂಲಕ **ಟಿಪ್ಪಣಿ:** ಶೀಘ್ರಲಿಪಿಗಾರರನ್ನು ಜೇಷ್ಠತೆಯ ಆಧಾರದ ಮೇಲೆ ಟಾಲಿ ಅಥವಾ ತತ್ಸಮಾನ ಅಕೌಂಟಿಂಗ್ ಸಾಫ್ಟ್‌ವೇರ್ ಮತ್ತು ಎಂ.ಎಸ್. ಆಫೀಸ್ ವಿಷಯದಲ್ಲಿ ತರಬೇತಿಗೆ ನಿಯೋಜಿಸತಕ್ಕದ್ದು.	**ನೇರ ನೇಮಕಾತಿಗಾಗಿ:** ಕರ್ನಾಟಕ ನಾಗರೀಕ ಸೇವೆ (ಶೀಘ್ರಲಿಪಿಗಾರರು ಮತ್ತು ಬೆರಳಚ್ಚುಗಾರರ ನೇಮಕಾತಿ) ನಿಯಮಗಳು 1983ರ ಜೊತೆಗೆ ಇಲಾಖೆಯು ಜೇಷ್ಠತೆಯ ಆಧಾರದ ಮೇಲೆ ಏರ್ಪಡಿಸುವ ಮತ್ತು ನಿಯೋಜಿಸುವ ಟಾಲಿ ಅಥವಾ ತತ್ಸಮಾನ ಅಕೌಂಟಿಂಗ್ ಸಾಫ್ಟ್‌ವೇರ್ ಮತ್ತು ಎಂಎಸ್ ಆಫೀಸ್ ವಿಷಯದಲ್ಲಿ ತರಬೇತಿಯನ್ನು ಯಶಸ್ವಿಯಾಗಿ ಪೂರೈಸತಕ್ಕದ್ದು. **ವರ್ಗಾವಣೆ ಮತ್ತು ಪದೋನ್ನತಿಗಾಗಿ:** 1) ಕರ್ನಾಟಕ ನಾಗರೀಕ ಸೇವೆ (ಶೀಘ್ರಲಿಪಿಗಾರರು ಮತ್ತು ಬೆರಳಚ್ಚುಗಾರರ ನೇಮಕಾತಿ) ನಿಯಮಗಳು 1983ರಲ್ಲಿ ಶೀಘ್ರಲಿಪಿಗಾರರ ಹುದ್ದೆಗೆ ನಿರ್ಧಿಷ್ಟಪಡಿಸಿರುವ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು. 2) ಹಿರಿಯ ಬೆರಳಚ್ಚುಗಾರರು ಮತ್ತು ಬೆರಳಚ್ಚುಗಾರರ ವೃಂದದಲ್ಲಿ ಮೂರು ವರ್ಷಗಳಿಗಿಂತ ಕಡಿಮೆ ಇಲ್ಲದ ಸೇವೆಯನ್ನು ಸಲ್ಲಿಸಿರತಕ್ಕದ್ದು. 3) ಇಲಾಖೆಯು ಜೇಷ್ಠತೆಯ ಆಧಾರದ ಮೇಲೆ ಏರ್ಪಡಿಸುವ ಮತ್ತು ನಿಯೋಜಿಸುವ ಟಾಲಿ ಅಥವಾ ತತ್ಸಮಾನ ಅಕೌಂಟಿಂಗ್ ಸಾಫ್ಟ್‌ವೇರ್ ಮತ್ತು ಎಂ.ಎಸ್. ಆಫೀಸ್ ಬಗ್ಗೆ ತರಬೇತಿಯನ್ನು ಯಶಸ್ವಿಯಾಗಿ ಪೂರೈಸಿರತಕ್ಕದ್ದು.

1	2	3	4	5	6	7
0.	ಕಿರಿಯ ಲೆಕ್ಕ ಸಹಾಯಕರು (` 5800–10500) (ಗ್ರೂಪ್ ಸಿ)	37	03	702	ಶೇಕಡ 95%ರಷ್ಟು ನೇರ ನೇಮಕಾತಿ ಮೂಲಕ ಮತ್ತು ಶೇಕಡ 5ರಷ್ಟು ಬೆರಳಚ್ಚುಗಾರರು ಮತ್ತು ವಾಹನ ಚಾಲಕರ ವೃಂದದಿಂದ ವರ್ಗಾವಣೆ ಮತ್ತು ಗ್ರೂಪ್–ಡಿ ಸೇವೆಯಿಂದ ಪದೋನ್ನತಿ ಮೂಲಕ. **ಜೇಷ್ಠತೆ:** ಹೆಚ್ಚಿನ ವೇತನ ಶ್ರೇಣಿಯುಳ್ಳ ಹುದ್ದೆಯನ್ನು ಧಾರಣ ಮಾಡಿರುವ ವ್ಯಕ್ತಿಯನ್ನು ಕಡಿಮೆ ವೇತನ ಶ್ರೇಣಿಯುಳ್ಳ ಹುದ್ದೆಯನ್ನು ಧಾರಣ ಮಾಡಿರುವ ವ್ಯಕ್ತಿಗಿಂತ ಜೇಷ್ಠರೆಂದು ಪರಿಗಣಿಸಿ ನಿರ್ಧರಿಸಲಾಗುವುದು. ಸಮಾನ ವೇತನ ಶ್ರೇಣಿಗಳನ್ನು ಹೊಂದಿರುವ ಹುದ್ದೆಗಳನ್ನು ಧಾರಣ ಮಾಡಿರುವ ವ್ಯಕ್ತಿಗಳ ನಡುವಿನ ಪರಸ್ಪರ ಜೇಷ್ಠತೆಯನ್ನು ಸಂಬಂಧಪಟ್ಟ ವೃಂದಗಳಲ್ಲಿ ಅವರ ಸೇವಾ ಅವಧಿಯ ಆಧಾರದ ಮೇಲೆ ನಿರ್ಧರಿಸಲಾಗುವುದು ಮತ್ತು ವೃಂದದಲ್ಲಿನ ವ್ಯಕ್ತಿಗಳ ಪರಸ್ಪರ ಜೇಷ್ಠತೆಯನ್ನು ಕಾಪಾಡಿಕೊಂಡು ಹೋಗಲಾಗುವುದು.	**ನೇರ ನೇಮಕಾತಿಗಾಗಿ:** (1) ಅಕೌಂಟೆನ್ಸಿಯನ್ನು ಐಚ್ಛಿಕ ವಿಷಯವಾಗಿರುವ ದ್ವಿತೀಯ ಪಿಯುಸಿ (ವಾಣಿಜ್ಯ ಶಾಸ್ತ್ರ) ಇದರಲ್ಲಿ ಉತ್ತೀರ್ಣರಾಗಿರತಕ್ಕದ್ದು. (2) ಪರೀಕ್ಷತಾ ಅವಧಿಯಲ್ಲಿ ಟಾಲಿ ಅಥವಾ ತತ್ಸಮಾನ ಅಕೌಂಟಿಂಗ್ ಸಾಫ್ಟ್‌ವೇರ್ ಮತ್ತು ಎಂ.ಎಸ್. ಆಫೀಸ್ ಬಗ್ಗೆ ತರಬೇತಿಯನ್ನು ಯಶಸ್ವಿಯಾಗಿ ಪೂರೈಸತಕ್ಕದ್ದು. **ವೃಂದ ಬದಲಾವಣೆ ಮತ್ತು ಪದೋನ್ನತಿಗಾಗಿ:** (1) ಅಕೌಂಟೆನ್ಸಿಯನ್ನು ಐಚ್ಛಿಕ ವಿಷಯವಾಗಿರುವ ದ್ವಿತೀಯ ಪಿಯುಸಿ(ವಾಣಿಜ್ಯ ಶಾಸ್ತ್ರ) ಇದರಲ್ಲಿ ಉತ್ತೀರ್ಣರಾಗಿರತಕ್ಕದ್ದು. (2) ಬೆರಳಚ್ಚುಗಾರರು/ವಾಹನ ಚಾಲಕರ ಹಾಗೂ ಗ್ರೂಪ್–ಡಿ ವೃಂದದಲ್ಲಿ ಏಳು ವರ್ಷಗಳಿಗಿಂತ ಕಡಿಮೆ ಇಲ್ಲದ ಸೇವೆಯನ್ನು ಪೂರೈಸಿರತಕ್ಕದ್ದು. (3) ಇಲಾಖೆಯು ಏರ್ಪಡಿಸುವ ಮತ್ತು ನಿಯೋಜಿಸುವ ಟಾಲಿ ಅಥವಾ ತತ್ಸಮಾನ ಅಕೌಂಟಿಂಗ್ ಸಾಫ್ಟ್‌ವೇರ್ ಮತ್ತು ಎಂ.ಎಸ್. ಆಫೀಸ್ ಬಗ್ಗೆ ತರಬೇತಿಯನ್ನು ಯಶಸ್ವಿಯಾಗಿ ಪೂರೈಸತಕ್ಕದ್ದು.
11.	ಹಿರಿಯ ಬೆರಳಚ್ಚುಗಾರರು (` 7275–13350) (ಗ್ರೂಪ್ ಸಿ)	10	--	--	ಬೆರಳಚ್ಚುಗಾರರ ವೃಂದದಿಂದ ಪದೋನ್ನತಿಯ ಮೂಲಕ	ಬೆರಳಚ್ಚುಗಾರರ ವೃಂದದಲ್ಲಿ ಹತ್ತು ವರ್ಷಗಳಿಗಿಂತ ಕಡಮೆಯಿಲ್ಲದ ಸೇವೆಯನ್ನು ಸಲ್ಲಿಸಿರತಕ್ಕದ್ದು.
12.	ಬೆರಳಚ್ಚುಗಾರರು (` 5800–10500) (ಗ್ರೂಪ್ ಸಿ)	44	02	07	ಶೇಕಡ 95ರಷ್ಟು ಕರ್ನಾಟಕ ನಾಗರೀಕ ಸೇವೆ (ಶೀಘ್ರಲಿಪಿಗಾರರು ಮತ್ತು ಬೆರಳಚ್ಚುಗಾರರ ನೇಮಕಾತಿ) ನಿಯಮಗಳು 1983 ರನ್ವಯ ಹಾಗೂ ಈ ನಿಯಮದಲ್ಲಿ ಮಾರ್ಪಾಡು ಮಾಡಿರುವ ಅನ್ವಯ ನೇರನೇಮಕಾತಿ ಮೂಲಕ.	**ನೇರ ನೇಮಕಾತಿಗಾಗಿ:** ಕರ್ನಾಟಕ ನಾಗರೀಕ ಸೇವೆ (ಶೀಘ್ರಲಿಪಿಗಾರರು ಮತ್ತು ಬೆರಳಚ್ಚುಗಾರರ ನೇಮಕಾತಿ) ನಿಯಮಗಳು

1	2	3	4	5	6	7
					ಮತ್ತು ಶೇಕಡ 5ರಷ್ಟು ವಾಹನ ಚಾಲಕರ ವೃಂದದಿಂದ ವರ್ಗಾವಣೆ ಮತ್ತು ಗ್ರೂಪ್–ಡಿ ವೃಂದದಿಂದ ಸಮೂಹ ಜೇಷ್ಠತೆ ಆಧಾರದ ಮೇಲೆ ಪದೋನ್ನತಿ ಮೂಲಕ. **ಜೇಷ್ಠತೆ:** ಹೆಚ್ಚಿನ ವೇತನ ಶ್ರೇಣಿಯುಳ್ಳ ಹುದ್ದೆಯನ್ನು ಧಾರಣ ಮಾಡಿರುವ ವ್ಯಕ್ತಿಯನ್ನು ಕಡಿಮೆ ವೇತನ ಶ್ರೇಣಿಯುಳ್ಳ ಹುದ್ದೆಯನ್ನು ಧಾರಣ ಮಾಡಿರುವ ವ್ಯಕ್ತಿಗಿಂತ ಜೇಷ್ಠರೆಂದು ಪರಿಗಣಿಸಿ ನಿರ್ಧರಿಸಲಾಗುವುದು. ಸಮಾನ ವೇತನ ಶ್ರೇಣಿಗಳನ್ನು ಹೊಂದಿರುವ ಹುದ್ದೆಗಳನ್ನು ಧಾರಣ ಮಾಡಿರುವ ವ್ಯಕ್ತಿಗಳ ನಡುವಿನ ಪರಸ್ಪರ ಜೇಷ್ಠತೆಯನ್ನು ಸಂಬಂಧಪಟ್ಟ ವೃಂದಗಳಲ್ಲಿ ಅವರ ಸೇವಾವಧಿಯ ಆಧಾರದ ಮೇಲೆ ನಿರ್ಧರಿಸಲಾಗುವುದು ಮತ್ತು ವೃಂದದಲ್ಲಿನ ವ್ಯಕ್ತಿಗಳ ಪರಸ್ಪರ ಜೇಷ್ಠತೆಯನ್ನು ಕಾಪಾಡಿಕೊಂಡು ಹೋಗಲಾಗುವುದು.	1983ರನ್ನು ಈ ಕೆಳಗಿನ ಮಟ್ಟಿಗೆ ಮಾರ್ಪಡಿಸಿದಂತೆ: ಇಲಾಖೆಯು ಜೇಷ್ಠತೆಯ ಆಧಾರದ ಮೇಲೆ ಏರ್ಪಡಿಸುವ ಮತ್ತು ನಿಯೋಜಿಸುವ ಟಾಲಿ ಅಥವಾ ತತ್ಸಮಾನ ಅಕೌಂಟಿಂಗ್ ಸಾಫ್ಟ್‌ವೇರ್ ಮತ್ತು ಎಂಎಸ್ ಆಫೀಸ್ ವಿಷಯದಲ್ಲಿ ಯಶಸ್ವಿಯಾಗಿ ತರಬೇತಿಯನ್ನು ಪೂರೈಸತಕ್ಕದ್ದು. **ವರ್ಗಾವಣೆ ಮತ್ತು ಪದೋನ್ನತಿಗಾಗಿ:** 1) ವಾಹನ ಚಾಲಕರು ಮತ್ತು ಗ್ರೂಪ್ ಡಿ ಸೇವೆಯಲ್ಲಿ ಐದು ವರ್ಷಗಳಿಗಿಂತ ಕಡಿಮೆಯಿಲ್ಲದಷ್ಟು ಸೇವೆಯನ್ನು ಸಲ್ಲಿಸಿರತಕ್ಕದ್ದು ಹಾಗೂ ಕರ್ನಾಟಕ ನಾಗರೀಕ ಸೇವೆ (ಶೀಘ್ರಲಿಪಿಗಾರರು ಮತ್ತು ಬೆರಳಚ್ಚುಗಾರರ ನೇಮಕಾತಿ) ನಿಯಮಗಳು 1983ರಲ್ಲಿ ಬೆರಳಚ್ಚುಗಾರರ ಹುದ್ದೆಗೆ ನಿರ್ದಿಷ್ಟಪಡಿಸಿರುವ ವಿದ್ಯಾರ್ಹತೆ ಯನ್ನು ಹೊಂದಿರತಕ್ಕದ್ದು. 2) ಇಲಾಖೆಯು ಜೇಷ್ಠತೆಯ ಆಧಾರದ ಮೇಲೆ ಏರ್ಪಡಿಸುವ ಮತ್ತು ನಿಯೋಜಿಸುವ ಎಂ.ಎಸ್. ಆಫೀಸ್ ಬಗ್ಗೆ ತರಬೇತಿಯನ್ನು ಯಶಸ್ವಿಯಾಗಿ ಪೂರೈಸಿರತಕ್ಕದ್ದು.
3	ಡಾಟಾ ಎಂಟ್ರಿ ಆಪರೇಟರ್ (' 5800–10500) (ಗ್ರೂಪ್ ಸಿ)	1	--	--	ಸರ್ಕಾರದ ಇತರೆ ಇಲಾಖೆಯಿಂದ ಸರಿಹೊಂದುವ ಡಾಟಾ ಎಂಟ್ರಿ ಆಪರೇಟರ್‌ನ್ನು ನಿಯೋಜನೆ ಮೂಲಕ	--
4	ವಾಹನ ಚಾಲಕರು (' 5800–10500) (ಗ್ರೂಪ್ ಸಿ)	02	--	--	ಕರ್ನಾಟಕ ನಾಗರೀಕ ಸೇವೆ (ಸ್ಪರ್ಧಾತ್ಮಕ ಪರೀಕ್ಷೆ ಮತ್ತು ಆಯ್ಕೆ) ನಿಯಮಗಳು 2006ರನ್ವಯ ನೇರನೇಮಕಾತಿ ಮೂಲಕ ಅಥವಾ	**ನೇರ ನೇಮಕಾತಿಗಾಗಿ:** (1) ಎಸ್ ಎಸ್ ಎಲ್ ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರತಕ್ಕದ್ದು. (2) ಚಾಲ್ತಿಯಲ್ಲಿರುವ ಲಘು ಮೋಟಾರು ವಾಹನ ಚಾಲನಾ ಪರವಾನಗಿ ಹೊಂದಿರತಕ್ಕದ್ದು

1	2	3	4	5	6	7
